ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪೨



ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀ

ಆನಂದರಾಮಾಯಣಂ

ಐದನೆಯ ಭಾಗ

(ಸಂಸ್ಕೃತಮೂಲ, ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ರಾಜ್ಯಕಾಂಡಃ (ಉತ್ತರಾರ್ಧಃ)

(೧೩—೨೪ ಸರ್ಗಗಳು)

ಅನುವಾದಕ :
ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ,
ಸಾಹಿತ್ಯ ವಿದ್ವಾನ್
ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್ (ಮದ್ರಾಸ್)

೧೯೪೯

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪೨



ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀ

ಆನಂದರಾಮಾಯಣಂ

ಐದನೆಯ ಭಾಗ

(ಸಂಸ್ಕೃತಮೂಲ, ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ರಾಜ್ಯಕಾಂಡಃ (ಉತ್ತರಾರ್ಧಃ)

(೧೩—೨೪ ಸರ್ಗಗಳು)

ಅನುವಾದಕ :

ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ,

ಸಾಹಿತ್ಯ ವಿದ್ವಾನ್

ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್ (ಮದ್ರಾಸ್)

೧೯೪೯

॥ ಶ್ರೀರಸ್ತು ॥

—೦—

ಮುನ್ನುಡಿ

ಈ ಆನಂದರಾಮಾಯಣದಲ್ಲಿ ರಾಜ್ಯಕಾಂಡವು ಬಹು ದೊಡ್ಡದಾದುದು. ಇದನ್ನು ಕವಿಯೇ ಪೂರ್ವಾರ್ಧ ಉತ್ತರಾರ್ಧಗಳೆಂದು ವಿಂಗಡಿಸಿರುವನು. ನಾವೂ ಅದಕ್ಕೆ ಅನುಗುಣವಾಗಿ ಪೂರ್ವಾರ್ಧವನ್ನು ಪ್ರಕಟಿಸಿದ್ದೇವೆ. ಈ ಭಾಗದಲ್ಲಿ ಉತ್ತರಾರ್ಧವು ಅಡಕವಾಗಿರುವುದು.

ಈ ಉತ್ತರಾರ್ಧದಲ್ಲಿ ರಾಮನು ರಾಜ್ಯಭಾರವನ್ನು ಮಾಡುತ್ತಿರುವಾಗ ನಡೆದ ಕೆಲವು ಆಶ್ಚರ್ಯಕರವಾದ ಘಟನೆಗಳು ಅವನ ನಿತ್ಯನೈಮಿತ್ತಿಕ ಕರ್ಮದ ರೀತಿ ಅವುಗಳಲ್ಲಿ ಅವನ ಆಸಕ್ತಿ ಯಾರು ಯಾರನ್ನು ಹೇಗೆ ಹೇಗೆ ಗೌರವಿಸಬೇಕೆಂಬ ವಿಷಯ ಇವುಗಳನ್ನು ನೀತಿಬೋಧಕವಾಗಿರುವಂತೆ ಕವಿಯು ವರ್ಣಿಸಿರುವನು.

ಶ್ರೀರಾಮನು ತಾನು ಚಕ್ರವರ್ತಿಯಾಗಿದ್ದರೂ ಪ್ರಜೆಗಳ ಮತ್ತು ಬಂಧುಗಳ ಮನಸ್ಸಿನಂತೆ ನಡೆಯುತ್ತ ಸಾಂಕುಶಪ್ರಭುತ್ವವನ್ನು ವ್ಯಕ್ತಪಡಿಸಿರುವನು.

ವಾಲ್ಮೀಕಿಋಷಿಯು ಗ್ರಂಥಕರ್ತರಲ್ಲಿ ಮೊದಲನೆಯವನಾದರೂ ಅವನ ಜನ್ಮಕಥನವು ಬಹು ರಮ್ಯವಾಗಿ ತಪಸ್ವಿಗಳಿಗೆ ಯಾವುದೂ ಅಸಾಧ್ಯವಲ್ಲವೆಂಬುದನ್ನೂ ರಾಮನಾಮದ ಮಹಿಮೆಯನ್ನೂ ತೋರಿಸುತ್ತದೆ. ಲವನಿಗೆ ಬೋಧಿಸಿರುವ ರಾಜನೀತಿಯಂತೂ ಪ್ರಪಂಚದಲ್ಲಿ ರಾಜ್ಯವನ್ನಾಳುವವರಿಗೂ ಅಧಿಕಾರಿಗಳಿಗೂ ನೀತಿಬೋಧಕವಾಗಿರುವುದು.

ಸೀತೆಯು ರಾಮನ ಮನಸ್ಸಿನಂತೆ ನಡೆಯುತ್ತಿರುವುದನ್ನೂ, ರಾಮನು ಸೀತೆಯ ಮನಸ್ಸನ್ನು ನೋಯಿಸದೆ ಅದಕ್ಕೆ ಅನುಗುಣವಾಗಿ ಹೋಗುತ್ತಿರುವುದನ್ನೂ ನೋಡಿದರೆ ಲೋಕದಲ್ಲಿ ಸುದಾಂಪತ್ಯವು ಎಷ್ಟು ಸೌಖ್ಯದಾಯಕವು ಎಂಬುದು ವ್ಯಕ್ತವಾಗುತ್ತದೆ.

ಶ್ರೀವಿಷ್ಣುವು ತಾಳಿರುವ ಮತ್ತು ತಾಳುವ ಅವತಾರಗಳಲ್ಲಿ ಕಷ್ಟಸುಖಗಳನ್ನು ವಿಮರ್ಶಿಸುತ್ತ ಈ ರಾಮಾವತಾರವು ಪೂರ್ಣವಾದುದು ಮತ್ತು ಸುಖಕರವಾದುದು


ಎಂಬುದನ್ನು ತೋರಿಸುತ್ತ ಉಪಾಸಕರಿಗೆ ಆಸೆಯು ಹೆಚ್ಚುವಂತೆ ವರ್ಣಿತ ವಾಗಿರುವುದು.

ಸೀತೆಯು ಪತಿವ್ರತೆಯರಲ್ಲಿ ಉತ್ತಮೋತ್ತಮಳಾದರೂ ಆಕೆಯು ಪತಿಗೆ ಸಮರ್ಪಿಸದೆ ಹೂವಿನ ವಾಸನೆಯನ್ನು ವಾಸಿಸಿದುದನ್ನು ನೆವವಾಗಿಟ್ಟುಕೊಂಡು ತುಳಸಿಯ ಎಲೆಯು ಕಿತ್ತುಬೀಳುವಂತೆ ಮಾಡಿ ಅದನ್ನು ಮತ್ತೆ ಪಾತಿವ್ರತ್ಯದ ಬಲದಿಂದ ಸೇರಿಸಿರುವಂತೆ ವರ್ಣಿಸಿರುವುದನ್ನು ಗಮನಿಸಿದರೆ ಪಾತಿವ್ರತ್ಯವೆಂಬುದು ಎಷ್ಟು ಸೂಕ್ಷ್ಮದಿಂದ ಕೂಡಿರುವುದೆಂಬುದು ತೋರಿಬರುತ್ತದಲ್ಲದೆ ಆ ಪಾತಿವ್ರತ್ಯದ ಬಲವಿದ್ದರೆ ಅಸಾಧ್ಯವಾದುದು ಸಾಧ್ಯವಾಗುತ್ತದೆ ಎಂಬುದೂ ವ್ಯಕ್ತಪಡುತ್ತದೆ. ಯಮಭಟರು ಸುಮಂತ್ರನನ್ನು ಕರೆದುಕೊಂಡು ಹೋದಾಗ ಆಯುಸ್ಸಿನ ವಿಷಯದಲ್ಲಿ ಅದೇ ವಿಷಯದಲ್ಲಿ ನಿರತನಾದ ಯಮನೂ ಭ್ರಾಂತನಾಗುವನು ಎಂಬುದನ್ನು ತೋರಿಸಿ ಜನನಕಾಲವು ನಿರ್ಧಾರಿತವಾಗುವುದು, ಇದರಿಂದ ಒಂದು ಜವಾಬ್ದಾರಿಯುಳ್ಳವನಿಗೆ ಎಷ್ಟರಮಟ್ಟಿನ ಸೂಕ್ಷ್ಮಾಂಶ ವಿರಬೇಕೆಂಬುದು ವ್ಯಕ್ತ ವಾಗುವುದು.

ವಿಷಯಗಳು ಬೇರೆಯ ಭಾಷೆಗಳಲ್ಲಿ ಅನೇಕವಾಗಿದ್ದು ಅವು ಹಳೆಯ ವಾಗಿದ್ದರೂ ನಮಗೆ ತಿಳಿಯದವುಗಳಾಗಿವೆ. ಇಂತಹವುಗಳನ್ನು ಕನ್ನಡದಲ್ಲಿ ತಿಳಿಯುವಂತೆ ಮಾಡಿ ಕನ್ನಡಕ್ಕೆ ಪ್ರೋತ್ಸಾಹವನ್ನು ಕೊಡುತ್ತಿರುವ ನಮ್ಮನ್ನಾಳುವ ಶ್ರೀಮನ್ಮಹಾರಾಜರು ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ. ಮಹಾಪ್ರಭುಗಳವರಿಗೆ ಶ್ರೀರಾಮಚಂದ್ರದೇವನು ಪುತ್ರಪೌತ್ರಾಭಿವೃದ್ಧಿಯನ್ನೂ ಇತರ ಸನ್ಮಂಗಳ ಗಳನ್ನೂ ದಯಪಾಲಿಸಿ ಕಾಪಾಡಲೆಂದು ಅನನ್ಯಮನಸ್ಕನಾಗಿ ಪ್ರಾರ್ಥಿಸುತ್ತೇನೆ.

ಮೈಸೂರು.
20—9—1949

ಅನುವಾದಕ,
ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ,



|| ಶ್ರೀರಸ್ತು ||

—o—

ಶ್ರೀ ಮ ದಾ ನ ಂ ದ ರಾ ಮಾ ಯ ಣ ದ ಲ್ಲಿ ರಾ ಜ್ಯ ಕಾ ಂ ಡ ದ

ವಿಷಯಾನುಕ್ರಮಣಿಕೆ

ಪುಟಸಂಖ್ಯೆ

ಪುಟಸಂಖ್ಯೆ

ಇಪ್ಪತ್ತೆರಡನೆಯ ಸರ್ಗವು

ಇಪ್ಪತ್ತಮೂರನೆಯ ಸರ್ಗವು

ಇಪ್ಪತ್ತನಾಲ್ಕನೆಯ ಸರ್ಗವು

—o—o—







|| ಶ್ರೀರಸ್ತು ||

ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀಮದಾನಂದ ರಾಮಾಯಣಂ

|| ರಾಜ್ಯಕಾಂಡಃ ಉತ್ತರಾರ್ಧಃ ||

ತ್ರಯೋದಶಃ ಸರ್ಗಃ

|| ಶ್ರೀ ರಾಮದಾಸ ಉವಾಚ ||

ಅಥೈಕದಾ ರಮಾನಾಥಃ ಸುಹೃದ್ಭಿಸ್ಸದಸಿ ಸ್ಥಿತಃ |
ವೀಜಿತಶ್ಚಾಮರೇಣೈವ ಲಕ್ಷ್ಮಣೇನಾತಿಶೋಭಿತಃ || ೧ ||

ಏತಸ್ಮಿನ್ನಂತರೇ ತತ್ರ ಪೌರಃ ಕಶ್ಚಿತ್ಸಭಾಸ್ಥಿತಃ |
ವಾರಾಂಗನಾನಾಂ ನೃತ್ಯಾದಿ ದೃಷ್ಟ್ವಾ ಹಾಸ್ಯಂ ಚಕಾರ ಸಃ || ೨ ||

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ
ಹದಿಮೂರನೆಯ ಸರ್ಗವು

೧. ಶ್ರೀ ರಾಮದಾಸನು ಹೇಳಿದನು— ಒಂದು ಸಾರಿ ರಮಾನಾಥನಾದ ಶ್ರೀ ರಾಮನು ಸಭೆಯಲ್ಲಿ ಸಿಂಹಾಸನದಲ್ಲಿ ಕುಳಿತಿದ್ದನು. ಸ್ನೇಹಿತರೆಲ್ಲರೂ ಸುತ್ತಲೂ ಕುಳಿತಿದ್ದರು. ಲಕ್ಷ್ಮಣನು ಚಾಮರವನ್ನು ಬೀಸುತ್ತಿದ್ದನು.

೨. ಆ ಸಮಯದಲ್ಲಿ ಅಲ್ಲಿ ನಡೆಯುತ್ತಿದ್ದ ನರ್ತಕಿಯರ ನರ್ತನವನ್ನು ನೋಡಿ ಒಬ್ಬ ಪಟ್ಟಣಿಗನು ನಕ್ಕನು.

ತದ್ಧಾಸ್ಯಂ ರಾಘವಃ ಶ್ರುತ್ವಾ ಸಸ್ಮಾರ ಪೂರ್ವಚೇಷ್ಟಿತಂ ।
ಲಂಕಾಯಾಂ ಯುದ್ಧಸಮಯೇ ರಾವಣಸ್ಯ ಶಿರಾಂಸಿ ಖಾತ್ ॥ ೩ ॥

ರಾಮಬಾಣಾನ್ಮೃತಿರ್ಲಬ್ಧಾಸ್ಮಾಭಿಶ್ಚೇತಿ ವಿಹಸ್ಯ ಚ ।
ಶ್ರೀರಾಮಂ ವಂದನಂ ಕರ್ತುಂ ಪತಂತಿ ಸ್ಮ ಪ್ರಭುಂ ಪುನಃ ॥ ೪ ॥

ತೇಷಾಂ ಕರಾಲತಾಂ ದೃಷ್ಟ್ವಾ ದಂತಾದೀನಾಂ ರಘೂತ್ತಮಃ ।
ಮಾಮತ್ತುಂ ಹಿ ಪುನರ್ಯಾಂತಿ ಶಿರಾಂಸ್ಯೇತಾನಿ ಖಾದಿತಿ ॥ ೫ ॥

ರಾಮೋ ಭೀತ್ವಾ ಪುನಸ್ತಾನಿ ಖೇ ಶಿರಾಂಸ್ಯಕ್ಷಿಪಚ್ಛರೈಃ ।
ಏಕೋತ್ತರಶತಾನ್ಯೇವ ವಾರಂ ವಾರಂ ತ್ವರಾನ್ವಿತಃ ॥ ೬ ॥

ತದ್ವೃತ್ತಂ ರಾಘವಸ್ಸ್ಮೃತ್ವಾ ಕಿಂ ದಶಾಸ್ಯಸ್ಯ ವೈ ಶಿರಃ ।
ಸಮಾಗತಂ ಸಭಾಮಧ್ಯೇಽತ್ರೇತಿ ಪಾರ್ಶ್ವಂ ವ್ಯಲೋಕಯತ್ ॥ ೭ ॥

೩-೪. ನಗುವಿನ ಶಬ್ದವನ್ನು ರಾಮನು ಕೇಳಿ ತಾನು ಮೊದಲಿನ ಕೃತ್ಯವನ್ನು ಜ್ಞಾಪಿಸಿಕೊಂಡನು. ಲಂಕೆಯಲ್ಲಿ ಯುದ್ಧಮಾಡುತ್ತಿದ್ದಾಗ ರಾಮಬಾಣದಿಂದ ಮರಣವನ್ನು ಹೊಂದಿರುವ ರಾವಣನ ತಲೆಗಳು ನಮಗೆ ರಾಮನ ಬಾಣದಿಂದ ಮರಣವು ಲಭಿಸಿತಲ್ಲಾ! ಎಂದು ನಗುತ್ತಾ ರಾಮನನ್ನು ನಮಸ್ಕರಿಸಲು ಅಂತರಿಕ್ಷದಿಂದ ಕೆಳಕ್ಕೆ ಬರುತ್ತಿದ್ದುವು.

೫. ಆ ತಲೆಯಲ್ಲಿರುವ ಹಲ್ಲು ಮೊದಲಾದವುಗಳನ್ನೂ, ಅದರ ಭಯಂಕರವಾದ ರೀತಿಯನ್ನೂ ನೋಡಿ ಶ್ರೀ ರಾಮನು ಈ ತಲೆಗಳು ನನ್ನನ್ನು ತಿನ್ನುವುದಕ್ಕೇನೇ ಅಂತರಿಕ್ಷದಿಂದ ಬರುತ್ತಿವೆ ಎಂದು ತಿಳಿದುಕೊಂಡನು.

೬. ಆಗ ರಾಮನು ಮತ್ತೆ ಬಾಣಗಳನ್ನು ಹೂಡಿ ಆ ತಲೆಗಳು ಮತ್ತೆ ಅಂತರಿಕ್ಷಕ್ಕೆ ಹೋಗುವಂತೆ ಹೊಡೆದು ಎಸೆದನು. ಇದೇ ರೀತಿಯಾಗಿ ಆ ತಲೆಗಳು ನೂರ ಒಂದು ಸಾರಿಯತನಕ ಮತ್ತೆ ಮತ್ತೆ ಬರುತ್ತಲೇ ಇದ್ದುವು. ಇವನೂ ಅಂತೆಯೇ ಅವನ್ನು ಎಸೆಯುತ್ತಲೇ ಇದ್ದನು.

೭. ಆ ಸಭೆಯವನ ನಗುವಿನಿಂದ ಆ ವಿಷಯವು ಜ್ಞಾಪಕಕ್ಕೆ ಬಂದಿತು. ಇದರಿಂದ ದಶಾಸ್ಯನ ತಲೆಗಳೇನಾದರೂ ಈ ಸಭಾಮಧ್ಯದಲ್ಲಿ ಬಂದುವೋ ಏನೋ ಎಂಬುದಾಗಿ ತಿರುಗಿ ಅಕ್ಕ ಪಕ್ಕದಲ್ಲಿ ನೋಡಿದನು.

ಮಾಯಾವಿನೋ ರಾಕ್ಷಸಾಶ್ಚ ಸಂತ್ಯತ್ರೇತಿ ವಿಚಿಂತ್ಯ ಚ ।
ಏವಂ ಯದಾ ಯದಾ ಹಾಸ್ಯಂ ಸ ಶ್ರುಶ್ರಾವ ರಘೂತ್ತಮಃ ॥ ೮ ॥

ತದಾ ತದಾ ಪೂರ್ವವೃತ್ತಂ ಸ್ಮೃತ್ವಾ ಪಾರ್ಶ್ವೇ ವ್ಯಲೋಕಯತ್ ।
ತತೋ ರಾಮಃ ಕ್ಷಣಂ ಚಿತ್ತೇ ಚಿಂತಯಾಮಾಸ ಸಾದರಂ ॥ ೯ ॥

ಯದಾ ಯದಾ ಶ್ರೂಯತೇತ್ರ ಹಾಸ್ಯಂ ಕೇನಾಪಿ ಯತ್ಕೃತಂ ॥
ತದಾ ತದಾ ದಶಾಸ್ಯಸ್ಯ ಶಿರೋಹಾಸ್ಯಂ ಸ್ಮರಾಮ್ಯಹಂ ॥ ೧೦ ॥

ಮಾಯಾವಿನೋ ರಾಕ್ಷಸಾತ್ರ ಮಾಂ ವಿಸ್ಮಾರ್ಯ ಪುನಶ್ಚಿರಾತ್ ।
ಮಾಮತ್ತುಮತ್ರ ಯಾಸ್ಯಂತಿ ತ್ವಿತಿ ಮತ್ವಾ ಸ್ವಚೇತಸಿ ॥ ೧೧ ॥

೮-೯. ಮಾಯಾವಿಗಳಾದ ರಾಕ್ಷಸರು ಇಲ್ಲಿಯೂ ಇರುವರೋ ಏನೋ ಎಂಬುದಾಗಿ ಯೋಚಿಸುತ್ತಿದ್ದನು. ಆ ರಾಮನು ನಗುವನ್ನು ಹೀಗೆ ಕೇಳಿದಾಗಲೆಲ್ಲ ಪೂರ್ವದ ಈ ರಾವಣನ ತಲೆಯ ವಿಷಯವು ಸ್ಮರಣೆಗೆ ಬಂದು ಅಕ್ಕಪಕ್ಕಗಳಲ್ಲಿ ನೋಡುತ್ತಿದ್ದನು. ಹೀಗೆ ನೋಡಿ ನಿರ್ಭರವಾದ ಮೇಲೆ ರಾಮನು ಮನಸ್ಸಿನಲ್ಲಿಯೇ ಇಂತೆಂದು ಯೋಚಿಸುತ್ತಿದ್ದನು.

೧೦. ಯಾವನಾದರೂ, ಯಾವಾಗಲಾದರೂ ನನ್ನ ಬಳಿಯಲ್ಲಿ ಹಾಸ್ಯ ಮಾಡಿದರೆ (ನಕ್ಕರೆ) ಆಗಲೆಲ್ಲಾ ನನಗೆ ಆ ದಶಾಸ್ಯನ ತಲೆಗಳ ಸ್ಮರಣೆಯು ಬರುತ್ತದೆ.

೧೧. ರಾಕ್ಷಸರಾದರೋ ಮಾಯಾವಿಗಳು. ಬಹುಕಾಲವಾದ ಮೇಲೆ ಅದನ್ನು ಮರೆತಿರುವೆನೆಂದು ಸಮಯವನ್ನು ನೋಡಿಕೊಂಡು ನನ್ನನ್ನು ತಿನ್ನುವುದಕ್ಕೆ ಬಂದು ಬಿಡಬಹುದು ಎಂಬುದಾಗಿ ಆಲೋಚಿಸುತ್ತಿದ್ದನು. ಆದ್ದರಿಂದ ಈ ನಗುವಿಕೆಯನ್ನು ನಿಲ್ಲಿಸಬೇಕು.

ಆನ್ಯಚ್ಚ ನಿಂದಿತಂ ಹಾಸ್ಯಂ ನೀತಿಶಾಸ್ತ್ರೇಷು ಸರ್ವದಾ ।
ಅತೋ ಹಾಸ್ಯಂ ವರ್ಜಯಾಮಿ ಸರ್ವೇಷಾಂ ಭೂನಿವಾಸಿನಾಂ ॥ ೧೨ ॥

ಇತಿ ನಿಶ್ಚಿತ್ಯ ಹೃದಯೇ ಲಕ್ಷ್ಮಣಂ ವಾಕ್ಯಮಬ್ರವೀತ್ ।
ದುಂದುಭಿಂ ಘೋಷಯಸ್ವಾದ್ಯ ಪುರ್ಯಾಂ ರಾಷ್ಟ್ರೇವನೀತಲೇ ॥ ೧೩ ॥

ಸ್ಮಿತಾನನೋ ನರಃ ಕಶ್ಚಿನ್ನಾರೀ ವಾಥ ಸುಹೃಚ್ಚ ವಾ ।
ಸೀತಾ ವಾ ತನಯೋ ಬಂಧುಃ ಸ ಮೇ ದಂಡ್ಯೋಭವೇದಿತಿ ॥ ೧೪ ॥

ತಥೇತಿ ರಾಮವಾಕ್ಯಾತ್ಸ ಘೋಷಯಾಮಾಸ ದುಂದುಭಿಂ ।
ಪೌರಾ ಜಾನಪದಾಸ್ಸರ್ವೇ ಶ್ರುತ್ವಾ ಶಿಕ್ಷಾಧ್ವನಿಂ ಪ್ರಭೋಃ ॥ ೧೫ ॥

---

೧೨. ನಗುವು ನನಗೆ ಈ ರೀತಿಯಾಗಿ ತೊಂದರೆ ಕೊಡುತ್ತಿರುವುದಲ್ಲದೆ ನೀತಿಶಾಸ್ತ್ರದಲ್ಲಿಯೂ ಕೂಡ ಈ ನಗುವಿಕೆಯನ್ನು ನಿಂದಿಸಿರುವರು. ಆದ್ದರಿಂದ ಇನ್ನುಮೇಲೆ ಭೂಲೋಕದವರು ನಗದೇನೆ ಇರುವಂತೆ ಅದನ್ನೇ ನಿಷೇಧಿಸಿ ಬಿಡುವೆನು.

೧೩. ಈ ರೀತಿಯಾಗಿ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ಲಕ್ಷ್ಮಣನನ್ನು ಕುರಿತು ಇಂತೆಂದನು. ಅಯ್ಯಾ ಲಕ್ಷ್ಮಣನೇ ! ನನ್ನ ರಾಜಧಾನಿಯಲ್ಲಿಯೂ, ನಮ್ಮ ದೇಶಕ್ಕೆ ಸೇರಿದ ಎಲ್ಲಾ ಊರಲ್ಲಿಯೂ ಕೂಡ ನಗಾರಿಗಳನ್ನು ಹೊಡೆಸುತ್ತ ಇಂತೆಂದು ಸಾರಿಸು.

೧೪. ಮನುಷ್ಯನು ಯಾವನಾದರೂ ಅವನು ಹೆಂಗಸಾಗಲಿ, ಗಂಡಸೇ ಆಗಲೀ ನನಗೆ ಸ್ನೇಹಿತನೇ ಆಗಲಿ, ಸೀತೆಯಾಗಲಿ, ಮಕ್ಕಳಾಗಲಿ, ಕೊನೆಗೆ ನನ್ನ ತಮ್ಮಂದಿರೇ ಆಗಲಿ ನಗುತ್ತಿದ್ದರೆ ಅವರು ಶಿಕ್ಷಾರ್ಹರಾಗುವರು ಎಂದು.

೧೫. ಲಕ್ಷ್ಮಣನು ಹಾಗೆಯೇ ಆಗಲೆಂದು ರಾಮನ ಮಾತಿನಂತೆ ಡಂಗೂರವನ್ನು ಹೊಡೆಸಿ ಸಾರಿಸಿದನು. ಆಗ ಪಟ್ಟಣಿಗರೂ, ದೇಶೀಯರೂ, ಸ್ವಾಮಿಯಾದ ರಾಮನ ಈ ರೀತಿಯ ಶಿಕ್ಷೆಯ ಧ್ವನಿಯನ್ನು ಕೇಳಿದರು.

ರಾಮದಂಡಭಯಾತ್ಸರ್ವೇ ನ ಚಕ್ರುಸ್ತೇ ಸ್ಮಿತಾನನಂ ।
ವಾರಾಂಗನಾನೃತ್ಯಗೀತೇ ನಟಗೀತಪ್ರವರ್ತನೇ ॥ ೧೬ ॥

ಸ್ತ್ರೀಭಿಃ ಸುಹೃದ್ಭಿಃ ಮಿತ್ರೈಶ್ಚ ವಿನೋದಾನುತ್ಸವಾನ್ ವರಾನ್ ।
ಮಾಂಗಲ್ಯಾನಿ ಚ ಕರ್ಮಾಣಿ ಹಾಸ್ಯಕಾರೀಣಿ ನಾಚರನ್ ॥ ೧೭ ॥

ವಂಶಸ್ತಂಭಕಲಾಭಿಶ್ಚ ಕೌತುಕಾನಿ ಹಿ ಯಾನಿ ಚ ।
ತೂರ್ಯಘೋಷಾದಿಮಾಂಗಲ್ಯಕರ್ಮಾಣಿ ವಿವಿಧಾಃ ಕಥಾಃ ॥ ೧೮ ॥

ಸಾಂವತ್ಸರೋತ್ಸವಾನ್ ಸರ್ವಾನ್ ಯಾತ್ರಾಯಜ್ಞೋತ್ಸವಾನ್ ಶುಭಾನ್ ।
ಕೌತುಕಾನುತ್ಸವಾಂಶ್ಚೈವ ವಿವಾಹಾದಿಷು ಕರ್ಮಸು ॥ ೧೯ ॥

೧೬–೧೭. ರಾಮನ ಈ ಶಿಕ್ಷೆಯ ಹೆದರಿಕೆಯಿಂದ ಒಬ್ಬರೂ ನಗುಮುಖವನ್ನೇ ಮಾಡಿಕೊಳ್ಳುತ್ತಿರಲಿಲ್ಲ. ಈ ಹೆದರಿಕೆಯಿಂದಲೇ ಜನರು ನಗುವು ಬರುವಂತಹ ನರ್ತಕಿಯರ ಕುಣಿತ, ಗಾನ, ನಟರಸಂಗೀತ ಹೆಂಡತಿಯರೊಡನೆ ನಗುವಿನ ಸಲ್ಲಾಪ, ಸ್ನೇಹಿತರೊಡನೆ ಸಂತೋಷದ ಮಾತು, ಮಿತ್ರರೊಡನೆ ವಿನೋದಮಾಡುವುದು, ಇವೆಲ್ಲವನ್ನೂ ಬಿಟ್ಟು ಬಿಟ್ಟರು. ಒಟ್ಟಿನಲ್ಲಿ ನಗು ಬರುವಂತಹ ಕೆಲಸಗಳು ಮಂಗಳಕರಗಳಾದರೂ ಅವನ್ನು ಆಚರಿಸುತ್ತಲೇ ಇರಲಿಲ್ಲ.

೧೮–೧೯. ಡೊಂಬರಾಟಗಳ ಆಶ್ಚರ್ಯಗಳನ್ನು ನೋಡಿದರೆ ನಗುಬರುವುದೆಂದು ಆ ನಗುವನ್ನು ಬಿಡಲು ಆ ಆಟಗಳನ್ನೇ ಬಿಡಿಸಿದರು. ಮಂಗಳಘೋಷ, ಮಂಗಳಕರ್ಮ, ನಾನಾ ಬಗೆಯಾಗಿ ಹರಟೆ ಹರಟುವುದು, ವರ್ಷಕ್ಕೆ ಒಂದುಸಲ ಮಾಡುವ ನಗುವ ಉತ್ಸವಗಳು ಯಾವು ಯಾವುವು ಇರುವುವೋ ಅವು, ಯಾತ್ರೋತ್ಸವ ಯಜ್ಞೋತ್ಸವ; ಮದುವೆ ಮಂತಾದುವುಗಳು, ಇವುಗಳಲ್ಲಿ ಬರುವ ಹಾಸ್ಯ ಮುಂತಾದವು ಎಲ್ಲವನ್ನೂ ಬಿಟ್ಟುಬಿಟ್ಟರು.

ವಾರ್ತಾಶ್ಚಿತ್ರಕಥಾಶ್ಚಾಪಿ ನ ಚಕ್ರುಶ್ಚ ಕದಾ ಜನಾಃ ।
ಯಯೌ ನಾವಶ್ಯಕಾತ್ಕಾರ್ಯಾದ್ವಿನಾ ಸದಸಿ ಕಃ ಪ್ರಭುಂ ॥ ೨೦ ॥

ಪುರಾಣಾನೀತಿಹಾಸಾಂಶ್ಚ ನ ಪಠಂತಿ ಸ್ಮ ಕೇಚನ ।
ಗರ್ಭಾಧಾನೇ ಪುತ್ರಜನ್ಮನಾಮಕರ್ಮಾದಿಷೂತ್ಸವಾ ॥ ೨೧ ॥

ಪೌರಜಾನಪದಾಸ್ಸರ್ವೇ ಸಪ್ತದ್ವೀಪನಿವಾಸಿನಃ ।
ಏತಾನಿ ಹಾಸ್ಯಕಾರೀಣಿ ನಾನಾಕರ್ಮಾಣಿ ಭೂತಲೇ ॥ ೨೨ ॥

ರಹಸ್ಯಪಿ ನ ಚಕ್ರುಸ್ತೇ ರಾಮದಂಡಭಯಾತ್ಕದಾ ।
ಏವಮಾಸೀದ್ವರ್ಷಮೇಕಂ ತದಾ ಭೂಮ್ಯಾಂ ಕದಾಪಿ ಚ ॥ ೨೩ ॥

ಸ್ಮಿತಾನನಂ ಕಸ್ಯ ನಾಸೀನ್ನ ಚಕ್ರುರ್ಮಂಡನಾದಿಕಂ ।
ತದೋತ್ಸಾಹದೇವತಾಶ್ಚ ನಾನಾಕರ್ಮಾಂಗದೇವತಾಃ ॥ ೨೪ ॥

---

೨೦. ಚಿತ್ರವಾದ ಕಥೆಗಳ ಮಾತುಗಳನ್ನು ಬಿಟ್ಟುಬಿಟ್ಟರು. ಅವಶ್ಯಕವಾದ ಕೆಲಸವಿದ್ದರೇನೇ ರಾಮನ ಸಭೆಗೆ ಹೋಗುತ್ತಿದ್ದರು. ಇಲ್ಲದಿದ್ದರೆ ಒಬ್ಬರೂ ಹೋಗುತ್ತಿರಲಿಲ್ಲ.

೨೧. ಪುರಾಣಗಳನ್ನಾಗಲಿ, ಇತಿಹಾಸಗಳನ್ನಾಗಲಿ, ಓದುವುದನ್ನೇ ಜನರು ಬಿಟ್ಟುಬಿಟ್ಟರು. ಗರ್ಭಧಾನಮಾಡುವಾಗ, ಮಕ್ಕಳು ಹುಟ್ಟಿದಾಗ, ನಾಮಕರಣ ಮಾಡುವಾಗ, ಇವು ಯಾವುದರಲ್ಲಿಯೂ ನಗುವಿಕೆಯ ಕರ್ಮವನ್ನು ಬಿಟ್ಟುಬಿಟ್ಟರು.

೨೨. ಸಪ್ತದ್ವೀಪಗಳ ಒಳಗಿರುವ ಪಟ್ಟಣಿಗರು ದೇಶೀಯರು ಎಲ್ಲರೂ ಕೂಡ ಮೇಲೆ ಹೇಳಿದ ಹಾಸ್ಯಕರವಾದ ಕೆಲಸಗಳನ್ನು ಬಹಿರಂಗವಾಗಿ ಆಗಲಿ ಗುಟ್ಟಾಗಿಯಾಗಲಿ ಮಾಡುವುದನ್ನು ಬಿಟ್ಟುಬಿಟ್ಟರು.

೨೩-೨೪. ರಾಮನ ಶಿಕ್ಷೆಯ ಹೆದರಿಕೆಯು ಆ ರೀತಿಯಾಗಿದ್ದಿತು ಈ ರೀತಿಯಾಗಿ ಭೂಮಿಯಲ್ಲಿ ಒಂದು ವರ್ಷಕಾಲ ಆ ರಾಮನ ಆಜ್ಞೆಯಿದ್ದಿತು. ಆಗ ಭೂಮಿಯಲ್ಲಿ ಒಬ್ಬನೂ ನಗುಮುಖವನ್ನು ಮಾಡಲೇ ಇಲ್ಲ. ಅಲಂಕಾರ ಗಳನ್ನೂ ಕೂಡ ಜನರು ಮಾಡಿಕೊಳ್ಳುತ್ತಲೇ ಇರಲಿಲ್ಲ. ದೇವತೆಗಳ ಉತ್ಸವ ಗಳನ್ನಾಗಲಿ, ಕರ್ಮಾಂಗದೇವತೆಗಳ ಉತ್ಸವಗಳನ್ನಾಗಲಿ ಯಾವುದನ್ನೂ ಕೂಡ ಯಾರೂ ಕೂಡ ಮಾಡಲೇ ಇಲ್ಲ.

ಇಂದ್ರಾಯ ಕಥಯಾಮಾಸುಸ್ತದ್ವೃತ್ತಂ ಜಗತೀಭವಂ ।
ಇಂದ್ರಾದೀನಾಂ ಸುರಾಣಾಂ ಚ ಕರ್ಮಾಂಗಪೂಜನಾನಿ ಹಿ　　॥ ೨೫ ॥

ನಾಸೀದ್ಯದಾ ಜಗತ್ಯಾಂ ಹಿ ತದೇಂದ್ರಃ ಕಥಯದ್ವಿಧಿಂ ।
ತದಾ ಸುರಾನ್ ವಿಧಿಃ ಪ್ರಾಹ ನ ರಾಮಾಗ್ರೇ ಬಲಂ ಹಿ ನಃ　　॥ ೨೬ ॥

ನೈವೋಪದೇಷ್ಟುಂ ಯೋಗ್ಯಸ್ಸ ಮಮಾಪಿ ಜನಕಸ್ತು ಯಃ ।
ಯುಕ್ತ್ಯಾ ಕಾರ್ಯಂ ಸಾಧಯಾಮಿ ಯೇನ ವೋದ್ಯ ಹಿತಂ ಭವೇತ್ ॥

ಇತ್ಯಾಶ್ವಾಸ್ಯ ಸುರಾನ್ ಸರ್ವಾನ್ ವಿಧಿರ್ಭೂಮಂಡಲಂ ಯಯೌ ।
ಅಯೋಧ್ಯಾಯಾಶ್ಚ ಸೀಮಾಯಾಂ ದೃಷ್ಟ್ವಾ ವೇಧಾಸ್ಸುಪಿಪ್ಪಲಂ ॥

ಸ್ವಯಂ ವಿವೇಶ ತನ್ಮಧ್ಯೇ ದೃಷ್ಟ್ವಾ ಪಾಂಥಾನ್ ಜಹಾಸ ಸಃ ।
ಏತಸ್ಮಿನ್ನಂತರೇ ಕಶ್ಚಿತ್ಕಾಷ್ಠಭಾರವಹಃ ಪುಮಾನ್　　॥ ೨೯ ॥

೨೫–೨೬. ಆಗ ಉತ್ಸವದೇವತೆಗಳೂ ಕೂಡ ಈ ವಿಷಯವನ್ನು ಇಂದ್ರನಿಗೆ ತಿಳಿಸಿದರು. ಇಂದ್ರನೇ ಮುಂತಾದ ದೇವತೆಗಳಿಗೆ ಕರ್ಮಾಂಗದ ಪೂಜೆಗಳು ಯಾವಾಗ ಆಗಲಿಲ್ಲವೋ ಆಗ ಇಂದ್ರನು ಬ್ರಹ್ಮನಿಗೆ ಇದನ್ನು ಹೇಳಿದನು. ಅದನ್ನು ಕೇಳಿ ಬ್ರಹ್ಮನು ರಾಮನ ಮುಂದೆ ನಮ್ಮ ಬಲವೇನೂ ನಡೆಯುವುದಿಲ್ಲ ಎಂದನು.

೨೭. ಅವನು ನನಗೆ ತಂದೆಯಾದುದರಿಂದ ಅವನಿಗೆ ನಾನು ಉಪದೇಶಿಸುವುದು ಯುಕ್ತವಲ್ಲ. ನಿಮಗೆ ಅನುಕೂಲವಾಗುವಂತೆ ಯುಕ್ತಿಯಿಂದ ಕಾರ್ಯವನ್ನು ಸಾಧಿಸುತ್ತೇನೆ-

೨೮. ಎಂಬುದಾಗಿ ದೇವತೆಗಳಿಗೆ ಸಮಾಧಾನವನ್ನು ಹೇಳಿ ಬ್ರಹ್ಮನು ಭೂಮಂಡಲಕ್ಕೆ ಬಂದನು. ಅಂತೆಯೇ ಅಯೋಧ್ಯೆಗೆ ಬರುತ್ತ ಅದರ ಎಲ್ಲೆಯಲ್ಲಿರುವ ಅರಳಿಯ ಮರವನ್ನು ನೋಡಿದನು.

೨೯. ಅದರೊಳಕ್ಕೆ ತಾನು ಸೇರಿಕೊಂಡು ಅಲ್ಲಿ ಹೋಗುತ್ತಿದ್ದ ದಾರಿಗರನ್ನು ನೋಡಿ ನಗುತ್ತಿದ್ದನು. ಈ ಸಮಯದಲ್ಲಿ ಒಬ್ಬನು ಸೌದೆಯ ಹೊರೆಯನ್ನು ಹೊತ್ತುಕೊಂಡು ಅಲ್ಲಿಗೆ ಬಂದನು.

ಶ್ರುತ್ವಾ ಪಿಪ್ಪಲಹಾಸ್ಯಂ ತತ್ತೇನ ಧೀರ್ಘಂ ಜಹಾಸ ಸಃ ।
ತತಸ್ಸ ಭಾರವಾಹಶ್ಚ ಯಯೌ ಹಟ್ಟೇ ಪ್ರಭೋಃ ಪುರೀಂ ॥ ೩೦ ॥

ಕಾಷ್ಠಭಾರವಿಕ್ರಯಾರ್ಥಂ ತತ್ರ ಸ್ಮೃತ್ವಾ ಸ್ಮಿತಂ ಹೃದಿ ।
ಚಲಪತ್ರಸ್ಯ ಸೋತ್ಯುಚ್ಚೈಃ ಜಹಾಸ ಹೃದಿ ಶಂಕಿತಃ ॥ ೩೧ ॥

ಭಾರವಾಹಸ್ಯ ಹಾಸ್ಯಂ ತದ್ರಾಜದೂತೋಥ ಶುಶ್ರುವೇ ।
ರಾಜದೂತೋ ಜಹಾಸೋಚ್ಚೈರ್ನ ಸಮರ್ಥೋ ನಿರೋಧಿತುಂ ॥ ೩೨ ॥

ರಾಜದೂತಸ್ಸಭಾಂ ಗತ್ವಾ ಭಾರವಾಹಸ್ಯ ಯತ್ ಸ್ಮಿತಂ ।
ಹೃದಿ ಸ್ಮೃತ್ವಾ ಜಹಾಸೋಚ್ಚೈಸ್ತಚ್ಛ್ರುತ್ವಾ ತೇ ಸಭಾಸದಃ ॥ ೩೩ ॥

ಸಭಾಯಾಂ ಜಹಸುಸ್ಸರ್ವೇ ತಚ್ಛ್ರುತ್ವಾ ರಾಘವೋ ಹಿ ಸಃ ।
ಉಚ್ಚೈರ್ಜಹಾಸ ಸದಸಿ ವರಸಿಂಹಾಸನೇ ಸ್ಥಿತಃ ॥ ೩೪ ॥

---

೩೦. ಅವನು ಈ ಆರಳಿಯ ಮರವು ನಗುತ್ತಿದ್ದುದನ್ನು ನೋಡಿ ತಾನು ಗಟ್ಟಿಯಾಗಿ ನಕ್ಕನು. ಅವನು ಅನಂತರ ಸೌದೆಯ ಹೊರೆಯನ್ನು ಹೊತ್ತುಕೊಂಡು ಅಯೋಧ್ಯೆಯಲ್ಲಿರುವ ಅಂಗಡಿ ಬೀದಿಗೆ ಹೋದನು.

೩೧. ಅಲ್ಲಿ ಆ ಸೌದೆಯ ಹೊರೆಯನ್ನು ಮಾರುತ್ತಿರುವಾಗ ಆ ಅರಳಿಯ ಮರದ ನಗುವಿಕೆಯು ಸ್ಮರಣೆಗೆ ಬಂದು ಆ ಅರಳಿ ಮರವು ಹೀಗೆ ನಗುವುದಲ್ಲ! ಎಂದು ಗಟ್ಟಿಯಾಗಿ ನಕ್ಕನು.

೩೨. ಈ ಸೌದೆಯವನು ನಗುತ್ತಿರುವುದನ್ನು ಅಲ್ಲಿದ್ದ ರಾಜಭಟನು ಕೇಳಿದನು. ಅದನ್ನು ಕೇಳಿದೊಡನೆಯೇ ಆ ರಾಜದೂತನು ತಾನೂ ನಗುವನ್ನು ತಡೆಯಲಾರದೆ ಗಟ್ಟಿಯಾಗಿ ನಕ್ಕನು.

೩೩. ಅನಂತರ ಆ ರಾಜದೂತನು ರಾಮನ ಸಭೆಗೆ ಹೋಗಿ ಸೌದೆಯವನು ನಕ್ಕುದನ್ನು ಸ್ಮರಿಸಿಕೊಂಡು ಗಟ್ಟಿಯಾಗಿ ನಕ್ಕನು. ಅದನ್ನು ಆ ಸಭೆಯವರೆಲ್ಲರೂ ಕೇಳಿದರು.

೩೪. ಇದರಿಂದ ಅವರೆಲ್ಲರಿಗೂ ನಗುವು ಬಂದು ಅವರೆಲ್ಲರೂ ನಕ್ಕರು. ಇದೆಲ್ಲವನ್ನೂ ನೋಡಿ ರಾಮನು ಸಿಂಹಾಸನದಲ್ಲಿ ಕುಳಿತಿದ್ದರೂ ತಾನೂ ಗಟ್ಟಿಯಾಗಿ ನಕ್ಕನು.

ರಾಮೋ ವಿಚಾರಯಾಮಾಸ ಕಿಮರ್ಥಂ ಹಸಿತಂ ಮಯಾ ।
ಯನ್ನಿಮಿತ್ತಂ ಸದಾ ದಂಡಂ ಪೌರಾನ್ ಜಾನಪದಾನ್ ನಿಜಾನ್ ॥ ೩೫ ॥

ಅಹಂ ಕರೋಮಿ ಸೋದ್ಯಾಹಂ ಸಭಾಯಾಂ ಹಸಿತಃ ಕಥಂ ।
ದಂಡಯಿಷ್ಯತಿ ಮಾಂ ಕೋದ್ಯ ಕಿಂ ಮಾಂ ಪೌರಾ ವದಂತಿ ಹಿ ॥ ೩೬ ॥

ಅಸ್ಮಾಕಮೇವ ಶಿಕ್ಷಾಸ್ತಿ ಸರ್ವದಾ ರಾಘವಸ್ಯ ಸಾ ।
ಸ ಕಥಂ ಹಸಿತಶ್ಚಾದ್ಯ ಸರ್ವೇಷಾಂ ಪುರತಃ ಸ್ಫುಟಂ ॥ ೩೭ ॥

ಶಿಕ್ಷಾಂ ಕರಿಷ್ಯತಿ ವಿಭೋಃ ಕೋಸ್ಯ ತ್ವಿತಿ ವದಂತಿ ತೇ ।
ಮಾನಯಿಷ್ಯಂತಿ ನಾತಸ್ತೇ ಮಮಾಗ್ರೇ ಶಿಕ್ಷಿತಂ ಭುವಿ ॥ ೩೮ ॥

---

೩೫. ಆಗ ರಾಮನು ತಾನೇಕೆ ನಕ್ಕೆನೆಂದು ತನ್ನ ಮನಸ್ಸಿನಲ್ಲಿಯೇ ಯೋಚಿಸಿದನು. ಹೀಗೆ ನಗಬಾರದೆಂದೇ ಸಪ್ತದ್ವೀಪಗಳಲ್ಲಿರುವ ಎಲ್ಲರನ್ನೂ ನಾನು ಶಿಕ್ಷೆಗೆ ಗುರಿಮಾಡಿದ್ದೇನೆ.

೩೬. ಅಂತಹ ನಾನೇ ಈಗ ನಗುತ್ತಿರುವೆನಲ್ಲ! ಅದರಲ್ಲಿಯೂ ಈ ಸಭೆಯಲ್ಲಿ! ಸಿಂಹಾಸನದ ಮೇಲೆ ಕುಳಿತಿರುವಾಗ ನಗುತ್ತಿರುವೆನು. ಇದೇಕೆ ನಕ್ಕೆನು? ನನ್ನನ್ನು ಶಿಕ್ಷಿಸುವವರು ಈ ಲೋಕದಲ್ಲಿ ಯಾರಿದ್ದಾರೆ? ಪಟ್ಟಣಿಗರೆಲ್ಲರೂ ನಾನೇ ಹೀಗೆ ನಕ್ಕ ಮೇಲೆ ಏನೆನ್ನುವರು?

೩೭. ತಪ್ಪುಮಾಡಿದರೆ ರಾಮನು ನಮ್ಮನ್ನು ಮಾತ್ರ ಶಿಕ್ಷಿಸುವನು. ತಾನು ತಪ್ಪನ್ನು ಮಾಡಿದರೆ ಅವನನ್ನು ಶಿಕ್ಷಿಸುವವರು ಯಾರು? ಅವನಿಗೆ ಆ ಶಿಕ್ಷೆಯು ಇಲ್ಲವೆ! ಎಲ್ಲರೂ ಇರುವಾಗ ಅವರೆದುರಿಗೆ ಚೆನ್ನಾಗಿ ನಕ್ಕನಲ್ಲ! ಅದು ಹೇಗೆ ನಕ್ಕನು?

೩೮. ಆ ಪ್ರಭುವಿಗೆ ಈಗ ಶಿಕ್ಷೆಯನ್ನು ವಿಧಿಸುವರು ಯಾರು? ಎಂಬುದಾಗಿ ಎಂದುಕೊಳ್ಳುತ್ತಾರೆ. ಅಲ್ಲದೆ ನನ್ನ ನಿಯಮವು ಸಡಿಲವಾದ ಮೇಲೆ ಲೋಕದಲ್ಲಿ ಯಾರೂ ನನ್ನನ್ನು ಗೌರವಿಸುವುದಿಲ್ಲ

ಮನ್ಯೈತನ್ನ ವ್ರತಂ ಯೋಗ್ಯಮಿತಿ ರಾಮಸ್ತ್ವಮನ್ಯತ ।
ಪುನರ್ಜಹಾಸ ಶ್ರೀರಾಮಸ್ತನ್ನಿರೋದ್ಧುಂ ನ ಸ ಕ್ಷಮಃ ॥ ೩೯ ॥

ತತೋ ರಾಮೋಽಬ್ರವಿತ್ಪೌರಾನ್ ಸಭಾಸ್ಥಾನ್ ಸ ಸ್ಮಿತಾನನಃ ।
ಕಿಮರ್ಥಂ ಹಸಿತಾ ಯೂಯಂ ಯೇಭ್ಯೋ ಹಾಸ್ಯಂ ಮಮಾಪಿ ಹಿ ॥

ಸಮಾಗತಂ ಸಭಾಮಧ್ಯೇ ಪೌರಾಃ ಪ್ರೋಚುರ್ನೃಪೋತ್ತಮಂ ।
ದೃಷ್ಟ್ವಾ ತ್ವದ್ದೂತಹಾಸ್ಯಂ ಹಿ ತೇನಾಸ್ಮಾಕಂ ಸಮಾಗತಂ ॥ ೪೧ ॥

ತತ್ಪೌರವಚನಂ ಶ್ರುತ್ವಾ ದೂತಮಾಹ ರಘೂತ್ತಮಃ ।
ತ್ವಯಾ ಕಿಮರ್ಥಂ ಹಸಿತಂ ಸೋಽಬ್ರವೀದ್ರಘುನಂದನಂ ॥ ೪೨ ॥

ಭಾರವಾಹಸ್ಯ ಹಾಸ್ಯಂ ತತ್ ಸ್ಮೃತ್ವಾ ಪ್ರಹಸಿತಂ ಮಯಾ ।
ತದ್ದೂತವಚನಂ ಶ್ರುತ್ವಾ ಭಾರವಾಹಂ ತದಾ ಪ್ರಭುಃ ॥ ೪೩ ॥

---

೩೯. ಇನ್ನು ಮೇಲೆ ನನಗೆ ಈ ವ್ರತವು ಯೋಗ್ಯವಲ್ಲ. ಎಂಬುದಾಗಿ ರಾಮನ ತಿಳಿವಳಿಕೆಗೆ ಬಂದಿತು. ತನ್ನ ಆ ಮನಸ್ಸಿನಲ್ಲಿ ಹುಟ್ಟಿದ ಆಶ್ಚರ್ಯವನ್ನು ತಡೆಯಲಾರದೆ ಮತ್ತೆ ರಾಮನು ನಕ್ಕನು.

೪೦. ಆಗ ರಾಮನು ನಗುತ್ತಲೇ ಆ ಸಭೆಯಲ್ಲಿರುವವರನ್ನು ಕುರಿತು ಇಂತೆಂದನು. ಎಲೈ ಸಭಿಕರಿರಾ! ನೀವೇಕೆ ನಕ್ಕಿರಿ? ನೀವು ನಕ್ಕುದರಿಂದ ನಾನೂ ನಗಬೇಕಾಯಿತು.

೪೧. ಆಗ ಆ ಪಟ್ಟಣಿಗರು ಎಲೈ ರಾಮನೇ! ಈ ಸಭಾಮಧ್ಯಕ್ಕೆ ಬಂದ ನಿನ್ನ ದೂತನು ನಕ್ಕನು. ಅದನ್ನು ನೋಡಿ ನಾವೂ ನಕ್ಕೆವು ಎಂದರು.

೪೨. ಪಟ್ಟಣಿಗರ ಈ ಮಾತನ್ನು ಕೇಳಿ ರಾಮನು ದೂತನನ್ನು ಕರೆದು ಎಲೈ ದೂತನೇ! ನೀನೇತಕ್ಕೆ ನಕ್ಕೆ? ಎಂದು ಕೇಳಿದನು.

೪೩-೪೪. ಎಲೈ ಪ್ರಭುವೇ! ಒಬ್ಬ ಸೌದೆಹೊರುವವನು ನಕ್ಕನು. ಅದನ್ನು ನೋಡಿ ನನಗೂ ನಗುವು ಅಂಗಡಿಬೀದಿಯಲ್ಲಿ ಬಂದಿತು. ಅದನ್ನು ಸ್ಮರಿಸಿಕೊಂಡು ಇಲ್ಲಿಯೂ ನಕ್ಕೆನು ಎಂದನು ದೂತನ ಈ ಮಾತನ್ನು ಕೇಳಿ

ದೂತೈರಾನೀಯ ಸದಸಿ ತಮಾಹ ರಘುನಂದನಃ ।
ಮಾ ಭೀತಿಂ ಭಜ ಮತ್ತಸ್ತ್ವಂ ಸತ್ಯಂ ಬ್ರೂಹಿ ಮಮಾಗ್ರತಃ ॥ ೪೪ ॥

ಹಟ್ಟೇ ಕಿಮರ್ಥಂ ಹಸಿತಂ ತ್ವಯಾದ್ಯ ಕಥಯಸ್ವ ಮಾಂ ।
ಸ ಭಾರವಾಹಶ್ಚಕಿತಃ ಶುಷ್ಕಕಂಠೋಷ್ಠತಾಲುಕಃ ॥ ೪೫ ॥

ವೇಪಮಾನಃ ಸ್ಖಲದ್ವಾಚಾ ರಾಘವಂ ವಾಕ್ಯಮಬ್ರವೀತ್ ।
ಅಯೋಧ್ಯಾಯಾಶ್ಚ ಸೀಮಾಯಾಮಶ್ವತ್ಥಸ್ಯ ಮಯಾದ್ಯ ಹಿ ॥ ೪೬ ॥

ದೃಷ್ಟ್ವಾ ಪ್ರಹಸಿತಂ ರಾಜನ್ ಹಟ್ಟೇ ಹಾಸ್ಯಂ ತಥಾ ಕೃತಂ ।
ತದಪೂರ್ವಂ ತದ್ಗಿರಂ ಸ ಪ್ರಭುಃ ಶ್ರುತ್ವಾ ಸುವಿಸ್ಮಿತಃ ॥ ೪೭ ॥

ದೂತಾನುವಾಚ ಶ್ರೀರಾಮಸ್ತ್ವನೇನ ಸಹ ವೇಗತಃ ।
ಯೂಯಂ ಗತ್ವಾದ್ಯ ದ್ರಷ್ಟವ್ಯಂ ಕಿಂ ಸತ್ಯಂ ಕಥ್ಯತೇ ನ ವಾ ॥ ೪೮ ॥

ರಾಮನು ದೂತನನ್ನು ಕಳುಹಿಸಿ ಆ ಸೌದೆಯವನನ್ನು ಕರೆಸಿದನು. ಅವನು ಬಂದ ಮೇಲೆ ಅವನನ್ನು ಕುರಿತು ಎಲೈ ಸೌದೆಯವನೇ! ನೀನು ಹೆದರಬೇಡ. ನನ್ನೆದುರಿಗೆ ಸತ್ಯವನ್ನೇ ಹೇಳು.

೪೫. ನೀನು ಅಂಗಡಿಬೀದಿಯಲ್ಲಿ ಏತಕ್ಕೆ ನಕ್ಕೆ! ಅದನ್ನು ನನಗೆ ಹೇಳು ಎಂದನು. ಅದಕ್ಕೆ ಆ ಸೌದೆಯವನು ಗಾಬರಿಗೊಂಡನು. ಇದರಿಂದ ಗಂಟಲು ಒಣಗಿತು.

೪೬-೪೭. ಆಗ ಅವನು ನಡುಗುತ್ತಾ ತೊದಲು ನುಡಿಯಿಂದ ರಾಮನನ್ನು ಕುರಿತು ಇಂತೆಂದನು. ಈ ಅಯೋಧ್ಯೆಯ ಎಲ್ಲೆಕಟ್ಟಿನಲ್ಲಿ ಒಂದು ಅರಳಿಯ ಮರವಿರುವುದು. ಅದು ನಗುತ್ತಿರುವುದನ್ನು ನೋಡಿ ನಾನು ನಕ್ಕೆನು. ಅದನ್ನೇ ಜ್ಞಾಪಿಸಿಕೊಂಡು ಈ ಅಂಗಡಿಯ ಬೀದಿಯಲ್ಲೂ ನಕ್ಕೆನು. ಈ ಸೌದೆಯವನ ಈ ಅಪೂರ್ವವಾದ ಮಾತನ್ನು ಕೇಳಿ ರಾಮನು ಅಶ್ಚರ್ಯಗೊಂಡನು.

೪೮-೪೯. ಆಗ ಶ್ರೀ ರಾಮನು ದೂತರನ್ನುಕರೆದು ಇವನೊಡನೆ ಅರಳಿಯ ಮರದ ಬಳಿಗೆ ಹೋಗಿರಿ. ಇವನು ಹೇಳುವುದು ನಿಜವೇ? ಸುಳ್ಳೇ? ಎಂಬುದಾಗಿ ನೋಡಿರಿ ಎಂದನು. ಇದನ್ನು ಕೇಳಿ ದೂತರು ಹಾಗೆಯೇ ಆಗಲೆಂದು ಈ

ಅನೇನ ಭಾರವಾಹೇನ ತೇ ತಥೇತಿ ತ್ವರಾನ್ವಿತಾಃ ।
ಗತ್ವಾಶ್ವತ್ಥಸಮೀಪಂ ಹಿ ದದೃಶುಸ್ತೇ ಸ್ಮಿತಂ ಮುಹುಃ ॥ ೪೯ ॥

ತದಾಶ್ಚರ್ಯೇಣ ತೇ ದೂತಾಃ ಪ್ರಹಸಂತೋತಿವೇಗತಃ ।
ಅಶ್ವತ್ಥಹಸಿತಂ ರಾಮಂ ಗತ್ವಾ ಸರ್ವೇ ನ್ಯವೇದಯನ್ ॥ ೫೦ ॥

ತದ್ದೂತವಚನಂ ಶ್ರುತ್ವಾ ರಾಘವಶ್ಚಾತಿವಿಸ್ಮಿತಃ
ರಾಜ್ಯೇ ಮನ್ಯೇ ತದ್ದುಶ್ಚಿಹ್ನಂ ಮೇ ಶಿಕ್ಷಾಂ ಲೋಪ್ತುಮುದ್ಯತಂ ॥ ೫೧ ॥

ಇತಿನಿಶ್ಚಿತ್ಯ ಮನಸಿ ದೂತಾನಾಜ್ಞಾಪಯತ್ತದಾ ।
ಛಿದ್ಯತಾಂ ಚಲಪತ್ರಸ್ಸ ಮಮಾಜ್ಞಾಭಂಗಕಾರಕಃ ॥ ೫೨ ॥

ತದ್ರಾಮವಚನಾದೇವ ಶತಶೋಥ ಸಹಸ್ರಶಃ ।
ಕುಠಾರಪಾಣಯಶ್ಶೀಘ್ರಮಶ್ವತ್ಥಂ ದುದ್ರುವುಸ್ತದಾ ॥ ೫೩ ॥

ಸೌದೆಯುವನೊಡನೆ ಬೇಗನೆ ಆ ಅರಳಿಯ ಮರದ ಬಳಿಗೆ ಹೋಗಿ ಅಲ್ಲಿ ಆ ಅರಳಿಯ ಮರವು ನಗುತ್ತಿರುವುದನ್ನು ನೋಡಿದರು.

೫೦. ಆ ದೂತರು ಆ ಆಶ್ಚರ್ಯವನ್ನು ನೋಡಿ ನಗುತ್ತಲೇ ನೇರವಾಗಿ ರಾಮನ ಬಳಿಗೆ ಬಂದು ಅರಳಿಯ ಮರವು ನಗುತ್ತಿರುವುದನ್ನು ರಾಮನಿಗೆ ಹೇಳಿದರು.

೫೧. ಆ ದೂತರು ಹೇಳಿದುದನ್ನು ಕೇಳಿ ರಾಮನಿಗೂ ಆಶ್ಚರ್ಯವಾಯಿತು. ಇದು ನನ್ನ ರಾಜ್ಯದಲ್ಲಿ ಉಂಟಾದ ಕೆಟ್ಟ ಚಿಹ್ನೆಯಾಗಿದೆ. ಇದು ನನ್ನ ಶಿಕ್ಷೆಯನ್ನು ಲೋಪಮಾಡುವುದಕ್ಕೆ ಉಂಟಾದ ಕೆಲಸವಾಗಿದೆ.

೫೨. ಹೀಗೆಂಬುದಾಗಿ ಮನಸ್ಸಿನಲ್ಲಿಯೇ ಯೋಚಿಸಿ ದೂತರನ್ನು ಕರೆದು ಎಲೈ ದೂತರಿರಾ ! ನನ್ನ ಆಜ್ಞೆಯನ್ನು ಭಂಗಮಾಡುವ ಆ ಅರಳಿಯ ಮರವನ್ನು ಕಡಿದುಹಾಕಿರಿ ಎಂದು ಆಜ್ಞಾಪಿಸಿದನು.

೫೩. ರಾಮನ ಅಪ್ಪಣೆಯಾದೊಡನೆಯೇ ಸಾವಿರಾರು ಜನ ಆಳುಗಳು ಕೈಯ್ಯಲ್ಲಿ ಕೊಡಲಿಯನ್ನು ತೆಗೆದುಕೊಂಡು ಅರಳಿಯ ಮರವನ್ನು ಕಡಿಯಲು ಅದರ ಬಳಿಗೆ ಹೋದರು.

ಹಾಸ್ಯಮಾನಂ ನಗಂ ದೃಷ್ಟ್ವಾ ತೇ ಸರ್ವೇತೀವ ವಿಸ್ಮಿತಾಃ ।
ಕುಠಾರೈಸ್ತಂ ತದಾಛೇತ್ತುಮುದ್ಯತಾ ರಾಘವಾಜ್ಞಯಾ ॥ ೫೪ ॥

ತಾಂಶ್ಚೇತ್ತುಕಾಮಾನ್ ಸಕಲಾನ್ ಪ್ರಾಪ್ತಾನ್ ಸ್ವನಿಕಟಂ ವಿಧಿಃ ।
ದೂತಾನ್ ಸಂತಾಡಯಾಮಾಸೋಪಲೈರಶ್ವತ್ಥನಿರ್ಗತೈಃ ॥ ೫೫ ॥

ಉಪಲೈಶ್ಛಿನ್ನಭಿನ್ನಾಂಗಾಸ್ತೇ ದೂತಾ ಲೋಹಿತಾಂಕಿತಾಃ ।
ಕೋಲಾಹಲಂ ಪ್ರಕುರ್ವಂತೋ ರಾಮಂ ವೃತ್ತಂ ನ್ಯವೇದಯನ್ ॥ ೫೬ ॥

ತತೋತಿವಿಸ್ಮಿತೋ ರಾಮಃ ಪುನರ್ದೂತಾನ್ ಸಹಸ್ರಶಃ ।
ಪ್ರೇಷಯಾಮಾಸ ತಂ ಛೇತ್ತುಂ ಧನುರ್ಬಾಣಾಸಿಧಾರಿಣಃ ॥ ೫೭ ॥

ತೇಪಿ ಗತ್ವಾ ನಗಂ ತೇನ ತಾಡಿತಾ ಉಪಲೈರ್ದೃಢಂ ।
ಭಿನ್ನಾಂಗಾ ರಾಘವಂ ವೇಗಾತ್ ಸರ್ವಂ ವೃತ್ತಂ ನ್ಯವೇದಯನ್ ॥ ೫೮ ॥

---

೫೪. ಇವರೆಲ್ಲರೂ ಆ ಮರದ ಬಳಿಗೆ ಕಡಿಯುವುದಕ್ಕೆ ಹೋಗಲು ಅದು ನಗುತ್ತಿರುವುದನ್ನು ನೋಡಿ ಇವರೆಲ್ಲರೂ ಆಶ್ಚರ್ಯಗೊಂಡು ಕೊಡಲಿಯಿಂದ ಆ ಮರವನ್ನು ಕಡಿಯಲು ಸಿದ್ಧರಾದರು.

೫೫. ಆ ಮರವನ್ನು ಕಡಿಯಲು ಬಂದ ದೂತರನ್ನು ಅದರೊಳಗಿರುವ ಬ್ರಹ್ಮನು ಆ ಅರಳಿಯ ಮರದೊಳಗಿನಿಂದಲೇ ಕಲ್ಲುಗಳನ್ನು ಹೊಡೆಯುತ್ತಾ ಓಡಿಸಿಬಿಟ್ಟನು.

೫೬. ಈ ಕಲ್ಲುಗಳ ಏಟುಬೀಳಲು ದೂತರ ದೇಹದಲ್ಲಿ ಗಾಯವಾಗಿ ರಕ್ತವು ಬಂದಿತು. ಆಗ ಅವರೆಲ್ಲರೂ ಮತ್ತೆ ರಾಮನ ಬಳಿಗೆ ಓಡಿಹೋಗಿ ಇಲ್ಲಿ ನಡೆದ ವಿಷಯವನ್ನು ಅವನಿಗೆ ತಿಳಿಸಿದರು.

೫೭. ರಾಮನಿಗೆ ಇದನ್ನು ಕೇಳಿ ಇನ್ನೂ ಆಶ್ಚರ್ಯವಾಯಿತು. ಇದರಿಂದ ಧನುರ್ಭಾಣಗಳನ್ನು ಧರಿಸಿರುವ ದೂತರನ್ನು ಅನೇಕರನ್ನ ಕರೆಸಿ ಆ ಮರವನ್ನು ಕಡಿಯಲು ಅವರನ್ನು ಕಳುಹಿದನು.

೫೮. ಆ ಧನುರ್ಭಾಣಗಳನ್ನು ಧರಿಸಿರುವ ದೂತರೂ ಕೂಡ ಆ ಅರಳಿಯ ಮರದ ಬಳಿಗೆ ಹೋಗಿ ಕಲ್ಲುಗಳಿಂದ ಪೆಟ್ಟನ್ನು ತಿಂದು ರಾಮನ ಬಳಿಗೆ ಬಂದು ಆದರ ವಿಷಯವನ್ನು ಹೇಳಿದರು.

ತತೋ ರಾಮೋತಿಸಂಕ್ರುದ್ಧಃ ಸುಮಂತ್ರಂ ಸೇನಯಾ ಯುತಂ ।
ಪ್ರೇಷಯಾಮಾಸ ತಂ ವೃಕ್ಷಂ ಛೇತ್ತುಂ ಬುದ್ಧಿಪುರಸ್ಸರಂ ॥ ೫೯ ॥

ಸುಮಂತ್ರೋ ರಾಘವಂ ನತ್ವಾ ಸೇನಯಾ ತಂ ನಗಂ ಯಯೌ ।
ತಾಡಿತೋಶ್ವತ್ಥಪಾಷಾಣೈರಗ್ರೇ ಗಂತುಂ ನ ಸ ಕ್ಷಮಃ ॥ ೬೦ ॥

ತತೋ ರಾಘವಭೀತ್ಯಾ ಸ ಶನೈಸ್ಸೈನ್ಯೇನ ತತ್ಪರಃ ।
ಯಯೌ ತಾವನ್ನಗೋದ್ಭೂತೈಃ ಪಾಷಾಣೈಸ್ತಾಡಿತೋಪತತ್ ॥ ೬೧ ॥

ಸುಮಂತ್ರಂ ಪತಿತಂ ದೃಷ್ಟ್ವಾ ಹಾಹಾಕಾರೋ ಮಹಾನಭೂತ್ ।
ಅಯೋಧ್ಯಾಯಾಂ ಚ ಸರ್ವತ್ರ ತದದ್ಭುತಮಿವಾಭವತ್ ॥ ೬೨ ॥

ಸುಮಂತ್ರ ಪತಿತಂ ಶ್ರುತ್ವಾ ಪುತ್ರಾಭ್ಯಾಂ ರಘುನಂದನಃ ।
ಸೈನ್ಯೇನ ಪ್ರೇಷಯಾಮಾಸ ಶತ್ರುಘ್ನಂ ತಂ ನಗಂ ಪುನಃ ॥ ೬೩ ॥

---

೫೯. ಆಗ ರಾಮನಿಗೆ ಬಹುವಾಗಿ ಕೋಪಬಂದಿತು. ಸುಮಂತ್ರನಿಗೆ ಅನೇಕವಾಗಿ ಸೇನೆಯನ್ನು ಕೊಟ್ಟು ಆ ಮರವನ್ನು ಕಡಿಯಲು ಕಳುಹಿಸಿದನು.

೬೦. ಸುಮಂತ್ರನು ಸೇನೆಯೊಡನೆ ಆ ಮರದ ಬಳಿಗೆ ಹೋದನು. ಆ ಸುಮಂತ್ರನೂ ಅವನ ಸೇನೆಯೂ, ತನ್ನ ಹತ್ತಿರಕ್ಕೆ ಬರದಂತೆಯೇ ಆ ಅರಳಿ ಮರವು ಕಲ್ಲುಗಳನ್ನು ಹೊಡೆಯಲು ಮೊದಲು ಮಾಡಿತು. ಇದರಿಂದ ಆ ಸುಮಂತ್ರನು ಹತ್ತಿರಕ್ಕೆ ಹೊಗಲಾರದೆ ಹೋದನು.

೬೧. ಆದರೂ ಸುಮಂತ್ರನು ರಾಮನ ಹೆದರಿಕೆಯಿಂದ ಆ ಏಟನ್ನು ಸಹಿಸಿಕೊಂಡು ಆ ಮರದ ಹತ್ತಿರಕ್ಕೆ ಹೋದನು. ಆ ಮರದಿಂದ ಹೊರಟ ಕಲ್ಲುಗಳಿಂದ ಪೆಟ್ಟನ್ನು ತಿಂದು ಕೆಳಗೆ ಬಿದ್ದುಬಿಟ್ಟನು.

೬೨. ಸುಮಂತ್ರನು ಹೀಗೆ ಕೆಳಗೆ ಬಿದ್ದುದನ್ನು ನೋಡಿ ಸೈನ್ಯದಲ್ಲಿ ಹಾಹಾಕಾರವುಂಟಾಯಿತು. ಅಯೋಧ್ಯೆಯಲ್ಲೆಲ್ಲಾ ಇದು ಬಹು ಆಶ್ಚರ್ಯವಾಗಿ ಹರಡಿತು.

೬೩. ಸುಮಂತ್ರನು ಕೆಳಗೆ ಬಿದ್ದುದನ್ನು ಕೇಳಿ ಶ್ರೀ ರಾಮನು ಕುಶಲವರನ್ನೂ ಸೈನ್ಯವನ್ನೂ ಜೊತೆಗೆ ಕೊಟ್ಟು ಶತ್ರುಘ್ನನನ್ನು ಕಳುಹಿಸಿದನು.

ತತಸ್ತತ್ಕೌತುಕಂ ಸ್ಮೃತ್ವಾ ಪೌರನಾರ್ಯಃ ಸಹಸ್ರಶಃ ।
ಪ್ರಾಸಾದಶಿಖರಾರೂಢಾ ಊರ್ಧ್ವಾಸ್ಯಾಸ್ತಂವ್ಯಲೋಕಯನ್ ॥ ೬೪ ॥

ತರ್ಜಿನ್ಯಾ ದರ್ಶಯಾಮಾಸುಸ್ಸೋಽಶ್ವತ್ಥಶ್ಚೇತಿ ತಾ ಮಿಥಃ ।
ವಾಮಹಸ್ತಂ ಭ್ರುವೋಃ ಸ್ಥಾಪ್ಯ ರವಿದೀಪ್ತೀರ್ನ್ಯವಾರಯನ್ ॥ ೬೫ ॥

ಕುಂಚಿತಾನಲಕಾನ್ನೇತ್ರಪತಿತಾನ್ಕರಪಲ್ಲವೈಃ ।
ಸ್ತ್ರಿಯೋ ನಿವಾರ್ಯ ಪ್ರಾಸಾದಗೋಪುರಾಟ್ಟಾಲಸಂಸ್ಥಿತಾಃ ॥ ೬೬ ॥

ನಿದ್ರಾಸಂಭ್ರಾಂತನಯನಾಶ್ಚಾನ್ಯೋಽನ್ಯಂ ದರ್ಶಯನ್ನಗಂ ।
ಏವಂ ತನ್ನಗರಂ ಸರ್ವಂ ಚಕಿತಂ ಚಾಭವತ್ತದಾ ॥ ೬೭ ॥

ಶತ್ರುಘ್ನೋಽಥ ಪುರಾದ್ಯಾವತ್ಸೈನ್ಯೇನ ನಿರ್ಗತೋ ಬಹಿಃ ।
ತಾವತ್ತದ್ರಥವಾಹಾಶ್ಚ ಸಂಸ್ಥಿತಾ ಏವ ತೇ ಪಥಿ ॥ ೬೮ ॥

---

೬೪. ಈ ಆಶ್ಚರ್ಯವನ್ನು ಕೇಳಿ ಪಟ್ಟಣದ ಹೆಂಗಸರೆಲ್ಲರೂ, ಮನೆಯ ಮಹಡಿಯ ಮೇಲೆ ನಿಂತು ತಲೆಯೆತ್ತಿಕೊಂಡು ಆ ಮರವನ್ನೇ ನೋಡುತ್ತಿದ್ದರು.

೬೫. ಇದೇ ಆ ಅರಳಿಯ ಮರವೆಂದು ಅವರು ಬೆಟ್ಟನ್ನು ನೀಡಿ ಒಬ್ಬರಿಗೊಬ್ಬರು ತೋರಿಸುತ್ತಿದ್ದರು. ಅವರು ಎಡಗೈಯನ್ನು ಹುಬ್ಬಿನ ಮೇಲಿಟ್ಟುಕೊಂಡು ಸೂರ್ಯನಕಿರಣಗಳ ಬಾಧೆಯು ಬೆರಳುಗಳಿಂದ ಕಣ್ಣಿಗೆ ತಪ್ಪಿಸಿಕೊಂಡು ನೋಡುತ್ತಾ ಇದ್ದರು.

೬೬. ಆ ಮಹಡಿಯ ಮೇಲೆ ಹತ್ತಿ ಆ ಮರವನ್ನು ನೋಡುತ್ತಿರುವ ಹೆಂಗಸರು ತಮ್ಮ ಕಣ್ಣಿನಮೇಲೆ ಬೀಳುತ್ತಿರುವ ಗುಂಗುರು ಕೂದಲುಗಳನ್ನು ಕೈಯಿಂದಲೇ ತಳ್ಳುತ್ತ ಸರಿಮಾಡಿಕೊಳ್ಳುತ್ತಿದ್ದರು.

೬೭. ಹಾಗೆ ಮಾಡಿಕೊಳ್ಳುತ್ತ ತೂಕಡಿಸುತ್ತ ನಿದ್ರೆಯಿಂದ ಕಣ್ಣು ಸರಿಯಾಗಿ ಕಾಣಿಸದಿದ್ದರೂ ಅವರು ಒಬ್ಬರಿಗೆ ಒಬ್ಬರು ಆ ಮರವನ್ನು ತೋರಿಸುತ್ತಿದ್ದರು ಈ ರೀತಿಯಾಗಿ ಅಯೋಧ್ಯೆಯೆಲ್ಲವೂ ಆಶ್ಚರ್ಯದಿಂದ ಕೂಡಿದ್ದಿತು.

೬೮-೬೯. ಶತ್ರುಘ್ನನು ಸೈನ್ಯದೊಡನೆ ಪಟ್ಟಣದಿಂದ ಹೊರಗೆ ಹೊರಟನು. ಆದರೆ ಅವನ ರಥದ ಕುದುರೆಗಳು ದಾರಿಯಲ್ಲಿಯೇ ನಿಂತುಬಿಟ್ಟವು. ಸಾರಥಿಯು

ತಾಡಿತಾ ಅಪಿ ಸೂತೇನ ನೋತ್ತಸ್ಥುಸ್ತುರಗೋತ್ತಮಾಃ ।
ಕುಶಸ್ಯಾಥ ಲವಸ್ಯಾಪಿ ರಥವಾಹಾಸ್ತಥೈವ ಚ ॥ ೬೯ ॥

ತಾಡಿತಾ ರುಕ್ಮದಂಡೈಶ್ಚ ನೋತ್ತಸ್ಥುಃ ಪಥಿ ಸಂಸ್ಥಿತಾಃ
ಆಶ್ಚರ್ಯೇಣಾಥ ತದ್ವೃತ್ತಂ ರಾಘವಾಯ ನ್ಯವೇದಯನ್ ॥ ೭೦ ॥

ರಾಮೋಽಪಿ ಶ್ರುತ್ವಾ ಚಕಿತಸ್ತದಾ ಚಿತ್ತೇ ವಿಚಾರಯತ್ ।
ವಿಚಾರಃ ಕರಣೀಯೋಽತ್ರ ಹ್ಯವಿಚಾರೋಽದ್ಯ ನೋಚಿತಃ ॥ ೭೧ ॥

ಅಸ್ತ್ಯತ್ರ ಕಾರಣಂ ಕಿಂಚಿತ್ಪ್ರಷ್ಟವ್ಯೋಽದ್ಯ ಪುರೋಹಿತಃ ।
ಜಾನನ್ನಪಿ ರಮಾನಾಥಃ ಸ್ವಯಂ ಸರ್ವಂ ತಥಾಪಿ ಸಃ ॥ ೭೨ ॥

ಮಾನುಷಂ ಭಾವಮಾಶ್ರಿತ್ಯ ಪುರೋಹಿತಮಥಾಹ್ವಯತ್ ।
ಸೋಽಪಿ ರಾಮಾಜ್ಞಯಾ ಶೀಘ್ರಂ ತಾಂ ಸಭಾಂ ಪ್ರಯಯೌ ಗುರುಃ ॥

ಹೊಡೆದರೂ ಕೂಡ ಅವು ಮುಂದಕ್ಕೆ ಹೊರಡಲೇ ಇಲ್ಲ. ಕುಶಲವರ ರಥದ ಕುದುರೆಗಳೂ ಹೀಗೆಯೇ ನಿಂತುಬಿಟ್ಟು ಎಷ್ಟು ಹೊಡೆದರೂ ಮುಂದೆ ಹೊರಡದೆ ಹೋದವು.

೭೦. ಆ ಸೂತರು ತಾವು ಹಿಡಿದಿದ್ದ ಚಿನ್ನದ ಚಾವಟಿಗಳಿಂದ ಎಷ್ಟು ಹೊಡೆದರೂ ಕೂಡ ನಿಂತಿದ್ದುವೇ ಹೊರತು ಒಂದು ಹೆಜ್ಜೆಯನ್ನೂ ಮುಂದಿಡಲೇ ಇಲ್ಲ. ಆಗ ಎಲ್ಲರೂ ಹೋಗಿ ಆಶ್ಚರ್ಯದಿಂದ ಈ ವಿಷಯವನ್ನು ರಾಮನಿಗೆ ಹೇಳಿದರು.

೭೧. ಇದನ್ನು ಕೇಳಿದ ರಾಮನು ಆಶ್ಚರ್ಯಗೊಳ್ಳುತ್ತ ತನ್ನ ಮನಸ್ಸಿನಲ್ಲಿಯೇ ಯೋಚಿಸಿದನು. ಈ ವಿಷಯವನ್ನು ವಿಚಾರಮಾಡಬೇಕು. ವಿಚಾರ ಮಾಡದೆ ಕೆಲಸ ಮಾಡುವುದು ಯುಕ್ತವಲ್ಲ.

೭೨-೭೩. ಇದಕ್ಕೆ ಕಾರಣವು ಯಾವುದಾದರೂ ಒಂದು ಇದ್ದೇ ಇರಬೇಕು. ಅದು ಏನಿರಬಹುದೆಂದು ಪುರೋಹಿತರನ್ನು ಕೇಳಬೇಕು ಎಂದುಕೊಂಡನು. ಇದು ರಮಾಪತಿಯಾದ ರಾಮನಿಗೆ ತಿಳಿದಿದ್ದರೂ ಮನುಷ್ಯನಾಗಿ ಅವತರಿಸಿದ್ದುದರಿಂದ ಅದಕ್ಕೆ ತಕ್ಕಂತೆ ಇರಬೇಕಾದುದರಿಂದ ಪುರೋಹಿತನನ್ನು ಕರೆಸಿದನು. ಪುರೋಹಿತನು ರಾಮಾಜ್ಞೆಯನ್ನು ಕೇಳಿದೊಡನೆಯೇ ಆ ಸಭೆಗೆ ಬಂದನು.

ಪ್ರತ್ಯುದ್ಗಮ್ಯ ಗುರುಂ ರಾಮೋ ದದಾವಾಸಸಮುತ್ತಮಂ ।
ತತಸ್ಸಂಪೂಜ್ಯ ವಿಧಿವತ್ಸರ್ವಂ ವೃತ್ತಂ ನ್ಯವೇದಯತ್ ॥ ೭೪ ॥

ತಚ್ಛ್ರುತ್ವಾ ರಾಘವಂ ಪ್ರಾಹ ವಸಿಷ್ಠೋ ಮುನಿಸತ್ತಮಃ ।
ವಾಲ್ಮೀಕಿಸ್ತ್ವದ್ಯ ಪ್ರಷ್ಟವ್ಯೋ ಯೇನ ತೇ ಚರಿತಂ ಕೃತಂ ॥ ೭೫ ॥

ತದ್ಗುರೋರ್ವಚನಂ ಶ್ರುತ್ವಾ ವಾಲ್ಮೀಕಿಂ ಸ ಸಮಾಹ್ವಯತ್ ।
ಸೋಽಪಿ ರಾಮಾಜ್ಞಯಾ ಶೀಘ್ರಂ ಯಯೌ ಶ್ರೀ ರಾಘವಂ ಪ್ರತಿ ॥ ೭೬ ॥

ಪ್ರತ್ಯುದ್ಗಮ್ಯ ಮುನಿಂ ರಾಮೋ ದದಾವಾಸನಮುತ್ತಮಂ ।
ನತ್ವಾ ಸಂಪೂಜ್ಯ ವಿಧಿವತ್ಸರ್ವಂ ವೃತ್ತಂ ನ್ಯವೇದಯತ್ ॥ ೭೭ ॥

ತತೋ ವಿಹಸ್ಯ ವಾಲ್ಮೀಕಿಃ ಪ್ರೋವಾಚ ರಘುನಂದನಂ ।
ಸರ್ವಂ ವೇತ್ಸಿ ಭವಾನ್ ರಾಮ ಕಿಮರ್ಥಂ ಮಾಂ ತು ಪೃಚ್ಛಸಿ ॥ ೭೮ ॥

---

೭೪. ಪುರೋಹಿತನೂ ಗುರುವೂ ಆದ ವಸಿಷ್ಠನು ಬರಲು ರಾಮನು ಅವನನ್ನು ಎದುರುಗೊಂಡು ಅವನಿಗೆ ಆಸನವನ್ನು ಕೊಟ್ಟನು. ವಿಧಿಯ ಪ್ರಕಾರವಾಗಿ ಅವನನ್ನು ಪೂಜಿಸಿ ನಡೆದ ವಿಷಯವೆಲ್ಲವನ್ನೂ ತಿಳಿಸಿದನು.

೭೫. ಅದೆಲ್ಲವನ್ನೂ ಕೇಳಿ ಮುನಿಶ್ರೇಷ್ಠನಾದ ವಸಿಷ್ಠನು ರಾಮನನ್ನು ಕುರಿತು ಎಲೈ ರಾಮನೇ ! ನಿನ್ನ ಚರಿತ್ರೆಯನ್ನು ಬರೆದ ಆ ವಾಲ್ಮೀಕಿಯನ್ನು ಕರೆದು ಈ ವಿಷಯವನ್ನು ಕೇಳಬೇಕು. ಎಂದನು.

೭೬. ಗುರುವು ಹೀಗೆನ್ನುತ್ತಲೂ ರಾಮನು ದೂತರನ್ನು ಕಳುಹಿಸಿ ವಾಲ್ಮೀಕಿಯನ್ನು ಕರೆಸಿದನು. ರಾಮನ ಅಪ್ಪಣೆಯನ್ನು ಕೇಳಿ ವಾಲ್ಮೀಕಿಯು ಬೇಗನೆ ಅಲ್ಲಿಗೆ ಬಂದನು.

೭೭. ರಾಮನು ವಾಲ್ಮೀಕಿಗೆ ಪ್ರತ್ಯುತ್ಥಾನವನ್ನು ಮಾಡಿ ಉತ್ತಮವಾದ ಆಸನವನ್ನು ಕೊಟ್ಟು ನಮಸ್ಕರಿಸಿ ವಿಧಿಯಂತೆ ಪೂಜಿಸಿ ಎಲ್ಲ ವಿಷಯಗಳನ್ನೂ ಅವನಿಗೆ ಹೇಳಿದನು.

೭೮-೭೯. ಆಗ ವಾಲ್ಮೀಕಿಯು ನಗುತ್ತ ರಾಮನನ್ನು ಕುರಿತು ಎಲೈ ರಾಮನೇ ! ಎಲ್ಲವೂ ನಿನಗೆ ತಿಳಿದಿರುವುದೇ ಆಗಿದೆ. ನನ್ನನ್ನೇಕೆ ಕೇಳುತ್ತೀಯೆ ?

ತ್ವಂ ಚೇ ಚ್ಛ್ವೃಚ್ಛಸಿ ರಾಮಾತ್ರ ಮಾನುಷಂ ಭಾವಮಾಶ್ರಿತಃ ।
ತರ್ಹಿ ತೇ ಕಥಯಾಮ್ಯದ್ಯ ಶ್ರೃಣುಷ್ವ ರಘುನಂದನ ॥ ೭೯ ॥

ತ್ವಯಾತ್ರ ವರ್ಜಿತಂ ಹಾಸ್ಯಂ ತ್ವದ್ಭೀತ್ಯಾ ಸಕಲೈರ್ಜನೈಃ
ಹಾಸ್ಯಕಾರೀಣಿ ಕರ್ಮಾಣಿ ಸಂತ್ಯಕ್ತಾನ್ಯವನೀತಲೇ ॥ ೮೦ ॥

ವಿವಾಹಾದಿಸಮುತ್ಸಾಹಾಃ ಕಥಾವಾರ್ತಾದಿಕೌತುಕಂ ।
ಮಂಗಳೋತ್ಸಾಹಗೀತಾನಿ ನೃತ್ತಂ ಯಜ್ಞಾದಿಸತ್ಕ್ರಿಯಾಃ ॥ ೮೧ ॥

ಯಾತ್ರಾಸ್ಸಂವತ್ಸರೋತ್ಸಾಹಾಸ್ತ್ಯಕ್ತಾ ವಿವಾವನೀತಲೇ ।
ಯದ್ಯತ್ಕರ್ಮ ತೋಷಕಾರಿ ಹಾಸ್ಯಕಾರಿ ಚ ತನ್ನರೈಃ ॥ ೮೨ ॥

ಏವಂ ಸಂವತ್ಸರೋ ನಾತ್ರ ಕ್ರಿಯತೇ ರಘುನಂದನ
ಉತ್ಸಾಹದೇವತಾಸ್ಸರ್ವಾ ಸ್ತಥಾ ಕರ್ಮಾಂಗದೇವತಾಃ ॥ ೮೩ ॥

ಆದರೆ ನೀನು ಮನುಷ್ಯಾವತಾರಕ್ಕೆ ಅನುಗುಣವಾಗಿ ಕೇಳಬೇಕೆಂದು ಹೇಳಿದರೆ ಆಗ ಅದನ್ನೇ ನಾನು ನಿನಗೆ ಹೇಳುತ್ತೇನೆ ಕೇಳು ಎಂದನು.

೮೦--೮೨. ನೀನು ನಗಲೇ ಕೂಡದೆಂದು ಅದನ್ನು ನಿಷೇಧಿಸಿಬಿಟ್ಟೆ. ನಿನ್ನ ಹೆದರಿಕೆಯಿಂದ ಜನರೆಲ್ಲರೂ ಹಾಸ್ಯ ಮಾಡಿ ನಗುವ ಕೆಲಸಗಳೆಲ್ಲವನ್ನೂ ಬಿಟ್ಟು ಬಿಟ್ಟರು ಮದುವೆ ಮುಂತಾದುವುಗಳಲ್ಲಿ ಉತ್ಸಾಹದ ಮತ್ತು ನಗುವ ಮಾತು ಕಥೆಗಳು ಮಂಗಳ ಕೆಲಸಗಳು, ಗೀತ, ನೃತ್ಯ, ವಾದ್ಯ ಯಜ್ಞಗಳು, ಯಾತ್ರೆ, ಹುಟ್ಟಿದಹಬ್ಬ ಇವೆಲ್ಲವನ್ನೂ ಲೋಕದಲ್ಲಿಯೇ ಬಿಟ್ಟುಬಿಟ್ಟರು. ಸಂತೋಷ ವನ್ನುಂಟುಮಾಡುವ ಕೆಲಸಗಳಲ್ಲಿ ನಗುವಿಕೆ ಬರುವುದಾದರೆ ಅವೊಂದನ್ನೂ ಮಾಡದೆ ಬಿಟ್ಟುಬಿಟ್ಟರು.

೮೩-೮೪. ಈಗ ಬಂದು ವರ್ಷದಿಂದಲೂ ಇವೊಂದನ್ನೂ ಮಾಡುತ್ತಿಲ್ಲ ಉತ್ಸಾಹ ದೇವತೆಗಳು, ಇಂದ್ರಾದಿಲೋಕಪಾಲಕರು, ಇವರೆಲ್ಲರೂ ತಮ್ಮ ತಮ್ಮ

ಇಂದ್ರಾದಿಲೋಕಪಾಲಾಶ್ಚ ದೃಷ್ಟ್ವಾ ಸ್ವೀಯಂ ಪ್ರಪೂಜನಂ ।
ಲುಪ್ತಂ ಭೂಮ್ಯಾಂ ತತೋ ರಾಮ ತದ್ವೃತ್ತಂ ಕಥಯನ್ ವಿಧಿಂ ॥ ೮೪ ॥

ತತೋ ವಿಧಿಶ್ಚ ತಚ್ಛ್ರುತ್ವಾಽಸಮರ್ಥಸ್ತ್ವಾಂ ನಿವೇದಿತುಂ ।
ತ್ವಯಿ ಕುಂಠಿತಸಾಮರ್ಥ್ಯಃ ಸೋಽಶ್ವತ್ಥೇ ಸಂಪ್ರವೇಶಿತಃ ॥ ೮೫ ॥

ಹಿತಾರ್ಥಂ ನಿರ್ಜರಾಣಾಂ ಚ ಸೋಽದ್ಯ ತಿಷ್ಠತಿ ಪಿಪ್ಪಲೇ ।
ಪ್ರಕ್ಷಿಪತ್ಯುಪಲಾನ್ಸ್ರಾನು ಛೇತ್ತು ಕಾರ್ಯಾನ್ ಸಮಾಗತಾನ್ ॥ ೮೬ ॥

ತನ್ಮುನೇರ್ವಚನಂ ಶ್ರುತ್ವಾ ರಾಘವಃ ಕ್ರೋಧಮಾಯಯೌ ।
ಅಹಮೇವಾದ್ಯ ಗಚ್ಛಾಮಿ ಸಾರಂ ಪಶ್ಯಾಮಿ ಬ್ರಹ್ಮಣಃ ॥ ೮೭ ॥

ಕಥಂ ನಾಮ ರಘುಶ್ರೇಷ್ಠಃ ಸ್ವಶಿಕ್ಷಾಂ ಪರಿವರ್ತಯೇತ್ ।
ಇತ್ಯುಕ್ತ್ವಾಜ್ಞಾಪಯಾಮಾಸ ರಥೋ ಮೇ ನೀಯತಾಮಿತಿ ॥ ೮೮ ॥

ಪೂಜೆಯು ಲೋಪ ಹೊಂದಿರುವುದನ್ನು ನೋಡಿ ಈ ವಿಷಯವನ್ನು ಬ್ರಹ್ಮನಿಗೆ ಹೋಗಿ ಹೇಳಿಕೊಂಡರು.

೮೫. ಬ್ರಹ್ಮನು ಅದನ್ನು ಕೇಳಿ ನಿನ್ನಲ್ಲಿ ಅದನ್ನು ಹೇಳಲು ಶಕ್ತಿ ಸಾಲದೆ ನಿನ್ನ ವಿಷಯದಲ್ಲಿ ತನ್ನದೇನೂ ನಡೆಯುವುದಿಲ್ಲವೆಂದು ತಿಳಿದು ಆವನು ಈ ಅರಳಿಯ ಮರದಲ್ಲಿ ಸೇರಿಕೊಂಡಿರುವನು.

೮೬. ದೇವತೆಗಳಿಗೆ ಅನುಕೂಲವನ್ನು ಮಾಡಬೇಕೆಂದು ಆವನು ಈಗ ಈ ಅರಳಿಯ ಮರದಲ್ಲಿರುವನು. ಅವನು ಈ ಅರಳಿಯ ಮರವನ್ನು ಕಡಿಯಲು ಬಂದವರ ಮೇಲೆ ಕಲ್ಲುಗಳನ್ನು ಎಸೆಯುತ್ತಿರುವನು ಎಂದು ಹೇಳಿದನು.

೮೭. ವಾಲ್ಮೀಕಿಯು ಹೀಗೆ ಹೇಳಿದುದನ್ನು ಕೇಳಿ ರಾಮನಿಗೆ ಕೋಪವು ಬಂದಿತು. ಅದರಿಂದ ನಾನೇ ಆ ಮರದ ಹತ್ತಿರಕ್ಕೆ ಹೋಗುತ್ತೇನೆ. ಆ ಬ್ರಹ್ಮನ ಸಾರವೇನಿರಬಹುದೆಂದು ನೋಡುತ್ತೇನೆ.

೮೮. ರಾಮನು ಒಂದು ಶಿಕ್ಷೆಯನ್ನು ವಿಧಿಸಿದ ಮೇಲೆ ಅದನ್ನು ಹೇಗೆ ತಾನೇ ಬದಲಾಯಿಸಿಯಾನು! ಎಂದು ಹೇಳಿ ತನ್ನ ರಥವನ್ನು ತರುವಂತೆ ಅಪ್ಪಣೆ ಮಾಡಿದನು.

ತತಸ್ತಂ ಪ್ರಾರ್ಥಯಾಮಾಸ ವಾಲ್ಮೀಕಿರ್ಮುನಿಸತ್ತಮಃ |
ಕ್ರೋಧಂ ತ್ಯಜ ರಘುಶ್ರೇಷ್ಠ ಶೃಣುಷ್ವ ವಚನಂ ಮಮ ॥ ೮೯ ॥

ಸಚ್ಚಿದಾನಂದರೂಪಸ್ತ್ವಮಾನಂದಚರಿತಂ ತವ |
ಮಯಾಸ್ತಿ ವರ್ಣಿತಂ ರಾಮ ತತ್ಕಿಂಚಿತ್ಪುತ್ರಯೋರ್ಮುಖಾತ್ ॥ ೯೦ ॥

ತ್ವಯಾಪಿ ಯಜ್ಞಮಯೇ ಶ್ರುತಂ ಗಂಗಾ ತಟೇ ಪುರಾ |
ಯಸ್ಯ ಸಂಶ್ರವಣಾದೇವಾನಂದರೂಪೋ ಭವೇನ್ನರಃ |
ಹಾಸ್ಯಂ ವರ್ಜಯಸಿ ತ್ವಂ ಚೇತ್ತರ್ಹಿ ತೇ ಚರಿತಂ ತ್ವಿದಂ ॥ ೯೧ ॥

ನ ಜನಾಃ ಕೀರ್ತಯಿಷ್ಯಂತಿ ಸುಖರೂಪಂ ಸ್ಮಿತಂ ವಿನಾ |
ಅನ್ಯತ್ಕಿಂಚಿತ್ಪ್ರವಕ್ಷ್ಯಾಮಿ ಪ್ರಭೋ ವೃತ್ತಂ ತವಾಗ್ರತಃ ॥ ೯೨ ॥

ಶತಕೋಟಿಯುತಂ ತೇತ್ರ ಚರಿತಂ ಯನ್ಮಯಾ ಕೃತಂ |
ಪುರಾ ತ್ವಯಾ ವಿಭಕ್ತಂ ಯತ್ಸರ್ಪತ್ರ ರಘುನಂದನ ॥ ೯೩ ॥

೮೯-೯೦. ಆಗ ಋಷಿಯಾದ ವಾಲ್ಮೀಕಿಯು ಆ ರಾಮನನ್ನು ಕುರಿತು ಇಂತೆಂದನು. ಎಲೈ ರಾಮನೇ! ಕೋಪವನ್ನು ಬಿಡು ನನ್ನ ಮಾತನ್ನು ಕೇಳು. ನೀನು ಸಚ್ಚಿದಾನಂದರೂಪನು. ನಿನ್ನ ಚರಿತ್ರೆಯೇ ಆನಂದರೂಪವಾದುದು. ಅಂತಹ ಚರಿತ್ರೆಯನ್ನು ನಾನು ನಿನ್ನ ಮಕ್ಕಳ ಬಾಯಿಂದಲೇ ವರ್ಣಿಸಿದ್ದೇನೆ. ಅದೂ ಸ್ವಲ್ಪವಾಗಿದೆಯೇ ಹೊರತು ಹೆಚ್ಚಾಗಿಲ್ಲ.

೯೧. ನೀನೂ ಕೂಡ ಹಿಂದೆ ಯಜ್ಞಮಾಡುವ ಸಮಯದಲ್ಲಿ ಗಂಗಾನದಿಯ ದಡದಲ್ಲಿ ಕೇಳಿದ್ದೀಯೆ. ಅದನ್ನು ಕೇಳಿದರೇನೇ ಮನುಷ್ಯನಿಗೆ ಆನಂದವು ಬಂದು ಮುಕ್ತಿಯನ್ನು ಹೊಂದುತ್ತಾನೆ.

೯೨. ನೀನು ನಗುವಿಕೆಯನ್ನು ನಿಷೇಧ ಮಾಡಿದರೆ ನಿನ್ನ ಚರಿತ್ರೆಯನ್ನು ಜನರು ಕೀರ್ತಿಸುವುದಿಲ್ಲ. ಏಕೆಂದರೆ ಸುಖರೂಪವಾದುದರಲ್ಲಿ ನಗುವು ಬರದೇ ಇರುವುದಿಲ್ಲ. ನಗುವಿಲ್ಲದಿದ್ದರೆ ಅದರಲ್ಲಿ ಸುಖವು ತಾನೇ ಏನಿರುವುದು? ಇದೂ ಅಲ್ಲದೆ ಎಲೈ ಪ್ರಭುವೇ! ನಿನ್ನಲ್ಲಿ ಮತ್ತೊಂದು ವಿಷಯವನ್ನು ವಿಜ್ಞಾಪಿಸಿಕೊಳ್ಳುತ್ತೇನೆ.

೯೩. ನಾನು ನಿನ್ನ ಚರಿತ್ರೆಯನ್ನು ನೂರುಕೋಟಿ ಗ್ರಂಥರೂಪವನ್ನಾಗಿ ಬರೆದಿದ್ದೇನೆ. ನೀನು ಅದನ್ನು ಎಲ್ಲಾ ಕಡೆಗೂ ವಿಭಾಗಮಾಡಿಕೊಟ್ಟಿದ್ದೀಯೆ.

ಭಾಗಾದ್ಭಾರತವರ್ಷಾಂತರ್ಗತಾದ್ರಾಯಾಣಾತ್ ಪ್ರಭೋ ।
ಸಾರಂ ಸಾರಂ ಪ್ರಗೃಹ್ಯಾಥ ಯದ್ಯದ್ಗಮ್ಯ ಯನೋರಮಂ ॥ ೯೪ ॥

ಕಥಾನಕಂ ತೇನ ತೇನ ವ್ಯಾಸೇನ ಮುನಿನಾತ್ರ ಹಿ ।
ಅಷ್ಟಾದಶಪುರಾಣಾನಿ ತಥೋಪಪುರಾಣಾನಿ ಚ ॥ ೯೫ ॥

ಕೃತಾನ್ಯನ್ಯೇಪಿ ಮುನಯಃಷ್ಟಟ್ಶಾಸ್ತ್ರಾದೀನ್ಯನೇಕಶಃ ।
ಅಗ್ರೇ ಸರ್ವೇ ಕರಿಷ್ಯಂತಿ ಸಾರಂ ರಮ್ಯಂ ವಿಗೃಹ್ಯ ಚ ॥ ೯೬ ॥

ತತೋಗ್ರೇ ಶೋಕರೂಪಂ ಚ ಯತ್ತ್ವಯಾ ದಂಡಕೇ ವನೇ ।
ಚತುರ್ದಶವತ್ಸರೈಶ್ಚ ಕೈಕೇಯೀ ದುಷ್ಟಭಾವತಃ ॥ ೯೭ ॥

ಕೃತಂ ಚರಿತ್ರಂ ಸೀತಾಯಾ ವಿರಹಾದಿ ಚ ರಾಘವ ।
ತತ್ಕಿಂಚಿಚ್ಛೇಷಭೂತಂ ಹಿ ಚತುರ್ವಿಂಶತ್ಸಹಸ್ರತಂ ॥ ೯೮ ॥

೯೪–೯೫. ಅದರಲ್ಲಿ ಈ ಭಾರತವರ್ಷದಲ್ಲಿ ಹರಡಿರುವ ಗ್ರಂಥದಲ್ಲಿ ಸಾರಸಾರವಾಗಿ ಯಾವ ಯಾವುದು ಯೋಗ್ಯವೋ ನಡೆಯುವಂತಿರಲು ಸಾಧ್ಯವೋ ಮನೋಹರವಾಗಿರುವುದೋ ಅಂತಹ ಕಥೆಗಳನ್ನು ಆಯಾಯ ಭಾಗಗಳಿಂದ ತೆಗೆದುಕೊಂಡು ವ್ಯಾಸಮುನಿಯು ಹದಿನೆಂಟು ಪುರಾಣಗಳನ್ನೂ ಉಪಪುರಾಣಗಳನ್ನೂ ಬರೆದಿರುವನು.

೯೬. ಇನ್ನೂ ಬೇರೆ ಬೇರೆ ಋಷಿಗಳು ಇದರಿಂದಲೇ ವಿಷಯಗಳನ್ನು ತೆಗೆದುಕೊಂಡು ಶಿಕ್ಷೆ ವ್ಯಾಕರಣ ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪಗಳೆಂಬ ಆರು ಶಾಸ್ತ್ರಗಳನ್ನೂ ಮಾಡಿರುವರು. ಮುಂದೆಯೂ ನಿನ್ನ ಚರಿತ್ರೆಯಲ್ಲಿರುವ ಸಾರಸಾರವಾದ ಭಾಗವನ್ನು ತೆಗೆದುಕೊಂಡು ಶಾಸ್ತ್ರಗಳನ್ನು ಬರೆಯುವರು.

೯೭–೯೯. ಎಲೈ ರಾಮನೇ! ನೀನು ಕೈಕೇಯಿಯ ದುಷ್ಟಪ್ರಭಾವದಿಂದ ಆರಣ್ಯಕ್ಕೆ ಹೋಗಿ ಅಲ್ಲಿ ಹದಿನಾಲ್ಕು ವರ್ಷಗಳವರೆಗಿದ್ದು ಅಲ್ಲಿ ಸೀತೆಯನ್ನು ಕಳೆದುಕೊಂಡು ಅವಳ ವಿರಹದಿಂದ ನೀನು ದುಃಖಿಸಿರುವ ಶೋಕರೂಪವಾದ ಇಪ್ಪತ್ತುನಾಲ್ಕುಸಾವಿರ ಗ್ರಂಥಗಳುಳ್ಳ ಚರಿತ್ರೆಯು ಮಾತ್ರ ಇಲ್ಲಿ ಉಳಿದಿದೆ.

ತಾವನ್ಮಾತ್ರಂ ವದಿಷ್ಯಂತಿ ಮದ್ವಾಲ್ಮೀಕೇಃ ಕೃತಂ ತ್ವಿತಿ |
ತತ್ಸರ್ವಂ ಸಕಲಂ ಜ್ಞಾತ್ವಾ ಭಾವಿ ವೃತ್ತಂ ರಘೂತ್ತಮ ॥ ೯೯ ॥

ಶೋಕಸ್ತದುಪಯೋಗಶ್ಚ ಪೂರ್ವಮೇವ ಮಯೇರಿತಃ |
ಯುದ್ಧಂ ಪ್ರಭಾತೇ ಶ್ರೋತವ್ಯಂ ಶೋಕಶ್ಚೈವಾಪರಾಹ್ಣಕೇ ॥ ೧೦೦ ॥

ರತಿರ್ನಿಶಾಯಾಂ ಶ್ರೋತವ್ಯಾಽನಂದರಾಮಾಯಣಂ ಸದಾ |
ಯುದ್ಧಂ ಜ್ಞೇಯಂ ಭಾರತಂ ಹಿ ರತಿರ್ಭಾಗವತಂ ಸ್ಮೃತಂ ॥ ೧೦೧ ॥

ಶೇಷಭೂತಂ ಚತುರ್ವಿಂಶತ್ಸಸ್ರಂ ಶೋಕೆ ಉಚ್ಯತೇ |
ಶತ ಭಾವಿವರೇಣ್ಯೈತದಾನಂದಚರಿತಂ ತವ ॥ ೧೦೨ ॥

ಶತಕೋಟಿಮಿತೇ ಪೂರ್ವಂ ಯನ್ಮಯೈವ ವಿನಿರ್ಮಿತಂ |
ನವಕಾಂಡಮಿತಂ ರಮ್ಯಂ ಯದ್ದ್ವಾದಶಸಹಸ್ರಕಂ ॥ ೧೦೩ ॥

ಅದನ್ನು ಮಾತ್ರ ಜನರು ನಮ್ಮ ವಾಲ್ಮೀಕಿಯು ಮಾಡಿದುದೆಂದು ಓದುತ್ತಾರೆ. ಮುಂದೆ ಆಗುವ ಅದೆಲ್ಲವನ್ನೂ ನಾನು ತಿಳಿದು ಶೋಕರೂಪವಾದ ಗ್ರಂಥವನ್ನೇ ಬರೆದಿದ್ದೇನೆ.

೧೦೦. ಶೋಕರಸವನ್ನೂ ಅದರ ಉಪಯೋಗವನ್ನೂ ನಾನು ಮೊದಲೇ ಹೇಳಿದ್ದೇನೆ. ಯುದ್ಧದ ವಿಷಯವನ್ನು ಬೆಳಗಿನ ಹೊತ್ತಿನಲ್ಲಿ ಕೇಳಬೇಕು. ಶೋಕರಸವನ್ನು ಅಪರಾಹ್ಣದಲ್ಲಿ ಕೇಳಬೇಕು.

೧೦೧-೧೦೩. ರತಿಯ ವಿಷಯವನ್ನು ರಾತ್ರಿಯಲ್ಲಿ ಕೇಳಬೇಕು. ಆನಂದ ರಾಮಾಯಣವನ್ನು ಯಾವಾಗಲೂ ಕೇಳಬಹುದು. ಯುದ್ಧದ ವಿಷಯವು ಭಾರತದಲ್ಲಿ ಹೇಳಲ್ಪಡುತ್ತದೆ. ಎಂದರೆ ವೀರರಸವು ಭಾರತದಲ್ಲಿ ಹೆಚ್ಚಾಗಿರುವುದು. ರತಿಯ ವಿಷಯವು ಭಾಗವತದಲ್ಲಿದೆ. ಎಂದರೆ ಶೃಂಗಾರವು ಭಾಗವತದಲ್ಲಿ ಹೆಚ್ಚು. ಉಳಿದ ಇಪ್ಪತ್ತುನಾಲ್ಕುಸಾವಿರ ಗ್ರಂಥಗಳು ಶೋಕರಸದ ಗ್ರಂಥಗಳು. ಒಟ್ಟಿನಲ್ಲಿ ಯುದ್ಧವೆಂದರೆ ಭಾರತಕ್ಕೂ ರತಿಯೆಂದರೆ ಭಾಗವತಕ್ಕೂ ಶೋಕವೆಂದರೆ ರಾಮಾಯಣಕ್ಕೂ ಹೆಸರಾದಂತೆ ಹೇಳಲ್ಪಟ್ಟಿದೆ. ಶತಕೋಟಿರಾಮಾಯಣದ ಒಳಗೆ ಸೇರಿರುವ ಆನಂದರಾಮಾಯಣವನ್ನು ವರಪ್ರಭಾವದಿಂದ ಮೊದಲೇ ಹೇಳಿದ್ದೇನೆ. ಆ ಆನಂದರಾಮಾಯಣದಲ್ಲಿ ಹನ್ನೆರಡುಸಾವಿರ ಗ್ರಂಥಗಳೂ ಒಂಭತ್ತು ಕಾಂಡಗಳೂ ಇರುವುವು.

ನವೋತ್ತರಶತಂ ಸರ್ಗಂ ಕ್ವಚಿತ್ ಸ್ಥಾಸ್ಯತಿ ಭೂತಲೇ ।
ತವ ಭಾವಿ ವರಾದ್ರಾಮ ಸ ಕೋಽಪ್ಯೇನಾಂ ಮನೋರಮಾಂ ॥ ೧೦೪ ॥

ಅಷ್ಟೋತ್ತರಶತೈಸ್ಸರ್ಗೈರ್ನಿರ್ಮಿತಾಂ ಮೇರುಸಮನ್ವಿತಾಂ ।
ತವ ಕೀರ್ತನಮಾಲಾಂ ನೋ ಖಂಡಯಿಷ್ಯತಿ ಭೂತಲೇ ॥ ೧೦೫ ॥

ನವಕಾಂಡಯುತಂ ರಮ್ಯಂ ದೃಷ್ಟ್ವಾ ತ್ವತ್ತುಷ್ಟಿಹೇತವೇ ।
ಏತದ್ಧಿ ರಕ್ಷಯಿಷ್ಯಂತಿ ಯಾವಚ್ಚಂದ್ರದಿವಾಕರೌ ॥ ೧೦೬ ॥

ಯದಾ ತತ್ಖಂಡಿತಂ ಪೂರ್ವಂ ವ್ಯಾಸೇನ ಮುನಿನಾ ತವ ।
ಶತಕೋಟಿಮಿತಂ ರಾಮಚರಿತಂ ಯನ್ಮಯಾ ಕೃತಂ ॥ ೧೦೭ ॥

ತದಾ ಕಿಂಚಿದ್ಧಿತಂ ದೃಷ್ಟ್ವಾ ಹಂ ತೂಷ್ಣೀಮೇವ ಸಂಸ್ಥಿತಃ ।
ಭವಿಷ್ಯಂತಿ ಕಲೌ ಮಂದಮತಯೋಽಲ್ಪಾಯುಷೋ ನರಾಃ ॥ ೧೦೮ ॥

೧೦೪–೧೦೫. ನೂರಒಂಭತ್ತು ಸರ್ಗಗಳಿವೆ. ಇದು ಭೂಮಿಯಲ್ಲಿ ಎಲ್ಲೋ ಒಂದು ಕಡೆಯಲ್ಲಿ ನಿಂತಿರುವುದು. ಎಲೈ ರಾಮನೇ! ನಿನ್ನ ವರಬಲದಿಂದ ಮನೋಹರವಾದ ನೂರಒಂಭತ್ತು ಸರ್ಗವುಳ್ಳ ಆನಂದರಾಮಾಯಣವನ್ನು ನಿನ್ನ ಕೀರ್ತಿಲತೆಯ ರೂಪವಾದುದೆಂದು ಯಾವನೂ ಖಂಡಿಸುವುದಿಲ್ಲ.

೧೦೬. ಈ ಒಭಂತ್ತು ಕಾಂಡಗಳುಳ್ಳ ಈ ರಾಮಾಯಣವನ್ನು ನಿನ್ನ ಕೀರ್ತಿಯು ಉಳಿಯಲು ನಿನ್ನ ವರಬಲದಿಂದಲೇ ಸೂರ್ಯಚಂದ್ರರಿರುವವರೆಗೂ ರಕ್ಷಿಸುತ್ತಾರೆ.

೧೦೭–೧೦೮. ನಾನು ರಚಿಸಿರುವ ನೂರುಕೋಟಿ ಗ್ರಂಥಗಳುಳ್ಳ ನಿನ್ನ ಚರಿತ್ರೆಯನ್ನು ಪೂರ್ವದಲ್ಲಿ ವ್ಯಾಸನು ಖಂಡಿಸಿರುವನು (ಸಂಗ್ರಹಿಸಿರುವನು) ಆಗ ಆದರಲ್ಲಿರುವ ಹಿತದೃಷ್ಟಿಯಿಂದ ನಾನು ಅದಕ್ಕೆ ಬದಲಾಗಿ ಹೇಳದೆ ಸುಮ್ಮನಾದೆನು. ಕಲಿಯುಗದಲ್ಲಿ ಜನರು ಮಂದಮತಿಗಳೂ ಅಲ್ಪಾಯುಸ್ಸುಳ್ಳವರೂ ಆಗುವರು.

ನ ಸಮರ್ಥಾ ಮಮ ಗ್ರಂಥಂ ತ್ವಿಮಂ ಶ್ರೋತುಂ ಕದಾಪಿ ಹಿ ।
ಅತೋ ವ್ಯಾಸೇನ ಮುನಿನಾ ಮತ್ಕಾವ್ಯಂ ಯತ್ಪೃಥಕ್ಕೃತಂ ॥ ೧೦೯ ॥

ತತ್ಸಮ್ಯಗಿತ್ಯಹಂ ಮತ್ವಾ ಪರಾಂ ತುಷ್ಟಿಂ ಗತಃ ಪಭೋ ।
ಅತಸ್ತ್ವಾಂ ಪ್ರಾರ್ಥಯಾಮ್ಯದ್ಯ ನವಕಾಂಡಮಿತಂ ತ್ವಿದಂ ॥ ೧೧೦ ॥

ಆನಂದರಾಮಚರಿತಂ ನ ವಿರೂಪಯ ರಾಘವ ।
ವರ್ಜಯಿಷ್ಯಸಿ ಚೇದ್ಧಾಸ್ಯಂ ತದಾ ದುಃಖಮಯಂ ಪ್ರಭೋ ॥ ೧೧೧ ॥

ಭವಿಷ್ಯತಿ ಶೇಷವದ್ಧಿ ಚೈತಚ್ಚಾಪಿ ಮನೋಹರಂ ।
ಅತಸ್ತೇ ಕಥಯಾಮ್ಯದ್ಯ ಯೇನ ತೇ ಶಿಕ್ಷಿತಂ ಭುವಿ ॥ ೧೧೨ ॥

ಭವಿಷ್ಯತಿ ಮೃಷಾ ನೈವ ಯೇನ ತುಷ್ಟಾಸ್ತು ದೇವತಾಃ ।
ಭವಿಷ್ಯಂತಿ ಜನಾಶ್ಚಾಪಿ ಸತ್ಯಾ ಮತ್ಕವಿತಾ ಭವೇತ್ ॥ ೧೧೩ ॥

---

೧೦೯. ಆದ್ದರಿಂದ ನಾನುಮಾಡಿರುವ ಗ್ರಂಥವನ್ನು ಪೂರ್ಣವಾಗಿ ಒಂದು ಸಾರಿಯಾದರೂ ಓದಲಾಗುವುದಿಲ್ಲ. ಆದ್ದರಿಂದಲೇ ವ್ಯಾಸನು ನನ್ನ ಕಾವ್ಯವನ್ನು ಅವರು ಓದುವಂತೆ ಬೇರೆಯಾಗಿ ವಿಭಾಗಿಸಿರುವನು.

೧೧೦-೧೧೧. ಅದು ಜನಗಳಿಗೆ ಅನುಗುಣವಾಗಿಯೇ ಇರುವುದು ಎಂದು ನಾನು ತಿಳಿದುಕೊಂಡು ಬಹು ಸಂತೋಷಪಟ್ಟೆನು. ಎಲೈ ಪ್ರಭುವೇ! ನಿನ್ನಲ್ಲಿ ಒಂದು ವಿಷಯವನ್ನು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಒಂಭತ್ತು ಕಾಂಡಗಳಿಂದ ಕೂಡಿದ ಈ ಆನಂದರಾಮಾಯಣವು ವಿರೂಪವಾಗಕೂಡದು. ಹಾಸ್ಯರಸವನ್ನು ಎಂದರೆ ನಗುವಿಕೆಯ ಭಾಗವನ್ನು ನೀನು ತೆಗೆದುಬಿಟ್ಟರೆ ಉಳಿದ ಭಾಗವು ಪೂರ್ಣವಾಗಿ ದುಃಖಮಯವೇ ಆಗಿರುತ್ತದೆ.

೧೧೨-೧೧೩. ಆ ಹಾಸ್ಯರಸವೂ ಇದ್ದರೆ ಇದೂ ಕೂಡ ಮಿಕ್ಕವುಗಳಂತೆಯೇ ಮನೋಹರವಾಗಿರುತ್ತದೆ. ಆದರೂನಾನು ಹೇಳುವೆನು ಕೇಳು. ನೀನು ಲೋಕದಲ್ಲಿ ಹಾಸ್ಯವನ್ನು ಮಾಡಕೂಡದೆಂದು ವಿಧಿಸಿರುವುದು ಸುಳ್ಳಾಗುವುದಿಲ್ಲ. ಆದರೂ ದೇವತೆಗಳೂ ಸಂತೋಷಪಡಬೇಕು. ನನ್ನ ಕವಿತೆಯೂ ಸತ್ಯವಾಗಬೇಕು.

ಜನಾ ಹಸಂತು ಸರ್ವತ್ರ ದಂತಾನಾಂ ದರ್ಶನಂ ವಿನಾ ।
ಆಸ್ಯಮಾಚ್ಛಾದ್ಯ ವಸ್ತ್ರೇಣ ತದಾ ಕೌತುಕದರ್ಶನಾತ್ ॥ ೧೧೪ ॥

ಹಾಸ್ಯಂ ಲಕ್ಷ್ಮೀಸೂಚಕಂ ಹಿ ಹಸಿತಂ ಸೌಖ್ಯ ಕಾರಕಂ ।
ಮಾಂಗಲ್ಯಹಸಿತಂ ಚೈತದ್ಧಾಸ್ಯಾಚ್ಛ್ರೇಷ್ಠಂ ನ ಕಿಂಚನ ॥ ೧೧೫ ॥

ನಾರೀ ಸ್ಮಿತಾನನಾ ಯಸ್ಮಿನ್ ಗೇಹೇ ತನ್ಮಂದಿರಂ ಸ್ಮೃತಂ ।
ಲಕ್ಷ್ಮ್ಯಪಿ ಸ್ಥೀಯತೇ ತತ್ರ ನಿಶ್ಚಲಂ ರಘುನಂದನ ॥ ೧೧೬ ॥

ಸ ಏವ ಪುರುಷೋ ಧನ್ಯೋ ಯಸ್ಯ ಸ್ಯಾಚ್ಚ ಸ್ಮಿತಾನನಂ ।
ಸ ಏವ ಪುರುಷೋ ನಿಂದ್ಯೋ ಯಸ್ಯಾಸ್ಯಂ ಕ್ರೋಧಸಂಯುತಂ ॥ ೧೧೭ ॥

---

೧೧೪. ಜನಗಳು ಹಲ್ಲು ಕಾಣದಂತೆಯೇ ನಗಬೇಕು. ಇದು ಎಲ್ಲಾ ಕಡೆಯಲ್ಲಿಯೂ ರೂಢಿಯಾಗಿ ಬರಲಿ. ಮತ್ತು ತಮಗೆ ನಗು ಬಂದಾಗಲೆಲ್ಲಾ ಬಟ್ಟೆಯಿಂದ ಬಾಯನ್ನು ಮುಚ್ಚಿಕೊಂಡು ನಗಬೇಕು.

೧೧೫. ನಗುವಿಕೆಯು ಸಂಪತ್ತಿಗೂ ಸೌಂದರ್ಯಕ್ಕೂ ಸೂಚಕವು. ನಕ್ಕರೆ ಆರೋಗ್ಯವುಂಟಾಗುತ್ತದೆ. ನಗುವಿಕೆಯು ಮಂಗಳಕಾರಕವು. ನಗುವಿಕೆಗಿಂತಲೂ ಶ್ರೇಷ್ಠವಾದುದು ಲೋಕದಲ್ಲಿ ಮತ್ತೊಂದಿಲ್ಲವು.

೧೧೬. ಯಾವ ಮನೆಯಲ್ಲಿ ಹೆಂಗಸರು ನಗುತ್ತಿರುವರೋ ಅದು ಸರಿಯಾದ ಮನೆಯೆಂದು ಎನ್ನಿಸಿಕೊಳ್ಳುತ್ತದೆ. ಎಲೈ ರಘುನಂದನನೇ ! ಹಾಗೆ ನಗುತ್ತಿರುವ ಮನೆಯಲ್ಲಿಯೇ ಲಕ್ಷ್ಮಿಯೂ ಬಹುಕಾಲದವರೆಗೂ ಇರುತ್ತಾಳೆ.

೧೧೭. ಯಾವನ ಮುಖದಲ್ಲಿ ನಗುವು ಇದ್ದೇ ಇರುವುದೋ ಅವನೇ ಧನ್ಯನು. ಯಾವನ ಮುಖದಲ್ಲಿ ಕೋಪದ ಚಿಹ್ನೆಯಿದೆಯೋ ಅವನೇ ಲೋಕದಲ್ಲಿ ನಿಂದ್ಯನು.

ನಿಂದಿತಾ ಸಾಪಿ ಪ್ರಮದಾ ಯಸ್ಯಾಃ ಕ್ರೋಧಯುತಂ ಮುಖಂ ।
ಗರ್ಹಯಂತ್ಯತಿಹಾಸ್ಯಂ ಹಿ ಸರ್ವದಾ ತೇ ಮುನೀಶ್ವರಾಃ ॥ ೧೧೮ ॥

ಅತಸ್ತ್ವಾಂ ಪ್ರಾರ್ಥಯಾಮ್ಯೇತನ್ಮಾನ್ಯಯ ತ್ವಂ ವಚೋ ಮಮ ।
ನ ಕರೋತಿ ವಿಧಿರ್ಗರ್ವಂ ತ್ವಾಂ ತಾತಂ ವೇತ್ತಿ ರಾಘವ ॥ ೧೧೯ ॥

ಆನಯಿಷ್ಯಾಮಿ ಶರಣಂ ತವಾಹಂ ಚತುರಾನನಂ ।
ಏವಂ ವಾಲ್ಮೀಕಿವಚನಮಂಗೀಕೃತ್ಯ ರಘೂತ್ತಮಃ ॥ ೧೨೦ ॥

ಏವಮಸ್ತ್ವಿತಿ ತಂ ಪ್ರಾಹ ಮುನಿಂ ತದ್ವಾಕ್ಯಗೌರವಾತ್ ।
ತದ್ರಾಮವಚನಂ ಶ್ರುತ್ವಾ ವಾಲ್ಮೀಕಿಸ್ತುಷ್ಟಮಾನಸಃ ॥ ೧೨೧ ॥

---

೧೧೮. ಯಾವ ಹೆಂಗಸಿನ ಮುಖವು ಕೋಪದಿಂದ ಕೂಡಿದೆಯೋ ಆ ಹೆಂಗಸು ನಿಂದ್ಯಳು. ಮುನೀಶ್ವರರೂ ಕೂಡ ಬಹುವಾಗಿ ನಗುವಿಕೆಯು ಯಾವಾಗಲೂ ನಿಂದ್ಯವಾದುದೆಂದು ತಿರಸ್ಕರಿಸಿರುತ್ತಾರೆ.

೧೧೯. ಎಲೈ ರಾಮನೇ! ಆದ್ದರಿಂದ ನೀನು ನನ್ನ ಮಾತನ್ನು ಗೌರವಿಸ ಬೇಕೆಂದು ಕೇಳಿಕೊಳ್ಳುತ್ತೇನೆ. ಆ ಬ್ರಹ್ಮನು ಗರ್ವವನ್ನು ಸ್ವಲ್ಪವೂ ಹೊಂದಿಲ್ಲ. ಅವನು ನಿನ್ನನ್ನು ತಂದೆಯೆಂದೇ ತಿಳಿದುಕೊಂಡಿರುವನು.

೧೨೦. ನಾನು ಆ ಬ್ರಹ್ಮನು ನಿನಗೆ ಶರಣಾಗತನಾಗುವಂತೆ ಹೇಳಿ ಕರೆದು ತರುತ್ತೇನೆ ಎಂದು ವಾಲ್ಮೀಕಿಯು ಹೇಳಲು ಅವನ ಮಾತನ್ನು ರಾಮನು ಒಪ್ಪಿ ಕೊಂಡನು.

೧೨೧. ಆ ಋಷಿಯ ಮಾತಿನಲ್ಲಿರುವ ಗೌರವದಿಂದ ರಾಮನು ವಾಲ್ಮೀಕಿಗೆ ಹಾಗೆಯೇ ಆಗಲೇಂದು ಹೇಳಿದನು. ರಾಮನು ಒಪ್ಪಿಕೊಂಡುದನ್ನು ನೋಡಿ ವಾಲ್ಮೀಕಿಯು ಬಹುವಾಗಿ ಸಂತೋಷಪಟ್ಟನು.

ಶಿಷ್ಯಂ ಸಂಪ್ರೇಷ್ಯ ಬ್ರಹ್ಮಾಣಮಾನಯಾಮಾಸ ಪಿಪ್ಪಲಾತ್ ।
ಅಶ್ವಾಸ್ಸರ್ವೇಪಿ ಸಂತಸ್ಸ್ಫುರ್ಯಯುಸ್ತೇ ನಗರೀಂ ಪ್ರತಿ ॥ ೧೨೨ ॥

ಯಯೌ ಸೈನ್ಯೇನ ಶತ್ರುಘ್ನೋ ರಾಮಪಾರ್ಶ್ವೇ ಸ್ಥಿತೋಽಭವತ್ ।
ರಾಮಪುತ್ರೌ ಸಮಾಯಾತೌ ಪಿತುರಗ್ರೇ ನಿಷೇದತುಃ ॥ ೧೨೩ ॥

ರಾಮಯಜ್ಞಾಯಾ ಭಾರವಾಹಸ್ತತೋ ದೂತೈರ್ವಿಸರ್ಜಿತಃ ।
ಕೃತೇಂದ್ರೇಣ ಸುಧಾವೃಷ್ಟಿಸ್ಸುಮಂತ್ರಾದ್ಯಾಸ್ಸುಜೀವಿತಾಃ ॥ ೧೨೪ ॥

ಸುಮಂತ್ರಾದ್ಯಾರಾಮದೂತಾಸ್ತತ್ಸ್ಥಾಶ್ಚ ರಾಘವಂ ಯಯುಃ ।
ನತ್ವಾ ರಾಮಂ ಸುಮಂತ್ರಸ್ಸ ರಾಮಪಾರ್ಶ್ವೇ ಸ್ಥಿರೋಽಭವತ್ ॥ ೧೨೫ ॥

ತತಸ್ಸುರೈರ್ಯಯಾವಿಂದ್ರಃ ಶ್ರೀರಾಮಂ ಪ್ರಣನಾಮ ಸಃ ।
ರಾಮಂ ನತ್ವಾಬ್ರವೀದ್ಬ್ರಹ್ಮಾ ಮಯಾ ಯದಪರಾಧಿತಂ ॥ ೧೨೬ ॥

---

೧೨೨ ಆಗ ವಾಲ್ಮೀಕಿಯು ಒಬ್ಬ ಶಿಷ್ಯನನ್ನು ಕಳುಹಿಸಿ ಆ ಅರಳಿಯ ಮರದಿಂದ ಬ್ರಹ್ಮನನ್ನು ಕರೆಯಿಸಿದನು. ಆಗ ಸುಮ್ಮನೆ ನಿಂತಿದ್ದ ಕುದುರೆಗಳೆಲ್ಲವೂ ಹೊರಟು ಪಟ್ಟಣಕ್ಕೆ ಹೋದುವು.

೧೨೩. ಶತ್ರುಘ್ನನು ಸೇನೆಯೊಡನೆಹೋಗಿ ರಾಮನ ಹತ್ತಿರದಲ್ಲಿ ನಿಂತನು. ರಾಮನ ಮಕ್ಕಳಾದ ಕುಶಲವರೂ ಹೋಗಿ ತಂದೆಯ ಎದುರಿನಲ್ಲಿ ನಿಂತರು.

೧೨೪. ರಾಮನು ದೂತರಿಗೆ ಅಪ್ಪಣೆಮಾಡಲು ಅವರು ಸೌದೆಯ ಹೊರೆಯವನನ್ನು ಬಿಡಿಸಿಬಿಟ್ಟರು. ಇಂದ್ರನು ಅಮೃತವನ್ನು ಸುರಿಸಲು ಸುಮಂತ್ರನೇ ಮುಂತಾದವರೆಲ್ಲರೂ ಜೀವದಿಂದ ಮೇಲಕ್ಕೆದ್ದರು.

೧೨೫. ಸುಮಂತ್ರನೇ ಮುಂತಾದ ಸೇನೆಯವರೂ, ರಾಮನ ದೂತರೂ, ಆ ಮರವನ್ನು ಕಡಿಯಲು ಹೋಗಿದ್ದವರೂ. ಕೂಡ ರಾಮನ ಬಳಿಗೆ ಬಂದರು. ಸುಮಂತ್ರನು ರಾಮನಿಗೆ ನಮಸ್ಕರಿಸಿ ಅವನ ಹತ್ತಿರದಲ್ಲಿ ನಿಂತನು.

೧೨೬. ಇಂದ್ರನು ದೇವತೆಗಳೊಡನೆ ರಾಮನ ಬಳಿಗೆ ಬಂದು ನಮಸ್ಕರಿಸಿದನು. ಆಗ ಬ್ರಹ್ಮನು ರಾಮನಿಗೆ ನಮಸ್ಕರಿಸಿ ಸ್ವಾಮಿ! ನಿಮಗೆ ಬಹುವಾಗಿ ಅಪರಾಧಮಾಡಿದೆನು.

ತತ್ ಕ್ಷಮಸ್ವ ರಘುಶ್ರೇಷ್ಠ ತ್ವತ್ಪಾಲ್ಯಾಸ್ಸರ್ವದಾ ವಯಂ ।
ಪುರಾಸ್ಮಾಕಂ ಹಿತಾರ್ಥಂ ಹಿ ತ್ವಯಾ ರಾಮಾವನೀತಲೇ ॥ ೧೨೭ ॥

ಅವತಾರಾಶ್ಚ ಬಹವೋ ಧೃತಾ ನೋರಿಪವೋ ಹತಾಃ ।
ಶಂಖಾಸುರೋ ವೇದಹರ್ತಾ ಮತ್ಸ್ಯರೂಪೇಣ ದಾರಿತಃ ॥ ೧೨೮ ॥

ತಥಾಸ್ಮಾಕಂ ಸುಧಾಂ ದಾತುಂ ಮಜ್ಜಂತಂ ಮಂದರಾಚಲಂ ।
ದೃಷ್ಟ್ವಾ ಸ ಕೂರ್ಮರೂಪೇಣ ತ್ವಯಾ ಪೃಷ್ಠೇ ಧೃತೋ ಗಿರಿಃ ॥ ೧೨೯ ॥

ಮತ್ಪೃಥ್ವೀತಿ ಸ್ಪರ್ಧಮಾನಂ ಹಿರಣ್ಯಾಕ್ಷಂ ನಿಹತ್ಯ ಚ ।
ತ್ವಯಾ ವಾರಾಹರೂಪೇಣ ಜಲಾತ್ ಪೃಥ್ವೀ ಸಮುದ್ಧೃತಾ ॥ ೧೩೦ ॥

ಪ್ರಹ್ಲಾದವಚನಾತ್ ಸ್ತಂಭಾದಾವಿರ್ಭೂಯ ತ್ವಯಾ ಪುರಾ ।
ನಾರಸಿಂಹಸ್ವರೂಪೇಣ ಹಿರಣ್ಯಕಶಿಪುರ್ಹತಃ ॥ ೧೩೧ ॥

೧೨೭-೧೨೮. ಎಲೈ ರಾಮನೇ! ಆ ಅಪರಾಧವನ್ನು ಕ್ಷಮಿಸು. ನೀನೇ ನಮ್ಮನ್ನು ಯಾವಾಗಲೂ ಕಾಪಾಡಬೇಕು. ಎಲೈ ರಾಮನೇ! ನೀನು ಪೂರ್ವದಲ್ಲಿಯೇ ನಮ್ಮಗಳ ಹಿತಕ್ಕೋಸ್ಕರ ಭೂಮಿಯಲ್ಲಿ ಬಹುವಾಗಿ ಅವತಾರಗಳನ್ನು ಮಾಡಿದೆ. ಆಗ ನಮ್ಮ ಶತ್ರುಗಳನ್ನೆಲ್ಲಾ ನಾಶಮಾಡಿದೆ. ವೇದಗಳನ್ನು ಅಪಹರಿಸಿದ ಶಂಖಾಸುರನನ್ನು ಮತ್ಸ್ಯಾವತಾರವನ್ನು ಮಾಡಿ ಕೊಂದುಹಾಕಿದೆ.

೧೨೯. ಅಂತೆಯೇ ನಮಗೆ ಅಮೃತವನ್ನು ಕೊಡಲು ಕಡೆಯುವುದಕ್ಕೆ ಸಮುದ್ರದಲ್ಲಿ ಹಾಕಿದ ಮಂದರಪರ್ವತವು ಆ ಸಮುದ್ರದಲ್ಲಿ ಮುಳುಗುತ್ತಿರಲು ಅದನ್ನು ನೋಡಿ ನೀನು ಕೂರ್ಮಾವತಾರವನ್ನು ಮಾಡಿ ಆ ಪರ್ವತವನ್ನು ಬೆನ್ನಿನ ಮೇಲೆ ಧರಿಸಿಕೊಂಡೆ.

೧೩೦. ಭೂಮಿಯೆಲ್ಲವೂ ನನ್ನದೇ ಎಂಬದಾಗಿ ಹೆಮ್ಮೆಪಡುತ್ತಿದ್ದ ಹಿರಣ್ಯಾಕ್ಷನು ಅದನ್ನು ಸಮುದ್ರದಲ್ಲಿ ಕೊಂಡುಹೋಗಲು ನೀನು ವರಹಾವತಾರವನ್ನು ಮಾಡಿ ಅವನನ್ನು ಕೊಂದು ಆ ಭೂಮಿಯನ್ನು ನೀರಿನಿಂದ ಮೇಲಕ್ಕೆತ್ತಿದೆ.

೧೩೧. ನೀನು ಪೂರ್ವದಲ್ಲಿ ಪ್ರಹ್ಲಾದನ ಪ್ರಾರ್ಥನೆಯಂತೆ ಕಂಬದಲ್ಲಿ ಹುಟ್ಟಿ ನರಸಿಂಹಾವತಾರವನ್ನು ಮಾಡಿ ಆ ಹಿರಣ್ಯಕಶಿಪುವನ್ನು ಕೊಂದೆ.

ತಥಾ ರಾಜ್ಯಂ ಹೃತಂ ದೃಷ್ಟ್ವಾ ಪುರಾ ಮಘವತಸ್ತ್ವಯಂ ।
ಬಲಿರ್ವಾಮನರೂಪೇಣ ಪಾತಾಳೇ ವಿನಿವೇಶಿತಃ ॥ ೧೩೨ ॥

ನೃಪೈರಧರ್ಮನಿರತೈಃ ದೃಷ್ಟ್ವಾ ವ್ಯಾಪ್ತಾಂ ಭುವಂ ಪುರಾ ।
ತ್ವಯೈಕವಿಂಶದ್ವಾರಂ ಹಿ ಜಾಮದಗ್ನ್ಯಸ್ವರೂಪಿಣಾ ॥ ೧೩೩ ॥

ಪಿತುರ್ವೈರಂ ಪುರಸ್ಕೃತ್ಯ ನಿಃಕ್ಷತ್ರೀ ಪೃಥಿವೀ ಕೃತಾ ।
ದಶಾಸ್ಯಕುಂಭಕರ್ಣೌ ತೌ ರಾಮರೂಪೇಣ ರಾಕ್ಷಸೌ ॥ ೧೩೪ ॥

ಪತ್ನೀವೈರಂ ಪುರಸ್ಕೃತ್ಯ ತ್ವಯಾದುಷ್ಟೌ ಹತಾವಿಹ ।
ಉದ್ಧಾರಿತೌ ತೌ ಸ್ವಗಣೌ ದ್ವಿವಾರಂ ದೇವಶಾಪತಃ ॥ ೧೩೫ ॥

---

೧೩೨. ಹಿಂದೆ ಬಲಿಯು ಇಂದ್ರನರಾಜ್ಯವನ್ನು ಅಪಹರಿಸಲು ಅದನ್ನು ನೋಡಿ ನೀನು ವಾಮನಾವತಾರವನ್ನು ಮಾಡಿ ಆ ಬಲಿಯನ್ನು ಪಾತಾಳಕ್ಕೆ ನೂಕಿದೆ.

೧೩೩-೧೩೫. ಭೂಮಿಯೆಲ್ಲವೂ ಪೂರ್ವದಲ್ಲಿ ಅಧರ್ಮನಿರತರಾದ ರಾಜರಿಂದ ತುಂಬಿರಲು ಅದನ್ನು ನೋಡಿ ಪರಶುರಾಮಾವತಾರವನ್ನು ಮಾಡಿ ತಂದೆಗೆ ಆ ರಾಜರುಮಾಡಿದ ತಪ್ಪನ್ನೇ ಮುಂದುಮಾಡಿಕೊಂಡು ಕ್ಷತ್ರಿಯರೆಲ್ಲರನ್ನೂ ನಾಶಮಾಡಿದೆ. ದಶಾನನನನ್ನೂ, ಕುಂಭಕರ್ಣನನ್ನೂ, ನಿನ್ನ ಹೆಂಡತಿಯನ್ನು ಕದ್ದುಕೊಂಡು ಹೋದರೆಂಬ ವೈರವನ್ನೇ ಮುಖ್ಯವಾಗಿಟ್ಟುಕೊಂಡು ಸಂಹರಿಸಿ ಆ ದೇವಗಣವನ್ನು ಶಾಪದಿಂದ ಎರಡುಸಾರಿ ಉದ್ಧಾರಮಾಡಿದೆ. ಅದರಲ್ಲಿ ಈಗ ಎರಡುಬಾರಿಯಾಯಿತು. ಮುಂದೆಯೂ ಕೂಡ ಕೃಷ್ಣಾವತಾರಮಾಡಿ ಅವರನ್ನು ಶಾಪದಿಂದ ಉದ್ಧರಿಸುತ್ತೀಯೆ. ಎಂದನು.

ಏಕವಾರಂ ಪುನಸ್ತ್ವಗ್ರೇ ತ್ವಂ ತಾನೇವೋದ್ಧರಿಷ್ಯಸಿ ।
ತದ್ಬ್ರಹ್ಮವಚನಂ ಶ್ರುತ್ವಾ ವಸಿಷ್ಠೋ ಮುನಿಸತ್ತಮಃ ॥ ೧೩೬ ॥

ಸರ್ವಂ ಜಾನನ್ನಪಿ ಜನಾನ್ ಜ್ಞಾತುಂ ಪಪ್ರಚ್ಛ ತಂ ವಿಧಿಂ ॥ ೧೩೭ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಆನಂದರಾಮಾಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಉತ್ತರಾರ್ಧೆ ಹಾಸ್ಯವೋಕ್ಷಣಂ ನಾಮ ತ್ರಯೋದಶಸ್ಸರ್ಗಃ ಸಮಾಪ್ತಃ

೧೩೬-೧೩೭. ಬ್ರಹ್ಮನ ಈ ಮಾತನ್ನು ಕೇಳಿ ಮುನಿಶ್ರೇಷ್ಠನಾದ ವಸಿಷ್ಠನು ತಾನು ಎಲ್ಲವನ್ನೂ ತಿಳಿದಿದ್ದರೂ ಜನಗಳಿಗೆ ತಿಳಿಯಲೆಂದು ಬ್ರಹ್ಮನನ್ನು ಕುರಿತು ಇಂತೆಂದು ಹೇಳಿದನು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಆನಂದರಾಮಾಯಣದಲ್ಲಿ ರಾಜ್ಯಕಾಂಡದ ಉತ್ತರಾರ್ಧದಲ್ಲಿ ಹಾಸ್ಯವೋಕ್ಷವೆಂಬ ಹದಿಮೂರನೆಯ ಸರ್ಗವು ಮುಗಿದುದು.

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ

ಒಂದನೆಯ ಸರ್ಗದ ಸಾರಾಂಶವು

ಶ್ರೀ ರಾಮನು ರಾಜ್ಯವನ್ನಾಳುತ್ತಿದ್ದಾಗ ಒಂದು ದಿನ ಸ್ನೇಹಿತರೊಡನೆಯೂ ತಮ್ಮಂದಿರೊಡನೆಯೂ ಸಭೆಯಲ್ಲಿ ಕುಳಿತಿದ್ದನು. ಆ ಸಭೆಯಲ್ಲಿ ಒಬ್ಬಾನೊಬ್ಬ ಪಟ್ಟಣಿಗನೂ ಕುಳಿತಿದ್ದನು. ಅವನು ಆ ಸಭೆಯಲ್ಲಿ ನಡೆಯುತ್ತಿದ್ದ ಸೂಳೆಯರ ಕುಣಿತವನ್ನು ನೋಡಿ ನಕ್ಕನು. ಇವನು ಸಭೆಗೆ ಹೊಸಬನಾದುದರಿಂದ ಸಭೆಯ ಮರ್ಯಾದೆಯು ಸರಿಯಾಗಿ ತಿಳಿಯದು. ಆದುದರಿಂದ ಆ ನಗುವು ಬಹು ದೊಡ್ಡದಾಯಿತು. ಇದನ್ನು ನೋಡಿ ರಾಮನಿಗೆ ಹಿಂದಿನ ವಿಷಯವು ಜ್ಞಾಪಕಕ್ಕೆ ಬಂದಿತು.

ಹಿಂದೆ ರಾಮನು ರಾವಣನನ್ನು ಕೊಂದನಷ್ಟೆ! ಆಗ ಕತ್ತರಿಸಲ್ಪಟ್ಟ ಆ ತಲೆಗಳು ಈ ಪರಮಾತ್ಮನಾದ ಶ್ರೀ ರಾಮನ ಬಾಣಗಳಿಂದ ನಮಗೆ ಮರಣ ವುಂಟಾಯಿತಲ್ಲಾ! ಎಂಬ ಸಂತೋಷದಿಂದ ಅವು ಅಂತರಿಕ್ಷಕ್ಕೆ ಹಾರಿಸಲ್ಪಟ್ಟರೂ ರಾಮನಿಗೆ ನಮಸ್ಕರಿಸಲು ಬರುತ್ತಿದ್ದುವು. ಆಗ ಅವು ಹಲ್ಲುಗಳನ್ನು ಬಿಟ್ಟು ಕೊಂಡು ನಗುತ್ತ ಬರುತ್ತಿದ್ದುವು. ಹೀಗೆ ಬರುತ್ತಿರುವ ಆ ತಲೆಗಳು ಹಲ್ಲುಗಳನ್ನು ಬಿಟ್ಟುಕೊಂಡು ಬಾಯನ್ನು ತೆರೆದುಕೊಂಡು ಬರುತ್ತಿರುವುದನ್ನು ನೋಡಿ ರಾಮನು "ಇವು ನನ್ನನ್ನು ತಿನ್ನಲು ಬರುತ್ತಿವೆ" ಎಂದು ಭಾವಿಸಿಕೊಂಡನು. ಇದರಿಂದ ಭೀತಿಗೊಂಡವನಾಗಿ ಮತ್ತೂ ಬಾಣವನ್ನು ಹೂಡಿ ಹೊಡೆದು ಅಂತರಿಕ್ಷಕ್ಕೆ ಹಾರಿಸುತ್ತಿದ್ದನು. ಅವು ಮತ್ತೆ ಬರುತ್ತಿದ್ದುವು. ಹೀಗೆ ಒಂದು ಬಾರಿಯಲ್ಲ ಎರಡು ಬಾರಿಯಲ್ಲ ನೂರೆಂಟು ಬಾರಿ ನಡೆಯಿತು. ಆ ಪೌರನ ನಗುವಿನಿಂದ ಈ ವಿಷಯವು ಸ್ಮೃತಿಪಥಕ್ಕೆ ಬಂದಿತು. ಒಡನೆಯೇ ರಾಕ್ಷಸರು ಮಾಯಾವಿಗಳಾದು ದರಿಂದ ಇಲ್ಲಿಗೂ ಬಂದಿರಬಹುದೆಂದು ಅಕ್ಕಪಕ್ಕಗಳಲ್ಲಿ ನೋಡಿದನು. ನಗು ತ್ತಿರುವುದನ್ನು ನೋಡಿದಾಗಲೆಲ್ಲಾ ಈ ರೀತಿಯಾಗಿ ಭ್ರಾಂತಿಪಡುತ್ತ ಅಕ್ಕಪಕ್ಕ ಗಳನ್ನು ನೋಡಬೇಕಾಗಿ ಬರುತ್ತಿದ್ದಿತು.

ಆಗ ರಾಮನು "ನಾನು ಈ ನಗುವುದನ್ನು ಕೇಳಿದಾಗಲೆಲ್ಲಾ ರಾವಣನ ವಿಷಯವು ಜ್ಞಾಪಕಕ್ಕೆ ಬರುತ್ತಿರುವುದು. ಅಲ್ಲದೆ ರಾಕ್ಷಸರೂ ಕೂಡ ಮಾಯಾವಿಗಳು. ವಂಚಿಸಿದರೂ ವಂಚಿಸಬಹುದು. ನೀತಿಶಾಸ್ತ್ರಗಳಲ್ಲಿಯೂ ಕೂಡ ಈ ನಗುವಿಕೆಯು ನಿಷೇಧಿಸಲ್ಪಟ್ಟಿದೆ. ಆದ್ದರಿಂದ ಭೂಮಿಯಲ್ಲಿರುವವರು ಒಬ್ಬರೂ ನಗಲೇ ಕೂಡದು ಎಂಬುದಾಗಿ ನಿಷೇಧಿಸಿಯೇ ಬಿಡುತ್ತೇನೆ." ಎಂದು ನಿಶ್ಚಯಿಸಿಕೊಂಡು ಲಕ್ಷ್ಮಣನನ್ನು ಕರೆದು ಇಂತೆಂದನು.

ಎಲೈ ಲಕ್ಷ್ಮಣನೇ! "ಈ ಭೂಮಿಯಲ್ಲಿರುವವರು ಒಬ್ಬರೂ ನಗಲೇ ಕೂಡದು. ಆ ನಗತಕ್ಕವರು ಹೆಂಗಸಾಗಿರಲಿ, ಗಂಡಸಾಗಿರಲಿ, ನನಗೆ ಸ್ನೇಹಿತನಾಗಿರಲಿ, ತಮ್ಮಂದಿರಾಗಿರಲಿ, ಮಕ್ಕಳಾಗಿರಲಿ, ಕೊನೆಗೆ ಸೀತೆಯೇ ಆಗಿರಲಿ ಶಿಕ್ಷೆಗೆ ಗುರಿಯಾಗುತ್ತಾರೆ ಎಂಬುದಾಗಿ ಈ ರಾಜಧಾನಿಯಲ್ಲಿಯೂ, ದೇಶದಲ್ಲಿಯೂ, ಒಟ್ಟಿನಲ್ಲಿ ಈ ಭೂಮಂಡಲದಲ್ಲಿ ಎಲ್ಲಾ ಕಡೆಯಲ್ಲಿಯೂ ಡಂಗೂರವನ್ನು ಹೊಡೆಸಿ ಸಾರಿಸು" ಎಂದನು ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ಎಲ್ಲಕಡೆಯಲ್ಲಿಯೂ ಈ ವಿಷಯವನ್ನು ಹೇಳಿಸುತ್ತ ಡಂಗೂರವನ್ನು ಹೊಡೆಸಿದನು. ಇದನ್ನು ಕೇಳಿದ ಜನಗಳು ರಾಮನ ಶಿಕ್ಷೆಯ ಹೆದರಿಕೆಯಿಂದ ನಗುವುದಿರಲಿ, ನಗುಮುಖವನ್ನು ಹೊಂದುವುದನ್ನೂ ಬಿಟ್ಟುಬಿಟ್ಟರು. ನಗುಬರುವುದೆಂಬ ಹೆದರಿಕೆಯಿಂದ ಆ ನಗುವಿಗೆ ಕಾರಣವಾದ ಸೂಳೆಯರ ಕುಣಿತ, ನಟರ ಸಂಗೀತ, ಹೆಂಡತಿ ಮಕ್ಕಳು ಸ್ನೇಹಿತರೊಡನೆ ಸರಸಸಲ್ಲಾಪವಾಡುವುದು, ಉತ್ಸವಗಳು, ಸಂತೋಷಕರವಾದ ಮಂಗಳಕಾರ್ಯಗಳು, ಮದುವೆಯೇ ಮುಂತಾದುವುಗಳಲ್ಲಿ ಓಕುಳಿಯಾಡುವುದು, ಸಂತೋಷದಿಂದ ಮಾತನಾಡುವುದು ಇವೆಲ್ಲವನ್ನೂ ಬಿಟ್ಟುಬಿಟ್ಟರು. ಜನಗಳು ಅವಶ್ಯಕವಾದ ಕೆಲಸವಿದ್ದಾಗ ಮಾತ್ರ ರಾಮನ ಸಭೆಗೆ ಹೋಗುತ್ತಿದ್ದರೇ ಹೊರತು ಮಿಕ್ಕ ಸಮಯಗಳಲ್ಲಿ ಹೋಗುವುದನ್ನೇ ಬಿಟ್ಟುಬಿಟ್ಟರು. ಪುರಾಣಗಳನ್ನು ಹೇಳುವುದು, ಇತಿಹಾಸಗಳನ್ನು ಓದುವುದು ಇವೆಲ್ಲವನ್ನೂ ಬಿಟ್ಟುಬಿಟ್ಟರು. ನಗುವಿಗೆ ಕಾರಣವಾದ ಕೆಲಸಗಳನ್ನು ರಟ್ಟಾಗಿಯಾಗಲಿ, ಗುಟ್ಟಾಗಿಯಾಗಲಿ ಸಪ್ತ ದ್ವೀಪಗಳಲ್ಲಿ ಒಬ್ಬರೂ ಮಾಡುತ್ತಿರಲಿಲ್ಲ. ಈ ರೀತಿಯಾಗಿ ಶ್ರೀ ರಾಮನ ಈ ಆಜ್ಞೆಯು ಒಂದು ವರ್ಷಕಾಲ ನಡೆಯಿತು.

ಶೃಂಗಾರ, ಏರ, ಕರುಣ, ರೌದ್ರ, ವೀರ ಭಯಾನಕ, ಬೀಭತ್ಸ, ಅದ್ಭುತ, ಶಾಂತ ಎಂಬದಾಗಿ ನವರಸಗಳಿವೆ. ಒಂದೊಂದಕ್ಕೂ ಒಂದೊಂದು ದೇವತೆಯುಂಟು. ಈ ರಸಗಳನ್ನು ಅನುಭವಿಸುವಾಗ ನಾವು ಯಾವ ರಸವನ್ನು ಅನುಭವಿಸುವೆವೋ ಆಗ ಆ ದೇವತೆಯು ತೃಪ್ತಿ ಹೊಂದುತ್ತದೆ.

ಹಾಸ್ಯರಸಕಾರ್ಯವಾದ ನಗುವಿಕೆಯು ರಾಮನಿಂದ ಜಗತ್ತಿನಲ್ಲಿಯೇ ನಿಷೇಧಿಸಲ್ಪಟ್ಟದರಿಂದ ಆ ಹಾಸ್ಯರಸಾದಿ ದೇವತೆಗೆ ಗೌರವವು ಸಿಕ್ಕದೆ ತೃಪ್ತಿಯುಂಟಾಗುತ್ತಿರಲಿಲ್ಲ. ಆಗ ಹಾಸ್ಯರಸಾಧಿದೇವತೆಯೂ ಉಳಿದ ದೇವತೆಗಳೂ ಈ ವಿಷಯವನ್ನು ತಮ್ಮ ಒಡೆಯನಾದ ಇಂದ್ರನಿಗೆ ತಿಳಿಸಿದರೂ ರಾಮನ ಮೇಲೆ ಕೈಮಾಡಲು ಇಂದ್ರನಿಗೆ ಸಾಗುತ್ತಿರಲಿಲ್ಲವಾಗಿ ಆ ಇಂದ್ರನು ಈ ವಿಷಯವನ್ನು ಬ್ರಹ್ಮನಿಗೆ ಹೇಳಿದನು. ಬ್ರಹ್ಮನು ದೇವತೆಗಳನ್ನು ಕುರಿತು, ಎಲೈ ದೇವತೆಗಳಿರಾ! ರಾಮನ ಮುಂದೆ ನನ್ನ ಬಲವೇನೂ ನಡೆಯುವಂತಿಲ್ಲ. ಅವನಿಗೆ ನಾನು ಉಪದೇಶ ಮಾಡುವುದಕ್ಕೂ ಆಗುವುದಿಲ್ಲ. ಅವನು ನನಗೂ ತಂದೆಯಾಗಿದ್ದಾನೆ. ಇರಲಿ, ಆದರೂ ಯುಕ್ತಿಯಿಂದ ನಿಮ್ಮ ಕೆಲಸವನ್ನು ಸಾಧಿಸಿಕೊಡುತ್ತೇನೆ. ನಿಮಗೆ ಹಿತವುಂಟಾಗುತ್ತದೆ. ಹೋಗಿರಿ. ಎಂದು ಹೇಳಿ ಕಳುಹಿಸಿಬಿಟ್ಟನು.

ದೇವತೆಗಳೆಲ್ಲರೂ ಅತ್ತ ಹೊರಟುಹೋಗಲು ಬ್ರಹ್ಮನು ಇತ್ತ ಭೂಮಂಡಲಕ್ಕೆ ಬಂದನು. ಅಂತೆಯೇ ಅಯೋಧ್ಯೆಯ ಸಮೀಪಕ್ಕೂ ಬಂದನು. ಅಲ್ಲಿ ಒಂದು ದೊಡ್ಡ ಅರಳಿಯ ಮರವಿದ್ದಿತು. ಅದನ್ನು ನೋಡಿದನು. ತಾನು ಇದರಲ್ಲಿದ್ದು ಕೊಂಡು ತನ್ನ ಕೆಲಸವನ್ನು ಮಾಡಬೇಕೆಂದು ಯೋಚಿಸಿ ಅದರೊಳಕ್ಕೆ ಸೇರಿಕೊಂಡನು.

ಹಾಗೆ ಸೇರಿಕೊಂಡನಂತರ ದಾರಿಯಲ್ಲಿ ಹೋಗುತ್ತಿರುವವರನ್ನು ನೋಡಿ ನಗಲಾರಂಭಿಸಿದನು. ಹೀಗೆ ನಗುತ್ತಿರುವಾಗ ಸೌದೆಮಾರುವವನೊಬ್ಬನು ಸೌದೆಯ ಹೊರೆಯನ್ನು ಹೊತ್ತುಕೊಂಡು ಆ ದಾರಿಯಲ್ಲಿ ಬಂದನು. ಆಗ ಈ ಬ್ರಹ್ಮನು ನಗುತ್ತಿರಲು ಆ ನಗುವಿನ ಶಬ್ದವನ್ನು ಕೇಳಿ ಇವನೂ ನಕ್ಕನು. ಅನಂತರ ಸೌದೆಯನ್ನು ಮಾರಲು ಅಂಗಡಿಬೀದಿಗೆ ಹೊರಟುಹೋದನು. ಆ ಅಂಗಡಿ ಬೀದಿಯಲ್ಲಿ ಸೌದೆಯನ್ನು ಮಾರಲು ಓಡಾಡುತ್ತಿರುವಾಗ ಆ ಅರಳಿಯ ಮರವು ನಗುತ್ತಿದ್ದುದು ಜ್ಞಾಪಕಕ್ಕೆ ಬಂದಿತು. ಒಡನೆಯೇ ಗಟ್ಟಿಯಾಗಿ ನಕ್ಕು ಬಿಟ್ಟನು. ಆದರೆ ರಾಮನ ಆಜ್ಞೆಯು ಜ್ಞಾಪಕಕ್ಕೂ ಬಂದು ಬಹುವಾಗಿ ಅಂಜಿ ಕೊಂಡನು.

ಈ ಸೌದೆಯವನು ನಗುತ್ತಿದ್ದುದನ್ನು ಅಲ್ಲಿಯೇ ಹೋಗುತ್ತಿದ್ದ ರಾಜದೂತನೊಬ್ಬನು ಕೇಳಿದನು. ಇದರಿಂದ ಅವನಿಗೂ ನಗುವು ಬಂದು ತಡೆಯಲಾರದೆ ಗಟ್ಟಿಯಾಗಿ ನಕ್ಕನು. ಅನಂತರ ತನ್ನ ಕೆಲಸದ ಮೇಲೆ ರಾಜಸಭೆಗೆ ಹೋದನು. ಅಲ್ಲಿಯೂ ಕೂಡ ಈ ಸೌದೆಯವನು ನಕ್ಕುದು ಜ್ಞಾಪಕಕ್ಕೆ ಬರಲು ಗಟ್ಟಿಯಾಗಿ

ನಕ್ಕುಬಿಟ್ಟನು. ಇದನ್ನು ಕೇಳಿ ಸಭೆಯುವರೆಲ್ಲರೂ ನಕ್ಕುಬಿಟ್ಟರು. ಸಭೆಯುವರು ನಕ್ಕುದನ್ನು ನೋಡಿ ಶ್ರೀ ರಾಮನೂ ಸಿಂಹಾಸನದಲ್ಲಿದ್ದರೂ ನಕ್ಕುಬಿಟ್ಟನು.

ಆದರೆ ಆ ರಾಮನು “ ನಾನೇಕೆ ನಕ್ಕನು? ನಗಕೂಡದೆಂಬ ಉದ್ದೇಶದಿಂದಲೇ ನಕ್ಕವರಿಗೆ ಶಿಕ್ಷೆಯನ್ನು ವಿಧಿಸಿರುವೆನಲ್ಲ! ನಾವು ನಕ್ಕರೆ ರಾಮನು ನಮ್ಮನ್ನು ಶಿಕ್ಷಿಸುವನು. ರಾಮನು ನಕ್ಕರೆ ಯಾರು ಶಿಕ್ಷಿಸುವರು ? ಅವನು ಎಲ್ಲರೆದುರಿಗೂ ನಕ್ಕನು. ಆ ಶಿಕ್ಷೆಯು ನಮಗೆ ಮಾತ್ರವಿರುವುದೆ? ರಾಘವನಿಗೆ ಇಲ್ಲವೋ ? ಎಂದೆನ್ನುತ್ತ ನನ್ನ ಶಿಕ್ಷೆಯನ್ನು ನನ್ನ ಎದುರಿಗೇನೇ ಪಟ್ಟಣಿಗರು ಗೌರವಿಸುವುದಿಲ್ಲ. ಆದ್ದರಿಂದ ಈ ಶಿಕ್ಷೆಯು ಯುಕ್ತವಲ್ಲ” ಎಂದು ತನ್ನಲ್ಲಿಯೇ ಯೋಚಿಸುತ್ತಿದ್ದು ಮತ್ತು ಆ ನಗುವನ್ನು ತಡೆಯಲಾರದೆ ರಾಮನು ಮತ್ತೆಯೂ ನಕ್ಕನು. ಅನಂತರ ಆ ರಾಮನು ಪಟ್ಟಣಿಗರನ್ನು ಆಯ್ಯಾ ! ನೀವೇಕೆ ನಕ್ಕಿರಿ ? ನಿಮ್ಮನಗುವನ್ನುನೋಡಿ ನನಗೂ ನಗುವು ಬಂದಿತಲ್ಲಾ! ಎಂದು ಕೇಳಿದನು. ಅದಕ್ಕೆ ಆ ಸಭಿಕರು, ಎಲೈ ದೊರೆಯೇ ! ನಿನ್ನ ದೂತನು ಮೊದಲು ನಕ್ಕನು. ಅದನ್ನು ನೋಡಿ ನಮಗೂ ನಗುವು ಬಂದಿತು. ಎನ್ನಲು ಅದನ್ನು ಕೇಳಿ ಆ ದೂತನನ್ನು ಕುರಿತು ನೀನೇಕೆ ನಕ್ಕೆ ? ಎಂದನು. ಅದಕ್ಕೆ ಅವನು ಸ್ವಾಮಿ ! ಅಂಗಡಿ ಬೀದಿಯಲ್ಲಿ ಒಬ್ಬ ಸೌದೆಮಾರುವವನು ನಕ್ಕನು, ಅದು ಜ್ಞಾಪಕಕ್ಕೆ ಬಂದುದರಿಂದ ಇಲ್ಲಿಯೂ ನಗುವು ಬಂದಿತು. ಎಂದನು. ರಾಮನು ಇದನ್ನು ಕೇಳಿ ಆ ನಕ್ಕ ಸೌದೆಯವನನ್ನು ಕರೆತರುವಂತೆ ದೂತರನ್ನು ಕಳುಹಿಸಿದನು. ಅಂತೆಯೇ ಆ ದೂತರು ಅವನನ್ನು ಕರೆತಂದರು. ರಾಮನು ಸೌದೆಯವನನ್ನು ನೋಡಿ ಅಯ್ಯಾ ! ಹೆದರಬೇಡ. ನಾನು ನಿನ್ನನ್ನೇನೂ ಮಾಡುವುದಿಲ್ಲ. ಸತ್ಯವಾಗಿ ಹೇಳು, ಅಂಗಡಿ ಬೀದಿಯಲ್ಲಿ ಏತಕ್ಕೆ ನಕ್ಕೆ ? ಹೇಳು ಎಂದನು. ಆದರೆ ಆ ಸೌದೆಯವನು ಶಿಕ್ಷೆಯನ್ನು ಸ್ಮರಿಸಿಕೊಂಡು ಭಯಪಟ್ಟನು. ಬಾಯಿಯಲ್ಲಿ ನೀರೊಣಗಿ ಗಂಟಲೂ ಬರತುಹೋಯಿತು. ಆಗ ಅವನು ನಡುಗುತ್ತ ರಾಮನನ್ನು ಕುರಿತು ತೊದಲು ನುಡಿಯಿಂದ ಸ್ವಾಮಿ ! ಈ ಅಯೋಧ್ಯೆಯ ಪಕ್ಕದಲ್ಲಿ ಒಂದು ಅರಳಿಯ ಮರವಿರುವುದು. ನಾನು ಬರುವಾಗ ಆ ಮರದ ಹತ್ತಿರ ಬಂದೆನು. ಆಗ ಅದು ನಕ್ಕಿತು. ಅಂಗಡಿ ಬೀದಿಯಲ್ಲಿಯೂ ಆ ನಗುವೇ ಜ್ಞಾಪಕಕ್ಕೆ ಬಂದುದರಿಂದ ನಾನು ನಕ್ಕೆನು ಎಂದನು.

ಸೌದೆಯವನು ಹೇಳಿದ ಈ ಅಪೂರ್ವವಾದ ಮಾತನ್ನು ಕೇಳಿ ರಾಮನಿಗೆ ಆಶ್ಚರ್ಯವಾಯಿತು. ಆಗ ಅವನು ದೂತರನ್ನು ಕುರಿತು ಎಲೈ ದೂತರಿರಾ !

ಇವನು ಹೇಳುವುದು ನಿಜವೇ? ಅಥವಾ ಸುಳ್ಳೆ? ಎಂಬುದನ್ನು ಇವನೊಡನೆ ಹೋಗಿ ನೋಡಿಕೊಂಡು ಬನ್ನಿರಿ ಎಂದನು. ಅವರು ಹಾಗೆಯೇ ಆಗಲೆಂದು ಅವನೊಡನೆ ಹೋಗಿ ಆ ಅರಳಿಯ ಮರವು ನಗುತ್ತಿದ್ದುದನ್ನು ನೋಡಿ ಮತ್ತೆ ಬೇಗನೆ ಬಂದು ಆ ಆಶ್ಚರ್ಯದ ಸಂಗತಿಯನ್ನು ತಿಳಿಸಿದರು.

ರಾಮನು ದೂತರ ಈ ಮಾತನ್ನು ಕೇಳಿ ಆಶ್ಚರ್ಯಗೊಂಡು ಇದು ನನ್ನ ರಾಜ್ಯದಲ್ಲಿ ಉಂಟಾದ ಒಂದು ಕೆಟ್ಟಚಿಹ್ನೆಯು. ಇದು ನನ್ನ ಅಪ್ಪಣೆಯನ್ನು ಮೀರುವ ಉದ್ದೇಶದಿಂದಲೇ ಹುಟ್ಟಿರುವುದು. ಎಂಬುದಾಗಿ ನಿಶ್ಚಯಿಸಿಕೊಂಡು ದೂತರನ್ನು ಕರೆದು ನನ್ನ ಆಜ್ಞೆಯನ್ನು ಭಂಗಮಾಡಿದ ಈ ಅರಳಿಯ ಮರವನ್ನೇ ಕಡಿದುಹಾಕಿರಿ ಎಂದನು. ರಾಮನ ಅಪ್ಪಣೆಯಂತೆ ಒಡನೆಯೇ ನೂರಾರು ಜನ ಆಳುಗಳು ಕೈಯ್ಯಲ್ಲಿ ಕೊಡಲಿ ಮುಂತಾದ ಆಯುಧಗಳನ್ನು ತೆಗೆದುಕೊಂಡು ಹೊರಟರು.

ಇವರೆಲ್ಲರೂ ಆ ಮರದ ಬಳಿಗೆ ಹೋಗಿ ಅದು ನಗುತ್ತಿದ್ದುದನ್ನು ನೋಡಿ ಆಶ್ಚರ್ಯಗೊಂಡರು. ರಾಮನ ಮಾತಿನಂತೆ ಅದನ್ನು ಕಡಿಯಲು ಪ್ರಯತ್ನಿಸಿದರು. ಅವರು ತನ್ನನ್ನು ಕಡಿಯಲು ಹತ್ತಿರಕ್ಕೆ ಬರುತ್ತಿದ್ದುದನ್ನು ನೋಡಿ ಆ ಅರಳಿಯ ಮರವು ಕಲ್ಲುಗಳನ್ನು ಅವರ ಮೇಲೆ ಎಸೆದು ಹೊಡೆಯಿತು. ಈ ಏಟಿನಿಂದ ಅವರ ಮೈಯ್ಯೆಲ್ಲವೂ ಗಾಯವಾಗಿ ರಕ್ತವು ಬಂದಿತು. ಆಗ ಅವರೆಲ್ಲರೂ ಗಾಬರಿಗೊಂಡು ಬಂದು ರಾಮನಿಗೆ ಈ ವಿಷಯವನ್ನು ತಿಳಿಸಿದರು. ಇದನ್ನು ಕೇಳಿದ ರಾಮನು ಮತ್ತೆಯೂ ಬಿಲ್ಲುಬತ್ತಳಿಕೆ, ಕತ್ತಿಗಳನ್ನು ಧರಿಸಿರುವ ಸಾವಿರಾರು ಜನ ದೂತರನ್ನು ಕರೆದು ಅವರು ಅದನ್ನು ಕಡಿಯುವಂತೆ ಹೇಳಿಕಳುಹಿಸಿದನು. ಅವರೂ ಕೂಡ ಆ ಮರದ ಬಳಿಗೆ ಹೋಗಿ ಹಿಂದಿನವರಂತೆಯೇ ಕಲ್ಲುಗಳ ಏಟನ್ನು ತಿಂದು ಮತ್ತೆ ಬಂದು ಅದರ ವಿಷಯವನ್ನು ತಿಳಿಸಿದರು. ಇದರಿಂದ ರಾಮನಿಗೆ ಬಹುವಾಗಿ ಕೋಪವು ಬಂದು ಸುಮಂತ್ರನಿಗೆ ಸೇನೆಯನ್ನು ಸಹಾಯಕ್ಕೆ ಕೊಟ್ಟು ಆ ಮರವನ್ನು ಕಡಿಯುವಂತೆ ಕಳುಹಿಸಿದನು.

ಸುಮಂತ್ರನು ರಾಮನಿಗೆ ನಮಸ್ಕರಿಸಿ ಸೇನೆಯೊಡನೆ ಆ ಮರದ ಹತ್ತಿರಕ್ಕೆ ಹೋದನು. ಆಗಲೂ ಆ ಮರವು ಕಲ್ಲುಗಳನ್ನು ಹೊಡೆಯುತ್ತಿರಲು ಹತ್ತಿರಕ್ಕೆ ಹೋಗಲು ಅವನಿಗೂ ಆಗಲೇ ಇಲ್ಲ. ಆದರೂ ಆ ಸುಮಂತ್ರನು ರಾಮನ ಅಪ್ಪಣೆಯನ್ನು ಮೀರಲಾರದೆ ಏಟನ್ನೂ ಸಹಿಸಿಕೊಂಡು ಸೈನ್ಯದೊಡನೆ ಆ ಮರದ

ಹತ್ತಿರಕ್ಕೆ ಹೋದನು. ಆಗ ಕಲ್ಲಿನೇಟುಗಳು ಮತ್ತೂ ಹೆಚ್ಚಾಗಲು ಆ ಸುಮಂತ್ರನು ನೆಲದಮೇಲೆ ಬಿದ್ದುಬಿಟ್ಟನು. ಈ ಸುಮಂತ್ರನು ಬಿದ್ದುದನ್ನು ರಾಮನಿಗೆ ದೂತರು ಬಂದು ಕೇಳಿದರು. ಆಗ ಅಯೋಧ್ಯೆಯಲ್ಲೆಲ್ಲಾ ಬಹುವಾದ ಹಾಹಾಕಾರವೆದ್ದಿತು. ಮತ್ತು ಆಶ್ಚರ್ಯವೂ ಉಂಟಾಯಿತು.

ಸುಮಂತ್ರನು ಬಿದ್ದುದನ್ನು ರಾಮನು ಕೇಳಿ ಹೆಚ್ಚಾದ ಸೈನ್ಯವನ್ನೂ ಲವಕುಶರನ್ನೂ ಸಹಾಯಕ್ಕೆ ಕೊಟ್ಟು ಶತ್ರುಘ್ನನನ್ನು ಅದನ್ನು ಕಡಿಯುವಂತೆ ಕಳುಹಿಸಿದನು.

ಈ ಆಶ್ಚರ್ಯದ ಸಂಗತಿಯನ್ನು ಕೇಳಿ ಆ ಪಟ್ಟಣದ ಹೆಂಗಸರು ಮಹಡಿಯ ಮೇಲಕ್ಕೆ ಹತ್ತಿ ಮುಖವನ್ನು ಮೇಲೆಕ್ಕೆತ್ತಿಕೊಂಡು ಆ ಮರವನ್ನು ನೋಡುತ್ತ ಪಕ್ಕದಲ್ಲಿದ್ದವರಿಗೇ ಇದೇ ಆ ಮರವು, ಎಂದು ತರ್ಜನಿಬೆಟ್ಟನಿಂದ ತೋರಿಸುತ್ತಿದ್ದರು. ಇತರ ಹೆಂಗಸರು ಮುಖದಮೇಲೆ ಜೋಲಾಡುತ್ತಿರುವ ತಲೆಗೂದಲನ್ನು ಹಿಂದಕ್ಕೆ ನೂಕಿಕೊಳ್ಳುತ್ತಾ ಹುಬ್ಬಿನಮೇಲೆ ಬೆರಳುಗಳನ್ನಿಟ್ಟುಕೊಂಡು ಸೂರ್ಯನ ಬೆಳಕನ್ನು ತಡೆದುಕೊಳ್ಳುತ್ತಾ ನೋಡುತ್ತಿದ್ದರು.

ಗಂಡಸರು ಹೆಂಗಸರಾದಿಯಾಗಿ ಪಟ್ಟಣಿಗರೆಲ್ಲರೂ ನಿಂತು ನೋಡುತ್ತಿರಲು ಶತ್ರುಘ್ನನು ರಾಮಾಜ್ಞೆಯಂತೆ ಹೊರಟು ಪಟ್ಟಣದ ಹೊರಕ್ಕೆ ಹೋದನು. ಒಡನೆಯೇ ಅವನ ಕುದುರೆಗಳು ದಾರಿಯಲ್ಲಿ ಮಲಗಿಕೊಂಡುವು. ಸಾರಥಿಯು ಎಷ್ಟು ಹೊಡೆದರೂ ಅವು ಏಳಲೇ ಇಲ್ಲ. ಈ ಶತ್ರುಘ್ನನ ಜೊತೆಯಲ್ಲಿ ಹೊರಟ ಲವಕುಶರ ಕುದುರೆಗಳೂ ಕೂಡ ದಾರಿಯಲ್ಲಿ ಮಲಗಿಕೊಂಡುವು. ಸಾರಥಿಯು ಎಷ್ಟು ಹೊಡೆದರೂ ಅವೂ ಕೂಡ ಮೇಲಕ್ಕೇಳಲೇ ಇಲ್ಲ. ಆಶ್ಚರ್ಯಕರವಾದ ಈ ವಿಷಯವನ್ನೂ ಶ್ರೀರಾಮನಿಗೆ ದೂತರು ಹೇಳಿದರು.

ಈ ವಿಷಯವನ್ನು ಕೇಳಿ ಶ್ರೀರಾಮನು ಮನಸ್ಸಿನಲ್ಲಿ ಇಂತೆಂದು ಯೋಚಿಸಿದನು. "ಈ ವಿಷಯದಲ್ಲಿ ವಿಮರ್ಶಿಸಿ ಕೆಲಸಮಾಡಬೇಕು. ದುಡಕಬಾರದು ಸುಮ್ಮನಿರುವುದೂ ಚೆನ್ನಾಗಿರುವುದಿಲ್ಲ. ಇದಕ್ಕೆ ಯಾವುದಾದರೂ ಒಂದು. ಕಾರಣವಿದ್ದೇ ಇರಬೇಕು. ಪುರೋಹಿತನನ್ನು ಕರೆಸಿ ಕೇಳೋಣ.

ಶ್ರೀರಾಮನು ಪರಮಾತ್ಮಸ್ವರೂಪದಿಂದ ಎಲ್ಲವನ್ನೂ ತಿಳಿದಿದ್ದರೂ ಮನುಷ್ಯನಾಗಿ ಅವತರಿಸಿರುವುದಕ್ಕೆ ಅನುಸಾರವಾಗಿ ಪುರೋಹಿತನಾದ ವಸಿಷ್ಠನನ್ನು ಕರೆಸಿದನು. ರಾಮನ ಅಪ್ಪಣೆಯಂತೆ ಆ ವಸಿಷ್ಠನೂ ಸಭೆಗೆ ಬಂದನು. ರಾಮನು ಅವನನ್ನು ಎದುರುಗೊಂಡು ಆಸನವನ್ನೂ ಕೊಟ್ಟು ಗೌರವಿಸಿ ನಡೆದ ವಿಷಯಗಳನ್ನೂ ತಿಳಿಸಿದನು. ಆಗ ವಸಿಷ್ಠನು ಎಲ್ಲವನ್ನು ಕೇಳಿ ಈ ವಿಷಯವನ್ನು ವಾಲ್ಮೀಕಿಯನ್ನು ಕರೆಸಿ ಕೇಳಬೇಕು. ಅವನಾದರೆ ನಿನ್ನ ಚರಿತ್ರೆಯನ್ನು ತಿಳಿದು ಬರೆದಿರುವನು ಎಂದನು. ಒಡನೆಯೇ ಗುರುವಿನ ಮಾತಿನಂತೆ ವಾಲ್ಮೀಕಿಯನ್ನು ಕರೆಸಿದನು. ವಾಲ್ಮೀಕಿಯೂ ರಾಮನ ಅಪ್ಪಣೆಯಂತೆ ಬಂದನು. ರಾಮನು ಅವನನ್ನು ಎದುರುಗೊಂಡು ಆಸನವನ್ನು ಕೊಟ್ಟು ಗೌರವಿಸಿ ಎಲ್ಲವನ್ನೂ ತಿಳಿಸಿದನು. ಆಗ ಆ ವಾಲ್ಮೀಕಿಯು ನಗುತ್ತಾ ಇಂತೆಂದನು.

ಎಲೈ ರಾಮನೆ! ನಿನಗೆ ಎಲ್ಲವೂ ತಿಳಿದಿರುವುದು. ನನ್ನನ್ನೇಕೆ ಪ್ರಶ್ನಿಸುತ್ತೀಯೆ? ನೀನು ಮನುಷ್ಯಭಾವವನ್ನು ಅವಲಂಬಿಸಿ ಕೇಳುವುದಾದರೆ ಹೇಳುತ್ತೇನೆ. ಕೇಳು. ನೀನು ಲೋಕದಲ್ಲಿ ಯಾರೂ ನಗಕೂಡದೆಂದು ನಿಷೇಧಿಸಿದೆ. ಅದಕ್ಕೆ ಶಿಕ್ಷೆಯನ್ನೂ ವಿಧಿಸಿದೆ. ನಿನ್ನ ಆ ಹೆದರಿಕೆಯಿಂದ ಹಾಸ್ಯಕರವಾದ ಕೆಲಸಗಳನ್ನೇ ಲೋಕದಲ್ಲಿ ಜನರು ಬಿಟ್ಟುಬಿಟ್ಟರು. ಮದುವೆಯಲ್ಲಿ ಉತ್ಸಾಹಕರವಾದ ಕೆಲಸಗಳು, ಕಥೆಗಳನ್ನು ಹೇಳುವುದು, ಹರಟೆಹೊಡೆಯುವುದು, ಮಂಗಳಕರವಾದ ಕೆಲಸಗಳಲ್ಲಿ ಹಾಡುವಿಕೆ, ಕುಣಿತ, ಜಾತ್ರೆಗಳು ಇವುಗಳೊಂದನ್ನೂ ಮಾಡುವುದೇ ಇಲ್ಲ ಉತ್ಸಾಹಕರವೂ ಹಾಸ್ಯಕರವೂ ಆದ ಕೆಲಸಗಳನ್ನು ಜನರು ಮಾಡದೆ ಬಿಟ್ಟುಬಿಟ್ಟು ಆಗಲೇ ಒಂದುವರ್ಷವಾಯಿತು. ಇದರಿಂದ ದುಃಖಗೊಂಡ ಉತ್ಸಾಹದೇವತೆಗಳೂ ಕರ್ಮಾಂಗದೇವತೆಗಳೂ ತಮ್ಮ ಪೂಜೆಗಳಲ್ಲಿ ಲೋಪ ಬಂದುದನ್ನು ನೋಡಿ ದುಃಖಗೊಂಡು ಬ್ರಹ್ಮನಲ್ಲಿ ಈ ವಿಷಯವನ್ನು ವಿಜ್ಞಾಪಿಸಿಕೊಂಡರು.

ಇದನ್ನು ಕೇಳಿದ ಬ್ರಹ್ಮನು ಅದನ್ನು ನಿನಗೆ ಹೇಳಲು ಅಶಕ್ತನಾದನು. ಏತಕ್ಕೆಂದರೆ ನಿನ್ನ ಹತ್ತಿರ ತನ್ನ ಶಕ್ತಿಯು ನಡೆಯುವುದಿಲ್ಲವೆಂಬುದನ್ನು ಬಲ್ಲನು. ಆದ್ದರಿಂದ ಯುಕ್ತಿಯಿಂದ ಈ ಕೆಲಸವನ್ನು ಸಾಧಿಸಬೇಕೆಂದು ನಿಶ್ಚಯಿಸಿ ಅವನು ಈ ಅರಳಿಯಮರದಲ್ಲಿ ಸೇರಿಕೊಂಡನು. ದೇವತೆಗಳಿಗೆ ಅನುಕೂಲವನ್ನು ಮಾಡಬೇಕೆಂದು ಅವನು ಈ ಅರಳಿಯಮರದಲ್ಲಿದ್ದಾನೆ. ಈ ಮರವನ್ನು ಕಡಿಯಲು ಬಂದವರಿಗೆಲ್ಲಾ ಕಲ್ಲನ್ನು ಹೊಡೆಯುತ್ತಿರುವವನು ಅವನೇ ಎಂದನು.

ಇದನ್ನು ಕೇಳಿ ರಾಮನಿಗೆ ಕೋಪಬಂದು ಹಾಗಾದರೆ ನಾನೇ ಹೋಗುತ್ತೇನೆ. ಆ ಬ್ರಹ್ಮನ ಶಕ್ತಿಯನ್ನು ನೋಡುತ್ತೇನೆ. ರಾಮನು ಒಂದು ಅಪ್ಪಣೆಯನ್ನು ಮಾಡಿದಮೇಲೆ ಅದನ್ನು ಹಿಂದಕ್ಕೆ ಹೇಗೆತಾನೆ ತೆಗೆದು ಕೊಂಡಾನು! ಎಂದೆನ್ನುತ್ತಾ ಸೇನೆಯು ಸಿದ್ಧವಾಗುವಂತೆ ಅಪ್ಪಣೆಮಾಡಿದನು.

ಇದನ್ನು ನೋಡಿ ವಾಲ್ಮೀಕಿಯು ಇಂತೆಂದು ಸಮಾಧಾನಮಾಡಿದನು. "ಎಲೈ ರಘುನಾಥನೆ! ಕೋಪವನ್ನು ಬಿಡು. ನನ್ನ ಮಾತನ್ನು ಕೇಳು. ನೀನು ಸಚ್ಚಿದಾನಂದರೂಪನು. ನಿನ್ನ ಚರಿತ್ರೆಯು ಆನಂದರೂಪವಾದುದು. ಅದನ್ನು ನಿನ್ನ ಮಕ್ಕಳ ಬಾಯಿಂದ ಸ್ವಲ್ಪಮಟ್ಟಿಗೆ ನೀನೂ ಕೇಳಿದ್ದೀಯೆ. ಅದನ್ನು ಕೇಳಿದೊಡನೆಯೇ ಮನುಷ್ಯನಿಗೆ ಆನಂದವು ಉಕ್ಕಿಬರುತ್ತದೆ. ನೀನು ಹಾಸ್ಯವನ್ನು ನಿಷೇಧಿಸಿದರೆ ಆನಂದರೂಪವಾದ ನಿನ್ನ ಈ ಚರಿತ್ರೆಯನ್ನು ಯಾರುತಾನೆ ಕೇಳಿಯಾರು? ಆನಂದವು ಸುಖರೂಪವಾದುದು. ಆ ಸುಖವು ನಗುವಿಲ್ಲದೆ ಬರುವುದಿಲ್ಲ. ಇದು ಒಂದಾಯಿತು. ಮತ್ತೊಂದು ವಿಷಯವನ್ನು ಹೇಳುತ್ತೇನೆ. ಕೇಳು. ನಾನು ನಿನ್ನ ಚರಿತ್ರೆಯನ್ನು ನೂರುಕೋಟಿ ಗ್ರಂಥರೂಪದಿಂದ ಬರೆದಿದ್ದೇನೆ. ಅದರಲ್ಲಿ ಕೆಲವು ಅಂಶಗಳನ್ನು ಸ್ವರ್ಗದವರೂ ಕೆಲವನ್ನು ಪಾತಾಳದವರೂ ತೆಗೆದುಕೊಂಡು ಹೋದರು. ಭಾರತದಲ್ಲಿ ಒಂದುಭಾಗವು ಉಳಿಯಿತು ಆದರಲ್ಲಿರುವ ಸಾರವಾದ ಬಾಗಗಳನ್ನು ಮಾತ್ರ ತೆಗೆದುಕೊಂಡು ವ್ಯಾಸಮುನಿಯು ಬರೆದಿರುವನು. ಅಲ್ಲದೆ ಇದರ ಅಂಶವನ್ನೇ ತೆಗೆದುಕೊಂಡು ಅದೇ ವ್ಯಾಸನು ಹದಿನೆಂಟು ಪುರಾಣಗಳನ್ನೂ ಅಂತೆಯೇ ಉಪಪುರಾಣಗಳನ್ನೂ ಬರೆದಿರುವನು. ಇದರ ಆಧಾರದಿಂದಲೇ ಅನೇಕ ಋಷಿಗಳು ಷಟ್‌ಶಾಸ್ತ್ರಗಳನ್ನೂ ಬರೆದಿರುವರು" ಅದರಲ್ಲಿರುವ ಸಾರವನ್ನೇ ತೆಗೆದುಕೊಂಡು ಇನ್ನೂ ಮುಂದೆ ಎಷ್ಟೋ ಜನರು ಎಷ್ಟೋ ಗ್ರಂಥಗಳನ್ನು ಬರೆಯುತ್ತಾರೆ. ಈ ಹಾಸ್ಯದ ವಿಷಯವನ್ನು ಬಿಟ್ಟರೆ ನೀನು ಕೈಕೇಯಿಯ ದುಷ್ಟಭಾವದಿಂದ ಸೀತೆಯೊಡನೆ ಕಾಡಿಗೆ ಹೊರಟ ಹದಿನಾಲ್ಕು ಸಂವತ್ಸರಗಳ ಶೋಕರೂಪವಾದ ಕಥೆಯು ಮಾತ್ರ ಉಳಿಯುತ್ತದೆ. ಅದನ್ನೇ ಇದು ನಮ್ಮ ವಾಲ್ಮೀಕಿಯು ಮಾಡಿದುದೆಂದು ಹೇಳುತ್ತಾರೆ. ಅಲ್ಲದೆ ಶೋಕರಸವನ್ನೂ ಅದರ ಉಪಯೋಗವನ್ನೂ ಮೊದಲೇ ಹೇಳಿದ್ದೇನೆ. ಯುದ್ಧದ ವಿಷಯವನ್ನು ಬೆಳಗಿನ ಹೊತ್ತಿನಲ್ಲಿ ಕೇಳಬೇಕು. ಶೋಕದ ವಿಷಯವನ್ನು ಅಪರಾಹ್ಣದಲ್ಲಿ ಕೇಳಬೇಕು. ರತಿಯ ವಿಷಯವನ್ನು ರಾತ್ರಿಯಲ್ಲಿ ಕೇಳಬೇಕು. ಆನಂದವನ್ನು ಎಂದರೆ ಹಾಸ್ಯವನ್ನು ಯಾವಾಗಲೂ ಕೇಳಬಹುದು. ಯುದ್ಧವೆಂದರೆ ಭಾರತವು. ರತಿಯೆಂದರೆ ಭಾಗವತವು,

ಉಳಿದುವು ಶೋಕದುವು. ನನಗಿರುವ ವರದ ಬಲದಿಂದ ನೀನು ಹುಟ್ಟುವುದಕ್ಕೆ ಮೊದಲೇ ನಿನ್ನ ಚರಿತ್ರೆಯನ್ನು ನೂರುಕೋಟಿಯ ಗ್ರಂಥಗಳಿಂದ ಬರೆವಿದ್ದೇನೆ. ಇದರಲ್ಲಿ ನೂರಎಂಟು ಸರ್ಗಗಳು ನಿನ್ನ ಚರಿತ್ರೆಯೇ ಆಗಿದೆ. ಇದು ರಾಮಚರಿತ್ರೆಯೆಂದು ತಿಳಿದು ಯಾವನೂ ಖಂಡಿಸುವುದಿಲ್ಲ. ಇದು ಸೂರ್ಯಚಂದ್ರರಿರುವವರೆಗೂ ಭೂಮಿಯಲ್ಲಿರುತ್ತದೆ. ಆದ್ದರಿಂದ ನೀನು ಹಾಸ್ಯವನ್ನು ನಿಷೇಧಿಸಿದರೆ ನಿನ್ನ ಚರಿತ್ರೆಯೇ ಬವಲಾವಣೆಯಾದಂತಾಗುತ್ತದೆ. ಹಾಗೆ ಮಾಡಬೇಡ. ಈ ಹಾಸ್ಯದ ಭಾಗವನ್ನು ಬಿಟ್ಟರೆ ನಿನ್ನ ಚರಿತ್ರೆಯೆಲ್ಲವೂ ದುಃಖದಿಂದ ಕೂಡಿದುದೇ ಆಗಿಹೋಗುತ್ತದೆ. ಹಾಗೆ ಮಾಡಬೇಡವೆಂದು ನಾನು ನಿನ್ನನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಆದರೆ ನಿನ್ನ ಅಪ್ಪಣೆಗೆ ಲೋಪಬಂದಂತಾಯಿತೆಂದು ತಿಳಿಯಬೇಡ. ನಿನ್ನ ಆಜ್ಞೆಗೆ ಭಂಗಬರದಂತೆಯೂ ದೇವತೆಗಳು ತುಷ್ಟರಾಗುವಂತೆಯೂ ಎಲ್ಲರಲ್ಲಿಯೂ ಹಾಸ್ಯವು ಉಳಿಯುವಂತೆಯೂ ಆಗಬೇಕು. ನಗುಬಂದಾಗ ಜನರು ನಗುವನ್ನು ಹಲ್ಲುಮುಚ್ಚಿಕೊಂಡಿರುವಂತೆಯೇ ನಗಲಿ. ಒಂದುವೇಳೆ ಹೆಚ್ಚಾಗಿ ನಗುಬಂದರೆ ಬಟ್ಟೆಯನ್ನು ಮುಚ್ಚಿಕೊಂಡು ನಗಲಿ. ನಗುವಿಕೆಯು ಲಕ್ಷ್ಮೀಸೂಚಕವು. ಹಾಸ್ಯವು ಸೌಖ್ಯವನ್ನು ಕೊಡುತ್ತದೆ. ಹಾಸ್ಯವು ಮಂಗಳದಾಯಕವು ಹಾಸ್ಯಕ್ಕಿಂತಲೂ ಶ್ರೇಷ್ಠವಾದುದು ಮತ್ತೊಂದಿಲ್ಲ. ಹೆಂಗಸು ನಗುಮುಖದಿಂದಿದ್ದರೆ ಅದು ಒಂದುಮನೆ ಎನ್ನಿಸಿಕೊಳ್ಳುತ್ತದೆ. ಆ ಮನೆಯಲ್ಲಿ ಸಂಪತ್ತು ನೆಲೆಯಾಗಿ ನಿಲ್ಲುತ್ತದೆ. ಯಾವ ಮನುಷ್ಯನು ಯಾವಾಗಲೂ ನಗುಮುಖದಿಂದಿರುವನೋ ಅವನೇ ಧನ್ಯನು. ಯಾವನು ಯಾವಾಗಲೂ ಕೋಪದಿಂದಿರುವನೋ ಅವನೇ ನಿಂದ್ಯನು. ಹೆಚ್ಚು ನಗುವಿಕೆಯನ್ನು ಮುನಿಗಳು ನಿಂದಿಸಿದ್ದಾರೆ. ಅತಿ ಹಾಸ್ಯವು ಕೂಡದು. ಅದ್ದರಿಂದ ಈ ನನ್ನ ಮಾತನ್ನು ಗೌರವಿಸೆಂದು ಕೇಳಿಕೊಳ್ಳುತ್ತೇನೆ. ಬ್ರಹ್ಮನೂ ಕೂಡ ನಿನ್ನ ವಿಷಯದಲ್ಲಿ ಬಲವನ್ನು ತೋರಿಸುತ್ತಿಲ್ಲ. ಅವನು ನಿನ್ನನ್ನು ತಂದೆಯೆಂದು ತಿಳಿದುಕೊಂಡಿದ್ದಾನೆ. ನಾನೂ ಕೂಡ ಆ ಬ್ರಹ್ಮನನ್ನು ಕರೆಸಿ ನಿನಗೆ ಶರಣಾಗತನಾಗುವಂತೆ ಹೇಳುತ್ತೇನೆ. ಎಂಬದಾಗಿ ಆ ವಾಲ್ಮೀಕಿಯು ಹೇಳಲು ರಾಮನು ಆ ವಾಲ್ಮೀಕಿಯಲ್ಲಿರುವ ಗೌರವದಿಂದ ಹಾಗೆಯೇ ಆಗಲೆಂದು ಒಪ್ಪಿಕೊಂಡನು. ವಾಲ್ಮೀಕಿಯು ಆಗ ಶಿಷ್ಯರನ್ನು ಕಳುಹಿಸಿ ಬ್ರಹ್ಮನನ್ನು

ಕರೆಸಿದನು. ಕುದುರೆಗಳೆಲ್ಲವೂ ಮೇಲಕ್ಕೆದ್ದು ಪಟ್ಟಣಕ್ಕೆ ಹೋದುವು. ಶತ್ರುಘ್ನನೂ ಲವಕುಶರೂ ರಾಮನ ಬಳಿಗೆ ಬಂದರು. ರಾಮನ ಅಪ್ಪಣೆಯಂತೆ ಸೌದೆಯುವನನ್ನು ಬಿಟ್ಟುಬಿಟ್ಟರು. ಇಂದ್ರನು ಗಾಯಗೊಂಡವರಮೇಲೆ ಅಮೃತ ವನ್ನು ಚೆಲ್ಲಲು ಅವರೆಲ್ಲರೂ ಹಿಂದಿನಂತಾದರು. ಅವರೆಲ್ಲರೂ ರಾಮನ ಬಳಿಗೆ ಬಂದರು. ಇಂದ್ರನು ರಾಮನಿಗೆ ನಮಸ್ಕರಿಸಿ ಹೊರಟುಹೋದನು. ಬ್ರಹ್ಮನು ರಾಮನನ್ನು ಸ್ತುತಿಸಿ ಅವನ ಅಪ್ಪಣೆಯನ್ನು ಪಡೆದು ಹೊರಟುಹೋದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ ಚತುರ್ದಶಸ್ಸರ್ಗಃ

॥ ವಸಿಷ್ಠ ಉವಾಚ ॥

ತೌ ಗಣೌ ದೇವಶಪ್ತೌ ತೌ ಕಥಮುದ್ಧಾರಿತೌ ವದ ।
ಪುರಾ ದ್ವಿವಾರಂ ರಾಮೇಣಾಗ್ರೇ ಕಥಂ ಚೋದ್ಧರಿಷ್ಯತಿ ॥ ೧ ॥

ತದ್ವಸಿಷ್ಠ ವಚಶ್ಶ್ರುತ್ವಾ ವಿಧಿಃ ಪ್ರಾಹ ವಿಹಸ್ಯ ತಂ ।
ಸರ್ವಂ ವೇತ್ಸಿ ಭವಾನ್ ಲೋಕಾನ್ ಜ್ಞಾತುಂ ಚೇನ್ಮಾಂ ಹಿ ಪೃಚ್ಛಸಿ ॥ ೨ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ಹದಿನಾಲ್ಕನೆಯ ಸರ್ಗವು

೧. ವಸಿಷ್ಠನು ಹೇಳಿದನು—ಎಲೈ ಬ್ರಹ್ಮನೇ! ದೇವತೆಗಳಿಂದ ಶಾಪವನ್ನು ಹೊಂದಿದ ಆ ಗಣಗಳಾರು? ಅವರು ಉದ್ಧಾರವನ್ನು ಹೊಂದಿದುದು ಹೇಗೆ? ಹಿಂದೆ ಎರಡುಸಾರಿ ಸ್ವಾಮಿಯು ಅವರನ್ನು ಹೇಗೆ ಉದ್ಧಾರಮಾಡಿದನು? ಮುಂದೆ ಒಂದುಸಾರಿ ಉದ್ಧಾರಮಾಡುವುದು ಹೇಗೆ?

೨. ವಸಿಷ್ಠನು ಇಂತೆಂದುದನ್ನು ಕೇಳಿ ಬ್ರಹ್ಮನು ನಕ್ಕು ಆ ವಸಿಷ್ಠನನ್ನು ಕುರಿತು ನಗುತ್ತ ಇಂತೆಂದನು. ಎಲೈ ವಸಿಷ್ಠನೇ! ನೀನು ಲೋಕದ ವಿಷಯಗಳೆಲ್ಲವನ್ನೂ ತಿಳಿದಿದ್ದೀಯೆ. ಆದರೂ ಲೋಕದ ಜನಗಳು ತಿಳಿಯಲು ನನ್ನನ್ನು ಕೇಳುತ್ತಾ ಇದ್ದೀಯೆ.

ವದಾಮ್ಯಹಂ ತರ್ಹಿ ಸರ್ವಂ ಗಣಯೋಶ್ಶಾಪಕಾರಣಂ ।
ಏಕದಾಯಂ ಮಹಾವಿಷ್ಣುರ್ವೈಕುಂಠೇ ರಮಯಾ ರಹಃ ॥ ೩ ॥

ಸಂಸ್ಥಿತಶ್ಚ ತದಾ ದ್ವಾರಿ ವಿಷ್ಣುಂ ದ್ರಷ್ಟುಂ ಸುರೋತ್ತಮೌ ।
ತಾವಶ್ವಿನೀಕುಮಾರೌ ಹಿ ಸಮಾಜಗ್ಮತುರಾದರಾತ್ ॥ ೪ ॥

ಸಮಾಗತೌ ದೇವವೈದ್ಯೌ ತೌ ದೃಷ್ಟ್ವಾ ದ್ವಾರರಕ್ಷಕೌ ।
ಜಯವಿಜಯನಾಮಾನೌ ತಯೋರಗ್ರೇ ಪ್ರಜಗ್ಮತುಃ ॥ ೫ ॥

ತಾಭ್ಯಾಂ ವೈದ್ಯೌ ತದಾ ಪ್ರೋಕ್ತೌ ವಿಷ್ಣುಸ್ತಿಷ್ಠತಿ ವೈ ರಹಃ ।
ನಾಯಂ ಕಾಲೋ ದರ್ಶನಸ್ಯ ತಚ್ಛ್ರುತ್ವಾ ಪ್ರೋಚತುಸ್ಸುತೌ ॥ ೬ ॥

ಅಧುನಾ ದ್ರಷ್ಟುಮಿಚ್ಛಾವೋ ವಿಷ್ಣುಂ ಕಥಯತೌ ಗಣೌ ।
ದ್ವಾಸ್ಥಾವಯೋರಾಗಮನಂ ಯುವಾಂ ಶ್ರುಣುತ ಚೇರಿತೌ ॥ ೭ ॥

---

೩. ಆದ್ದರಿಂದ ಆ ಗಣಗಳ ಶಾಪಕಾರಣವನ್ನು ಸಮಗ್ರವಾಗಿ ಹೇಳುತ್ತೇನೆ. ಕೇಳು. ಒಂದುಸಾರಿ ಶ್ರೀ ಮಹಾವಿಷ್ಣುವು ವೈಕುಂಠದಲ್ಲಿ ಲಕ್ಷ್ಮಿಯೊಡನೆ ರಹಸ್ಯದಲ್ಲಿದ್ದನು.

೪-೫. ಆಗ ಆ ಮಹಾವಿಷ್ಣುವನ್ನು ನೋಡಲು ದೇವತೋತ್ತಮರಾದ ಅಶ್ವಿನೀಕುಮಾರರು ಬಂದರು. ದೇವವೈದ್ಯರಾದ ಅಶ್ವಿನೀಕುಮಾರರು ಬಂದುದನ್ನು ದ್ವಾರಪಾಲಕರಾದ ಜಯವಿಜಯರು ನೋಡಿ ಅವರ ಎದುರಿಗೆ ಹೋದರು.

೬. ಆ ಅಶ್ವಿನೀದೇವತೆಗಳನ್ನು ಕುರಿತು ಜಯವಿಜಯರು ದೇವತೋತ್ತಮರಿರಾ ! ವಿಷ್ಣುವು ಈಗ ಏಕಾಂತದಲ್ಲಿರುವನು. ಇದು ಅವನ ದರ್ಶನಕ್ಕೆ ಕಾಲವಲ್ಲ. ಎನ್ನಲು ಇದನ್ನು ಕೇಳಿ ಆ ಅಶ್ವಿನೀದೇವತೆಗಳು ಇಂತೆಂದರು.

೭. ಎಲೈ ಗಣಗಳಿರಾ ! ಈಗಲೇ ನಾವು ಆ ವಿಷ್ಣುವನ್ನು ನೋಡಬೇಕು. ನೀವು ಹೋಗಿ ಆ ವಿಷ್ಣುವಿಗೆ ನಾವು ಬಂದು ಬಾಗಿಲಿನಲ್ಲಿ ನಿಂತಿರುವೆವೆಂದು ತಿಳಿಸಿರಿ. ಅವನು ಏನುಹೇಳುವನೋ ಅದನ್ನು ಕೇಳಿಕೊಂಡು ಬನ್ನಿರಿ.

ತತ್ತಯೋರ್ವಚನಂ ಶ್ರುತ್ವಾ ತೌ ಪುನಃ ಪ್ರೋಚತುರ್ಗಣೌ ।
ನ ಗಚ್ಛಾವೋ ಮಹಾವಿಷ್ಣುಮಾವಾಂ ಲಕ್ಷ್ಮ್ಯಾ ರಹಃ ಸ್ಥಿತಂ । ॥ ೮ ॥

ಏವಂ ತ್ರಿವಾರಂ ತಾಭ್ಯಾಂ ತೌ ಪ್ರೋಕ್ತೌ ನೇತ್ಯೂಚತುರ್ಗಣೌ ।
ತದಾಶ್ವಿನೀ ಕುಮಾರೌ ತೌ ಪ್ರೋಚತುಃ ಕ್ರೋಧಮೂರ್ಛಿತೌ ॥ ೯ ॥

ಆವಯೋರ್ವಚನಂ ನೈವ ಯುವಾಭ್ಯಾಂ ಹಿ ಶ್ರುತಂ ಗಣೌ ।
ಯತಸ್ತ್ರಿವಾರಂ ತಸ್ಮಾದ್ಧಿ ಯುವಾಂ ಜನ್ಮತ್ರಯಂ ಭುವಿ ॥ ೧೦ ॥

ಲಪ್ಸ್ಯಥಶ್ಚ ನ ಸಂದೇಹಸ್ತಚ್ಛ್ರುತ್ವಾ ವಚನಂ ತಯೋಃ ।
ಗಣಾವಪಿ ತಯೋಶ್ಶಾಪಂ ದದತುರ್ದೇವವೈದ್ಯಯೋಃ ॥ ೧೧ ॥

ವಿನಾಪರಾಧತಶ್ಶಾಪೋ ಯುಸ್ಮಾದ್ದತ್ತಸ್ತು ಚಾವಯೋಃ ।
ಏಕವಾರಂ ಯುವಾಂ ಚಾಪಿ ಜನ್ಮಾತಶ್ಚಾಸ್ತು ವೈ ಭುವಿ ॥ ೧೨ ॥

---

೮. ಈ ಅಶ್ವಿನೀದೇವತೆಗಳು ಹೇಳಿದುದನ್ನು ಈ ಗಣಗಳು ಕೇಳಿ ಎಲೈ ದೇವಶ್ರೇಷ್ಠರಿರಾ ! ಈಗ ನಾವು ವಿಷ್ಣುವಿನ ಬಳಿಗೆ ಹೋಗುವುದಿಲ್ಲ ಆತನು ಲಕ್ಷ್ಮಿಯೊಡನೆ ಏಕಾಂತದಲ್ಲಿರುವನು ಎಂದರು.

೯. ಆ ಅಶ್ವಿನೀದೇವತೆಗಳು ಆ ಗಣಗಳಿಗೆ ಮೂರುಬಾರಿ ಹೇಳಿದರೂ ಕೂಡ ಅವರು ಆಗುವುದೇ ಇಲ್ಲವೆಂದರು. ಆಗ ಅಶ್ವಿನೀಕುಮಾರರಿಗೆ ಕೋಪ ಬಂದು ಅವರನ್ನು ಕುರಿತು ಇಂತೆಂದರು.

೧೦. ಎಲೈ ಗಣಗಳಿರಾ ! ನಾವು ಹೇಳಿದ ಮಾತನ್ನು ನೀವು ಕೇಳುವುದೇ ಇಲ್ಲ. ನಾವು ಒಂದಲ್ಲ. ಎರಡಲ್ಲ. ಮೂರುಬಾರಿ ಹೇಳಿದರೂ ಲಕ್ಷಿಸಲಿಲ್ಲ ವಾದುದರಿಂದ ನೀವು ಭೂಮಿಯಲ್ಲಿ ಮೂರುಬಾರಿ ಜನ್ಮವೆತ್ತಿರಿ. ಇದಕ್ಕೆ ಸಂದೇಹವಿಲ್ಲ.

೧೧ ಅಶ್ವಿನೀದೇವತೆಗಳು ಇಂತೆಂದು ಶಪಿಸಿದುದನ್ನು ಕೇಳಿ ಆ ಜಯ ವಿಜಯರು ತಾವೂ ಆ ಅಶ್ವಿನಿದೇವತೆಗಳಿಗೆ ಇಂತೆಂದು ಶಾಪವನ್ನು ಕೊಟ್ಟರು.

೧೨. ಎಲೈ ದೇವವೈದ್ಯರಿರಾ ! ನಾವು ಅಪರಾಧಿಗಳಲ್ಲದಿದ್ದರೂ ನಮಗೆ ನೀವು ಶಾಪವನ್ನು ಕೊಟ್ಟಿದರಿಂದ ನೀವೂ ಕೂಡ ಒಂದುಬಾರಿ ಭೂಮಿಯಲ್ಲಿ ಜನ್ಮವನ್ನು ತಾಳಿರಿ.

ಏವಂ ಪರಸ್ಪರಂ ಶಾಪಂ ಲಬ್ಧ್ವಾ ಹಾಹೇತಿ ಚುಕ್ರುಶುಃ ।
ತದಾ ಕೋಲಾಹಲಶ್ಚಾಸೀದಾಹ್ವಯಾಮಾಸ ತಾನ್ ಹರಿಃ ॥ ೧೩ ॥

ತತಸ್ತತ್ಸಕಲಂ ವೃತ್ತಂ ಪ್ರೋಚುಸ್ತೇ ಜಗದೀಶ್ವರಂ ।
ಚತ್ವಾರಸ್ತೇ ಮಹಾವಿಷ್ಣುಂ ಪ್ರಾರ್ಥಯಾಮಾಸುರಾದರಾತ್ ॥ ೧೪ ॥

ಯೇನ ಶೀಘ್ರಂ ವಿಮುಕ್ತಿಸ್ಸ್ಯಾತ್ತನ್ನೋ ವದ ಮಹೇಶ್ವರ ।
ತತಃ ಪ್ರೋವಾಚ ತಾನ್ವಿಷ್ಣುರ್ಮುಕ್ತಿಶ್ಶೀಘ್ರಂ ಶುಭಾತ್ರ ಹಿ ॥ ೧೫ ॥

ಮಯಿ ಭಕ್ತ್ಯಾ ವಿರೋಧಿನ್ಯಾ ಜಾಯತೇ ನಾತ್ರ ಸಂಶಯಃ ।
ಸಪ್ತಜನ್ಮಾಂತರೈರೇವ ಮದ್ಭಕ್ತ್ಯಾ ಜಾಯತೇ ಗತಿಃ ॥ ೧೬ ॥

---

೧೩. ಈ ರೀತಿಯಾಗಿ ಅವರು ಪರಸ್ಪರವಾಗಿ ಶಾಪವನ್ನು ಕೊಟ್ಟು ಕೊಂಡು ಹಾಹಾ ಎಂಬದಾಗಿ ಗೋಳಿಟ್ಟರು. ಇದರಿಂದ ಕೋಲಾಹಲವು ಹೆಚ್ಚಾಗಲು ಇದನ್ನು ಕೇಳಿ ವಿಷ್ಣುವು ಅವರನ್ನು ಕರೆಸಿದನು.

೧೪. ಆಗ ಅವರು ನಾಲ್ವರೂ ಸ್ವಾಮಿಯ ಬಳಿಗೆ ಹೋಗಿ ಅಲ್ಲಿ ನಡೆದ ಸಮಾಚಾರವನ್ನೆಲ್ಲಾ ವಿಷ್ಣುವಿಗೆ ಹೇಳಿ ದೈನ್ಯದಿಂದ ಅವನನ್ನು ಬೇಡಿ ಕೊಂಡರು.

೧೫. ಎಲೈ ಮಹೇಶ್ವರನೆ! ನಮಗೆ ಈ ಶಾಪವು ಬೇಗನೆ ಪರಿಹಾರ ವಾಗುವ ಮಾರ್ಗವನ್ನು ಹೇಳು. ಎಂದೆನಲು ಅವರನ್ನು ಕುರಿತು ಹೇಗೆ ಮಾಡಿದರೆ ಮುಕ್ತಿಯು ಬೇಗನೆ ದೊರೆಯುತ್ತದೆಯೋ ಅದನ್ನು ಹೇಳುತ್ತೇನೆ. ಕೇಳಿರಿ.

೧೬. ನನ್ನಲ್ಲಿ ವಿರೋಧರೂಪವಾದ ಭಕ್ತಿಯಿಂದ ನಿಮಗೆ ಬೇಗನೆ ಮುಕ್ತಿಯು ಲಭಿಸುತ್ತದೆ. ಏಳುಜನ್ಮಗಳನ್ನು ಹೊಂದಿ ನನ್ನನ್ನು ಸೇವಿಸಿದರೆ ನನ್ನಲ್ಲಿ ಸ್ನೇಹರೂಪವಾದ ಭಕ್ತಿಯಿಂದ ಮೋಕ್ಷವು ಸಿಕ್ಕುತ್ತದೆ.

ಯುಷ್ಮಾಕಂ ರೋಚತೇ ಯಾ ಸಾ ಭಕ್ತಿಃ ಕಾರ್ಯಾವನೀತಲೇ ।
ತದ್ವಿಷ್ಣೋರ್ವಚನಂ ಶ್ರುತ್ವಾ ತೇ ಪ್ರೋಚುರ್ಜಗದೀಶ್ವರಂ ॥ ೧೭ ॥

ನೋಽಸ್ತು ಭಕ್ತ್ಯಾ ವಿರೋಧಿನ್ಯಾ ಶೀಘ್ರಂ ತೇ ದರ್ಶನಂ ಪುನಃ ।
ತಥೇತ್ಯುಕ್ತ್ವಾ ರಮಾನಾಥಸ್ತಾನ್ ಸರ್ವಾನ್ ಸ ವಿಸರ್ಜಯತ್ ॥ ೧೮ ॥

ತೇ ಜನ್ಮಾನಿ ತತಃ ಪ್ರಾಪುರ್ಜಗತ್ಯಾಂ ಮುನಿಸತ್ತಮ ।
ಜಯೋ ಜಾತೋ ಹಿರಣ್ಯಾಕ್ಷೋ ಹಿರಣ್ಯಕಶಿಪುಸ್ತಥಾ ॥ ೧೯ ॥

ಜಾತೋತ್ರ ವಿಜಯಃ ಪೂರ್ವಂ ತೌ ಹತೌ ವಿಷ್ಣುನಾ ಪುರಾ ।
ವಾರಾಹರೂಪಿಣಾನೇನ ಹಿರಣ್ಯಾಕ್ಷೋ ವಿದಾರಿತಃ ॥ ೨೦ ॥

ನಾರಸಿಂಹಸ್ವರೂಪೇಣ ಹಿರಣ್ಯಕಶಿಪುರ್ಹತಃ ।
ತತಃ ಪುನರ್ದ್ವಿತೀಯಂ ಹಿ ಜನ್ಮ ತೌ ಪ್ರಾಪತುರ್ಭುವಿ ॥ ೨೧ ॥

---

೧೭. ಇವೆರಡಲ್ಲಿ ನಿಮಗೆ ಯಾವ ರೀತಿಯಾದ ಭಕ್ತಿಯು ಬೇಕೋ ಅಂತಹ ಭಕ್ತಿಯನ್ನು ಭೂಲೋಕದಲ್ಲಿ ಹುಟ್ಟಿ ಆಚರಿಸಿರಿ. ವಿಷ್ಣುವು ಇಂತೆಂದುದನ್ನು ಕೇಳಿ ಅವರು ಆ ಸ್ವಾಮಿಯನ್ನು ಕುರಿತು ಇಂತೆಂದರು.

೧೮. ಎಲೈ ವಿಷ್ಣುವೇ! ನಿನ್ನನ್ನು ನಾವು ಬೇಗ ಹೊಂದ ಬೇಕಾದುದರಿಂದ ವಿರೋಧರೂಪವಾದ ಭಕ್ತಿಯಿಂದಲೇ ನಿನ್ನ ದರ್ಶನವು ಮತ್ತೆ ಲಭಿಸಲಿ. ಎನ್ನಲು ವಿಷ್ಣುವು ಹಾಗೆಯೇ ಆಗಲೆಂದು ಹೇಳಿ ಅವರೆಲ್ಲರನ್ನೂ ಕಳುಹಿಸಿದನು.

೧೯-೨೧. ಎಲೈ ಮುನಿಶ್ರೇಷ್ಠನೆ! ಅನಂತರ ಅವರು ಭೂಮಿಯಲ್ಲಿ ಜನ್ಮವನ್ನು ತಾಳಿದರು. ಜಯನು ಹಿರಣ್ಯಾಕ್ಷನಾದನು. ವಿಜಯನು ಹಿರಣ್ಯ ಕಶಿಪುವಾದನು. ವರಾಹಾವತಾರವನ್ನು ಮಾಡಿ ಹಿರಣ್ಯಾಕ್ಷನನ್ನೂ ನರಸಿಂಹಾ ವತಾರವನ್ನು ಮಾಡಿ ಹಿರಣ್ಯಕಶಿಪುವನ್ನೂ ಹಿಂದೆ ಆ ಸ್ವಾಮಿಯು ಕೊಂದನು. ಅನಂತರ ಆ ಜಯವಿಜಯರು ಎರಡನೆಯ ಜನ್ಮವನ್ನು ತಾಳಿದರು.

ಜಯೋ ಜಾತೋ ರಾವಣೋತ್ರ ಕುಂಭಕರ್ಣಸ್ತಥಾಪರಃ ।
ಜಾತೋ ವಿಜಯನಾಮಾ ಹಿ ರಾಮೇಣಾನೇನ ತೌ ಹತೌ ॥ ೨೨ ॥

ತಾವಶ್ವಿನೀಕುಮಾರೌ ಹಿ ಏಕಶ್ಚೈರಾವಣಃ ಸ್ಮೃತಃ ।
ಮೈರಾವಣಶ್ಚ ತ್ವಪರ ಏವಂ ತೌ ಜನಿತಾ ವಧಃ ॥ ೨೩ ॥

ಪಾತಾಲೇ ವರದಾನಾಚ್ಚ ರಾಮಹಸ್ತಾನ್ಮೃತಿಂ ಗತೌ ।
ಅಗ್ರೇ ಜಯಶ್ಶಿಶುಪಾಲೋ ಭವಿಷ್ಯತಿ ನ ಸಂಶಯಃ ॥ ೨೪ ॥

ವಿಜಯೋ ದಂತವಕ್ತ್ರಶ್ಚ ಭವಿಷ್ಯತ್ಯವನೀತಲೇ ।
ದ್ವಾಪರೇ ಕೃಷ್ಣರೂಪೇಣ ಶಿಶುಪಾಲಂ ಹರಿಃ ಸ್ವಯಂ ॥ ೨೫ ॥

ವಧಿಷ್ಯತಿ ದಂತವಕ್ತ್ರಂ ತಥೈವ ಮುನಿಸತ್ತಮ ।
ಏವಂ ಜನ್ಮತ್ರಯಂ ಶಾಪಾದ್ಭುಕ್ತ್ವಾ ತೌ ಭಗವದ್ಗಣೌ ॥ ೨೬ ॥

---

೨೨. ಜಯನು ರಾವಣನಾಗಿಯೂ ವಿಜಯನು ಕುಂಭಕರ್ಣನಾಗಿಯೂ ಹುಟ್ಟಿ ಎರಡನೆಯ ಜನ್ಮವನ್ನು ತಾಳಿದರು. ಅವರಿಬ್ಬರನ್ನೂ ಈ ರಾಮನೇ ಕೊಂದನು.

೨೩--೨೪. ಆ ಅಶ್ವಿನೀಕುಮಾರರಲ್ಲಿ ಒಬ್ಬನು ಐರಾವಣನಾಗಿ ಹುಟ್ಟಿದನು. ಮತ್ತೊಬ್ಬನು ಮೈರಾವಣನಾಗಿ ಹುಟ್ಟಿದನು. ಈ ರೀತಿಯಾಗಿ ಅವರಿಬ್ಬರೂ ಪಾತಾಳದಲ್ಲಿ ಅವತರಿಸಿ ವರದಾನದಿಂದ ಮಡಿಸಿ ಈ ರಾಮನ ಕೈಯ್ಯಿಂದಲೇ ಮರಣವನ್ನು ಹೊಂದಿದರು. ಮುಂದಿನ ಜನ್ಮದಲ್ಲಿ ಜಯನು ಶಿಶುಪಾಲನಾಗಿ ಹುಟ್ಟುವನು.

೨೫--೨೬. ವಿಜಯನು ದಂತವಕ್ರನಾಗಿಯೂ ಹುಟ್ಟುವನು. ಈ ರೀತಿಯಾಗಿ ಆ ಸ್ವಾಮಿಯ ಗಣಗಳು ಮೂರುಜನ್ಮವನ್ನು ಶಾಪದಿಂದ ಹೊಂದಿದರು. ದ್ವಾಪರದಲ್ಲಿ ಕೃಷ್ಣಾವತಾರ ಮಾಡಿ ಹರಿಯು ಶಿಶುಪಾಲನನ್ನೂ ಅಂತೆಯೇ ದಂತವಕ್ರನನ್ನೂ ಕೊಲ್ಲುವನು. ಈ ರೀತಿಯಾಗಿ ಆ ಭಗವಂತನ ಗಣಗಳು ಶಾಪದಿಂದ ಮೂರು ಜನ್ಮಗಳನ್ನು ಹೊಂದುವರು.

ಜಯವಿಜಯನಾಮಾನೌ ಪೂರ್ವವತ್ ಸ್ವಾಸ್ಯತುಶ್ಯುಭೌ ।
ದ್ವಾರದೇಶಸ್ಥ ವೈ ವಿಷ್ಣೋರ್ವೈಕುಂಠೇ ದುಃಖವರ್ಜಿತೇ ॥ ೨೭ ॥

ತಾವಶ್ವಿನೌ ದೇವವೈದ್ಯೌ ಪೂರ್ವವದ್ದಿವಿ ತೌ ಸ್ಥಿತೌ ।
ಏವಂ ಮುನೇ ತ್ವಯಾ ಪೃಷ್ಟಂ ತನ್ಮಯಾ ಪರಿವರ್ಣಿತಂ ॥ ೨೮ ॥

ಭಗವದ್ಗಣಯೋಃಶ್ಯಾಪಕಾರಣಂ ಚ ಪುರಾತನಂ ।
ಏವಂ ರಾಘವ ಚಾಗ್ರೇ ತ್ವಂ ದ್ವಾಪರೇ ಪರಮೇ ಶುಭೇ ॥ ೨೯ ॥

ಜರಾಸಂಧಾದಿವೀರೈಶ್ಚ ಕಂಸಾದ್ಯೈರಪಿ ಭೂತಲಂ ।
ಖಿನ್ನಂ ದೃಷ್ಟ್ವಾತ್ರಾವತೀರ್ಯ ಕೃಷ್ಣರೂಪೇಣ ಲೀಲಯಾ । ॥ ೩೦ ॥

ಸರ್ವಾನ್ ಹತ್ವಾ ತೋಷಯುಕ್ತಾಂ ಕರಿಷ್ಯಸಿ ಮಹೀತಲಂ
ತಾನ್ಬೌದ್ಧಾನ್ಬುದ್ಧರೂಪೇಣ ಕಲಾವಗ್ರೇ ವಿಜೇಷ್ಯಸಿ ॥ ೩೧ ॥

---

೨೭. ಅನಂತರ ಆ ಜಯವಿಜಯರು ಮುಕ್ತಿಯನ್ನು ಹೊಂದಿ ಮೊದಲಿನಂತೆಯೇ ದುಃಖವರ್ಜಿತವಾದ ವೈಕುಂಠದಲ್ಲಿ ಆ ಸ್ವಾಮಿಯ ಬಾಗಿಲನ್ನು ಕಾಯುವವರಾಗಿ ನಿಲ್ಲುವರು.

೨೮. ಆ ಅಶ್ವಿನೀದೇವತೆಗಳೂ ತಮ್ಮ ಶಾಪವನ್ನು ಮುಗಿಸಿಕೊಂಡು ದೇವಲೋಕದಲ್ಲಿ ಮೊದಲಿನಂತೆಯೇ ಇದ್ದರು. ಎಲೈ ವಸಿಷ್ಠನೆ! ನೀನು ಕೇಳಿದುದನ್ನು ನಾನು ವರ್ಣಿಸಿದ್ದೇನೆ.

೨೯--೩೦. ಭಗವಂತನಾದ ಸ್ವಾಮಿಯ ಗಣಗಳ ಶಾಪಕಾರಣವನ್ನು ಸ್ವಲ್ಪವೂ ಬಿಡದೆ ಹೇಳಿದ್ದೇನೆ. ಎಲೈ ರಾಮನೆ! ನೀನು ಮುಂದೆ ಪರಮ ಶುಭವಾದ ದ್ವಾಪರಯುಗದಲ್ಲಿ ಜರಾಸಂಧ ಕಂಸ ಮುಂತಾದ ವೀರರಿಂದ ಭೂತಲವು ತೊಂದರೆಪಡುತ್ತಿರುವುದನ್ನು ನೋಡಿ ಕೃಷ್ಣರೂಪದಿಂದ ಅವತರಿಸುತ್ತೀಯೆ.

೩೧. ಆಗ ಲೀಲೆಯಿಂದಲೇ ಅವರೆಲ್ಲರನ್ನೂ ಕೊಂದು ಭೂಮಿಯನ್ನು ಸಂತೋಷವುಳ್ಳದ್ದನ್ನಾಗಿ ಮಾಡುತ್ತೀಯೆ. ಬುದ್ಧನಾಗಿ ಅವತರಿಸಿ ಮುಂದೆ ಕಲಿಯುಗದಲ್ಲಿ ಬೌದ್ಧರನ್ನೂ ಜಯಿಸುತ್ತೀಯೆ.

ವರ್ಣಸಂಕರಮಾಲಕ್ಷ್ಯ ಕಲೇರಂತೇ ರಘೂತ್ತಮ ।
ಕಲ್ಕಿರೂಪೇಣ ಸಕಲಾನ್ಸಂಹಾರಯಸಿ ಲೀಲಯಾ ॥ ೩೨ ॥

ಏವಂ ದಶಾವತಾರಾಶ್ಚ ತಥಾನ್ಯೇಽಪಿ ಸಹಸ್ರಶಃ ।
ತ್ವಯಾ ಹಿತಾರ್ಥಮಸ್ಮಾಕಂ ಧೃತಾಶ್ಚಾಗ್ರೇ ಧರಿಷ್ಯಸಿ ॥ ೩೩ ॥

॥ ಶ್ರೀರಾಮದಾಸ ಉವಾಚ ॥

ಏವಂ ಸ್ತುವಂತಂ ಬ್ರಹ್ಮಾಣಂ ಸಮಾಲಿಂಗ್ಯ ರಘೂತ್ತಮಃ
ಸನ್ನಿವೇಶ್ಯಾಸನೇ ಪ್ರಾಹ ತ್ವದರ್ಥಂ ಚ ಮುನೇರ್ಗಿರಾ ॥ ೩೪ ॥

ಹಾಸ್ಯಮಾಜ್ಞಾಪಿತಂ ಕಿಂಚಿಜ್ಜನಾಃ ಕುರ್ವಂತು ತೇ ಸುಖಂ ।
ಯಥಾ ವಾಲ್ಮೀಕಿನಾ ಪ್ರೋಕ್ತಂ ತಥಾ ಮಾ ವಿಸ್ತರೋಽಸ್ತು ವೈ ॥ ೩೫ ॥

---

೩೨. ಎಲೈ ರಘೂತ್ತಮನೆ! ನೀನು ಮುಂದೆ ಕಲಿಯುಗದಲ್ಲಿ ವರ್ಣಸಂಕರವಾಗುತ್ತಿರುವುದನ್ನು ನೋಡಿ ಕಲ್ಕಿಯ ಅವತಾರವನ್ನು ಮಾಡಿ ಎಲ್ಲರನ್ನೂ ಲೀಲೆಯಿಂದಲೇ ಸಂಹರಿಸುತ್ತೀಯೆ.

೩೩. ನೀನು ಈ ರೀತಿಯಾಗಿ ಹತ್ತು ಅವತಾರಗಳನ್ನು ಮಾಡುವುದಲ್ಲದೆ ನಮ್ಮಗಳ ಹಿತಕ್ಕೋಸ್ಕರ ಅನೇಕ ಇತರ ಅವತಾರಗಳನ್ನೂ ಧರಿಸಿದ್ದೀಯೆ. ಮುಂದೆಯೂ ಧರಿಸುತ್ತೀಯೆ.

೩೪--೩೫ ಶ್ರೀರಾಮದಾಸನು ಹೇಳಿದನು—ಬ್ರಹ್ಮನು ಈ ರೀತಿಯಾಗಿ ಸ್ತುತಿಸುತ್ತಿರಲು ರಾಮನು ಅವನನ್ನು ಆಲಂಗಿಸಿಕೊಂಡನು. ಮತ್ತು ಆಸನದಲ್ಲಿ ಕೂರಿಸಿ ಎಲೈ ಬ್ರಹ್ಮನೆ ! ನಿನಗೋಸ್ಕರವಾಗಿಯೂ ವಾಲ್ಮೀಕಿಯ ಮಾತಿನ ಗೌರವದಮೇಲೆಯೂ ಜನರು ಸ್ವಲ್ಪ ನಗುವಿಕೆಯನ್ನು ಅನುಸರಿಸಲಿ. ಅದರಿಂದ ಜನಗಳು ನಿನಗೆ ಸುಖವನ್ನುಂಟುಮಾಡಲಿ. ವಾಲ್ಮೀಕಿಯು ಹೇಳಿದಂತೆ ನಗುವಿಕೆಯು ವಿಸ್ತಾರವಾಗಿ ಆಗಬೇಡ.

ತದ್ರಾಮವಚನಂ ಶ್ರುತ್ವಾ ತದಾ ತುಷ್ಟಾಸ್ಸುರಾದಯಃ ।
ಅಥ ಪಪ್ರಚ್ಛ ವಾಲ್ಮೀಕಿಂ ಸಭಾಯಾಂ ರಘುನಂದನಃ ॥ ೩೬ ॥
ಮಮಾವತಾರತಃ ಪೂರ್ವಂ ತ್ವಯಾ ಮುಚ್ಚರಿತಂ ಕೃತಂ ।
ಕಥಂ ಜ್ಞಾತಂ ತ್ವಯಾ ಪೂರ್ವಂ ಕೇನ ತ್ವಾಮುಪದೇಶಿತಂ ॥ ೩೭ ॥
ಪೂರ್ವಜನ್ಮನಿ ಕಸ್ತ್ವಂ ಹಿ ಕಿಂ ಪುಣ್ಯಂ ಹಿ ತ್ವಯಾ ಕೃತಂ ।
ತತ್ಸರ್ವಂ ವಿಸ್ತರೇಣೈವ ಕಥಯಸ್ವಾದ್ಯ ಮಾಂ ಪ್ರತಿ ॥ ೩೮ ॥
ತದ್ರಾಮವಚನಂ ಶ್ರುತ್ವಾ ವಾಲ್ಮೀಕಿರ್ಮುನಿಪುಂಗವಃ ।
ಸಭಾಯಾಂ ರಾಘವಂ ಸರ್ವಂ ವಕ್ತುಂ ಸಮುಪಚಕ್ರಮೇ ॥ ೩೯ ॥

॥ ವಾಲ್ಮೀಕಿರುವಾಚ ॥

ಸಮ್ಯಕ್ ಪೃಷ್ಟಂ ತ್ವಯಾ ರಾಮ ಸಾವಧಾನಮನಾಃ ಶೃಣು।
ರಾಮ ತ್ವನ್ನಾಮಮಹಿಮಾ ವರ್ಣ್ಯತೇ ಕೇನ ವಾ ಕಥಂ ॥ ೪೦ ॥

---

೩೬. ರಾಮನ ಈ ಮಾತನ್ನು ಕೇಳಿ ದೇವತೆಗಳೆಲ್ಲರೂ ಸಂತೋಷ ಪಟ್ಟರು. ಅನಂತರ ಸಭೆಯಲ್ಲಿ ಕುಳಿತಿರಲು ರಾಮನು ವಾಲ್ಮೀಕಿಯನ್ನು ಕುರಿತು ಇಂತೆಂದನು.

೩೭. ಎಲೈ ವಾಲ್ಮೀಕಿಯೆ ! ನಾನು ಅವತರಿಸುವುದಕ್ಕಿಂತಲೂ ಮೊದಲೇನೇ ನನ್ನ ಚರಿತ್ರೆಯನ್ನು ರಚಿಸಿದ್ದೀಯೆ. ಅದನ್ನು ನೀನು ಹೇಗೆ ತಿಳಿದೆ? ಯಾರು ನಿನಗೆ ಅದನ್ನು ಹೇಳಿದರು ?

೩೮. ನೀನು ಪೂರ್ವಜನ್ಮದಲ್ಲಿ ಯಾರಾಗಿದ್ದೆ ? ನೀನು ಯಾವ ಪುಣ್ಯವನ್ನು ಮಾಡಿದ್ದೀಯೆ ? ಅದೆಲ್ಲವನ್ನೂ ನನಗೆ ಈಗ ವಿಸ್ತಾರವಾಗಿ ಹೇಳು.

೩೯. ವಾಲ್ಮೀಕಿಯು ರಾಮನ ಈ ಮಾತನ್ನು ಕೇಳಿ ತನ್ನ ವಿಷಯ ವೆಲ್ಲವನ್ನೂ ಹೇಳಲು ಉಪಕ್ರಮಿಸಿದನು.

೪೦. ವಾಲ್ಮೀಕಿಯು ಹೇಳಿದನು—ಎಲೈ ರಾಮನೆ ! ನೀನು ಕೇಳಿದುದು ಚೆನ್ನಾಗಿದೆ. ಮನಸ್ಸಿಟ್ಟು ಕೇಳು. ಎಲೈ ರಾಮನೆ ! ನಿನ್ನ ನಾಮಗಳ ಮಹಿಮೆಯನ್ನು ಯಾವನು ಹೇಗೆ ತಾನೆ ವರ್ಣಿಸಲು ಸಾಧ್ಯವಾದೀತು. ?

ಯತ್ಪ್ರಭಾವಾದಹಂ ರಾಮ ಬ್ರಹ್ಮರ್ಷಿತ್ವಮವಾಪ್ತವಾನ್ ।
ಶೃಣು ರಾಘವ ಮತ್ತಸ್ತ್ವಂ ಕಥಾಂ ಮೇ ಪೂರ್ವಜನ್ಮನಃ ॥ ೪೧ ॥

ಪಂಪಾತೀರೇ ದ್ವಿಜಃ ಕಶ್ಚಿಚ್ಛಂಖೋ ನಾಮ ಮಹಾಯಶಾಃ ।
ಗುರೋಸ್ಸಿದ್ಧಿಂ ಗತಶ್ಚಾಗಾನ್ನದೀಂ ಗೋದಾವರೀಂ ಪ್ರತಿ ॥ ೪೨ ॥

ತೀರ್ತ್ವಾ ಭೀಮರಥೀಂ ಪುಣ್ಯಾಂ ಕಾಂತಾರೇ ಕಂಟಕಾವಿಲೇ ।
ನಿರ್ಜಲೇ ನಿರ್ಜನೇ ಘೋರೇ ವೈಶಾಖೇ ತಾಪಕರ್ಷಿತಃ ॥ ೪೩ ॥

ವನಂ ಚೋಪವಿವೇಶಾಸೌ ಮಧ್ಯಾಹ್ನಸಮಯೇ ದ್ವಿಜಃ ।
ತದಾ ಕಶ್ಚಿದ್ದುರಾಚಾರೀ ವ್ಯಾಧಶ್ಚಾಪಧರಶ್ಶಠಃ ॥ ೪೪ ॥

ನಿರ್ಘೃಣಸ್ಸರ್ವಭೂತೇಷು ಕಾಲಾಂತಕ ಇವಾಪರಃ ।
ತಂ ಕುಂಡಲಧರಂ ವಿಪ್ರಂ ದೀಕ್ಷಿತಂ ಭಾಸ್ಕರೋಪಮಂ ॥ ೪೫ ॥

---

೪೧. ಎಲೈ ರಾಮನೆ ! ಆ ನಿನ್ನ ನಾಮಗಳ ಮಹಿಮೆಯಿಂದಲೇ ನಾನು ಬ್ರಹ್ಮರ್ಷಿಯಾದೆನು. ನಾನು ನನ್ನ ಪೂರ್ವಜನ್ಮದ ಕಥೆಯನ್ನು ಹೇಳುತ್ತೇನೆ. ಕೇಳು.

೪೨. ಪಂಪಾಸರೋವರದ ತೀರದಲ್ಲಿ ಮಹಾಯಶಸ್ವಿಯಾದ ಶಂಖನೆಂಬುವ ನಿದ್ದನು. ಅವನು ಗುರುವಿನಿಂದ ಸಿದ್ಧಿಯನ್ನು ಹೊಂದಿ ಗೋದಾವರೀನದಿಯ ಬಳಿಗೆ ಹೋಗಲು ಹೊರಟನು.

೪೩. ದಾರಿಯಲ್ಲಿ ಹೋಗುತ್ತಾ ಭೀಮರಥಿನದಿಯನ್ನು ದಾಟಿ ಒಂದು ಮುಳ್ಳಿನಿಂದ ಕೂಡಿದ ಕಾಡಿಗೆ ಹೋದನು. ಅದು ಜನರಹಿತವಾಗಿಯೂ ಜಲ ರಹಿತವಾಗಿಯೂ ಇದ್ದಿತು. ಘೋರವಾಗಿ ಕಾಣುತ್ತಿದ್ದಿತು. ಹೀಗಿರುತ್ತಿರಲು ಆಗ ವೈಶಾಖಮಾಸವಾದುದರಿಂದ ಬಿಸಲಿನ ತಾಪದಿಂದ ತೊಂದರೆಪಡುತ್ತಿದ್ದನು.

೪೪. ಆ ಮಧ್ಯಾಹ್ನದ ಸಮಯದಲ್ಲಿ ಇಂತಹ ವನವನ್ನು ಪ್ರವೇಶಿಸಲು ಆಗ ಒಬ್ಬ ದುರಾಚಾರಿಯಾದ ವ್ಯಾಧನು ಚಾಪವನ್ನು ಧರಿಸಿ ಎದುರಿಗೆ ಬರುವುದನ್ನು ಕಂಡನು. ಅವನು ಕ್ರೂರನು.

೪೫. ಅವನಿಗೆ ಪ್ರಾಣಿಗಳಲ್ಲಿ ದಯವೇ ಇರಲಿಲ್ಲ. ಎರಡನೆಯ ಯಮನಂತಿದ್ದನು. ಈ ಬ್ರಾಹ್ಮಣನಾದರೋ ಕುಂಡಲಗಳನ್ನು ಧರಿಸಿದ್ದನು. ಅವನು ದೀಕ್ಷಿತನಾಗಿ ಸೂರ್ಯನಂತಿದ್ದನು.

ಖಡ್ಗೇನ ಭೀಷಯಿತ್ವಾ ತು ಜಗ್ರಾಹ ಕುಂಡಲಾದಿಕಂ ।
ಉಪಾನಹೌ ಚ ತಚ್ಛತ್ರಂ ವಸ್ತ್ರಾಣಿ ಚ ಕಮಂಡಲುಂ ।
ಪಶ್ಚಾದ್ಧಿತ್ವಾಥ ತಂ ವಿಪ್ರಂ ಗಚ್ಛೇತ್ಯಾಹ ಸ ಮೂಢಧೀಃ ॥ ೪೬ ॥

ತದಾ ಸ ಗಚ್ಛನ್ ಪಥಿ ಶರ್ಕರಾವಿಲೇ ।
ಸೂರ್ಯಾಂಶುತಪ್ತೇ ಜನ ವರ್ಜಿತೇ ಖರೇ ॥
ಸಂತಪ್ತಪಾದ ಸ್ತೃಣಗೋಪಿತೇ ಸ್ಥಲೇ ।
ಕ್ವಚಿಚ್ಚ ವಸ್ತ್ರೋಪರಿ ಸಂಸ್ಥಿತೋಽಭವತ್ ॥ ೪೭ ॥

ಸ ವೈ ದ್ರುತಂ ತಾಪತಪ್ತೋಽಪಿ ತಿಷ್ಠನ್ ।
ಹಾಹೇತಿ ವಾದೀ ಪ್ರಜಗಾಮ ವಿಪ್ರಃ ॥
ದೃಷ್ಟ್ವಾ ಮುನಿಂ ತಂ ಬಹುಖಿನ್ನಮಾನಸಂ ।
ಮಧ್ಯಂಗತೇ ಪೂಷ್ಣಿ ಯದಾತಿತೀವ್ರೇ ॥ ೪೮ ॥

---

೪೬. ಆಗ ಆ ವ್ಯಾಧನು ಕತ್ತಿಯನ್ನು ತೋರಿಸಿ ಆ ಬ್ರಾಹ್ಮಣನನ್ನು ಹೆದರಿಸಿ ಅವನ ಕುಂಡಲ ಕೆರ, ಛತ್ರಿ, ವಸ್ತ್ರ, ಕಮಂಡಲುಗಳನ್ನು ಕಿತ್ತುಕೊಂಡನು. ಆನಂತರ ಆ ವ್ಯಾಧನು ಅವನನ್ನು ಹೋಗುವಂತೆ ಹೇಳಿದನು.

೪೭. ಆ ಋಷಿಯು ಅನಂತರ ನುರುಜು ಕಲ್ಲುಗಳಿರುವ ಆ ದಾರಿಯಲ್ಲಿ ಹೊರಟನು. ಭೂಮಿಯು ಬಿಸಿಲಿನಿಂದ ಬಹುವಾಗಿ ಕಾದಿದ್ದಿತು. ಜನಗಳ ಸುಳಿವೇ ಇರಲಿಲ್ಲ. ಹಳ್ಳತಿಟ್ಟುಗಳು ಬಹುವಾಗಿದ್ದುವು. ಇಂತಹ ದಾರಿಯಲ್ಲಿ ಅವನು ಹೋಗಲು ಕಷ್ಟಪಡುತ್ತ ಕಾಲುಗಳು ಸುಡುತ್ತಿರಲು ಹುಲ್ಲು ಬೆಳೆದಿರುವ ಜಾಗದಲ್ಲಿ ಹುಲ್ಲಿನಮೇಲೆ ಕಾಲನ್ನಿಟ್ಟುಕೊಂಡೂ ಒಂದೂ ಇಲ್ಲದ ಜಾಗದಲ್ಲಿ ಬಟ್ಟೆಯನ್ನು ಹಾಸಿಕೊಂಡು ಅದರ ಮೇಲೆ ನಡೆಯುತ್ತಲೂ ಹೋಗುತ್ತಿದ್ದನು.

೪೮. ಆ ಋಷಿಯು ತಾಪದಿಂದ ಕಷ್ಟವಾಗುತ್ತಿದ್ದರೂ ಒಂದೊಂದುಸಲ ಓಡಾಡುತ್ತಲೂ ಒಂದೊಂದುಸಲ ನಿಂತುಕೊಳ್ಳುತ್ತಲೂ ಹಾಹಾ ಎಂದು ದುಃಖಪಟ್ಟು ಕೂಗುತ್ತಾ ಹೋಗುತ್ತಿದ್ದನು. ಆಗ ಸೂರ್ಯನು ನೆತ್ತಿಯಮೇಲೆ ಕಾಣುತ್ತಿದ್ದುದರಿಂದ ಬಹು ತೀವ್ರವಾಗಿದ್ದನು. ಇಂತಹ ಸಮಯದಲ್ಲಿ ಬಹು ಖಿನ್ನನಾಗಿ ಓಡಿಹೋಗುತ್ತಿರುವ ಆ ಮುನಿಯನ್ನು ಈ ವ್ಯಾಧನು ನೋಡಿದನು.

ವ್ಯಾಧಸ್ಯ ಜಾತಾ ಮತಿರೀದೃಶೀ ವೈ ತಸ್ಮೈ ದದಾಮೀತಿ ಚ ಪಾದರಕ್ಷೇ ।
ಸ್ವೀಯೇನ ಧರ್ಮೇಣ ತು ತಸ್ಕರೇಣ ವನೇ ಗೃಹೀತಂ ಸಕಲಂ ಚ ತನ್ಮೇ ॥

ಚೌರ್ಯೇಣ ಚ ಸ್ವಧರ್ಮೇಣ ಯದ್ಗೃಹೀತಂ ವನಾಂತರೇ ।
ತದೀಯಮೇವ ತತ್ಸರ್ವಂ ವ್ಯಾಧಾನಾಂ ಧರ್ಮನಿರ್ಣಯಃ ॥ ೫೦ ॥

ತಸ್ಮಾದುಪಾನಹೌ ದಾಸ್ಯೇ ಮುಹುರ್ದುಃಖಾಪಸುತ್ತಯೇ ।
ತೇನ ಶ್ರೇಯೋ ಭವೇದ್ಯಚ್ಚ ತದ್ಭವೇನ್ಮಮ ಪಾಪಿನಃ ॥ ೫೧ ॥

ಜೀರ್ಣೌ ಚೋಪಾನಹಾವೇತೌ ದಿವ್ಯಾ ಸ್ತಃ ಪದಯೋರ್ಮಮ ।
ನ ಚಾಭ್ಯಾಮಸ್ತಿ ಮೇ ಕಾರ್ಯಂ ತಸ್ಮಾತ್ತಸ್ಮೈ ದದಾಮ್ಯಹಂ ॥ ೫೨ ॥

---

೪೯. ಒಡನೆಯೇ ಆ ವ್ಯಾಧನಿಗೆ ಆ ಋಷಿಗೆ ಪಾದರಕ್ಷೆಗಳನ್ನು ಕೊಡಬೇಕು. ಅವನು ಬಹು ಕಷ್ಟಪಡುತ್ತಿರುವನು. ನಾನು ನನ್ನ ವ್ಯಾಧಧರ್ಮದಂತೆ ಕಳ್ಳತನದಿಂದ ಅವನದೆಲ್ಲವನ್ನೂ ಈ ಕಾಡಿನಲ್ಲಿ ಸುಲಿದುಕೊಂಡಿರುವೆನು. ಎಂಬ ಬುದ್ಧಿಯು ಹುಟ್ಟಿತು.

೫೦. ವ್ಯಾಧರು ಕಾಡಿನಲ್ಲಿ ತಮ್ಮ ಧರ್ಮವಾದ ಕಳ್ಳತನದಿಂದ ಯಾವ ಯಾವುದನ್ನು ತೆಗೆದುಕೊಳ್ಳುವರೋ ಅದು ಆ ವ್ಯಾಧರದೇ. ಈ ರೀತಿಯಾಗಿ ವ್ಯಾಧರ ಧರ್ಮದ ನಿರ್ಣಯವು ಇರುವುದು.

೫೧. ಆದ್ದರಿಂದ ಈಗ ನನ್ನದಾಗಿರುವ ಅವನ ಈ ಪಾದರಕ್ಷೆಗಳನ್ನು ಅವನು ಈ ದಾರಿಯಲ್ಲಿ ದುಃಖಪಡದಂತೆ ಅವನಿಗೆ ಕೊಡುತ್ತೇನೆ. ಅದರಿಂದ ಬರತಕ್ಕ ಪುಣ್ಯವು ಪಾಪಿಯಾದ ನನಗೆ ಬರುವುದು.

೫೨. ಆ ಋಷಿಯ.ಈ ಪಾದರಕ್ಷೆಗಳು ಹಳೆಯದಾಗಿ ಕಿತ್ತುಹೋಗಿರುವುವು. ನನ್ನ ಕಾಲಿನಲ್ಲಿರುವುದು ಚೆನ್ನಾಗಿ ಗಟ್ಟಿಯಾಗಿರುವುದು. ಅವುಗಳಿಂದ ನನಗೆ ಉಪಯೋಗವಿಲ್ಲ. ಆದ್ದರಿಂದ ನನ್ನದನ್ನೇ ಅವನಿಗೆ ಕೊಟ್ಟುಬಿಡುತ್ತೇನೆ.

ಇತಿ ನಿಶ್ಚಿತ್ಯ ಮನಸಿ ತೂರ್ಣಂ ಗತ್ವಾ ದದೌ ಚ ತೇ ।
ಶರ್ಕರಾತಪ್ತಪಾದಾಯ ದ್ವಿಜವರ್ಯಾಯ ಸೀದತೇ ॥ ೫೩ ॥

ಉಪಾನಹೌ ಗೃಹೀತ್ವಾಸೌ ನಿರ್ವೃತಿಂ ಚ ಪರಾಂ ಯಯೌ ।
ಸುಖೀಭವೇತಿ ತಂ ಪ್ರಾಹ ಶಂಖಸ್ತಂ ಪುನರಬ್ರವೀತ್ ॥ ೫೪ ॥

ಪೂರ್ವಪುಣ್ಯೇನ ತೇ ಜಾತಾ ಶುಭಾಬುದ್ಧಿರ್ವನೇಚರ ।
ಯಯಾ ಬುದ್ಧ್ಯಾದ್ಯ ವೈಶಾಖೇ ತ್ವಯಾ ದತ್ತಾವುಪಾನಹೌ ॥ ೫೫ ॥

ಇತಿ ತದ್ವಚನಂ ಶ್ರುತ್ವಾ ಶಂಖಂ ವ್ಯಾಧೋಽಬ್ರವೀದ್ವಚಃ ।
ಕಿಂ ಮಯಾಚರಿತಂ ಪೂರ್ವಂ ತತ್ಸರ್ವಂ ವಕ್ತುಮರ್ಹಸಿ ॥ ೫೬ ॥

---

೫೩. ಹೀಗೆಂದು ನಿಶ್ಚಯಿಸಿಕೊಂಡು ಬೇಗನೆ ಓಡಿಹೋಗಿ ಕಾದಿರುವ ಕಲ್ಲುಗಳಮೇಲೆ ಕಾಲಿಟ್ಟು ಸುಡುತ್ತಿರುವುದರಿಂದ ದುಃಖಪಡುತ್ತಿರುವ ಆ ಬ್ರಾಹ್ಮಣನಿಗೆ ಇವನು ಕೊಟ್ಟುಬಿಟ್ಟನು.

೫೪. ಆ ಬ್ರಾಹ್ಮಣನು ಆ ಪಾದರಕ್ಷೆಗಳನ್ನು ತೆಗೆದುಹಾಕಿಕೊಂಡು ಬಹು ಆನಂದಪಟ್ಟನು. ಸುಖಿಯಾಗಪ್ಪ ಎಂದು ಹೇಳಿ ಆ ಬ್ರಾಹ್ಮಣನಾದ ಶಂಖನು ವ್ಯಾಧನನ್ನು ಕುರಿತು ಇಂತೆಂದನು.

೫೫. ಎಲೈ ವ್ಯಾಧನೆ! ನಿನ್ನ ಪೂರ್ವಜನ್ಮದ ಪುಣ್ಯದಿಂದ ನಿನಗೆ ಈ ರೀತಿಯಾದ ಬುದ್ಧಿಯು ಉಂಟಾಯಿತು. ಆ ಒಳ್ಳೆಯ ಬುದ್ಧಿಯಿಂದಲೇ ವೈಶಾಖದ ಈ ಬಿಸಿಲಿನಲ್ಲಿ ನೀನು ಈ ಪಾದರಕ್ಷೆಗಳನ್ನು ನನಗೆ ಮತ್ತೆ ಕೊಟ್ಟಿದ್ದೀಯೆ.

೫೬. ವ್ಯಾಧನು ಶಂಖನ ಈ ಮಾತನ್ನು ಕೇಳಿ ಎಲೈ ಋಷಿಯೆ! ನಾನು ಪೂರ್ವದಲ್ಲಿ ಮಾಡಿರುವ ಧರ್ಮವೇನು? ನಾನಾರಾಗಿದ್ದೆನು? ಅವೆಲ್ಲವನ್ನೂ ಹೇಳು ಎಂದು ಕೇಳಿದನು.–

॥ ಶಂಖ ಉವಾಚ ॥

ಆತಪೋ ಬಾಧತೇ ಘೋರೋ ನಾತ್ರ ಚ್ಛಾಯಾ ನ ವೈ ಜಲಂ ।
ತಸ್ಮಾತ್ ಸ್ಥಲಾಂತರಂ ಗತ್ವಾ ಯತ್ರ ಛಾಯಾಂಬು ವರ್ತತೇ ॥ ೫೭ ॥

ತತ್ರ ಗತ್ವಾ ಜಲಂ ಪೀತ್ವಾ ಸುಚ್ಛಾಯಾಂ ಚ ಸಮಾಶ್ರಿತಃ ।
ತತಸ್ತೇ ಸುಕೃತಂ ಪೂರ್ವಂ ಸವಿಸ್ತಾರಂ ವದಾಮ್ಯಹಂ ॥ ೫೮ ॥

ಇತ್ಯುಕ್ತೋ ಮುನಿನಾ ತೇನ ವ್ಯಾಧಃ ಪ್ರಾಹ ಕೃತಾಂಜಲಿಃ ।
ಇತೋ ವಿದೂರೇ ಸಲಿಲಂ ವರ್ತತೇ ಚ ಸರೋವರೇ ॥ ೫೯ ॥

ಕಪಿತ್ಥಾಸ್ತತ್ರ ವೈ ಸಂತಿ ಫಲಭಾರೇಣ ಪೀಡಿತಾಃ ।
ಗಚ್ಛಾವಸ್ತತ್ರ ಸಂತುಷ್ಟಿರ್ಭವಿತಾ ನಾತ್ರ ಸಂಶಯಃ ॥ ೬೦ ॥

ವ್ಯಾಧೇನೈವಂ ಸಮಾದಿಷ್ಟಸ್ತೇನ ಸಾಕಂ ಯಯೌ ಮುನಿಃ ।
ಕಿಯದ್ದೂರಂ ತತೋ ಗತ್ವಾ ದದರ್ಶಾಗ್ರ್ಯಂ ಸರೋವರಂ ॥ ೬೧ ॥

---

೫೭. ಶಂಖನು ಹೇಳಿದನು-- ಇಲ್ಲಿ ಈಗ ಬಿಸಿಲು ಬಹು ಹೆಚ್ಚಾಗಿ ತೊಂದರೆಪಡಿಸುತ್ತಿದೆ. ಇಲ್ಲಿಯಾದರೋ ನೀರಿಲ್ಲ. ನೆರಳೂ ಇಲ್ಲ. ಆದ್ದರಿಂದ ನೀರು ನೆರಳು ಇರುವ ಸ್ಥಳಕ್ಕೆ ಹೋಗೋಣ.

೫೮. ಅಲ್ಲಿಗೆ ಹೋಗಿ ನೀರನ್ನು ಕುಡಿದು ಒಳ್ಳೆಯ ನೆರಳಿನಲ್ಲಿ ಕುಳಿತು ಕೊಂಡು ಅಲ್ಲಿ ನೀನು ಹಿಂದಿನ ಜನ್ಮದಲ್ಲಿ ಮಾಡಿರುವ ಪುಣ್ಯವನ್ನೆಲ್ಲಾ ವಿಸ್ತಾರವಾಗಿ ಹೇಳುತ್ತೇನೆ.

೫೯-೬೦. ಆ ಮುನಿಯು ಹೀಗೆಂದು ಹೇಳುತ್ತಲೂ ವ್ಯಾಧನು ಕೈಮುಗಿದು ಕೊಂಡು ಇಲ್ಲಿಗೆ ಹತ್ತಿರದಲ್ಲಿಯೇ ಒಂದು ಕೊಳವಿದೆ. ಅಲ್ಲಿ ನೀರೂ ಚೆನ್ನಾಗಿದೆ. ಅಲ್ಲದೆ ಅಲ್ಲಿ ಬೇಲದಮರವಿದೆ. ಅವು ಬಹುವಾಗಿ ಹಣ್ಣನ್ನು ಬಿಟ್ಟವೆ. ಅಲ್ಲಿಗೆ ಹೋಗೋಣ. ಅಲ್ಲಿ ನಿಮಗೆ ತೃಪ್ತಿಯೂ ಆಗುವುದು. ಸಂಶಯವಿಲ್ಲ. ಎಂದನು.

೬೧. ಆ ವ್ಯಾಧನು ಹೀಗೆಂದೆನ್ನುತ್ತಲೂ ಈ ಮುನಿಯು ಅವನ ಜೊತೆಯಲ್ಲಿ ಹೋದನು. ಸ್ವಲ್ಪದೂರಹೋಗುತ್ತಲೇ ಅಲ್ಲಿ ಎದುರಿಗೆ ಉತ್ತಮವಾದ ಸರೋವರವನ್ನು ನೋಡಿದನು.

ಸ್ನಾತ್ವಾ ಮಧ್ಯಾಹ್ನವೇಲಾಯಾಂ ತಸ್ಮಿನ್ ಸರಸಿ ನಿರ್ಮಲೇ |
ವಾಸಸೀ ಪರಿಧಾಯಾಥ ಕೃತ್ವಾ ಮಾಧ್ಯಾಹ್ನಿಕೀಃ ಕ್ರಿಯಾಃ || ೬೨ ||

ದೇವಪೂಜಾಂ ತಥಾ ಕೃತ್ವಾ ಫಲಮೂಲಮಂತಂದ್ರಿತಃ |
ವ್ಯಾಧೋಪನೀತಂ ಸುಸ್ವಾದು ಕಪಿತ್ಥಂ ಶ್ರಮಹಾರಿ ಚ || ೬೩ ||

ಭುಕ್ತ್ವಾ ಸುಖಂ ಜಲಂ ಪೀತ್ವಾ ಸುಚ್ಛಾಯಾಂ ಚ ಸಮಾಶ್ರಿತಃ |
ಸುಖೋಪವಿಷ್ಟಸ್ತಂ ಪ್ರಾಹ ಪೂರ್ವಪುಣ್ಯಂ ವದಾಮಿ ತೇ || ೬೪ ||

ಶಾಕಲೇ ನಗರೇ ಪೂರ್ವಂ ದ್ವಿಜಸ್ತ್ವಂ ವೇದಪಾರಗಃ |
ಸ್ತಂಭೋ ನಾಮ ಮಹಾಪಾಪೀ ತಥಾ ಶ್ರೀವತ್ಸಗೋತ್ರಜಃ || ೬೫

ತವೇಷ್ಟಾ ಗಣಿಕಾ ಕಾಚಿತ್ತದಾಸೀತ್ಸಂಗದೋಷತಃ |
ತ್ಯಕ್ತ ನಿತ್ಯ ಕ್ರಿಯೋ ನಿತ್ಯಂ ಶೂದ್ರ ವನ್ಮೂರ್ಖಮಾರ್ಗಗಃ || ೬೬ ||

೬೨-೬೩. ಮಧ್ಯಾಹ್ನದ ಸಮಯವಾಗಿದ್ದುದರಿಂದ ಆ ಸರೋವರದ ನೀರಿನಲ್ಲಿ ಸ್ನಾನಮಾಡಿದನು. ಬೇರೆಯ ಬಟ್ಟೆಗಳನ್ನು ಉಟ್ಟುಕೊಂಡು ಮಧ್ಯಾಹ್ನದ ಕ್ರಿಯೆಗಳನ್ನು ಮಾಡಿದನು. ಅಂತೆಯೇ ದೇವರ ಪೂಜೆಯನ್ನೂ ಮಾಡಿದನು. ಅಷ್ಟುಹೊತ್ತಿಗೆ ಈ ವ್ಯಾಧನು ಅಲ್ಲಿರುವ ಹಣ್ಣುಗಳನ್ನೂ ಗೆಡ್ಡೆ ಗೆಣಸುಗಳನ್ನೂ ತಂದಿದ್ದನು. ಮತ್ತು ಸುಸ್ವಾದುವಾಗಿದ್ದು ಶ್ರಮಹಾರಕವಾದ ಬೇಲದ ಹಣ್ಣುಗಳನ್ನೂ ತಂದಿದ್ದನು ಅವೆಲ್ಲವನ್ನೂ ಈ ಬ್ರಾಹ್ಮಣನು ತಿಂದನು.

೬೪. ಅನಂತರ ನೀರನ್ನು ಕುಡಿದನು. ನೆರಳಿನಲ್ಲಿ ಕುಳಿತನು ಸುಖವಾಗಿ ಕುಳಿತುಕೊಂಡಮೇಲೆ ಆ ವ್ಯಾಧನನ್ನು ಕುರಿತು ಈಗ ನಿನ್ನ ಪೂರ್ವಪುಣ್ಯವನ್ನು ಹೇಳುತ್ತೇನೆ ಕೇಳು ಎಂದು ಹೇಳತೊಡಗಿದನು.

೬೫. ಹಿಂದೆ ನೀನು ಶಾಕಲವೆಂಬ ನಗರದಲ್ಲಿದ್ದೆ. ನೀನು ಒಬ್ಬ ಬ್ರಾಹ್ಮಣನು. ವೇದವನ್ನು ಪೂರ್ತಿಯಾಗಿ ಅಧ್ಯಯನಮಾಡಿದ್ದೆ ಸ್ತಂಭನೆಂದು ನಿನ್ನ ಹೆಸರು. ಶ್ರೀ ವತ್ಸಗೋತ್ರದಲ್ಲಿ ಹುಟ್ಟಿದ ಬ್ರಾಹ್ಮಣನಾಗಿದ್ದೆ. ನೀನು ಮಹಾ ಪಾಪಿಯು.

೬೬. ದುಷ್ಟರ ಸಹವಾಸ ದೋಷದಿಂದ ನಿನಗೆ ಒಬ್ಬಳು ಸೂಳೆಯು ಸಿಕ್ಕಿದಳು. ಅವಳನ್ನು ಅನುಸರಿಸಿಕೊಂಡು ನಿತ್ಯಕರ್ಮಗಳನ್ನು ಬಿಟ್ಟು ಶೂದ್ರನಂತೆ ಇದ್ದುಕೊಂಡು ಮೂರ್ಖರ ಮಾರ್ಗದಲ್ಲಿರುತ್ತಿದ್ದೆ.

ಶೂನ್ಯಾಚಾರಸ್ಯ ಮೂಢಸ್ಯ ಪರಿತ್ಯಕ್ತಕ್ರಿಯಸ್ಯ ಚ ।
ಬ್ರಾಹ್ಮಣೀ ತೇ ತದಾನ್ಯಾಸೀದ್ಭಾರ್ಯಾ ಕಾಂತಿಮಯೀ ತಥಾ ॥ ೬೭ ॥

ಸಾ ತ್ವಾಂ ಪರ್ಯಚರತ್ಸುಭ್ರೂಃ ಸವೇಶ್ಯಂ ಬ್ರಾಹ್ಮಣಾಧಮಂ ।
ಉಭಯೋಃ ಕ್ಷಾಲಯಂತೀ ಚ ಪಾದೌ ತ್ವತ್ಪ್ರಿಯಕಾಮ್ಯಯಾ ॥ ೬೮ ॥

ಉಭಯೋರಪ್ಯಧಶ್ಶೇತೇ ಉಭಯೋರ್ವ್ಯಜನೇ ರತಾ ।
ವೇಶ್ಯಯಾ ವಾರ್ಯಮಾಣಾಪಿ ಹಿತಕಾರ್ಯೇ ತಯೋಃ ಸ್ಥಿತಾ ॥ ೬೯ ॥

ಏವಂ ಶುಶ್ರೂಷಯಂತ್ಯಾ ಹಿ ಭರ್ತಾರಂ ವೇಶ್ಯಯಾ ಸಹ ।
ಜಗಾಮ ಸುಮಹಾನ್ ಕಾಲೋ ದುಃಖಿತಾಯಾ ಮಹೀತಲೇ ॥ ೭೦ ॥

---

೬೭. ಆಚಾರಹೀನನೂ ಮೂಢನೂ ಮಾಡಬಾರದ ಕೆಲಸವನ್ನು ಮಾಡುವವನೂ ಮಾಡಬೇಕಾದ ಕೆಲಸವನ್ನು ಬಿಟ್ಟವನೂ ಆಗಿ ಯಾವಾಗಲೂ ಆ ವೇಶ್ಯೆಯಲ್ಲಿಯೇ ಆಸಕ್ತನಾಗಿ ಹೋದೆ. ನಿನಗೆ ಕಾಂತಿಮಯಿಯೆಂಬ ಒಬ್ಬಳು ಹೆಂಡತಿಯಿದ್ದಳು.

೬೮. ಅವಳು ತನ್ನ ಧರ್ಮವಾದ ಪಾತಿವ್ರತ್ಯವನ್ನು ಮುಂದಿಟ್ಟುಕೊಂಡು ಬ್ರಾಹ್ಮಣಾಧಮನಾದ ನಿನ್ನನ್ನೂ ನಿನ್ನ ಸೂಳೆಯನ್ನೂ ಸೇವಿಸುತ್ತಿದ್ದಳು. ನಿನ್ನ ಶುಶ್ರೂಷೆಯನ್ನು ಮಾಡಬೇಕೆಂಬ ಇಚ್ಛೆಯಿಂದ ಆ ಹೆಂಡತಿಯು ನಿನ್ನ ಕಾಲನ್ನು ತೊಳೆಯುವುದಲ್ಲದೆ ಆ ಸೂಳೆಯ ಕಾಲನ್ನೂ ತೊಳೆಯುತ್ತಿದ್ದಳು.

೬೯. ನೀನೂ ನಿನ್ನ ಸೂಳೆಯೂ ಮಂಚದಮೇಲೆ ಮಲಗಿದ್ದರೆ ಅವಳು ನಿಮ್ಮಿಬ್ಬರ ಕೆಳಗೆ ಮಲಗುತ್ತಿದ್ದಳು. ನಿಮ್ಮಿಬ್ಬರ ಮಾತನ್ನು ಕೇಳುತ್ತ ಅಂತೆಯೇ ನಡೆಯುತ್ತಿದ್ದಳು. ಆ ವೇಶ್ಯೆಯು ಬೇಡವೆಂದು ಹೇಳುತ್ತಿದ್ದರೂ ನಿನ್ನಲ್ಲಿರುವ ಪ್ರೀತಿಯಿಂದ ನಿಮ್ಮಿಬ್ಬರಿಗೂ ಸೇವೆಮಾಡುತ್ತಲಿದ್ದಳು.

೭೦. ಆಕೆಯು ನಿನ್ನನ್ನೂ ನಿನ್ನ ಸೂಳೆಯನ್ನೂ ಬಹುಕಾಲದವರೆಗೆ ಹೀಗೆ ಸೇವಿಸುತ್ತಿದ್ದಳು. ತಾನು ಮಾತ್ರ ಈ ಲೋಕದಲ್ಲಿ ಬಹು ದುಃಖಿತಳಾಗಿದ್ದಳು. ಹೀಗೆಯೇ ಅವಳಿಗೆ ಬಹುಕಾಲವು ಕಳೆಯಿತು.

ಅಪರಸ್ಮಿನ್ ದಿನೇ ಭರ್ತ್ರಾ ಮಾಹಿಷ್ಯಂ ಮೂಲಕಾನ್ವಿತಂ ।
ಅಭಕ್ಷಯತ್ ಕ್ಷುದ್ರಶರಾನ್ ನಿಷ್ಪಾವಾಂಸ್ತಿಲಮಿಶ್ರಿತಾನ್ ॥ ೭೧ ॥

ತಮುಪಥ್ಯಮುಶಿತ್ವಾ ತು ವಮಂ ಶ್ಚೈವ ವಿರೇಚಯತ್ ।
ಅಪಥ್ಯಾದ್ದಾರುಣೋ ರೋಗೋ ವ್ಯಜಾಯತ ಭಗಂದರಃ ॥ ೭೨ ॥

ಸ ದಹ್ಯಮಾನೋ ರೋಗೇಣ ದಿವಾರಾತ್ರಂ ತು ಭೂರಿಶಃ ।
ಯಾವದಾಸ್ತೇ ಗೃಹೇ ವಿತ್ತಂ ತಾವದ್ವೇಶ್ಯಾ ಚ ಸಂಸ್ಥಿತಾ ॥ ೭೩ ॥

ಗೃಹೀತ್ವಾ ಸಕಲಂ ವಿತ್ತಂ ಪಶ್ಚಾನ್ನ್ಯೋವಾಸ ಮಂದಿರೇ ।
ಅನ್ಯಸ್ಯ ಪಾರ್ಶ್ವಮಾಸಾದ್ಯ ತಸ್ಥೌ ಘೋರಾತಿನಿರ್ಘೃಣಾ ॥ ೭೪ ॥

---

೭೧. ಹೀಗಿರುತ್ತಿರಲು ಅವನು ಒಂದುದಿನ ಮೂಲಂಗಿಯನ್ನೂ ಅವರೆಯ ಕಾಳನ್ನೂ ಹಾಕಿ ಹುಳಿಮಾಡಿ ಸಾಸುವೆಯ ಒಗ್ಗರಣೆಯನ್ನು ಹಾಕಿದ ಹುಳಿಯಿಂದಲೂ ಎಮ್ಮೆಯ ಮೊಸರಿನಿಂದಲೂ ಊಟಮಾಡಿದನು. ಮತ್ತು ಎಳ್ಳಿನ ಸಂಗಡ ಅಥವ ಚಿಗುಳಿಯ ಸಂಗಡ ಅವರೆಯ ಬೇಳೆಯ ಪದಾರ್ಥವನ್ನು ತಿಂದನು.

೭೨. ಈ ಅಪಥ್ಯದ ಪದಾರ್ಥಗಳನ್ನು ತಿಂದುದರಿಂದ ವಾಂತಿಭೇದಿಗಳು ಉಂಟಾದುವು. ಈ ಅಪಥ್ಯದಿಂದಲೇ ಭಗಂದರವೆಂಬ ದೊಡ್ಡದಾದ ಕ್ರೂರ ರೋಗವು ಉಂಟಾಯಿತು.

೭೩. ಈ ಭಗುದರದಿಂದ ಆತನು ಹಗಲೂ ರಾತ್ರಿಯೂ ದುಃಖಪಡುತ್ತಿದ್ದನು. ಮನೆಯಲ್ಲಿ ಅವನ ಬಳಿಯಲ್ಲಿ ಹಣವಿರುವವರೆಗೂ ಅನುಭವಿಸುತ್ತ ಆ ಸೂಳೆಯೂ ಇದ್ದಳು.

೭೪. ಅನಂತರ ಆ ಹಣವೆಲ್ಲವನ್ನೂ ಸೂರೆಮಾಡಿಕೊಂಡು ಇರುವುದನ್ನೂ ತಿಂದಮೇಲೆ ಆ ಮನೆಯನ್ನು ಬಿಟ್ಟು ಸೂಳೆಯು ಹೊರಟು ಹೋದಳು. ಅಲ್ಲದೆ ಮತ್ತೊಬ್ಬನನ್ನು ಕಟ್ಟಿಕೊಂಡು ಆ ಘೋರಳೂ ದಯಾಶೂನ್ಯಳೂ ಆದ ಆಕೆಯು ಇದ್ದುಬಿಟ್ಟಳು.

ತತಸ್ಸದೀನವಚನೋ ವ್ಯಾಧಿಬಾಧಾಸುಪೀಡಿತಃ ।
ಉಕ್ತ್ವಾರ್ತ ಸುರುದರ್ಥ ಭಾರ್ಯಾಂ ರುಜನ್ಯಾಕುಲಮಾನಸಃ ॥ ೭೫ ॥

ಪರಿಪಾಲಯ ಮಾಂ ದೇವಿ ವೈಶ್ಯಾಸಕ್ತಂ ಸುನಿಷ್ಠುರಂ ।
ನ ಮಯೋಪಕೃತಂ ಕಿಂಚಿತ್ತವ ಸುಂದರಿ ಪಾವನಿ ॥ ೭೬ ॥

ಯೋ ಭಾರ್ಯಾಂ ಪ್ರಣತಾಂ ಪಾಪೋ ನಾನುಮನ್ಯೇತ ಮೂಢಧೀಃ ।
ಸ ಷಂಡೋ ಭವತೀತ್ಯತ್ರ ದಶಜನ್ಮಾನಿ ಸಪ್ತ ಚ ॥ ೭೭ ॥

ದಿವಾರಾತ್ರಂ ಮಹಾಭಾಗೇ ನಿಂದಿತಸ್ಸಾಧುಭಿರ್ಜನೈಃ ।
ಪಾಪಯೋನಿ ಮವಾಪ್ಸ್ಯಾಮಿ ತ್ವಾಂ ಸಾಧ್ವೀಮವಮನ್ಯವೈ ॥ ೭೮ ॥

ಅಹಂ ಕ್ರೋಧೇನ ದಗ್ಧೋಸ್ಮಿ ಸದಾ ನಿಷ್ಠುರಭಾಷಣಃ ।
ಏವಂ ಬ್ರುವಾಣಂ ಭರ್ತಾರಂ ಕೃತಾಂಜಲಿಪುಟಾಬ್ರವೀತ್ ॥ ೭೯ ॥

೭೪-೭೬. ರೋಗಬಾಧೆಯಿಂದ ನರಳುತ್ತಿದ್ದ ಈತನು ದೀನವಾದ ಮಾತಿನಿಂದ ಅಳುತ್ತ ಆ ಹೆಂಡತಿಯನ್ನು ಕುರಿತು ಇಂತೆಂದನು. ಎಲೈ ದೇವಿಯೇ! ನಿನ್ನ ವಿಷಯದಲ್ಲಿ ನಾನು ವೇಶ್ಯಾಸಕ್ತನಾಗಿ ಬಹು ನಿಷ್ಠುರನಾಗಿದ್ದೆ. ನೀನು ಸುಂದರಿಯು, ಪಾವನೆಯು, ಯೋಗ್ಯಳು. ನಿನಗೆ ನಾನು ಯಾವ ಉಪಕಾರವನ್ನೂ ಮಾಡಲೇ ಇಲ್ಲ. ನನ್ನನ್ನು ನೀನು ಕೈ ಬಿಡದೆ ಕಾಪಾಡು.

೭೭. ಯಾವ ದಡ್ಡವನು ತನ್ನನ್ನೇ ಅನುಸರಿಸಿಕೊಂಡಿರುವ ಯೋಗ್ಯಳಾದ ಹೆಂಡತಿಯನ್ನು ತಿರಸ್ಕರಿಸುವನೋ ಅವನು ಹದಿನೇಳು ಜನ್ಮಗಳವರೆಗೂ ಷಂಡನಾಗಿಯೇ ಹುಟ್ಟುತ್ತಾನೆ.

೭೮. ನಾನಾದರೋ ಹಗಲೂ ರಾತ್ರಿಯೂ ವೇಶ್ಯಾಸಕ್ತನಾಗಿ ನಿನ್ನನ್ನು ತಿರಸ್ಕರಿಸುತ್ತಿದ್ದೆ. ಸಜ್ಜನರು ಯಾವಾಗಲೂ ನನ್ನನ್ನು ನಿಂದಿಸುತ್ತಿದ್ದರು. ಸಾಧ್ವಿಯಾದ ನಿನ್ನನ್ನು ತಿರಸ್ಕರಿಸಿದುದರಿಂದ ನಾನು ಪಾಪ ಜನ್ಮವನ್ನು ಹೊಂದುತ್ತೇನೆ.

೭೯. ನಾನು ಯಾವಾಗಲೂ ನಿನ್ನ ಮೇಲೆ ಕೋಪಮಾಡುತ್ತಲೇ ಇದ್ದು ಆದರಿಂದಲೇ ಸುಟ್ಟುಹೋದೆನು. ನಿನ್ನ ಮೇಲೆ ಬಹು ನಿಷ್ಠುರವಾದ ಮಾತನ್ನು ಆಡುತ್ತಿದ್ದೆನು. ಎಂಬದಾಗಿ ಹೇಳುತ್ತಿರುವ ಗಂಡನನ್ನು ಕುರಿತು ಆ ಕಾಂತಿಮತಿಯಿಯು ಕೈ ಮುಗಿದುಕೊಂಡು ಇಂತೆಂದಳು.

ನ ದೈನ್ಯಂ ಭವತಾ ಕಾರ್ಯಂ ನ ವ್ರೀಡಾ ಕಾಂತ ಮಾಂ ಪ್ರತಿ ।
ನ ಚಾಪಿ ತ್ವಯಿ ಮೇ ಕ್ರೋಧೋ ವರ್ತತೇ ಸುಮನಾಗಪಿ ॥ ೮೦ ॥

ಪುರಾ ಕೃತಾನಿ ಪಾಪಾನಿ ದುಃಖಾನಿ ಹಿ ಭವಂತಿ ಹಿ ।
ತಾನಿ ಯಾ ಕ್ಷಮತೇ ಸಾಧ್ವೀ ಪುರುಷೋ ವಾ ಸ ಉತ್ತಮಃ ॥ ೮೧ ॥

ಯನ್ಮಯಾ ಪಾಪಯಾ ಪಾಪಂ ಕೃತಂ ವೈ ಪೂರ್ವಜನ್ಮನಿ ।
ತದ್ಭುಂಜಂತ್ಯಾ ನ ಮೇ ದುಃಖಂ ನ ವಿಷಾದಃ ಕಥಂ ಚ ಸ ॥ ೮೨ ॥

ಇತ್ಯೇವಮುಕ್ತ್ವಾ ಭರ್ತಾರಂ ಸಾ ಸುಭ್ರೂರನ್ವಪಾಲಯತ್ ।
ಆನೀಯ ಜನಕಾದ್ವಿತ್ತಂ ಬಂಧುಭ್ಯೋ ವರವರ್ಣಿನೀ ॥ ೮೩ ॥

---

೮೦. ಎಲೈ ಕಾಂತನೇ! ನೀನು ದೈನ್ಯಮಾಡಿ ಕೇಳಿಕೊಳ್ಳಬೇಡ. ನನ್ನನ್ನು ನೋಡಿ ಲಜ್ಜೆಪಟ್ಟುಕೊಳ್ಳಲೂ ಬೇಡ. ನಿನ್ನ ಮೇಲೆ ನನಗೆ ಕೋಪವೂ ಇಲ್ಲ. ಆ ರೀತಿಯಾಗಿ ಸ್ವಲ್ಪವೂ ತಿಳಿದುಕೊಳ್ಳಲೇ ಬೇಡ.

೮೧. ಪೂರ್ವದಲ್ಲಿ ಮಾಡಿದ ಪಾಪಗಳೇ ಈಗ ದುಃಖರೂಪವಾಗಿ ಪರಿಣಮಿಸುತ್ತಿವೆ. ಅದನ್ನು ಸಹಿಸುವ ಗಂಡಸಾಗಲಿ ಹೆಂಗಸಾಗಲಿ ಅವರೇ ಉತ್ತಮರು.

೮೨. ನಾನು ಪೂರ್ವಜನ್ಮದಲ್ಲಿ ಪಾಪಮಾಡಿ ಪಾಪಿಯಾಗಿದ್ದೆನು. ಅದನ್ನು ಈಗ ನಾನು ಅನುಭವಿಸುತ್ತಿರುವುದರಿಂದ ನನಗೆ ದುಃಖವೂ ಇಲ್ಲ. ಖೇದವೂ ಇಲ್ಲ.

೮೩. ಆ ಸಾಧ್ವಿಯು ಹೀಗೆಂದು ಹೇಳಿ ಆ ಗಂಡನನ್ನು ಕಾಪಾಡುತ್ತಿದ್ದಳು. ಧನವೆಲ್ಲವೂ ನಾಶವಾಗಿ ಹೋಗಿದ್ದುದರಿಂದ ತಂದೆಯ ಮನೆಯಿಂದಲೂ, ಬಂಧುಗಳ ಮನೆಯಿಂದಲೂ ಹಣವನ್ನು ತಂದು ಅವನನ್ನು ಕಾಪಾಡುತ್ತಿದ್ದಳು.

ಕ್ಷೀರೋದಶಾಯಿನಂ ವಿಷ್ಣುಂ ಭರ್ತುರ್ದೇಹೇ ವ್ಯಚಿಂತಯತ್ ।
ಶೋಧಯಂತೀ ದಿವಾರಾತ್ರೌ ಪುರೀಷಂ ಮೂತ್ರಮೇವ ಚ ॥ ೮೪ ॥

ನಖೇನ ಕರ್ಷತೀ ಭರ್ತುಃ ಕೃಮೀನ್ ಕಾಷ್ಠಾಚ್ಛನೈಶ್ಶನೈಃ ।
ನ ಸಾ ಸ್ವಪಿತಿ ರಾತ್ರೌ ತು ದಿವಾ ವಾ ವರವರ್ಣಿನೀ ॥ ೮೫ ॥

ಭರ್ತುರ್ದುಃಖೇನ ಸಂತಪ್ತಾ ದುಃಖಿತೇದಮಥಾಬ್ರವೀತ್ ।
ದೇವಾಶ್ಚ ಪಾಂತು ಭರ್ತಾರಂ ಪಿತರೋ ಯೇ ಚ ವಿಶ್ರುತಾಃ ॥ ೮೬ ॥

ಕುರ್ವಂತು ರೋಗಹೀನಂ ಮೇ ಭರ್ತಾರಂ ಹತಕಲ್ಮಷಂ ।
ಚಂಡಿಕಾಯೈ ಪ್ರದಾಸ್ಯಾಮಿ ರಕ್ತಂ ಮಾಂಸಂ ಮುಖೋದ್ಭವಂ ॥ ೮೭ ॥

---

೮೪. ಆ ಕಾಂತಿಮತಿಯು ಗಂಡನನ್ನು ಕ್ಷೀರಸಮುದ್ರಶಾಯಿಯಾದ ವಿಷ್ಣುವೆಂದೇ ತಿಳಿದು ಅವನೇ ದೇಹದಲ್ಲಿರುವಂತೆ ಭಾವಿಸಿದಳು. ಸ್ವಲ್ಪವೂ ಬೇಸರಪಡದೆ ಅವನ ಮಲಮೂತ್ರಗಳನ್ನು ಹಗಲೂ ರಾತ್ರಿಯಲ್ಲೆಲ್ಲಾ ಬಳಿದು ಶುದ್ಧಿಮಾಡುತ್ತಿದ್ದಳು.

೮೫. ಆತನ ದುರ್ಗಂಧಪೂರಿತವಾದ ಹುಣ್ಣುಗಳಲ್ಲಿರುವ ಹುಳುಗಳನ್ನು ಕೈ ಬೆರಳಿನ ಉಗುರುಗಳಿಂದ ಅಸಹ್ಯಪಡದೆ ತೆಗೆದು ಹಾಕುವಳು. ಅದರೊಳಗಿನ ಕೀವು ಮುಂತಾದುವನ್ನು ನಿಧಾನವಾಗಿ ತೆಗೆಯುವಳು. ಅವನ ಸೇವೆಯಲ್ಲಿಯೇ ಆಸಕ್ತಳಾಗಿ ಹಗಲಾಗಲಿ ರಾತ್ರಿಯಾಗಲಿ ಮಲಗುತ್ತಲೇ ಇರುತ್ತಿರಲಿಲ್ಲ.

೮೬. ಗಂಡನು ದುಃಖಪಡುತ್ತಿದ್ದುದರಿಂದ ತಾನೂ ಆದರಿಂದ ದುಃಖಿತಳಾಗಿ ಇಂತೆಂದು ಹೇಳುತ್ತಿರುವಳು. ದೇವತೆಗಳೂ ಪಿತೃಗಳೂ ನನ್ನ ಗಂಡನನ್ನು ಕಾಪಾಡಲಿ.

೮೭. ನನ್ನ ಗಂಡನನ್ನು ರೋಗವಿಲ್ಲದವನನ್ನಾಗಿಯೂ ಮಾಡಿ ಅವನ ಪಾಪವನ್ನೆಲ್ಲಾ ನಾಶಮಾಡಲಿ. ನನ್ನ ಗಂಡನಿಗೆ ಚಂಪಕೆಯು ವಾಸಿಮಾಡಿದರೆ ಆಕೆಗೆ ನನ್ನ ಮುಖದಿಂದ ರಕ್ತ ಮಾಂಸಗಳನ್ನು ತೆಗೆದು ಅರ್ಪಿಸುತ್ತೇನೆ.

ಸುಷ್ಟ್ವನ್ನಂ ಮಹಿಷೋಪೇತಂ ಭರ್ತುರಾರೋಗ್ಯಹೇತವೇ ।
ಮೋದಕಾನಪಿ ದಾಸ್ಯಾಮಿ ವಿಘ್ನೇಶಾಯ ಮಹಾತ್ಮನೇ ॥ ೮೮ ॥

ಮಂದವಾರೇ ಕರಿಷ್ಯಾಮಿ ಸದೈವಾಹಮುಪೋಷಣಂ ।
ನೋಪಭೋಕ್ಷ್ಯಾಮಿ ಮಧುರಂ ನೋಪಭೋಕ್ಷ್ಯಾಮಿ ವೈ ಘೃತಂ ॥ ೮೯ ॥

ತೈಲಾಭ್ಯಂಗವಿಹೀನಾಹಂ ಸದಾ ಸ್ಥಾಸ್ಯಾಮಿ ಭೂತಲೇ ।
ಜೀವತ್ವಯಂ ರೋಗಹೀನೋ ಭರ್ತಾ ಮೇ ಶರದಾಂ ಶತಂ ॥ ೯೦ ॥

ಏವಂ ಸಾ ವ್ಯಾಹರೇದ್ದೇವೀ ವಾಸರೇ ವಾಸರೇ ಗತೇ ।
ತದಾ ಚಾಗಾನ್ಮುನಿಃ ಕಶ್ಚಿನ್ಮಹಾತ್ಮಾ ದೇವಲಾಹ್ವಯಃ ॥ ೯೧ ॥

---

೮೮. ನನ್ನ ಗಂಡನಿಗೆ ಆರೋಗ್ಯವುಂಟಾದರೆ ಆ ಚಂಡಿಕೆಗೆ ಒಳ್ಳೆಯ ಅನ್ನವನ್ನೂ ಒಂದು ಕೋಣವನ್ನೂ ಬಲಿಯನ್ನಾಗಿ ಅರ್ಪಿಸುತ್ತೇನೆ. ನನ್ನ ಗಂಡನಿಗೆ ಆರೋಗ್ಯವಾದರೆ ಮಹಾತ್ಮನಾದ ವಿನಾಯಕನಿಗೆ ಕಡುಬುಗಳನ್ನು ಸಮರ್ಪಿಸುತ್ತೇನೆ.

೮೯. ನನ್ನ ಗಂಡನಿಗೆ ರೋಗವು ವಾಸಿಯಾಗುವುದಕ್ಕೋಸ್ಕರ ಶನಿವಾರದ ದಿವಸ ಯಾವಾಗಲೂ ಉಪವಾಸವನ್ನು ಮಾಡುತ್ತೇನೆ. ಯಾವಾಗಲೂ ಮಧುರವಾದ ಬೆಲ್ಲ ಮುಂತಾದುವನ್ನೂ ತುಪ್ಪವನ್ನೂ ತಿನ್ನದೆ ಬಿಟ್ಟಿರುತ್ತೇನೆ.

೯೦. ನನ್ನ ಗಂಡನಿಗೆ ವಾಸಿಯಾದರೆ ನಾನು ಎಣ್ಣೆ ತೊಡೆದುಕೊಂಡು ಅಭ್ಯಂಜನ ಸ್ನಾನ ಮಾಡುವುದನ್ನು ಬಿಟ್ಟು ಬಿಡುತ್ತೇನೆ. ನನ್ನ ಗಂಡನು ಹೇಗಾದರೂ ರೋಗಹೀನನಾಗಿ ಆಗಿ ನೂರು ವರ್ಷಗಳು ಬದುಕಲಿ.

೯೧. ಆತನ ಹೆಂಡತಿಯು ದಿನದಿನವೂ ಈ ರೀತಿಯಾಗಿ ಹೇಳಿ ಹರಕೆಯನ್ನು ಮಾಡಿಕೊಳ್ಳುತ್ತಿರುವಳು. ಆ ಸಮಯದಲ್ಲಿ ದೇವಲನೆಂಬ ಹೆಸರಿನ ಒಬ್ಬ ಮಹಾಮುನಿಯು ಅಲ್ಲಿಗೆ ಬಂದನು.

ವೈಶಾಖಮಾಸಘರ್ಮಾರ್ತಃ ಸ ಯಯೌ ತಸ್ಯ ವೈ ಗೃಹೇ ।
ತದಾ ತೇ ಭಾರ್ಯಯಾ ಚೋಕ್ತಂ ವೈದ್ಯೋಽಯಂ ಗೃಹಮಾಗತಃ ॥ ೯೨ ॥

ತೇನ ತೇ ರೋಗಹಾನಿಸ್ಸ್ಯಾತ್ತಸ್ಯಾತಿಥ್ಯಂ ಕರೋಮ್ಯಹಂ ।
ಯದ್ಯಾಜ್ಞಾಪಯಸಿ ತ್ವಂ ಮಾಂ ನೋಚೇನ್ನೈವ ಕರೋಮ್ಯಹಂ ॥

ಜ್ಞಾತ್ವಾ ತ್ವಾಂ ಧರ್ಮವಿಮುಖಂ ಭಿಷಗ್ವ್ಯಾಜೇನ ವಂಚಿತಂ ।
ತಸ್ಯಾತಿಥ್ಯಂ ತು ವೈ ಕರ್ತುಂ ದತ್ತಾಜ್ಞಾ ವೈ ಪುರಾ ತ್ವಯಾ ॥ ೯೪ ॥

ತಸ್ಯೈ ಪತ್ನೀ ತದಾ ತುಷ್ಟಾ ಪೂಜಯಾಮಾಸ ಸಾ ಮುನಿಂ ।
ಪಾದಾವನೇಜನಂ ಕೃತ್ವಾ ತಜ್ಜಲಂ ಮೂರ್ಧ್ನಿ ತೇಽವಹತ್ ॥ ೯೫ ॥

---

೯೨. ವೈಶಾಖಮಾಸದ ಬಿಸಿಲಿನಿಂದ ಬಹುವಾಗಿ ಬೆಂದವನಾಗಿ ಆತನು ಮನೆಗೆ ಬಂದನು. ಆಗ ಆ ನಿನ್ನ ಹೆಂಡತಿಯು ನಿನಗೆ ವೈದ್ಯನು ಬಂದಿರುವನು. ಎಂದು ಹೇಳಿದಳು.

೯೩. ಅವನು ನಿನ್ನ ರೋಗವನ್ನು ವಾಸಿಮಾಡುತ್ತಾನೆ. ನಿನ್ನ ಅಪ್ಪಣೆ ಯಾದರೆ ಆತನಿಗೆ ಉಪಚರಿಸುತ್ತೇನೆ. ಇಲ್ಲದಿದ್ದರೆ ಮಾಡುವುದಿಲ್ಲ. ಎಂದಳು.

೯೪. ನೀನು ಧರ್ಮಮಾಡುವುದಿಲ್ಲವೆಂದು ಆಕೆಯು ತಿಳಿದು ವೈದ್ಯನೆಂದರೆ ಆಗಬಹುದು ಎಂದು ಹೇಳುತ್ತೀಯೆ ಎಂದು ತಿಳಿದು ಆಕೆಯು ನಿನಗೆ ವೈದ್ಯನೆಂದು ಸುಳ್ಳನ್ನು ಹೇಳಿ ವಂಚಿಸಿದಳು. ಅವನಿಗೆ ಆತಿಥ್ಯವನ್ನು ಮಾಡುವಂತೆ ನೀನು ಆಕೆಗೆ ಅಪ್ಪಣೆಯನ್ನು ಕೊಟ್ಟೆ.

೯೫. ನಿನ್ನ ಒಪ್ಪಿಗೆಯಿಂದ ನಿನ್ನ ಹೆಂಡತಿಯು ಸಂತೋಷಗೊಂಡು ಆ ದೇವಲಮುನಿಯನ್ನು ಪೂಜಿಸಿದಳು. ಅವನ ಕಾಲುಗಳನ್ನು ತೊಳೆದು ಆ ತೀರ್ಥ ವನ್ನು ತಲೆಯಮೇಲೆ ಪ್ರೋಕ್ಷಿಸಿಕೊಂಡಳು. ಮತ್ತು ನಿನ್ನ ತಲೆಯಮೇಲೆಯೂ ಪ್ರೋಕ್ಷಿಸಿದಳು.

ಪಾತುಂ ತುಭ್ಯಂ ದದೌ ತೀರ್ಥಂ ತ್ವಾ ಮುಕ್ತ್ವಾ ಭೇಷಜಂ ತ್ವಿತಿ ।
ಪಾನಕಂ ಚ ದದೌ ತಸ್ಮೈ ಘರ್ಮಾರ್ತಾಯ ಮಹಾತ್ಮನೇ ॥ ೯೬ ॥

ದಿವ್ಯಾನ್ನೈರ್ಭೋಜಯಾಮಾಸ ಸುಗಂಧವ್ಯಜನೇ ದದೌ ।
ತ್ವಯಾನುಮೋದಿತಾ ಸಾಽಯಂ ಘರ್ಮತಾಪಂ ನ್ಯವಾರಯತ್ ॥ ೯೭ ॥

ಸ ಪ್ರಾತರುದಿತೇ ಸೂರ್ಯೇ ಮುನಿರ್ಗ್ರಾಮಾಂತರಂ ಯಯೌ ।
ಅಥ ಚಾಲ್ಪೇನ ಕಾಲೇನ ಸನ್ನಿಪಾತೋಽಭವತ್ತವ ॥ ೯೮ ॥

ತ್ರಿಕಟುಮುಖ ಆಧಾತ್ಸಾ ಭರ್ತಾಂಗುಲಿಮಖಂಡಯತ್ ।
ಕಫೇನ ದಂತಪಂಙ್ಕ್ತಿಭ್ಯಾಂ ಮೀಲಿತಾಭ್ಯಾಂ ದೃಢಂ ತದಾ ॥ ೯೯ ॥

---

೯೬. ಇದು ಅವನು ಕೊಟ್ಟ ಔಷಧವೆಂದು ಹೇಳಿ ಆ ತೀರ್ಥವನ್ನು ನಿನ್ನ ಬಾಯಿಗೆ ಬಿಟ್ಟು ಕುಡಿಸಿದಳು. ಬಿಸಿಲಿನ ಬೇಗೆಯನ್ನು ಹೊಂದಿದ ಆತನಿಗೆ ಕುಡಿಯಲು ಪಾನಕವನ್ನು ಮಾಡಿಕೊಟ್ಟಳು.

೯೭. ದಿವ್ಯಾನ್ನವನ್ನು ಬಡಿಸಿ ಊಟಮಾಡಿಸಿದಳು. ಲಾಮಂಚದ ಬೀಸಣಿಗೆಯಿಂದ ಬೀಸಿದಳು. ಗಂಧವನ್ನು ಕೊಟ್ಟಳು. ಈ ರೀತಿಯಾಗಿ ನಿನ್ನ ಅಪ್ಪಣೆಯನ್ನು ಪಡೆದು ಅವನಿಗೆ ಆ ಬಿಸಿಲ ತಾಪವು ಹೋಗುವಂತೆ ಉಪಚರಿಸಿದಳು.

೯೮. ಸೂರ್ಯನು ಹುಟ್ಟುತ್ತಿರುವಾಗಲೇ ಆ ಮುನಿಯು ಬೇರೆಯ ಊರಿಗೆ ಹೊರಟು ಹೋದನು. ಅನಂತರ ಸ್ವಲ್ಪ ದಿವಸದಲ್ಲಿಯೇ ಸನ್ನಿಪಾತರೋಗವು ನಿನಗೆ ಪ್ರಾಪ್ತವಾಯಿತು.

೯೯. ಆಗ ಆಕೆಯು ತ್ರಿಕಟು (ಶುಂಠಿ, ಹಿಪ್ಪಲಿ, ಮೆಣಸು) ವನ್ನು ನಿನ್ನ ಬಾಯಲ್ಲಿ ಹಾಕಿದಳು. ಮತ್ತು ಕಫದಿಂದ ನೀನು ಉಸಿರಾಡದಂತೆ ಆಗಿ ಹಲ್ಲನ್ನು ಬಿಟ್ಟಿದ್ದಾಗ ಆಕೆಯು ಬಾಯೊಳಕ್ಕೆ ಬೆರಳನ್ನು ಹಾಕಿ ಆ ಕಫವನ್ನು ತೆಗೆಯುತ್ತಿದ್ದಳು. ನೀನು ಆಕೆಯ ಬೆರಳುಗಳನ್ನು ಕಡಿದು ಕತ್ತರಿಸಿಬಿಟ್ಟೆ.

ತೇ ವಕ್ತ್ರೇಂಗುಲಿಖಂಡಂ ತತ್ ಸ್ಥಿತಮೇವಾತಿಕೋಮಲಂ ।
ಖಂಡಯಿತ್ವಾಂಗುಲಿಂ ತಸ್ಯಾಃ ಪಂಚತ್ವಂ ತ್ವಂ ಗತಃ ಪುರಾ ॥ ೧೦೦ ॥

ಶಯ್ಯಾಯಾಂ ಸುಮನೋಜ್ಞಾಯಾಂ ಸ್ಮರಂಸ್ತಾಂ ಪುಂಶ್ಚಲೀಂ ಹೃದಿ ।
ಮೃತಂ ವಿಜ್ಞಾಯ ಭರ್ತಾರಂ ಭಾರ್ಯಾ ಕಾಂತಿಮತೀ ತವ ॥ ೧೦೧ ॥

ವಿಕ್ರೀತ್ವಾ ವಲಯೇ ಸ್ವೇ ತ್ವಾಂ ಗೃಹೀತ್ವಾ ಚಂದನಂ ಬಹು ।
ಚಕ್ರೇ ಚಿತಿಂ ತೇನ ಸಾಧ್ವೀ ಮಧ್ಯೇ ಕೃತ್ವಾ ಪತಿಂ ತದಾ ॥ ೧೦೨ ॥

ಸಮಾಲಿಂಗ್ಯ ಭುಜಾಭ್ಯಾಂ ತಂ ಪದೌ ಚಾಶ್ಲಿಷ್ಯ ಪಾದಯೋಃ ।
ಮುಖೇ ಮುಖಂ ನಿಜಂ ಕೃತ್ವಾ ಹೃದಯೇ ಹೃದಯಂ ತಥಾ ॥ ೧೦೩ ॥

ಗುಹ್ಯೇ ಕೃತ್ವಾ ತು ಗುಹ್ಯಂ ಸ್ವಮೇವಂ ಸಾ ರಾಮ ಮಾನಸಾ ।
ದಾಹಯಾಮಾಸ ಕಲ್ಯಾಣೀ ಭರ್ತುರ್ದೇಹಂ ರುಜಾನ್ವಿತಂ ।
ಆತ್ಮನಾ ಸಹ ತನ್ವಂಗೀ ಜ್ವಲಿತೇ ಜಾತವೇದಸಿ ॥ ೧೦೪ ॥

---

೧೦೦. ಆಕೆಯ ಕೋಮಲವಾದ ಬೆರಳಿನ ಚೂರುಗ ನಿನ್ನ ಬಾಯಲ್ಲಿಯೇ ಇದ್ದುಬಿಟ್ಟಿತು. ಆಕೆಯ ಬೆರಳುಗಳನ್ನು ಕಡಿದ ಒಡನೆಯೇ ನೀನು ಪ್ರಾಣಗಳನ್ನು ಬಿಟ್ಟುಬಿಟ್ಟೆ.

೧೦೧. ನೀನು ಹಾಸಿಗೆಯ ಮೇಲೆ ಬಿದ್ದು ಸಾಯುವಾಗಲೂ ಆ ಸೂಳೆಯನ್ನೇ ಮನಸ್ಸಿನಲ್ಲಿ ಸ್ಮರಿಸುತ್ತಿದ್ದೆ. ಕೊನೆಗೆ ಆ ಹೆಂಡತಿಯಾದ ಕಾಂತಿಮತಿಗೆ ನೀನು ಸತ್ತುಹೋದೆಯೆಂದು ತಿಳಿಯಿತು.

೧೦೨. ಆಗ ಆಕೆಯು ತನ್ನ ಕೈಯ್ಯಲ್ಲಿದ್ದ ಎರಡು ಬಳೆಗಳನ್ನು ಮಾರಿ ಆ ಹಣದಿಂದ ಶ್ರೀಗಂಧದ ಸೌದೆಯನ್ನು ತಂದು ನಿನಗೆ ಚಿತೆಯನ್ನು ಮಾಡಿದಳು. ಅದರ ಮಧ್ಯದಲ್ಲಿ ಗಂಡನ ಶವವನ್ನು ಇರಿಸಿದಳು.

೧೦೩-೧೦೪. ಆಗ ಆ ಗಂಡನ ಹೆಣವನ್ನು ಭುಜಗಳಿಂದ ಆಲಿಂಗಿಸಿಕೊಂಡಳು. ಕಾಲಿನಮೇಲೆ ಕಾಲನ್ನಿಟ್ಟಳು. ಮುಖದ ಮೇಲೆ ಮುಖವನ್ನಿಟ್ಟಳು. ಹೃದಯದ ಮೇಲೆ ಹೃದಯವನ್ನಿಟ್ಟಳು. ಆತನ ಗುಹ್ಯದಲ್ಲಿ ತನ್ನ ಗುಹ್ಯಸ್ಥಳ

ವಿಮುಚ್ಯ ದೇಹಂ ಸಹಸಾ ಜಗಾಮ ಪತಿಂ ನಮಸ್ಕೃತ್ಯ ಮುರಾರಿಲೋಕಂ

ತ್ವಮಂತ ಕಾಲೇ ಗಣಿಕೇಚ್ಛಯಾಹಿ ।
ದೇಹಂ ತ್ಯಕ್ತ್ವಾ ತ್ಯಕ್ತಕರ್ಮಾ ದುರಾತ್ಮಾ ॥
ವ್ಯಾಧಾಜ್ಜನ್ಮ ಪ್ರಾಪ್ಯ ಸ ದ್ಯೋತಿ ಘೋರಂ ।
ಹಿಂಸಾಸಕ್ತಸ್ಸರ್ವದೋದ್ವೇಗಕಾರಿ ॥ ೧೦೬ ॥

ದತ್ವಾ ತ್ವಯಾ ಪಾನಕಮರ್ಪಿತುಂ ವೈ ।
ಮಾಸೇನುಜ್ಞಾ ಮಾಧವೇ ಸದ್ದ್ವಿಜಾಯ ॥
ಭಿಷಗ್ವ್ಯಾಜಾತ್ತೇನ ಜಾತಾ ಸುಬುದ್ಧಿಃ ।
ಧರ್ಮಂ ಕರ್ತುಂ ಪಾದರಕ್ಷೇರ್ಪಿತೇ ಮೇ ॥ ೧೦೭ ॥

ಧೃತಂ ಮೂರ್ಧ್ನಾ ಪಾದಶೌಚಾವಶೇಷಂ ।
ಜಲಂ ಮುನೇಸ್ಸರ್ವಪಾಪಾಪಹಾರಿ ॥
ತೇನೈವ ತೇ ಸಂಗತಿರ್ಮೇವ ನೇಸ್ಮಿ ।
ಜಾತಾ ಶ್ರೋತುಂ ಸ್ವೀಯಪುಣ್ಯಂ ಮತಿಶ್ಚ ॥ ೧೦೮ ॥

ವಿರುವಂತೆ ಮಾಡಿದಳು. ಹೀಗೆ ಮಾಡಿಕೊಂಡು ಶ್ರೀ ರಾಮನ ಧ್ಯಾನವನ್ನು ಮಾಡುತ್ತ ಆ ರೋಗದಿಂದ ಕೂಡಿದ ಗಂಡನ ದೇಹವನ್ನು ಸುಡಿಸಿದಳು. ಬೆಂಕಿಯು ಅವರನ್ನು ಸುಟ್ಟುಬಿಡಲು ಕಾಂತಿಮತಿಯು ಈ ದೇಹವನ್ನು ತ್ಯಜಿಸಿ ಗಂಡನಿಗೆ ನಮಸ್ಕರಿಸಿ ವೈಕುಂಠಕ್ಕೆ ಹೊರಟು ಹೋದಳು.

೧೦೬. ನೀನು ನಿತ್ಯಕರ್ಮಗಳನ್ನು ಬಿಟ್ಟು ದುಷ್ಟನೂ ಪಾಪಿಯೂ ಆಗಿ ಸಾಯುವ ಕೊನೆಗಾಲದಲ್ಲಿಯೂ ಕೂಡ ಆ ಸೂಳೆಯನ್ನು ಸ್ಮರಿಸಿಕೊಂಡೇ ಸತ್ತೆ. ಆದ್ದರಿಂದ ವ್ಯಾಧರ ಹೊಟ್ಟೆಯಲ್ಲಿ ಹುಟ್ಟಿ ಬಹುಬಿಸಿಲುಳ್ಳ ಈ ಕಾಡಿನಲ್ಲಿ ಜನ ಗಳಿಗೆ ಉದ್ವೇಗಕಾರಿಯಾಗಿ ಹಿಂಸಾಸಕ್ತವಾಗಿ ಆದ ಈ ಜನ್ಮವನ್ನು ಹೊಂದಿದೆ.

೧೦೭. ಆದರೆ ವೈಶಾಖದ ಬಿಸಿಲಿನಲ್ಲಿ ಆ ಬ್ರಾಹ್ಮಣನಿಗೆ ಪಾನಕವನ್ನು ಕೊಡಲು ನೀನು ಒಪ್ಪಿಗೆಯನ್ನು ಕೊಟ್ಟೆ. ವೈದ್ಯನೆಂದು ಮೋಸಪಡಿಸಿದ ಮಾತಿನಿಂದ ನಿನಗೆ ಒಳ್ಳೆಯ ಬುದ್ಧಿಯು ಹುಟ್ಟಿತು. ಆ ಧರ್ಮಬುದ್ಧಿಯಿಂದ ನನಗೆ ಪಾದುಕೆಗಳನ್ನು ಕೊಡಲು ಬುದ್ಧಿಯು ಬಂದಿತು.

೧೦೮. ಅವನ ಪಾದೋದಕವನ್ನು ತಲೆಯಲ್ಲಿ ನೀನು ಧರಿಸಿದೆ ಯಾದುದರಿಂದ ಅದು ನಿನ್ನ ಪಾಪಗಳನ್ನೆಲ್ಲಾ ನಾಶಮಾಡಿತು. ಆದ್ದರಿಂದ ಈ ವನದಲ್ಲಿಯೂ ನಿನಗೆ ನನ್ನ ಸಂಗಡ ಸೇರುವಿಕೆಯು ಬಂದ. ನಿನ್ನ ಪುಣ್ಯವನ್ನು ಕೇಳುವ ಬುದ್ಧಿಯೂ ನಿನಗುಂಟಾಯಿತು.

ಮುಖೇ ಕೃತ್ವಾಂಗುಳೀಂ ಯಸ್ಮಾನ್ಮೃತಃ ಪೂರ್ವಭವಾಂತರೇ ।
ತಸ್ಮಾದತ್ರ ವನೇ ಮಾಂಸಾಹಾರಸ್ತೇಭೂದ್ವನೇಚರ ॥ ೧೦೯ ॥

ವೇಶ್ಯಾ ಸಾ ಭಿಲ್ಲಿನೀ ಜಾತಾ ಭಾರ್ಯಾ ಯಾ ತವ ವರ್ತತೇ ।
ಶಯ್ಯಾಯಾಂ ಮರಣಾತ್ತೇತ್ರ ಶಯನಂ ಭುವಿ ಸರ್ವದಾ ॥ ೧೧೦ ॥

ಇತೀ ತೇ ಸರ್ವಮಾಖ್ಯಾತಂ ಪೂರ್ವಜನ್ಮನಿ ಯತ್ಕೃತಂ ।
ತತ್ಕರ್ಮ ಪುಣ್ಯಂ ಪಾಪಂ ಚ ದೃಷ್ಟಂ ದಿವ್ಯೇನ ಚಕ್ಷುಷಾ ॥ ೧೧೧ ॥

ಅತಃ ಪರಂ ಭಾವಿ ವೃತ್ತಂ ಶೃಣು ತೇಹಂ ವದಾಮಿ ವೈ ।
ಕೃಣುರ್ನಾಮ ಮುನಿಸ್ತ್ವಗ್ರೇ ಕಸ್ಮಿಂಶ್ಚಿಚ್ಚ ಸರೋವರೇ ॥ ೧೧೨ ॥

ಕರಿಷ್ಯತಿ ತಪಸ್ತೀವ್ರಂ ಚಾನ್ನವ್ಯಾಪಾರ ವರ್ಜಿತಃ ।
ಪಶ್ಚಾತ್ತಪೋವಿರಾಮಾಂತೇ ತನ್ನೇತ್ರಾಭ್ಯಾಂ ಬಹಿಸ್ಸೃತಂ ॥ ೧೧೩ ॥

---

೧೦೯. ನೀನು ಹಿಂದಿನ ಜನ್ಮದಲ್ಲಿ ಕಚ್ಚಿದ್ದ ಬೆರಳುಗಳನ್ನು ಬಾಯಲ್ಲಿಯೇ ಇಟ್ಟುಕೊಂಡು ಸತ್ತುದರಿಂದ ನಿನಗೆ ಈ ಕಾಡಿನಲ್ಲಿ ಮಾಂಸವನ್ನು ತಿಂದು ಜೀವಿಸುವಿಕೆಯು ಪ್ರಾಪ್ತವಾಯಿತು.

೧೧೦. ನಿನ್ನ ಆ ಸೂಳೆಯು ಈಗಲೂ ನಿನ್ನ ಹೆಂಡತಿಯಾಗಿ ಭಿಲ್ಲರವಳಾಗಿ ಹುಟ್ಟಿರುವಳು. ನೀನು ಹಾಸಿಗೆಯಲ್ಲಿ ಮಲಗಿ ಸತ್ತುದರಿಂದಲೇ ಈಗ ಯಾವಾಗಲೂ ನೆಲದಮೇಲೆ ಮಲಗುತ್ತಿದ್ದೀಯೆ.

೧೧೧. ನೀನು ಪೂರ್ವಜನ್ಮದಲ್ಲಿ ಮಾಡಿದುದೆಲ್ಲವನ್ನೂ ಹೇಳಿದ್ದೇನೆ. ಆ ನಿನ್ನ ಪುಣ್ಯಗಳನ್ನೂ ಪಾಪಗಳನ್ನೂ ನಾನು ನನ್ನ ದಿವ್ಯವಾದ ದೃಷ್ಟಿಯಿಂದ ತಿಳಿದೆನು.

೧೧೨-೧೧೩. ಇನ್ನು ನಿನಗೆ ಮುಂದಾಗುವ ವಿಷಯವನ್ನು ಹೇಳುತ್ತೇನೆ. ಕೇಳು. ಇನ್ನು ಮುಂದೆ ಕೃಣುವೆಂಬ ಋಷಿಯು ಒಂದು ಸರೋವರದ ಬಳಿಯಲ್ಲಿ ಅನ್ನ ನೀರುಗಳನ್ನು ಬಿಟ್ಟು ತಪಸ್ಸನ್ನು ಮಾಡುವನು. ಅವನ ತಪಸ್ಸು ಮುಗಿದಮೇಲೆ ಅವನ ಕಣ್ಣಿನಿಂದ ಹೊರಗೆ ಅವನ ವೀರ್ಯವು ಜಿಬುರಿನ ರೂಪದಿಂದ ಬರುವುದು.

ವೀರ್ಯಂ ದೃಷ್ಟ್ವೋರಗೀ ಕಾಚಿತ್ ಸ್ವಯಂ ಸ್ಖಲಿತಮಂಜಸಾ ।
ಗ್ರಹೀಷ್ಯತಿ ಋತೋಃ ಕಾಲೇ ತಸ್ಯಾಸ್ತ್ವಂ ಹಿ ಜನಿಷ್ಯಸಿ ॥ ೧೧೪ ॥

ಕಿರಾತಾಃ ಪಾಲಯಿಷ್ಯಂತಿ ಕಿರಾತಸ್ತ್ವಂ ಭವಿಷ್ಯಸಿ ।
ಉಪಾನಹಾವರ್ಪಿತೇದ್ಯ ಯಸ್ಮಾತ್ತತ್ಪುಣ್ಯತಸ್ತದಾ ॥ ೧೧೫ ॥

ಭವಿಷ್ಯತಿ ಸಂಗತಿಸ್ತೇ ವನೇ ಸಪ್ತಮುನೀಶ್ವರೈಃ ।
ತೇಷಾಂ ಪ್ರಸಾದಾದ್ವಾಲ್ಮೀಕಿಮುನಿಸ್ತ್ವಂ ಹಿ ಭವಿಷ್ಯಸಿ ॥ ೧೧೬ ॥

ಯಸ್ತ್ವಂ ರಾಮಕಥಾಂ ದಿವ್ಯಾಂ ಸುಪ್ರಬಂಧೈಃ ಕರಿಷ್ಯಸಿ ।
॥ ವಾಲ್ಮೀಕಿರುವಾಚ ॥
ಇತಿವ್ಯಾಧಂ ಸಮಾದಿಶ್ಯ ಧರ್ಮಾನ್ವೈಶಾಖಜಾನಪಿ ॥ ೧೧೭ ॥

ಉಪದಿಶ್ಯ ಸವಿಸ್ತಾರಂ ಪ್ರತಸ್ಥೇ ಗೌತಮೀಂ ತದಾ ।
ಸ ಶಂಖಃ ಕುಂಡಲಾದ್ಯೈಶ್ಚ ತದ್ದತ್ತೈಸ್ತುಷ್ಟಮಾನಸಃ ॥ ೧೧೮ ॥

---

೧೧೪. ಆ ಕಣ್ಣಿನಿಂದ ಹೊರಟ ವೀರ್ಯವು ಬೇಗನೆ ಕೆಳಗೆ ಬೀಳುವುದು. ಅದನ್ನು ಒಬ್ಬಳು ನಾಗಕನ್ನಿಕೆಯು ತೆಗೆದುಕೊಂಡು ತಿನ್ನುವಳು. ಆಗ ಅವಳಿಗೆ ಋತುಕಾಲವಾಗಿರುವುದರಿಂದ ಅವಳಲ್ಲಿ ನೀನು ಹುಟ್ಟುತ್ತೀಯೆ.

೧೧೫--೧೧೭. ಆಗ ನಿನ್ನನ್ನು ಕಿರಾತರೇ ಪಾಲಿಸುತ್ತಾರಾದ್ದರಿಂದ ನೀನು ಕಿರಾತನೇ ಆಗುತ್ತೀಯೆ. ಈಗ ನೀನು ಈ ಪಾದರಕ್ಷೆಗಳನ್ನು ಕೊಟ್ಟ ಪುಣ್ಯದಿಂದ ಕಾಡಿನಲ್ಲಿ ಸಪ್ತಋಷಿಗಳ ದರ್ಶನವು ನಿನಗಾಗುತ್ತದೆ. ಅವರ ಅನುಗ್ರಹದಿಂದ ನೀನು ವಾಲ್ಮೀಕಿಋಷಿಯಾಗಿ ಆಗುತ್ತೀಯೆ. ಆಗ ನೀನು ಶ್ರೀರಾಮಚರಿತ್ರೆಯನ್ನು ಶ್ಲೋಕಗಳ ರೂಪದಲ್ಲಿ ಬರೆಯುತ್ತೀಯೆ. ವಾಲ್ಮೀಕಿಯು ಹೇಳಿದನು—ಆ ಋಷಿಯು ವ್ಯಾಧನಿಗೆ ಈ ರೀತಿಯಾಗಿ ಹೇಳಿ ವೈಶಾಖಮಾಸದ ಧರ್ಮಗಳನ್ನು ಹೇಳಿದನು.

೧೧೮ ವ್ಯಾಧನು ಆತನಿಂದ ತೆಗೆದುಕೊಂಡಿದ್ದ ಕುಂಡಲ ಮುಂತಾದುವುಗಳನ್ನೂ ಕೊಡಲು ಅದರಿಂದ ಸಂತೋಷಗೊಂಡು ಶಂಖನು ಮುಂದಕ್ಕೆ ಹೊರಟು ಗೌತಮೀನದಿಯ ಬಳಿಗೆ ಹೊರಟು ಹೋದನು.

ವ್ಯಾಧೋಽಪಿ ಶಂಖವಚನಾತ್ತಸ್ಮಿನ್ನೇವ ವನೇ ಚಿರಂ ।
ವನ್ಯೈರ್ವೈಶಾಖಮಾಸೀಯಾನ್ ಧರ್ಮಾನ್ಪ್ರೀತ್ಯಾಕರೋಚ್ಛುಭಾನ್ ॥ ೧೧೯ ॥

ವ್ಯಾಧಜನ್ಮಾತ್ಯಯೇ ಜಾತೇ ಕೃಣೋಃ ಪುತ್ರಸ್ತ್ವಹಂ ತತಃ ।
ಪನ್ನಗೀ ಜಠರೋದ್ಭೂತಸ್ತ್ವರಣ್ಯೇ ರಘುನಂದನ ॥ ೧೨೦ ॥

ಅಹಂ ಪುರಾ ಕಿರಾತೇಷು ತಿರಾತೈಸ್ಸಹ ವರ್ಧಿತಃ ।
ಜನ್ಮಮಾತ್ರದ್ವಿಜತ್ವಂ ಮೇ ಶೂದ್ರಾಚಾರರತಸ್ಸದಾ ॥ ೧೨೧ ॥

ಶೂದ್ರಾಯಾಂ ಬಹವಃ ಪುತ್ರಾಶ್ಚೋತ್ಪನ್ನಾ ಮೇಽಜಿತಾತ್ಮನಃ ।
ತತಶ್ಚೋರೈಶ್ಚ ಸಂಗಮ್ಯ ಚೋರೋಽಹಮಭವಂ ಪುನಃ ॥ ೧೨೨ ॥

ಧನುರ್ಬಾಣಧರೋ ನಿತ್ಯಂ ಜೀವಾನಾಮಂತಕೋಪಮಃ ।
ಏಕದಾ ಮುನಯಸ್ಸಪ್ತ ದೃಷ್ಟ್ವಾ ಮಹತಿ ಕಾನನೇ ॥ ೧೨೩ ॥

---

೧೧೯. ಇತ್ತ ವ್ಯಾಧನು ಶಂಖನ ಉಪದೇಶದಂತೆ ಆ ಕಾಡಿನಲ್ಲಿಯೇ ವೈಶಾಖಮಾಸದ ಧರ್ಮಗಳನ್ನು ಆದರದಿಂದ ಮಾಡುತ್ತ ಬಹುಕಾಲದವರೆಗೆ ಇದ್ದನು.

೧೨೦. ಈ ವ್ಯಾಧನ ಜನ್ಮವು ನಾಶವಾದಮೇಲೆ ನಾನು ಕೃಣುವಿನ ಮಗನಾಗಿ ನಾಗಕನ್ನಿಕೆಯ ಹೊಟ್ಟೆಯಲ್ಲಿ ಅರಣ್ಯದಲ್ಲಿ ಹುಟ್ಟಿದೆನು.

೧೨೧ ಕಿರಾತರಿರುವಲ್ಲಿಯೇ ಹುಟ್ಟಿ ಕಿರಾತರಿಂದ ಪೋಷಿತನಾಗಿ ಕಿರಾತರಿಂದಲೇ ವರ್ಧಿತನಾದೆನು. ನಾನು ಹುಟ್ಟಿದುದು ಮಾತ್ರ ಬ್ರಾಹ್ಮಣನಿಂದಾದರೂ ಯಾವಾಗಲೂ ಶೂದ್ರಾಚಾರದಲ್ಲಿಯೇ ಆಸಕ್ತನಾಗಿದ್ದೆನು.

೧೨೨–೧೨೩. ಶೂದ್ರಾಚಾರದಲ್ಲಿದ್ದುಕೊಂಡು ನಿಯಮವನ್ನೇ ಹಿಡಿಯದ ನನಗೆ ಆ ಶೂದ್ರರಲ್ಲಿಯೇ ಮದುವೆಯಾಗಿ ಆಕೆಯಲ್ಲಿ ಅನೇಕಜನ ಮಕ್ಕಳಾದರು. ನಾನು ಆ ಕಳ್ಳರೊಡನೆ ಸೇರಿಕೊಂಡು ಮತ್ತೆ ಕಳ್ಳನಾಗಿ ಕಳ್ಳತನವನ್ನೇ ಮಾಡುತ್ತ ಬಂದೆನು. ಧನುರ್ಬಾಣಗಳನ್ನು ಯಾವಾಗಲೂ ಧರಿಸಿರುತ್ತ ಪ್ರಾಣಿಗಳಿಗೆ ಯಮನಂತಾದೆನು. ಹೀಗಿರುತ್ತಿರಲು ಒಂದುಸಾರಿ ಆ ಕಾಡಿಗೆ ಸಪ್ತಋಷಿಗಳು ಬರಲು ಅವರನ್ನು ನೋಡಿದೆನು.

ಸಾಕ್ಷಾನ್ಮಯಾ ಪ್ರಕಾಶಂತೋ ಜ್ವಲನಾರ್ಕಸಮಪ್ರಭಾಃ ।
ತಾನನ್ವಧಾವಂ ಲೋಭೇನ ತೇಷಾಂ ಸರ್ವಪರಿಚ್ಛದಾನ್ ॥ ೧೨೪ ॥

ಗೃಹೀತುಕಾಮಸ್ತತ್ರಾಹಂ ತಿಷ್ಠತಾಂ ತಿಷ್ಠತಾಮಿತಿ ।
ಅಬ್ರವಂ ಮುನಯೋಽಪೃಚ್ಛನ್ ಕಿಮಾಯಾಸಿ ದ್ವಿಜಾಧಮ ॥ ೧೨೫ ॥

ಅಹಂ ತಾನಬ್ರವಂ ಕಿಂಚಿದಾದಾತುಂ ಮುನಿಸತ್ತಮಾಃ ।
ಪುತ್ರದಾರಾದಯಸ್ಸಂತಿ ಬಹವೋ ಮೇ ಬುಭುಕ್ಷಿತಾಃ ॥ ೧೨೬ ॥

ತೇಷಾಂ ಸಂರಕ್ಷಣಾರ್ಥಾಯ ಚರಾಮಿ ಗಿರಿಕಾನನೇ ।
ತತೋ ಮಾಮೂಚುರವ್ಯಗ್ರಾಃ ಪೃಚ್ಛ ಗತ್ವಾ ಕುಟುಂಬಕಂ ॥ ೧೨೭ ॥

ಯೋ ಯೋ ಮಯಾ ಪ್ರತಿದಿನಂ ಕ್ರಿಯತೇ ಪಾಪಸಂಚಯಃ ।
ಯೂಯಂ ತದ್ಭಾಗಿನಸ್ಸರ್ವೇ ನೇತಿ ವೇತಿ ಪೃಥಕ್ ಪೃಥಕ್ ॥ ೧೨೮ ॥

---

೧೨೪. ಅವರು ಜ್ವಲಿಸುತ್ತಿರುವ ಸೂರ್ಯನಂತೆ ಪ್ರಕಾಶವುಳ್ಳವರಾಗಿದ್ದರು. ಅವರಲ್ಲಿರುವ ಬಟ್ಟೆಬರೆ ಮುಂತಾದುದನ್ನು ಕಿತ್ತುಕೊಳ್ಳಲು ಅವರ ಹಿಂದೆ ಓಡಿಹೋದೆನು.

೧೨೫. ನಿಲ್ಲಿರಿ ನಿಲ್ಲಿರಿ. ಎಂಬದಾಗಿ ಕೂಗಿಕೊಂಡೇ ಅವರನ್ನು ಹಿಡಿಯಲು ಹೋದೆನು. ಆಗ ಅವರು ಎಲೈ ದ್ವಿಜಾಧಮನೇ ! ನೀನು ಯಾತಕ್ಕೆ ಬರುತ್ತಿದ್ದೀಯೆ ? ಎಂದು ಕೇಳಿದರು.

೧೨೬-೧೨೭. ಎಲೈ ಮುನಿಪೋತ್ತಮರಾ ! ನಿಮ್ಮಲ್ಲಿರುವ ಪದಾರ್ಥಗಳನ್ನು ಕಸಿದುಕೊಂಡು ಹೋಗಲು ಬಂದಿದ್ದೇನೆ. ನನಗೆ ಮಕ್ಕಳು ಹೆಂಡರು ಅನೇಕರಾಗಿದ್ದಾರೆ. ಅವರೆಲ್ಲರೂ ಹಸಿದಿರುವರು. ಅವರನ್ನು ಕಾಪಾಡಲು ಈ ಬೆಟ್ಟಗಾಡುಗಳಲ್ಲಿ ಸಂಚರಿಸುತ್ತಿದ್ದೇನೆ. ಎಂದೆನು. ಆಗ ಅವರು ನನ್ನನ್ನು ಕುರಿತು ಇಂತೆಂದರು.

೧೨೮ ಎಲೈ ವ್ಯಾಧನೇ ! ನೀನು ಹೋಗಿ ನಿನ್ನ ಕುಟುಂಬವನ್ನು ಕೇಳು. ನಾನು ಪ್ರತಿದಿನದಲ್ಲಿಯೂ ಮಾಡುವ ಪಾಪಗಳೆಷ್ಟಿವೆಯೋ ಅಷ್ಟರಲ್ಲಿಯೂ ನೀವು ಎಲ್ಲರೂ ಭಾಗಿಗಳಾಗುವಿರಾ ? ಇಲ್ಲವೆ ? ಎಂಬದಾಗಿ ಅವರಲ್ಲಿ ಒಬ್ಬೊಬ್ಬರನ್ನೂ ಕೇಳು.

ವಯಂ ಸ್ಥಾಸ್ಯಾಮಹೇಯಾವದಾಗಮಿಷ್ಯಸಿ ನಿಶ್ಚಯಾತ್ ।
ಯತ್ಪಾಪಂ ಬ್ರಹ್ಮಹತ್ಯಯಾಂ ಯತ್ಪಾಪಂ ಮದ್ಯಪಾನತಃ ॥ ೧೨೯ ॥

ತೇನ ಪಾಪೇನ ಲಿಂಪಾಮೋ ಯದಿ ಗಚ್ಛಾಮಹೇ ವಯಂ ।
ಯತ್ಪಾಪಂ ಹೇಮಚೌರ್ಯೇಣ ಗುರುದಾರಾಗಮಾಚ್ಚ ಯತ್ ॥ ೧೩೦ ॥

ತೇನ ಪಾಪೇನ ಲಿಂಪಾಮೋ ತ್ವಾಮಪೃಷ್ಟ್ವಾ ವನೇಚರ ।
ಚೇದ್ವ್ರಜಾಮೋ ವಯಂ ಸರ್ವೇ ಇತಸ್ತೇ ಪೃಷ್ಠತೋ ಬಹಿಃ ॥ ೧೩೧ ॥

ಸಂಸರ್ಗಜನಿತಂ ಪಾಪಂ ಬ್ರಹ್ಮಸ್ವಹರಣಾಚ್ಚ ಯತ್ ।
ತೇನ ಪಾಪೇನ ಲಿಂಪಾಮೋ ಯದಿಗಚ್ಛಾಮಹೇ ವಯಂ ॥ ೧೩೨ ॥

ಏವಂ ತಚ್ಛಪಥೈರ್ನಾನಾವಿಧೈಃ ಪ್ರತ್ಯಯಮಾಗತಃ ।
ತಥೇತ್ಯುಕ್ತ್ವಾ ಗೃಹಂ ಗತ್ವಾ ಮುನಿಭಿರ್ಯದುದೀರಿತಂ ॥ ೧೩೩ ॥

೧೨೯-೧೩೦. ಅವರನ್ನು ಕೇಳಿ ನೀನು ಬರುವವರೆಗೂ ನಾವು ಖಂಡಿತವಾಗಿಯೂ ಇಲ್ಲಿಯೇ ಇರುತ್ತೇವೆ. ನಾವು ಇಲ್ಲಿಂದ ನೀನು ಬಂದಲ್ಲದೆ ಮುಂದೆ ಹೋದರೆ ಬ್ರಹ್ಮಹತ್ಯೆ ಮಾಡಿದರೆ ಯಾವ ಪಾಪವು ಬರುವುದೋ ಆ ಪಾಪವು ನಮಗೆ ಬರಲಿ. ಚಿನ್ನ ಕದಿಯುವುದರಿಂದಲೂ ಗುರುವಿನ ಹೆಂಡತಿಯಲ್ಲಿ ಸಂಗಮಾಡುವುದರಿಂದಲೂ ಯಾವ ಪಾಪವು ಬರುವುದೋ ಆ ಪಾಪವು ನಿನ್ನನ್ನು ಕೇಳದೆ ಮುಂದೆ ಹೋದರೆ ನಮಗೆ ಬರಲಿ.

೧೩೧-೧೩೨. ಎಲೈ ವ್ಯಾಧನೇ ! ನೀನು ಅತ್ತ ಹೋದಮೇಲೆ ನಾವು ಇತ್ತ ಹೋದರೆ ಪಂಚಮಹಾಪಾತಕಿಗಳ ಸಂಸರ್ಗದಿಂದ ಬರುವ ಪಾಪವು ನಮಗೆ ಬರಲಿ. ಬ್ರಾಹ್ಮಣನ ಸ್ವತ್ತನ್ನು ಕದಿಯುವುದರಿಂದ ಬರುವ ಪಾಪವು ನಮಗೆ ಬರಲಿ. ನಾವು ಹಾಗೆ ಹೋದರೆ ಖಂಡಿತವಾಗಿಯೂ ಈ ಪಾಪಗಳು ನಮಗೆ ಬರಲಿ.

೧೩೩--೧೩೪. ಈ ರೀತಿಯಾಗಿ ಅವರು ಅನೇಕವಾಗಿ ಶಪಥಗಳನ್ನು (ಆಣೆಗಳನ್ನು) ಮಾಡಲು ನನಗೆ ನಂಬಿಕೆಯುಂಟಾಯಿತು. ಆಗ ಹಾಗೇ ಆಗಲೆಂದು ಹೇಳಿ ಮುನಿಗಳು ಹೇಳಿದಂತೆ ನಾನು ಮನೆಗೆ ಹೋಗಿ ನನ್ನ

ಅಪೃಚ್ಛಂ ಪುತ್ರದಾರಾದೀಂಸ್ತೈರುಕ್ತೋಽಹಂ ರಘೂತ್ತಮ ।
ಪಾಪಂ ತ್ವೈವ ತತ್ಸರ್ವಂ ವಯಂ ತು ಫಲಭಾಗಿನಃ ॥ ೧೩೪ ॥

ತಚ್ಛ್ರುತ್ವಾ ಜಾತನಿರ್ವೇದೋ ವಿಚಾರ್ಯ ಪುನರಾಗತಃ ।
ಮುನಯೋ ಯತ್ರ ತಿಷ್ಠಂತಿ ಕರುಣಾಪೂರ್ಣಮಾನಸಾಃ ॥ ೧೩೫ ॥

ಮುನೀನಾಂ ದರ್ಶನಾದೇವ ಶುದ್ಧಾಂತಃಕರಣೋಽಭವಂ ।
ಧನುರಾದಿ ಪರಿತ್ಯಜ್ಯ ದಂಡವತ್ಪತಿತೋಽಸ್ಮ್ಯಹಂ ॥ ೧೩೬ ॥

ರಕ್ಷಧ್ವಂ ಮಾಂ ಮುನಿಶ್ರೇಷ್ಠಾಃ ಪತಿತಂ ನರಕಾರ್ಣವೇ ।
ಇತ್ಯಗ್ರೇ ಪತಿತಂ ದೃಷ್ಟ್ವಾ ಮಾಮೂಚುರ್ಮುನಿಸತ್ತಮಾಃ ॥ ೧೩೭ ॥

ಉತ್ತಿಷ್ಠೋತ್ತಿಷ್ಠ ಭದ್ರಂ ತೇ ಸಫಲಸ್ಸತ್ಸಮಾಗಮಃ ।
ಉಪದೇಕ್ಷ್ಯಾಮಹೇ ತುಭ್ಯಂ ಕಿಂಚಿತ್ತೇನೈವ ಮೋಕ್ಷ್ಯಸೇ ॥ ೧೩೮ ॥

ಮಕ್ಕಳು ಹೆಂಡಿರನ್ನು ಕೇಳಿದೆನು. ಅದಕ್ಕೆ ಅವರು ಆ ಪಾಪವೆಲ್ಲವೂ ನಿನಗೇನೆ. ನಾವು ಅದರ ಒಳ್ಳೆಯ ಫಲವನ್ನು ಮಾತ್ರ ಅನುಭವಿಸುವವರು.

೧೩೫. ಅದನ್ನು ಕೇಳಿ ನನಗೆ ಬಹು ದುಃಖವು ಬಂದು ವೈರಾಗ್ಯವು ಹುಟ್ಟಿತು. ಅದನ್ನೇ ಮತ್ತೆ ಮತ್ತೆ ಯೋಚಿಸುತ್ತ ಬಂದೆನು. ಆ ಮುನಿಗಳು ಕರುಣಾವಂತರಾಗಿ ಅಲ್ಲಿಯೇ ನಿಂತಿದ್ದರು.

೧೩೬. ಆ ಮುನಿಗಳ ದರ್ಶನವಾದೊಡನೆಯೇ ನನ್ನ ಅಂತಃಕರಣವು ಶುದ್ಧವಾಯಿತು. ಆಗ ಧನುಸ್ಸುಬಾಣಗಳನ್ನು ಬಿಸುಟು ಅವರಿಗೆ ದೀರ್ಘದಂಡ ನಮಸ್ಕಾರಗಳನ್ನು ಮಾಡಿದೆನು.

೧೩೭. ಎಲೈ ಮುನಿಶ್ರೇಷ್ಠರೇ ! ನನ್ನನ್ನು ಕಾಪಾಡಿರಿ. ನಾನು ನರಕವೆಂಬ ಸಮುದ್ರದಲ್ಲಿ ಬಿದ್ದಿದ್ದೇನೆ. ಎಂಬದಾಗಿ ಅವರ ಮುಂದೆ ದೀರ್ಘದಂಡ ನಮಸ್ಕರಮಾಡಿ ಹಾಗೆಯೇ ಬಿದ್ದಿರಲು ಆಗ ಅವರು ನನ್ನನ್ನು ನೋಡಿ ಇಂತೆಂದರು.

೧೩೮. ಅಯ್ಯಾ ! ನಿನಗೆ ಒಳ್ಳೆಯದಾಗಲಿ. ಏಳು ಏಳು ಸತ್ಪುರುಷರೊಡನೆ ಸೇರಿದುದು ಸಫಲವಾಯಿತು. ನಿನಗೆ ಒಂದು ಉಪದೇಶವನ್ನು ಮಾಡುತ್ತೇವೆ. ಅದರಿಂದ ನಿನಗೆ ಮೋಕ್ಷವು ಲಭಿಸುತ್ತದೆ. ಎಂದರು.

ಪರಸ್ಪರಂ ಸಮಾಲೋಚ್ಯ ದುರ್ವೃತ್ತೋಽಯಂ ದ್ವಿಜಾಧಮಃ ।
ಉಪೇಕ್ಷ್ಯ ಏವ ಸದ್ವೃತ್ತೈಸ್ತಥಾಪಿ ಶರಣಂ ಗತಃ ॥ ೧೩೯ ॥

ರಕ್ಷಣೀಯಃ ಪ್ರಯತ್ನೇನ ಮೋಕ್ಷಮಾರ್ಗೋಪದೇಶತಃ ।
ಇತ್ಯುಕ್ತ್ವಾ ರಾಮ ತೇ ನಾಮ ವ್ಯತ್ಯಸ್ತಾಕ್ಷರಪೂರ್ವಕಂ ॥ ೧೪೦ ॥

ಮುನಯೋ ಮಾಮುಪದಿಶುರ್ಮತ್ಕೃಪಾಪೂರ್ಣಮಾನಸಾಃ ।
ಏಕಾಗ್ರಮನಸಾತ್ರೈವ ಮರೇತಿ ಜಪ ಸರ್ವದಾ ॥ ೧೪೧ ॥

ಆಗಚ್ಛಾಮಃ ಪುನರ್ಯಾವತ್ತಾವದುಕ್ತಂ ಸದಾ ಜಪ ।
ಇತ್ಯುಕ್ತ್ವಾ ಪ್ರಯಯುಸ್ಸರ್ವೇ ಮುನಯೋ ದಿವ್ಯದರ್ಶನಾಃ ॥ ೧೪೨ ॥

ಅಹಂ ಯಥೋಪದಿಷ್ಟಸ್ತೈಸ್ತಥಾಕರವಮಂಜಸಾ ।
ಜಪನ್ನೇಕಾಗ್ರಮನಸಾ ಬಾಹ್ಯಂ ವಿಸ್ಮೃತವಾನಹಂ ॥ ೧೪೩ ॥

---

೧೩೯. ಆದರೂ ಕೂಡ ಅವರು ಒಬ್ಬರ ಮುಖವನ್ನು ಒಬ್ಬರು ನೋಡುತ್ತ ಯೋಚಿಸಿಕೊಂಡು ಈ ದ್ವಿಜಾಧಮನು ಕೆಟ್ಟಕೆಲಸದಲ್ಲಿ ಆಸಕ್ತನು ಶುಭಾಚಾರವುಳ್ಳವರು ಇವನನ್ನು ಉಪೇಕ್ಷಿಸಬೇಕು. ಆದರೂ ಇವನು ಶರಣಾಗತನಾಗಿರುವನು.

೧೪೦--೧೪೧. ಆದ್ದರಿಂದ ನಾವು ಇವನನ್ನು ರಕ್ಷಿಸಬೇಕಾಗಿದೆ. ಇವನಿಗೆ ಮೋಕ್ಷಮಾರ್ಗವನ್ನು ಉಪದೇಶಿಸಬೇಕು. ಎಂದುಕೊಂಡು ಎಲೈ ರಾಮನೇ! ಆಗ ನಿನ್ನ ನಾಮವಾದ "ರಾಮ" ಎಂಬ ನಾಮವನ್ನು ವ್ಯತ್ಯಸ್ತವಾಗಿ ಅಂದರೆ "ಮರಾ ಎಂಬದಾಗಿ ನನಗೆ ಉಪದೇಶಮಾಡಲು ಕೃಪೆಮಾಡಿದರು. ಆಗ ಅವರು ನನ್ನನ್ನು ಕುರಿತು "ಮರಾ" ಎಂಬದಾಗಿ ಯಾವಾಗಲೂ ಒಂದೇ ಮನಸ್ಸಿನಿಂದ ಜಪಿಸು.

೧೪೨. ನಾವು ಮತ್ತೆ ಬರುವವರೆಗೂ ನಾವು ಹೇಳಿದುದನ್ನು ಜಪಿಸುತ್ತಿರು. ಹೀಗೆಂಬುದಾಗಿ ಹೇಳಿ ದಿವ್ಯ ದರ್ಶನವುಳ್ಳ ಅವರೆಲ್ಲರೂ ಹೊರಟುಹೋದರು.

೧೪೩. ಅವರು ಹೇಳಿದಂತೆಯೇ ನಾನು ಜಪಿಸುತ್ತ ಬಂದೆನು. ಹೀಗೆಯೇ ಅನೇಕ ಕಾಲದವರೆಗೂ ಜಪಿಸುತ್ತ ಹೊರಗಿನ ಪ್ರಪಂಚವನ್ನೇ ಮರೆತು ಬಿಟ್ಟೆನು.

ಸಾಕ್ಷ್ಯರ್ಥಂ ತಪಸಸ್ತತ್ರ ದಂಡೋಽಗ್ರೇ ಸ್ಥಾಪಿತೋ ಮಯಾ ।
ಏವಂ ಬಹುತಿಥೇ ಕಾಲೇ ಗತೇ ನಿಶ್ಚಲರೂಪಿಣಃ ॥ ೧೪೪ ॥

ಸರ್ವಸಂಗವಿಹೀನಸ್ಯ ವಲ್ಮೀಕೋಽಭೂನ್ಮಮೋಪರಿ ।
ದಂಡೋಽಗ್ರೇ ಸ ನಗೋ ರಮ್ಯೋ ಬಭೂವ ಮತ್ತಪೋಬಲಾತ್ ॥ ೧೪೫ ॥

ತತೋ ಯುಗಸಹಸ್ರಾಂತೇ ಋಷಯಃ ಪುನರಾಗಮನ್ ।
ಮಾಮೂಚುರ್ನಿರ್ಗಮಸ್ವೇತಿ ತಚ್ಛ್ರುತ್ವಾ ತೂರ್ಣಮುತ್ಥಿತಃ ॥ ೧೪೬ ॥

ವಲ್ಮೀಕಾನ್ನಿರ್ಗತಶ್ಚಾಹಂ ನೀಹಾರಾದಿವ ಭಾಸ್ಕರಃ ।
ಮಾಮಪ್ಯಾಹುರ್ಮುನಿಗಣಾ ವಾಲ್ಮೀಕಿಸ್ತ್ವಂ ಮುನೀಶ್ವರಃ ॥ ೧೪೭ ॥

ವಲ್ಮೀಕಾತ್ಸಂಭವೋ ಯಸ್ಮಾತ್ ದ್ವಿತೀಯಂ ಜನ್ಮ ತೇಽಭವತ್ ।
ಇತ್ಯುಕ್ತ್ವಾ ತೇ ಯಯುರ್ದಿವ್ಯಾಂ ಗತಿಂ ರಘುಕುಲೋತ್ತಮ ॥ ೧೪೮ ॥

---

೧೪೪. ನನ್ನ ತಪಸ್ಸಿಗೆ ಸಾಕ್ಷಿಗೋಸ್ಕರವಾಗಿ ನನ್ನ ಎದುರಿಗೆ ಒಂದು ದೊಣ್ಣೆಯನ್ನು ನೆಟ್ಟುಕೊಂಡಿದ್ದೆನು. ಈ ರೀತಿಯಾಗಿ ತಪಸ್ಸನ್ನೇ ಮಾಡುತ್ತ ನಿಶ್ಚಲವಾಗಿದ್ದುಬಿಟ್ಟೆನು. ಬಹು ದಿವಸಗಳು ಕಳೆದುವು.

೧೪೫. ಸರ್ವಸಂಗವನ್ನೂ ಬಿಟ್ಟು ಈ ರೀತಿಯಾಗಿ ಕುಳಿತಿರುವ ನನ್ನ ಮೇಲೆ ಹುತ್ತವು ಬೆಳೆಯುತ್ತ ಬಂದಿತು. ನನ್ನ ತಪೋಬಲದಿಂದ ನನ್ನ ಎದುರಿಗೆ ನೆಟ್ಟುಕೊಂಡಿದ್ದ ಸಾಕ್ಷೀಭೂತವಾದ ಆ ದೊಣ್ಣೆಯು ಮರವಾಗುತ್ತಾ ಬಂದಿತು.

೧೪೬. ಹೀಗೆಯೇ ಸಾವಿರ ಯುಗಗಳು ಕಳೆಯಲು ಮತ್ತೆ ಆ ಸಪ್ತಋಷಿಗಳು ಅಲ್ಲಿಗೆ ಬಂದರು. ಅವರು ನನ್ನನ್ನು ಕುರಿತು ಹುತ್ತದಿಂದ ಹೊರಗೆ ಬಾ ಎಂದು ಕರೆದರು. ಆ ಮಾತನ್ನು ಕೇಳಿದೊಡನೆಯೇ ಬೇಗನೆ ಹೊರಕ್ಕೆ ಬಂದೆನು.

೧೪೭. ಆ ಹುತ್ತದಿಂದ ನಾನು ಸೂರ್ಯನು ಮಂಜಿನಿಂದ ಹೊರಗೆ ಬಂದಂತೆ ಬಂದೆನು. ಆಗ ಅವರು ನನ್ನನ್ನು ವಾಲ್ಮೀಕಿಯೆಂದು ಕರೆದರು.

೧೪೮. ಎಲೈ ವಾಲ್ಮೀಕಿಯೇ! ನೀನು ಈ ವಲ್ಮೀಕದಿಂದ (ಹುತ್ತದಿಂದ) ಹೊರಗೆ ಬಂದುದರಿಂದ ನಿನ್ನ ಹೆಸರು ವಾಲ್ಮೀಕಿಯೆಂದಾಯಿತು. ಇದು ನಿನಗೆ ಎರಡನೆಯ ಜನ್ಮವಾಯಿತು ಎಂದು ಹೇಳಿ ಅವರು ಸ್ವರ್ಗಕ್ಕೆ ಹೊರಟು ಹೋದರು.

ಅಹಂ ತೇ ರಾಮನಾಮ್ನಶ್ಚ ಪ್ರಭಾವಾದೀದೃಶೋಽಭವಂ ।
ಏಕದಾ ಶಂಭುವಚಸಾಽಯಂ ವಿಧಿಃ ಶ್ರುತವಾಂಸ್ತವ ॥ ೧೬೯ ॥

ಚರಿತಂ ವೇದವಾಕ್ಯೈಶ್ಚ ಕೈಲಾಸೇ ಪರಮೇ ಶುಭೇ ।
ಅನೇನ ವಿಧಿನಾ ತಚ್ಚ ಕಥಿತಂ ನಾರದಾಯ ಹಿ ॥ ೧೭೦ ॥

ನಾರದಃ ಕಥಯಾಮಾಸ ವೇದವಾಕ್ಯೈರ್ಮಮಾತ್ರ ತತ್ ।
ತತಃ ಕ್ರೌಂಚಂ ಹತಂ ದೃಷ್ಟ್ವಾ ವ್ಯಾಧೇನ ತಮಸಾತಟೇ ॥ ೧೭೧ ॥

ಶೋಚಂತೀಂ ಸಾಂತ್ವಯನ್ ಕ್ರೌಂಚೀಂ ಮಮಾಸ್ಯಾನ್ನಿರ್ಗತಸ್ತದಾ ।
ದ್ವಾತ್ರಿಂಶದಕ್ಷರೈಶ್ಶ್ಲೋಕಃ ಶೋಕಶ್ಶ್ಲೋಕತ್ವಮಾಗತಃ ॥ ೧೭೨ ॥

ತತೋಽನೇನ ಹಿ ವಿಧಿನಾ ಚರಿತಂ ತೇ ಪ್ರವರ್ಣಿತಂ ।
ಮಾಮಾಗತ್ಯ ತುಸಂಕ್ಷೇಪಾದರ್ಪಿತಾ ಮಾಂ ವರಾ ಅಪಿ ॥ ೧೭೩ ॥

೧೬೯–೧೭೦. ಎಲೈ ರಾಮನೇ! ನಾನು ನಿನ್ನ ಹೆಸರಾದ ರಾಮ ನಾಮದ ಮಹಿಮೆಯಿಂದ ಈ ರೀತಿಯಾದೆನು. ಒಂದು ಸಾರಿ ಶಿವನು ದೇವತೆಗಳೊಡನೆ ಕುಳಿತುಕೊಂಡು ಕೈಲಾಸದಲ್ಲಿ ಈ ರಾಮಚರಿತ್ರೆಯನ್ನು ಬ್ರಹ್ಮನಿಗೆ ಹೇಳಿದನು.

೧೭೧. ಆ ಬ್ರಹ್ಮನು ವೇದದ ವಾಕ್ಯಗಳಿಂದ ಈ ಚರಿತ್ರೆಯನ್ನು ನಾರದನಿಗೆ ಹೇಳಿದನು. ಆ ನಾರದನು ನನಗೆ ಹೇಳಿದನು ಹೀಗಿರುತ್ತಿರಲು ತಮಸಾನದಿಗೆ ಹೋಗಿದ್ದಾಗ ಒಬ್ಬ ವ್ಯಾಧನು ಒಂದು ಕ್ರೌಂಚ (ಬಕ) ಪಕ್ಷಿಯನ್ನು ಕೊಂದುದನ್ನು ನೋಡಿದೆನು.

೧೭೨. ಆ ಕ್ರೌಂಚ ಪಕ್ಷಿಯ ಹೆಂಡತಿಯಾದ ಹೆಣ್ಣುಕ್ರೌಂಚವು ಅಳುತ್ತಿರಲು ಅದನ್ನು ಸಮಾಧಾನಮಾಡಲು ಶೋಕಿಸಿದೆನು. ಆ ಶೋಕದ ಮಾತು ಮೂವತ್ತೆರಡು ಅಕ್ಷರಗಳಿಂದ ಕೂಡಿ ಶ್ಲೋಕರೂಪವಾಗಿ ಪರಿಣಮಿಸಿತು.

೧೭೩. ನಾನೂ ಕೂಡ ಆ ಶ್ಲೋಕದ ರೀತಿಯನ್ನೇ ಅನುಸರಿಸಿ ನಿನ್ನ ಚರಿತ್ರೆಯನ್ನು ವರ್ಣಿಸಿದೆನು. ಆಗ ಬ್ರಹ್ಮದೇವನು ಪ್ರತ್ಯಕ್ಷನಾಗಿ ಬಂದು ನನಗೆ ಅನೇಕ ವರಗಳನ್ನು ಕೊಟ್ಟನು. ಮತ್ತು ನಿನ್ನ ಚರಿತ್ರೆಯನ್ನು ರಚಿಸುವಂತೆ ಹೇಳಿದನು.

ತತೋಽಸ್ಯ ಬ್ರಹ್ಮಣೋ ವಾಕ್ಯಾತ್ ಕೃತವಾನ್ ಚರಿತಂ ತವ ।
ಆನಂದದಾಯಕಂ ರಮ್ಯಂ ಶತಕೋಟಿಪ್ರವಿಸ್ತರಂ ॥ ೧೫೪ ॥

ಏವಂ ತ್ವಯಾ ಯಥಾ ಪೃಷ್ಟಂ ತಥಾ ಸರ್ವಂ ನಿವೇದಿತಂ ।
ಏವಂ ವಾಲ್ಮೀಕಿವಾಕ್ಯೈಶ್ಚ ಸರ್ವಂ ಜಾನನ್ನಪಿ ಪ್ರಭುಃ ॥ ೧೫೫ ॥

ಪೃಷ್ಟ್ವಾ ಶ್ರೋತುಂ ಜನಾನ್ ಸರ್ವಾನ್ ಶ್ರಾವಯಾಮಾಸ ರಾಘವಃ ।
ಏತಸ್ಮಿನ್ನಂತರೇ ರಾಮಂ ವಾಕ್ಪತಿಃ ಪ್ರಾಹ ಸಾದರಂ ॥ ೧೫೬ ॥

ರಾಮ ಕಿಂ ಚರಿತಂ ಗೇಯಂ ತವಾನಂದಸ್ವರೂಪಿಣಃ ।
ಯಸ್ಯ ನಾಮಾದ್ಯವರ್ಣೈಶ್ಚ ಶಬ್ದಮಾತ್ರೋಽತ್ರ ಗೀಯತೇ ॥ ೧೫೭ ॥

ಲೌಕಿಕಾ ವೈದಿಕಾ ವಾಪಿ ಅಕಾರಾದ್ಯಾಸ್ತು ಷೋಡಶ ।
ಸ್ವರಾಸ್ತಥೈವ ವರ್ಣಾಶ್ಚ ಚತುಸ್ತ್ರಿಂಶಚ್ಛುಭಾವಹಾಃ ॥ ೧೫೮ ॥

---

೧೫೪. ಆ ಬ್ರಹ್ಮನ ಮಾತಿನಂತೆಯೇ ನಾನು ಅನಂತರ ನಿನ್ನ ಚರಿತ್ರೆಯನ್ನೇ ವಿಸ್ತಾರವಾಗಿ ಬರೆದೆನು. ಆ ಚರಿತ್ರೆಯು ನೂರುಕೋಟಿ ಗ್ರಂಥಗಳು ಉಳ್ಳದ್ದಾಗಿ, ರಮ್ಯವಾಗಿ, ಆನಂದವಾಗಿರುವುದು.

೧೫೫-೧೫೬. ಎಲೈ ರಾಮನೇ! ನೀನು ಪ್ರಶ್ನಿಸಿದ ವಿಷಯಕ್ಕೆಲ್ಲಾ ಉತ್ತರವನ್ನು ಈ ರೀತಿಯಲ್ಲಿ ಹೇಳಿರುವೆನು ಎಂದನು. ಶ್ರೀ ರಾಮನು ಎಲ್ಲವನ್ನೂ ತಿಳಿದಿದ್ದರೂ ಕೂಡ ವಾಲ್ಮೀಕಿಯ ಬಾಯಿಂದಲೇ ಎಲ್ಲರಿಗೂ ತಿಳಿಸಬೇಕೆಂದು ಯೋಚಿಸಿ ಎಲ್ಲರೆದುರಿಗೂ ಹೇಳಿಸಿದನು. ಈ ಮಧ್ಯದಲ್ಲಿ ಬ್ರಹ್ಮನು ರಾಮನನ್ನು ಕುರಿತು ಇಂತೆಂದನು

೧೫೭. ಎಲೈ ರಾಮನೇ ! ಆನಂದಸ್ವರೂಪಿಯಾದ ನಿನ್ನ ನೂರುಕೋಟಿ ಗ್ರಂಥವುಳ್ಳ ಚರಿತ್ರೆಯನ್ನು ಹೇಳಬೇಕಾದುದೇ ಇಲ್ಲ. ವರ್ಣಗಳಿಂದ ನಿನ್ನ ನಾಮವನ್ನು ಈಗ ಹೇಳುತ್ತೇನೆ.

೧೫೮. ಲೌಕಿಕ ರೀತಿಯಿಂದಾಗಲಿ, ವೈದಿಕ ರೀತಿಯಿಂದಲೇ ಆಗಲಿ ಅಕಾರದಿಂದ ಮೊದಲುಮಾಡಿಕೊಂಡು ಹದಿನಾರು ಸ್ವರಗಳಿರುವುವು. ಅಂತೆಯೇ ವ್ಯಂಜನಗಳು ಮೂವತ್ತುನಾಲ್ಕು ಇವೆ.

ಕಕಾರಾದ್ಯಾಃ ಕ್ಷಕಾರಾಂತಾ ಮಂತ್ರರೂಪಾಶ್ಚ್ಯಭಾವಹಾಃ ।
ಏವಂ ವರ್ಣಾಶ್ಚ ಪಂಚಾಶದ್ಯೇ ಕೀರ್ತ್ಯಂತೇ ನರೈರ್ಭುವಿ ॥ ೧೫೯ ॥

ತೇ ತ್ವನ್ನಾಮಾದ್ಯವರ್ಣಾಶ್ಚ ಸರ್ವೇ ಜ್ಞೇಯಾ ರಘೂತ್ತಮ ।
ತವ ನಾಮಾದ್ಯವರ್ಣೈಶ್ಚ ವ್ಯಾಪ್ತಂ ಸರ್ವಂ ಚರಾಚರಂ ॥ ೧೬೦ ॥

ಚರಾಚರಾಣಾಂ ಸರ್ವೇಷಾಂ ಯಾನಿ ನಾಮಾನಿ ತಾನಿ ತೇ ।
ತೇಷು ವರ್ಣಪರತ್ವೇನ ನಾಮಾನ್ಯದ್ಯ ವದಾಮಿ ತೇ ॥ ೧೬೧ ॥

ಸಂಕ್ಷೇಪಾಚ್ಚೈವ ಪಂಚಾಶತ್ತಾನಿ ಶೃಣ್ವಂತು ಸಜ್ಜನಾಃ ।
ಅನಂತಆನಂದಮಯಶ್ಚೇಷ್ಟಾಪೂರ್ತಫಲಪ್ರದಃ ॥ ೧೬೨ ॥

ಈಶ್ವರಶ್ಚ ತಥೋತ್ಕೃಷ್ಟಶ್ಚೋರ್ಧ್ವರೇತಾ ಋತಂಭರಃ ।
ಋಮುಕ್ತಶ್ಚ ಲುತಶ್ಚೈವ ಲೂಪಕಶ್ಚೈಕ ಏವ ಚ ॥ ೧೬೩ ॥

---

೧೫೯. ಕಕಾರದಿಂದ ಮೊದಲುಮಾಡಿಕೊಂಡು ಕ್ಷಕಾರದವರೆಗೂ ಆ ವ್ಯಂಜನಗಳಿರುವುವು. ಈ ಅಕ್ಷರಮಾಲೆಯು ಮಂತ್ರರೂಪವಾದುದು. ಈ ರೀತಿಯಾಗಿ ಸ್ವರಗಳೂ ವ್ಯಂಜನಗಳೂ, ಸೇರಿ ಐವತ್ತು ಅಕ್ಷರಗಳಿವೆ ಎಂದು ಮನುಷ್ಯರು ಪ್ರಪಂಚದಲ್ಲೆಲ್ಲಾ ಹೇಳುವರು.

೧೬೦. ಆ ಅಕ್ಷರಗಳು ನಿನ್ನ ನಾಮದ ಪದಗಳಿಗೆ ಆದ್ಯವರ್ಣವಾಗಿ ನಿಂತಿವೆ. ಈ ನಿನ್ನ ನಾಮಗಳಲ್ಲಿ ಆದಿಯ ವರ್ಣಗಳಾದ ಆ ಐವತ್ತು ಅಕ್ಷರಗಳಿಂದಲೇ ಈ ಚರಾಚರವೆಲ್ಲವೂ ವ್ಯಾಪ್ತವಾಗಿವೆ.

೧೬೧. ಈಗ ನಿನ್ನ ನಾಮಗಳಾವುವಿವೆಯೋ ಅವೇ ಚರಾಚರಗಳೆಲ್ಲಕ್ಕೂ ಹೆಸರಾಗಿವೆ. ಈ ರೀತಿಯಾಗಿ ಆ ವರ್ಣಗಳನ್ನು ಮೊದಲಲ್ಲಿ ಉಳ್ಳ ಆ ನಾಮಗಳನ್ನು ನಿನಗೆ ಹೇಳುತ್ತೇನೆ.

೧೬೨-೧೬೪. ಸಂಕ್ಷೇಪವಾಗಿ ನಾನು ಹೇಳುವ ಆ ಐವತ್ತು ನಾಮಗಳನ್ನು ಜನರು ಕೇಳಿ ಕೀರ್ತಿಸಲಿ. ಅವಾವುವೆಂದರೆ ಅನಂತ, ಆನಂದ ಮಯ,

ಐಶ್ವರ್ಯದಶ್ಚೋಜದಶ್ಚ ತಥೈವೌದಾರ್ಯಬಂಧುರಃ ।
ಅಂತರಾತ್ಮಾ ಚಾರ್ಭಗರ್ಭಸ್ತಥೈವ ಕರುಣಾಕರಃ ॥ ೧೬೪ ॥

ಖಡ್ಗೀ ಚ ಗತಿದಶ್ಚೈವ ಘನಶ್ಯಾಮಸ್ತಥೈವ ಚ ।
ಜಪಾನಶ್ಚಕಿತಾಶೇಷದುಷ್ಕೃತಶ್ಚ ತಥೈವ ಚ ॥ ೧೬೫ ॥

ಛತ್ರೀ ಜಗನ್ಮಯಶ್ಚೈವ ಝುಷರೂಪೀ ಞಟೀಶ್ವರಃ ।
ಟಣತ್ಕಾರಧನುಷ್ಠನಬಂಧೋ ಡಮರುಸತ್ಕರಃ ॥ ೧೬೬ ॥

ಢಣಲ್ಲುಲಿತಪಾಪಶ್ಚ ಣಕರ್ಣಶ್ಚ ತಥೈವ ಹಿ ।
ತಪೋರೂಪಸ್ಥಬಶ್ಚೈವ ದಕ್ಷೋ ಧನ್ವೀ ತಥೈವ ಚ ॥ ೧೬೭ ॥

ನಷ್ಟೋದ್ಧರಣಧೀರಶ್ಚ ತಥೈವ ಪರಮೇಶ್ವರಃ ।
ತಥಾ ಪರಶುರಾಮಶ್ಚ ತಥಾ ಬಲಿವರಪ್ರದಃ ॥ ೧೬೮ ॥

ಭಗವಾನ್ ಮಧುಘಾತೀ ಚ ತಥಾ ಯಜ್ಞಫಲಪ್ರದಃ ।
ರಘುನಾಥಶ್ಚ ಲಕ್ಷ್ಮೀಶೋ ವರಿಷ್ಠಶ್ಚ ತಥೈವ ಹಿ ॥ ೧೬೯ ॥

ಶರಣ್ಯಃ ಷಡ್ಗುಣೈಶ್ವರ್ಯಸಂಪನ್ನಶ್ಚ ತಥೈವ ಹಿ ।
ಸರ್ವೇಶ್ವರೋ ಹಯಗ್ರೀವಃ ಕ್ಷೇಮೀ ನಾಮಾನಿ ತೇ ತ್ವಿತಿ ॥ ೧೭೦ ॥

ಇಷ್ಟಾಪೂರ್ತಫಲಪ್ರದ, ಈಶ್ವರ, ಉತ್ಕೃಷ್ಟ, ಊರ್ಧ್ವರೇತ, ಋತಂಭರ, ೠಮುಕ್ತ, ಌಶ, ೡಪತಿ, ಏಕ, ಐಶ್ವರ್ಯದ, ಓಜದ, ಔದಾರ್ಯಬಂಧುರ, ಅಂತರಾತ್ಮ, ಅರ್ಭಗರ್ಭ.

೧೬೫-೧೭೦. ಕರುಣಾಕರ, ಖಡ್ಗೀ, ಗತಿದ, ಘನಶ್ಯಾಮ, ಜಪಾನ, ಚಕಿತಾಶೇಷದುಷ್ಕೃತ, ಛತ್ರೀ, ಜಗನ್ಮಯ, ಝುಷರೂಪೀ, ಞಟೀಶ್ವರ, ಟಣತ್ಕಾರಧನು, ಠನಬಂಧು, ಡಮರುಸತ್ಕರ, ಢಣಲ್ಲುಲಿಪಾಪ, ಣಕರ್ಣ, ತಪೋರೂಪ, ಥಬ ದಕ್ಷ, ಧನ್ವೀ, ನಷ್ಟೋದ್ಧರಣಧೀರ, ಪರಮೇಶ್ವರ, ಪರಶುರಾಮ, ಬಲಿವರಪ್ರದ, ಭಗವಾನ್ ಮದುಘಾತೀ, ಯಜ್ಞಫಲಪ್ರದ, ರಘುನಾಥ, ಲಕ್ಷ್ಮೀಶ, ವರಿಷ್ಠ, ಶರಣ್ಯ, ಷಡ್ಗುಣೈಶ್ವರ್ಯಸಂಪನ್ನ, ಸರ್ವೇಶ್ವರ, ಹಯಗ್ರೀವ, ಕ್ಷೇಮೀ, ಎಂಬುವೇ ಆ ನಿನ್ನ ಅಕ್ಷರಾದಿಯಾದ ನಾಮಗಳು.

ಪಂಚಾಶದ್ವರ್ಣಚಿಹ್ನಾನಿ ಚೈಭಿರ್ವರ್ಣ್ಯೈಃ ಜಗತ್ರಯಂ ।
ವ್ಯಾಪ್ತಂ ಶ್ರೀರಾಮ ಸರ್ವತ್ರ ಘವರ್ಣೇನ ಘಟಿಃ ಸ್ಮೃತಃ ॥ ೧೬೧ ॥
ಪವರ್ಣೇನ ಪಟೋ ಜ್ಞೇಯಸ್ತ್ವೈವಂ ವರ್ಣಾತ್ಮಕಂ ಜಗತ್ ।
ಏಕೈಕಸ್ಯ ಚ ವರ್ಣಸ್ಯ ಭೇದೈರ್ನಾಮಾನಿ ತೇ ಪೃಥಕ್ ॥ ೧೬೨ ॥
ನಾಹಂ ಸಮರ್ಥೋ ವ್ಯಾಖ್ಯಾತುಂ ಪಂಚಾಸ್ಯೋ ಹಿ ನ ಚ ಕ್ಷಮಃ ।
ಯತ್ರ ಶೇಷಸ್ಸಹಸ್ರಾಸ್ಯೋ ವರ್ಣನೇ ಕುಂಠಿತಸ್ತ್ವಭೂತ್ ॥ ೧೬೩ ॥
ಏವಂ ತೇ ಮಹಿಮಾ ರಾಮ ಕೋತ್ರ ವರ್ಣಯಿತುಂ ಕ್ಷಮಃ ।
ತಥಾಪಿ ಧನ್ಯೋ ವಾಲ್ಮೀಕಿರ್ಯೇನ ತೇ ಚರಿತಂ ಕೃತಂ ॥ ೧೬೪ ॥
ಶತಕೋಟಿಮಿತಂ ರಾಮ ತವೈವ ಕೃಪಯಾ ಪ್ರಭೋ ।

॥ ಶ್ರೀರಾಮದಾಸ ಉವಾಚ ॥

ಇತ್ಯುಕ್ತ್ವಾ ಸ ಗುರುರ್ದೇವ್ಯೈಃ ರಾಘವೇಣಾಪಿಪೂಜಿತಃ ॥ ೧೬೫ ॥

---

೧೬೧. ಈ ಐವತ್ತು ವರ್ಣಗಳಿಗೆ ಚಿಹ್ನೆಗಳಾಗಿವೆ. ಈ ವರ್ಣಗಳಿಂದಲೇ ಮೂರು ಲೋಕಗಳೂ ವ್ಯಾಪಿಸಿಕೊಂಡಿವೆ. ಘವರ್ಣವೆಂಬುದು ಘಟಕ್ಕೆ ಮಡಕೆಗೆ) ಹೆಸರು.

೧೬೨. ಪವರ್ಣವು ಪಟಕ್ಕೆ (ಬಟ್ಟೆಗೆ) ಹೆಸರಾಗಿದೆ. ಈ ರೀತಿಯಾಗಿ ಈ ಜಗತ್ತು ಈ ವರ್ಣಗಳಿಂದ ಕೂಡಿದೆ. ಒಂದೊಂದು ವರ್ಣಕ್ಕೂ ಅರ್ಥವು ಬೇರೆ ಬೇರೆಯಾಗಿರುವುದರಿಂದ ನಿನ್ನ ಹೆಸರೂ ಬೇರೆ ಬೇರೆಯಾಗಿರುವುದು.

೧೬೩. ಆ ನಿನ್ನ ಹೆಸರುಗಳನ್ನು ವ್ಯಾಖ್ಯಾನಮಾಡಲು (ಅರ್ಥ ಹೇಳುವುದಕ್ಕೆ) ನನಗೆ ಸಾಮರ್ಥ್ಯ ಸಾಲದು. ಐದು ಮುಖವುಳ್ಳ ಶಿವನಿಗೂ ಸಾಧ್ಯವಾಗಲಾರದು. ಸಾವಿರ ಬಾಯುಳ್ಳ ಆ ಆದಿಶ್ರೇಷನೇ ನಿನ್ನ ಹೆಸರಿನ ಅರ್ಥವನ್ನು ಹೇಳಲು ಸಾಮರ್ಥ್ಯವಿಲ್ಲದವನಾದನು.

೧೬೪-೧೬೫ ಎಲೈ ರಾಮನೇ! ನಿನ್ನ ಮಹಿಮೆಯು ಈ ರೀತಿಯಾಗಿರುವುದು. ಯಾರಿಗೆ ತಾನೇ ವರ್ಣಿಸಲು ಸಾಧ್ಯವಾದೀತು? ಆದರೂ ಕೂಡ ಆ ವಾಲ್ಮೀಕಿಯು ನಿನ್ನ ಚರಿತ್ರೆಯನ್ನು ವರ್ಣಿಸಿರುವನು. ಅವನೇ ಧನ್ಯನು. ಅದರಲ್ಲಿಯೂ ಹೆಚ್ಚಾಗಿ ಬರೆಯಲಾರದೆ ನೂರುಕೋಟಿ ಗ್ರಂಥಗಳನ್ನು ಮಾತ್ರ ಬರೆದಿರುವನು. ಅಷ್ಟನ್ನು ಬರೆಯಬೇಕಾದರೂ ನಿನ್ನ ಕೃಪೆಯಿಂದಲೇ ಬರೆದಿರುವನು. ಶ್ರೀ ರಾಮದಾಸನು ಹೇಳಿದನು. ಹೀಗೆಂದು ಆ ವಾಲ್ಮೀಕಿಯು

ಪೃಷ್ಟ್ವಾ ರಾಮಂ ಯಯೌ ಸ್ವರ್ಗಂ ಸತ್ಯಲೋಕಂ ಯಯೌ ವಿಧಿಃ ।
ವಾಲ್ಮೀಕಿಶ್ಚಾಪಿ ಪ್ರಯಯೌ ಚಿತ್ರಕೂಟಂ ನಿಜಾಶ್ರಮಂ ॥ ೧೭೬ ॥

ತದಾರಭ್ಯ ಜನಾಸ್ಸರ್ವೇ ಚಕ್ರುರ್ಹಾಸ್ಯಂ ಮುದೈವ ತೇ ।
ಮಾಂಗಲ್ಯಕರ್ಮಾಣ್ಯುತ್ಸಾಹಕರ್ಮಾಣಿ ಜಗತೀತಲೇ ॥ ೧೭೭ ॥

ಚಕ್ರುಸ್ಸರ್ವೇ ಪೂರ್ವವಚ್ಚ ನಾತಿಹಾಸ್ಯಂ ಪ್ರಚಕ್ರಿರೇ ।
ಸ್ತ್ರೀಭಿರ್ನರಾಸ್ಸುಸಂತುಷ್ಟಾಃ ಕ್ರೀಡಾಹಾಸ್ಯಾದಿ ಚಕ್ರಿರೇ ॥ ೧೭೮ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ರಾಜ್ಯಕಾಂಡೇ ಉತ್ತರಾರ್ಧೇ ತತ್ತನ್ಮಂತ್ರವರ್ಣನಂ
ನಾಮ ಚತುರ್ದಶಸ್ಸರ್ಗಃ ಸಮಾಪ್ತಃ

ಹೇಳಿದುದನ್ನು ವಸಿಷ್ಠನು ಹೇಳಿದನು. ಅನಂತರ ಇಂದ್ರನು ದೇವತೆಗಳೊಡನೆ ರಾಮನಿಂದ ಗೌರವಿತನಾಗಿ ಸ್ವರ್ಗಲೋಕಕ್ಕೆ ಹೊರಟು ಹೋದನು. ಬ್ರಹ್ಮನು ರಾಮನ ಅಪ್ಪಣೆಯನ್ನು ಪಡೆದು ಸತ್ಯಲೋಕಕ್ಕೆ ಹೊರಟುಹೋದನು. ವಾಲ್ಮೀಕಿಯು ರಾಮನ ಅಪ್ಪಣೆಯಂತೆ ತನ್ನ ಆಶ್ರಮವಾದ ಚಿತ್ರಕೂಟಕ್ಕೆ ಹೊರಟುಹೋದನು.

೧೭೭–೧೭೮. ಅವರಿಂದೀಚೆಗೆ ಜನರೆಲ್ಲರೂ ಸಂತೋಷದಿಂದ ನಗುತ್ತ ಇದ್ದರು. ಆ ಜನರು ಮಂಗಳ ಕರ್ಮಗಳನ್ನೂ, ಉತ್ಸಾಹ ಕರ್ಮಗಳನ್ನೂ ಲೋಕದಲ್ಲಿ ಮೊದಲಿನಂತೆ ಮಾಡುತ್ತ ಬಂದರು. ಆದರೆ ಹೆಚ್ಚಾಗಿ ನಗುತ್ತಿರಲಿಲ್ಲ. ಪುರುಷರು ಸ್ತ್ರೀಯರೊಡಗೂಡಿಕೊಂಡು ಸಂತೋಷದಿಂದ ಕ್ರೀಡೆಯನ್ನು ಆಡುತ್ತ ಹಾಸ್ಯವನ್ನೂ ಮಾಡುತ್ತ ಬಂದರು.

ವಿವರಣೆ—

ಅನಂತಃ = ಅನಂತವಿಲ್ಲದವನು, ಅಥವಾ ನಾಶರಹಿತನು. ಆನಂದಮಯಃ = ಸತ್ಯಸುಖಸ್ವರೂಪನು. ಇಷ್ಟಾಪೂರ್ತಫಲಪ್ರದಃ = ಬಾವಿ, ಕೆರೆ, ಕಟ್ಟೆ, ದೇವಾಲಯವೇ ಮುಂತಾದ ಸತ್ಕರ್ಮಗಳಿಂದ ಕೂಡಿದವನು. ಯಜ್ಞದ ಮಧ್ಯದಲ್ಲಿ ಮಾಡುವ ಹೋಮದಾನಾದಿಗಳಿಗೆ ಇಷ್ಟಕರ್ಮವೆಂದು

ಹೆಸರು ಇವುಗಳ ಫಲವನ್ನು ಕೊಡುವವನು. ಭಕ್ತರಿಗೆ ಸಕಲವಾದ ಇಷ್ಟಗಳನ್ನು ಕೊಡುವವನು. ಇಷ್ಟವಾದ ವರಗಳನ್ನು ಕೊಡತಕ್ಕವನು. ಪ್ರಯೋಜನಗಳನ್ನು ಕೊಡುವವನು. **ಈಶ್ವರಃ** =ಸರ್ವಶಕ್ತನು, ನಿಯಾಮಕನು, ಸದಾಶಿವನು **ಉತ್ಕೃಷ್ಟಃ**= ಪರಮೇಶ್ವರನು, ಸರ್ವಶ್ರೇಷ್ಠನು. **ಊರ್ಧ್ವರೇತಾಃ**= ಜಿತೇಂದ್ರಿಯನು, ವಿರೂಪಾಕ್ಷನು. **ಋತಂಭರಃ**= ಸತ್ಯವನ್ನು ಕಾಪಾಡುವವನು, ಯೋಗ್ಯರನ್ನು ಪೋಷಿಸುವವನು. **ಋೂಮುಕ್ತಃ**= ನಿರ್ಭಯನು, ನಿಂದಾರಹಿತನು, ಮಾತಿಗೆ ನಿಲುಕದವನು **ಌಶಃ**= ಎಲ್ಲದರಲ್ಲಿಯೂ ಮಲಗಿರುವವನು, ಸರ್ವವ್ಯಾಪಕನು. **ೡಪಕಃ**= ಲುವರ್ಣಮಂತ್ರಕ್ಕೆ ಒಡೆಯ. **ಏಕಃ**= ಒಂದೇ ಒಂದೆಂಬಸಂಖ್ಯೆಯನ್ನು ಹೊಂದಿರುವವನು, ಮುಖ್ಯನು, ಕೇವಲನು, ಅಸಹಾಯನು, ಇವನಂತೆ ಮತ್ತೊಬ್ಬರು ಇಲ್ಲದಿರುವುದರಿಂದ ಒಬ್ಬನಾದನು. **ಐಶ್ವರ್ಯದಃ** = ಈಶ್ವರ ತತ್ವವನ್ನು ಕೊಡುವವನು, ಮಹಿಮೆಯನ್ನು ಕೊಡುವವನು. ಸಿದ್ಧಿಯನ್ನು ಕೊಡುವವನು. **ಓಜೋದಃ** =ಜ್ಞಾನವನ್ನು ಕೊಡುವವನು ಬಲವನ್ನು ಕೊಡುವವನು, ತೇಜಸ್ಸನ್ನು ಕೊಡುವವನು. **ಔದಾರ್ಯಬಂಧುರಃ** =ಉದಾರತನದಿಂದ ರಮ್ಯನಾದವನು. **ಅಂತರಾತ್ಮಾ**= ಅಂತರ್ಯಾಮಿಯಾದವನು, ಸರ್ವಗತನು. **ಅರ್ಥಗರ್ಭಃ** = ಎಲ್ಲಾ ವಿಷಯವನ್ನು ಗರ್ಭದಲ್ಲಿ ಉಳ್ಳವನು, ಮೋಕ್ಷಸ್ಥಾನಕ್ಕೆ ಗರ್ಭಸ್ಥಾನವಾಗಿರುವವನು, ಹಿರಣ್ಯರೂಪವಾದ ಪ್ರಯೋಜನವನ್ನು ಉಳ್ಳವನು. **ಕರುಣಾಕರಃ**= ದಯಾನಿಧಿಯು. **ಖಡ್ಗೀ**= ನಂದಕವೆಂಬ ಖಡ್ಗವನ್ನುಳ್ಳವನು. **ಗತಿದಃ**= ಅವರವರ ಯೋಗ್ಯತೆಗೆ ತಕ್ಕಂತೆ ಸತ್ಕರ್ಮ ದುಷ್ಕರ್ಮ ರೂಪವಾದ ಗತಿಯನ್ನು ಕೊಡುವವನು. ಶರಣಾಗತರಿಗೆ ಸದ್ಗತಿಯನ್ನು ಕೊಡುವವನು. **ಘನಶ್ಯಾಮಃ**= ಮೇಘದಂತೆ ನೀಲವರ್ಣವುಳ್ಳವನು. ಸಾಂದ್ರನಾದವನು, ಸುಂದರನು. **ಙಪಾನಃ**= ವೇಣುನಾದದ ಅಮೃತವನ್ನು ಪಾನಮಾಡುವವನು, ವಿಷಯವನ್ನು ಗ್ರಹಿಸುವವನು, ಭಯವಡುವವರಿಗೆ ಅಭಯವನ್ನು ಕೊಡುವವನು. **ಚಕಿತಾಶೇಷದುಷ್ಕೃತಃ**= ಎಲ್ಲಾ ಪಾಪಗಳನ್ನೂ ಭಯಪಡುವಂತೆ ಮಾಡುವವನು, ದುರಿತವನ್ನು ಪರಿಹರಿಸುವವನು. **ಛತ್ರೀ**= ಛತ್ರಿಯನ್ನುಳ್ಳವನು, ಜಗತ್ತಿಗೇ ಚಕ್ರವರ್ತಿಯು, ಜಗದೇಕವೀರನು, ವಾಮನಲೀಲಾಮೂರ್ತಿಯು. **ಜಗನ್ಮಯಃ**= ಪ್ರಪಂಚರೂಪನು, ವಿಶ್ವಾತ್ಮನೆಂಬದಾಗಿ ಪ್ರಸಿದ್ಧನಾದವನು. **ಝಷರೂಪೀ**= ಮತ್ಸ್ಯಾವತಾರ ಮಾಡಿದವನು. **ಞಟೇಶ್ವರಃ** =ಬಸವನ ಮೇಲೆ ಕುಳಿತು ಸಂಚರಿಸುವ ಪ್ರಭುವು. **ಟಣತ್ಕಾರಧನುಃ**= ಧನುಸ್ಸನ್ನು ಟಂಕಾರಮಾಡುತ್ತಿರುವವನು. **ಠನಬಂಧಃ**= ಶುಭಗಳಿಗೆಲ್ಲಾ ಶರೀರವಾಗಿ ಉಳ್ಳವನು, ನಿತ್ಯಮಂಗಳ ಮೂರ್ತಿಯು,

ಚಂದ್ರಸ್ವರೂಪನು. ಅಗ್ನಿಸ್ವರೂಪನು. ಶೂನ್ಯವಾದ ರೂಪುವುಳ್ಳವನು. **ಡಮರು ಪಕ್ಕರಃ**= ಡಮರುವೆಂಬ ವಾದ್ಯವನ್ನು ಕೈಯಲ್ಲುಳ್ಳವನು. **ಛಣಲ್ಲುಲಿತಪಾಪಃ** = ಪಾಪಗಳನ್ನು ನಾಶಮಾಡುವ ಶಕ್ತಿಯುಳ್ಳವನು, **ಣಕರ್ಣಃ**= ಕಮಲದಳದಂತೆ ಕಿವಿಯುಳ್ಳವನು, ಜ್ಞಾನಕರ್ಣನೆನಿಸಿಕೊಳ್ಳುವವನು. **ತಪೋರೂಪಃ** = ತಪಸ್ಸಿನ ಸ್ವರೂಪನು, ಯೋಗಾತ್ಮನು. **ಥಗಃ**= ಮಂಗಳಗತನು, ಕಲ್ಯಾಣಮಯನು. **ದಕ್ಷಃ** = ಸಮರ್ಥನು. **ಧನ್ವೀ** = ಶಾರ್ಙ್ಗವೆಂಬ ಧನುಸ್ಸುಳ್ಳವನು. **ನಷ್ಟೋದ್ಧರಣಧೀಃ** = ನಾಶವಾಗುವವರನ್ನು ಸರಿಪಡಿಸುವವನು. **ಪರಮೇಶ್ವರಃ**= ಸರ್ವೇಶ್ವರನು, ಲೋಕಪೂಜ್ಯನು. **ಪರಶುರಾಮಃ** =ಭಾರ್ಗವರಾಮನಾಗಿ ಅವತರಿಸಿದವನು. **ಬಲಿವರಪ್ರದಃ**= ಬಲಿಚಕ್ರವರ್ತಿಗೆ ವರವನ್ನು ಕೊಟ್ಟವನು. **ಭಗವಾನ್**= ಅನಂತವಾದ ಶಕ್ತಿಯುಳ್ಳವನು, ಬಹುವಾದ ಮಹಿಮೆಯುಳ್ಳವನು. **ಮಧುಘಾತೀ**=ಮಧುವೆಂಬ ರಾಕ್ಷಸನನ್ನು ಸಂಹರಿಸಿದವನು. **ಯಜ್ಞಫಲಪ್ರದಃ**= ದೇವರ ಪೂಜೆಯೇ ಮುಂತಾದುವುಗಳಿಗೆ ಫಲವನ್ನು ಕೊಡುವವನು. **ರಘುನಾಥಃ** = ರಘುಕುಲತಿಲಕನು. **ಲಕ್ಷ್ಮೀಶಃ**= ಮಂಗಳ ದೇವತೆಗೆ ಮನೋಹರನು. **ವರಿಷ್ಠಃ**= ಸರ್ವಶ್ರೇಷ್ಠನು, ಲೋಕಪೂಜ್ಯನು, ಜಗದ್ಗುರುವು. **ಶರಣ್ಯಃ**= ಸರ್ವರಕ್ಷಕನು, ಶರಣಹೊಂದಲು ಯೋಗ್ಯನು. **ಷಡ್ಗುಣೈಶ್ವರ್ಯಸಂಪನ್ನಃ**= ಸಮಗ್ರವಾದ ಐಶ್ವರ್ಯವುಳ್ಳವನು, ಸಂಪೂರ್ಣವಾದ ಧರ್ಮವುಳ್ಳವನು, ಸಮಸ್ತಕೀರ್ತಿಯುಳ್ಳವನು, ಸಮಸ್ತವಾದ ಯಶಸ್ಸುಳ್ಳವನು, ಸಕಲವಿಧವಾದ ವೈರಾಗ್ಯವುಳ್ಳವನು. **ಸರ್ವೇಶ್ವರಃ** = ಚರಾಚರಾತ್ಮಕವಾದ ಪ್ರಪಂಚಕ್ಕೆ ಪ್ರಭುವು. **ಹಯಗ್ರೀವಃ** = ಹಯಗ್ರೀವಾವತಾರವನ್ನು ಮಾಡಿ ಜ್ಞಾನವನ್ನು ಉಪದೇಶಿಸಿದವನು, ಲೋಕವನ್ನು ಉದ್ಧಾರಮಾಡಿದವನು. **ಕ್ಷೇಮೀ**= ಮಂಗಳನ್ನುಳ್ಳವನು, ಕುಶಲಿಯು, ಲೋಕಕ್ಷೇಮವನ್ನುಂಟುಮಾಡುತ್ತ ಜಗತ್ತನ್ನು ರಕ್ಷಿಸುವವನು.

ಇಂತು ವಾಲ್ಮೀಕಿ ರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ
ಆಯಾಯ ಮಂತ್ರವರ್ಣನವೆಂಬ ಹದಿನಾಲ್ಕನೆಯ ಸರ್ಗವು
ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಹದಿನಾಲ್ಕನೆಯ ಸರ್ಗದ ಸಾರಾಂಶವು

ಶ್ರೀರಾಮನ ಸಭೆಯಲ್ಲಿ ಕುಳಿತಿರುವ ಬ್ರಹ್ಮನನ್ನು ಕುರಿತು ವಸಿಷ್ಠನು ಜಯವಿಜಯರ ಶಾಪವನ್ನು ಕುರಿತು ಪ್ರಶ್ನಿಸಲು ಅದನ್ನು ಕೇಳಿದ ಬ್ರಹ್ಮನು ಇಂತೆಂದನು.

ಒಂದುಸಾರಿ ಮಹಾವಿಷ್ಣುವು ಲಕ್ಷ್ಮಿಯೊಡನೆ ಏಕಾಂತದಲ್ಲಿರಲು ಜಯವಿಜಯರು ಬಾಗಿಲಲ್ಲಿ ಇದ್ದುಕೊಂಡು ಕಾಯುತ್ತಿದ್ದರು. ಆಗ ಆ ವಿಷ್ಣುವನ್ನು ನೋಡಲು ಅಶ್ವಿನೀದೇವತೆಗಳು ಬಂದರು. ಅವರು ಬರುತ್ತಿದ್ದಂತೆಯೇ ಅವರ ಎದುರಿಗೆ ಈ ಜಯವಿಜಯರು ಹೋಗಿ ಈಗ ವಿಷ್ಣುವನ್ನು ನೋಡಲಾಗುವುದಿಲ್ಲ. ಆವನು ಲಕ್ಷ್ಮಿಯೊಡನೆ ಏಕಾಂತದಲ್ಲಿರುವನು ಎಂದರು. ಆದರೆ ಇವರು ಆ ವಿಷ್ಣುವನ್ನು ನೋಡಲೇ ಬೇಕು. ಹೋಗಿ ಹೇಳಿ ಆತನು ಏನು ಹೇಳುವನೋ ಕೇಳಿಕೊಂಡು ಬನ್ನಿರಿ ಎಂದು ಮೂರುಬಾರಿ ಹೇಳಿದರು. ಆದರೂ ಆ ಜಯವಿಜಯರು ಅದು ಸಾಧ್ಯವೇ ಇಲ್ಲ ಎಂದು ಖಂಡಿತವಾಗಿ ಹೇಳಿಬಿಟ್ಟರು.

ಇದರಿಂದ ಕೋಪಗೊಂಡ ಅಶ್ವಿನೀದೇವತೆಗಳು ಎಲೈ ಜಯವಿಜಯರಿರಾ ! ನಾವು ಮೂರುಬಾರಿ ಹೇಳಿದರೂ ನೀವು ವಿಷ್ಣುವಿಗೆ ಅದನ್ನು ಅರಿಕೆಮಾಡದೆ ತಿರಸ್ಕರಿಸುತ್ತಿದ್ದೀರಿ. ಆದ್ದರಿಂದ ನೀವು ಮೂರುಬಾರಿ ಭೂಲೋಕದಲ್ಲಿ ಜನ್ಮವನ್ನು ಎತ್ತಿರಿ ಎಂದು ಶಪಿಸಿದರು. ಅದಕ್ಕೆ ಆ ಜಯವಿಜಯರು ಎಲೈ ಅಶ್ವಿನೀದೇವತೆಗಳಿರಾ ! ನಮ್ಮಲ್ಲಿ ತಪ್ಪಿಲ್ಲದಿದ್ದರೂ ನಮ್ಮನ್ನು ನೀವು ಶಪಿಸಿದುದರಿಂದ ಒಂದುಬಾರಿ ಭೂಲೋಕದಲ್ಲಿ ಜನ್ಮವನ್ನು ತಾಳಿರಿ ಎಂದು ಶಪಿಸಿದರು

ಹೀಗೆ ಒಬ್ಬರಿಗೊಬ್ಬರು ಶಾಪವನ್ನು ಕೊಟ್ಟುಕೊಂಡು ಆ ಶಾಪದ ಪರಿಣಾಮವನ್ನು ಯೋಚಿಸುತ್ತ "ಹಾಹಾ" ಎಂದು ದುಃಖಿಸುತ್ತಿರಲು ಈ ಗದ್ದಲವು ಸ್ವಾಮಿಯ ಕಿವಿಗೆ ಮುಟ್ಟಿತು. ಆಗ ಆ ಸ್ವಾಮಿಯು ಈ ನಾಲ್ವರನ್ನೂ

ಕರೆದು ಅವರಿಂದ ವಿಷಯಗಳನ್ನು ತಿಳಿದುಕೊಂಡು ಅವರ ಪ್ರಾರ್ಥನೆಯನ್ನು ಮನ್ನಿಸುತ್ತ ಇಂತೆಂದನು.

ಎಲೈ ಜಯವಿಜಯರಿರಾ! ನೀವು ನನ್ನಲ್ಲಿ ಅನುಕೂಲವಾದ ಭಕ್ತಿಯಿಂದಿದ್ದು ಏಳುಸಾರಿ ಜನ್ಮವನ್ನು ಹೊಂದಿ ಶಾಪವಿಮುಕ್ತರಾಗಿ ನನ್ನ ಬಳಿಗೆ ಬರುವಿರಾ? ಹಾಗಿಲ್ಲದಿದ್ದರೆ ವಿರೋಧ ಭಾವದ ಭಕ್ತಿಯಿಂದಿದ್ದು ಮೂರು ಬಾರಿ ಜನ್ಮವನ್ನು ಹೊಂದಿ ಶಾಪದಿಂದ ವಿಮುಕ್ತರಾಗಿ ಬರುವಿರಾ? ಎಂದೆನಲು ಜಯವಿಜಯರು ಆ ಏಳುಜನ್ಮಗಳ ಹೆಚ್ಚುಕಾಲದ ಅಗಲುವಿಕೆಯನ್ನು ವಿಷ್ಣುವಿನೊಡನೆ ಸಹಿಸಲಾರದೆ ಮೂರುಜನ್ಮಗಳ ವಿರೋಧಭಾವದ ಭಕ್ತಿಯನ್ನೇ ಕೇಳಿಕೊಂಡರು.

ಅಂತೆಯೇ ಈ ಜಯವಿಜಯರು ಮೊದಲನೆಯ ಬಾರಿಯದಾಗಿ ಜನ್ಮವನ್ನು ತಾಳುತ್ತ ಜಯನು ಹಿರಣ್ಯಾಕ್ಷನಾಗಿಯೂ ವಿಜಯನು ಹಿರಣ್ಯಕಶಿಪುವಾಗಿಯೂ ಹುಟ್ಟಿದರು. ಈ ಸ್ವಾಮಿಯು ವರಾಹಾವತಾರವನ್ನು ಮಾಡಿ ಹಿರಣ್ಯಾಕ್ಷನನ್ನೂ ನಾರಸಿಂಹಾವತಾರವನ್ನು ಮಾಡಿ ಹಿರಣ್ಯಕಶಿಪುವನ್ನೂ ಕೊಂದನು. ಎರಡನೆಯ ಬಾರಿ ಜಯನು ರಾವಣನಾಗಿಯೂ ವಿಜಯನು ಕುಂಭಕರ್ಣನಾಗಿಯೂ ಹುಟ್ಟಿದರು. ಅವರಿಬ್ಬರನ್ನೂ ವಿಷ್ಣುವು ಈ ರಾಮಾವತಾರವನ್ನು ಮಾಡಿ ಕೊಂದನು. ಈ ಅಶ್ವಿನೀಕುಮಾರರಲ್ಲಿ ಒಬ್ಬನು ಐರಾವಣನಾಗಿಯೂ ಮತ್ತೊಬ್ಬನು ಮೈರಾವಣನಾಗಿಯೂ ಹುಟ್ಟಿರುವರು. ಅವರ ವಧೆಯೂ ಆಗಿ ಹೋಯಿತು. ಮುಂದೆ ಜಯನು ಶಿಶುಪಾಲನಾಗಿಯೂ ವಿಜಯನು ದಂತವಕ್ತ್ರನಾಗಿಯೂ ಹುಟ್ಟುವರು. ಆಗ ದ್ವಾಪರದಲ್ಲಿ ಈ ಸ್ವಾಮಿಯು ಕೃಷ್ಣಾವತಾರವನ್ನು ಮಾಡಿ ಅವರನ್ನು ಕೊಲ್ಲುವನು. ಹೀಗೆ ಮೂರುಜನ್ಮಗಳು ಕಳೆದನಂತರ ಆ ಜಯವಿಜಯರು ಮತ್ತೆ ವಿಷ್ಣುವಿನ ಸೇವಕರಾಗಿ ವೈಕುಂಠದಲ್ಲಿರುವರು. ಎಲೈ ಋಷಿಯೇ! ಈ ರೀತಿಯಾಗಿ ಈ ಭಗವದ್ಭಕ್ತರಾದ ಗಣಗಳ ಶಾಪದ ವಿಷಯವನ್ನು ವಿವರಿಸಿದ್ದೇನೆ. ಎಂದನು.

ಬ್ರಹ್ಮನು ಈ ರೀತಿಯಾಗಿ ಆ ಶ್ರೀರಾಮನನ್ನು ಗುಣಕಥನ ಮಾಡಿ ಸ್ತುತಿಸಲು ಆ ರಾಮನು ಸಂತೋಷಗೊಂಡು ಅವನನ್ನು ಗೌರವಿಸಿದನು. ಅನಂತರ ವಾಲ್ಮೀಕಿಯನ್ನು ಕುರಿತು ಎಲೈ ಮುನಿಯೆ! ನಾನು ರಾಮಾವತಾರವನ್ನು ಮಾಡುವುದಕ್ಕೆ ಮೊದಲೇ ನೀನು ಈ ರಾಮಚರಿತ್ರೆಯನ್ನು ಬರೆದಿರುವೆಯಲ್ಲ! ನೀನು ಹಿಂದೆಯೇ ಇವನ್ನು ಹೇಗೆ ತಿಳಿದಿದ್ದೆ? ಅಥವಾ ನಿನಗೆ

ಇದನ್ನು ಯಾರು ಹೇಳಿದರು? ಪೂರ್ವಜನ್ಮದಲ್ಲಿ ನೀನು ಯಾರಾಗಿದ್ದೆ? ಇದೆಲ್ಲವನ್ನೂ ವಿಸ್ತಾರವಾಗಿ ಹೇಳು ಎಂದೆನಲು ಅದಕ್ಕೆ ಆ ವಾಲ್ಮೀಕಿಯು ಇಂತೆಂದು ಹೇಳತೊಡಗಿದನು.

ಎಲೈ ರಾಮನೆ! ನೀನು ಕೇಳಿದ ವಿಷಯವು ಬಹು ಚೆನ್ನಾಗಿರುವುದು. ನಿನ್ನ ನಾಮಗಳ ಮಹಿಮೆಯನ್ನು ವರ್ಣಿಸಲು ಯಾರಿಗೆ ತಾನೆ ಸಾಧ್ಯವಾದೀತು? ಆ ನಿನ್ನ ನಾಮಗಳ ಪ್ರಭಾವದಿಂದಲೇ ನಾನು ಬ್ರಹ್ಮರ್ಷಿಯಾದೆನು. ಎಲೈ ರಾಘವನೆ! ನನ್ನ ಪೂರ್ವಜನ್ಮದ ಕಥೆಯನ್ನು ಹೇಳುತ್ತೇನೆ ಕೇಳು.

ಪಂಪಾಸರೋವರದ ತೀರದಲ್ಲಿ ಶಂಖನೆಂಬ ಒಬ್ಬ ಬ್ರಾಹ್ಮಣನಿದ್ದನು. ಅವನು ಗುರುವಿನಿಂದ ಉಪದೇಶವನ್ನು ಹೊಂದಿ ಸಿದ್ಧಿಯನ್ನು ಪಡೆದಿದ್ದನು. ಈತನಿಗೆ ಗೋದಾವರೀನದಿಯ ಬಳಿಗೆ ಹೋಗಬೇಕೆಂದು ತೋರಿತು. ಆದುದರಿಂದ ಅಲ್ಲಿಂದ ಪ್ರಯಾಣಮಾಡಿದನು. ದಾರಿಯಲ್ಲಿ ಭೀಮರಥಿ ಎಂಬ ಪುಣ್ಯಕರವಾದ ನದಿಯು ಸಿಕ್ಕಲು ಅಲ್ಲಿ ಸ್ನಾನಾಹ್ನಿಕಗಳನ್ನು ಮಾಡಿಕೊಂಡು ಮುಂದಕ್ಕೆ ಹೊರಟನು. ದಾರಿಯಲ್ಲಿ ಗಹನವಾದ ಒಂದು ಕಾಡು ಸಿಕ್ಕಿತು. ಆ ಕಾಡಾದರೋ ಬಹುವಾದ ಕಲ್ಲುಮುಳ್ಳುಗಳಿಂದ ಕೂಡಿದ್ದಿತು. ಯಾವ ಬಳಿಯಲ್ಲಿಯೂ ಒಂದು ತೊಟ್ಟೂ ನೀರಿರಲಿಲ್ಲ. ಜನಗಳ ಸುಳಿವೂ ಇರಲಿಲ್ಲ. ಈ ರೀತಿಯಾದ ನಿರ್ಜಲವೂ ನಿರ್ಜನವೂ ಕಂಟಕಾನ್ವಿತವೂ ಆದ ಕಾಡಿನಲ್ಲಿ ಹೊರಟನು. ಮಧ್ಯಾಹ್ನವಾಗಿ ಬಿಸಿಲು ಬಹು ತಾಪಕಾರಿಯಾಗಿದ್ದಿತು. ಈ ಕಾಡಿನಲ್ಲಿ ಒಬ್ಬ ಬೇಡನು ಕಂಡುಬಂದನು. ಅವನು ಬಹು ದುಷ್ಟನು. ಕೈಯ್ಯಲ್ಲಿ ಬಿಲ್ಲು ಬಾಣಗಳಿದ್ದುವು. ಅವನಿಗೆ ಯಾವ ಪ್ರಾಣಿಯಲ್ಲಿಯೇ ಆಗಲಿ ದಯೆ ಯೆಂಬುದೇ ಬರುತ್ತಿರಲಿಲ್ಲ. ಒಟ್ಟಿನಲ್ಲಿ ಯಮನ ಮತ್ತೊಂದು ಅವತಾರ ದಂತಿದ್ದನು. ಇವನು ಕಳ್ಳತನದಿಂದಲೂ ದರೋಡೆಯಿಂದಲೂ ಜೀವನವನ್ನು ಸಾಗಿಸುತ್ತಿದ್ದನು.

ಈ ಶಂಖನು ದಾರಿಯಲ್ಲಿ ಹೋಗುತ್ತಿರುವುದನ್ನು ಕಂಡನು. ಯಾಗಗಳನ್ನು ಮಾಡಿದ್ದುದರಿಂದ ಕಿವಿಯಲ್ಲಿ ಕುಂಡಲಗಳನ್ನು ಧರಿಸಿದ್ದನು. ಈ ಬ್ರಾಹ್ಮಣನು ಆ ಬೇಡನ ಕಣ್ಣಿಗೆ ಬಿದ್ದೊಡನೆಯೇ ಆ ಬೇಡನು ಇವನ ಬಳಿಗೆ ಬಂದು ಕತ್ತಿಯನ್ನು ತೋರಿಸಿ ಹೆದರಿಸಿ ಅವನಲ್ಲಿದ್ದ ಕುಂಡಲಗಳು, ಜೋಡು, ಛತ್ರಿ, ಬಟ್ಟೆ, ಕಮಂಡಲು ಮುಂತಾದುವನ್ನು ಕಿತ್ತುಕೊಂಡನು. ಆತನಲ್ಲಿ ಮತ್ತೇನೂ ಇಲ್ಲದಿರಲು ಪ್ರಾಣವನ್ನು ತೆಗೆಯದೆ ಬಿಟ್ಟುಬಿಟ್ಟು ಮುಂದಕ್ಕೆ ಹೋಗೆಂದು ಹೇಳಿದನು. ತನ್ನಲ್ಲಿದ್ದುದೆಲ್ಲವನ್ನೂ ಕಳೆದುಕೊಂಡು ಬಾಹ್ಮಣನು ಮುಂದಕ್ಕೆ ಹೋದನು.

ದಾರಿಯಾವರೋ ಸುರುಜುಕಲ್ಲಿನಿಂದ ಕೂಡಿದ್ದು ಮಧ್ಯಾಹ್ನದ ಬಿಸಿಲಿಗೆ ಕಾದು ಹೆಜ್ಜೆಯನ್ನಿಡಲು ಅಸಾಧ್ಯವಾಗಿದ್ದಿತು. ಆ ಬಿಸಿಲು ಮೇಲುಗಡೆಯಲ್ಲಿ ತಲೆಯನ್ನು ಬಹುವಾಗಿ ಸುಡುತ್ತಲೂ ಇದ್ದಿತು ಇಂತಹ ದಾರಿಯಲ್ಲಿ ಹೊರಟು ಕಾಲುಗಳು ಸುಡುತ್ತಿದ್ದುದರಿಂದ ಹಸಲೆಯು ಬೆಳೆದಿರುವಲ್ಲಿ ಕಾಲನ್ನಿಟ್ಟುಕೊಂಡು ಹೋಗುತ್ತಲೂ ಆ ಹಸಲೆಯು ಇಲ್ಲದಿರುವಲ್ಲಿ ಆ ಕಳ್ಳನು ಬಿಟ್ಟಿದ್ದ ಬಟ್ಟೆಯನ್ನು ನೆಲಕ್ಕೆ ಹಾಸಿಕೊಂಡು ಅದರ ಮೇಲೆ ನಡೆಯುತ್ತಲೂ ಆ ಬಿಸಿಲನ್ನು ತಡೆಯಲಾರದೆ ಆ ಕುರುಚಲು ಗಿಡಗಳ ಬಳಿಯಲ್ಲಿಯೇ ಸ್ವಲ್ಪ ಹೊತ್ತು ಕುಳಿತಿದ್ದು ಹಾಹಾಕಾರ ಮಾಡುತ್ತ ಹೋಗುತ್ತಿದ್ದನು.

ಕಾಮ ಕ್ರೋಧ ಲೋಭ ಮೋಹಗಳು ಪ್ರಾಣಿಗೆ ಆವರಿಸಿಕೊಂಡಿರುವಂತೆ ದಯೆಯೂ ಸೇರಿಕೊಂಡಿರುತ್ತದೆ. ಅದು ಹೊರಸೂಸಲು ಸನ್ನಿವೇಶಗಳ ಅಗತ್ಯವಿರುವುದು. ಯಮನಿಗೂ ಕೂಡ ದಯೆವೆಂಬುದು ಇಲ್ಲದೆ ಇಲ್ಲ. ಅವನಿಗೂ ಆ ದಯೆಯು ಹೊರಸೂಸಲು ಸನ್ನಿವೇಶವು ಅಗತ್ಯವು. ಆ ಬ್ರಾಹ್ಮಣನ ವಸ್ತುಗಳೆಲ್ಲವನ್ನೂ ಕಸಿದುಕೊಂಡ ಈ ಕಳ್ಳನು ಆ ಬ್ರಾಹ್ಮಣನು ಕಷ್ಟಪಡುತ್ತಿರುವುದನ್ನು ದೂರದಿಂದಲೇ ನೋಡಿದನು. ಇದರಿಂದ ಅವನಿಗೆ ಆ ಬ್ರಾಹ್ಮಣನ ವಿಷಯದಲ್ಲಿ ದಯೆಯು ಹುಟ್ಟಿ ಆ ಬ್ರಾಹ್ಮಣನಿಗೆ ಜೋಡುಗಳನ್ನು ಕೊಡಬೇಕೆಂದು ಮನಸ್ಸು ಮಾಡಿ ಇಂತೆಂದು ಆಲೋಚಿಸಿದನು.

ನಾನಾದರೋ ಕಳ್ಳನು ನನ್ನ ಕಳ್ಳತನದ ಧರ್ಮದಂತೆ ಆ ಬ್ರಾಹ್ಮಣನವುಗಳನ್ನೆಲ್ಲಾ ಕಸಿದುಕೊಂಡೆನು. ಕಳ್ಳನು ತನ್ನ ಧರ್ಮದ ಕಳ್ಳತನದಿಂದ ತೆಗೆದುಕೊಂಡ ಪದಾರ್ಥಗಳೆಲ್ಲವೂ ಆ ಕಳ್ಳನದೇ ಎಂದು ಕಳ್ಳರ ಧರ್ಮವಿರುವುದು. ಆದ್ದರಿಂದ ಆ ಬ್ರಾಹ್ಮಣನ ಪದಾರ್ಥಗಳನ್ನು ನಾನು ಕದ್ದಿರುವುದರಿಂದ ಅವೆಲ್ಲವೂ ನನ್ನವೇ ಆಗಿವೆ ಅಂಥ ನಾನು ಅವನ ಕಷ್ಟವನ್ನು ಪರಿಹರಿಸಲು ಈ ಕೆರಗಳನ್ನು ಅವನಿಗೇ ಕೊಡುತ್ತೇನೆ. ಆಗ ಈ ದಾನದಿಂದ ಬರುವ ಧರ್ಮವು ನನಗೆ ಬರುತ್ತದೆ. ನಾನಾದರೋ ಪಾಪಿಯು ಇದರಿಂದಲಾದರೂ ಸ್ವಲ್ಪ ಧರ್ಮವು ಬರಲಿ. ಈ ಬ್ರಾಹ್ಮಣನ ಕೆರಗಳು ಹಳೆಯುವಾಗಿ ಕಿತ್ತುಹೋಗಿವೆ. ನನ್ನ ಕಾಲಿನಲ್ಲಿರುವುದು ಹೊಸದಾಗಿವೆ. ಇವನ್ನು ಕೊಡುತ್ತೇನೆ. ಎಂದುಕೊಂಡು ಬೇಗನೆ ಹೋಗಿ ಆ ಪಾದರಕ್ಷೆಗಳನ್ನು ಆ ಬ್ರಾಹ್ಮಣನಿಗೆ ಕೊಟ್ಟನು. ಈ ಕೆರಗಳು ಸಿಕ್ಕಿದುದರಿಂದ ಅವನಿಗೆ ಬಹುಸುಖವಾಗಿ ದಾರಿಯಲ್ಲಿ ನಡೆಯುವಂತಾದನು. ಆಗ ಶಂಖನು ಆ ಬೇಡನಿಗೆ ಸುಖಿಯಾಗೆಂದು ಹರಿಸಿದುದಲ್ಲದೆ ಎಲೈ ಕಾಡುಮನುಷ್ಯನೇ ! ನಿನ್ನ ಪೂರ್ವಜನ್ಮದ ಪುಣ್ಯದಿಂದ ನಿನಗೆ ಈ ವೈಶಾಖ ಮಾಸದಲ್ಲಿ ಜೋಡುಗಳನ್ನು

ದಾನವಮಾಡಬೇಕೆಂಬ ಬುದ್ಧಿಯುಂಟಾಯಿತು ಎಂದನು. ಶಂಖನ ಈ ಮಾತನ್ನು ಕೇಳಿದ ವ್ಯಾಧನು ಎಲೈ ಬ್ರಾಹ್ಮಣೋತ್ತಮನೇ! ನಾನು ಪೂರ್ವದಲ್ಲಿ ಯಾವ ಪುಣ್ಯವನ್ನು ಮಾಡಿದ್ದೇನು ಎಂಬುದನ್ನು ದಯವಿಟ್ಟು ಹೇಳು ಎಂದು ಕೇಳಿಕೊಂಡನು. ಅದಕ್ಕೆ ಆ ಶಂಖನು ಇಂತೆಂದನು.

ಅಯ್ಯಾ ವ್ಯಾಧನೆ! ಇಲ್ಲಿ ಬಿಸಿಲು ಬಹುವಾಗಿ ಬಾಧಿಸುತ್ತಿರುವುದು. ನೀರಿಲ್ಲ. ನೆರಳಿಲ್ಲ. ಆದ್ದರಿಂದ ನೀರೂ ನೆರಳು ಇರುವಲ್ಲಿಗೆ ಹೋಗೋಣ. ಅನಂತರ ಅಲ್ಲಿ ನೀನು ಮಾಡಿರುವ ಪುಣ್ಯವನ್ನು ವಿಸ್ತಾರವಾಗಿ ಹೇಳುತ್ತೇನೆ.

ಎಂದೆನಲು ಇದನ್ನು ಕೇಳಿ ಆ ವ್ಯಾಧನು ಸ್ವಾಮಿ ಇಲ್ಲಿಗೆ ಹತ್ತಿರದಲ್ಲಿಯೇ ಒಂದು ಸರೋವರವಿದೆ. ಅದರಲ್ಲಿ ಬಹು ಚೆನ್ನಾಗಿರುವ ನೀರಿದೆ. ಅಲ್ಲಿಯೇ ಅನೇಕ ಬೇಲದ ಮರಗಳಿವೆ. ಅವುಗಳಲ್ಲಿ ಹಣ್ಣುಗಳೂ ಬಹುವಾಗಿವೆ. ಅಲ್ಲಿಗೆ ಹೋಗೋಣ. ಅಲ್ಲಿ ನಮಗೆ ತೃಪ್ತಿಯಾಗುವುದರಲ್ಲಿ ಸಂದೇಹವಿಲ್ಲ ಎಂದನು.

ವ್ಯಾಧನು ಹೇಳಿದುದನ್ನು ಕೇಳಿ ಅವನೊಡನೆ ಈ ಮುನಿಯು ಆ ಸರೋವರದ ಬಳಿಗೆ ಹೊರಟನು. ಸ್ವಲ್ಪ ದೂರ ಹೋಗುತ್ತಲೂ ಆ ಸರೋವರವು ಕಂಡುಬಂದಿತು. ಅಲ್ಲಿಗೆ ಹೋಗಿ ಮಧ್ಯಾಹ್ನದ ಸ್ನಾನವನ್ನು ಮಾಡಿಕೊಂಡು ಮಡಿ ಬಟ್ಟೆಗನ್ನುಟ್ಟು ಮಾಧ್ಯಾಹ್ನಿಕ, ದೇವರಪೂಜೆ ಮುಂತಾದುವನ್ನು ಮಾಡಿದನು. ಅಷ್ಟು ಹೊತ್ತಿಗೆ ಈ ವ್ಯಾಧನು ಹಣ್ಣು ಹಂಪಲುಗಳನ್ನು ತಂದಿದ್ದನು. ಈ ಋಷಿಯು ಅವನ್ನು ತಿಂದುದಲ್ಲದೆ ಶ್ರಮಪರಿಹಾರಕವಾದ ಬೇಲದಹಣ್ಣನ್ನು ಬಹುವಾಗಿ ತಿಂದು ನೀರನ್ನು ಕುಡಿದನು. ಅನಂತರ ಅವರಿಬ್ಬರೂ ಒಳ್ಳೆಯ ನೆರಳಿನಲ್ಲಿ ಕುಳಿತುಕೊಂಡರು. ಆಗ ಅಯ್ಯಾ ವ್ಯಾಧನೇ! ನಿನ್ನ ಪೂರ್ವಪುಣ್ಯವನ್ನು ಹೇಳುತ್ತೇನೆ ಕೇಳು ಎಂದು ಹೇಳಿ ಇಂತೆಂದು ಹೇಳಿದನು.

ಅಯ್ಯಾ! ಶಾಕಲವೆಂಬುದು ಒಂದೂರಿರುವುದು. ಅಲ್ಲಿ ನೀನೊಬ್ಬ ಬ್ರಾಹ್ಮಣನಾಗಿ ಹುಟ್ಟಿದ್ದೆ. ಚತುರ್ವೇದಗಳನ್ನೂ ಸಾಂಗವಾಗಿ ಅಧ್ಯಯನ ಮಾಡಿದ್ದ. ಸ್ತಂಭನೆಂಬುದಾಗಿ ನಿನಗೆ ಹೆಸರಿತ್ತು. ನೀನು ಶ್ರೀವತ್ಸಗೋತ್ರದಲ್ಲಿ ಹುಟ್ಟಿದವನು.

ನಿನಗೆ ದುಷ್ಟರ ಸಹವಾಸದಿಂದ ಒಬ್ಬಳು ಸೂಳೆಯ ಸಂಬಂಧವಾಯಿತು. ಅವಳಿಗೂ ನಿನಗೂ ಬಹುವಾಗಿ ಪ್ರಿತಿಯು ಬೆಳೆಯಿತು. ಈ ಸೂಳೆಯ ಸಹವಾಸದಿಂದ ಬ್ರಾಹ್ಮಣನಿಗೆ ಯೋಗ್ಯವಾದ ನಿತ್ಯಕರ್ಮಗಳೆಲ್ಲವನ್ನೂ ಬಿಟ್ಟು ಮೂರ್ಖನಾಗಿಹೋದೆ. ನಿನಗೆ ಮದುವೆಯಾದ ಕಾಂತಿಮಯಿ ಎಂಬ ಬ್ರಾಹ್ಮಣ ಜಾತಿಯ ಹೆಂಡತಿಯೊಬ್ಬಳಿದ್ದಳು. ಆ ಹೆಂಗಸು ತನ್ನ ಪಾತಿವ್ರತ್ಯ ಧರ್ಮವನ್ನು

ಮುಂದಿಟ್ಟುಕೊಂಡು ಬ್ರಾಹ್ಮಣಾಧಮನಾದ ನಿನ್ನನ್ನೂ ಆ ನಿನ್ನ ಸೂಳೆಯನ್ನೂ ಉಪಚರಿಸುತ್ತಿದ್ದಳು. ಆಕೆಯು ನಿನ್ನ ಸೇವೆಯನ್ನು ಮಾಡಲು ನಿನ್ನ ಪಾದಗಳನ್ನು ತೊಳೆಯುತ್ತಿದ್ದುದಲ್ಲದೆ ನಿನಗೆ ಸಂತೋಷವಾಗಲೆಂದು ಆ ನಿನ್ನ ಸೂಳೆಯ ಕಾಲುಗಳನ್ನೂ ತೊಳೆಯುತ್ತಿದ್ದಳು. ನೀವಿಬ್ಬರೂ ಹೇಳಿದಂತೆಯೇ ನಡೆಯುತ್ತ ನೀವು ಮಂಚದಮೇಲೆ ಮಲಗಿದ್ದರೆ ತಾನು ಕೆಳಗೆ ಮಲಗಿಕೊಳ್ಳುತ್ತಿದ್ದಳು. ಆ ಸೂಳೆಯು ಎಷ್ಟು ತಡೆದರೂ ಸುಮ್ಮನಿರದೆ ಅವಳ ಹಿತಕಾರ್ಯದಲ್ಲಿಯೂ ಆಸಕ್ತಳಾಗಿದ್ದಳು. ಹೀಗೆ ಆಕೆಯು ಬಹುಕಾಲದವರೆಗೂ ಆ ವೇಶ್ಯೆಯನ್ನೂ ತನ್ನ ಪತಿಯನ್ನೂ ಸೇವಿಸುತ್ತಿದ್ದಳು. ಆಕೆಯು ಲೋಕದಲ್ಲಿ ಬಹು ದುಃಖಿನಿಯಾಗಿದ್ದಳು.

ಹೀಗಿರುತ್ತಲು ಒಂದು ದಿನ ಆ ಬ್ರಾಹ್ಮಣನು ಅವರೆಯ ಕಾಳನ್ನೂ ಮೂಲಂಗಿಯನ್ನೂ ಬೇಯಿಸಿ ತಿಂದು ಎಮ್ಮೆಯ ಮೊಸರಿನಲ್ಲಿ ಊಟಮಾಡಿದನು. ಅಲ್ಲದೆ ಚಿಗುಳಿಯನ್ನೂ ತಿಂದನು. ಇದನ್ನು ತಿಂದುದರಿಂದ ಅಪಥ್ಯವಾಗಿ ಅವನಿಗೆ ವಾಂತಿ ಭೇದಿಗಳಾದುವು. ಈ ಅಪಥ್ಯದಿಂದಲೇ ಭಗಂದರವೆಂಬ ರೋಗವು ಉಂಟಾಯಿತು. ಇದರಿಂದ ಹಗಲೂ ರಾತ್ರಿಯೂ ದುಃಖಪಡುತ್ತಿದ್ದನು. ಮನೆಯಲ್ಲಿ ಹಣವಿರುವವರೆಗೂ ಸೂಳೆಯು ಮನೆಯಲ್ಲಿದ್ದಳು. ಅನಂತರ ಕೈಗೆ ಸಿಕ್ಕಿದುದನ್ನು ತೆಗೆದುಕೊಂಡು ಬೇರೆ ಹೊರಟುಹೋಗಿ ಬೇರೆಯುವನೊಡನೆ ಸೇರಿಕೊಂಡಿದ್ದಳು. ಇವನ ವಿಷಯವನ್ನು ವಿಚಾರಿಸುತ್ತಲೂ ಇರಲಿಲ್ಲ.

ಇದನ್ನು ನೋಡಿ ಈತನಿಗೆ ದುಃಖವುಂಟಾಗಿ ರೋಗದಿಂದ ಬಾಧಿತನಾಗಿ ಹೆಂಡತಿಯನ್ನು ಕುರಿತು ಎಲೈ ದೇವಿಯೆ ! ವೇಶ್ಯಾಸಕ್ತನೂ ನಿಷ್ಠುರನೂ ಆದ ಈ ನನ್ನನ್ನು ಕಾಪಾಡು. ನಿನಗೆ ನಾನು ಉಪಕಾರವೆಂಬುದನ್ನೇ ಮಾಡಲಿಲ್ಲ. ತನ್ನಲ್ಲಿಯೇ ಆಸಕ್ತಳಾದ ಹೆಂಡತಿಯನ್ನು ಯಾವನು ಗೌರವಿಸುವುದಿಲ್ಲವೋ ಅವನು ಹದಿನೇಳು ಜನ್ಮಗಳವರೆಗೂ ಷಂಡನಾಗುತ್ತಾನೆ. ಈಗ ನಾನಾದರೋ ಸಜ್ಜನರಿಂದ ನಿಂದಿತನಾಗಿ ನಿನ್ನನ್ನೂ ತಿರಸ್ಕರಿಸಿದುದರಿಂದ ಪಾಪಜನ್ಮವನ್ನು ಹೊಂದುತ್ತೇನೆ. ನಾನಾದರೋ ನಿನ್ನನ್ನು ಯಾವಾಗಲೂ ಬಯ್ಯುತ್ತ ಕೋಪಿಸಿಕೊಳ್ಳುತ್ತಾ ಇದ್ದೆನು. ಎಂದನು.

ಗಂಡನು ಹೀಗೆ ಹೇಳುತ್ತಿರುವುದನ್ನು ನೋಡಿ ಆ ಕಾಂತಿಮಯಿಯು ಕೈ ಮುಗಿದುಕೊಂಡು ಎಲೈ ಸ್ವಾಮಿಯೇ ! ನೀನು ನನ್ನ ವಿಷಯದಲ್ಲಿ ಯೋಚಿಸುತ್ತ ದುಃಖ ಪಡಬೇಡ. ಮತ್ತು ನಾನು ಇವಳನ್ನು ಬಯ್ಯುತ್ತಿದ್ದು ತೊಂದರೆ

ಕೊಡುತ್ತಿದ್ದೆನಲ್ಲ ಎಂದು ನಾಚಿಕೆ ಪಡಬೇಡ, ನಿನ್ನ ಮೇಲೆ ನನಗೆ ಸ್ವಲ್ಪವೂ ಕೋಪವಿಲ್ಲ. ಹಿಂದಿನ ಜನ್ಮದಲ್ಲಿ ಮಾಡಿದ ಪಾಪಗಳು ಈ ಜನ್ಮದಲ್ಲಿ ಬಾಧಿಸುತ್ತವೆ ಗಂಡಸರಾಗಲಿ ಹೆಂಗಸರಾಗಲಿ ಅವನ್ನು ಸಹಿಸಿದರೆ ಅವರೇ ಉತ್ತಮರು. ಪಾಪಿಯಾದ ನಾನು ಪೂರ್ವಜನ್ಮದಲ್ಲಿ ಮಾಡಿದ ಪಾಪವನ್ನು ಈಗ ಅನುಭವಿಸುತ್ತೇನೆ. ಅದನ್ನು ನಾನು ಅನುಭವಿಸುತ್ತಿರುವುದರಿಂದ ಸ್ವಲ್ಪವೂ ದುಃಖಪಡುವುದಿಲ್ಲ. ಹೀಗೆಂದು ಹೇಳುತ್ತ ಆಕೆಯು ಆ ನನ್ನನ್ನು ಕಾಪಾಡುತ್ತಿದ್ದಳು. ಮನೆಯಲ್ಲಿ ಏನೂ ಇಲ್ಲದೆ ನಿರ್ಗತಿಕಳಾಗಿದ್ದುದರಿಂದ ತಂದೆಯ ಮನೆಯಿಂದಲಾಗಲಿ ಬಂಧುಗಳಿಂದಾಗಲಿ ಹಣವನ್ನು ತರುತ್ತ ಅವನನ್ನು ಕಾಪಾಡುತ್ತಿದ್ದಳು. ಕ್ಷೀರ ಸಮುದ್ರಶಾಯಿಯಾದ ವಿಷ್ಣುವನ್ನು ಆ ಗಂಡನ ದೇಹದಲ್ಲಿ ಆರೋಪಿಸಿ ವಿಷ್ಣುವೆಂದೇ ತಿಳಿದುಕೊಂಡಳು. ಹಗಲು ರಾತ್ರಿಗಳೆನ್ನದೆ ಅವನ ಮಲಮೂತ್ರಗಳನ್ನು ಶುದ್ಧಿಮಾಡುತ್ತಿದ್ದಳು ಅವನ ಮೈಯಿನಲ್ಲಿದ್ದ ಗಾಯದ ಹುಳುಗಳನ್ನು ಉಗುರುಗಳಿಂದ ನಿಧಾನವಾಗಿ ತೆಗೆಯುತ್ತಿದ್ದಳು. ಹಗಲಾಗಲಿ ರಾತ್ರಿಯಾಗಲಿ ಮಲಗುತ್ತಲೇ ಇರಲಿಲ್ಲ. ಗಂಡನು ಕಷ್ಟಪಡುತ್ತಿರುವುದನ್ನು ನೋಡಿ ಅದರಿಂದ ದುಃಖಗೊಂಡವಳಾಗಿ ಪ್ರಸಿದ್ಧರಾದ ದೇವತೆಗಳೂ ಪಿತೃಗಳೂ ನನ್ನ ಗಂಡನ ಪಾಪವನ್ನು ನಾಶಮಾಡಿ ರೋಗಹೀನನನ್ನಾಗಿ ಮಾಡಲಿ. ಚಂಡಿಯು ನನ್ನ ಗಂಡನ ರೋಗವನ್ನು ನಾಶಮಾಡಿದರೆ· ಒಳ್ಳೆಯ ಅನ್ನವನ್ನು ಎಡೆಯಿಕ್ಕಿ ಕೋಣನ ಬಲಿಯನ್ನು ಕೊಡುತ್ತೇನೆ ನನ್ನ ಗಂಡನ ರೋಗವನ್ನು ನಾಶಮಾಡಿದರೆ ವಿನಾಯಕನಿಗೆ ಕಡುಬನ್ನು ನಿವೇದನ ಮಾಡುತ್ತೇನೆ ಈ ರೋಗ ನಾಶಕ್ಕೋಸ್ಕರ ನನ್ನ ಜೀವವಿರುವವರೆಗೂ ಶನಿವಾರದ ದಿವಸ ಉಪವಾಸವನ್ನು ಮಾಡುತ್ತೇನೆ. ನಾನು ಸಿಹಿಯನ್ನು ತಿನ್ನದೆ ಬಿಟ್ಟುಬಿಡುತ್ತೇನೆ. ಎಣ್ಣೆ ಹಚ್ಚಿಕೊಂಡು ಅಭ್ಯಂಜನವನ್ನು ಮಾಡಿಕೊಳ್ಳುವುದೇ ಇಲ್ಲ. ಹೇಗಾದರೂ ನನ್ನ ಗಂಡನು ರೋಗದಿಂದ ಮುಕ್ತನಾಗಿ ನೂರುವರ್ಷಗಳು ಬದುಕಲಿ ಎಂಬುದಾಗಿ ದಿನದಿನವೂ ಹೇಳುತ್ತಿರುವಳು.

ಹೀಗಿರುತ್ತಿರಲು ಆಕೆಯ ಮನೆಗೆ ಒಬ್ಬ ಮಹಾತ್ಮನಾದ ದೇವಲಕನೆಂಬ ಮುನಿಯು ವೈಶಾಖದ ಬಿಸಿಲನ್ನು ತಡೆಯಲಾರದೆ ಬಂದನು. ಆಗ ನಿನ್ನ ಹೆಂಡತಿಯು ಸ್ವಾಮಿ! ಒಬ್ಬ ವೈದ್ಯನು ಮನೆಗೆ ಬಂದಿರುವನು. ಅವನು ನಿನ್ನ ರೋಗವನ್ನು ವಾಸಿಮಾಡುತ್ತಾನೆ. ಅವನಿಗೆ ಉಪಚಾರವನ್ನು ಮಾಡಬೇಕು. ನೀನು ಅಪ್ಪಣೆ ಕೊಟ್ಟರೆ ಹೋಗುತ್ತೇನೆ, ಇಲ್ಲದಿದ್ದರೆ ಇಲ್ಲ. ಎಂಬುದಾಗಿ ಹೇಳುತ್ತ ನೀನು ಧರ್ಮ ಮಾಡುವುದಲ್ಲವೆಂಬುದನ್ನು ತಿಳಿದು ವೈದ್ಯನೆಂಬ ನೆಪದಿಂದ ನಿನ್ನನ್ನು ವಂಚಿಸುತ್ತ ಹೇಳಿದಳು. ಇದರಿಂದ ನೀನು ಅವನಿಗೆ ಉಪಚಾರವನ್ನು ಕೊಡುವಂತೆ ಅನುಜ್ಞೆಯನ್ನು ಕೊಟ್ಟೆ. ಇದರಿಂದ ಆಕೆಯು ಸಂತೋಷಗೊಂಡು

ಆ ಮುನಿಯನ್ನು ಗೌರವಿಸಿ ಅವನ ಕಾಲನ್ನು ತೊಳೆದು ಆ ನೀರನ್ನು ನಿನ್ನ ತಲೆಯ ಮೇಲೆ ಪ್ರೋಕ್ಷಿಸಿದಳು. ಇದು ಔಷಧಿ ಎಂದು ಹೇಳುತ್ತ ಆ ಪಾದೋದಕವನ್ನು ನಿನಗೆ ಕುಡಿಸಿದಳು. ಮತ್ತು ಬಿಸಿಲಿನ ತಾಪದ ಶಾಂತಿಗೋಸ್ಕರ ಆ ಮುನಿಗೆ ಅವಳು ಪಾನಕವನ್ನು ಕೊಟ್ಟು ದಿವ್ಯಾನ್ನಗಳನ್ನು ಬಡಿಸಿ ಭೋಜನ ಮಾಡಿಸಿದಳು. ನಿನ್ನ ಒಪ್ಪಿಗೆಯಿಂದ ಅವನಿಗೆ ಸರ್ವೋಪಚಾರವನ್ನೂ ಮಾಡಿದಳು. ಬೆಳಗಾಗುತ್ತಲೂ ಆ ಮುನಿಯು ಹೊರಟುಹೋದನು.

ಇದಾದ ಸ್ವಲ್ಪ ದಿವಸಕ್ಕೆ ನಿನಗೆ ಸನ್ನಿಪಾತ ಜ್ವರವು ಬಂದಿತು. ಆಗ ಆಕೆಯು ಶುಂಠಿ ಮೆಣಸು ಹಿಪ್ಪಲಿಗಳನ್ನು ಪುಡಿಮಾಡಿ ನಿನ್ನ ಬಾಯಿಗೆ ಹಾಕಿದಳು. ಆಗ ನಿನಗೆ ಕಫವು ಹೆಚ್ಚಾಗಿದ್ದುದರಿಂದ ಹಲ್ಲನ್ನು ಗಿಟುಕರಿಸಿಕೊಂಡಿದ್ದೆ. ಅವಳು ಬಾಯಿಗೆ ಈ ಔಷಧವನ್ನು ಹಾಕಲು ಬೆರಳನ್ನು ಹಾಕಿದಾಗ ಆ ಬೆಟ್ಟನ್ನು ಬಲವಾಗಿ ಕಡಿದು ಚೂರು ಚೂರು ಮಾಡಿಬಿಟ್ಟೆ. ಆ ಬೆರಳಿನ ಚೂರು ಬಾಯಿಯಲ್ಲಿಯೇ ನಿಂತುಬಿಟ್ಟಿತು. ಆ ಕೋಮಲವಾದ ಹಾಸಿಗೆಯಲ್ಲಿ ಮಲಗಿಗೊಂಡು ಆ ಸೂಳೆಯನ್ನೇ ಸ್ಮರಿಸುತ್ತ ಪ್ರಾಣವನ್ನು ಬಿಟ್ಟುಬಿಟ್ಟೆ.

ಆ ನಿನ್ನ ಹೆಂಡತಿಯಾದ ಕಾಂತಿಮಯಿಗೆ ನೀನು ಸತ್ತೆಯೆಂದು ತಿಳಿಯುತ್ತಲೂ ತನ್ನ ಕೈಯಲ್ಲಿದ್ದ ಚಿನ್ನದ ಬಳೆಗಳನ್ನು ಮಾರಿ ಗಂಧದ ಸೌದೆಯನ್ನು ತರಿಸಿ ಅದರಿಂದ ಚಿತೆಯನ್ನು ಮಾಡಿಸಿದಳು. ಅದರ ಮಧ್ಯದಲ್ಲಿ ಗಂಡನನ್ನು ಮಲಗಿಸಿ ತಾನೂ ಮಲಗಿಕೊಂಡು ಚಿತೆಗೆ ಬೆಂಕಿ ಹತ್ತಿಸಿ ಸುಡಿಸಿಕೊಂಡಳು. ಇಂತು ಮೃತಳಾದ ಆಕೆಯು ವೈಕುಂಠವನ್ನು ಹೊಂದಿದಳು. ದುಷ್ಟನಾದ ನೀನು ಸಾಯುವ ಕಾಲದಲ್ಲಿಯೂ ಆ ಸೂಳೆಯನ್ನೇ ಸ್ಮರಿಸಿಕೊಂಡು ಸತ್ತದ್ದರಿಂದ ಈ ಕಾಡಿನಲ್ಲಿ ವ್ಯಾಧನಾಗಿ ಹುಟ್ಟಿ ಹಿಂಸಾಸಕ್ತನಾದೆ. ಆ ನಿನ್ನ ಹೆಂಡತಿಯು ವೈದ್ಯನೆಂದು ಹೇಳಿದುದರಿಂದ ನೀನು ಆಕೆಗೆ ಆ ವೈಶಾಖ ಮಾಸದಲ್ಲಿ ಪಾನಕವನ್ನು ಕೊಡಲು ಅನುಮತಿಯನ್ನು ಕೊಟ್ಟೆ. ಇದರಿಂದ ನಿನಗೆ ಒಳ್ಳೆಯ ಬುದ್ಧಿಯು. ಈಗ ಹುಟ್ಟಿ ಈ ಬಿಸಿಲಿನಲ್ಲಿ ನನಗೆ ನಿನ್ನ ಪಾದರಕ್ಷೆಗಳನ್ನು ಕೊಟ್ಟೆ, ಆ ಋಷಿಯ ಪಾದೋದಕವನ್ನು ನೀನು ತಲೆಯ ಮೇಲೆ ಪ್ರೋಕ್ಷಿಸಿಕೊಂಡುದರಿಂದ ಈ ಕಾಡಿನಲ್ಲಿ ನಿನ್ನ ಪುಣ್ಯವನ್ನು ಕೇಳಲು ನಿನಗೆ ಬುದ್ಧಿಯುಂಟಾಯಿತು.

ನೀನು ಹಿಂದಿನ ಜನ್ಮದಲ್ಲಿ ಬಾಯಲ್ಲಿ ಆ ಬೆರಳಿನ ಚೂರು ಇದ್ದಂತೆಯೇ ಮೃತನಾದುದರಿಂದ ಈ ಕಾಡಿನಲ್ಲಿ ನೀನು ಮಾಂಸಾಹಾರಿಯಾದೆ. ಈಗ ನಿನಗೆ ಹೆಂಡತಿಯಾಗಿರುವ ಆ ಭಿಲ್ಲಿನಿಯು ನಿನ್ನ ಹಿಂದಿನ ಜನ್ಮದ ಸೂಳೆಯು. ನೀನು

ಹಾಸಿಗೆಯಲ್ಲಿ ಮಲಗಿ ಪ್ರಾಣವನ್ನು ಬಿಟ್ಟುದರಿಂದ ಯಾವಾಗಲೂ ನೆಲದ ಮೇಲೆಯೇ ಮಲಗುತ್ತಿರುವೆ. ನಾನು ನನ್ನ ತಪಸ್ಸಿನ ದಿವ್ಯದೃಷ್ಟಿಯಿಂದ ನಿನ್ನ ಪೂರ್ವಜನ್ಮದ ಪುಣ್ಯಪಾಪಗಳನ್ನು ನೋಡಿ ಹೇಳಿದ್ದೇನೆ. ಇನ್ನು ನಿನ್ನ ಮುಂದಿನ ಜನ್ಮದ ವಿಷಯವನ್ನು ಹೇಳುತ್ತೇನೆ ಕೇಳು.

ಕೃಣುವೆಂಬುವನು ಒಬ್ಬ ಮುನಿಯು ಒಂದಾನೊಂದು ಸರೋವರದ ಬಳಿಯಲ್ಲಿ ಅನ್ನಾಹಾರಗಳನ್ನು ಬಿಟ್ಟು ತಪಸ್ಸನ್ನು ಮಾಡುವನು. ಅವನ ತಪೋವಿರಾಮದ ಕಾಲದಲ್ಲಿ ಅವನ ಕಣ್ಣಿನಿಂದ ವೀರ್ಯವು ಜಿಬುರ ರೂಪದಲ್ಲಿ ಹೊರಗೆ ಬಂದುಬೀಳುವುದು. ಅದನ್ನು ಋತುಕಾಲವು ಸಮಿಾಪಿಸಿದ್ದ ಒಂದು ಸರ್ಪವು ತಿನ್ನುವುದು. ಅದರಲ್ಲಿ ನೀನು ಜನ್ಮವನ್ನು ತಾಳುತ್ತೀಯೆ. ಆಗ ನೀನು ಕಿರಾತರಿಗೆ ಸಿಕ್ಕುತ್ತೀಯೆ. ಅವರೇ ನಿನ್ನನ್ನು ಕಾಪಾಡುತ್ತಾರೆ. ನೀನು ಕಿರಾತನೇ ಆಗುತ್ತೀಯೆ. ಈಗ ನೀನು ಬಿಸಿಲಿನಿಂದ ತಪಿಸುತ್ತಿದ್ಧ ನನಗೆ ಪಾದರಕ್ಷೆಗಳನ್ನು ಕೊಟ್ಟೆ. ಇದರ ಫಲದಿಂದ ಕಾಡಿನಲ್ಲಿ ನಿನಗೆ ಸಪ್ತರ್ಷಿಗಳೊಡನೆ ಸಹವಾಸವು ಸಿಕ್ಕುತ್ತದೆ. ಅವರ ಅನುಗ್ರಹದಿಂದ ನೀನು ವಾಲ್ಮೀಕಿಯಾಗಿ ಆಗುತ್ತೀಯೆ. ಆಗ ನೀನು ದಿವ್ಯವಾದ ಕಥೆಯನ್ನು ಶ್ಲೋಕಗಳಿಂದ ರಚಿಸುತ್ತೀಯೆ. ಎಂದು ಹೇಳಿ ಅವನು ವೈಶಾಖದ ಧರ್ಮಗಳನ್ನು ಉಪದೇಶಮಾಡಿ ಗೋದಾವರಿ ನದಿಗೆ ಹೊರಟುಹೋದನು.

ಇತ್ತ ಈ ಶಂಖನ ಉಪದೇಶದಂತೆ ವೈಶಾಖ ಮಾಸದ ಧರ್ಮಗಳನ್ನು ಮಾಡುತ್ತಲಿದ್ದೆನು. ಆ ವ್ಯಾಧಜನ್ಮವು ಕೊನೆಗಾಣುತ್ತಲೂ ಮುಂದಿನ ಜನ್ಮದಲ್ಲಿ ಕೃಣುವಿನ ಮಗನಾಗಿ ಸರ್ಪದ ಹೊಟ್ಟೆಯಲ್ಲಿ ಹುಟ್ಟಿದೆನು. ನಾನು ಕಿರಾತರಿಗೆ ಸಿಕ್ಕಿ ಅವರಿಂದ ಪೋಷಿತನಾಗಿ ಬೆಳೆದೆನು. ಕೃಣುವಿನ ವೀರ್ಯದಿಂದ ಹುಟ್ಟಿದುದರಿಂದ ಹೆಸರು ಮಾತ್ರಕ್ಕೆ ಬ್ರಾಹ್ಮಣನಾಗಿರುವೆನು. ನನ್ನ ಆ ವಿಚಾರವೆಲ್ಲವೂ ದುರಾಚಾರವೇ ಆಗಿದ್ದಿತು. ಕಿರಾತರಲ್ಲಿಯೇ ಮದುವೆಯಾಗಿ ಅವಳಲ್ಲಿಯೇ ನನಗೆ ಅನೇಕ ಜನ ಮಕ್ಕಳಾದರು. ಅನಂತರ ಕಳ್ಳರೊಡನೆ ಸೇರಿಕೊಂಡು ಮತ್ತೆ ಕಳ್ಳನಾದೆನು. ನನ್ನ ಕೈಯ್ಯಲ್ಲಿ ಯಾವಾಗಲೂ ಬಾಣಬಿಲ್ಲುಗಳಿರುತ್ತಿದ್ದುವು. ಪ್ರಾಣಿಗಳಿಗೆ ನಾನೊಬ್ಬ ಯಮನಾದೆನು.

ಹೀಗಿರುತ್ತಿರಲು ಒಂದು ಸಾರಿ ಆ ಕಾಡುದಾರಿಯಲ್ಲಿ ಬರುತ್ತಿರುವ ಸಪ್ತರ್ಷಿಗಳನ್ನು ನೋಡಿದೆನು. ಅವರಲ್ಲಿರುವ ಪದಾರ್ಥಗಳನ್ನು ಅಪಹರಿಸಬೇಕೆಂಬ ಆಸೆಯಿಂದ ಎಲ್ಲರೂ ನಿಲ್ಲಿರಿ ಎಂದು ಕೂಗುತ್ತ ಅವರ ಬಳಿಗೆ ಓಡಿಹೋದೆನು.

ಆಗ ಅವರು ಎಲೈ ದ್ವಿಜಾಧಮನೆ! ಏತಕ್ಕೋಸ್ಕರ ಇಷ್ಟೊಂದು ಆಯಾಸ ಪಟ್ಟುಕೊಂಡು ಓಡಿಬರುತ್ತಿದ್ದೀಯೆ? ಎಂದರು. ಅದಕ್ಕೆ ನಾನು ನಿಮ್ಮ ಬಳಿಯಲ್ಲಿ ಇರುವುದನ್ನು ಅಪಹರಿಸಿಕೊಂಡು ಹೋಗಲು ಬಂದಿದ್ದೇನೆ. ನನಗೆ ಮನೆಯಲ್ಲಿ ಹೆಂಡತಿ ಮಕ್ಕಳು ಅನೇಕರಿರುವರು. ಅವರ ಹೊಟ್ಟೆಯನ್ನು ತುಂಬಿಸಬೇಕು. ಅವರನ್ನು ಸಲಹುವ ಉದ್ದೇಶದಿಂದ ಈ ಕಾಡುದಾರಿಯಲ್ಲಿ ಕಳ್ಳತನವನ್ನು ಮಾಡುತ್ತಿದ್ದೇನೆ. ಎಂದೆನು.

ಅದಕ್ಕೆ ಅವರು ಎಲೈ ದ್ವಿಜಾಧಮನೆ! ನೀನು ನಿನ್ನ ಮನೆಗೆ ಹೋಗಿ ನೀನು ಮಾಡತಕ್ಕ ಪಾಪದಲ್ಲಿ ಆ ನಿನ್ನ ಮನೆಯವರೆಲ್ಲರೂ ಭಾಗಿಗಳಾಗುತ್ತಾರೆಯೆ? ಅಥವಾ ಅದಕ್ಕೆ ಭಾಗಿಗಳಾಗುವುದಿಲ್ಲವೇ ಎಂಬುದನ್ನು ಒಬ್ಬೊಬ್ಬರನ್ನೂ ವಿಚಾರಿಸಿಕೊಂಡು ಬಾ. ನೀನು ಬರುವವರೆಗೂ ನಾವು ಇಲ್ಲಿಯೇ ಇರುತ್ತೇವೆ. ಸುಳ್ಳು ಹೇಳಿ ನೀನು ಅತ್ತ ಹೋದಮೇಲೆ ನಾವು ಇತ್ತ ಹೋದರೆ ಬ್ರಹ್ಮಹತ್ಯೆಯನ್ನು ಮಾಡಿದ ಪಾಪವೂ ಚಿನ್ನ ಕದ್ದವನ ಪಾಪವೂ ಬರಲಿ. ಅಲ್ಲದೆ ಇವರ ಸಂಸರ್ಗದಿಂದ ಬರತಕ್ಕ ಪಾಪವೂ ನಮಗೆ ಬರಲಿ ಎಂದು ಹೇಳಿ ಅನೇಕ ಆಣೆಗಳನ್ನಿಟ್ಟುಕೊಂಡು ಅವನಿಗೆ ನಂಬುಗೆಯನ್ನುಂಟು ಮಾಡಿದರು.

ಈ ನಂಬುಗೆಯಿಂದ ವಿಶ್ವಾಸವನ್ನು ಹೊಂದಿದ ಆ ವ್ಯಾಧನು ಮನೆಗೆ ಹೋಗಿ ಪ್ರತಿಯೊಬ್ಬರನ್ನೂ ಕುರಿತು ನಾನು ಮಾಡತಕ್ಕ ಪಾಪದಲ್ಲಿ ನೀವು ಭಾಗಿಗಳಾಗುವಿರಾ? ಎಂದೆನಲು ಅವರು ನೀನು ತರುವುದರ ಒಳ್ಳೆಯುದಕ್ಕೆ ನಾವು ಬಾಗಿಗಳು. ಪಾಪಕ್ಕೆ ಭಾಗಿಗಳಾಗುವುದಿಲ್ಲ. ಎಂದು ಹೇಳಿದರು.

ಒಡನೆಯೇ ಅವನಿಗೆ ದುಃಖವು ಬಂದು ಮನೆಯವರ ವಿಷಯದಲ್ಲಿ ಬೇಸರವು ಬಂದಿತು. ಅಲ್ಲಿಂದ ಹೊರಟು ಈ ಋಷಿಗಳಿರುವಲ್ಲಿಗೆ ಬಂದು ತನ್ನಲ್ಲಿದ್ದ ಬಾಣ ಬಿಲ್ಲುಗಳನ್ನು ಬಿಸುಟು ದೀರ್ಘದಂಡನಮಸ್ಕಾರ ಮಾಡಿದನು. ಈ ಋಷಿಗಳ ದರ್ಶನದಿಂದಲೇ ಅವನ ಪಾಪವು ನಾಶವಾಗಿ ಹೋಗಿದ್ದಿತು. ಈ ರೀತಿಯಾಗಿ ದೀರ್ಘದಂಡನಮಸ್ಕಾರವನ್ನು ಮಾಡುತ್ತ ಎಲೈ ಋಷಿಗಳಿರಾ! ನರಕದಲ್ಲಿ ಬಿದ್ದಿರುವ ನನ್ನನ್ನು ಕಾಪಾಡಿರಿ. ಎಂದು ಹೇಳುತ್ತಲಿದ್ದನು.

ಋಷಿಗಳು ಇದನ್ನು ನೋಡಿ ಅಯ್ಯಾ! ಮೇಲಕ್ಕೇಳು. ಸತ್ಪುರುಷರ ಸಹವಾಸವು ವ್ಯರ್ಥವಾಗುವುದಿಲ್ಲ. ನಿನಗೆ ಒಂದು ಮಂತ್ರವನ್ನು ಉಪದೇಶ ಮಾಡುತ್ತೇವೆ. ಅದರಿಂದ ನಿನಗೆ ಮೋಕ್ಷವು ಸಿಕ್ಕುತ್ತದೆ. ಎನ್ನಲು ನಾನು ಎದ್ದೆನು.

ಈ ಪಾಪಿಯು ಬಹುದುಷ್ಟನು. ಸತ್ಪುರುಷರು ಇಂತಹವರನ್ನು ಉಪೇಕ್ಷಿಸ ಬೇಕೇ ಹೊರತು ಪುರಸ್ಕರಿಸಬಾರದು. ಆದರೂ ಇವನು ನಮ್ಮನ್ನು ಶರಣು ಹೊಂದಿದ್ದಾನೆ. ಆದ್ದರಿಂದ ಇವನನ್ನು ಹೇಗಾದರೂ ಮಾಡಿ ಕಾಪಾಡಬೇಕು. ಎಂದು ಯೋಚಿಸಿಕೊಂಡು ಎಲೈ ರಾಮನೆ ನಿನ್ನ ನಾಮವನ್ನು ಅಕ್ಷರಗಳ ಅದುಲು ಬದಲಿನಿಂದ ಹೇಳಿ ಉಪದೇಶಿಸಿದರು.

ಎಲೈ ವ್ಯಾಧನೆ! ನೀನು ಒಂದೇ ಮನಸ್ಸಿನಿಂದ 'ಮರಾ, ಎಂಬದಾಗಿ ಯಾವಾಗಲೂ ಜಪಿಸು' ನಾವು ಮತ್ತೆ ಇಲ್ಲಿಗೆ ಬರುವವವರೆಗೂ ಇದನ್ನೇ ಜಪಿಸುತ್ತಿರು. ಎಂದು ಹೇಳಿ ಅವರೆಲ್ಲರೂ ಹೊರಟುಹೋದರು.

ನಾನೂ ಕೂಡ ಅವರು ಹೇಳಿದಂತೆಯೇ ಮಾಡಿದೆನು. ನಾನು ಸ್ಥಿರ ಮನಸ್ಸಿನಿಂದ ಜಪಿಸುತ್ತ ಹೊರಗಿನ ಪ್ರಪಂಚವನ್ನೇ ಮರೆತೆನು. ತಪಸ್ಸಿನ ಸಾಕ್ಷಿಗೋಸ್ಕರವಾಗಿ ನನ್ನದೊಂದು ಕೋಲನ್ನು ಎದುರಿಗೆ ನೆಟ್ಟಿದ್ದೆನು. ನಾನು ಹೀಗೆ ತಪಸ್ಸಿಗೆ ಕುಳಿತಿರಲು ಬಹು ಕಾಲವು ಕಳೆದುಹೋಯಿತು. ನನ್ನ ಮೇಲೆ ಹುತ್ತವೂ ಕೂಡ ಉಂಟಾಯಿತು. ನನ್ನ ಎದುರಿಗೆ ನೆಟ್ಟಿದ್ದ ಒಣಕೊಲು ಕೋಲೂ ಕೂಡ ನನ್ನ ತಪಸ್ಸಿನ ಮಹಿಮೆಯಿಂದ ಚಿಗುರಿ ಮನೋಹರವಾದ ಮರವಾಯಿತು. ಅನೇಕ ಯುಗಗಳು ಕಳೆದ ಮೇಲೆ ಆ ಋಷಿಗಳು ಅಲ್ಲಿಗೆ ಮತ್ತೆ ಬಂದರು. ಆಗ ನನ್ನನ್ನು ಕುರಿತು ಹೊರಗೆ ಬಾ ಎಂದರು. ಅದನ್ನು ಕೇಳಿ ನಾನು ಆ ಹುತ್ತದಿಂದ ಈಚೆಗೆ ಬಂದೆನು. ಆಗ ಅವರು ಎಲೈ ಋಷಿಯೆ! ನೀನು ಹುತ್ತದಿಂದ ಈಚೆಗೆ ಬಂದೆಯಾದ ಕಾರಣ ನಿನಗೆ ವಾಲ್ಮೀಕಿಯೆಂದು ಹೆಸರಾಗಲಿ ಎಂದು ಹೇಳಿ ಹೊರಟುಹೊದರು.

ಎಲೈ ರಘುಕುಲೋತ್ತಮನೇ! ನಾನು ರಾಮನಾಮದ ಪ್ರಭಾವದಿಂದ ಈರೀತಿಯಾದೆನು.

ಒಂದು ಸಾರಿ ಬ್ರಹ್ಮನ ಪ್ರಾರ್ಥನೆಯಂತೆ ಶಿವನು ಕೈಲಾಸದಲ್ಲಿ ಈ ನಿನ್ನ ಚರಿತ್ರೆಯನ್ನು ಆ ಬ್ರಹ್ಮನಿಗೆ ಹೇಳಿದನು. ಆ ಬ್ರಹ್ಮನು ಅದನ್ನೇ ನಾರದನಿಗೆ ಹೇಳಿದನು. ಆ ನಾರದನು ಅದನ್ನು ನನಗೆ ಹೇಳಿದನು.

ಒಂದು ಸಾರಿ ತಮಸಾ ನದಿಗೆ ನಾನು ಸ್ನಾನಕ್ಕೆ ಹೋಗಿರಲು ಅಲ್ಲಿ ಎರಡು ಕ್ರೌಂಚಪಕ್ಷಿಗಳಿರಲು ಅವುಗಳಲ್ಲಿ ಒಂದಾದ ಗಂಡುಹಕ್ಕಿಯನ್ನು ಒಬ್ಬ ವ್ಯಾಧನು ಕೊಂದನು. ಆಗ ಹೆಣ್ಣುಹಕ್ಕಿಯು ದುಃಖಿಸುತ್ತಿರಲು ಅದನ್ನು ಸಂತೈಸಲು

ಮೂವತ್ತೆರಡು ಅಕ್ಷರಗಳ ಪ್ರಬಂಧವಾದ ಶ್ಲೋಕದಿಂದ ಶೋಕಿಸಿದೆನು. ಆ ಶೋಕವೇ ಶ್ಲೋಕವಾಯಿತು. ಆಗ ಬ್ರಹ್ಮನೂ ನನ್ನ ಬಳಿಗೆ ಬಂದು ಈ ರೀತಿಯಾಗಿಯೇ ರಾಮಾಯಣವನ್ನು ಬರಿ ಎಂದು ಅಪ್ಪಣೆಮಾಡಿ ಅನೇಕ ವರಗಳನ್ನೂ ಕೊಟ್ಟನು. ಈ ರೀತಿಯಾಗಿ ಬ್ರಹ್ಮನ ಮಾತಿನಂತೆ ನೂರುಕೋಟಿ ಗ್ರಂಥಗಳ ವಿಸ್ತಾರವುಳ್ಳ ರಾಮಾಯಣವನ್ನು ಬರೆದೆನು. ಎಲೈ ರಾಮನೆ! ನೀನು ಕೇಳಿದುದರಿಂದ ಇದೆಲ್ಲವನ್ನೂ ಹೇಳಿದ್ದೇನೆ ಎಂದನು.

ಈ ರೀತಿಯಾಗಿ ಭಗವಂತನಾದ ರಾಮನು ಎಲ್ಲವನ್ನೂ ತಿಳಿದಿದ್ದರೂ ಕೂಡ ಜನಗಳಿಗೆ ಗೊತ್ತಾಗಲೆಂದು ತಿಳಿಯದವನಂತೆ ಕೇಳಿ ಹೇಳಿಸಿದನು. ಅನಂತರ ಶ್ರೀರಾಮನಿಂದ ಗೌರವಿತರಾಗಿ ದೇವತೆಗಳೆಲ್ಲರೂ ತಮ್ಮ ತಮ್ಮ ನಿವಾಸಗಳಿಗೆ ಹೊರಟುಹೋದರು. ಇತ್ತ ಋಷಿಗಳೂ ರಾಮನಾಮವನ್ನು ಸ್ತುತಿಸುತ್ತ ಹೊರಟುಹೋದರು. ಅಲ್ಲಿಂದೀಚೆಗೆ ಜನಗಳು ಹಾಸ್ಯವನ್ನು ಮಾಡುತ್ತ ಹಾಸ್ಯದ ಕೆಲಸವನ್ನೂ ಮಾಡುತ್ತ ಬಂದರು. ಆದರೆ ಅತಿಯಾಗಿ ಹಾಸ್ಯವನ್ನು ಬಿಟ್ಟು ಬಿಟ್ಟರು.

|| ಶ್ರೀರಸ್ತು ||

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ

ಪಂಚದಶಸ್ಸರ್ಗಃ

|| ಶ್ರೀರಾಮದಾಸ ಉವಾಚ ||

ರಾಮರಾಜ್ಯೇ ಸದಾನಂದಸ್ಸರ್ವೇಷಾಮಾಸೀಜ್ಜನಾನಾಂ ಭುವಿ |
ನಾಸೀತ್ಕುತ್ರಾಪಿ ಕಲಹಶ್ಚೌರ್ಯಂ ನಿಂದಾಭಯಂ ತಥಾ || ೧ ||

ರಾಜ್ಯಮಾಸೀದಸಾಪತ್ನಂ ಸಮೃದ್ಧಬಲವಾಹನಂ |
ಋಷಿಭಿಃ ಹೃಷ್ಟಪುಷ್ಟೈಶ್ಚ ರಮ್ಯಂ ಹಾಟಕಭೂಷಣೈಃ || ೨ ||

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ಹದಿನೈದನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ರಾಮನು ರಾಜ್ಯಭಾರಮಾಡುತ್ತಿರಲು ಆ ರಾಮರಾಜ್ಯದಲ್ಲಿ ಎಲ್ಲರೂ ಸುಖವಾಗಿದ್ದರು. ಜಗಳವೆಂಬುದೇ ಇರಲಿಲ್ಲ. ಕಳ್ಳತನವಿರಲಿಲ್ಲ. ನಿಂದೆಯಿರಲಿಲ್ಲ. ಭಯವೆಂಬುದೂ ಇರಲಿಲ್ಲ.

೨. ರಾಮನ ರಾಜ್ಯವು ಶತ್ರುಗಳಿಲ್ಲದುದಾಗಿದ್ದಿತು. ಸೈನ್ಯವೂ ವಾಹನವೂ ಬಹುವಾಗಿದ್ದುವು. ಮಹರ್ಷಿಗಳು ಬಹುವಾಗಿದ್ದರು. ಅಲ್ಲಿನ ಪ್ರಜೆಗಳು ಸಂತೋಷಚಿತ್ತರಾಗಿಯೂ ಬಲಿಷ್ಠರಾಗಿಯೂ ಇದ್ದರು. ಸುವರ್ಣದ ಆಭರಣವನ್ನು ತೊಟ್ಟುಕೊಂಡು ರಮ್ಯವಾಗಿಯೂ ಇದ್ದರು.

ಸಂಜುಷ್ಟನಿಷ್ಟಾಪೂರ್ತಾನಾಂ ಧರ್ಮಾಣಾಂ ನಿತ್ಯಕರ್ತೃಭಿಃ ।
ಸದಾ ಸಂಪನ್ನ ಸಸ್ಯಂ ಚ ಸುಚಿರಂ ಕ್ಷೇತ್ರಸಂಕುಲಂ ॥ ೩ ॥

ಸುದೇಶಂ ಸುಪ್ರಜಂ ಸುಸ್ಥಂ ಸುತೃಣಂ ಬಹುಗೋಧನಂ ।
ದೇವತಾಯತನಾನಾಂ ಚ ರಾಜಭಿಃ ಪರಿರಾಜಿತಂ ॥ ೪ ॥

ಸುಯೂಪಾ ಯತ್ರ ವೈ ಗ್ರಾಮಾಃ ಸುವಿತ್ತರ್ದ್ಧಿ ವಿರಾಜಿತಾಃ ।
ಸುಪುಷ್ಪಕೃತ್ರಿಮೋದ್ಯಾನಾಃ ಸುಸದಾಫಲಪಾದಪಾಃ ॥ ೫ ॥

ಸುಪದ್ಮಾನೀಕಕಾಸಾರಾ ರಾಜಂತೇ ಯತ್ರಭೂಮಯಃ ।
ಸದಂಭಾ ನಿಮ್ನಗಾ ರಾಜಿರ್ಯತ್ರ ಸಂತಿ ನ ಮಾನದಾಃ ॥ ೬ ॥

---

೩. ಇಷ್ಟಾಪೂರ್ತಿಯುಳ್ಳವರಾಗಿದ್ದರು. ನಿತ್ಯವೂ ಧರ್ಮವನ್ನು ಮಾಡುತ್ತಿದ್ದರು ಯಾವಾಗಲೂ ಭೂಮಿಯು ಸಸ್ಯದಿಂದ ಸಮೃದ್ಧಿಯಾಗಿದ್ದಿತು. ಯಾವಾಗಲೂ ಸಸ್ಯಗಳಿಂದ ಕೂಡಿಕೊಂಡಿರುವ ಕ್ಷೇತ್ರಗಳು [ಹೊಲಗದ್ದೆಗಳು] ಇದ್ದುವು.

೪. ಅದು ಉತ್ತಮವಾದ ದೇಶವಾಗಿದ್ದಿತು. ಉತ್ತಮರಾದ ಪ್ರಜೆಗಳಿದ್ದರು. ಚೆನ್ನಾಗಿದ್ದಿತು. ಒಳ್ಳೆಯ ಹುಲ್ಲಿನಿಂದ ಸಮೃದ್ಧವಾಗಿದ್ದಿತು. ಬಹುವಾದ ಗೋವುಗಳಿದ್ದುವು. ಅನೇಕ ದೇವಸ್ಥಾನಗಳು ಅಲ್ಲಿರುತ್ತಾ ದೇಶಕ್ಕೆ ಕಾಂತಿಯನ್ನುಂಟುಮಾಡುತ್ತಿದ್ದುವು.

೫. ಗ್ರಾಮಗ್ರಾಮಗಳಲ್ಲಿಯೂ ಯಾಗಮಾಡುತ್ತಿದ್ದುದರಿಂದ ಅಲ್ಲೆಲ್ಲಾ ಯೂಪಸ್ತಂಭಗಳು ಪ್ರಕಾಶಿಸುತ್ತಿದ್ದುವು. ಒಳ್ಳೆಯ ಧನದಿಂದ ಪ್ರಕಾಶಿಸುತ್ತಿದ್ದಿತು. ಕಸಿಮಾಡಿ ಮರಗಳು ಹೂವು ಬಿಡುವಂತೆ ಉದ್ಯಾನವನಗಳನ್ನು ರಚಿಸಿದ್ದರು. ಅಲ್ಲಿನ ಮರಗಳು ಯಾವಾಗಲೂ ಉತ್ತಮವಾದ ಫಲಗಳುಳ್ಳವಾಗದ್ದುವು.

೬. ಅಲ್ಲಿನ ನೆಲಗಳು ಒಳ್ಳೆಯ ಮಹಡಿಮನೆಗಳಿಂದಲೂ ಕೊಳಗಳಿಂದಲೂ ಕೂಡಿರುವುವು ಅಲ್ಲಿ ಒಳ್ಳೆಯ ಪದ್ಮಗಳುಳ್ಳ ಅನೇಕ ಕೊಳಗಳಿರುವುವು ಅಲ್ಲಿನ ಹೊಳೆಗಳು ಒಳ್ಳೆಯ ನೀರಿನಿಂದ ಕೂಡಿದ್ದುವು. ಅಲ್ಲಿನ ಜನರು ಡಂಭಾಚಾರಿಗಳೂ ನೀಚಮಾರ್ಗ ಪ್ರವರ್ತಕರೂ ಆಗಿರಲಿಲ್ಲ.

ಕುಲಾನ್ಯೇವ ಕುಲೀನಾನಿ ನ ಚಾನ್ಯಾಯ ಧನಾನಿ ಚ ।
ವಿಭ್ರಮೋ ಯತ್ರ ನಾರೀಷು ನ ವಿದ್ವತ್ಸು ಚ ಕರ್ಹಿಚಿತ್ ॥ ೭ ॥

ನದ್ಯಃ ಕುಟಿಲಗಾಮಿನ್ಯೋ ನ ಯತ್ರ ವಿಷಯೇ ಪ್ರಜಾಃ ।
ತಮೋಯುಕ್ತಾಃ ಕ್ಷಪಾ ಯತ್ರ ಬಹುಲೇಷು ನ ಮಾನವಾಃ ॥ ೮ ॥

ರಜೋಯುಜಃ ಸ್ತ್ರಿಯೋ ಯತ್ರ ನ ಧರ್ಮಬಹುಲಾ ನರಾಃ ।
ಧನೈರನಂಧೋ ಯತ್ರಾಸ್ತಿ ಜನೋ ನೈವ ಚ ಭೋಜನಂ ॥ ೯ ॥

ಅನಯಸ್ಯಾಸ್ಪದಂ ಯತ್ರ ನ ಚ ವೈ ರಾಜಪೂರುಷಃ ।
ದಂಡಃ ಪರಶುಕುದ್ದಾಲ ವಾಲವ್ಯಜನರಾಜಿಷು ॥ ೧೦ ॥

---

೭. ಆ ಪ್ರಜೆಗಳು ಸತ್ಕುಲಪ್ರಸೂತರು. ಅನ್ಯಾಯದಿಂದ ಸಂಪಾದಿಸಿದ ಧನವೇ ಅಲ್ಲಿರಲಿಲ್ಲ. ಅಲ್ಲಿನ ಹೆಂಗಸರಲ್ಲಿ ವಿಭ್ರಮವಿದ್ದಿತೇ [ಅಲಂಕಾರ] ಹೊರತು ಅಲ್ಲಿನ ವಿದ್ವಾಂಸರಲ್ಲಿ ವಿಭ್ರಮ [ಭ್ರಮೆ] ಇರಲೇ ಇಲ್ಲ.

೮. ಆ ರಾಮರಾಜ್ಯದಲ್ಲಿ ನದಿಗಳು ಮಾತ್ರ ಕುಟಿಲಗಾಮಿಗಳಾಗಿದ್ದುವೇ ಹೊರತು ಪ್ರಜೆಗಳು ಕುಟಿಲ [ವಕ್ರ] ಗಾಮಿಗಳಾಗಿರಲಿಲ್ಲ. ಆ ರಾಜ್ಯದಲ್ಲಿ ಕೃಷ್ಣಪಕ್ಷದ ರಾತ್ರಿಗಳಲ್ಲಿ ತಮಸ್ಸು [ಕತ್ತಲೆಯು] ಇದ್ದಿತೇ ಹೊರತು ಅಲ್ಲಿನ ಮನುಷ್ಯರಲ್ಲಿ ತಮಸ್ಸು [ಅಜ್ಞಾನವು] ಇರಲಿಲ್ಲ.

೯. ಅಲ್ಲಿ ಸ್ತ್ರೀಯರು ಮಾತ್ರ ರಜಸ್ಸಿನಿಂದ [ಮುಟ್ಟಿನಿಂದ] ಕೂಡಿದ್ದರೇ ಹೊರತು ಅಲ್ಲಿನ ಧರ್ಮಿಷ್ಠರಾದ ನರರು ರಜಸ್ಸಿನಿಂದ [ಗರ್ವದಿಂದ] ಕೂಡಿರಲಿಲ್ಲ. ಆ ದೇಶದಲ್ಲಿರುವ ಜನರು ಹಣದಿಂದ ಅನಂಧರಾಗಿ [ಕೊಬ್ಬಿ ಕಣ್ಣು ಕಾಣದವರಾಗಿ] ದ್ದಿರೇ ಹೊರತು ಭೋಜನಕ್ಕೆ ಅನಂಧರಾಗಿ [ಅನ್ನವಿಲ್ಲದವರಾಗಿ] ಇರಲಿಲ್ಲ.

೧೦-೧೧. ಆ ರಾಜ್ಯದ ಜನರು ಅನಯಕ್ಕೆ [ದುರ್ನಡತೆಗೆ] ಆಸ್ಪದವನ್ನು ಕೊಡುತ್ತಿರಲಿಲ್ಲ. ಅಲ್ಲಿನ ರಾಜಪುರುಷರು ಎಂದರೆ ರಾಜಸೇವಕರು ತಪ್ಪು ಮಾಡದವರನ್ನು ಹಿಡಿತರುವುದೇ ಮೊದಲಾದ ಅನಯಕ್ಕೆ ಆಸ್ಪದರಾಗಿ (ಕಬ್ಬಿಣದ ಸರಪಣಿ ಮುಂತಾದುವುದಕ್ಕೆ ಅವಕಾಶಕೊಟ್ಟವರಾಗಿ) ಆಗುತ್ತಿರಲಿಲ್ಲ. ದಂಡವೆಂಬುದು [ಕಾವೆಂಬುದು] ಕೊಡಲಿ ಗುದ್ದಲಿಗಳಲ್ಲಿಯೂ

ಆತಪತ್ರೇಷು ನಾನ್ಯತ್ರ ಕ್ವಚಿತ್ ಕ್ರೋಧಾಪರಾಧಜಃ |
ಅನ್ಯತ್ರಾಕ್ಷಿಕವೃಂದೇಭ್ಯಃ ಕ್ವಚಿನ್ನ ಪರಿದೇವನಂ ॥ ೧೧ ॥

ಆಕ್ಷಿಕಾ ಏವ ದೃಶ್ಯಂತೇ ಯತ್ರ ಪಾಶೈಕಪಾಣಯಃ ।
ಜಾಡ್ಯವಾರ್ತಾ ಜಲೇಷ್ವೇವ ಸ್ತ್ರೀಮಧ್ಯಾ ಏವ ದುರ್ಬಲಾಃ ॥ ೧೨ ॥

ಕಠೋರಹೃದಯಾ ಯತ್ರ ಸೀಮಂತಿನ್ಯೋ ನ ಮಾನವಾಃ |
ಔಷಧೇಷ್ವೇವ ಯತ್ರಾಸ್ತಿ ಕುಷ್ಠಯೋಗೋ ನ ಮಾನವೇ ॥ ೧೩ ॥

ಚಾಮರಗಳಲ್ಲಿಯೂ ಇದ್ದವು. ಮತ್ತು ಛತ್ರಿಗಳಲ್ಲಿಯೂ ಇದ್ದುವೇ ಹೊರತು ಕೋಪದಿಂದ ಬುದ್ಧಿಗೆಟ್ಟವರಲ್ಲಿ ದಂಡವಿರಲಿಲ್ಲ. ಎಂದರೆ ಕೋಪವಮಾಡಿ ಅದರಿಂದ ಯಾರೂ ಶಿಕ್ಷೆಗೊಳಗಾಗುತ್ತಾ ಇರಲಿಲ್ಲ. ಪರಿದೇವನವು [ಜೂಜು] ಪಗಡೆಯಾಡುವವರಲ್ಲಿದ್ದಿತೇ ಹೊರತು ಉಳಿದ ಜನರಲ್ಲಿ ಪರಿದೇವನವು[ದುಃಖವು] ಎಲ್ಲಿಯೂ ಇರಲಿಲ್ಲ.

೧೨. ಪಾಶವೆಂಬುದು [ದಾಳವು] ಪಗಡೆಯಾಡುವವರ ಕೈಯ್ಯಲ್ಲಿದ್ದಿತೇ ಹೊರತು ಆ ಪಾಶವೆಂಬುದು [ಹಗ್ಗವು] ಮತ್ತಾರ ಕೈಯ್ಯಲ್ಲಿಯೂ ಇರಲಿಲ್ಲ. ಜಾಡ್ಯವಾರ್ತೆಯು [ಶೀತವಾಗಿರುವಿಕೆಯು] ನೀರಿನಲ್ಲಿದ್ದಿತೇ ಹೊರತು ಆ ಜಾಡ್ಯವಾರ್ತೆಯು [ರೋಗದ ಸುಳಿವು] ಜನರಲ್ಲಿರಲಿಲ್ಲ. ಆ ರಾಜ್ಯದಲ್ಲಿ ಹೆಂಗಸರ ಸೊಂಟವು ದುರ್ಬಲವಾಗಿದ್ದಿತೇ ಹೊರತು ಜನರಾರೂ ದುರ್ಬಲರಾಗಿರಲಿಲ್ಲ.

೧೩. ಆ ರಾಮರಾಜ್ಯದಲ್ಲಿರುವ ಹೆಂಗಸರು ಮಾತ್ರ ಕಠೋರಹೃದಯರು (ಹೃದಯಲ್ಲಿ ಕಠಿನವಾದ ಸ್ತನಗಳಿರುವುದರಿಂದ ಕಠೋರಹೃದಯರು) ಆಗಿದ್ದರೇ ಹೊರತು ಅಲ್ಲಿನ ಮಾನವರು ಕಠೋರಹೃದಯರಲ್ಲ. (ದಯಾಶೂನ್ಯರಲ್ಲ) ಆ ರಾಜ್ಯದಲ್ಲಿ ಕುಷ್ಠ (ಚಂಗಲ್ಕೋಷ್ಠವೆಂಬ ಮೂಲಿಕೆ)ದಸಂಬಂಧವು ಔಷಧಿಗಳಲ್ಲಿದ್ದಿತೇ ಹೊರತು ಆ ಕುಷ್ಠದ (ರೋಗದ) ಸಂಬಂಧವು ಮನುಷ್ಯರಲ್ಲಿರಲಿಲ್ಲ.

ವೇಧೋಽಭ್ಯಂತಸ್ಸುರತ್ನೇಷು ಶೂಲಂ ಮೂರ್ತಿಕರೇಷು ವೈ ।
ಕಂಪಸ್ಸಾತ್ವಿಕಭಾವೋತ್ಥೋ ನ ಭಯಾತ್ಕ್ವಾಪಿ ಕಸ್ಯ ಚಿತ್ ॥ ೧೪ ॥

ಸಂಜ್ವರಃ ಕಾಮಜೋ ಯತ್ರ ದಾರಿದ್ರ್ಯಂ ಕಲುಷಸ್ಯ ಚ।
ದುರ್ಲಭತ್ವಂ ಪಾತಕಸ್ಯ ಸುಕೃತೇ ನ ಚ ವಸ್ತುನಃ ॥ ೧೫ ॥

ಇಭಾ ಏವ ಪ್ರಮತ್ತಾ ವೈ ಯುದ್ಧಂ ವೀಚ್ಯೋರ್ಜಲಾಶಯೇ ।
ದಾನಹಾನಿರ್ಗಜೇಷ್ವೇವ ದ್ರುಮೇಷ್ವೇವ ಹಿ ಕಂಟಕಾಃ ॥ ೧೬ ॥

---

೧೪. ವೇಧೆಯೆಂಬುದು (ರಂಧ್ರವಾಗಿ ಕೊರೆಯುವಿಕೆ) ಮಣಿಗಳ ಮಧ್ಯದಲ್ಲಿದ್ದಿತೇ ಹೊರತು ಆ ವೇಧೆಯು (ತೊಂದರೆಯು) ಜನಗಳಲ್ಲಿರಲಿಲ್ಲ. ಆ ಶೂಲವೆಂಬುದು (ಆಯುಧ) ವಿಗ್ರಹಗಳ ಕೈಯ್ಯಲ್ಲಿದ್ದಿತೇ ಹೊರತು ಆ ಶೂಲವು (ಹೊಟ್ಟೆಶೂಲೆರೋಗವು) ಜನಗಳಲ್ಲಿರಲಿಲ್ಲ. ಸಾತ್ವಿಕಭಾವದಿಂದ ಕಂಪವುಂಟಾಗುವುದೇ ಹೊರತು ಕಂಪವು (ನಡುಗುವಿಕೆಯು) ಭಯದಿಂದಿಲ್ಲವೇ ಇಲ್ಲ.

೧೫. ಜನರಿಗೆ ಜ್ವರವು ಕಾಮಬಾಧೆಯಿಂದ ಬರಬೇಕೇ ಹೊರತು ರೋಗರೂಪವಾದ ಜ್ವರಬರುತ್ತಿರಲಿಲ್ಲ. ದಾರಿದ್ರ್ಯವೆಂಬುದು ಪಾಪದಲ್ಲಿದೆಯೇ ಹೊರತು ಜನರಲ್ಲಿರಲಿಲ್ಲ. ಅಲ್ಲಿ ದುರ್ಲಭತ್ವವು ಪಾತತಕ್ಕೆ ಇದ್ದಿತೇ ಹೊರತು ಸುಕೃತಕ್ಕೂ ವಸ್ತುಗಳಿಗೂ ದುರ್ಲಭತ್ವವು ಇಲ್ಲವು.

೧೬. ಮದವೆಂಬುದು ಆನೆಗಳಲ್ಲಿದ್ದಿತೇ (ಸಿಕ್ಕದಿರುವಿಕೆಯು) ಹೊರತು ಮನುಷ್ಯರಲ್ಲಿರಲಿಲ್ಲ. ಯುದ್ಧವೆಂಬುದು ನೀರಿನ ಅಲೆಗಳಲ್ಲಿದ್ದಿತೇ ಹೊರತು ಜನರಲ್ಲಿರಲಿಲ್ಲ. ದಾನಹಾನಿಯು (ಮದೋದಕವು ನಾಶವಾಗುವುದು) ಆನೆಗಳಲ್ಲಿದ್ದಿತೇ ಹೊರತು (ದಾನಮಾಡದಿರುವಿಯು) ಜನರಲ್ಲಿಲ್ಲ ಕಂಟಕಗಳು (ಮುಳ್ಳುಗಳು) ಮರಗಳಲ್ಲಿದ್ದಿತೇ ಹೊರತು ಕಂಟಕಗಳು (ವಿಘಾತಕರ್ಮಗಳು) ಜನರಲ್ಲಿರಲಿಲ್ಲ.

ಜನೇಷ್ವೇವ ವಿಹಾರಾ ನೈ ನ ಕಸ್ಯ ಚಿದುರಸ್ಥಲೀ ।
ಬಾಣೇಷು ಗುಣವಿಶ್ಲೇಷಾ ಬಂಧೋಕ್ತಿಃ ಪುಸ್ತಕೇ ದೃಢಾ ॥ ೧೭ ॥

ಸ್ನೇಹತ್ಯಾಗಸ್ಸದೈವಾಸ್ತಿ ಯತ್ರ ಪಾಶುಪತೇ ಜನೇ ।
ದಂಡವಾರ್ತಾ ಸದಾ ಯತ್ರ ಕೃತಸನ್ಯಾಸಕರ್ಮಣಾಂ ॥ ೧೮ ॥

ಮಾರ್ಗಣಾಶ್ಚಾಪಕೇಷ್ವೇವ ಭಿಕ್ಷುಕಾ ಬ್ರಹ್ಮಚಾರಿಣಃ ।
ಯತ್ರ ಕ್ಷಪಣಕಾ ಏವ ದೃಶ್ಯಂತೇ ಮಲಧಾರಿಣಃ ॥ ೧೯ ॥

---

೧೭. ವಿಹಾರವೆಂಬುದು (ಹಾರವಿಲ್ಲದಿರುವಿಕೆ ಸುಖಸಂಚಾರ) ಜನಗಳಲ್ಲಿರುವುದು. ಆದರೆ ವಿಹಾರವು (ಹಾರವಿಲ್ಲದಿರುವಿಕೆಯು) ಯಾವನೊಬ್ಬನ ಎದೆಯಲ್ಲೂ ಇರಲಿಲ್ಲ. ಎಂದರೆ ಪ್ರತಿಯೊಬ್ಬನೂ ಹಾರವನ್ನು ಹಾಕಿಕೊಂಡೇ ಇರುವನು. ಗುಣದ ವಿಶ್ಲೇಷವು (ಬಿಲ್ಲಿನ ಹಗ್ಗವಾದ ಬೀವಿನಿಂದ ಬಿಡುವಿಕೆಯು) ಬಾಣಗಳಲ್ಲಿದ್ದಿತೇ ಹೊರತು ಆ ಗುಣದ ವಿಶ್ಲೇಷವು (ಒಳ್ಳೆಯ ಗುಣವಿಲ್ಲದಿರುವಿಕೆಯು ಜನಗಳಲ್ಲಿರಲಿಲ್ಲ. ಬಂಧೋಕ್ತಿಯು (ಪದ್ಮಬಂಧ ಮುಂತಾದುವುಗಳೆಂಬ ಶ್ಲೋಕರಚನಾರೀತಿಯು) ಪುಸ್ತಕಗಳಲ್ಲಿ ಇರುತ್ತಿದ್ದಿತೇ ಹೊರತು ಆ ಬಂಧೋಕ್ತಿಯು (ಸೆರೆಹಾಕುವುದು) ಜನರಲ್ಲಿರಲಿಲ್ಲ.

೧೮. ಸ್ನೇಹತ್ಯಾಗವು (ಸ್ನೇಹವನ್ನು ಬಿಡುವಿಕೆಯು) ಪಶುಪತಿಯ ಭಕ್ತರಲ್ಲಿದ್ದಿತೇ ಹೊರತು ಜನರಲ್ಲಿರಲಿಲ್ಲ. ಎಂದರೆ ಎಲ್ಲರೂ ಸ್ನೇಹದಿಂದರುತ್ತಿದ್ದರು. ದಂಡವಾರ್ತೆಯು [ದಂಡವೆಂಬ ಕೋಲಿರುವಿಕೆಯು ಸನ್ಯಾಸಿಗಳಲ್ಲಿದ್ದಿತೇ] ಹೊರತು ಜನರಲ್ಲಿ ದಂಡವಾರ್ತೆಯು [ಶಿಕ್ಷೆಯುಮಾತು] ಇರಲಿಲ್ಲ.

೧೯. ಮಾರ್ಗಣಗಳು (ಬಾಣಗಳು) ಧನುಸ್ಸಿನಲ್ಲಿ ಮಾತ್ರವಿರುವುದು ಆ ಮಾರ್ಗಣಗಳು (ಯಾಚಕರು) ರಾಮನ ರಾಜ್ಯದ ಜನರಲ್ಲಿಲ್ಲ. ಭಿಕ್ಷುಕರು (ಭಿಕ್ಷಾನ್ನಮಾಡುವವರು] ಬ್ರಹ್ಮಚಾರಿಗಳೇ ಭಿಕ್ಷಮಾಡತಕ್ಕವರು ಜನರಲ್ಲಿಲ್ಲ. ಮಲಧಾರಿಗಳು (ಕೊಳಕರು) ಕ್ಷಪಣಕರಲ್ಲಿ (ಭೌದ್ಧಸನ್ಯಾಸಿಗಳಲ್ಲಿ) ಮಾತ್ರ ವಿದೆಯೇ ಹೊರತು ಅಲ್ಲಿನ ಜನರಲ್ಲಿ ಕೊಳಕರಿರಲಿಲ್ಲ.

ಪ್ರಾಯೋ ಮಧುವ್ರತಾ ಏವ ಯತ್ರ ಚಂಚಲವೃತ್ತಯಃ ।
ಇತ್ಯಾದಿಗುಣವದ್ದೇಶೇ ರಾಮೋ ರಾಜ್ಯಂ ಶಶಾಸ ಸಃ ॥ ೨೦ ॥

ಧರ್ಮೇಣ ರಾಜಾ ಧರ್ಮಜ್ಞ ಸೀತಾರಾಮಃ ಪ್ರತಾಪವಾನ್ ।
ಚಕಾರ ರಾಜ್ಯಂ ನಿರ್ದ್ವಂದ್ವಮಯೋಧ್ಯಾಯಾಂ ಸುನಿಶ್ಚಲಂ ॥ ೨೧ ॥

ವಿಧಾಯ ರಾಜಧಾನೀಂ ತಾಂ ವಿಸ್ತೃತಾಂ ಪರಿಖಾನ್ವಿತಾಂ ।
ವಿಧಾಂಚಕ್ರೇ ಮಹಾಬುದ್ಧಿಃ ಪ್ರಜಾ ಧರ್ಮೇಣ ಪಾಲಯನ್ ॥ ೨೨ ॥

ತತಾಪಾಸೌ ಸೂರ್ಯ ಇವ ದುರ್ಹೃದಾಂ ಹೃದಿ ನೇತ್ರಯೋಃ ।
ಸೋಮವತ್ಸುಹೃದಾಮಾಸೀನ್ಮಾನಸೇಷು ಸ್ವಕೇಷ್ವಪಿ ॥ ೨೩ ॥

---

೨೦ ಚಂಚಲವೃತ್ತಿಯೆಂಬುದು (ಮನಸ್ಸು ಚಪಲತೆಯಿಂದಿರುವುದು) ಭ್ರಮರಗಳಲ್ಲಿ ಮಾತ್ರ ವಿರುವುದು. ಅಲ್ಲಿನ ಜನಗಳಲ್ಲಿ ಚಪಲಬುದ್ಧಿಯಿರಲಿಲ್ಲ. ಈ ರೀತಿಯಾಗಿ ರಾಮನು ರಾಜ್ಯಭಾರವನ್ನು ಮಾಡುತ್ತಿದ್ದನು.

೨೧-೨೨. ಧರ್ಮವನ್ನು ಬಲ್ಲ ಸೀತಾರಾಮನು ಪ್ರತಾಪಶಾಲಿಯಾಗಿದ್ದು ಕೊಂಡು ಧರ್ಮದಿಂದ ರಾಜ್ಯಭಾರಮಾಡುತ್ತಿದ್ದನು. ಅಯೋಧ್ಯೆಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಅದರ ಸುತ್ತಲೂ ಅಗಳುಗಳನ್ನು ಅಗೆಯಿಸಿ ಕೋಟೆಯನ್ನು ಕಟ್ಟಿಸಿದ್ದನು. ಸುಖದುಃಖಗಳಿಗೆ ಮನಸ್ಸುಕೊಡದೆ ಎರಡನ್ನೂ ಒಂದೇ ರೀತಿಯಿಂದ ಅನುಭವಿಸುತ್ತ ನಿಶ್ಚಲನಾಗಿ ರಾಜ್ಯಭಾರವನ್ನು ಮಾಡುತ್ತ ಬಂದನು.

೨೩. ಆ ರಾಮನು ಶತ್ರುಗಳ ಮತ್ತು ದುಷ್ಟರ ಮನಸ್ಸಿಗೂ ಕಣ್ಣಿಗೂ ಸೂರ್ಯನಂತೆ ಪ್ರಕಾಶಿಸುತ್ತ ಸುಡುತ್ತಿದ್ದನು. ಸ್ನೇಹಿತರ ಮನಸ್ಸಿಗೂ ಕಣ್ಣಿಗೂ ಚಂದ್ರನಂತೆ ಆಹ್ಲಾದಕರನಾಗಿದ್ದನು ತಮ್ಮ ಜನರಿಗೂ ಆನಂದವನ್ನುಂಟು ಮಾಡುತ್ತಿದ್ದನು.

ಅಖಂಡಮಾಖಂಡಲವತ್ಕೋದಂಡಂ ಕಲಯನ್ ರಣೇ ।
ಪಲಾಯಮಾನೈರಾಲೋಕಿ ಶತ್ರುಸೈನ್ಯಬಲಾಹಕೈಃ ॥ ೨೪ ॥

ಸ ಧರ್ಮರಾಜವದ್ರಾಜಾ ಧರ್ಮಾಧರ್ಮನಿವೇಚಕಃ ।
ಆದಂಡ್ಯೇ ದಂಡಯನ್ ರಾಮೋ ದಂಡ್ಯಾಂಶ್ಚ ಪರಿದಂಡಯನ್ ॥ ೨೫ ॥

ಪಾಶೀವ ಪಾಶಯಾಂಚಕ್ರೇ ವೈರಿಚಕ್ರಂ ವಿದೂರಗಃ ।
ಸೋಽಭೂತ್ಪುಣ್ಯಜನಾಧೀಶೋ ರಿಪುರಾಕ್ಷಸಮರ್ದನಃ ॥ ೨೬ ॥

ಜಗತ್ತ್ರಾಣಸಮಾನಶ್ಚ ಜಗತ್ತ್ರಾಣಸತತ್ಪರಃ ।
ರಾಜರಾಜಸ್ಯ ಏವಾಭೂತ್ಸರ್ವೇಷಾಂ ಧನದಸ್ಸತಾಂ ॥ ೨೭ ॥

ಸ ಏವ ರುದ್ರಮೂರ್ತಿಶ್ಚ ಪ್ರೈಕ್ಷಿಷ್ಟ ರಿಪುಭೀಷಣೇ ।
ವಿಶ್ವೇದೇವಾಸ್ತತಸ್ತಂ ತು ಸ್ತುವಂತಿ ಚ ಭಜಂತಿ ಚ ॥ ೨೮ ॥

---

೨೪. ಆ ರಾಮನು ಧನುಸ್ಸನ್ನು ಇಂದ್ರನಂತೆ ಧ್ವನಿಮಾಡಿಸುತ್ತಲಿದ್ದರೆ ಯುದ್ಧದಲ್ಲಿ ಶತ್ರುಸೈನ್ಯವೆಂಬ ಮೇಘಗಳು ಓಡಿಹೋಗುತ್ತಿದ್ದುದು ಎಲ್ಲರಿಗೂ ಕಾಣಬಂದಿತು.

೨೫. ಆ ರಾಮನು ಧರ್ಮರಾಜನಂತೆ ಧರ್ಮ ಅಧರ್ಮಗಳನ್ನು ವಿಚಾರಿಸುತ್ತ ತಪ್ಪಿಲ್ಲದವರನ್ನು ಬಿಡುತ್ತ ತಪ್ಪಿದ್ದವರನ್ನು ಶಿಕ್ಷಿಸುತ್ತಲಿರುತ್ತಿದ್ದನು.

೨೬. ಶತ್ರುಗಳು ದೂರದಲ್ಲಿದ್ದರೂ ವರುಣನಂತೆ ಅವರನ್ನು ಪಾಶದಿಂದ ಕಟ್ಟುತ್ತಿದ್ದನು. ರಿಪುಗಳಾದ ರಾಕ್ಷಸರನ್ನೂ ವೃದ್ಧಿಪಡಿಸುತ್ತ ಅವರಿಗೆ ಪುಣ್ಯ ಜನಾಧೀಶರಾದ ಕುಬೇರನಾಗಿಯೇ ಇದ್ದನು.

೨೭. ಪ್ರಪಂಚವನ್ನು ಕಾಪಾಡುವುದರಲ್ಲಿ ಆಶಕ್ತನಾಗಿ ವಾಯುವಿಗೆ ಸಮಾನನಾಗಿದ್ದನು ರಾಜರಾಜನಾಗಿ (ಚಕ್ರವರ್ತಿಯಾಗಿ) ಸತ್ಪುರುಷರೆಲ್ಲರಿಗೂ ಧನದನಾಗಿದ್ದನು [ಹಣಕೊಡುವವನಾಗಿದ್ದನು.]

೨೮. ಶತ್ರುಗಳನ್ನು ನಾಶಮಾಡುವುದರಲ್ಲಿ ರುದ್ರಮೂರ್ತಿಯಾಗಿಯೇ ಎಲ್ಲರಿಗೂ ಕಂಡು ಬಂದನು. ಈ ರೀತಿಯಾಗಿರುವ ರಾಮನನ್ನು ಎಲ್ಲಾ ದೇವತೆಗಳೂ ಸ್ತುತಿಸುತ್ತ ಸೇವಿಸುತ್ತಿದ್ದರು.

ಅಸಾಧ್ಯಸ್ಸ ಹಿ ಸಾಧ್ಯಾನಾಂ ವಸುಭ್ಯೋ ವಸುನಾಧಿಕಃ ।
ಗ್ರಹಾಣಾಂ ವಿಗ್ರಹಧರೋ ದಸ್ರತೋಜಸ್ರರೂಗದೃಕ್ ॥ ೨೯ ॥

ಮರುದ್ಗಣಾ ನ ಗಣಯಂಸ್ತು ಷಿತಾಂಸ್ತೋಷಯರ್ಗು ಗುಣೈಃ ।
ಸರ್ವವಿದ್ಯಾಧರೋ ಯಸ್ತು ಸರ್ವವಿದ್ಯಾಧರೇಷ್ವಪಿ । ॥ ೩೦ ॥

ಅಗರ್ವಾನೇವ ಗಂಧರ್ವಾನ್ಯಶ್ಚಕ್ರೇ ನಿಜಗೀತಿಭಿಃ ।
ರರಕ್ಷುರ್ಯಕ್ಷರಕ್ಷಾಂಸಿ ತದ್ದುರ್ಗಂ ಸ್ವರ್ಗಸೋದರಂ ॥ ೩೧ ॥

ನಾಗಾನಾಗಾಂಸ್ತಿರಶ್ಚಕ್ರುಸ್ತಸ್ಯ ನಾಗೇ ಬಲೀಯಸಃ ।
ದನುಜಾ ಮನುಜಾಕಾರಂ ಕೃತ್ವಾ ತಂ ತು ಸಿಷೇವಿರೇ ॥ ೩೨ ॥

ಜಾತಾ ಗುಹ್ಯಚರಾ ಯಸ್ಯ ಗುಹ್ಯಕಾಃ ಪರಿತೋ ನೃಷು !
ಸಂಸೇವಿಷ್ಯಾಮಹೇ ರಾಜ್ಞ ಸುರಾಸ್ತ್ವಾಂ ಸ್ವಸ್ವನ್ಯೈಭವ್ಯೈಃ ॥ ೩೩ ॥

---

೨೯ ಈತನು ಸಾಧ್ಯರೆಂಬ ದೇವತೆಗಳಿಗೂ ಅಸಾಧ್ಯನಾಗಿದ್ದನು. ಎಂದರೆ ಅವರಿಗಿಂತಲೂ ಹೆಚ್ಚಿನವನು. ವಸುವೆಂಬ ದೇವತೆಗಳಿಗೆ ವಸುಗಳಿಗಿಂತಲೂ ಹೆಚ್ಚಿನವನು. ಹಣವಂತರಿಗೆಲ್ಲರಿಗಿಂತಲೂ ಇವನು ಹಣವಂತನು. ಗ್ರಹಗಳಿಗೆಲ್ಲಾ ಅಧಿಕನಾಗಿದ್ದನು ಅಶ್ವಿನೀದೇವತೆಗಳಿಗಿಂತಲೂ ಹೆಚ್ಚಿನ ರೂಪವಂತನು.

೩೦. ದೇವತೆಗಳನ್ನು ಕೂಡ ಲಕ್ಷಿಸುತ್ತಿರಲಿಲ್ಲ. ಗುಣವುಳ್ಳವರನ್ನು ತನ್ನ ಸದ್ಗುಣಗಳಿಂದ ಸಂತೋಷಪಡಿಸುತ್ತಿದ್ದನು. ವಿದ್ಯಾವಂತರೊಳಗೆಲ್ಲಾ ವಿದ್ಯಾವಂತನಾಗಿದ್ದನು. ವಿದ್ಯಾಧರರೆಂಬವರಲ್ಲಿ ವಿದ್ಯಾಧರನಾಗಿದ್ದನು.

೩೧. ತನ್ನ ಗಾನದ ಗುಣಗಳ ಮಹಿಮೆಯಿಂದ ಗಂಧರ್ವರನ್ನು ಗರ್ವವಿಲ್ಲದವರನ್ನಾಗಿ ಮಾಡಿದನು. ಸ್ವರ್ಗಕ್ಕೆ ಸಮಾನವಾದ ಅವನ ರಾಜಧಾನಿಯಾದ ದುರ್ಗವನ್ನು ಯಕ್ಷರೂ ರಕ್ಷರೂ ಕಾಪಾಡುತ್ತಿದ್ದರು.

೩೨. ನಾಗರು (ರಾಮನ ಆನೆಗಳು) ಬಲಿಷ್ಠರಾದ ನಾಗರನ್ನು (ಸರ್ಪಗಳನ್ನು) ತಿರಸ್ಕಾರ ಮಾಡಿದರು. (ಪಾತಾಳಲೋಕದಲ್ಲಿರುವಂತೆ ಕೆಳಗೆ ಮಾಡಿದರು.) ದನುಜರು ಮನುಷ್ಯರ ಆಕಾರವನ್ನು ಹೊಂದಿ ಇವನನ್ನು ಸೇವಿಸಿದರು.

೩೩–೩೪. ಗುಹ್ಯಕರು ಪರರಾಜರಲ್ಲಿಯೂ, ಸಾಮಂತರಾಜರಲ್ಲಿಯೂ ಪ್ರಜೆಗಳಲ್ಲಿಯೂ ಆ ರಾಮನಿಗೆ ಗೂಢಚಾರರಾಗಿದ್ದರು. ಇಂದ್ರನೇ ಮುಂತಾದ ದೇವತೆಗಳು ಎಲೈ ರಾಮನೇ! ನಾವು ನಮ್ಮನ್ನು ನಮ್ಮ ಯೋಗ್ಯತೆಗೆ

ವಯಂ ಯತಸ್ತ್ವದ್ವಿಷಯೇ ಸುರಾವಾಸೋಽಪಿ ದುರ್ಲಭಃ ।
ಇತ್ಯುಕ್ತ್ವಾ ರಾಮಚಂದ್ರಂ ತೇ ಮಘವಾದ್ಯಾ ಸಿಷೇವಿರೇ ॥ ೩೪ ॥

ಅಶಿಕ್ಷಯತ್ ಕ್ಷಿತಿಪತೇರಿಹ ಯಸ್ಯ ತುರಂಗಮಾನ್ ।
ಆಶುಗಶ್ಚಾಶುಗಾಮಿತ್ವಂ ಪಾವಮಾನೇ ಪಥಿ ಸ್ಥಿತಃ ॥ ೩೫ ॥

ಅಗಜಾಸ್ಯಸ್ಯ ತು ಗಜಾನ್ನಗವರ್ಷ್ಮಸು ವರ್ಷ್ಮಣಃ ।
ಅಜಸ್ರದಾನಿನೋ ದೃಷ್ಟ್ವಾಭವನ್ನನ್ಯೇಽಪಿ ದಾನಿನಃ ॥ ೩೬ ॥

ಸದಾಜಿರೇ ಚ ಬೋದ್ಧಾರೋ ಯೋದ್ಧಾರಶ್ಚ ರಣಾಜಿರೇ ।
ನ ಯಸ್ಯ ಶಾಸ್ತ್ರೈರ್ವಿಜಿತಾ ನ ಶಸ್ತ್ರೈಃ ಕೇನ ಚಿತ್ಕ್ವಚಿತ್ ॥ ೩೭ ॥

ನ ನೇತ್ರವಿಷಯೇ ಜಾತಾ ವಿಷಯೇ ಯಸ್ಯ ಭೂಭೃತಃ ।
ಸದಾ ನಷ್ಟಪದಾ ದ್ವೇಷ್ಯಾಸ್ತಥಾ ನಷ್ಟಾಪದಾಃ ಪ್ರಜಾಃ ॥ ೩೮ ॥

ಅನುಸಾರವಾಗಿ ನಿನ್ನನ್ನು ಸೇವಿಸುತ್ತೇವೆ. ಏತಕ್ಕೆಂದರೆ ನಿನ್ನ ದೇಶದಲ್ಲಿ ಸುರಾವಾಸವು (ದೇವತಾವಾಸವು, ಹೆಂಡವಿರುವಿಕೆಯು) ದುರ್ಲಭವು ಎಂದು ಹೇಳುತ್ತ ಸೇವಿಸುವರು.

೩೫. ವಾಯುವು ವಾಯುಪಥದಲ್ಲಿ ಇದ್ದುಕೊಂಡು ಆ ರಾಮನ ಕುದುರೆಗಳಿಗೆ ವೇಗವಾಗಿ ಹೋಗುವಿಕೆಯನ್ನು ಕಲಿಸುತ್ತಿದ್ದನು.

೩೬. ಬೆಟ್ಟದಲ್ಲಿ ಹುಟ್ಟಿದ ಬೆಟ್ಟದಷ್ಟೇ ದಪ್ಪವಾದ ದೇಹವುಳ್ಳ ಆ ರಾಮನ ಆನೆಗಳು ಯಾವಾಗಲೂ ದಾನಿಗಳಾಗಿರುವುದನ್ನು (ಮದೋದಕವುಳ್ಳವಾಗಿರುವುದನ್ನು) ನೋಡಿ ಇತರ ಮೃಗಗಳೂ ಕೂಡಾ ತಾವು ದಾನಿಗಳಾಗಿರಬೇಕೆಂದು ಆ ರೀತಿಯಾಗಿ ಆದುವು. ಎಂದರೆ ಮೃಗಗಳು ದಾನಮಾಡುತ್ತಿದ್ದುವು. ಮದಿಸಿದ್ದುವು.

೩೭ ರಾಮನ ಬಳಿಯಲ್ಲಿ ಸಭೆಯಲ್ಲಿರುವ ಪಂಡಿತರನ್ನು ಶಾಸ್ತ್ರದಿಂದ ಯಾವನೂ ಯಾವಾಗಲೂ ಜಯಿಸಲಾರದೆ ಹೋದನು. ಅಂತೆಯೇ ಅವನ ಭಟರನ್ನು ಯುದ್ಧರಂಗದಲ್ಲಿ ಶಸ್ತ್ರದಿಂದಲೂ ಜಯಿಸದೆ ಹೋದನು.

೩೮. ನಷ್ಟಪದರೆಂದರೆ ಕಾಲು ಮುರಿದುಹೋದವರು. ಅನಷ್ಟಾಪದರೆಂದರೆ ಆಪತ್ತು ಹೋಗದವರು. ಮತ್ತು ಚಿನ್ನವಿಲ್ಲದಿರುವವರು. ಈರಾಮನ ರಾಜ್ಯದಲ್ಲಿಕಾಲುಮುರಿಯದ ಶತ್ರುವೂ ಆಪತ್ತುಳ್ಳ ಮತ್ತು ಧನವಿಲ್ಲದ ಪ್ರಜೆಯೂ ಕಣ್ಣಿಗೆ ಬೀಳುತ್ತಿರಲಿಲ್ಲ. ಎಂದರೆ ಇಲ್ಲವೇ ಇಲ್ಲ.

ಕಲಾವಾನೇಕ ಏವಾಸ್ತಿ ತ್ರಿದಿವೇಪಿ ದಿವೌಕಸಾಂ ।
ತಸ್ಯ ಕ್ಷೋಣೀಭೃತಃ ಕ್ಷೋಣ್ಯಾಂ ಜನಾಸ್ಸರ್ವೇ ಕಲಾಲಯಾಃ ॥ ೩೯ ॥

ಏಕ ಏವ ಹಿ ಕಾಮೋಸ್ತಿ ಸ್ವರ್ಗೇ ಸೋಪ್ಯಂಗವರ್ಜಿತಃ ।
ಸಾಂಗೋಪಾಂಗಾಶ್ಚ ಸರ್ವೇಷಾಂ ಸರ್ವೇ ಕಾಮಾ ಹಿ ತದ್ಭುವಿ ॥ ೪೦ ॥

ತಸ್ಯೋಪವರ್ತನೇಪ್ಯೇಕೋ ನ ಶ್ರುತೋ ಗೋತ್ರಭಿತ್ಕ್ವಚಿತ್ ।
ಸ್ವರ್ಗೇ ಸ್ವರ್ಗಸದಾಮೀಶೋ ಗೋತ್ರಭಿತ್ಪರಿಕೀರ್ತಿತಃ ॥ ೪೧ ॥

ಕ್ಷಯೀ ಚ ತಸ್ಯ ವಿಷಯೇ ಕೋಪ್ಯಾಕರ್ಣಿ ನ ಕೇನ ಚಿತ್ ।
ತ್ರಿವಿಷ್ಟಪೇ ಕ್ಷಪಾನಾಥಃ ಪಕ್ಷೇ ಪಕ್ಷೇ ಕ್ಷಯಿಷ್ಯತೇ ॥ ೪೨ ॥

---

೩೯. ದೇವತೆಗಳ ಸ್ವರ್ಗದಲ್ಲಿ ಕಲಾವಂತನು (ಚಂದ್ರನು) ಒಬ್ಬನೇ ಇರುವನು. ಈ ರಾಮರಾಜ್ಯದಲ್ಲಿಯಾದರೋ ಜನರೆಲ್ಲರೂ ಕಲಾವಂತರೇ (ವಿದ್ಯಾವಂತರೇ) ಆಗಿರುವರು.

೪೦. ಸ್ವರ್ಗದಲ್ಲಿ ಒಬ್ಬನೇ ಒಬ್ಬ ಕಾಮನು (ಮನ್ಮಥನು) ಇರುವನು ಅವನೂ ಕೂಡ ಅಂಗವಿಲ್ಲದವನು. ಈ ರಾಮರಾಜ್ಯದಲ್ಲಿಯಾದರೋ ಎಲ್ಲರೂ ಕಾಮರೇ (ವೃಷ್ಟಾನ್ನವನ್ನು ಹೊಂದಿರುವವರೇ) ಆಗಿರುವರು. ಅವರೂ ಕೂಡ ಸಾಂಗವಾದ ಅಂಗವುಳ್ಳವರು (ಇಷ್ಟಾರ್ಥವನ್ನು ಸಂಪೂರ್ಣವಾಗಿ ಹೊಂದಿದರು.)

೪೧. ಸ್ವರ್ಗೀಯರಲ್ಲಿ ಸ್ವರ್ಗದಲ್ಲಿ ವಾಸಮಾಡುವವರಿಗೆ ಒಡೆಯನಾದವನೇ ಗೋತ್ರ ಭಿತ್ ಆಗಿರುವನು. (ಗೋತ್ರಪರ್ವತಗಳನ್ನು) ಭಿತ್ ಕತ್ತರಿಸಿದವನು ಇಂದ್ರನು) ಈ ರಾಮರಾಜ್ಯದಲ್ಲಿಯಾದರೋ ಗೋತ್ರಭಿಕ್ (ತನ್ನ ವಂಶವನ್ನು ತಾನೇ ನಾಶಮಾಡುವವನು) ಇರುವನೆಂದು ಕಿವಿಯಲ್ಲಿ ಕೇಳಿಯೇ ಇಲ್ಲ.

೪೨. ದೇವಲೋಕದಲ್ಲಿ ರಾತ್ರೀಶನಾದ ಚಂದ್ರನು ಪ್ರತಿಪಕ್ಷದಲ್ಲಿಯೂ ಕ್ಷಯವನ್ನು (ಕಡಿಮೆಯಾಗುವಿಕೆಯನ್ನು) ಹೊಂದುತ್ತಾನೆ. ಆ ರಾಮನರಾಜ್ಯದಲ್ಲಿಯಾದರೋ ಕ್ಷಯವನ್ನು (ಕ್ಷಯರೋಗವನ್ನು) ಹೊಂದಿರುವವರನ್ನು ಯಾವನೂ ಕೇಳಿಯೇ ಇಲ್ಲ.

ನಾಕೇ ನವಗ್ರಹಾಸ್ಸಂತಿ ದೇಶಾಸ್ತಸ್ಯಾ ನನುಗ್ರಹಾಃ ।
ಹಿರಣ್ಯಗರ್ಭಸ್ಸ್ವರ್ಲೋಕೇಷ್ವೇಕ ಏವ ಪ್ರಕಾಶತೇ ॥ ೪೩ ॥

ಹಿರಣ್ಯಗರ್ಭಾಸ್ಸರ್ವೇಷಾಂ ತತ್ಪೌರಾಣಾಮಿಹಾಲಯಾಃ ।
ಸಪ್ತಾಶ್ವಏಕಸ್ಸ್ವರ್ಲೋಕೇ ನಿತರಾಂ ಭಾಸತೇಂಶುಮಾನ್ ॥ ೪೪ ॥

ಸದಂಶುಕಾಃ ಪ್ರತಿಗೃಹಂ ಬಹ್ವಶ್ವಾಸ್ತತ್ಪುರೌಕಸಃ ।
ಸದಪ್ಸರಾ ಯಥಾ ಸ್ವರ್ಭೂಸ್ತತ್ಪುರ್ಯಪಿ ಸದಪ್ಸರಾಃ ॥ ೪೫ ॥

ಏಕೈವ ಪದ್ಮಾ ವೈಕುಂಠೇ ಗೀಯತೇ ವಿಷ್ಣುವಲ್ಲಭಾ ।
ತತ್ಪೌರಾಣಾಂ ಗೃಹೇಷ್ವಾಸಂಶ್ಶತಪದ್ಮಾಃ ಪೃಥಕ್ ಪೃಥಕ್ ॥ ೪೬ ॥

---

೪೩. ಸ್ವರ್ಗದಲ್ಲಿ ನವಗ್ರಹಗಳು (ನವಗ್ರಹರು ಮತ್ತು ವೃಷ್ಟಿ ಪ್ರತಿ ಬಂಧಕಗಳು) ಇವೆ. ಈ ರಾಮನ ರಾಜ್ಯದಲ್ಲಿಯಾದರೋ ನವಗ್ರಹಗಳಿಲ್ಲ. (ವೃಷ್ಟಿ ಪ್ರತಿ ಬಂಧಕಗಳಿಲ್ಲ) ಸ್ವರ್ಗದಲ್ಲಿ ಹಿರಣ್ಯಗರ್ಭನು (ಬ್ರಹ್ಮನು) ಒಬ್ಬನೇ ಇರುವನು. ಈ ರಾಮರಾಜ್ಯದಲ್ಲಿಯಾದರೋ ಎಲ್ಲರ ಮನೆಗಳೂ ಹಿರಣ್ಯಗರ್ಭಗಳಾಗಿ (ಚಿನ್ನವನ್ನು ಒಳಗೆ ಉಳ್ಳದ್ದಾಗಿಯೇ) ಇವೆ.

೪೪-೪೫. ಸ್ವರ್ಗದಲ್ಲಿ ಸಪ್ತಾಶ್ವನು (ಏಳುಕುದುರೆಯುಳ್ಳವನು) ಒಬ್ಬನೇ ಒಬ್ಬನಿರುವನು. ಈ ರಾಮರಾಜ್ಯದಲ್ಲಿಯಾದರೋ ಪ್ರತಿಯೊಂದು ಮನೆಯಲ್ಲಿಯೂ ಆ ಪಟ್ಟಣಿಗರು ಬಹು ಅಶ್ವಗಳನ್ನು (ಕುದುರೆಗಳನ್ನು) ಇಟ್ಟುಕೊಂಡಿರುವವರು. ಆ ಸ್ವರ್ಗದಲ್ಲಿ ಅಂಶುಮಂತನು (ಕಿರಣವುಳ್ಳವನು) ಒಬ್ಬನೇ ಇರುವನು. ಈ ರಾಮರಾಜ್ಯದಲ್ಲಿ ಎಲ್ಲರೂ ಅಂಶುಮಂತರೇ (ವಸ್ತ್ರಾಲಂಕಾರವುಳ್ಳವರೇ) ಆಗಿರುವರು. ಸ್ವರ್ಗವು ಹೇಗೆ ಸದಪ್ಸರರು (ಒಳ್ಳೆಯ ಅಪ್ಸರ ಸ್ತ್ರೀಯರು) ಉಳ್ಳದ್ದಾಗಿದೆಯೋ ಅಂತೆಯೇ ಈ ರಾಮರಾಜ್ಯವು ಸದಪ್ಸರ/ಉಳ್ಳದ್ದಾಗಿ (ಒಳ್ಳೆಯ ನೀರುಳ್ಳ ಸರೋವರವುಳ್ಳದ್ದಾಗಿ) ಇರುವುದು.

೪೬. ವೈಕುಂಠದಲ್ಲಿ ಪದ್ಮವು [ಲಕ್ಷ್ಮಿಯು] ಒಂದೇವೊಂದಿರುವುದು. ಅದೂ ಕೂಡ ವಿಷ್ಣುವಿಗೆ ಸೇರಿದುದು. ಇತರರಿಗಿಲ್ಲವೇ ಇತ. ಈ ರಾಮರಾಜ್ಯದಲ್ಲಿಯಾದರೋ ಒಬ್ಬೊಬ್ಬನ ಮನೆಯಲ್ಲಿಯೂ ಬೇರೆಬೇರೆಯಾಗಿ ನೂರು ನೂರು ಪದ್ಮಗಳಿವೆ [ಪದ್ಮವೆಂದರೆ ನಿಧಿಗೆ ಹೆಸರು].

ಅನೀತಯಶ್ಚಲದ್ಧಾಮಾ ನ ರಾಜಪುರುಷಾಃ ಕ್ವಚಿತ್ ।
ಗೃಹೇ ಗೃಹೇತ್ರ ಧನದಾ ನಾಕ ಏಕೋಽಲಕಾಪತಿಃ ॥ ೪೭ ॥

ಏವಂ ರಾಮೋ ಮಹಾರ್ಣ ಶ್ರೇಷ್ಠಃ ಶ್ರೌಂಡೀರ್ಯಗುಣಶೋಭನಃ ।
ಸೌಭಾಗ್ಯಶೋಭಿರೂಪಾಢ್ಯಶ್ಶೌರ್ಯೌದಾರ್ಯಗುಣಾನ್ವಿತಃ ॥ ೪೮ ॥

ವಿಜಿತಾನೇಕಸಮರಶ್ರ್ಶ್ರೀಸಮರ್ಪಿತ ಮಾರ್ಗಣಃ ।
ಸೀತಾರಂಜಿತವಾಮಾಂಗಃ ಉಗ್ರಃ ಪರಪುರಂಜಯಃ ॥ ೪೯ ॥

ಅನೇಕಗುಣಸಂಪೂರ್ಣಃ ಪೂರ್ಣಃಚಂದ್ರನಿಭದ್ಯುತಿಃ ।
ಸತತಾವಭೃತಕ್ಲಿನ್ನ ಮೂರ್ಧಜಃ ಕ್ಷಿತಿಪರ್ಷಭಃ ॥ ೫೦ ॥

---

೪೭. ಆ ದೇವರಾಜ್ಯದಲ್ಲಿರುವ ರಾಜಪುರುಷರು ನೀತಿಯಿಲ್ಲದವರು. ಅವರ ಮನೆಯು ಚಲಿಸುತ್ತಲೇ ಇರುವುದು. [ಮೇರುವಿನ ಮೇಲೆ ಸ್ವರ್ಗವು ಸುತ್ತುತ್ತಿರುವುದು.] ಈ ರಾಮರಾಜ್ಯದಲ್ಲಿರುವವರು ನೀತಿಯಿಲ್ಲದವರಲ್ಲ. ಮನೆಯನ್ನು ಬದಲಾಯಿಸುತ್ತಲೂ ಇಲ್ಲ. ಸ್ವರ್ಗದಲ್ಲಿ ಕುಬೇರನೊಬ್ಬನೇ ಧನವನು. ಈ ರಾಮರಾಜ್ಯದಲ್ಲಿ ಮನೆಮನೆಯಲ್ಲಿಯೂ ಧನದರು. ಧನವನ್ನು ಕೊಡುವವರು. [ಧನವನ್ನು ಕೊಡುವವರು ಬಹುಮಂದಿ ಇರುವರು.]

೪೮. ಈ ರೀತಿಯಾಗಿ ರಾಮಸ್ವಾಮಿಯು ಉತ್ತಮವಾದ ಗುಣಗಳಿಂದ ಶೋಭಿಸುತ್ತಿರುವನು. ದೊಡ್ಡವನು. ಶ್ರೇಷ್ಠನು. ಸೌಭಾಗ್ಯವುಳ್ಳವನು. ರೂಪವಂತನು. ಶೌರ್ಯ ಮತ್ತು ಔದಾರ್ಯ ಗುಣವುಳ್ಳವನು.

೪೯. ಈ ರಾಮನು ಅನೇಕ ಯುದ್ಧಗಳಲ್ಲಿ ಗೆದ್ದವನು. ಯಾಚಕರಿಗೆ ಲಕ್ಷ್ಮೀದೇವಿಯನ್ನೇ ಅರ್ಪಿಸಿರುವನು. ತನ್ನ ಎಡಭಾಗದಲ್ಲಿಯೇ ಸೀತೆಯನ್ನಿಟ್ಟುಕೊಂಡಿರುವನು. ಶತ್ರುಗಳನ್ನು ನಿಗ್ರಹಿಸುವುದರಲ್ಲಿ ಅತಿ ಭಯಂಕರನು.

೫೦. ಆ ರಾಮನು ಅನೇಕ ಗುಣವನ್ನುಳ್ಳವನು. ಪೂರ್ಣ ಚಂದ್ರನಂತೆ ಕಾಂತಿಯುಳ್ಳವನು. ಯಾವಾಗಲೂ ಯಾಗಮಾಡುತ್ತ ಆ ಯಾಗದ ಸ್ನಾನದಿಂದ ನೆನೆದಿರುವ ಕೂದಲುಳ್ಳವನು. ರಾಜರಲ್ಲಿ ಉತ್ತಮನು.

ಪ್ರಜಾಪಾಲನಸಂಪನ್ನಃ ಕೋಶಪ್ರೀಣಿತಭೂಸುರಃ ।
ಪಾರ್ವತೀಕಾಂತಚರಣಯುಗಳಧ್ಯಾನತತ್ಪರಃ ॥ ೫೧ ॥

ವಿಶ್ವೇಶ್ವರ ಕಥಾಲಾಪ ಪರಿಕ್ಷಿಪ್ತ ದಿನಕ್ಷಪಃ ।
ಸೀತಾ ಸಂಕ್ಷಾಳಿತ ಪದಸ್ತತ್ಕ್ರೀಡಾಪರಿತೋಷಿತಃ ॥ ೫೨ ॥

ಶಶಾಸ ರಾಜ್ಯಂ ಧರ್ಮೇಣ ಬಂಧುಪುತ್ರಸಮನ್ವಿತಃ ।
ರಾಮೇ ಶಾಸತಿ ಸಾಕೇತಪುರ್ಯಾಂ ರಾಜ್ಯಂ ಸುಖೇನ ವೈ ॥ ೫೩ ॥

ಹೃಷ್ಟಪುಷ್ಟಾಃ ಪ್ರಜಾಸ್ಸರ್ವಾಃ ಫಲವಂತೋ ಭವನ್ನಗಾಃ ।
ಆಸನ್ಸದಾ ಸುಕುಸುಮೈಃ ವಿನಮ್ರಾಸ್ಸೌಖ್ಯದಾ ನೃಣಾಂ ॥ ೫೪ ॥

---

೫೧. ಪ್ರಜೆಗಳನ್ನು ಪಾಲಿಸುವುದರಲ್ಲಿ ಬಹು ಯೋಗ್ಯನು. ಭಂಡಾರದಲ್ಲಿರುವ ಹಣವನ್ನೆಲ್ಲಾ ಕೊಟ್ಟು ಬ್ರಾಹ್ಮಣರನ್ನು ತೃಪ್ತಿಪಡಿಸಿರುವನು. ಪಾರ್ವತೀಕಾಂತನಾದ ಶಿವನ ಚರಣಕಮಲಗಳನ್ನು ಯಾವಾಗಲೂ ಧ್ಯಾನಿಸುತ್ತಿರುವನು.

೫೨. ವಿಶ್ವೇಶ್ವರನಾದ ಶಿವನ ಕಥೆಯನ್ನು ಕೇಳುವುದರಿಂದಲೂ ಹೇಳುವುದರಿಂದಲೂ ಹಗಲು ರಾತ್ರಿಗಳನ್ನು ಕಳೆಯುತ್ತಿರುವನು. ಸೀತೆಯು ಕೈಯಿಂದ ಪಾದಗಳನ್ನು ತೊಳೆಸಿಕೊಳ್ಳುತ್ತ ಆಕೆಯೊಡನೆ ಕ್ರೀಡಿಸುವುದರಿಂದಲೇ ಸಂತೋಷಗೊಂಡವನು.

೫೩–೫೪. ಇಂತಹ ರಾಮನು ತಮ್ಮಂದಿರೊಡನೆಯೂ ಮಕ್ಕಳೊಡನೆಯೂ ಕೂಡಿಕೊಂಡು ರಾಜ್ಯವನ್ನು ಧರ್ಮದಿಂದ ಆಳುತ್ತಿದ್ದನು. ಆ ರಾಮನು ಅಯೋಧ್ಯೆಯಲ್ಲಿರುತ್ತ ಸುಖದಿಂದ ರಾಜ್ಯವಾಳುತ್ತಿದ್ದಾಗ ಎಲ್ಲಾ ಪ್ರಜೆಗಳೂ ಸಂತೋಷವುಳ್ಳವರಾಗಿಯೂ ಧೃಢಕಾರಿಯರಾಗಿಯೂ. ಇದ್ದರು. ಮರಗಳು ಫಲಗಳಿಂದ ಕೂಡಿಕೊಂಡು ಇರುತ್ತಿದ್ದುವು. ಮತ್ತು ಹೂಗಳಿಂದ ಯಾವಾಗಲೂ ಕೂಡಿರುತ್ತ ಜನರಿಗೆ ಸುಖವನ್ನುಂಟುಮಾಡುತ್ತಿದ್ದುವು.

ಏಕಪತ್ನೀವ್ರತಾಸ್ಸರ್ವೇ ಪುಮಾಂಸಸ್ತಸ್ಯ ಮಂಡಲೇ |
ನಾರೀಷು ಕಾಚಿನ್ನೈವಾಸೀದಪತಿವ್ರತಧರ್ಮಿಣೀ ॥ ೫೫ ॥

ಅನಧೀತೋ ನ ವಿಪ್ರೋಽಭೂನ್ನ ಶೂರೋ ನೈವ ಬಾಹುಜಃ |
ವೈಶ್ಯೋಽನಭಿಜ್ಞೋ ನೈವಾಸೀದರ್ಥೋಪಾರ್ಜನಕರ್ಮಸು ॥ ೫೬ ॥

ಅನನ್ಯವೃತ್ತಯಶ್ಶೂದ್ರಾ ದ್ವಿಜಶುಶ್ರೂಷಣಂ ಪ್ರತಿ |
ತಸ್ಯ ರಾಷ್ಟ್ರೇ ಸಮಭವನ್ಸೀತಾರಾಮಸ್ಯ ಭೂಪತೇಃ ॥ ೫೭ ॥

ಅವಿಪ್ಲುತಬ್ರಹ್ಮಚರ್ಯಾಸ್ತದ್ರಾಷ್ಟ್ರೇ ಬ್ರಹ್ಮಚಾರಿಣಃ |
ನಿತ್ಯಂ ಗುರುಕುಲಾಧೀನಾ ವೇದಗ್ರಹಣತತ್ಪರಾಃ ॥ ೫೮ ॥

---

೫೫. ಆ ರಾಮನ ರಾಜ್ಯದಲ್ಲಿರುವವರೆಲ್ಲರೂ ಏಕಪತ್ನಿ ವ್ರತವನ್ನೇ ಹೊಂದಿರುತ್ತಿದ್ದರು. ಹೆಂಗಸರಲ್ಲಿ ಪತಿವ್ರತೆ ಧರ್ಮವನ್ನು ಹೊಂದದವಳೂ ಒಬ್ಬಳೂ ಇರಲಿಲ್ಲ.

೫೬. ವೇದಾಧ್ಯಯನವನ್ನು ಮಾಡದ ಬ್ರಾಹ್ಮಣನೊಬ್ಬನೂ ಇರಲಿಲ್ಲ, ಶೂರನಲ್ಲದಿದ್ದ ಕ್ಷತ್ರಿಯನೂ ಇರಲಿಲ್ಲ. ಹಣವನ್ನು ಸಂಪಾದಿಸುವ ಕೆಲಸದಲ್ಲಿ ಬುದ್ಧಿವಂತನಲ್ಲದ್ದ ವೈಶ್ಯನೊಬ್ಬನೂ ಇರಲಿಲ್ಲ.

೫೭. ಶೂದ್ರರು ಯಾವಾಗಲೂ ದ್ವಿಜರನ್ನು ಶುಶ್ರೂಷೆ ಮಾಡುತ್ತಲೇ ಇದ್ದರು. ಭೂಪತಿಯಾದ ಸೀತಾರಾಮನ ರಾಜ್ಯದಲ್ಲಿ ಈ ರೀತಿಯಾ ಇದ್ದಿತು.

೫೮. ಬ್ರಹ್ಮಚಾರಿಗಳು ತಮ್ಮ ತಮ್ಮ ಬ್ರಹ್ಮಚರ್ಯದಿಂದ ಕುಂದುತ್ತಿರಲಿಲ್ಲ. ಅವರು ಯಾವಾಗಲೂ ಗುರುವಿನ ಮನೆಯಲ್ಲಿಯೇ ಇದ್ದುಕೊಂಡು ವೇದವನ್ನು ಗ್ರಹಿಸುವುದರಲ್ಲಿ ಆಸಕ್ತರಾಗಿದ್ದರು.

ಅನ್ಯೇನುಲೋಮಜನ್ಮಾನಃ ಪ್ರತಿಲೋಮಭವಾ ಅಪಿ ।
ಸ್ವಪಾರಂಪರ್ಯತೋ ದ್ರಷ್ಟುಂ ಮನಾಗ್ವರ್ತ್ಮ ನ ತತ್ಯಜುಃ ॥ ೫೯ ॥

ಅನಪತ್ಯೋ ನ ತದ್ರಾಷ್ಟ್ರೇ ಧನಹೀನಸ್ತು ಕೋಪಿ ನ ।
ವಿರುದ್ಧಸೇವೀ ನೋ ಕಶ್ಚಿದಕಾಂಡೇ ಮೃತಿಭಾಙ್ನ ಚ ॥ ೬೦ ॥

---

೫೯. ಆ ರಾಮರಾಜ್ಯದಲ್ಲಿ ಅನುಲೋಮದವರೂ ಪ್ರತಿಲೋಮದವರೂ ಕೂಡ ತಮ್ಮ ಪರಂಪರೆಯಿಂದ ಬಂದ ವೃತ್ತಿಯನ್ನು ಸ್ವಲ್ಪವೂ ಬಿಡದೆ ಅನುಸರಿಸುತ್ತಿದ್ದರು.

ಅನುಲೋಮ:— ತನ್ನ ಜಾತಿಯ ಸ್ತ್ರೀಗಿಂತ ಕೀಳುಜಾತಿಯ ಸ್ತ್ರೀಯರಲ್ಲಿ ಹುಟ್ಟಿದವರು.

ಪ್ರತಿಲೋಮ:— ತನ್ನ ಜಾತಿಗಿಂತಲೂ ಉತ್ತಮ ಸ್ತ್ರೀಯಲ್ಲಿ ಹುಟ್ಟಿದವರು. ಅದು ಹೇಗೆಂದರೆ ಬ್ರಾಹ್ಮಣನಿಂದ ಕ್ಷತ್ರಿಯ ಸ್ತ್ರೀಯಲ್ಲಿ ಮೂರ್ಧಾವ ಸತ್ತನೂ ವೈಶ್ಯಸ್ತ್ರೀಯಲ್ಲಿ ಅಂಬಷ್ಠನೂ, ಶೂದ್ರ ಸ್ತ್ರೀಯಲ್ಲಿ ಪಾರಶವನೂ ನಿಷಾದನೂ ಹುಟ್ಟುವನು. ಕ್ಷತ್ರಿಯರಿಂದ ವೈಶ್ಯಸ್ತ್ರೀಯಲ್ಲಿ ಮಾಹಿಷ್ಯನೂ ಶೂದ್ರ ಸ್ತ್ರೀಯಲ್ಲಿ ಉಗ್ರನೂ ಹುಟ್ಟುವರು. ವೈಶ್ಯನಿಂದ ಶೂದ್ರ ಸ್ತ್ರೀಯಲ್ಲಿ ಕರಣನು ಹುಟ್ಟುವನು. ಇವರು ಅನುಲೋಪ ಜಾತಿಯುವರು. ಬ್ರಾಹ್ಮಣ ಸ್ತ್ರೀಯಲ್ಲಿ ಕ್ಷತ್ರಿಯನಿಂದ ಸೂತನೂ ವೈಶ್ಯನಿಂದ ವೈದೇಹನೂ ಶೂದ್ರನಿಂದ ಚಂಡಾಲನೂ ಹುಟ್ಟುವರು. ಕ್ಷತ್ರಿಯರ ಸ್ತ್ರೀಯಲ್ಲಿ ವೈಶ್ಯನಿಂದ ಮಾಗಧ ಜಾತಿಯುವನೂ ಶೂದ್ರನಿಂದ ಕ್ಷತ್ಯ ಜಾತಿಯೂ ಹುಟ್ಟುವುರು. ಇವು ಪ್ರತಿಲೋಮ ಜಾತಿಗಳು. ಅನುಲೋಮ ಜಾತಿಗಳಲ್ಲಿ ಸಾಂಕರ್ಯದಿಂದ ಶ್ವಪಾಕ ಪುಲ್ಕಸ ಮುಂತಾದ ಸಂಕರ ಜಾತಿಗಳು ಹುಟ್ಟುತ್ತವೆ.

೬೦. ಆ ರಾಮನ ರಾಜ್ಯದಲ್ಲಿ ಮಕ್ಕಳಿಲ್ಲದವನಾಗಲೀ, ಹಣವಿಲ್ಲದ ಬಡವನಾಗಲೀ, ಒಬ್ಬನೂ ಇರಲಿಲ್ಲ. ಜಾತಿಗೆ ವಿರುದ್ಧವಾಗಿ ಸೇವೆಮಾಡುವವನು ಒಬ್ಬನೂ ಇರಲಿಲ್ಲ ಅಕಾಲಮೃತ್ಯುವಿಗೆ ತುತ್ತಾಗುವವನೂ ಇರಲಿಲ್ಲ.

ನ ಶಠಾ ನೈವ ವಾಚಾಟಾ ವಂಚಕಾ ನೋ ನ ಹಿಂಸಕಾಃ ।
ನ ಪಾಖಂಡಾ ನೈವ ಭೇಡಾ ನ ರಂಡಾ ನೈವ ಶೌಂಡಿಕಾಃ ॥ ೬೧ ॥

ಶ್ರುತಿಘೋಷೋ ಹಿ ಸರ್ವತ್ರ ಶಾಸ್ತ್ರವಾದಃ ಪದೇ ಪದೇ ।
ಸರ್ವತ್ರ ಸುಭಗಾಲಾಪಾ ಮುದಾ ಮಂಗಳಗೀತಯಃ ॥ ೬೨ ॥

ವೀಣಾವೇಣುಪ್ರವಾದಶ್ಚ ಮೃದಂಗಮಧುರಸ್ವನಾಃ ।
ಸೋಮಪಾನಂ ವಿನಾನ್ಯತ್ರ ಪಾನಗೋಷ್ಠೀ ನ ಕರ್ಣಗಾ ॥ ೬೩ ॥

ಮಾಂಸಾಶಿನಃ ಪುರೋಡಾಶಂ ನೈವಾನ್ಯತ್ರ ಕಥಂಚನ ।
ನ ದುರೋದರಿಣೋ ಯತ್ರಾಧರ್ಮಿಣೋ ನ ನ ತಸ್ಕರಾಃ ॥ ೬೪ ॥

ಪುತ್ರಸ್ಯ ಪಿತ್ರೋಃ ಪದಯೋಃ ಪೂಜನಂ ದೈವಪೂಜನಂ ।
ಉಪವಾಸೋ ವ್ರತಂ ತೀರ್ಥಂ ದೇವತಾರಾಧನಂ ಪರಂ ॥ ೬೫ ॥

---

೬೧. ಮೂರ್ಖರಾಗಲಿ, ಹರಟೆಗಾರರಾಗಲಿ, ವಂಚಕನಾಗಲಿ, ಹಿಂಸಕನಾಗಲಿ ಇರಲಿಲ್ಲ. ಪಾಷಂಡನಾಗಲಿ, ಭಂಡನಾಗಲಿ, ಮುಂಡೆಯಾಗಲಿ, ಶೌಂಡಿಕ (ಗರ್ವಿಷ್ಠ) ನಾಗಲೀ ಇರಲಿಲ್ಲ.

೬೨. ಎಲ್ಲಾ ಕಡೆಯಲ್ಲಿಯೂ ವೇದದ ಘೋಷವೇ ಕೇಳಿ ಬರುತ್ತಿದ್ದಿತು. ಶಾಸ್ತ್ರವಾದಗಳು ಆಗಾಗ್ಗೆ ಕೇಳಿಬರುತ್ತಿದ್ದುವು. ಎಲ್ಲಾ ಕಡೆಯಲ್ಲಿಯೂ ಮನೋರಂಜಕವಾದ ಮಾತುಗಳೂ, ಬುದ್ಧಿವಂತಿಕೆಯ ಮಾತುಗಳೂ, ಸಂತೋಷದ ಮಂಗಳ ಗೀತಗಳೂ ಕೇಳಿ ಬರುತ್ತಿದ್ದುವು.

೬೩. ವೀಣೆ, ಕೊಳಲುಗಳ ಧ್ವನಿಗಳೂ, ಮೃದಂಗದ ಶಬ್ದವೂ ಕೇಳಿ ಬರುತ್ತಿದ್ದುವು. ಯಜ್ಞದ ಕರ್ಮಾಂಗವಾದ ಸೋಮಪಾನದ ಗೋಷ್ಠಿಯೊಂದು ಹೊರತಾಗಿ ಆ ರಾಮರಾಜ್ಯದಲ್ಲಿ ಮದ್ಯಪಾನ ಪ್ರಸಕ್ತಿಯೇ ಇರಲಿಲ್ಲ.

೬೪. ಮಾಂಸಾಹಾರವೆಂಬುದು ಯಜ್ಞಾಂಗವಾದ ಹೋಮಶೇಷ ಪುರೋಡಾಶವೆಂಬುದೊಂದರಲ್ಲಿ ಇದ್ದಿತೇ ಹೊರತಾಗಿ ಮತ್ತೆಲ್ಲಿಯೂ ಇರಲಿಲ್ಲ.

೬೫. ಮಗನಾದವನು ತಾಯಿತಂದೆಯರ ಪಾದಪದ್ಮಗಳನ್ನು ಪೂಜಿಸುವುದೇ ಅವನಿಗೆ ದೇವರಪೂಜೆಯು. ಅದೇ ಉಪವಾಸ ವ್ರತವು. ಅದೇ ತೀರ್ಥಯಾತ್ರೆಯು.

ನಾರೀಣಾಂ ಭರ್ತೃಪದಯೋರರ್ಚನಂ ತದ್ವಚಶ್ಶ್ರುತಿಃ ।
ಸಮರ್ಚಯಂತಿ ಸತತಂ ಮನುಜಾ ನಿಜಮಗ್ರಜಂ ॥ ೬೬ ॥

ಸಮರ್ಚಯಂತಿ ಮುದಿತಾ ಭೃತ್ಯಾಃ ಸ್ವಾಮಿಪದಾಂಬುಜಂ ।
ಹೀನವರ್ಣೈರಗ್ರವರ್ಣೋ ವರ್ಣ್ಯತೇ ಗುಣಗೌರವೈಃ ॥ ೬೭ ॥

ವರಿವಸ್ಯಂತಿ ಭೂಯೋಽಪಿ ತ್ರಿಕಾಲಂ ಭೂಮಿದೇವತಾಃ ।
ಸರ್ವತ್ರ ಸರ್ವೇಽವಿದ್ವಾಂಸಸ್ಸಮರ್ಚಂತೇ ಮನೋರಥೈಃ ॥ ೬೮ ॥

ವಿದ್ವದ್ಭಿಶ್ಚ ತಪೋನಿಷ್ಠಾಸ್ತಪೋನಿಷ್ಠೈಃ ಜಿತೇಂದ್ರಿಯಾಃ ।
ಜಿತೇಂದ್ರಿಯೈಃ ಜ್ಞಾನನಿಷ್ಠಾ ಜ್ಞಾನಿಭಿಶ್ಶಿವಲಿಂಗಿನಃ ॥ ೬೯ ॥

ಮಂತ್ರಪೂತಂ ಮಹಾರ್ಘಂ ಚ ವಿಧಿಯುಕ್ತಂ ಸುಸಂಸ್ಕೃತಂ ।
ಬಾಡಬಾನಾಂ ಮುಖಾಗ್ನೌ ಚ ಹೂಯತೇಽಹರ್ನಿಶಂ ಹವಿಃ ॥ ೭೦ ॥

---

೬೬. ನಾರಿಯರು ಗಂಡಂದಿರ ಪಾದಗಳನ್ನು ಪೂಜಿಸುವುದೇ ದೇವತಾರಾಧನೆಯು. ಅವನ ಮಾತೇ ವೇದ ವಾಕ್ಯವು. ಮನುಷ್ಯರಾದವರು ತಮ್ಮ ತಮ್ಮ ಅಣ್ಣಂದಿರನ್ನು ಯಾವಾಗಲೂ ಪೂಜಿಸುವರು.

೬೭. ಆಳುಗಳಾದವರು ಸ್ವಾಮಿಯ ಪಾದಗಳನ್ನು ಪೂಜಿಸುವರು. ಕೆಳಗಿನ ವರ್ಣದವರು ಮೇಲಿನ ವರ್ಣದವರನ್ನು ಗೌರವದಿಂದ ಹೊಗಳುವರು.

೬೮. ಬ್ರಾಹ್ಮಣರು ಪ್ರಾತಃಕಾಲ ಮಧ್ಯಾಹ್ನಕಾಲ ಸಾಯಂಕಾಲಗಳೆಂಬ ಮೂರುಕಾಲಗಳಲ್ಲಿಯೂ ಬಹುವಾಗಿ ಪೂಜೆಯನ್ನು ಹೊಂದುತ್ತಿದ್ದರು. ವಿದ್ವಾಂಸರಾದವರನ್ನು ಎಲ್ಲರೂ ಅವರಿಗೆ ಬೇಕಾದುದನ್ನು ಕೊಟ್ಟು ಎಲ್ಲಾ ಕಡೆಯಲ್ಲಿಯೂ ಗೌರವಿಸುತ್ತಿದ್ದರು.

೬೯. ವಿದ್ವಾಂಸರು ತಪಸ್ವಿಗಳನ್ನೂ ತಪಸ್ವಿಗಳು ಜಿತೇಂದ್ರಿಯರನ್ನೂ ಜಿತೇಂದ್ರಿಯರು ಜ್ಞಾನಿಗಳನ್ನು ಜ್ಞಾನಿಗಳು ಶಿವಲಿಂಗಿ(ಶೈವಲಕ್ಷಣವುಳ್ಳವರು) ಗಳನ್ನೂ ಪೂಜಿಸುತ್ತಿದ್ದರು.

೭೦. ಮಂತ್ರದಿಂದ ಶುದ್ಧವಾದ ಉತ್ತಮೋತ್ತಮವಾದ ವಿಧಿಯನ್ನು ಮೀರದ ಚೆನ್ನಾಗಿ ಪಕ್ವಮಾಡಿರುವ ಹವಿಸ್ಸನ್ನು ಬ್ರಾಹ್ಮಣಮುಖವೆಂಬ ಅಗ್ನಿಯಲ್ಲಿ ಯಾವಾಗಲೂ ಹೋಮಮಾಡುವರು. ಎಂದರೆ ವಿಧಿವತ್ತಾಗಿಯೂ ಚೆನ್ನಾಗಿಯೂ ಇರುವ ಪದಾರ್ಥಗಳಿಂದ ಬ್ರಾಹ್ಮಣಸಂತರ್ಪಣೆಯನ್ನು ಮಾಡಿಸುತ್ತಿದ್ದರು.

ವಾಪೀಕೂಪತಟಾಕಾನಾಂ ಆರಾಮಾಣಾಂ ಪದೇಪದೇ ।
ಶುಚಿಭಿರ್ದ್ರವ್ಯಸಂಭಾರೈಃ ಕರ್ತಾರೋ ಯತ್ರ ಭೂರಿಶಃ ॥ ೭೧ ॥

ತದ್ರಾಷ್ಟ್ರೇ ಹೃಷ್ಟಪುಷ್ಟಾಶ್ಚ ದೃಶ್ಯಂತೇ ಸರ್ವಜಾತಯಃ ।
ಅನಿಂದ್ಯಸೇವಾಸಂಪನ್ನಾ ವಿನಾ ಮೃಗಯುಸೈನಿಕಾನ್ ॥ ೭೨ ॥

ಯಸ್ಯ ರಾಜ್ಯೇ ಪತಾಕಾಸು ಚಂಚಲಾ ಶ್ರೀರ್ನ ರಾಷ್ಟ್ರಕೇ ।
ಐರಾವತೋಽಸ್ತ್ಯೇಕ ಏವ ಶುಭ್ರಂ ಸ್ವರ್ಗೇ ಗಜೋ ಮಹಾನ್ ॥ ೭೩ ॥

ಚತುರ್ದಂತೋ ರಾಮರಾಜ್ಯೇ ತದ್ವನ್ನಾಗಾಸ್ಸಹಸ್ರಶಃ ।
ಇಂದುಸೂರ್ಯಾ ಉಭಾವೇವ ಶೋಭೇತೇ ಗಗನಾಂಗಣೇ ॥ ೭೪ ॥

ರಾಮರಾಜ್ಯೇತ್ರ ನಾರೀಣಾಂ ಸೀಮಂತಸ್ಥಾ ಅನೇಕಶಃ ।
ವೃಷೋಽಸ್ತ್ಯೇಕಸ್ಸ ಕೈಲಾಸೇ ಗೀಯತೇ ಪರಮುಸ್ಸಿತಃ ॥ ೭೫ ॥

---

೭೧. ತಾವು ಸರಿಯಾದ ರೀತಿಯಲ್ಲಿ ಸಂಪಾದಿಸಿದ ಶುದ್ಧವಾದ ದ್ರವ್ಯದಿಂದ ಜನರು ಬಾವಿಯನ್ನು ತೋಡಿಸುತ್ತಿದ್ದರು. ಕೊಳಗಳನ್ನು ಕಟ್ಟಿಸುತ್ತಿದ್ದರು. ಕೆರೆಗಳನ್ನು ನಿರ್ಮಿಸುತ್ತಿದ್ದರು. ತೋಪುಗಳನ್ನು ಹಾಕಿಸುತ್ತಿದ್ದರು.

೭೨. ಆ ರಾಮರಾಜ್ಯದಲ್ಲಿ ಜನರು ಸಂತೋಷವಾಗಿಯೂ ದೃಢಕಾಯರಾಗಿಯೂ ಇರುತ್ತಿದ್ದರು. ಬೇಟೆಗಾರರನ್ನೂ ಸೈನಿಕರುಗಳನ್ನೂ ಬಿಟ್ಟರೆ ಮತ್ತಾರೂ ನಿಂದ್ಯರಾದವರನ್ನು ಸೇವಿಸುತ್ತ ಇರಲಿಲ್ಲ.

೭೩. ರಾಮನ ರಾಜ್ಯದ ಪತಾಕೆಯಲ್ಲಿ ಮಾತ್ರ ಲಕ್ಷ್ಮಿಯು (ಕಾಂತಿಯು) ಚಂಚಲವಾಗಿರುವಳೇ ಹೊರತು ಅವನ ರಾಜ್ಯದ ಲಕ್ಷ್ಮಿಯು ಚಂಚಲಳಲ್ಲ.

೭೪. ಸ್ವರ್ಗದಲ್ಲಿ ಬಿಳಿಯದಾದ ದೊಡ್ಡದಾದ ನಾಲ್ಕುದಂತಗಳುಳ್ಳ ಒಂದೇ ಒಂದು ಐರಾವತವೆಂಬ ಆನೆಯಿರುವುದು. ರಾಮರಾಜ್ಯದಲ್ಲಿ ಅಂತಹ ನಾಲ್ಕುದಂತಗಳುಳ್ಳ ಐರಾವತವನ್ನು ಹೋಲುವ ಆನೆಗಳು ಸಾವಿರಾರು ಇರುವುವು. ಅಂತರಿಕ್ಷದಲ್ಲಿ ಸೂರ್ಯಚಂದ್ರರಿಬ್ಬರೇ ಶೋಭಿಸುತ್ತಿರುವರು.

೭೫. ಈ ರಾಮರಾಜ್ಯದಲ್ಲಿಯಾದರೋ ಹೆಂಗಸರ ಸೀಮಂತ ಪ್ರದೇಶದಲ್ಲಿ (ಬೈತಲೆಯಲ್ಲಿ) ಆ ಸೂರ್ಯಚಂದ್ರರು ಅನೇಕರು ಪ್ರಕಾಶಿಸುವರು (ಸೂರ್ಯಚಂದ್ರರೆಂಬ ಒಡವೆಗಳನ್ನು ಬೈತಲೆಗೆ ಇಟ್ಟುಕೊಳ್ಳುವರು ಬೈತಲೆಗಿಟ್ಟುಕೊಳ್ಳುವ ಒಡವೆಗಳಿಗೆ ಸೂರ್ಯಚಂದ್ರರೆಂಬ ಹೆಸರು.)

ತದ್ವದ್ವೃಷಾ ರಾಮರಾಜ್ಯೇ ಕೃಷಿಕರ್ಮಣಿ ಯೋಜಿತಾಃ |
ಏಣೋಽಸ್ತ್ಯೇಕಶ್ಚಂದ್ರಲೋಕೇ ಕೃಷ್ಣವರ್ಣೋ ಮನೋರಮಃ ॥ ೭೬ ॥

ತದ್ವದತ್ರ ಶಿಶೂನಾಂ ಹಿ ಕ್ರೀಡಾರ್ಥಂ ಸಂತ್ಯನೇಕಶಃ |
ಅಪ್ಸರಸ್ಸು ವರಾಸ್ವರ್ಗೇ ಗೀಯತೇ ಸಾ ತಿಲೋತ್ತಮಾ ॥ ೭೭ ॥

ಗೇಹೇ ಗೇಹೇ ಸಂತಿ ನಾರ್ಯಃ ಸರ್ವಾಸ್ತ್ವತ್ರ ತಿಲೋತ್ತಮಾಃ |
ರುಕ್ಮಭೂಷಣಭೂಷಾಢ್ಯಾ ಗತಿನೂಪುರನಿಸ್ವನಾಃ ॥ ೭೮ ॥

ಸಹಸ್ರಾಕ್ಷೋಽಸ್ತ್ಯೇಕ ಏವ ಮುಹುಃ ಸ್ವರ್ಗೇ ಪ್ರಗೀಯತೇ |
ರಾಮರಾಜ್ಯೇ ಚಾಮರಾಣಿ ಸಹಸ್ರಾಕ್ಷೀಣ್ಯನೇಕಶಃ ॥ ೭೯ ॥

---

೭೬. ಕೈಲಾಸದಲ್ಲಿ ಒಂದೇ ಒಂದು ಬಸವನಿರುವುದು. ಅದು ಬಹು ಬೆಳ್ಳಗಿರುವುದೆಂದು ಎಲ್ಲರೂ ಹೊಗಳುತ್ತಾರೆ. ರಾಮರಾಜ್ಯದಲ್ಲಿ ಅಂತಹ ಬಸವಗಳು ಲೆಕ್ಕವಿಲ್ಲದಷ್ಟಿದ್ದು ಅವನ್ನೇ ವ್ಯವಸಾಯದಲ್ಲಿ ಉಳುವುದಕ್ಕೂ ಕೂಡ ಉಪಯೋಗಿಸುತ್ತಾರೆ. ಚಂದ್ರಲೋಕದಲ್ಲಿ ಒಂದು ಜಿಂಕೆಯಿರುವುದು. ಅದೂ ಕೂಡ ಕಪ್ಪುಚಿಕ್ಕೆಯುಳ್ಳದ್ದು.

೭೭. ಅಂತಹ ಅನೇಕ ಜಿಂಕೆಗಳನ್ನು ಈ ರಾಮರಾಜ್ಯದಲ್ಲಿ ಮಕ್ಕಳು ಆಡುವುದಕ್ಕೂ ಕೂಡ ಇಟ್ಟುಕೊಂಡಿರುವರು. ಸ್ವರ್ಗದಲ್ಲಿರುವ ಅಪ್ಸರಸ್ತ್ರೀಯರಲ್ಲಿ ತಿಲೋತ್ತಮೆಯು ಬಹು ಸುಂದರಿಯೆಂದೂ ಶ್ರೇಷ್ಠಳೆಂದೂ ಹೇಳುತ್ತಾರೆ.

೭೮. ಈ ರಾಮರಾಜ್ಯದಲ್ಲಿ ಮನೆಮನೆಯಲ್ಲಿಯೂ ಇರುವ ಹೆಂಗಸರೆಲ್ಲ ಅಂತಹ ತಿಲೋತ್ತಮೆಯರೇ ಆಗಿರುವರು. ಅವರು ಯಾವಾಗಲೂ ಚಿನ್ನದ ಒಡವೆಗಳನ್ನು ತೊಟ್ಟುಕೊಂಡು ಕಾಲುಬಳೆಗಳನ್ನು ಝುಲ್ಲೆಂದು ಶಬ್ದ ಮಾಡುತ್ತಲೇ ಇರುವರು.

೭೯. ಸ್ವರ್ಗದಲ್ಲಿ ಸಹಸ್ರಾಕ್ಷನು [ಇಂದ್ರನು] ಒಬ್ಬನೇ ಇರುವನೆಂದು ಹೇಳುವರು. ಈ ರಾಮರಾಜ್ಯದಲ್ಲಿ ಚಾಮರಗಳೆಲ್ಲವೂ ಸಹಸ್ರಾಕ್ಷಗಳೇ ಆಗಿವೆ. ಅವೂ ಕೂಡ ಲೆಕ್ಕವಿಲ್ಲದಷ್ಟು ಇರುವುವು. [ಚಾಮರಗಳನ್ನು ನವಿಲು ಗರಿಯಿಂದ ಮಾಡಿರುವರು. ಅವುಗಳಲ್ಲಿ ನವಿಲು ಗರಿಯ ಕಣ್ಣುಗಳು ಬಹುವಾಗಿರುವುವು.]

ಸುಧಾಪಾನಂ ತ್ವೇಕಮೇವ ಸ್ವರ್ಗೇಽಸ್ತಿ ಪರಮಂ ವರಂ ।
ತದ್ವನ್ನಾನಾರಸಾನಾಂ ಚ ಪಾನಮತ್ರ ಗೃಹೇ ಗೃಹೇ ॥ ೮೦ ॥

ಸುಧಾಪಾನೇನ ಸಂಹೃಷ್ಟಾ ಯಥಾ ಸ್ವರ್ಗೇ ಸುರೋತ್ತಮಾಃ ।
ದಯಿತಾಧರ ಪಾನೇನ ತಥಾತ್ರ ಸುಖಿನೋ ಜನಾಃ ॥ ೮೧ ॥

ಸಾಗರೇಷ್ವೇವ ಸಾ ದೃಷ್ಟಾ ಮರ್ಯ್ಯಾದಾ ಸರ್ವದಾ ನರೈಃ ।
ರಾಮರಾಜ್ಯೇಽತ್ರ ಬಾಲೇಷು ಮರ್ಯ್ಯಾದಾ ಸರ್ವದೇಕ್ಷ್ಯತೇ ॥ ೮೨ ॥

ವಿಚರಂತಿ ಗಜಾರೂಢಾಃ ಶ್ರೂಯಂತೇ ಪಾರ್ಥಿವಾಃ ಪುರಾ ।
ಪೌರಾಜಾನಪದಾಸ್ಸರ್ವೇ ವಿಚರಂತ್ಯತ್ರ ತೇ ಗಜೈಃ ॥ ೮೩ ॥

---

೮೦. ಸ್ವರ್ಗದಲ್ಲಿರುವ ಪಾನವು ಎಂದರೆ ಕುಡಿಯುವ ಪದಾರ್ಥವು ಅಮೃತಪಾನವೊಂದೇನೆ. ಅದೇ ಉತ್ತಮವಾದುದೆಂದು ಅವರು ಹೇಳುವರು. ಈ ರಾಮರಾಜ್ಯದಲ್ಲಿಯಾದರೋ ಮನೆಮನೆಯಲ್ಲಿಯೂ ನಾನಾ ಬಗೆಯ ಪಾನ ಗಳಿರುವುವು.

೮೧. ದೇವತೆಗಳು ಸ್ವರ್ಗದಲ್ಲಿ ಅಮೃತಪಾನವನ್ನು ಮಾಡಿ ತೃಪ್ತರಾಗಿರುವರು. ಈ ರಾಮರಾಜ್ಯದಲ್ಲಿ ಜನರು ತಮ್ಮ ತಮ್ಮ ದಯಿತೆಯರ (ಹೆಂಡತಿಯರ) ಅಧರಾಮೃತವನ್ನು ಪಾನಮಾಡಿ ಸುಖವಾಗಿರುವರು.

೮೨ ಜನಗಳು ಸಾಗರವೊಂದರಲ್ಲಿಯೇ ಯಾವಾಗಲೂ ಮರ್ಯ್ಯಾದೆ [ಎಲ್ಲೆ] ಯನ್ನು ಮೀರದಿವುದನ್ನು ನೋಡಿರುವರು. ಈ ರಾಮರಾಜ್ಯದಲ್ಲಿಯಾದರೋ ಮಕ್ಕಳಲ್ಲಿಯೂ ಕೂಡ ಯಾವಾಗಲೂ ಮರ್ಯ್ಯಾದೆ (ಗೌರವ)ವನ್ನು ಮೀರದಿರುವುದನ್ನು ನೋಡಬಹುದು.

೮೩. ಹಿಂದಿನ ಕಾಲದಲ್ಲಿ ರಾಜರು ಆನೆಯ ಮೇಲೆ ಸಂಚರಿಸುತ್ತಿದ್ದರು. ಎಂದು ಕೇಳಿದ್ದೇವೆ. ರಾಮರಾಜ್ಯದಲ್ಲಿ ಪ್ರಜೆಗಳೆಲ್ಲರೂ ಆನೆಯಮೇಲೆಯೇ ಸುತ್ತುವರು. [ಶೃಂಗಾರವುಳ್ಳವರಾಗಿ ವಿಹರಿಸುವರು.]

ಪೂರ್ವಂ ಶ್ರುತಂ ಶಿಶೂನಾಂ ಹಿ ಚುಂಬನಂ ದಿವಸೇ ಮುಹುಃ ।
ರಾಮರಾಜ್ಯೇ ನಿಶಂ ನಾರೀ ಚುಂಬನಾನಿ ಮುಹುರ್ಮುದಾ ॥ ೭೪ ॥

ಕ್ರೀಡಾಪರಿಮಳದ್ರವ್ಯೈಃ ಫಾಲ್ಗುನೇ ಸಾ ಶ್ರುತಾ ಪುರಾ ।
ಕ್ರೀಡಾಂ ಪರಿಮಳದ್ರವ್ಯೈಃ ಪೌರಾಶ್ಚಕ್ರುಸ್ಸದಾತ್ರ ತೇ ॥ ೭೫ ॥

ಏವಂ ತದ್ರಾಮರಾಜ್ಯಂ ಹಿ ಮಹಾಮಂಗಳಸಂಯುತಂ ।
ಆಸೀದನುಪಮೇಯಂ ಚ ಶ್ರವಣಾನ್ಮಂಗಳಪ್ರದಂ ॥ ೭೬ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಉತ್ತರಾರ್ಧೇ ರಾಮರಾಜ್ಯ ವರ್ಣನಂ ನಾಮ ಪಂಚದಶಸ್ಸರ್ಗಃ ಸಮಾಪ್ತಃ

---

೭೪. ಪೂರ್ವದಲ್ಲಿ ಮಕ್ಕಳನ್ನು ಹಗಲಿನಲ್ಲಿ ಆಗಾಗ್ಗೆ ಚುಂಬಿಸು [ಮುತ್ತಿಡು] ತ್ತಿದ್ದರೆಂದು ಕೇಳಬಲ್ಲೆವು. ಈ ರಾಮರಾಜ್ಯದಲ್ಲಿ ನಾರಿಯರನ್ನು ಪದೇ ಪದೇ ಚುಂಬಿಸುತ್ತಿದ್ದರು.

೭೫. ಫಾಲ್ಗುಣ ಮಾಸದಲ್ಲಿ ಪರಿಮಳ ದ್ರವ್ಯಗಳಿಂದ ಆಟವಾಡುತ್ತ ವಸಂತೋತ್ಸವವು ನಡೆಯುವುದನ್ನು ಕೇಳಿದ್ದೆವು. ಈ ರಾಮರಾಜ್ಯದಲ್ಲಿ ಪೌರರು ಯಾವಾಗಲೂ ಪರಿಮಳ ದ್ರವ್ಯಗಳಿಂದ ಕ್ರೀಡೆಯನ್ನು ಆಡುತ್ತಿರುವರು.

೭೬. ಈ ರೀತಿಯಾಗಿ ಆ ರಾಮಜ್ಯವು ಬಹುವಾದ ಮಂಗಳದಿಂದ ಕೂಡಿಕೊಂಡಿರುವುದನ್ನು ಹೋಲಿಸಲು ಮತ್ತೊಂದೂ ಅದರಂತ್ತಿಲ್ಲವೇ ಇಲ್ಲ. ಇದನ್ನು ಕೇಳುವುದರಿಂದಲೇ ಮಂಗಳವು ಉಂಟಾಗುವುದು.

ಇಂತು ಶ್ರೀ ವಾಲ್ಮೀಕಿ ರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀ ಮದಾನಂದ ರಾಮಾಯಣದಲ್ಲಿ ರಾಜ್ಯಕಾಂಡದಲ್ಲಿ ಉತ್ತರಾರ್ಧದಲ್ಲಿ ರಾಮರಾಜ್ಯವರ್ಣನವೆಂಬ ಹದಿನೈದನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಹದಿನೈದನೆಯ ಸರ್ಗದ ಸಾರಾಂಶವು

ಶ್ರೀ ರಾಮನು ರಾಜ್ಯವನ್ನು ಆಳುತ್ತಿರಲು ಎಲ್ಲರೂ ಆನಂದದಿಂದಿದ್ದರು. ಶತ್ರುಗಳ ಹೆಸರೇ ಇರಲಿಲ್ಲ. ಭೂಮಿಯು ಸಸ್ಯಸಮೃದ್ಧವಾಗಿದ್ದುದು. ಜನರು ರೋಗರುಜಿನಗಳಿಲ್ಲದೆ ದೃಢಕಾಯರಾಗಿ ಸಂಪತ್ತಿನಿಂದ ಕೂಡಿದ್ದರು. ಆ ರಾಮನು ಅಯೋಧ್ಯೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅದರ ಸುತ್ತಲೂ ಯಥೋಚಿತವಾಗಿ ಅಗಳನ್ನು ತೋಡಿಸಿ ಕೋಟೆಗಳನ್ನು ಕಟ್ಟಿಸಿದ್ದನು. ಅವನು ಪ್ರಪಂಚಕ್ಕೆಲ್ಲವೂ ಚಕ್ರವರ್ತಿಯಾಗಿ ಹಣದಲ್ಲಿ ಕುಬೇರನಾಗಿದ್ದನು. ಮನುಷ್ಯರಿಗೆ ಸಹಜ ಶತ್ರುಗಳಾದ ರಾಕ್ಷಸರೂ ಕೂಡ ತಮ್ಮಲ್ಲಿ ಕ್ರೂರವಾದ ಆಕಾರವನ್ನು ಬಿಟ್ಟು ಮನುಷ್ಯರಂತಿರುತ್ತ ಆ ರಾಮನನ್ನು ಸೇವಿಸುತ್ತಿದ್ದರು. ಪ್ರಜೆಗಳು ಒಬ್ಬರನ್ನೊಬ್ಬರು ದ್ವೇಷಿಸುತ್ತಿರಲಿಲ್ಲ, ಆಪತ್ತು ಕಾಲಿಡುತ್ತಿರಲೇ ಇಲ್ಲ. ಪ್ರಜೆಗಳನ್ನು ಆ ರಾಮನು ರಂಜಿಸುತ್ತ ಅವರನ್ನು ಅಧರ್ಮಕ್ಕೆ ಬಿಡದೆ ಧರ್ಮವನ್ನು ಮಾಡುವಂತೆ ಪ್ರೇರಿಸುತ್ತಲಿದ್ದನು. ಸೀತೆಯೂ ಕೂಡ ಪತಿಪರಾಯಣೆಯಾಗಿದ್ದಳು. ರಾಮನು ಆಕೆಯನ್ನು ಬಹುವಾಗಿ ರಂಜಿಸುತ್ತಿದ್ದನು. ಅವನ ರಾಜ್ಯದಲ್ಲಿ ಪ್ರಜೆಗಳು ತಮ್ಮ ತಮ್ಮ ಮತಧರ್ಮಗಳನ್ನೂ ಆಶ್ರಮ ಧರ್ಮಗಳನ್ನೂ ಬಿಡದೆ ಬ್ರಹ್ಮಚರ್ಯವನ್ನು ಕಾಪಾಡಿಕೊಂಡಿರುತ್ತಿದ್ದರು. ರಾಮನು ರಾಜ್ಯಭಾರವನ್ನು ಮಾಡುತ್ತಿದ್ದಾಗ ಷಂಡರಾಗಲಿ ಭಂಡರಾಗಲಿ ಇರುತ್ತಿರಲಿಲ್ಲ. ಎಲ್ಲೆಲ್ಲಿ ನೋಡಿದರೂ ವಿದ್ವತ್ತಿನಿಂದ ಕೂಡಿದ ಸಂತೋಷಕರವಾದ ಮಾತುಗಳ ಹೊರತು ದಡ್ಡತನದಿಂದ ಕೂಡಿದ್ದುದಾಗಲಿ ದೈನ್ಯದಿಂದ ಕೂಡಿದ್ದಾಗಲಿ ಇರುವವಕಾತೇ ಇರಲಿಲ್ಲ. ಎಲ್ಲಾ ಕಡೆಯಲ್ಲಿಯೂ ಯಾಗಗಳು ನಡೆಯುತ್ತಿದ್ದುವು. ಮಾಂಸಾಹಾರವು ನಿಷಿದ್ಧವಾಗಿದ್ದಿತು. ಕಳ್ಳಕಾಕರ ಭೀತಿ ಇರಲಿಲ್ಲ. ತಾಯಿತಂದೆಗಳ ಪಾದಪೂಜೆಯೇ ಮಗನಿಗೆ ದೇವರ ಪೂಜೆಯಾಗಿದ್ದಿತು. ಹೆಂಡತಿಯರು ಗಂಡನ ಸೇವೆಯನ್ನು ಮಾಡುವಿಕೆಯೇ ಅವರಿಗೆ ಎಲ್ಲಾ ವ್ರತಗಳೂ ಆಗಿರುತ್ತಿದ್ದುವು. ಚಿಕ್ಕವರು ದೊಡ್ಡವರ ವಿಷಯದಲ್ಲಿಯೂ ದೊಡ್ಡವರು ಚಿಕ್ಕವರ ವಿಷಯದಲ್ಲಿಯೂ ಯಾವ ರೀತಿಯ ಧರ್ಮದಿಂದ ಇರಬೇಕೋ ಅದೇ ರೀತಿಯಲ್ಲಿ ನಡೆಯುತ್ತಿದ್ದರು. ವಿದ್ವಾಂಸರಿಗೆ ಎಲ್ಲಾ ಕಡೆಯಲ್ಲಿಯೂ ಯಾವಾಗಲೂ ಗೌರವವು ದೊರಕುತ್ತಿದ್ದಿತು. ಆ ರಾಮನ ರಾಜ್ಯದಲ್ಲಿ ಹುಟ್ಟುವ ಪ್ರಜೆಗಳು ಅಂಗಹೀನರಾಗಿರದೆ ಸುಂದರರಾಗಿ ಹುಟ್ಟುತ್ತಿದ್ದರು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ

ಷೋಡಶಸ್ಸರ್ಗಃ

॥ ಶ್ರೀ ರಾಮದಾಸ ಉವಾಚ ॥

ಏಕದಾ ರಾಘವಶ್ಶ್ರೀಮಾನ್ ಸಮಾಹೂಯ ಕುಶಂ ಲವಂ ।
ಲಕ್ಷ್ಮಣಂ ಭರತಂ ಚಾಪಿ ಶತ್ರುಘ್ನಂ ರಹಸಿ ಸ್ಥಿತಃ ॥ ೧ ॥

ರಾಜನೀತಿಂ ವಿಸ್ತರೇಣ ಶಿಕ್ಷಯಾಮಾಸ ಸಾದರಂ ।
ಶೃಣು ವತ್ಸ ಕುಶಾದ್ಯ ತ್ವಂ ಯೂಯಂ ಸರ್ವೇ ಲವಾದಿಕಾಃ ॥ ೨ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ

ಹದಿನಾರನೆಯ ಸರ್ಗವು

೧. ಶ್ರೀರಾಮನು ಹೇಳಿದನು-ಹೀಗಿರಲು ಒಂದುಸಾರಿ ಶ್ರೀಮಂತನಾದ ರಾಮನು ಲವನನ್ನೂ ಲಕ್ಷ್ಮಣ, ಭರತ, ಶತ್ರುಘ್ನರನ್ನೂ ಕರೆದು ಅವರನ್ನು ರಹಸ್ಯಪ್ರದೇಶದಲ್ಲಿ ಕೂರಿಸಿ ಒಬ್ಬರೂ ಒಳಗೆ ಬರದಂತೆ ಕಾವಲುಗಾರನನ್ನಿಟ್ಟು ಕುಳಿತುಕೊಂಡನು. ಅಲ್ಲಿಗೆ ತನ್ನ ಮಕ್ಕಳೂ ತಮ್ಮಂದಿರ ಮಕ್ಕಳೂ ಬಂದಿದ್ದರು.

೨. ಆಗ ರಾಮನು ರಾಜನೀತಿಯನ್ನು ವಿಶ್ವಾಸಪೂರ್ವಕವಾಗಿ ಎಲ್ಲರಿಗೂ ಹೇಳಿದನು. ಎಲೈ ವತ್ಸನಾದ ಕುಶನೇ ! ನೀನು ಈಗ ಕೇಳು. ಲವನೇ ಮುಂತಾದ ಬಾಲಕರಿರಾ ! ನೀವೂ ಕೇಳಿರಿ.

ಶೃಣುತಾತ್ರ ಸ್ವಸ್ಥಚಿತ್ತಾ ರಾಜನೀತಿಂ ವದಾಮ್ಯಹಂ ।
ಕುಶ ತ್ವಂ ಪೃಥಿವೀಪಾಲೋ ಭವಿಷ್ಯಸಿ ಗತೇ ಮಯಿ । ॥ ೩ ॥

ವೈಕುಂಠಂ ಶೃಣು ತಸ್ಮಾತ್ತ್ವಂ ಸಾವಧಾನಮನಾ ಭವ ।
ಅನೃತಂ ನೈವ ವಕ್ತವ್ಯಂ ನೃಪೇಣ ಚಿರಜೀವಿನಾ ॥ ೪ ॥

ನಾತಿಕಾಮೀ ನ ವೈ ಕ್ರೋಧೀ ರಾಜಾ ಸ ಸುಖಮರ್ಹತಿ ।
ಪರದಾರರತಿಸ್ತ್ಯಾಜ್ಯಾ ಸರ್ವಥಾ ಪಾರ್ಥಿವೇನ ಹಿ ॥ ೫ ॥

ಸತ್ಯಂ ಶೌಚಂ ದಯಾ ಕ್ಷಾಂತಿರಾರ್ಜವಂ ಮಧುರಂ ವಚಃ ।
ದ್ವಿಜಗೋಯತಿಸದ್ಭಕ್ತಿಸ್ಸಪ್ತೈತೇ ಶುಭದಾ ಗುಣಾಃ ॥ ೬ ॥

ನಿದ್ರಾಲಸ್ಯಂ ಮದ್ಯಪಾನಂ ದ್ಯೂತಂ ವಾರಾಂಗನಾ ರತಿಃ ।
ಅತಿಕ್ರೀಡಾತಿಮೃಗಯಾ ಸಪ್ತ ದೋಷಾ ನೃಪಸ್ಯ ಚ ॥ ೭ ॥

---

೩. ಎಲ್ಲರೂ ಕೂಡ ಏಕಮನಸ್ಸಿನಿಂದ ಕೇಳಿರಿ. ನಿಮಗೆ ರಾಜನೀತಿಯನ್ನು ಹೇಳುತ್ತೇನೆ. ಎಲೈ ಕುಶನೇ! ನಾನು ವೈಕುಂಠಕ್ಕೆ ಹೊರಟು ಹೋದಮೇಲೆ ನೀನೇ ರಾಜನಾಗುತ್ತೀಯೆ.

೪-೫. ಆದ್ದರಿಂದ ನೀನು ಸ್ಥಿರಮನಸ್ಸಿನಿಂದ ಕೇಳಬೇಕು. ಬಹುಕಾಲ ಬದುಕುವವರು ಸುಳ್ಳನ್ನೇ ಹೇಳಬಾರದು. ಬಹುವಾಗಿ ಕಾಮಿಯೂ ಕೋಪಿಯೂ ಆಗಬಾರದು. ಅಂತಹ ರಾಜನೇ ಸುಖಿಯಾಗುವನು. ರಾಜನಾದವನು ಪರರ ಹೆಂಡಿರಲ್ಲಿ ರಮಿಸುವುದನ್ನು ಬಿಟ್ಟು ಬಿಡಬೇಕು.

೬. ಸತ್ಯ, ಶೌಚ, ದಯೆ, ಕ್ಷಾಂತಿ, ಋಜುತನ ಮಧುರವಾದ ಮಾತು. ಬ್ರಾಹ್ಮಣರಲ್ಲಿಯೂ ಗೋವುಗಳಲ್ಲಿಯೂ ಯತಿಗಳಲ್ಲಿಯೂ ಭಕ್ತಿಯನ್ನಿಡುವುದು. ಇವು ರಾಜನಿಗೆ ಮಂಗಳಕರವಾದ ಗುಣಗಳು.

೭. ನಿದ್ರೆ, ಸೋಮಾರಿತನ, ಮದ್ಯಪಾನ, ಜೂಜು ಸೂಳೆಯರ ಸಂಗ ಬಹುವಾಗಿ ಆಟವಾಡುವುದು ಬಹುವಾಗಿ ಬೇಟೆಮಾಡುವುದು ಇವೇಳೂ ರಾಜನಿಗೆ ಇರುವ ದೋಷಗಳು.

ಪುತ್ರವತ್ಪಾಲನೀಯಾಶ್ಚ ಪ್ರಜಾ ನೃಪತಿನಾ ಭುವಿ ।
ಷಷ್ಠಾಂಶಃ ಕರಭಾರಶ್ಚ ರಾಜ್ಞಾ ಗ್ರಾಹ್ಯಸ್ಸದೈವ ಹಿ ॥ ೮ ॥

ಜ್ಞೇಯಂ ಚಾರೈಸ್ಸದಾ ವೃತ್ತಂ ಪೃಥಿವ್ಯಾಃ ಪಾರ್ಥಿವೇನ ವೈ ।
ಪರರಾಷ್ಟ್ರೇ ಸದಾ ದೂತಾ ನಾನಾವೇಷ ವಿರೂಪಿತಾಃ ॥ ೯ ॥

ಪಂಚ ಪಂಚಾಥವಾ ದ್ವೌ ದ್ವೌ ಪ್ರೇಷಣೀಯಾ ನೃಪೇಣ ಹಿ ।
ನ ವಿಶ್ವಸೇತ್ಪಾರಕೀಯಜನೇ ದೂತೇ ನೃಪೋತ್ತಮಃ ॥ ೧೦ ॥

ದಂಡೋ ಭೇದಸ್ತಥಾ ಸಾಮ ದಾನಂ ಕಾಲೋಚಿತಂ ಚರೇತ್ ।
ಸ್ವಕಾರ್ಯಂ ಸಾಧಯೇದ್ಯುಕ್ತ್ಯಾ ಕಾಲೇ ಪ್ರಾಪ್ತೇ ನೃಪೋತ್ತಮಃ ॥ ೧೧ ॥

ಮನಸಾ ಚಿಂತಿತಂ ಕಾರ್ಯಂ ಕಥನೀಯಂ ನ ಕಸ್ಯಚಿತ್ ।
ಕೃತ್ವಾ ಕಾರ್ಯಂ ದರ್ಶನೀಯಂ ಜನಾನ್ಮಂತ್ರಿಜನಾನಪಿ ॥ ೧೨ ॥

---

೮. ರಾಜನಾದವನು ಮಕ್ಕಳಂತೆ ಪ್ರಜೆಗಳನ್ನು ಕಾಪಾಡಬೇಕು. ಅವನು ಯಾವಾಗಲೂ ಬೆಳೆದುದರಲ್ಲಿ ಆರನೆಯ ಒಂದು ಭಾಗವನ್ನು ಕಂದಾಯವನ್ನಾಗಿ ತೆಗೆದುಕೊಳ್ಳಬೇಕು.

೯-೧೦. ರಾಜನಾದವನು ಚಾರರ ಮುಖದಿಂದ ರಾಜ್ಯದ ವಿಷಯವನ್ನು ತಿಳಿದುಕೊಳ್ಳಬೇಕು. ದೂತರಿಗೆ ಬೇರೆಬೇರೆ ವೇಷವನ್ನು ಹಾಕಿಸಿ ಐದುಐದು ಜನರನ್ನಾಗಲಿ, ಇಬ್ಬಿಬ್ಬರನ್ನಾಗಲಿ, ಪರರಾಷ್ಟ್ರಗಳಿಗೆ ಕಳುಹಿಸಬೇಕು. ತನ್ನ ದೇಶಕ್ಕೆ ಬಂದ ಪರದೇಶದ ದೂತನು ಎಂಥಹವನಾದರೂ ನಂಬಬಾರದು.

೧೧. ಸಾಮದಾನ ಭೇದದಂಡಗಳೆಂಬ ನೀತಿಯನ್ನು ಕಾಲಕ್ಕನುಗುಣವಾಗಿ ಆಚರಿಸಬೇಕು. ರಾಜನಾದವನು ತನ್ನ ಕೆಲಸವನ್ನು ಸಮಯ ಬಂದ ಕಾಲಕ್ಕೆ ತಕ್ಕಂತೆ ಯುಕ್ತಿಯಿಂದ ಸಾಧಿಸಿಕೊಳ್ಳಬೇಕು.

೧೨. ಮನಸ್ಸಿನಲ್ಲಿ ಯೋಚಿಸಿಕೊಂಡ ಕೆಲಸವನ್ನು ಒಬ್ಬರಿಗೂ ಹೇಳಬಾರದು. ಆ ಕೆಲಸವನ್ನು ಮಾಡಿದಮೇಲೆ ಜನರಿಗೂ ಮಂತ್ರಿಗಳಿಗೂ ತಿಳಿಯಬೇಕು.

ಮಾಸೇ ಮಾಸೇ ಸ್ವಕೋಶಸ್ಯ ಪರಾಮರ್ಶೋ ನೃಪೋತ್ತಮೈಃ ।
ಗೃಹಣೀಯಸ್ಸರ್ವದೈವ ವಿಶ್ವಸೇತ್ಸೇವಕೇಷು ನ ॥ ೧೩ ॥

ವರ್ಷೇ ವರ್ಷೇ ನಗರ್ಯಾಶ್ಚ ಪ್ರಾಕಾರಾಶ್ಚ ನೃಪೋತ್ತಮೈಃ ।
ಪರಿಖಾನಾಂ ಪರಾಮರ್ಶಃ ಕಾರ್ಯೋ ಮಂತ್ರಿಜನೈಸ್ಸಹ ॥ ೧೪ ॥

ಚತುರ್ಮಾಸೇಷು ಸರ್ವೇಷಾಂ ಮಾರ್ಗಾಣಾಂ ಪಾರ್ಥಿವೋತ್ತಮೈಃ ।
ಪರಾಮರ್ಶಸ್ಸದಾ ಕೋಷ್ಠಾಗಾರಾದೀನಾಂ ಪ್ರಕಾರಯೇತ್ ॥ ೧೫ ॥

ಪಕ್ಷೇ ಪಕ್ಷೇ ವಾರಣಾನಾಂ ಕುರಂಗಾಣಾಂ ತಥಾಷ್ಟಭಿಃ ।
ದಿವಸೈರ್ಮಾಸಮಾತ್ರೇಣ ವಸ್ತ್ರಾಣಾಂ ಪಾರ್ಥಿವೋತ್ತಮೈಃ ॥ ೧೬ ॥

ಪರಾಮರ್ಶಸ್ಸದಾ ಕಾರ್ಯಃ ಪಿಕಾದೀನಾಂ ತ್ರಿಭಿರ್ದಿನೈಃ ।
ಸೀಮಾಚಾರಜನಾನಾಂ ಚ ಷಣ್ಮಾಸೈಶ್ಚ ನೃಪೋತ್ತಮೈಃ ॥ ೧೭ ॥

---

೧೩. ರಾಜರಾದವರು ತಿಂಗಳು ತಿಂಗಳಿಗೂ ಹೋಗಿ ಭಂಡಾರವನ್ನು ಪರೀಕ್ಷಿಸಿ ನೋಡಬೇಕು. ವಿಷಯವನ್ನು ಮಾತ್ರ ಯಾವಾಗಲೂ ತಿಳಿದುಕೊಳ್ಳ ಬೇಕು. ಸೇವಕರಲ್ಲಿ ನಂಬಿಕೆ ಇಡಬಾರದು.

೧೪. ರಾಜರಾದವರು ಪ್ರತಿವರ್ಷವೂ ಕೋಟೆಗಳನ್ನು ಸರಿಪಡಿಸುತ್ತ ಭದ್ರಪಡಿಸಬೇಕು. ಅಗಳುಗಳನ್ನು ಸರಿಪಡಿಸಬೇಕು. ಮಂತ್ರಿಜನರನ್ನು ಇದಕ್ಕೆ ನೆರವಾಗಿ ಇಟ್ಟುಕೊಳ್ಳಬೇಕು.

೧೫–೧೬. ರಾಜರಾದವರು ನಾಲ್ಕುತಿಂಗಳಿಗೊಂದಾವರ್ತಿ ಮಾರ್ಗಗಳನ್ನು ಸರಿಪಡಿಸಬೇಕು. ಮತ್ತು ಉಗ್ರಾಣವನ್ನೂ ಮನೆಗಳನ್ನೂ ವಿಚಾರಿಸಿ ಸರಿಪಡಿಸು ತ್ತಿರಬೇಕು. ಹದಿನೈದು ದಿನಕ್ಕೊಮ್ಮೆ ರಥವನ್ನೂ ಎಂಟುದಿನಕ್ಕೊಮ್ಮೆ ಕುದುರೆಗಳನ್ನೂ ತಿಂಗಳಿಗೊಂದುಬಾರಿ ವಸ್ತ್ರಗಳ ಭಂಡಾರವನ್ನೂ ನೋಡುತ್ತಿರ ಬೇಕು.

೧೭. ಮೂರುದಿನಕ್ಕೊಮ್ಮೆ ಕೋಗಿಲೆ ಮುಂತಾದ ಪಕ್ಷಿಗಳನ್ನು ಪರೀಕ್ಷಿಸು ತ್ತಿರಬೇಕು. ಎಲ್ಲೆಯ ಕೊನೆಯಲ್ಲಿರುವವರನ್ನು ಆರುತಿಂಗಳಿಗೊಂದಾವರ್ತಿ ಪರೀಕ್ಷಿಸಬೇಕು.

ಪರಾಮರ್ಶಸ್ಸದಾ ಕಾರ್ಯಸ್ತಥಾ ಜಾನಪದಸ್ಯ ಚ ।
ಮಾಸೇ ಮಾಸೇ ಸ್ವಸೈನ್ಯಸ್ಯಂ ವಾಪೀನಾಮಯನೇನ ಹಿ ॥ ೧೮ ॥

ಕಾರ್ಯಃ ಪುಷ್ಪವಾಟಿಕಾನಾಂ ಮಾಸೇ ಮಾಸೇ ನೃಪೋತ್ತಮೈಃ ।
ಪರಾಮರ್ಶಸ್ಸ್ವಯಂ ಗತ್ವಾ ಥವಾ ಮಂತ್ರಿಜನೋತ್ತಮೈಃ ॥ ೧೯ ॥

ವರ್ಷೇ ವರ್ಷೇ ಸಮುದ್ಯೋಗಷ್ಷಣ್ಮಾಸೈರಥವಾ ಸ್ತ್ರಿಭಿಃ ।
ಮಾಸೈಃ ನೃಪೇಣ ಸ್ವೇ ರಾಷ್ಟ್ರೇ ಕಾರ್ಯಸ್ಸೈನ್ಯೇನ ಮಂತ್ರಿಭಿಃ ॥ ೨೦ ॥

ದೇವಾನಾಂ ಬ್ರಾಹ್ಮಣಾನಾಂ ಚ ಗುರೂಣಾಂ ಯತಿನಾಂ ತಥಾ ।
ಅಸಂತೋಷೋ ನೈವ ಕಾರ್ಯಃ ಪಾರ್ಥಿವೇನ ಕದಾಪಿ ಹಿ ॥ ೨೧ ॥

ದ್ರವ್ಯಾದಾಯಸ್ಸದಾ ಪಶ್ಯೇತ್ಸ್ವವ್ಯಯಂ ತು ನಿರೀಕ್ಷಯೇತ್ ।
ಆದಾಯಸ್ಯ ಚತುರ್ಥಾಂಶೈಃ ವ್ಯಯಃ ಕಾರ್ಯೋ ನೃಪೋತ್ತಮೈಃ ॥ ೨೨ ॥

---

೧೮. ಅಂತೆಯೇ ಪ್ರಜೆಗಳನ್ನು ಆರುತಿಂಗಳಿಗೊಂದಾವರ್ತಿ ನೋಡಬೇಕು. ಸೈನ್ಯವನ್ನು ತಿಂಗಳು ತಿಂಗಳಿಗೂ ಪರೀಕ್ಷಿಸಬೇಕು. ಕೊಳಗಳನ್ನೂ ಬಾವಿಗಳನ್ನೂ ಆರುತಿಂಗಳಿಗೊಂದು ಸಲ ಪರೀಕ್ಷಿಸಬೇಕು.

೧೯. ತಿಂಗಳು ತಿಂಗಳಿಗೂ ಹೋಗಿ ಹೂದೋಟವನ್ನು ಪರೀಕ್ಷಿಸಬೇಕು. ಹೂದೋಟಗಳಿಗೆ ರಾಜನಾದವನು ತಾನೇ ಹೋಗಬೇಕು. ಅದಾಗದಿದ್ದರೆ ಮಂತ್ರಿಗಳನ್ನಾದರೂ ಕಳುಹಿಸಬೇಕು

೨೦. ರಾಜನಾದವನು ಸೈನ್ಯಗಳನ್ನೂ ಮಂತ್ರಿಗಳನ್ನೂ ಜೊತೆಯಲ್ಲಿ ಕರೆದುಕೊಂಡು ಮೂರುತಿಂಗಳಿಗೊಂದಾವರ್ತಿಯಾಗಲಿ ಅಥವಾ ಆರು ತಿಂಗಳಿಗೊಂದಾವರ್ತಿಯಾಗಲಿ ಇಲ್ಲದಿದ್ದರೆ ವರ್ಷಕ್ಕೊಂದಾವರ್ತಿಯಾಗಲಿ ರಾಜ್ಯದಲ್ಲಿ ಸಂಚಾರಮಾಡಿ ಪರೀಕ್ಷಿಸುತ್ತಿರಬೇಕು.

೨೧. ರಾಜನಾದವನು ದೇವತೆಗಳಿಗಾಗಲೀ ಬ್ರಾಹ್ಮಣರಿಗಾಗಲೀ ಯತಿಗಳಿಗಾಗಲೀ ಯಾವರೀತಿಯಲ್ಲಿಯೂ ಯಾವಾಗಲೂ ಅಸಂತೋಷವನ್ನುಂಟುಮಾಡಬಾರದು.

೨೨. ದ್ರವ್ಯದ ಆದಾಯ ಬರುವಂತೆ ಯಾವಾಗಲೂ ನೋಡುತ್ತಿರಬೇಕು. ತನ್ನ ಖರ್ಚನ್ನು ನೋಡಿಕೊಳ್ಳುತ್ತಿರಬೇಕು. ತನಗೆ ಆದಾಯವೆಷ್ಟು ಬರುವುದೋ ಅದರ ಕಾಲುಭಾಗವನ್ನು ರಾಜನಾದವನು ಖರ್ಚು ಮಾಡಬೇಕು.

ತೃತೀಯಾಂಶೇನ ವಾ ಕಾರ್ಯಸ್ತ್ವರ್ಧಾಂಶೇನ ಕದಾಪಿ ನ ।
ಇಷ್ಟಾಃ ಕಾರ್ಯಾ ಮಂತ್ರಿಣಶ್ಚ ನಾತಿಕೋಪಂ ಸಮಾಚರೇತ್ ॥ ೨೩ ॥

ನಾತಿಮಾನ್ಯಾ ಮಂತ್ರಿಣಶ್ಚ ವರ್ಧನೀಯಾ ಕದಾಪಿ ಚ ।
ನ ವಿರೋಧ್ಯಾಃ ಕದಾ ರಾಜ್ಞಾ ದುರ್ಗಪಾಲಾಸ್ತಥೈವ ತೇ ॥ ೨೪ ॥

ಆಕರಾಣಾಂ ಪಟ್ಟಣಾನಾಂ ದುರ್ಗಾಣಾಂ ಗಿರಿವಾಸಿನಾಂ ।
ಅರಣ್ಯವಾಸಿನಾಂ ನಿಂದಾವುಪದ್ವೀಪನಿವಾಸಿನಾಂ ॥ ೨೫ ॥

ಸಿಂಧುತೀರಸ್ಥಿತಾನಾಂ ಚ ನಾನಾದೇಶನಿವಾಸಿನಾಂ ।
ವರ್ಷಾಂತರಸ್ಥಿತಾನಾಂ ಚ ದ್ವೀಪಾಂತರನಿವಾಸಿತಾಂ ॥ ೨೬ ॥

ದ್ವೀಪೇ ದ್ವೀಪೇ ಪೃಥಗ್ವರ್ಷವಾಸಿನಾಂ ಪಾರ್ಥಿವೋತ್ತಮೈಃ ।
ಪರಾಮರ್ಶಸ್ಸದಾ ಕಾರ್ಯಶ್ಚಾರೈಃ ಪಕ್ಷಾಂತರೇಣ ಹಿ ॥ ೨೭ ॥

---

೨೩. ಆ ರೀತಿಯಲ್ಲಿ ಸಾಲದಿದ್ದರೆ ಮೂರನೆಯ ಒಂದುಭಾಗವನ್ನು ಉಪಯೋಗಿಸಿಕೊಳ್ಳಬೇಕು. ಅರ್ಧ ಭಾಗವನ್ನು ಖರ್ಚುಮಾಡಲೇಬಾರದು. ಮಂತ್ರಿಗಳು ಅಪೇಕ್ಷಿಸಿದುದನ್ನು ನೆರವೇರಿಸಿಕೊಡಬೇಕು. ಅವರ ಮೇಲೆ ಅತಿಕೋಪವನ್ನು ಮಾಡಬಾರದು.

೨೪. ಮಂತ್ರಿಗಳನ್ನು ಬಹುವಾಗಿ ಗೌರವಿಸಲೂ ಬಾರದು. ಬಹುವಾಗಿ ಹೆಚ್ಚಿಸಿಕೊಳ್ಳಲೂ ಬಾರದು. ಆ ಮಂತ್ರಿಗಳೊಡನೆ ವಿರೋಧವನ್ನು ಮಾಡಿಕೊಳ್ಳಬಾರದು. ಕೋಟೆಕಾಯುವವರೊಡನೆ ವಿರೋಧಮಾಡಿಕೊಳ್ಳಬಾರದು.

೨೫-೨೭. ಗಣಿಗಳು, ಪಟ್ಟಣಗಳು, ದುರ್ಗಗಳು, ಬೆಟ್ಟಗಳು, ಅರಣ್ಯಗಳು ಸಮುದ್ರಗಳು, ಉಪದ್ವೀಪಗಳು, ನದೀತೀರ, ದೇಶದೇಶಗಳಿಂದ ಬಂದಿರುವವರು, ವರ್ಷಗಳು [ದೇಶಭೇದ] ದ್ವೀಪಾಂತರಗಳು, ಇವುಗಳಲ್ಲಿರುವವರನ್ನೂ ದ್ವೀಪಗಳಲ್ಲಿ ಬೇರೆ ಬೇರೆ ದೇಶಗಳಿಂದ ಬಂದಿರುವ ಜನರು ಇವರ ವಿಷಯಗಳನ್ನೂ ರಾಜನು ಚಾರರಿಂದ ಹದಿನೈದು ದಿನಗಳಿಗೊಮ್ಮೆ ತಿಳಿಯುತ್ತಿರಬೇಕು.

ಪರರಾಷ್ಟ್ರಾದ್ಗುಪ್ತರೂಪೈಃ ಕಾಷಾಯಾಂಬರಧಾರಿಭಿಃ ।
ಅವಧೂತಾದಿವೇಷೈಶ್ಚ ತಥಾ ಕಾರ್ಪಟಿಕೋಽಮುನ್ಯೈಃ । ॥ ೨೮ ॥

ವಣಿಗ್ರೂಪಧರೈರ್ದೂತೈಃ ವೃತ್ತಂ ವೇದ್ಯಂ ನೃಪೋತ್ತಮೈಃ ।
ತತ್ರ ತತ್ರಾಧಿಪಾಸ್ಸರ್ವೇಽಬ್ದೇಽಬ್ದೇ ಕಾರ್ಯಾಸ್ತು ನೂತನಾಃ ॥ ೨೯ ॥

ಏಕ ಏವ ಚಿರಂ ರಾಜ್ಞಾ ನ ಸ್ಥಾಪ್ಯಃ ಪಾಲಕಃ ಕ್ವಚಿತ್ ।
ಪರಸೈನ್ಯಾನಿ ವೇದ್ಯಾನಿ ದ್ರಷ್ಟವ್ಯಂ ಸ್ವಬಲಂ ಸದಾ ॥ ೩೦ ॥

ಪರರಾಷ್ಟ್ರಾಗತೋ ದೂತಃ ಸ್ವೀಯರಾಷ್ಟ್ರೇ ವಿಲೋಕಯೇತ್ ।
ದೃಷ್ಟಶ್ಚೇನ್ನೈವ ದಂಡ್ಯಸ್ಸ ಪರದೂತಂ ನ ಶಿಕ್ಷಯೇತ್ ॥ ೩೧ ॥

ಪರದೂತೋ ಮೋಚನೀಯಃ ಸನ್ಮಾನೇನ ನೃಪೋತ್ತಮೈಃ ।
ಸ್ವಸೀಮಾರಕ್ಷಿಣೋ ದೂತಾ ಶಿಕ್ಷಣೀಯಾ ಮುಹುರ್ಮುಹುಃ ॥ ೩೨ ॥

೨೮-೨೯. ಪರರಾಷ್ಟ್ರದಲ್ಲಿ ಚಾರರು ಕಾವಿಯ ಬಟ್ಟೆಯಿಂದಾಗಲಿ, ಅವಧೂತವೇಷದಿಂದಾಗಲಿ ಯಾತ್ರಾರ್ಥಿಗಳ ರೂಪದಿಂದಾಗಲಿ, ವರ್ತಕ ರೂಪದಿಂದಾಗಲೀ, ಗುಟ್ಟಾಗಿ ಸಂಚರಿಸಿಕೊಂಡು ವಿಷಯವನ್ನು ಗ್ರಹಣಮಾಡಬೇಕು. ಅಂತಹವರಿಂದ ಆಯಾದೇಶದ ವಿಷಯಗಳನ್ನು ರಾಜನು ತಿಳಿದುಕೊಳ್ಳುತ್ತಿರಬೇಕು. ಆಯಾ ದೇಶದಲ್ಲಿ ನಿಯಮಿಸಿರುವ ಅಧಿಕಾರಿಗಳನ್ನು ವರ್ಷವರ್ಷಕ್ಕೂ ಬದಲಾಯಿಸುತ್ತಿರಬೇಕು.

೩೦. ಒಂದೇ ಜಾಗದಲ್ಲಿ ಒಬ್ಬ ಅಧಿಕಾರಿಯನ್ನು ಬಹುಕಾಲದವರೆಗೂ ಇಟ್ಟಿರಬಾರದು. ರಾಜನಾದವನು ಯಾವಾಗಲೂ ತನ್ನ ಸೈನ್ಯ ಪರಸೈನ್ಯಗಳಿಗಿರುವ ತಾರತಮ್ಯವನ್ನು ತಿಳಿಯುತ್ತಲೇ ಇರಬೇಕು.

೩೧. ಪರರಾಷ್ಟ್ರದಿಂದ ದೂತನು ಹೊರಟರೆ ಅವನನ್ನು ರಾಷ್ಟ್ರಕ್ಕೆ ಬಂದನೆ ಎಂದು ತಿಳಿದುಕೊಳ್ಳಬೇಕು. ಅವನು ತನಗೆ ದೃಷ್ಟನಾಗಿದ್ದರೆ ಅವನನ್ನು ಶಿಕ್ಷಿಸಬಾರದು. ಪರದೂತರನ್ನು ಯಾವಾಗಲೂ ಶಿಕ್ಷಿಸಬಾರದು.

೩೨. ರಾಜನಾದವನು ಪರದೂತರನ್ನು ಗೌರವಿಸಿ ಕಳುಹಿಸಿ ಬಿಡಬೇಕು. ತನ್ನ ಎಲ್ಲೆಕಟ್ಟನ್ನು ಕಾಯುತ್ತಿರುವ ದೂತರನ್ನು ವಿಚಾರಿಸಿ ಆಗಾಗ್ಗೆ ಶಿಕ್ಷಿಸುತ್ತಿರಬೇಕು.

ಪರದೂತಃ ಕಥಂ ಮುಕ್ತಃ ಸ್ವಿಯರಾಷ್ಟ್ರೇ ಪುರೇಥವಾ ।
ಅದ್ಯಾರಭ್ಯ ಸೂಕ್ಷ್ಮದೃಷ್ಟ್ಯಾ ದ್ರಷ್ಟವ್ಯಂ ಚೇತಿ ಪಾರ್ಥಿವಃ ॥ ೩೩ ॥

ಅಗ್ರೇಸರಂ ಪಾರ್ಶ್ವಗೌ ಚ ಪಶ್ಚಾದ್ಭಾಗಸ್ಯ ರಕ್ಷಕಂ ।
ಸೇನಾಪತಿಂ ಮಂತ್ರಿಣಂ ಚ ಸ್ವೀಯಂ ಪ್ರತಿನಿಧಿಂ ತಥಾ ॥ ೩೪ ॥

ಸೂತಂ ಚಾಮರಹಸ್ತಂ ಚ ದೂತಂ ನಿಕಟವರ್ತಿನಂ ।
ದಾನಮಾನೈಸ್ತೋಷಯೇಚ್ಚ ಸದಾ ರಾಜ್ಞಾ ಸುಬುದ್ಧಿನಾ ॥ ೩೫ ॥

ದೇಶಂ ಕಾಲಂ ಬಲಂ ಕೋಶಂ ನಿಜೋತ್ಸಾಹಂ ನೃಪೋತ್ತಮೈಃ ।
ಆದೌ ಬುಧ್ವಾ ನಿರೀಕ್ಷ್ಯಾಥ ರಿಪೋಶ್ಚಾಪಿ ಪರೀಕ್ಷಯೇತ್ ॥ ೩೬ ॥

ನಿಜಮಿತ್ರಾ ನೃಪಾಸ್ಸರ್ವೇ ತಥಾಸ್ವಸುಹೃದೋ ನೃಪಾಃ ।
ಸುಹೃದಾಂ ಸುಹೃದಶ್ಚಾಪಿ ಮಿತ್ರಾಮಿತ್ರಾನ್ಪರೀಕ್ಷಯೇತ್ ॥ ೩೭ ॥

---

೩೩. ಆ ಎಲ್ಲೆ ಕಾಯುವವರನ್ನು ಕುರಿತು ಪರದೇಶದ ದೂತನನ್ನು ದೇಶದೊಳಕ್ಕಾಗಲಿ, ಪಟ್ಟಣಕ್ಕಾಗಲಿ ಹೇಗೆ ಬಿಟ್ಟೆ ? ಎಂದು ಶಿಕ್ಷಿಸಬೇಕು. ಅಲ್ಲದೆ ಇನ್ನು ಮೇಲೆ ಸೂಕ್ಷ್ಮದೃಷ್ಟಿಯಿಂದಲೇ ನೋಡಿಕೊಳ್ಳುತ್ತಿರಬೇಕು. ಎಂಬುದಾಗಿ ಆ ರಾಜನು ಅವರಿಗೆ ಬುದ್ಧಿ ಹೇಳಬೇಕು.

೩೪-೩೫. ತನ್ನ ಮುಂದೆ ಹೋಗುವವನನ್ನೂ, ಪಕ್ಕದಲ್ಲಿ ಬರುವವರನ್ನೂ ಹಿಂದುಗಡೆ ಕಾಪಾಡುವವರನ್ನೂ, ಸೇನಾಪತಿಯನ್ನೂ, ಮಂತ್ರಿಗಳನ್ನೂ, ತನ್ನ ಪ್ರತಿನಿಧಿಯಾಗಿರುವವನನ್ನೂ, ಸೂತನನ್ನೂ, ಚಾಮರಬೀಸುವವನ್ನೂ, ಹತ್ತಿರಲೇ ಇರುವ ದೂತನನ್ನೂ ಗೌರವಿಸುತ್ತಲೂ, ಹಣ ಮುಂತಾದುವನ್ನು ಕೊಟ್ಟು ಬಹುಮಾನಿಸುತ್ತಲೂ ಯಾವಾಗಲೂ ಸಂತೋಷಿಸುತ್ತಿರಬೇಕು.

೩೬. ರಾಜನಾದವನು ದೇಶ, ಕಾಲ, ಬಲ, ಕೋಶ, ತನ್ನ ಮಿತ್ರ ಉತ್ಸಾಹಗಳನ್ನು ಬುದ್ಧಿಯಿಂದ ತಿಳಿದುಕೊಂಡು ಅನಂತರ ಶತ್ರುವಿನದನ್ನು ನೋಡಿಕೊಂಡು ವ್ಯತ್ಯಾಸವನ್ನು ತಿಳಿಯುತ್ತಿರಬೇಕು.

೩೭. ರಾಜನಾದವನು ತನ್ನ ಮಿತ್ರರನ್ನೂ ಸುಹೃತ್ತುಗಳನ್ನೂ ಸ್ನೇಹಿತರಿಗೆ ಸ್ನೇಹಿತರನ್ನೂ ಪರೀಕ್ಷಿಸಬೇಕು. ಯಾರಿಗೆ ಯಾರಿಗೆ ಮಿತ್ರರಾರಾರು ? ಶತ್ರುವಾರು ? ಎಂಬುದನ್ನು ಪರೀಕ್ಷಿಸಿ ತಿಳಿದುಕೊಳ್ಳಬೇಕು.

ನಿಜಮಿತ್ರಬಲಂ ದೃಷ್ಟ್ವಾ ಮಿತ್ರಮಿತ್ರ ಬಲಂ ತಥಾ ।
ಬಲಂ ಸ್ವಸುಹೃದಾಂ ಚಾಪಿ ಸ್ವಸುಹೃತ್ಸುಹೃದಾಂ ಬಲಂ ॥ ೩೮ ॥

ಆದೌ ನೃಪೈಃ ಪರಿಕ್ಷ್ಯಾಥ ರಿಪೂಂಶ್ಚೈವಂ ನಿರೀಕ್ಷಯೇತ್ ।
ಕೇಸ್ವೀಯಾಃ ಪಾರ್ಥಿವಾ ರಾಷ್ಟ್ರೇ ಪಾರಕೀಯಾ ನೃಪಾಶ್ಚ ಕೇ ॥ ೩೯ ॥

ಸುಹೃದಃ ಸ್ವನೃಪಾಣಾಂ ಚ ಬಲಂ ತೇಷಾಂ ನಿರೀಕ್ಷಯೇತ್ ।
ದೃಷ್ಟ್ವಾ ರಿಪವಃ ಸ್ವೀಯಾ ರಿಪೂಣಾಂ ರಿಪವಸ್ತಥಾ ॥ ೪೦ ॥

ದೃಷ್ಟ್ವಾ ರಿಪೂಣಾಂ ರಿಪುಭಿಃ ಕಾರ್ಯಾ ರಾಜ್ಞಾ ಹಿ ಮೈತ್ರಿಕೀ ।
ಪರಸ್ಯ ಶತ್ರುಃ ಪಾಲ್ಯೋ ನ ಪಾಲ್ಯಶ್ಚೇತ್ತಂ ಪರೀಕ್ಷಯೇತ್ ॥ ೪೧ ॥

---

೩೮. ತನಗೆ ಸರಿಯಾದ ಮಿತ್ರನ ಬಲವನ್ನು ನೋಡಿಕೊಳ್ಳಬೇಕು. ಅಂತೆಯೇ ಮಿತ್ರನಿಗೆ ಮಿತ್ರನಾದವನ ಬಲವನ್ನು ನೋಡಿಕೊಳ್ಳಬೇಕು. ಸುಹೃತ್ತಿನ ಬಲವನ್ನು ನೋಡಿಕೊಳ್ಳಬೇಕು. ಅಂತೆಯೇ ಸುಹೃತ್ತಿಗೆ ಸುಹೃತ್ತಿನ ಬಲವನ್ನು ನೋಡಿಕೊಳ್ಳಬೇಕು.

೩೯. ತನ್ನ ಕಡೆಯ ಸ್ನೇಹಿತರಾದ ರಾಜರ ಬಲವನ್ನೂ, ಅವರ ಸೈನ್ಯ ಬಲವನ್ನೂ ನೋಡಿಕೊಳ್ಳಬೇಕು. ಅನಂತರ ತನ್ನ ಶತ್ರುಗಳ ಬಲವನ್ನೂ ಶತ್ರುಗಳಿಗೆ ಶತ್ರುಗಳಾಗಿರುವವರ ಬಲವನ್ನೂ ನೋಡಿಕೊಳ್ಳಬೇಕು.

೪೦. ಇವೆಲ್ಲವನ್ನೂ ತಿಳಿದುಕೊಂಡು ತನ್ನ ಶತ್ರುಗಳಿಗೆ ಶತ್ರುಗಳಾದವರಲ್ಲಿ ರಾಜನಾದವನು ಸ್ನೇಹವನ್ನು ಮಾಡಿಕೊಳ್ಳಬೇಕು. ಶತ್ರುವಿನ ಶತ್ರುವಿನೊಡನೆ ಸ್ನೇಹಮಾಡಿಕೊಂಡು ಅವನನ್ನು ರಕ್ಷಿಸಬಾರದು. ರಕ್ಷಿಸಬೇಕಾಗಿ ಬಂದಲ್ಲಿ ಅವನನ್ನು ಚೆನ್ನಾಗಿ ಪರೀಕ್ಷಿಸಬೇಕು.

೪೧. ತಾನು ಕಾಪಾಡತಕ್ಕವನು ಶತ್ರುವಿನ ಮಿತ್ರನ ಸೈನ್ಯವನ್ನೂ ಅಂತೆಯೇ ಶತ್ರುವಿನ ಮಿತ್ರನ ಸೈನ್ಯವನ್ನೂ ನೋಡಿಕೊಂಡು ಪಾಲಿಸಬೇಕು. ಅಂತೆಯೇ ಶತ್ರುವಿನ ಸುಹೃತ್ಸೈನ್ಯವನ್ನೂನೋಡಿಕೊಂಡು ತಾನು ಕಾಪಾಡಬೇಕಾದವನನ್ನು ಕಾಪಾಡಬೇಕು.

ಪಾಲ್ಯಂ ಶತ್ರುಬಲಂ ದೃಷ್ಟ್ವಾ ಶತ್ರುಮಿತ್ರಬಲಂ ತಥಾ ।
ಪಾಲ್ಯಂ ಶತ್ರುಸುಹೃತ್ಸೈನ್ಯಂ ದೃಷ್ಟ್ವಾ ಪಾಲ್ಯಂ ಸುರಕ್ಷಯೇತ್ ॥ ೪೨ ॥

ಪರಾರಾಷ್ಟ್ರೇ ಚಾರನೇತ್ರೈರ್ನದ್ಯೋ ದುರ್ಗಾಣಿ ಪರ್ವತಾಃ ।
ಅರಣ್ಯಾನಿ ದುಷ್ಟಮಾರ್ಗಾಶ್ಚೋರಮಾರ್ಗಾ ಜಲಾಶಯಾಃ ॥ ೪೩ ॥

ಜ್ಞಾತವ್ಯಾಃ ಸ್ವಪುರೇ ಪೂರ್ವಮುದ್ಯೋಗಶ್ಚ ತತಶ್ಚರೇತ್ ।
ಪರರಾಷ್ಟ್ರೇತಿಬುದ್ಧ್ಯಾ ಹಿ ಗಂತವ್ಯಂ ಪಾರ್ಥಿವೈಸ್ಸುಖಂ ॥ ೪೪ ॥

ಯತ್ರಾಗ್ರೇ ಗಮನಂ ಸ್ವೀಯಂ ಕೇಷಾಂ ವಾಚ್ಯಂ ನ ತತ್ಕದಾ ।
ಪೂರ್ವೇ ಗಂತುಂ ನಿಜೇಚ್ಛಾ ಚೇನ್ನಿಕ್ಷಿಪೇದುತ್ತರೇ ಧ್ವಜಂ ॥ ೪೫ ॥

ಉತ್ತರಾಭಿಮುಖಃ ಕಾರ್ಯಸ್ಸೇನಾವಾಸೋ ನೃಪೇಣ ಹಿ ।
ಅಗ್ರೇಸರಂ ಚೋತ್ತರಂ ಹಿ ನೃಪೇಣಾಜ್ಞಾಪ್ಯ ಸಾದರಂ ॥ ೪೬ ॥

ಕ್ರೋಶಾರ್ಧಾಂತೇ ಗತಂ ದೃಷ್ಟ್ವಾ ಗಚ್ಛೇತ್ಪೂರ್ವೇ ಸ್ವಯಂ ನೃಪಃ ।
ಏವಂ ಧ್ವಜಃ ಕದಾ ಯಾಮ್ಯೇ ಪಶ್ಚಿಮೇ ವಾಪರಾ ದಿಶಿ ॥ ೪೭ ॥

೪೨-೪೩. ರಾಜನು ಪರರ ರಾಜ್ಯದಲ್ಲಿ ನದಿಗಳನ್ನೂ ದುರ್ಗಗಳನ್ನೂ, ಪರ್ವತಗಳನ್ನೂ, ಅರಣ್ಯಗಳನ್ನೂ ದುಷ್ಟಮಾರ್ಗಗಳನ್ನೂ ಕಳ್ಳಮಾರ್ಗಗಳನ್ನೂ ನೀರಿನ ಸ್ಥಳಗಳನ್ನೂ ಚಾರರಿಂದ ತಿಳಿದುಕೊಳ್ಳಬೇಕು. ಮೊದಲೇ ತನ್ನ ಪಟ್ಟಣದಲ್ಲಿ ಅದಕ್ಕೆ ಬೇಕಾದ ಪ್ರಯತ್ನಗಳನ್ನೂ ಮಾಡುತ್ತಿರಬೇಕು. ಪರರಾಷ್ಟ್ರದಲ್ಲಿ ರಾಜನು ತನ್ನ ಅತಿ ಬುದ್ಧಿಯನ್ನು ಉಪಯೋಗಿಸುತ್ತ ಸುಖವಾಗಿ ಹೋಗಬೇಕು.

೪೪. ತಾನು ಪರರಾಷ್ಟ್ರದಲ್ಲಿ ಯಾವ ಜಾಗದಲ್ಲಿ ಹೇಗೆ ಹೋಗುತ್ತೇನೆಂಬುದನ್ನು ಒಬ್ಬರಿಗೂ ಹೇಳಬಾರದು. ಪೂರ್ವದಿಕ್ಕಿಗೆ ತಾನು ಹೋಗಬೇಕಾಗಿ ಬಂದು ಆ ಕಡೆಗೆ ಇಚ್ಛೆಯಿದ್ದರೆ ಉತ್ತರ ದಿಕ್ಕಿಗೆ ಧ್ವಜವನ್ನು ನಡಿಸಬೇಕು

೪೫. ಆಗ ಸೇನಾ ಶಿಬಿರವನ್ನು ಉತ್ತರದಿಕ್ಕಿನಲ್ಲಿ ಮಾಡಿಸಬೇಕು. ಮುಂದೆ ಹೋಗತಕ್ಕವನು ಉತ್ತರ ಮುಖಕ್ಕೆ ಹೋಗಬೇಕೆಂದು ಆಜ್ಞಾಪಿಸಬೇಕು.

೪೬-೪೭. ಅವರು ಹಾಗೆ ಅರ್ಧಕೋಶ ದೂರದವರೆಗೂ ಹೋದುದನ್ನು ತಿಳಿದು ಅನಂತರ ರಾಜನು ತಾನು ಪೂರ್ವದಿಕ್ಕಿಗೆ ಪ್ರಯಾಣ ಮಾಡಬೇಕು. ಇದೇ ರೀತಿಯಾಗುತ್ತ ಉತ್ತರಕ್ಕೆ ಹೋಗಬೇಕಾದಾಗ ಧ್ವಜವನ್ನು ಪಶ್ಚಿಮಕ್ಕೂ ಪಶ್ಚಿಮಕ್ಕೆ ಹೋಗಬೇಕಾದರೆ ಧ್ವಜನವನ್ನು ದಕ್ಷಿಣಕ್ಕೂ, ದಕ್ಷಿಣಕ್ಕೆ ಹೋಗಬೇಕಾಗಿ ಬಂದಾಗ ಧ್ವಜವನ್ನು ಪೂರ್ವಕ್ಕೂ ನಡಿಸಬೇಕು.

ಪರರಾಷ್ಟ್ರೇ ರೋಪಣೀಯಾ ಚಾರೈರ್ವೃತ್ತಂ ತು ವೇದಯೇತ್ ।
ಸ್ವರಾಷ್ಟ್ರೇ ಗಮನಂ ಯಸ್ಯಾಂ ದಿಶಿ ತಸ್ಯಾಂ ನೃಪೋತ್ತಮೈಃ ॥ ೪೮ ॥

ರೋಪಣೀಯೋ ಧ್ವಜಃ ಪ್ರೋಚ್ಚೈಸ್ಸೇನಾವಾಸಸ್ತಥಾ ಚರೇತ್ ।
ಯಂತ್ರಾಣಾಮಾಯುಧಾನಂ ಚ ವಾಹನಾನಾಂ ಬಲಸ್ಯ ಚ ॥ ೪೯ ॥

ರಾಜ್ಞಾ ವೃದ್ಧಿಸ್ಸದಾ ಕಾರ್ಯಾ ಕಾರ್ಯೋ ಧಾನ್ಯಾದಿಸಂಗ್ರಹಃ ।
ರಾಷ್ಟ್ರೇ ದುರ್ಗೇ ಪುರೇ ಸ್ವೀಯೇ ಪತ್ತನೇ ನಿರ್ಜಲೇ ವನೇ ॥ ೫೦ ॥

ಜಲಾಶಯಾಶ್ಶುಭಾಃ ಕಾರ್ಯಾಃ ಕೃತ್ವಾ ಕೋಶವ್ಯಯಂ ಬಹು ।
ಪ್ರಾಕಾರಾರ್ಥೇಥ ದುರ್ಗಾರ್ಥೇ ಜಲಾರ್ಥೇ ಯೋ ವ್ಯಯಃ ಕೃತಃ ॥ ೫೧ ॥

ನ ಜ್ಞೇಯಸ್ಸ ವ್ಯಯೋ ರಾಜ್ಞಾ ಜ್ಞೇಯಂ ರಕ್ಷಣಮಾತ್ಮನಃ ।
ಧರ್ಮಾರ್ಥೇ ಯೋ ವ್ಯಯೋ ಜಾತಸ್ಸೋಗ್ರೇ ಜ್ಞೇಯಸ್ತು ಸಂಗ್ರಹಃ ॥

೪೮-೫೦. ಪರರಾಷ್ಟ್ರಗಳ ವಿಷಯವನ್ನು ಚಾರರಿಂದ ಆಗಾಗ ತಿಳಿಯು ತ್ತಲೇ ಇರಬೇಕು ರಾಜನು ತನ್ನ ರಾಷ್ಟ್ರದಲ್ಲಿ ಹೋಗುವಾಗ ಮಾತ್ರ ತಾನು ಯಾವ ದಿಕ್ಕಿಗೆ ಹೋಗುವನೋ ಆ ದಿಕ್ಕಿಗೆ ಧ್ವಜವನ್ನು ನಡಿಸಬೇಕು. ಅಲ್ಲಿಯೇ ಶಿಬಿರವನ್ನು ನಿರ್ಮಿಸಬೇಕು. ಯಂತ್ರಗಳಿಗೂ ಆಯುಧಗಳಿಗೂ ಸೈನ್ಯಕ್ಕೂ ವಾಹನಗಳಿಗೂ ಬೇರೆ ಬೇರೆಯಾಗಿ ಸ್ಥಳಗಳನ್ನು ನಿರ್ಮಿಸಬೇಕು ರಾಜನಾದವನು ಯಂತ್ರಗಳನ್ನೂ ಆಯುಧಗಳನ್ನೂ ಸೈನ್ಯಗಳನ್ನೂ ವಾಹನಗಳನ್ನೂ ಯಾವಾಗಲೂ ಹೆಚ್ಚಿಸಿಕೊಳ್ಳುತ್ತಿರಬೇಕು. ರಾಜನಾದವನು ಧ್ಯಾನಸಂಗ್ರಹವನ್ನು ಮಾಡುತ್ತಿರ ಬೇಕು. ರಾಷ್ಟ್ರದಲ್ಲಿ ದುರ್ಗದಲ್ಲಿ ತನ್ನ ರಾಜಧಾನಿಯಲ್ಲಿ ನೀರಿಲ್ಲದ ಜಾಗದಲ್ಲಿ ವನಗಳಲ್ಲಿ ರಾಜನು ಬಹು ಧನವನ್ನು ವ್ಯಯಮಾಡಿ ನೀರಿನ ಆ ಸರೆಗಳನ್ನು ನಿರ್ಮಿಸಬೇಕು.

೫೧-೫೨. ಕೋಟೆಕಟ್ಟುವುದಕ್ಕೂ ದುರ್ಗನಿರ್ಮಾಣಕ್ಕೂ ನೀರಿ ಗೋಸ್ಕರಲೂ ವ್ಯಯಮಾಡುವ ಹಣವನ್ನು ವ್ಯಯವಾದ ಹಣವೆಂದು ರಾಜನು ತಿಳಿಯಬಾರದು. ಅದು ಆತ್ಮರಕ್ಷಣೆಯೆಂದು ತಿಳಿದುಕೊಳ್ಳಬೇಕು. ಧರ್ಮಾರ್ಥ ವಾಗಿ ಮಾಡಿದ ಹಣದ ಖರ್ಚನ್ನು ಮುಂದಿನ ಸಂಗ್ರಹವೆಂದು ತಿಳಿಯಬೇಕು.

ಆಪದರ್ಥೇ ಧನಂ ರಕ್ಷೇದ್ದಾರಾ್ ರಕ್ಷೇದ್ಧನೈರಪಿ।
ಆತ್ಮಾನಂ ಸತತಂ ರಕ್ಷೇದ್ದಾರೈರಪಿ ಧನೈರಪಿ ॥ ೫೩ ॥

ಪಾದಮುದ್ರಾಮಿತಂ ದ್ರವ್ಯಂ ರಾಜ್ಞಾ ದಾಯೋ ನಿರೀಕ್ಷಯೇತ್ ।
ನಾವಲೋಕ್ಯಂ ಯಥಾಕಾಲಂ ವ್ಯಯೇ ತತ್ಕೋಟಿ ಸಮ್ಮಿತಂ ॥ ೫೪ ॥

ನ ಸೇನಾರಹಿತಂ ರಾಜ್ಞಾ ಗಂತವ್ಯಂ ಸ್ವಪುರಾಣದ್ಬಹಿಃ ।
ನೈಕಾಕೀ ವಿಚರೇದ್ಗ್ರಾಮೇ ನೈಕಾಕೀ ಕ್ವಾಪಿಸಂವಿಶೇತ್ ॥ ೫೫ ॥

ನೈಕಾಕೀ ಕ್ವಾಪಿ ವೈ ಸ್ಥೇಯಂ ನ ಪದ್ಭ್ಯಾಂ ವಿಚರೇದ್ಬಹಿಃ ।
ನ ಗಚ್ಛೇತ್ಪರಗೇಹೇಷು ವಾರಂ ವಾರಂ ನೃಪೋತ್ತಮಃ ॥ ೫೬ ॥

---

೫೩. ಆಪತ್ಕಾಲದಲ್ಲಿ ಅನುಕೂಲವಾಗುವುದಕ್ಕೋಸ್ಕರ ಹಣವನು ಕೂಡಿಟ್ಟು ಕಾಪಾಡುತ್ತಿರಬೇಕು. ಆ ಧನದಿಂದಲಾದರೂ ಕೂಡ ಹೆಂಡಿರನ್ನು ಕಾಪಾಡಬೇಕು. ಆ ಧನದಿಂದಲೂ ಹೆಂಡಿರಿಂದಲೂ ಕೂಡ ತನ್ನನ್ನು ಯಾವಾಗಲೂ ಕಾಪಾಡಿಕೊಳ್ಳುತ್ತಿರಬೇಕು.

೫೪. ಯಾವುದಕ್ಕಾದರೂ ಹಣವನ್ನು ವ್ಯಯಮಾಡಿದರೆ ಅದರಲ್ಲಿ ಕಾಲುಪಾಲಿನಷ್ಟು ಆದಾಯಬರುವಂತೆ ನಿರೀಕ್ಷಿಸಬೇಕು. ವ್ಯಯಮಾಡುವ ಕಾಲದಲ್ಲಿ ಸರಿಯಾಗಿ ವ್ಯಯಮಾಡಬೇಕು. ಆಗ ವ್ಯಯಮಾಡಿದರೆ ಅದು ಒಂದಕ್ಕೆ ಒಂದುಕೋಟಿಯಷ್ಟನ್ನು ಹಾಕಿದಂತಾಗುತ್ತದೆ.

೫೫. ರಾಜನಾದವನು ಸೇನೆಯನ್ನು ಜೊತೆಯಲ್ಲಿ ಕರೆದುಕೊಳ್ಳದೆ ಪಟ್ಟಣದಿಂದ ಹೊರಗಡೆಗೆ ಹೋಗಬಾರದು. ಊರಿನಲ್ಲಿ ಒಬ್ಬಂಟಿಗನಾಗಿ ಓಡಿಯಾಡಬಾರದು. ಒಬ್ಬನೇ ಎಲ್ಲಿಯೂ ಕುಳಿತುಕೊಳ್ಳಬಾರದು.

೫೬. ಒಬ್ಬಂಟಿಗನಾಗಿ ಎಲ್ಲಿಯೂ ಇರಬಾರದು. ಹೊರಗಡೆಯಲ್ಲಿ ಬರಿಯಕಾಲಿನಲ್ಲಿಯೇ ಸಂಚಾರಮಾಡಬಾರದು. ರಾಜನಾದವನು ಪರರ ಮನೆಗೆ ಆಗಾಗ್ಗೆ ಹೋಗುತ್ತಿರಬಾರದು.

ನ ವಿಶ್ವಸೇದ್ದ್ವಾರಪಾಲಂ ಜದದಂ ರಜಕಂ ತಥಾ ।
ಧೌತವಸ್ತ್ರಾಣಿ ಬುದ್ಧ್ಯಾ ಹಿ ನೃಪಸ್ಸಮ್ಯಕ್ಪರೀಕ್ಷಯೇತ್ ॥ ೫೭ ॥

ದೃಷ್ಟ್ವಾ ತಾಂಬೂಲ ವಿಟಿಕಾ ಗ್ರಾಹ್ಯಾ ರಾಜ್ಞಾ ಪರಾರ್ಪಿತಾ ।
ಪರದತ್ತಂ ಜಲಂ ಗ್ರಾಹ್ಯಂ ರಾಜ್ಞಾಕ್ಷಿಭ್ಯಾಂ ವಿಲೋಕ್ಯ ಚ ॥ ೫೮ ॥

ಫಲಾನಿ ಪರದತ್ತಾನಿ ಪರೀಕ್ಷೇತ್ಪಾರ್ಥಿವೋತ್ತಮಃ ।
ದೂರಸ್ಥಿತೈರ್ನೃಪೈರ್ಭಾಷ್ಯಂ ಸ ತೇಷಾಂ ನಿಕಟಂ ಚರೇತ್ ॥ ೫೯ ॥

ಸಭಾಂ ರಾಜ್ಞಾ ಪ್ರಗಂತವ್ಯಂ ದ್ವಿವಾರಂ ತ್ವೇಕದಾಥವಾ ।
ಅರ್ಧಯಾಮಂ ಸಭಾಮಧ್ಯೇ ಸ್ಥೇಯಂ ರಾಜ್ಞಾ ನ ವೈ ಚಿರಂ ॥ ೬೦ ॥

---

೫೭. ಬಾಗಿಲುಕಾಯುವವನಲ್ಲಿ ನಂಬಿಕೆಯನ್ನಿಡಬಾರದು. ಅಂತೆಯೇ ನೀರು ಕೊಡುವವನನ್ನೂ ಅಗಸನನ್ನೂ ನಂಬಕೂಡದು. ಒಗೆದ ಬಟ್ಟೆಗಳನ್ನು ರಾಜನು ತನ್ನ ಬುದ್ಧಿಯಿಂದ ಪರೀಕ್ಷಿಸಿ ನೋಡಿ ಅನಂತರ ಧರಿಸಬೇಕು.

೫೮. ಹೊರಗಿನವರು ಕೊಟ್ಟ ತಾಂಬೂಲ ವೀಟೆಯನ್ನು ಚೆನ್ನಾಗಿ ನೋಡಿ ತೆಗೆದುಕೊಳ್ಳಬೇಕು. ಹೊರಗಿನವರು ಕೊಟ್ಟ ನೀರನ್ನು ರಾಜನು ಕಣ್ಣಿನಿಂದ ನೋಡಿ ಪರೀಕ್ಷಿಸಿ ತೆಗೆದುಕೊಳ್ಳಬೇಕು.

೫೯. ರಾಜನು ಇತರರು ಕೊಟ್ಟ ಹಣ್ಣುಗಳನ್ನು ಪರೀಕ್ಷಿಸಿ ತೆಗೆದುಕೊಳ್ಳಬೇಕು. ರಾಜನು ಸಾಮಂತರಾಜರೊಡನೆ ಮಾತನಾಡಬೇಕು. ಆದರೆ ಮಾತನಾಡುವವನನ್ನು ದೂರದಲ್ಲಿಯೇ ನಿಲ್ಲಿಸಿ ಅವನೊಡನೆ ಮಾತನಾಡಬೇಕು. ಅವರ ಹತ್ತಿರಕ್ಕೆ ಹೋಗಬಾರದು. ಹತ್ತಿರಕ್ಕೂ ಬರಮಾಡಿಕೊಳ್ಳಬಾರದು.

೬೦. ರಾಜನು ಸಭೆಗೆ ಎರಡಾವರ್ತಿ ಹೋಗಬೇಕು. ಆಗದಿದ್ದರೆ ಒಂದುಬಾರಿಯಾದರೂ ಹೋಗಬೇಕು ಆ ಸಭೆಯಲ್ಲಿ ರಾಜನು ಅರ್ಧಯಾಮದ ಹೊತ್ತಿರಬೇಕೇ ಹೊರತು ಬಹಳ ಹೊತ್ತಿರಬಾರದು.

ಸ್ವದ್ವೇಷ್ಟಾ ನಗರಾದ್ರಾಷ್ಟ್ರಾದ್ಬಹಿಃ ಕಾರ್ಯೋ ನೈಪೋತ್ತಮೈಃ ।
ಪಾದೌ ಪ್ರಸಾರ್ಯ ಸದಸಿ ನ ಸ್ಥೇಯಂ ಪಾರ್ಥಿವೇನ ಹಿ ॥ ೬೧ ॥

ನ ಬಾಹುಬಂಧನಂ ಜಾನ್ವೋಃ ಕೃತ್ವಾ ಸ್ಥೇಯಂ ನೃಪೋತ್ತಮೈ ।
ನಾತಿಸ್ಮಿತಂ ಕದಾ ಕಾರ್ಯಂ ಸಭಾಯಾಂ ಪಾರ್ಥಿವೋತ್ತಮೈಃ ॥ ೬೨ ॥

ಸಭಾಯಾಂ ಸಮುಲ್ಲೈರ್ವಸ್ತ್ರೈರ್ನ ಗಂತವ್ಯಂ ಕದಾ ನೃಪೈಃ ।
ಗಣಿಕಾ ಗಣಕಾ ವೈದ್ಯಾ ಗಾಯಕಾ ಬಂದಿನೋ ನಟಾಃ ॥ ೬೩ ॥

ಪಂಡಿತಾ ಧರ್ಮಶಾಸ್ತ್ರಜ್ಞಾಸ್ತಾರ್ಕಿಕಾ ವೈದಿಕಾ ದ್ವಿಜಾಃ ।
ಸದಾ ಪಾಲ್ಯಾ ನೃಪೇಣೈತೇ ದಾನಮಾನೈರಹರ್ನಿಶಂ ॥ ೬೪ ॥

ನ ವಿಶ್ವಸೇನ್ನಾಪಿತಾಯ ತೋಷಯೇತ್ತಂ ಧನಾದಿಭಿಃ ।
ಪ್ರಜಾನಾಂ ಗೌರವಂ ಕಾರ್ಯಂ ದಂಡಯೇನ್ನ ವೃಥಾ ಪ್ರಜಾಃ ॥ ೬೫॥

---

೬೧ ರಾಜನಾದವನು ತನ್ನನ್ನು ದ್ವೇಷಿಸುವವನನ್ನು ರಾಜಧಾನಿಯಿಂದ ಹೊರಕ್ಕೆ ಓಡಿಸಬೇಕು. ಸಾಧ್ಯವಾದರೆ ದೇಶದಿಂದಲೇ ಹೊರಕ್ಕೆ ಓಡಿಸಬೇಕು. ಸಭೆಯಲ್ಲಿ ಕುಳಿತುಕೊಳ್ಳುವಾಗ ಕಾಲುಗಳನ್ನು ನೀಡಿಕೊಂಡು ಕುಳಿತುಕೊಳ್ಳಬಾರದು.

೬೨. ರಾಜರು ಕುಳಿತುಕೊಳ್ಳುವಾಗ ಮಂಡಿಗಳಿಗೆ ಕೈಗಳನ್ನು ಸುತ್ತಿಕೊಂಡು ಕುಳಿತುಕೊಳ್ಳಬಾರದು. ಹೆಚ್ಚಾಗಿ ಯಾವಾಗಲೂ ಸಭೆಯಲ್ಲಿ ನಗಬಾರದು.

೬೩–೬೪. ರಾಜನು ಸಭೆಗೆ ಹೋಗುವಾಗ ಕೊಳಕು ಬಟ್ಟೆಯನ್ನು ಹಾಕಿಕೊಂಡು ಹೋಗಬಾರದು ಸೂಳೆಯರು, ಜೋಯಿಸರು, ವೈದ್ಯರು, ಗಾಯಕರು, ಹೊಗಳುಭಟರು, ನಟರು, ಪಂಡಿತರು, ಧರ್ಮಶಾಸ್ತ್ರಜ್ಞರು, ತಾರ್ಕಿಕರು, ವೈದಿಕರು, ದ್ವಿಜರು ಇವರನ್ನು ರಾಜನಾದವನು ದಾನಮಾನಗಳಿಂದ ಯಾವಾಗಲೂ ಕಾಪಾಡುತ್ತಿರಬೇಕು.

೬೫. ಕ್ಷೌರಕನನ್ನು ನಂಬಬಾರದು. ಅವನಿಗೆ ಧನ, ಬಟ್ಟೆಗಳನ್ನು ಕೊಟ್ಟು ಸಂತೋಷಪಡಿಸಬೇಕು. ಪ್ರಜೆಗಳಿಗೆ ಗೌರವವನ್ನು ಕೊಡುತ್ತಿರಬೇಕು. ಅವರನ್ನು ತಪ್ಪಿಲ್ಲದೆ ಶಿಕ್ಷಿಸಬಾರದು.

ಕ್ಲೇಶಯುಕ್ತಾಃ ಪ್ರಜಾಸ್ಸರ್ವಾ ನೈವ ಕಾರ್ಯಾಃ ಕದಾಚನ ।
ರಾಜದ್ವಾರಿಸ್ಥಿತೈರ್ದೂತೈಸ್ಸರ್ವೇ ತೇ ಪಾರ್ಥಿವೋತ್ತಮಾಃ ॥ ೧೬ ॥

ಮುಕ್ತ ಕಂಚುಕಬಂಧಾಶ್ಚ ವಿಮುಕ್ತಕಟಿಬಂಧನಾಃ ।
ಸಮ್ಯಗ್ದೃಷ್ಟ್ವಾ ನ್ಯಸ್ತಶಸ್ತ್ರಾ ಪ್ರೇಷಣೀಯಾ ನೃಪೋತ್ತಮಂ ॥ ೧೭ ॥

ರಾಜಾಜ್ಞಯಾ ನೃಪಂ ನತ್ವಾ ಸನೇ ಚೋಪವಿಶೇತ್ಕ್ರಮಾತ್ ।
ನೃಪೈರ್ಮಾಂಡಲಿಕೈಸ್ಸರ್ವೈಃ ಸ್ಥಾತವ್ಯಂ ಪುರತೋಥವಾ ॥ ೧೮ ॥

ಸನಿರ್ಮಾಲ್ಯ ಹಸ್ತೌ ಪಾದೌ ಚ ರಾಜನ್ಯಸ್ತವಿಲೋಚನೈಃ ।
ನ ಹಸೇದ್ರಾಜಪುರತೋ ನ ಜೃಂಭೇನ್ನ ಕ್ಷುಪೇನ್ಮುಹುಃ ॥ ೧೯ ॥

ತಥಾ ನ ಷ್ಠೀವನಂ ಕಾರ್ಯಂ ಸರ್ವೈರ್ಮಾಂಡಲಿಕೈಃ ನೃಪೈಃ ।
ಆಗಮೇ ಗಮನೇ ಸರ್ವೈರ್ವಂದನೀಯೋ ನೃಪೋ ಮುಹುಃ ॥ ೨೦ ॥

ನಾತ್ಯುಚ್ಚೈಸ್ಸಂವದೇದ್ರಾಜಸಾನ್ನಿಧ್ಯೇ ಪಾರ್ಥಿವೇತರೈಃ ।
ಕಂಚುಕೇನ ವಿನಾ ರಾಜ್ಞಾ ಸಭಾಯಾಂ ನೋಪಸಂವಿಶೇತ್ ॥ ೨೧ ॥

೧೬-೧೭. ಪ್ರಜೆಗಳನ್ನು ಕಷ್ಟಪಡುವಂತೆ ಮಾಡಬಾರದು. ರಾಜದ್ವಾರದಲ್ಲಿರುವ ದೂತರು ತಮ್ಮ ರಾಜನನ್ನು ನೋಡುವುದಕ್ಕೆ ಹೋಗುವ ಇತರ ರಾಜರನ್ನು ಕವಚವನ್ನು ತೆಗೆಸಿ, ಸೊಂಟದ ಕಟ್ಟನ್ನು ತೆಗೆಸಿ ಚೆನ್ನಾಗಿ ಪರಿಕ್ಷಿಸಬೇಕು. ಅನಂತರ ಅವರು ಶಸ್ತ್ರಗಳನ್ನು ಹೊರಗಿಟ್ಟು ಬಿಟ್ಟು ಹೋಗಿ ರಾಜನನ್ನು ನೋಡುವ ಹಾಗೆ ಮಾಡಬೇಕು.

೧೮. ಅವರು ಹೋಗಿ ರಾಜನಿಗೆ ನಮಸ್ಕರಿಸಬೇಕು. ಅನಂತರ ರಾಜನ ಅಪ್ಪಣೆಯನ್ನು ಪಡೆದು ಆಸನದಲ್ಲಿ ಕುಳಿತುಕೊಳ್ಳಬೇಕು. ಮಾಂಡಲಿಕರಾದ ನೃಪರಾದರೆ ಆ ರಾಜನಿಗೆ ನಮಸ್ಕರಿಸಿ ಅವನ ಮುಂದೆ ಕುಳಿತುಕೊಳ್ಳಬೇಕು.

೧೯. ಆ ಮಾಂಡಲಿಕರು ಕೈಕಾಲುಗಳನ್ನು ಮುಚ್ಚಿಕೊಂಡು ಕುಳಿತುಕೊಳ್ಳಬೇಕು. ರಾಜನ ಎದುರಿಗೆ ನಗಬಾರದು. ಆಕಳಿಸಬಾರದು. ಸೀನಬಾರದು.

೨೦-೨೧. ಕ್ಯಾಕರಿಸುತ್ತಿರಬಾರದು. ಎಲ್ಲರೂ ತಾವು ಹೋಗುವಾಗಲೂ ಬರುವಾಗಲೂ ರಾಜನಿಗೆ ನಮಸ್ಕರಿಸುತ್ತಲಿರಬೇಕು. ರಾಜನೊಡನೆ ಮಾತನಾಡುವಾಗ ಹೆಚ್ಚು ಗಟ್ಟಿಯಾಗಿ ಮಾತನಾಡಬಾರದು. ಅಂಗಿಯಿಲ್ಲದೆ ಸಭೆಗೆ ಹೋಗಬಾರದು.

ಮೃಗಯಾಯಾಂ ವಾರಣೇಂದ್ರೋ ನೈವ ಹನ್ಯೋ ನೃಪೋತ್ತಮೈಃ ।
ನಾಂತರ್ವತ್ನೀ ಮೃಗೀ ರಾಜ್ಞಾ ಹಂತವ್ಯಾ ವಿಪಿನೇ ಕದಾ ॥ ೭೨ ॥

ನ ನಿದ್ರಿತೋ ನಿಹಂತವ್ಯಃ ಪಿಬನ್ನೀರಂ ವನೇ ಚರಃ ।
ತಥಾ ಸ್ವಶರಣಂ ಪ್ರಾಪ್ತೋ ವಿಶ್ವಸಾ ಕದಾಚನ ॥ ೭೩ ॥

ಕ್ರೀಡಾಸಕ್ತೋ ವನೇ ಪ್ರಾಣಿರ್ನೈವ ಹನ್ಯೋ ನೃಪೋತ್ತಮೈಃ
ಸೀಮಾಚಾರಾನಷ್ಟದಿಕ್ಷು ಸಂಸ್ಥಾಪ್ಯ ಮೃಗಯಾಂ ಚರೇತ್ ॥ ೭೪ ॥

ರಾತ್ರೌ ಮಿತ್ರೇಣ ಸಹಿತಸ್ತೂಷ್ಣೀಮೇವ ನೃಪೋತ್ತಮಃ ।
ಆತ್ಮಾನಂ ಕಂಬಳೇನೈವ ಸಮಾಚ್ಛಾದ್ಯ ಬಹಿಶ್ಚರೇತ್ ॥ ೭೫ ॥

ಪುರದ್ವಾರಸ್ಥಿತಾನಾಂ ಚ ಹ್ಯರ್ಗಳಾದಿ ನಿರೀಕ್ಷಯೇತ್ ।
ಜನಾನಾಂ ಭಾಷಿತಂ ಸರ್ವಂ ಶ್ರೋತವ್ಯಂ ಹಿ ಶುಭಾಶುಭಂ ॥ ೭೬ ॥

---

೭೨. ರಾಜನು ಬೇಟೆಯಾಡುವಾಗ ಆನೆಯನ್ನು ಕೊಲ್ಲಬಾರದು. ಕಾಡಿನಲ್ಲಿ ಬೇಟೆಯಾಡುವಾಗ ಗರ್ಭವಾಗಿರುವ ಜಿಂಕೆಯನ್ನು ಕೊಲ್ಲಲೇ ಬಾರದು.

೭೩. ನಿದ್ರೆಯನ್ನು ಮಾಡುತ್ತಿರುವ ಮೃಗವನ್ನು ಕೊಲ್ಲಬಾರದು. ನೀರು ಕುಡಿಯುತ್ತಿರುವ ಮೃಗವನ್ನು ಹೊಡೆಯಬಾರದು ತನ್ನನ್ನು ಶರಣುಹೊಂದಿದ ಮೃಗವನ್ನೂ ತನ್ನಲ್ಲಿ ನಂಬಿಕೆಯಿಂದಿರುವ ಮೃಗವನ್ನೂ ಕೊಲ್ಲಬಾರದು.

೭೪. ಮೃಗಗಳು ಕಾಡಿನಲ್ಲಿ ರಮಿಸುತ್ತಿರುವಾಗ ಅವನ್ನು ಕೊಲ್ಲಬಾರದು. ಕಾಡಿನ ಕಾವಲುಗಾರರನ್ನು ಎಂಟು ದಿಕ್ಕುಗಳಲ್ಲಿಯೂ ನಿಲ್ಲಿಸಿ ರಾಜನು ಬೇಟೆಯಾಡಬೇಕು.

೭೫. ರಾಜನಾದವನು ರಾತ್ರಿಯ ಹೊತ್ತಿನಲ್ಲಿ ಮಾತನಾಡದೆ ಸ್ನೇಹಿತನೊಡನೆ ಸಂಚರಿಸಬೇಕು. ಸುತ್ತುವಾಗ ರಾಜನ ಉಡುಪನ್ನು ಧರಿಸದೆ ಕಂಬಳಿಯನ್ನು ಮೈಗೆ ಸುತ್ತಿಕೊಂಡು ಹೊರಗಡೆಯಲ್ಲಿ ಸಂಚರಿಸಬೇಕು.

೭೬. ಹಾಗೆ ಊರಿನಲ್ಲಿ ಸಂಚರಿಸುತ್ತ ಊರಿನ ಬಾಗಲಿನ ಕಾವಲುಗಾರರನ್ನೂ ಬಾಗಿಲಿಗೆ ಹಾಕುವ ಅಗುಳಿಯನ್ನೂ ಪರೀಕ್ಷಿಸಬೇಕು. ಜನಗಳು ತನ್ನ ವಿಷಯದಲ್ಲಿ ಕೆಟ್ಟದ್ದನ್ನೋ ಒಳ್ಳೆಯದನ್ನೋ ಏನನ್ನಾಡುತ್ತಾರೆಂದು ಕೇಳಬೇಕು.

ಏವಂ ಸ್ವಯಂ ಪ್ರಗಂತವ್ಯಮಥವಾ ಪ್ರೇಷಯೇದ್ಧಿತಂ ।
ರಾತ್ರೌ ರಾತ್ರೌ ಪುರೇ ಬುಧ್ಯಾ ಶ್ರೋತವ್ಯಂ ಸಕಲೇರಿತಂ ॥ ೭೭ ॥

ನ ಕಾರ್ಯಃ ಕಲಹೋ ಗೇಹೇ ಗೃಹಕೃತ್ಯಂ ಸಭಾಸ್ಥಿತೈಃ ।
ನ ವಾಚ್ಯಮಣುಮಾತ್ರಂ ಹಿ ನ ತೂಷ್ಣೀಂ ಷ್ಠೀವನಂ ಚರೇತ್ ॥ ೭೮ ॥

ನ ಕಂಡೂಯೇಚ್ಛಿರೋ ರಾಜಾ ಸಭಾಯಾಂ ಸ್ವಕರೇಣ ವೈ ।
ಶ್ರುತ್ವಾ ರಿಪೂಣಾಮುತ್ಕರ್ಷಂ ನ ತ್ಯಜೇದ್ಧೈರ್ಯಮಾತ್ಮನಃ ॥ ೭೯ ॥

ಪಲಾಯನಂ ನ ಸಂಗ್ರಾಮಾದ್ರಾಜ್ಞಾ ಕಾರ್ಯಂ ಕದಾಚನ ।
ನ ರಿಪೂಣಾಂ ನಿಜಾಪೃಷ್ಟಿರ್ದರ್ಶನೀಯಾ ಕದಾಚನ ॥ ೮೦ ॥

ನೋಡುಪೇನ ತರೇದ್ರಾಜಾ ನದೀಂ ಮುಖ್ಯಾಂ ಕದಾಪಿ ಹಿ
ಸೇತುಂ ವಿನಾ ನದೀ ರಾಜ್ಞಾ ನೋತ್ತೀರ್ಯಾ ಹಿ ಕದಾಚನ ॥ ೮೧ ॥

---

೭೭. ಈ ರೀತಿಯಾಗಿ ಮಾಡುತ್ತ ತಾನು ಎಲ್ಲ ಕಡೆಯಲ್ಲಿಯೂ ಸುತ್ತುತ್ತಿರಬೇಕು. ಅದಿಲ್ಲದಿದ್ದರೆ ತನಗೆ ಬೇಕಾದವನನ್ನು ತಿಳಿದು ಬರಲು ಕಳುಹಿಸಬೇಕು ಪ್ರತಿರಾತ್ರಿಯಲ್ಲಿಯೂ ಬುದ್ಧಿಪೂರ್ವಕವಾಗಿಯೇ ಯಾರು ಏನನ್ನು ಹೇಳುವರೆಂಬುದನ್ನು ತಿಳಿಯಬೇಕು.

೭೮. ಮನೆಯಲ್ಲಿ ಜಗಳವಾಡಬಾರದು. ಸಭೆಯಲ್ಲಿರುವಾಗ ಗೃಹಕೃತ್ಯಗಳನ್ನು ಸ್ವಲ್ಪವೂ ಮಾತನಾಡಬಾರದು. ವ್ಯರ್ಥವಾಗಿ ಕ್ಯಾಕರಿಸುತ್ತ ಇರಬಾರದು.

೭೯ ರಾಜನಾದವನು ಸಭೆಯಲ್ಲಿ ಕೈಯಿಂದ ತಲೆಯನ್ನು ಕೆರೆದುಕೊಳ್ಳಕೂಡದು. ಶತ್ರುಗಳ ಉತ್ಕರ್ಷವನ್ನು ಕೇಳಿ ತನ್ನ ಧೈರ್ಯವನ್ನು ಬಿಡಬಾರದು.

೮೦-೮೧. ರಾಜನು ಯುದ್ಧದ ದೆಸೆಯಿಂದ ಓಡಿಹೋಗಬಾರದು. ಶತ್ರುಗಳಿಗೆ ತನ್ನ ಪೃಷ್ಠವನ್ನು ತೋರಿಸಲೇಬಾರದು. ರಾಜನು ದೊಡ್ಡ ನದಿಯನ್ನು ತೆಪ್ಪದಿಂದ ದಾಟಬಾರದು. ಸೇತುವೆಯಿಂದಲೇ ನದಿಯನ್ನು ದಾಟಬೇಕೇ ಹೊರತು ಅದಿಲ್ಲದಿದ್ದರೆ ದಾಟಲೇ ಬಾರದು.

ನೋತ್ತೀರ್ಯಾ ನೌಕಯಾ ರಾಜ್ಞಾ ನದೀ ಕ್ವಾಪಿ ಸುತಾದಿಭಿಃ ।
ಕಾರ್ಯಾ ನೇವ ಜಲಕ್ರೀಡಾ ನೌಕಾಯಾಂ ಸ್ವಸುತೈಸ್ಸಹ ॥ ೮೨ ॥

ನ ಸ್ಥೇಯಂ ಹಟ್ಟಮಧ್ಯೇ ಹಿ ತಥಾ ಚೈವ ಚತುಷ್ಪಥೇ ।
ನ ತಾಡಯೇನ್ನಿಜಾಂ ಪತ್ನೀಂ ತಥಾ ಪುತ್ರಂ ನ ತಾಡಯೇತ್ ॥ ೮೩ ॥

ಸ್ವಮುದ್ರಾಂಕಿತಪತ್ರೇಣ ವಿನಾ ಕೇಷಾಂ ಪುರಾದ್ಬಹಿಃ ।
ನ ನಿರ್ಗಮಃ ಪ್ರಕರ್ತವ್ಯಸ್ತಥೈವಾಗಮನಂ ನೃಣಾಂ ॥ ೮೪ ॥

ಕರ್ತ್ತವಾಜ್ಞಾಪನೀಯಂ ನ ಮುದ್ರಾಪತ್ರಾಂಕಿತಂ ವಿನಾ ।
ನಾರಣ್ಯೇ ಲುಂಠನಂ ಚೋರೈಃ ಪಥಿ ಕಾರ್ಯಂ ನೃಪೋತ್ತಮೈಃ ॥ ೮೫ ॥

ನ ಕಾರ್ಯಂ ಮುಂಡನಂ ರಾಜ್ಞಾ ವಿನಾ ತೀರ್ಥಂ ಕದಾಚನ ।
ಪರ್ವಕಾಲೇ ಗೃಹೇ ನೈವ ಸ್ನಾತವ್ಯಂ ಪಾರ್ಥಿವೋತ್ತಮೈಃ ॥ ೮೬ ॥

---

೮೨. ನದಿಗಳನ್ನು ರಾಜನು ಮಕ್ಕಳೊಡನೆ ಹಡಗಿನಿಂದ ದಾಟಬಾರದು. ಹಡಗಿನಲ್ಲಿದ್ದುಕೊಂಡು ಮಕ್ಕಳೊಡನೆ ಜಲಕ್ರೀಡೆಯನ್ನು ಆಡಬಾರದು.

೮೩. ರಾಜನು ಅಂಗಡಿಗಳ ಮಧ್ಯದಲ್ಲಿ ನಿಲ್ಲಬಾರದು. ಅಂತೆಯೇ ರಸ್ತೆಯ ಚೌಕದಲ್ಲಿಯೂ ನಿಲ್ಲಬಾರದು. ತನ್ನ ಹೆಂಡತಿಯನ್ನು ಹೊಡೆಯಬಾರದು. ಅಂತೆಯೇ ಮಗನನ್ನು ಹೊಡೆಯಬಾರದು.

೮೪-೮೫. ಊರಿನೊಳಕ್ಕೆ ಬರುವವನೂ, ಊರಿನಿಂದ ಹೊರಗೆ ಹೋಗುವವನೂ, ಯಾವನಾದರೂ ಕೂಡ ತನ್ನ ರಾಜಮುದ್ರೆಯುಳ್ಳ ಕಾಗದವನ್ನು ತೋರಿಸಿಯೇ ಹೋಗಬೇಕು. ಮತ್ತು ಬರಬೇಕು. ಆ ರೀತಿಯಾಗಿ ಏರ್ಪಡಿಸಬೇಕು. ರಾಜರುಗಳು ಅರಣ್ಯದಲ್ಲಾಗಲಿ ದಾರಿಯಲ್ಲಾಗಲಿ ಕಳ್ಳರು ಕಳ್ಳತನ ಮಾಡದಂತೆ ನೋಡಿಕೊಳ್ಳಬೇಕು.

೮೬. ರಾಜನಾದವನು ತಲೆಯನ್ನು ಬೋಳಿಸಿಕೊಳ್ಳಬಾರದು. ತೀರ್ಥದಲ್ಲಿ ಬೋಳಿಸಿಕೊಳ್ಳಬೇಕಾಗಿ ಬಂದರೆ ಆಗ ಬೋಳಿಸಿಕೊಳ್ಳಬಹುದು. ಪರ್ವಕಾಲಗಳಲ್ಲಿ ರಾಜನು ಮನೆಯಲ್ಲಿ ಸ್ನಾನ ಮಾಡಕೂಡದು.

ನ ಪಾದೇನ ಸ್ಪೃಶೇಚ್ಚಾಪಂ ನ ಪಾದೇನ ಶರಂ ಸ್ಪೃಶೇತ್ ।
ನಾತಿಕ್ರೀಡೇತ್ಸಾರಿಕಾಭಿರ್ದ್ವಿಜೈರ್ವಾದಂ ನ ವೈ ಚರೇತ್ ॥ ೮೭ ॥

ನ ತಿಷ್ಠೇದ್ದ್ವಾರದೇಶೇ ವೈ ನ ಸ್ಥಾತವ್ಯಂ ನೃಪೈಃ ಭುವಿ ।
ರಾಜ್ಞಾ ಮಾರ್ಗೇ ನ ವೈ ಸ್ಥೇಯಂ ನ ಖೇದಂ ನೃಪತಿರ್ಭಜೇತ್ ॥ ೮೮ ॥

ತೋಯಯಾನಯನ ಮಾರ್ಗೇಽಪಿ ಸ್ತ್ರೀಣಾಂ ಸ್ಥೇಯಂ ನೃಪೇಣ ನ ।
ಧಾನ್ಯಂ ಸಮರ್ಘಂ ಕರ್ತುಂ ವೈ ದಂಡಯೇದ್ವ್ಯವಸಾಯಿನಃ ॥ ೮೯ ॥

ದೃಷ್ಟ್ವಾ ಕಿಂಚಿನ್ಮಹಾರ್ಘಂ ತು ಸ್ವೀಯರಾಷ್ಟ್ರೇ ಹಿ ಭೂಭೃತಾ ।
ನ್ಯೂನಃ ಕಾರ್ಯಃ ಕರಭಾರಃ ಕಿಂಚಿದ್ದೇಶಸುಖಾಯ ಚ ॥ ೯೦ ॥

ನಾತಿಶಾಠ್ಯಂ ಕದಾ ಕಾರ್ಯಮೌದಾರ್ಯಂ ದರ್ಶಯೇಜ್ಜನಾನ್ ।
ದ್ರವ್ಯಂ ಗೃಹೀತ್ವಾ ರಾಜ್ಞಾ ಹಿ ಮೋಚನೀಯಾ ನ ತಸ್ಕರಾಃ ॥ ೯೧ ॥

---

೮೭. ಕಾಲಿನಿಂದ ಧನುಸ್ಸನ್ನಾಗಲೀ ಬಾಣವನ್ನಾಗಲೀ ಒದೆಯಬಾರದು. ಕಾಲನ್ನು ತಗಲಿಸಲೂಬಾರದು. ಪಗಡೆಯಾಟವನ್ನು ಅತಿಯಾಗಿ ಆಡಬಾರದು. ಬ್ರಾಹ್ಮಣರೊಡನೆ ವಾದಿಸಬಾರದು.

೮೮. ಹೊಸಲಿನಮೇಲೆ ಬಾಗಿಲಿನಲ್ಲಿ ನಿಲ್ಲಬಾರದು. ರಾಜನಾದವನು ನೆಲದಮೇಲೆ ಕುಳಿತುಕೊಳ್ಳಬಾರದು. ಮಾರ್ಗದಲ್ಲಿ ನಿಂತುಕೊಳ್ಳಬಾರದು. ರಾಜನು ಕಷ್ಟಪಡಲೇ ಬಾರದು.

೮೯. ಹೆಂಗಸರು ನೀರುತರುವ ದಾರಿಯಲ್ಲಿ ರಾಜನು ನಿಲ್ಲಬಾರದು. ರಾಜನು ತನ್ನ ರಾಜ್ಯದಲ್ಲಿ ಪದಾರ್ಥಗಳ ಬೆಲೆಯನ್ನು ಹೆಚ್ಚಿಸುವುದಕ್ಕೂ ಕಡಿಮೆ ಮಾಡುವುದಕ್ಕೂ ಅವಕಾಶಕೊಡದೆ ಒಂದೇ ಸಮನಾಗಿಟ್ಟಿರುವಂತೆ ನೋಡಿಕೊಳ್ಳಬೇಕು.

೯೦ ತನ್ನ ದೇಶದಲ್ಲಿ ಪದಾರ್ಥಗಳ ಬೆಲೆಯು ಹೆಚ್ಚಿರುವಾಗ ರಾಜನು ಕಂದಾಯವನ್ನು ದೇಶಹಿತಕ್ಕೋಸ್ಕರ ಕಡಿಮೆಮಾಡಬೇಕು.

೯೧. ರಾಜನು ಹೆಚ್ಚು ಕ್ರೌರ್ಯವನ್ನು ಯಾವಾಗಲೂ ತೋರಿಸಬಾರದು. ಜನಗಳಿಗೆ ಉದಾರಭಾವವನ್ನು ತೋರಿಸಬೇಕು. ರಾಜನು ಕಳ್ಳರಿಂದ ಹಣವನ್ನು [ಲಂಚವನ್ನು] ತೆಗೆದುಕೊಂಡು ಬಿಟ್ಟು ಬಿಡಬಾರದು.

ಮುಖಂ ದೃಷ್ಟ್ವಾ ನ ವೈ ಕಾರ್ಯೋ ರಾಜ್ಞಾ ನ್ಯಾಯಃ ಕದಾಪಿ ಹಿ ।
ನ ನ್ಯಾಯಶ್ಚ ಪರೈಃ ಕಾರ್ಯಃ ಸ್ವಯಮೇವ ಪ್ರಕಾರಯೇತ್ ॥ ೯೨ ॥

ಅರ್ತಾನಾಂ ಸಕಲಂ ವೃತ್ತಂ ಶ್ರೋತವ್ಯಂ ಸಾದರಂ ನೃಪೈಃ ।
ಅರ್ತ್ತ ಆಕಾರಣೀಯೋ ಹಿ ನಿಕಟಂ ಕೃಪಯಾ ನೃಪೈಃ ॥ ೯೩ ॥

ಆತ್ಮಾನಂ ಮಾನಯೇನ್ನೈವ ವೈದ್ಯಂ ಚ ಗಣಕಂ ನಟಂ ।
ಪಂಡಿತಂ ವೈದಿಕಂ ವೀರಂ ಗಾಯಕಂ ಕೃತಧರ್ಮಿಣಂ ॥ ೯೪ ॥

ಯಜ್ಞೋ ದಾನಂ ಜಪೋ ಹೋಮಃ ಸಂಧ್ಯಾಧ್ಯಾನಂ ಶಿವಾರ್ಚನಂ ।
ಸ್ನಾನಂ ಪುರಾಣಶ್ರವಣಂ ಭಕ್ತ್ಯಾ ಕಾರ್ಯಂ ನೃಪೋತ್ತಮೈಃ ॥ ೯೫ ॥

ನ ಮಾದಕಂ ವಸ್ತು ಸೇವ್ಯಂ ನ ಕೃಚ್ಛ್ರಾದಿಕಮಾಚರೇತ್ ।
ನ ಯಾತ್ರಾ ಸ್ವಪದಾ ಕಾರ್ಯಾ ಸಪ್ತದ್ವೀಪಾಧಿಪೇನ ಹಿ ॥ ೯೬ ॥

---

೯೨. ಮನುಷ್ಯನ ಮುಖವನ್ನು ನೋಡಿ ನ್ಯಾಯವನ್ನು ಅದರಂತೆ ಆಚರಿಸಬಾರದು. ನ್ಯಾಯ ವಿಚಾರಣೆಯನ್ನು ಪರರ ಕೈಯ್ಯಲ್ಲಿ ಮಾಡಿಸದೆ ತಾನೇ ಮಾಡಬೇಕು.

೯೩. ಕಷ್ಟಪಟ್ಟವರು ಹೇಳುವ ಕಷ್ಟವನ್ನು ರಾಜನು ಆದರದಿಂದ ಕೇಳಬೇಕು. ತೊಂದರೆಗಳಿಗೆ ಒಳಗಾದವರನ್ನು ರಾಜನು ದಯೆಯಿಂದ ಹತ್ತಿರಕ್ಕೆ ಬರಮಾಡಿಕೊಳ್ಳಬೇಕು.

೯೪. ರಾಜನು ತನ್ನನ್ನು ತಾನು ಗೌರವಿಸಿಕೊಳ್ಳಬಾರದು. ವೈದ್ಯ, ಜೋಯಿಸ, ನಟ, ಪಂಡಿತ, ವೈದಿಕ, ವೀರ, ಗಾಯಕ, ಧರ್ಮವನ್ನು ಮಾಡಿದವನು ಇವರನ್ನು ತಾವುಗಳೇ ದೊಡ್ಡವರೆಂದು ಹೇಳಿಕೊಳ್ಳುವಂತೆ ರಕ್ಷಿಸಬೇಕು.

೯೫. ಯಜ್ಞ, ದಾನ, ಜಪ, ಹೋಮ, ಸಂಧ್ಯಾ,ಧ್ಯಾನ, ಶಿವಾರ್ಚನೆ, ಸ್ನಾನ, ಪುರಾಣಶ್ರವಣ, ಇವನ್ನು ರಾಜನು ಭಕ್ತಿಯಿಂದ ಆಚರಿಸಬೇಕು.

೯೬. ರಾಜನು ಮದವನ್ನುಂಟುಮಾಡುವ ಹೆಂಡ ಮುಂತಾದುವನ್ನು ಸೇವಿಸಬಾರದು ಕೃಚ್ಛ್ರ ಅತಿಕೃಚ್ಛ್ರ ಮುಂತಾದ ದೇಹಕ್ಕೆ ಶ್ರಮವನ್ನು ಕೊಡುವ ವ್ರತಗಳನ್ನು ಆಚರಿಸಬಾರದು. ಚಕ್ರವರ್ತಿಯಾದವನು ಕಾಲಿನಿಂದ ನಡೆದುಕೊಂಡು ತೀರ್ಥಯಾತ್ರೆಯನ್ನು ಮಾಡಬಾರದು.

ಫಲಾಹಾರಶ್ಚ ಕರ್ತವ್ಯೋ ರಾಜ್ಞಾ ಹ್ಯೇಕಾದಶೀದಿನೇ ।
ನಿರ್ಜಲಶ್ಚೋಪವಾಸಶ್ಚ ನ ಕಾರ್ಯಃ ಪೃಥಿವೀ ಭೃತಾ ॥ ೯೭ ॥

ಯೇನ ಯದ್ಯಾಚಿತಂ ರಾಜ್ಞೇ ಭೂಸುರೇಣಾರ್ಪಯೇಚ್ಚ ತತ್ ।
ತಸ್ಮೈ ವಿಪ್ರಾಯ ರಾಜ್ಞಾ ಹಿ ನೃಪಾ ಭೂಸುರದೈವತಾಃ ॥ ೯೮ ॥

ಉತ್ಸಾಹೇ ಬಂಧನಾತ್ತ್ಯಾಜ್ಯಾ ಯೇ ಯೇ ಕ್ರೋಧಾತ್ಸುರಕ್ಷಿತಾಃ ।
ನಿಜಾಜ್ಞಾಭಂಗತಾಂ ದೃಷ್ಟ್ವಾ ಜ್ಞೇಯಂ ಸ್ವೀಯಂ ಹೃತಂ ಶಿರಃ ॥ ೯೯ ॥

ಸ್ವೀಯದೂತಾಪಮಾನೋ ಯಃ ಸ ಸ್ವೀಯ ಶ್ಚಿಂತಯೇನ್ನೃಪೈಃ ।
ಸ್ವೀಯದೂತಸ್ಯ ಸನ್ಮಾನೋ ರಾಜ್ಞಾ ಜ್ಞೇಯಸ್ಸ ಆತ್ಮನಃ ॥ ೧೦೦ ॥

---

೯೭. ರಾಜನು ಏಕಾದಶಿಯ ದಿನ ಫಲಾಹಾರವನ್ನು ಮಾಡಬೇಕು. ನೀರನ್ನು ಕುಡಿಯದಂತಹ ಉಪವಾಸವನ್ನು ಮಾಡಬಾರದು.

೯೮. ಯಾವ ಬ್ರಾಹ್ಮಣನು ಏನನ್ನು ಕೇಳಿದರೂ ರಾಜನಾದವನು ಅದನ್ನು ಅವರಿಗೆ ಕೊಟ್ಟು ಬಿಡಬೇಕು. ರಾಜರಿಗೆ ಬ್ರಾಹ್ಮಣರೇ ದೇವತೆಗಳು.

೯೯. ರಾಜನ ಮದುವೆ ಮುಂತಾದ ಉತ್ಸಾಹದ ಸಮಯಗಳಲ್ಲಿ ಬಂದೀಖಾನೆಯಲ್ಲಿರುವವರನ್ನು ಬಿಟ್ಟು ಬಿಡಬೇಕು. ತನ್ನ ಅಪ್ಪಣೆಗೆ ಯಾವ ರೀತಿಯಲ್ಲಿ ಭಂಗಬಂದರೂ ಅದನ್ನು ರಾಜನು ತನ್ನತಲೆಯು ಹೋದಂತೆ ಭಾವಿಸಬೇಕು.

೧೦೦. ರಾಜನು ತನ್ನ ದೂತರಿಗೆ ಆದ ಅವಮಾನವು ತನ್ನದೆಂದು ತಿಳಿಯಬೇಕು. ಮತ್ತು ತನ್ನ ದೂತನಿಗೆ ಆದ ಬಹುಮಾನವು ತನ್ನದೆಂದೇ ಆ ರಾಜನು ತಿಳಿಯಬೇಕು.

ಏವಂ ಕುಶ ಮಯಾ ಪ್ರೋಕ್ತಾ ರಾಜನೀತಿಸ್ಸವಿಸ್ತರಾ ।
ದಿನಚರ್ಯಾ ಮಯಾ ಯ ದ್ವತ್ಕ್ರಿಯತೇ ತ್ವಂ ತಥಾ ಕುರು ॥ ೧೦೧ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಉತ್ತರಾರ್ಧೇ ರಾಜನೀತಿಶಿಕ್ಷಣಂ ನಾಮ ಷೋಡಶಸ್ಸರ್ಗಃ ಸಮಾಪ್ತಃ

———

೧೦೧. ಎಲೈ ಕುಶನೇ ! ಈ ರೀತಿಯಾಗಿ ರಾಜನೀತಿಯನ್ನು ವಿಸ್ತಾರವಾಗಿ ಹೇಳಿದ್ದೇನೆ. ನಾನು ದಿನವೂ ಯಾವ ರೀತಿಯಲ್ಲಿ ದಿನಚರಿಯ ಆಚಾರವನ್ನು ಆಚರಿಸುತ್ತಿದ್ದೇನೆಂಬುದನ್ನು ನೋಡಿಕೊಂಡು ಅದರಂತೆ ಅದನ್ನೇ ಆಚರಿಸು.

ಇಂತು ಶ್ರೀ ವಾಲ್ಮೀಕಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ರಾಜನೀತಿ ಶಿಕ್ಷಣವೆಂಬ ಹದಿನಾರನೆಯ ಸರ್ಗವು ಮುಗಿದುದು.

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಹದಿನಾರನೆಯ ಸರ್ಗದ ಸಾರಾಂಶವು

ಶ್ರೀರಾಮನು ರಾಜ್ಯಭಾರವಾಡುತ್ತಿರಲು ಒಂದುಸಾರಿ ಅವನು ಕುಶನನ್ನೂ ಲವನನ್ನೂ ತಮ್ಮಂದಿರನ್ನೂ ಕರೆಸಿ ಗುಟ್ಟಾದ ಜಾಗದಲ್ಲಿ ಕುಳಿತುಕೊಂಡು ಅವರಿಗೆ ರಾಜನೀತಿಯನ್ನು ಉಪದೇಶಿಸಿದನು.

ಎಲೈ ಬಾಲಕರಿರಾ! ರಾಜನೀತಿಯನ್ನು ಹೇಳುತ್ತೇನೆ. ಸ್ಥಿರವಾದ ಮನಸ್ಸಿನಿಂದ ಕೇಳಿರಿ. ಎಲೈ ಕುಶನೆ! ನಾನು ವೈಕುಂಠಕ್ಕೆ ಹೋದಮೇಲೆ ನೀನು ರಾಜನಾಗುತ್ತೀಯೆ. ಆದುದರಿಂದ ನೀನು ಬಹು ಜಾಗರೂಕತೆಯಿಂದ ಕೇಳು. ಬಹುಕಾಲ ಬಾಳಬೇಕೆಂಬ ರಾಜನು ಸುಳ್ಳನ್ನು ಹೇಳಲೇ ಕೂಡದು. ಅತಿ ಕಾಮವನ್ನೂ ಕೋಪವನ್ನೂ ಬಿಟ್ಟ ರಾಜನು ಸುಖಿಯಾಗುತ್ತಾನೆ ರಾಜನಾದವನು ಪರರ ಹೆಂಡಿರನ್ನು ಅನುಭವಿಸಬಾರದು. ಸತ್ಯ, ಶೌಚ, ದಯೆ, ಕ್ಷಾಂತಿ, ಋಜುಬುದ್ಧಿ, ಮಧುರವಾದ ಮಾತು. ಬ್ರಾಹ್ಮಣ ಗೋವು ಯತಿಗಳಲ್ಲಿ ಭಕ್ತಿ, ಇವೇಳೂ ರಾಜನಿಗೆ ಒಳ್ಳೆಯ ಗುಣಗಳು. ನಿದ್ರೆ, ಆಲಸ್ಯ, ಮದ್ಯಪಾನ, ಜೂಜು, ಸುಳಿತನ. ಅತಿಕ್ರೀಡೆ, ಮಿತಿಮೀರಿದ ಬೇಟೆ ಇವೇಳೂ ರಾಜನಿಗೆ ದೋಷಗಳು. ರಾಜನು ಪ್ರಜೆಗಳನ್ನು ಮಕ್ಕಳಂತೆ ಕಾಪಾಡಬೇಕು. ಪ್ರಜೆಗಳಿಂದ ಅವರ ಆದಾಯದಲ್ಲಿ ಆರನೆಯ ಒಂದು ಭಾಗವನ್ನು ಕಂದಾಯವನ್ನಾಗಿ ತೆಗೆದು ಕೊಳ್ಳಬೇಕು. ಚಾರರಿಂದ ದೇಶದ ವಿಷಯಗಳನ್ನು ತಿಳಿದುಕೊಳ್ಳಬೇಕು. ಐದೈದು ಜನರನ್ನಾಗಲಿ ಕೊನೆಗೆ ಇಬ್ಬಿಬ್ಬರನ್ನಾಗಲಿ ವೇಷ ಮರೆಸಿದ ಚಾರರನ್ನು ಶತ್ರುಗಳ ರಾಜ್ಯದಲ್ಲಿ ಬಿಟ್ಟಿರಬೇಕು. ಪರದೂತನನ್ನು ನಂಬಬಾರದು. ಮಾನಾವಮಾನಗಳನ್ನು ಕಾಲವರಿತು ಮಾಡಬೇಕು. ಮನಸ್ಸಿನಲ್ಲಿರುವುದನ್ನು ಒಬ್ಬರಿಗೂ ಹೇಳದೆ ಅದು ಸಿದ್ಧವಾದಮೇಲೆ ತಿಳಿಯುವಂತೆ ಮಾಡಬೇಕು. ಪ್ರತಿಯೊಂದು ತಿಂಗಳಲ್ಲಿಯೂ ಕೋಶವನ್ನು ಪರೀಕ್ಷಿಸಬೇಕು. ಬರತಕ್ಕದ್ದನ್ನು ಯಾವಾಗಲೂ ತೆಗೆದುಕೊಳ್ಳುತ್ತಿರಬೇಕು. ಸೇವಕರನ್ನು ನಂಬಬಾರದು. ವರ್ಷಕ್ಕೊಂದುಬಾರಿ ಪಟ್ಟಣದ ಕೋಟೆ ಕೊತ್ತಲಗಳನ್ನೂ ನಾಲ್ಕುತಿಂಗಳಿಗೊಂದಾವರ್ತಿ ಶಸ್ತ್ರಾಗಾರೂ ರಸ್ತೆಗಳನ್ನೂ ಪಕ್ಷಕ್ಕೊಂದು ಬಾರಿ ಆನೆಗಳನ್ನೂ ವಾರಕ್ಕೊಮ್ಮೆ ಕುದುರೆಗಳನ್ನೂ ಮೂರುದಿನಕ್ಕೊಮ್ಮೆ ಹಕ್ಕಿಗಳನ್ನೂ ದಿನಕ್ಕೊಮ್ಮೆ ದನಗಳನ್ನೂ ಅಂತಃಪುರವನ್ನೂ ಪರೀಕ್ಷಿಸಬೇಕು.

ರಾಜನಾದವನು ತನ್ನ ಆದಾಯದಲ್ಲಿ ನಾಲ್ಕನೆಯ ಒಂದು ಭಾಗವನ್ನು ಖರ್ಚುಮಾಡಬೇಕು. ಕಡೆಯುಪಕ್ಷ ಮೂರನೆಯ ಒಂದು ಭಾಗವನ್ನಾದರೂ ಮಾಡಬೇಕು. ಅರ್ಧಭಾಗವನ್ನು ಯಾವಾಗಲೂ ಖರ್ಚುಮಾಡಲೇ ಬಾರದು. ಮಂತ್ರಿಗಳ ಇಷ್ಟವನ್ನು ನೆರವೇರಿಸುತ್ತಿರಬೇಕಲ್ಲದೆ ಅವರಿಗೆ ಕೋಪಬರುವ ಕೆಲಸವನ್ನು ಮಾಡಬಾರದು ಅವರಿಗೆ ಹೆಚ್ಚು ಗೌರವವನ್ನೂ ಕೊಡಕೂಡದು. ಅವರನ್ನು ಏಳಿಗೆಗೆ ತರಲೂ ಕೂಡದು. ನಗರ ರಕ್ಷಕರನ್ನು ರಾಜನು ವಿರೋಧಿಗಳನ್ನಾಗಿ ಮಾಡಿಕೊಳ್ಳಬಾರದು ಒಬ್ಬನನ್ನೇ ರಾಜನು ಬಹುಕಾಲ ಎಲ್ಲಿಯೂ ಪಾಲಕನನ್ನಾಗಿ ಇಡಬಾರದು. ದೇಶದ ಸರಹದ್ದಿನ ಕಾವಲುಗಾರನನ್ನು ನೋಡಿ ಆಗಾಗ್ಗೆ ಶಿಕ್ಷಿಸುತ್ತಿರಬೇಕು. ರಾಜನಾದವನು ಶತ್ರುವಿನ ಸ್ಥಿತಿಯನ್ನು ಮೊದಲು ತಿಳಿದುಕೊಂಡು ಅನಂತರ ತನ್ನ ಸ್ಥಿತಿಯನ್ನು ನೋಡಿಕೊಳ್ಳಬೇಕು. ತಾನು ಯುದ್ಧಕ್ಕೆ ಹೋಗುವಾಗ ದಿಕ್ಕನ್ನು ಮೋಸಪಡಿಸಿ ಪ್ರಯಾಣಮಾಡುತ್ತಿರಬೇಕು. ಯಂತ್ರ ವಾಹನ ಆಯುಧ, ಧಾನ್ಯಗಳನ್ನು ರಾಜನು ಯಾವಾಗಲೂ ವೃದ್ಧಿಪಡಿಸಬೇಕು. ನೀರಿಗೋಸ್ಕರ ಎಷ್ಟು ಖರ್ಚನ್ನಾದರೂ ಮಾಡಬಹುದು. ರಾಜನಾದವನು ರಕ್ಷಕರಿಲ್ಲದೆ ಪಟ್ಟಣದಿಂದ ಹೊರಗೆ ಹೋಗಬಾರದು. ಪಟ್ಟಣದಲ್ಲಿ ಒಬ್ಬನೇ ಸುತ್ತಬಾರದು. ಒಬ್ಬನೇ ಕುಳಿತುಕೊಳ್ಳಬಾರದು. ಬರಿಯಕಾಲಿನಲ್ಲಿ ತಿರುಗಬಾರದು. ದ್ವಾರಪಾಲ, ನೀರಿನವನು ಆಗಸ ಇವರನ್ನು ನಂಬಬಾರದು. ಒಗೆದ ಬಟ್ಟೆಗಳನ್ನು ರಾಜನು ಪರೀಕ್ಷಿಸಬೇಕು. ಇತರರು ಕೊಟ್ಟ ಆಹಾರವನ್ನು ಪರೀಕ್ಷಿಸದೆ ತಿನ್ನಬಾರದು. ರಾಜರೊಡನೆ ದೂರದಿಂದಲೇ ಮಾತನಾಡುತ್ತಿರಬೇಕಲ್ಲದೆ ಹತ್ತಿರಕ್ಕೆ ಸೇರಿಸಬಾರದು. ರಾಜನು ದಿನಕ್ಕೆ ಒಂದುಬಾರಿಯಾದರೂ ಸಭೆಯನ್ನು ನಡಿಸಬೇಕು. ಆ ಸಭೆಯಲ್ಲಿ ಅರ್ಧಯಾಮದಷ್ಟು ಕಾಲನಿಲ್ಲಬೇಕೇ ಹೊರತು ಬಹುಕಾಲ ಇರಬಾರದು. ನಾಪಿತನಲ್ಲಿ ವಿಶ್ವಾಸವನ್ನು ಹೊಂದಬಾರದು ವಿದ್ವಾಂಸರನ್ನೂ ಕಲಾವಂತರನ್ನೂ ಗೌರವಿಸಬೇಕು. ಪ್ರಜೆಗಳಿಗೆ ಕಷ್ಟವನ್ನು ಕೊಡಕೂಡದು. ಜನರು ಹೋಗುವಾಗಲೂ ಬರುವಾಗಲೂ ರಾಜನನ್ನು ವಂದಿಸಬೇಕು. ರಾತ್ರಿಯವೇಳೆ ರಾಜನು ಸ್ನೇಹಿತನನ್ನು ಕರೆದುಕೊಂಡು ಕಂಬಳಿಯನ್ನು ಹೊದೆದುಕೊಂಡು ಹೊರಗೆ ಸಂಚರಿಸಿ ಪರೀಕ್ಷಿಸುತ್ತಿರಬೇಕು. ಶತ್ರುಗಳ ಶೌರ್ಯವನ್ನು ಕೇಳಿ ತಾನು ಧೈರ್ಯವನ್ನು ಬಿಡಬಾರದು. ತನ್ನ ಮುದ್ರೆಯಿಲ್ಲದೆ ಪರರು ಬರಬಾರದು. ಹೋಗಲೂ ಬಾರದು. ಧಾನ್ಯ ಬೆಳೆಯುವಂತೆ ವ್ಯವಸಾಯಗಾರರನ್ನು ಪ್ರೋತ್ಸಾಹಿಸಬೇಕು. ಜನರಿಗೆ ಔದಾರ್ಯವನ್ನು ತೋರಿಸಬೇಕು. ರಾಜನು ಲಂಚತೆಗೆದುಕೊಂಡು ಕಳ್ಳರನ್ನು ಬಿಡಬಾರದು. ಕಷ್ಟಪಡುವವರ ಕಷ್ಟವನ್ನು ಕೇಳಬೇಕು. ಮಾದಕ ವಸ್ತುವನ್ನು ಸೇವಿಸಬಾರದು. ಸಂತೋಷಕಾಲದಲ್ಲಿ ಬಂದಿಗಳನ್ನು ಬಿಡಬೇಕು. ತನ್ನ ಆಜ್ಞೆಯು ಭಂಗವಾದರೆ ತಲೆಹೋದಂತೆ ಎಂದು ತಿಳಿಯಬೇಕು: ತನ್ನ ದೂತನಿಗಾದ ಸನ್ಮಾನವು ತನದೆಂದೇ ತಿಳಿಯಬೇಕು. ಎಲೈ ಕುಶನೇ! ಇವನ್ನು ಯೋಗ್ಯವಾದ ಇತರ ಮಾತುಗಳನ್ನೂ ನೋಡಿ ಆಚರಿಸು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ ಸಪ್ತದಶಸ್ಸರ್ಗಃ

॥ ಶ್ರೀ ರಾಮದಾಸ ಉವಾಚ ॥

ಏಕದಾ ಕುಶಕನ್ಯಾಯಾ ಹೇಮಾಯಾಶ್ಚ ಸ್ವಯಂವರಂ ।
ಅಯೋಧ್ಯಾಯಾಂ ಚಕಾರಾಥ ರಾಮಶ್ಚಾತಿ ಮಹೋತ್ಸವೈಃ ॥ ೧ ॥

ಸಮಾಹೂತಾ ನೃಪಾಸ್ಸರ್ವೇ ನಾನಾದ್ವೀಪಾಂತರಸ್ಥಿತಾಃ ।
ಸಮಾಜಗ್ಮುಸ್ಸುವೇಷಾಶ್ಚ ಸಭಾಯಾಂ ತಸ್ಥುರಾಸನೇ ॥ ೨ ॥

ಯಯುರ್ದೇವಾಸ್ಸಗಂಧರ್ವಾ ಮುನಯೋಽಪಿ ಸಮಾಯಯುಃ ।
ಯಯುರ್ವಿದ್ಯಾಧರಾ ನಾಗಾಃ ಕಿನ್ನರಾದಾಸ್ಸಮಾಯಯುಃ ॥ ೩ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ಹದಿನೇಳನೆಯ ಸರ್ಗವು

೧. ಶ್ರೀ ರಾಮದಾಸನು ಹೇಳಿದನು–ರಾಮನು ಕುಶನ ಮಗಳಾದ ಹೇಮೆಯೆಂಬುವಳಿಗೆ ಒಂದುಸಾರಿ ಅಯೋಧ್ಯೆಯಲ್ಲಿ ಸ್ವಯಂವರ ಮಹೋತ್ಸವವನ್ನು ಮಾಡಲು ಪ್ರಯತ್ನಿಸಿದನು.

೨. ಆಗ ನಾನಾ ದ್ವೀಪಗಳಲ್ಲಿಯೂ ಇರುವ ಎಲ್ಲಾ ರಾಜರನ್ನೂ ಕರೆಸಿದನು. ಅವರೆಲ್ಲರೂ ಒಳ್ಳೆಯ ವೇಷವನ್ನು ಧರಿಸಿ ಬಂದು ಸಭೆಯಲ್ಲಿ ಆಸನದಲ್ಲಿ ಕುಳಿತರು.

೩. ದೇವತೆಗಳೂ ಗಂಧರ್ವರೂ ಮುನಿಗಳೂ ಸ್ವಯಂವರಕ್ಕೆ ಬಂದರು. ವಿಧ್ಯಾಧರರು ನಾಗರು, ಕಿನ್ನರರು ಎಲ್ಲರೂ ಬಂದರು. ಹೀಗೆ ಎಲ್ಲರೂ ಬಂದು ಆ ಸಭೆಯಲ್ಲಿ ತಮ ತಮಗೆ ಗೊತ್ತುಮಾಡಿದ್ದ ಸ್ಥಾನಗಳಲ್ಲಿ ಕುಳಿತುಕೊಂಡರು.

ತದಾ ಸಭಾಯಾಮಾನೀತಾ ಹೇಮಾಲಂಕಾರಭೂಷಿತಾ ।
ಆರುಹ್ಯ ಶಿಬಿಕಾಯಾಂ ತು ರುಕ್ಮಮಯ್ಯಾಂ ವರಾನನಾ ॥ ೪ ॥
ನವರತ್ನಮಯೀಂ ಮಾಲಾಂ ಬಿಭ್ರತೀ ಸಾ ಸ್ವಯಂವರಾ ।
ದದರ್ಶ ನೃಪತೀನ್ ಸರ್ವಾನ್ನೃಪಪುತ್ರಾನ್ಸವಿಸ್ತರಂ ॥ ೫ ॥
ತದ್ಭ್ರೂಚಾಪವಿನಿರ್ಮುಕ್ತೈಸ್ತತ್ಕಟಾಕ್ಷಪತತ್ರಿಭಿಃ ।
ಸಂಭಿನ್ನಾಸ್ತೇ ನೃಪಾಸ್ಸರ್ವೇ ಕೇ ವಯಂ ನ ವಿದುಸ್ತದಾ ॥ ೬ ॥
ಏತಸ್ಮಿನ್ನಂತರೇ ತತ್ರಾವಂತಿ ನಾಥಸುತೋ ಮಹಾನ್ ।
ಚಿತ್ರಾಂಗದಸ್ಸಭಾಯಾಶ್ಚ ತಾಂ ಜಹಾರ ಕುಶಾತ್ಮಜಾಂ ॥ ೭ ॥
ದೃಷ್ಟ್ವಾ ಕಾರ್ಯಾಂತರವ್ಯಗ್ರಾನ್ ರಾಮಾದೀನ್ವೇಗವತ್ತರಃ ।
ಮೋಹನಾಸ್ತ್ರೇಣ ಸಕಲಾನ್ ವೀರಾನ್ ಕೃತ್ವಾತಿ ಮೋಹಿತಾನ್ ॥ ೮ ॥

---

೪. ಅನಂತರ ಆ ಹೇಮೆಗೆ ಉಡಿಗೆ ತೊಡಿಗೆಗಳನ್ನು ಅಳವಡಿಸಿ ಚಿನ್ನದ ಪಲ್ಲಕ್ಕಿಯಲ್ಲಿ ಆಕೆಯನ್ನು ಕೂರಿಸಿಕೊಂಡು ಸಭೆಗೆ ಕರತಂದರು.

೫. ಆಕೆಯು ಕೈಯ್ಯಲ್ಲಿ ನವರತ್ನಗಳಿಂದ ಕೂಡಿದ ಮಾಲೆಯನ್ನು ಹಿಡಿದಿದ್ದಳು. ವರನನ್ನು ವರಿಸಲು ಸಿದ್ಧಳಾಗಿ ಒಂದು ಕಡೆಯಿಂದ ರಾಜರನ್ನೂ ರಾಜಪುತ್ರರನ್ನೂ ನೋಡುತ್ತ ಬಂದಳು.

೬. ಆಕೆಯನ್ನು ನೋಡಿದ ಆ ರಾಜಪುತ್ರರೂ ಕೂಡ ಆಕೆಯ ಹುಬ್ಬೆಂಬ ಧನುಸ್ಸಿನಿಂದ ಹೊರ ಹೊರಟ ಕಟಾಕ್ಷವೆಂಬ ಬಾಣಗಳಿಂದ ಹೊಡೆಯಲ್ಪಟ್ಟವರಾಗಿ ನಾವು ಎಲ್ಲಿದ್ದೇವೆ ? ನಾವು ಯಾರು ? ಏತಕ್ಕೆ ಬಂದಿದ್ದೇವೆ ? ಎಂಬುದನ್ನೇ ಮರೆತುಬಿಟ್ಟರು.

೭. ಆಕೆಯು ಹೀಗೆ ಬರುತ್ತಿರುವಲ್ಲಿ ಅವಂತಿರಾಜನ ಮಗನಾದ ಬಲಿಷ್ಠನಾದ ಚಿತ್ರಾಂಗದನೆಂಬ ರಾಜಕುಮಾರನು ಆ ಕುಶನ ಮಗಳಾದ ಹೇಮೆಯನ್ನು ಅಪಹರಿಸಿಕೊಂಡು ಹೊರಟು ಹೋದನು.

೮-೯. ರಾಮನೂ ಅವನ ತಮ್ಮಂದಿರೂ ಕುಶನೇ ಮುಂತಾದವರೂ ಬೇರೆ ಬೇರೆ ಕೆಲಸದಲ್ಲಿ ಆಸಕ್ತರಾಗಿದ್ದುದನ್ನು ನೋಡಿ ಉಳಿದ ವೀರರಮೇಲೆ ಮೋಹನಾಸ್ತ್ರವನ್ನು ಬಿಟ್ಟು ಅವರನ್ನು ಪ್ರಜ್ಞೆ ತಪ್ಪಿಸಿ ಆ ಹೇಮೆಯನ್ನು ಹಿಡಿದು

ರಥೇ ನಿವೇಶ್ಯ ತಾಂ ಹೇಮಾಂ ಹೇಮಾಭಾಂ ವೇಗವತ್ತರಃ ।
ಚಿತ್ರಾಂಗದೋ ಬಹಿರ್ಗತ್ವಾ ಕ್ರೋಶಮಾತ್ರೇ ಸ್ಥಿರೋಭವತ್ ॥ ೯ ॥

ಕಿಂತೂಷ್ಣೀಂ ಚೋರವನ್ನೇಯಾ ಹೇಮೇಯಂ ಕುಶಬಾಲಿಕಾ ।
ಇತಿನಿಶ್ಚಿತ್ಯ ಮೇಧಾವೀ ತಸ್ಥೌ ಚಿತ್ರಾಂಗದೋ ಮಹಾನ್ ॥ ೧೦ ॥

ಏತಸ್ಮಿನ್ನಂತರೇ ಪುರ್ಯಾಂ ಹಾಹಾಕಾರೋ ಮಹಾನಭೂತ್ ।
ನೀತಾ ಹೇಮಾ ಚೋಗ್ರಬಾಹೋಃ ಪುತ್ರೇಣಾತಿಬಲೀಯಸಾ ॥ ೧೧ ॥

ನೃಪಾಸ್ಸರ್ವೇ ಸಮುತ್ತಸ್ಥುಸ್ಸಭಾಯಾಂ ಖಿನ್ನಮಾನಸಾಃ ।
ಉಪಸಂಹರಿತೇ ತೇನ ಮೋಹನಾಸ್ತ್ರೇಣ ಸಂಭ್ರಮಾತ್ ॥ ೧೨ ॥

ಚಿತ್ರಾಂಗದೇನ ಯೋದ್ಧುಂ ತೇ ಸ್ವಸೈನ್ಯೈಃ ನಿರ್ಯಯುಃ ನೃಪಾಃ ।
ಬಹಿಸ್ಸಾಕೇತನಗರಾತ್ ಕ್ರೋಧಾದಾರಕ್ತಲೋಚನಾಃ ॥ ೧೩ ॥

ರಥದಲ್ಲಿಟ್ಟುಕೊಂಡು ಪಟ್ಟಣದಿಂದ ಜಾಗ್ರತೆಯಾಗಿ ಹೊರಕ್ಕೆ ಬಂದು ಆ ಪಟ್ಟಣಕ್ಕಿಂತಲೂ ಕ್ರೋಶದಷ್ಟು ದೂರಕ್ಕೆ ಹೊರಕ್ಕೆ ಹೋಗಿ ನಿಂತನು.

೧೦. ಅಲ್ಲಿ ನಿಂತು ಆ ಚಿತ್ರಾಂಗದನು ನಾನು ಕಳ್ಳನಂತೆ ಈಕೆಯನ್ನು ಸುಮ್ಮನೇ ಕದ್ದು ತೆಗೆದುಕೊಂಡು ಹೋಗುತ್ತಿರುವುದು ಯುಕ್ತವಲ್ಲ. ಏನು ಮಾಡಲಿ ? ಎಂಬದಾಗಿ ಯೋಚಿಸುತ್ತ ಅಲ್ಲಿ ನಿಂತನು.

೧೧. ಇತ್ತ ಊರೊಳಗೆ ಹೇಮೆಯನ್ನು ಹೊತ್ತುಕೊಂಡು ಹೋದುದನ್ನು ತಿಳಿದು ಬಹುವಾದ ಕೋಲಾಹಲವೆದ್ದಿತು. ಉಗ್ರಬಾಹುವಿನ ಮಗನು ಹೇಮೆಯನ್ನು ಎತ್ತಿಕೊಂಡು ಹೋದನೆಂದು ಎಂದುಕೊಳ್ಳುತ್ತಿದ್ದರು.

೧೨. ಆಗ ಆ ಸಭೆಯಲ್ಲಿದ್ದ ರಾಜರೆಲ್ಲರೂ ಖೇದಗೊಂಡವರಾಗಿ ಮೇಲಕ್ಕೆದ್ದರು. ಅಷ್ಟುಹೊತ್ತಿಗೆ ಆ ಚಿತ್ರಾಂಗದನು ತಾನು ಬಿಟ್ಟಿದ್ದ ಆ ಮೋಹನಾಸ್ತ್ರವನ್ನು ಉಪಸಂಹಾರಮಾಡಿದ್ದನು.

೧೩. ಮೇಲಕ್ಕೆದ್ದ ಆ ರಾಜರೆಲ್ಲರೂ ಚಿತ್ರಾಂಗದನೊಡನೆ ಯುದ್ಧ ಮಾಡಲು ಸಿದ್ಧರಾಗಿ ತಮ್ಮ ತಮ್ಮ ಸೈನ್ಯದೊಡನೆ ಹೊರಟರು ಕೋಪದಿಂದ ಕಣ್ಣನ್ನು ಕೆಂಪಗೆಮಾಡಿಕೊಂಡು ಊರಹೊರಗೆ ಆ ಚಿತ್ರಾಂಗದ ನಿದ್ದಲ್ಲಿಗೆ ಹೋದರು.

ತೂಷ್ಣೀಮೇವೋಗ್ರಬಾಹುಸ್ಸ ದದರ್ಶ ಪುತ್ರಕೌತುಕಂ ।
ಏತಸ್ಮಿನ್ನಂತರೇ ಸರ್ವೇ ತದ್ರಥಂ ಪಾರ್ಥಿವೋತ್ತಮಾಃ ॥ ೧೪ ॥

ಸಂವೇಷ್ಟ್ಯ ಕೋಟಿಶೈಶ್ಶಸ್ತ್ರೈರ್ವವರ್ಷುಶ್ಚೋಗ್ರಬಾಹುಜಂ ।
ತದಾ ಚಿತ್ರಾಂಗದೋ ವೀರೋ ವಾಯವ್ಯಾಸ್ತ್ರೇಣ ಪಾರ್ಥಿವಾನ್ ॥ ೧೫ ॥

ಗಗನೇ ಭ್ರಾಮಯಾಮಾಸ ವಾಹನಾದ್ಯೈಸ್ಸಮನ್ವಿತಾನ್ ।
ತತೋ ರಾಮಾಜ್ಞಯಾ ಸಪ್ತ ಲವಾದ್ಯಾ ನಿರ್ಯಯುಃ ಪುರಾತ್ ॥ ೧೬ ॥

ಉತ್ಸವಾರ್ಥಂ ಸಮಾಯಾತಾಃ ಸ್ವಸ್ವರಾಜ್ಯಾತ್ತು ಬಾಲಕಾಃ ।
ಅಂಗದಾದ್ಯಾ ನಿಜೈಸ್ಸೈನ್ಯೈಸ್ಸಲವಾಸ್ಸಂಗರಂ ಯಯುಃ ॥ ೧೭ ॥

ತದಾ ಬಭೂವ ತುಮುಲಂ ಯುದ್ಧಂ ತಲ್ಲೋಮಹರ್ಷಣಂ ।
ಚಿತ್ರಾಂಗದಂ ವವರ್ಷುಸ್ತೇ ನಾನಾಶಸ್ತ್ರಾಣಿ ರಾಘವಾಃ ॥ ೧೮ ॥

---

೧೪. ತಂದೆಯಾದ ಉಗ್ರಬಾಹುವು ತಾನು ಸುಮ್ಮನಿರುತ್ತ ಮಗನ ಶೌರ್ಯವನ್ನು ನೋಡುತ್ತಿದ್ದನು. ಆಗ ಅಲ್ಲಿಗೆ ಹೋದ ಈ ರಾಜರೆಲ್ಲರೂ ಆ ಚಿತ್ರಾಂಗದನ ರಥವನ್ನು ಸುತ್ತುಗಟ್ಟಿಕೊಂಡರು.

೧೫–೧೬. ಅನೇಕವಾದ ಬಾಣಗಳನ್ನು ಬಿಡುತ್ತ ಆ ಚಿತ್ರಾಂಗದನಮೇಲೆ ಬಾಣದ ಮಳೆಯನ್ನೇ ಸುರಿಸಿದರು. ಆಗ ಚಿತ್ರಾಂಗದನು ವಾಯುವ್ಯಾಸ್ತ್ರವನ್ನು ಬಿಟ್ಟು ಅಲ್ಲಿನ ಜನರನ್ನು ಅವರ ವಾಹನಗಳೊಡನೆ ಅಂತರಿಕ್ಷವಲ್ಲಿ ಗಿರ್ರನೆ ಸುತ್ತುತ್ತ ಇರುವಂತೆ ಮಾಡಿದನು. ಅನಂತರ ಆ ರಾಮನ ಅಪ್ಪಣೆಯಿಂದ ಲವನೇ ಮುಂತಾದ ವಿವಾಹಕ್ಕೆ ಬಂದಿದ್ದ ರಾಜಪುತ್ರರು ಏಳುಜನರು ಯುದ್ಧಕ್ಕೆ ಹೊರಟರು.

೧೭. ಆ ರಾಜಪುತ್ರರನ್ನು ಅವರ ರಾಜ್ಯದಿಂದ ಉತ್ಸವಕ್ಕೋಸ್ಕರ ಕರೆಸಿದ್ದನು. ಆ ಅಂಗದನೇ ಮೊದಲಾದ ವೀರರೂ ಕೂಡ ಲವನಿಗೆ ಸಹಾಯ ಮಾಡಲು ಅವನ ಜೊತೆಯಲ್ಲಿಯೇ ಹೊರಟರು.

೧೮. ಆಗ ಆ ಲವನೇ ಮುಂತಾದ ಏಳುಜನರಿಗೂ ಈ ಚಿತ್ರಾಂಗದನಿಗೂ ಯುದ್ಧಕ್ಕೆ ಮೊದಲಾಗಿ ಆ ಯುದ್ಧವು ತುಮುಲವಾಗಿಯೂ ರೋಮಹರ್ಷಣ ವಾಗಿಯೂ ಇದ್ದಿತು. ರಾಮನ ಕಡೆಯುವರೆಲ್ಲರೂ ಚಿತ್ರಾಂಗದನಮೇಲೆ ಅನೇಕ ಬಗೆಯಾದ ಅಸ್ತ್ರಗಳನ್ನು ಬಿಟ್ಟರು.

ಚಿತ್ರಾಂಗದಃ ಸ್ವಬಾಣೌಘೈಃ ಭಿತ್ವಾ ಶಸ್ತ್ರಾಣಿ ತಾನಿ ಹಿ ।
ನಿಜಬಾಣೈರ್ಯೂಪಕೇತುಂ ಚಕಾರ ವಿರಥಂ ಕ್ಷಣಾತ್ ॥ ೧೯ ॥

ತಥಾ ಚಕಾರ ವಿರಥಂ ಸುಬಾಹುಂ ಪುಷ್ಕರಂ ತಥಾ ।
ತಕ್ಷಕಂ ಚಿತ್ರಕೇತುಂ ಚ ಹ್ಯಂಗದಂ ಬಲವತ್ತರಃ ॥ ೨೦ ॥

ತದ್ದೃಷ್ಟ್ವಾ ಕೌತುಕಂ ತಸ್ಯ ಜ್ಞಾತ್ವಾ ತತ್ತಪಸಃ ಫಲಂ ।
ಲವಃ ಚಿಚ್ಛೇದ ಬಾಣೌಘೈಃ ತದ್ಧನುಃ ವೇಗವತ್ತರಂ ॥ ೨೧ ॥

ತತೋ ಲವಃ ಸ್ವಬಾಣೌಘೈರುಗ್ರಬಾಹುಸುತಂ ಮುದಾ ।
ಚಕಾರ ವ್ಯಾಕುಲಂ ಶೀಘ್ರಂ ತದ್ದೃಷ್ಟ್ವಾ ಲವಚೇಷ್ಟಿತಂ ॥ ೨೨ ॥

ಉಗ್ರಬಾಹುರ್ಯಯೌ ಯೋದ್ಧುಂ ಲವೇನ ವೇಗವತ್ತರಃ ।
ಲವಸ್ತಮಪಿ ಬಾಣೌಘೈಶ್ಚಕಾರ ವಿರಥಂ ಕ್ಷಣಾತ್ ॥ ೨೩ ॥

---

೧೯. ಚಿತ್ರಾಂಗದನು ಅವರ ಬಾಣಗಳನ್ನೆಲ್ಲಾ ಕತ್ತರಿಸಿ ಹಾಕಿದನು. ಮತ್ತೆ ಬಾಣವನ್ನು ಬಿಟ್ಟು ಯೂಪಕೇತುವಿನ ರಥವನ್ನು ಖಂಡಿಸಿ ಅವನಿಗೆ ರಥವಿಲ್ಲದಂತೆ ಮಾಡಿದನು.

೨೦. ಅಂತೆಯೇ ಸುಬಾಹುವನ್ನೂ ಪುಷ್ಕರನನ್ನೂ ತಕ್ಷಕನನ್ನೂ ಚಿತ್ರಕೇತುವನ್ನೂ ಅಂಗದನನ್ನೂ ವಿರಥರನ್ನಾಗಿ ಕ್ಷಣಕಾಲದಲ್ಲಿಯೇ ಮಾಡಿದನು.

೨೧-೨೨. ಲವನು ಈ ಆಶ್ಚರ್ಯವನ್ನು ನೋಡಿ ಅವನ ತಪಸ್ಸಿನ ಫಲವು ಈ ಶೂರತನವಾಗಿರುವುದೆಂದು ತಿಳಿದು ಆ ಚಿತ್ರಾಂಗದನ ಧನುಸ್ಸನ್ನೇ ಕತ್ತರಿಸಿದನು. ಅಲ್ಲದೆ ಮತ್ತೆಯೂ ಬಾಣವನ್ನು ಬಿಡುತ್ತ ಆ ಚಿತ್ರಾಂಗದನನ್ನು ಬೇಗನೆ ವ್ಯಾಕುಲನನ್ನಾಗಿ ಮಾಡಿದನು.

೨೩. ಲವನ ಈ ಕೃತ್ಯವನ್ನು ನೋಡಿಚಿ ತ್ರಾಂಗದನ ತಂದೆಯಾದ ಉಗ್ರಬಾಹುವು ಲವನೊಡನೆ ಯುದ್ಧಕ್ಕೆ ಹೊರಟನು. ಲವನು ಆ ಉಗ್ರಬಾಹುವಿನ ಮೇಲೆ ಬಾಣವನ್ನು ಬಿಟ್ಟು ಅವನ ರಥವನ್ನು ನಾಶಮಾಡಿದನು.

ಉಗ್ರಬಾಹುಸ್ತದಾ ವೀರೋಽನ್ಯೇ ರಥೇ ಚಾರುರೋಹ ಸಃ ।
ವವರ್ಷ ನಿಶಿತೈರ್ಬಾಣೈರ್ಮೂರ್ಛಯಾಮಾಸ ತಂ ಲವಂ ॥ ೨೪ ॥

ಲವಂ ವಿಮೂರ್ಛಿತಂ ದೃಷ್ಟ್ವಾ ಹಾಹಾಕಾರೋ ಮಹಾನಭೂತ್ ।
ತದಾ ಯಯೌ ಕುಶೋ ಯೋದ್ಧುಮುಗ್ರಬಾಹುನೃಪೇಣ ವೈ ॥ ೨೫ ॥

ಕುಶಮಾಗತಮಾಜ್ಞಾಯ ಹ್ಯಂಗದಾದ್ಯಾಸ್ತದಾ ಪುನಃ ।
ರಥಸ್ಥಾ ಯುಯುಧುಸ್ತೇನ ಉಗ್ರಬಾಹುನೃಪೇಣ ವೈ ॥ ೨೬ ॥

ಪುನಸ್ತಾನಂಗದಾದೀಂಶ್ಚ ಚಕಾರ ವಿರಥಾನ್ ನೃಪಃ ।
ತದಾ ಕುಶಃ ಸ್ವಬಾಣೌಘೈರುಗ್ರಬಾಹುಂ ನೃಪಂ ಕ್ಷಣಾತ್ ॥ ೨೭ ॥

ಚಕಾರ ವಿರಥಂ ವೀರಶ್ಚಿಚ್ಛೇದ ತಸ್ಯ ಕಾರ್ಮುಕಂ ।
ಉಗ್ರಬಾಹುಸ್ತದಾ ವ್ಯಗ್ರೋ ಬಭೂವ ಚಕಿತಸ್ತದಾ ॥ ೨೮ ॥

ತಂ ಧೃತ್ವಾ ಸ ಕುಶಸ್ತೋಷಾದ್ವಾದಯಾಮಾಸ ದುಂದುಭೀನ್ ।
ಅಥೋಗ್ರಬಾಹುಂ ಸಸುತಂ ನಿನ್ಯೇ ಶ್ರೀರಾಮಸನ್ನಿಧಿಂ ॥ ೨೯ ॥

---

೨೪. ವೀರನಾದ ಉಗ್ರಬಾಹುವು ಬೇರೆಯ ರಥಕ್ಕೆ ಹತ್ತಿಕೊಂಡನು. ಲವನಮೇಲೆ ಬಾಣಗಳನ್ನು ಬಿಟ್ಟು ಅವನನ್ನು ಮೂರ್ಛೆಗೆಡವಿದನು.

೨೫–೨೯. ಲವನು ಮೂರ್ಛೆಹೋದುದನ್ನುನೋಡಿ ಹಾಹಾಕಾರವೆದ್ದಿತು. ಆಗ ಕುಶನು ಉಗ್ರಬಾಹುವಿನೊಡನೆ ಯುದ್ಧಮಾಡಲು ಹೊರಟನು. ಕುಶನು ಬಂದುದನ್ನು ನೋಡಿ ಅಂಗದನೇ ಮುಂತಾದವರು ರಥದಲ್ಲಿ ಕುಳಿತು ಆ ಉಗ್ರಬಾಹುವಿನೊಡನೆ ಯುದ್ಧಮಾಡಿದರು. ಉಗ್ರಬಾಹುವು ಅಂಗದನೇ ಮುಂತಾದವರನ್ನು ಮತ್ತೆ ವಿರಥರನ್ನಾಗಿ ಮಾಡಿದನು. ಕುಶನು ಬಾಣವನ್ನು ಬಿಟ್ಟು ಉಗ್ರಬಾಹುವನ್ನು ವಿರಥನನ್ನಾಗಿ ಮಾಡಿದನು. ಮತ್ತು ಅವನ ಬಿಲ್ಲನ್ನೂ ಕತ್ತರಿಸಿದನು. ಆ ಉಗ್ರಬಾಹುವು ಭ್ರಾಂತಿಗೊಂಡು ಚಕಿತನಾಗಿ ನಿಂತುಕೊಂಡನು. ಆಗ ಉಗ್ರಬಾಹುವನ್ನು ಕುಶನು ಸೆರೆ ಹಿಡಿದು ಸಂತೋಷದಿಂದ ದುಂದುಭಿಯನ್ನು ಹೊಡೆಸಿದನು ಆಗ ಉಗ್ರಬಾಹುವನ್ನೂ ಅವನ ಮಗನನ್ನೂ ಕುಶನು ಶ್ರೀ ರಾಮನ ಬಳಿಗೆ ಕರೆದುಕೊಂಡು ಹೋದನು.

ರಾಮಸ್ತಂ ಮೋಚಯಾಮಾಸ ಮತ್ವಾ ತಂ ಸುಹೃದಂ ವರಂ ।
ತದಾ ರಾಮೋ ವಿಜಯಿನೇ ಕಂಕಣಂ ಮುನಿನಾರ್ಪಿತಂ ॥ ೩೦ ॥

ದದೌ ಕುಶಾಯ ಪ್ರೀತ್ಯಾ ಸಃ ಪುರತಃ ಕುಂಭಜನ್ಮನಃ ।
ಕುಶಸ್ತದಾತಿಶುಶುಭೇ ವರಕಂಕಣಮಂಡಿತಃ ॥ ೩೧ ॥

ತದಾ ಕುಶೋ ಮುನಿಂ ಪ್ರಾಹ ನತ್ವಾ ತಂ ಕುಂಭಸಂಭವಂ ।
ತ್ವಯಾ ಲಬ್ಧಂ ಕುತಶ್ಚೇದಂ ಕಂಕಣಂ ವದ ಮಾಂ ಮುನೇ ॥ ೩೨ ॥

ತತ್ತಸ್ಯ ವಚನಂ ಶ್ರುತ್ವಾಽಗಸ್ತಿಃ ಪ್ರಾಹ ಕುಶಂ ಮುದಾ ।
ಪುರೇಂದ್ರರಿಪವೋ ವತ್ಸ ಬಹವಸ್ಸಾಗರೇಣ ಹೀ ॥ ೩೩ ॥

ಕೃತಾಃ ಸ್ವಾಂತರ್ನಿವಾಸಾಶ್ಚ ತದಾಽಹಂ ನಾಕಿಪ್ರಾರ್ಥಿತಃ ।
ಕೃತ್ವಾ ಸ್ವಚುಲುಕೇಬ್ಧಿಂ ತಂ ಪೀತವಾನ್ ಲೀಲಯೈವ ಹಿ ॥ ೩೪ ॥

೩೦-೩೧. ರಾಮನು ಈ ಉಗ್ರಬಾಹುವು ಉತ್ತಮನಾದ ಸ್ನೇಹಿತನೆಂದು ತಿಳಿದು ಅವನನ್ನು ಬಿಡಿಸಿಬಿಟ್ಟನು. ಆಗ ಆ ಕುಶನು ವಿಜಯವನ್ನು ಹೊಂದಿದ ಸಂತೋಷಕ್ಕೋಸ್ಕರ ಅವನಿಗೆ ಅಗಸ್ತ್ಯನು ಕೊಟ್ಟದ ಕಂಕಣವನ್ನು ರಾಮನು ಅಗಸ್ತ್ಯಯನ ಎದುರಿಗೆ ಕೊಟ್ಟನು. ಆ ಕಂಕಣವನ್ನು ತೊಟ್ಟುಕೊಂಡು ಕುಶನು ಬಹುವಾಗಿ ಪ್ರಕಾಶಿಸಿದನು.

೩೨. ಆಗ ಕುಶನು ಅಗಸ್ತ್ಯಮುನಿಯನ್ನು ಕುರಿತು ನಮಸ್ಕರಿಸುತ್ತ ಇಂತೆಂದನು. ಎಲೈ ಕುಂಭಸಂಭವನೇ! ಈ ಕಂಕಣವು ನಿನಗೆ ಎಲ್ಲಿಂದ ಬಂದಿತು? ಎಂಬುದನ್ನು ನನಗೆ ದಯವಿಟ್ಟು ಹೇಳು.

೩೩-೩೪. ಕುಶನ ಈ ಮಾತನ್ನು ಕೇಳಿ ಅಗಸ್ತ್ಯನು ಅವನನ್ನು ಕುರಿತು ಇಂತೆಂದು ಹೇಳಿದನು. ಎಲೈ ಕುಶನೇ! ಪೂರ್ವದಲ್ಲಿ ಇಂದ್ರನಿಗೆ ಶತ್ರುಗಳಾದವರು ಅನೇಕರು ಸಮುದ್ರದಲ್ಲಿ ವಾಸಸ್ಥಾನವನ್ನು ಕಲ್ಪಿಸಿಕೊಂಡರು. ಆಗ ದೇವತೆಗಳು ನನ್ನನ್ನು ಪ್ರಾರ್ಥಿಸಲು ನಾನು ಸಮುದ್ರವನ್ನು ಅಂಗೈಯಲ್ಲಿ ಒಂದೇ ತೊಟ್ಟಾಗಿ ನಿಲ್ಲುವಂತೆ ಮಾಡಿಕೊಂಡು ಬಹು ಸುಲಭವಾಗಿಯೇ ಕುಡಿದೆನು.

ತತೋ ಲುಪ್ತಾ ದ್ವೀಪಯೋರ್ಹಿ ಮರ್ಯಾದಾ ಮಧ್ಯವರ್ತಿನೀ ।
ದೃಷ್ಟ್ವಾ ಪುನರ್ನಾಕಪೇನ ಪ್ರಾರ್ಥಿತೋ ಹತಶಲತ್ರುಣಾ ॥ ೩೫ ॥

ಮಾತ್ರವತ್ಸಾಗರಂ ಭೀಮಂ ಸಜೀವಂ ಮುಕ್ತವಾನಹಂ ।
ತದಾಬ್ಧಿನಾರ್ಪಿತಂ ಮಹ್ಯಂ ಕುಶ ತತ್ಕಂಕಣಂ ವರಂ ॥ ೩೬ ॥

ನಾನಾರತ್ನವಿಚಿತ್ರಂ ಚ ರವಿತೇಜೋವಿರಾಜಿತಂ ।
ತದ್ರಾಮಾಯಾರ್ಪಿತಂ ಪೂರ್ವಂ ಮಯಾ ತೇನ ತವಾರ್ಪಿತಂ ॥ ೩೭ ॥

ತನ್ಮುನೇರ್ವಚನಂ ಶ್ರುತ್ವಾ ಕುಶಸ್ತಂ ಪ್ರಾಹ ವೈ ಪುನಃ ।
ಲವಸಂಜೀವನೋಪಾಯಂ ವದ ಮಾಮದ್ಯ ಭೋ ಮುನೇ ॥ ೩೮ ॥

ಮೂರ್ಛಿತಃ ಪತಿತಶ್ಚಾಸ್ತಿ ರಣೇ ರಿಪುಶರೈರ್ಹತಃ ।
ಕುಶಸ್ಯ ವಚನಂ ಶ್ರುತ್ವಾಽಗಸ್ತಿಸ್ತಂ ಪ್ರಾಹ ಸಾದರಂ ॥ ೩೯ ॥

೩೫-೩೬. ಆಗ ದ್ವೀಪಗಳೂ ಅದರಲ್ಲಿದ್ದ ರಾಕ್ಷಸರೂ ನಾಶವಾದರು. ಇಂದ್ರನು ತನ್ನ ಶತ್ರುಗಳನ್ನು ನಾಶಮಾಡಿದಮೇಲೆ ದ್ವೀಪಗಳ ಮಧ್ಯದಲ್ಲಿ ಎಲ್ಲೆಯಂತಿರುವ ಈ ಸಮುದ್ರವಿಲ್ಲದಿರುವುದನ್ನು ನೋಡಿ ಮತ್ತೆ ಪ್ರಾರ್ಥಿಸಲು ಆ ಭಯಂಕರವಾದ ಸಾಗರವನ್ನು ಮೂತ್ರದಂತೆ ಬಿಡುತ್ತ ಜೀವವಿರುವಂತೆ ಮಾಡಿ ಬಿಟ್ಟೆನು. ಆಗ ಆ ಸಮುದ್ರನು ಈ ಕಂಕಣವನ್ನು ನನಗೆ ಕೊಟ್ಟು ಪೂಜಿಸಿದನು.

೩೭. ಈ ಕಂಕಣವು ಅನೇಕ ಬಗೆಯ ರತ್ನಗಳಿಂದ ಕೂಡಿದ ಸೂರ್ಯ ತೇಜಸ್ಸಿನಂತೆ ಪ್ರಕಾಶಮಾನವಾಗಿದೆ. ಇದನ್ನು ನಾನು ಹಿಂದೆ ರಾಮನಿಗೆ ಕೊಟ್ಟೆನು. ಅವನು ಈಗ ಅದನ್ನು ನಿನಗೆ ಕೊಟ್ಟಿರುವನು.

೩೮. ಋಷಿಯ ಈ ಮಾತನ್ನು ಕೇಳಿ ಕುಶನು ಮತ್ತೆ ಆ ಋಷಿಯನ್ನು ಕುರಿತು ಎಲೈ ಮುನಿಯೇ! ಲವನನ್ನು ಬದುಕಿಸುವ ಉಪಾಯವನ್ನು ನನಗೆ ಈಗ ಯಾವುದಾದರೂ ಒಂದನ್ನು ಹೇಳು.

೩೯. ರಣದಲ್ಲಿ ಶತ್ರುಬಾಣದಿಂದ ಏಟನ್ನು ತಿಂದು ಮೂರ್ಛೆಗೊಂಡು ನೆಲದಮೇಲೆ ಬಿದ್ದಿರುವನು ಎಂದನು. ಅಗಸ್ತ್ಯನು ಕುಶನ ಈ ಮಾತನ್ನು ಕೇಳಿ ಇಂತೆಂದನು.

ಏವಮ್ಮೂರ್ಛಿತೋ ಯದಾ ಪೂರ್ವಂ ಭರತಃ ಪಥಿ ಪಾರ್ಥಿವೈಃ ।
ಮುದ್ಗಲಾಶ್ರಮತೋ ವಲ್ಯಸ್ತದಾಽನೀತಾಶ್ಯುಭಾವಹಾಃ ॥ ೪೦ ॥

ಸೌಮಿತ್ರಿಣಾ ತದಾದ್ಯತ್ವಂ ಮುದ್ಗಲಾಶ್ರಮತಃ ಪುನಃ ।
ಮಹೌಷಧೀಸ್ಸಮಾನೀಯ ಜೀವಯೈನಂ ಲವಂ ಜವಾತ್ ॥ ೪೧ ॥

ಅಥವಾ ತ್ವಂ ಹನೂಮಂತಂ ಪ್ರೇಷಯಸ್ವಾಶ್ರಮಂ ಮುನೇಃ ।
ಏವಂ ಯಾವಚ್ಚ ಸ ಮುನಿಃ ಕಥಯಾಮಾಸ ತಂ ಕುಶಂ ॥ ೪೨ ॥

ತಾವತ್ತದ್ವಚನಂ ಶ್ರುತ್ವಾ ಮುನೇರ್ಮಾರುತಿನಾ ಕ್ಷಣಾತ್ ।
ಸಮಾನೀಯಾಶ್ರಯಾದ್ವಲ್ಲೀರ್ಮುದ್ಗಲಸ್ಯ ತಪೋನಿಧೇಃ ॥ ೪೩ ॥

ತಾಭಿಸ್ತಂ ಜೀವಯಾಮಾಸ ಲವಂ ಸೈನ್ಯಸಮನ್ವಿತಂ ।

॥ ವಿಷ್ಣುದಾಸ ಉವಾಚ ॥

ಗುರೋ ತಸ್ಯೈವ ಚ ಮುನೇರ್ಮುದ್ಗಲಸ್ಯಾಶ್ರಮೋ ಕಥಂ ॥ ೪೪ ॥

---

೪೦. ಪೂರ್ವದಲ್ಲಿ ಭರತನು ದಾರಿಯಲ್ಲಿ ರಾಜರೊಡನೆ ಯುದ್ಧಮಾಡಿ ಮೂರ್ಛೆಹೋಗಿರಲು ಮುದ್ಗಲನ ಆಶ್ರಮದಿಂದ ಅನೇಕ ಔಷಧಿ ಲತೆಗಳನ್ನು ಲಕ್ಷ್ಮಣನು ತಂದಿದ್ದನು.

೪೧. ಈಗ ನೀನೂ ಕೂಡ ಮುದ್ಗಲನ ಆಶ್ರಮದಿಂದ ಅಂದಿನಂತೆ ಮಹೌಷಧಿಗಳನ್ನು ತಂದು ಈ ಲವನನ್ನು ಜೀವವಂತನನ್ನಾಗಿ ಮಾಡು.

೪೨-೪೪. ಅದಿಲ್ಲದಿದ್ದರೆ ಹನುಮಂತನನ್ನು ಆ ಋಷಿಯ ಆಶ್ರಮಕ್ಕೆ ಕಳುಹಿಸು ಎಂದನು. ಮುನಿಯು ಕುಶನಿಗೆ ಹೇಳುತ್ತಿರುವಾಗಲೇ ಆ ಮಾತನ್ನು ಕೇಳಿ ಮಾರುತಿಯು ಕ್ಷಣಕಾಲದಲ್ಲಿಯೇ ಮುದ್ಗಲಿನ ಆಶ್ರಮಕ್ಕೆ ಹೋಗಿ ಔಷಧಿ ಲತೆಗಳನ್ನು ತಂದು ಅವುಗಳಿಂದ ಆ ಲವನನ್ನೂ ಅವನ ಸೈನ್ಯವನ್ನೂ ಬದುಕಿಸಿದನು. ವಿಷ್ಣುದಾಸನು ಹೇಳಿದನು— ಎಲೈ ಗುರುವೇ! ಮುದ್ಗಲಮುನಿಯ ಆಶ್ರಮದಲ್ಲಿ ಮೃತಸಂಜೀವಿನಿಯೇ ಮುಂತಾದ ಆ ಮಹೌಷಧಿಗಳು ಹೇಗೆ ಹುಟ್ಟಿದುವು ?

ಮೃತಸಂಜೀವಿನೀ ವಲ್ಲ್ಯಾದಿಕಾ ವಲ್ಲ್ಯೋತ್ರ ನಿರ್ಗತಾಃ ।
ಕಥಂ ತಾ ಹಿ ಸಮೀಪಸ್ಥಾ ವಿಸ್ಮೃತ್ಯ ದ್ರೋಣಪರ್ವತಂ ॥ ೪೫ ॥

ಪ್ರೇಷಿತೋಂಜನಿಪುತ್ರಸ್ಸ ತೇನ ಜಾಂಬವತಾ ಪುರಾ ।
ಅಮುಂ ಮತ್ಸಂಶಯಂ ಭಿಂಧಿ ಕೃಪಾಂ ಕೃತ್ವಾ ಮಮೋಪರಿ ॥ ೪೬ ॥

॥ ಶ್ರೀ ರಾಮದಾಸ ಉವಾಚ ॥

ಯದಾ ಮಾತುರ್ವಿಮೋಕ್ಷಾರ್ಥಮಮೃತಸ್ಯ ಖಗಾಧಿಪಃ ।
ಕಲಶಂ ಸ್ವಮುಖೇ ಧೃತ್ವಾ ನಾಕಲೋಕಾತ್ಸಮಾನಯತ್ ॥ ೪೭ ॥

ತದಾ ತತ್ಕಲಶಾದ್ವೇಗಾದ್ಬಿಂದುಸ್ತತ್ರಾಪತತ್ಪುರಾ ।
ತದ್ಧೇತೋರ್ಮುದ್ಗಲಸ್ಯಾಪಿ ಮುನೇಸ್ತಪಃಪ್ರಭಾವತಃ ॥ ೪೮ ॥

ಆಸ್ವ ವಲ್ಯಶ್ಚ ತತ್ರೈವ ಹ್ಯಾಶ್ರಮೇ ಹಿ ದ್ವಿಜೋತ್ತಮ ।
ನೈತಾ ವೇದ ಶುಭಾ ವಲ್ಲೀರ್ಜಾಂಬವಾನ್ಸ ವನೇಚರಃ ॥ ೪೯ ॥

೪೫-೪೬. ಆ ಅಮೃತಸಂಜೀವಿನೀವಲ್ಲಿಯು ಹತ್ತಿರವೇ ಇರುವ ಮುದ್ಗಲಿನ ಆಶ್ರಮದಲ್ಲಿ ಇರುತ್ತಿರುವಾಗ ಹಿಂದೆ ಲಂಕಾಪಟ್ಟಣದಲ್ಲಿ ಲಕ್ಷ್ಮಣನು ಮೂರ್ಛಿತನಾಗಿದ್ದಾಗ ಜಾಂಬವಂತನು ದೂರದಲ್ಲಿರುವ ಚಂದ್ರದ್ರೋಣ ಪರ್ವತಕ್ಕೆ ಹನುಮಂತನನ್ನು ಕಳುಹಿಸಲು ಕಾರಣವೇನು? ನನ್ನ ಮೇಲೆ ಕೃಪೆಯಿಟ್ಟು ಈ ಸಂಶಯವನ್ನು ಪರಿಹರಿಸು.

೪೭-೪೮. ಶ್ರೀ ರಾಮದಾಸನು ಹೇಳಿದನು— ಗರುಡನು ತನ್ನ ತಾಯಿಯನ್ನು ಬಂಧನದಿಂದ ಬಿಡಿಸಲು ಅಮೃತಕಲಶವನ್ನು ಕೊಕ್ಕಿನಲ್ಲಿ ಹಿಡಿದುಕೊಂಡು ದೇವಲೋಕದಿಂದ ತಂದನಷ್ಟೆ. ಆಗ ವೇಗದಿಂದ ತುಳುಕಿ ಕಲಶದಿಂದ ಅಮೃತಬಿಂದುಗಳು ಆ ಮುದ್ಗಲಿನ ಆಶ್ರಮದಲ್ಲಿ ಬಿದ್ದುವು. ಅಲ್ಲದೆ ಈ ಮುನಿಯೂ ಬಹು ತಪಸ್ಸಿನ ಪ್ರಭಾವವುಳ್ಳವನು.

೪೯. ಆ ಅಮೃತವು ಬಿದ್ದುದರಿಂದಲೂ, ಮುನಿಯ ತಪಸ್ಸಿನ ಪ್ರಭಾವದಿಂದಲೂ ಆ ಆಶ್ರಮದಲ್ಲಿ ಔಷಧಿಗಳು ಹುಟ್ಟಿದುವು. ಆ ವನೇಚರನಾದ ಜಾಂಬವನು ಈ ಔಷಧಿಗಳು ಈ ಆಶ್ರಮದಲ್ಲಿ ಹುಟ್ಟಿರುವುದನ್ನು ತಿಳಿಯನು.

ದ್ರೋಣಾಚಲಂ ತ್ವತಸ್ತೇನ ಪ್ರೇಷಿತೋ ವಾಯುನಂದನಃ ।
ಇತಿ ತ್ವಯಾ ಯಥಾ ಪೃಷ್ಟಂ ತಥಾ ತೇ ವಿನಿವೇದಿತಂ ॥ ೫೦ ॥

ಇದಾನೀಂ ಶ್ರುಣು ಶಿಷ್ಯ ತ್ವಂ ಶುಭಾಂ ತಾಂ ಪ್ರಾಕ್ತನೀಂ ಕಥಾಂ ।
ತತೋ ಲವಾದಿಕಾಸ್ಸರ್ವೇ ಯಯುಸ್ತೇ ಸ್ವಪುರೀಂ ಮುದಾ ॥ ೫೧ ॥

ನತ್ವಾ ಮುನಿಂ ಚ ರಾಮಾದೀಂಸ್ತಸ್ಥುಃ ಶ್ರೀರಾಘವಾಗ್ರತಃ ।
ತದಾ ಮಹೋತ್ಸವಶ್ಚಾಸೀತ್ಪುರ್ಯಾಂ ತಲ್ಲವದರ್ಶನಾತ್ ॥ ೫೨ ॥

ತತೋ ದೃಷ್ಟ್ವಾ ಲವಂ ರಾಮೋ ಜೀವಿತಂ ವಾಯುಜೇನ ಹಿ ।
ಸಮಾಲಿಂಗ್ಯ ದೃಢಂ ಪ್ರೇಮ್ಣಾ ಪರಂ ತೋಷಮವಾಪ ಸಃ ॥ ೫೩ ॥

ತತೋ ರಾಮೋ ವಾಯುಜಾಯ ಕಂಕಣೇ ರತ್ನಮಂಡಿತೇ ।
ದದೌ ಪರಮಸಂತುಷ್ಟಸ್ತಾಭ್ಯಾಂ ಸ ಶುಶುಭೇ ಕಪಿಃ ॥ ೫೪ ॥

---

೫೦. ಆದ್ದರಿಂದಲೇ ಅವನು ಹನುಮಂತನನ್ನು ದ್ರೋಣಪರ್ವತಕ್ಕೆ ಕಳುಹಿದನು. ಈ ರೀತಿಯಾಗಿ ನೀನು ಕೇಳಿದಂತೆ ನಿನ್ನ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿರುವೆನು.

೫೧–೫೨. ಎಲೈ ಶಿಷ್ಯನೇ! ಈಗ ನೀನು ಆ ಪೂರ್ವದ ಕಥೆಯನ್ನು ಕೇಳು. ಅನಂತರ ಲವನೇ ಮುಂತಾದವರು ಅವರ ಊರಾದ ಅಯೋಧ್ಯೆಗೆ ಹೊರಟು ಹೋದರು. ಅಲ್ಲಿ ಅವರು ಆ ಅಗಸ್ತ್ಯನನ್ನೂ ರಾಮನನ್ನೂ ನಮಸ್ಕರಿಸಿ ಆ ರಾಮನ ಎದುರಿಗೆ ನಿಂತುಕೊಂಡರು. ಲವನು ಬದುಕಿ ಬಂದುದರಿಂದ ಆ ಅಯೋಧ್ಯೆಯಲ್ಲಿ ಎಲ್ಲಾ ಕಡೆಯಲ್ಲಿಯೂ ದೊಡ್ಡ ಉತ್ಸವಗಳನ್ನು ಮಾಡಿದರು.

೫೩. ವಾಯುಪುತ್ರನಾದ ಹನುಮಂತನಿಂದ ಜೀವಿತನಾದ ಲವನನ್ನು ರಾಮನು ನೋಡಿದನು ಆಗ ಪ್ರೀತಿಯಿಂದ ಆ ಲವನನ್ನು ಆಲಂಗಿಸಿಕೊಂಡು ಬಹು ಸಂತೋಷವನ್ನು ಹೊಂದಿದನು.

೫೪. ಆಗ ಸಂತೋಷದಿಂದ ರಾಮನು ಎರಡು ರತ್ನದ ಕಂಕಣಗಳನ್ನು ಆ ಹನುಮಂತನಿಗೆ ಕೊಟ್ಟನು. ಅದನ್ನು ತೊಟ್ಟುಕೊಂಡು ಆ ಕಪಿಯು ಪ್ರಕಾಶಿಸಿದನು.

ತತೋ ಲವಾಯ ಶ್ರೀರಾಮಸ್ತ್ವಪರಂ ಕಂಕಣಂ ವರಂ ।
ದದಾವಗಸ್ತಿನಾ ದತ್ತಂ ಪೂರ್ವಂ ಯದ್ರತ್ನಮಂಡಿತಂ ॥ ೫೫ ॥

ಲವಸ್ತೇನಾತಿಶುಶುಭೇ ವರಕಂಕಣಮಂಡಿತಃ ।
ಲವಸ್ತದಾ ಮುನಿಂ ಪ್ರಾಹ ನತ್ವಾ ತ್ವಂ ಕುಂಭಸಂಭವಂ ॥ ೫೬ ॥

ತ್ವಯಾ ಲಬ್ಧಂ ಕುತಶ್ಚೇದಂ ಕಂಕಣಂ ವದ ಮಾಂ ಮುನೇ ।
ತತ್ತಸ್ಯ ವಚನಂ ಶ್ರುತ್ವಾಗಸ್ತಿಃ ಪ್ರಾಹ ಲವಂ ತದಾ ॥ ೫೭ ॥

ಏಕದಾ ದಂಡಕಾರಣ್ಯೇಽಹಂ ಸ್ನಾತುಂ ಹಿ ಗತಸ್ಸರಃ ।
ತಸ್ಮಿನ್ ಸ್ನಾತ್ವಾ ನಿತ್ಯವಿಧಿಂ ಕೃತ್ವಾ ತತ್ರ ಸ್ಥಿತಃ ಕ್ಷಣಂ ॥ ೫೮ ॥

ಏತಸ್ಮಿನ್ನಂತರೇ ತತ್ರ ಖಾತ್ ಸ್ವರ್ಗೀ ಸಮುಪಾಗತಃ ।
ದಿವ್ಯಂ ವಿಮಾನಮಾರೂಢಶ್ಶತಸ್ತ್ರೀಪರಿವೇಷ್ಟಿತಃ ॥ ೫೯ ॥

ದಿವ್ಯಮಾಲ್ಯಾಂಬರಧರೋ ದಿವ್ಯಗಂಧಾದಿಚರ್ಚಿತಃ ।
ಸಸ್ವರ್ಗೀ ಖಾತ್ಸಮಾಯಾತೋ ಯಾವತ್ತಾವತ್ಸರೋವರಾತ್ ॥ ೬೦ ॥

---

೫೫. ಆಗ ರಾಮನು ಮತ್ತೊಂದು ಕಂಕಣವನ್ನು ತೆಗೆದುಕೊಂಡು ಲವನಿಗೆ ಕೊಟ್ಟನು. ಅದನ್ನೂ ಕೂಡ ಅಗಸ್ತ್ಯನೇ ಆ ರಾಮನಿಗೆ ಕೊಟ್ಟಿದ್ದನು.

೫೬. ಆ ಉತ್ತಮವಾದ ಕಂಕಣದಿಂದ ಶೋಭಿತನಾಗಿ ಲವನು ಚೆನ್ನಾಗಿ ಕಂಡುಬಂದನು. ಆಗ ಲವನು ಅಗಸ್ತ್ಯನಿಗೆ ನಮಸ್ಕರಿಸಿ ಇಂತೆಂದು ಕೇಳಿದನು.

೫೭. ಎಲೈ ಮುನಿಯೇ! ಈ ಕಂಕಣವು ನಿನಗೆ ಎಲ್ಲಿ ಸಿಕ್ಕಿತು? ಅವನ್ನು ದಯವಿಟ್ಟು ಹೇಳು. ಎನ್ನಲು ಲವನ ಆ ಮಾತನ್ನು ಕೇಳಿ ಅಗಸ್ತ್ಯನು ಅವನಿಗೆ ಇಂತೆಂದನು.

೫೮. ಒಂದುಸಾರಿ ದಂಡಕಾರಣ್ಯದಲ್ಲಿ ನಾನು ಒಂದು ಸರೋವರಕ್ಕೆ ಸ್ನಾನಮಾಡಲು ಹೋದೆನು. ಅಲ್ಲಿ ಸ್ನಾನಮಾಡಿ ನಿತ್ಯವಿಧಿಯನ್ನು ಮಾಡಿಕೊಂಡು ಅಲ್ಲಿ ಒಂದು ಕ್ಷಣಕಾಲವಿದ್ದೆನು.

೫೯–೬೧. ಈ ಸಮಯದಲ್ಲಿ ಒಬ್ಬ ದೇವಪುರುಷನು ದೇವಲೋಕದಿಂದ ಅಲ್ಲಿಗೆ ಬಂದನು. ಅವನು ದಿವ್ಯವಾದ ವಿಮಾನದಲ್ಲಿ ಕುಳಿತಿದ್ದನು. ಜೊತೆಯಲ್ಲಿ ನೂರುಜನ ಹೆಂಗಸರಿದ್ದರು. ದಿವ್ಯವಾದ ಮಾಲೆಯನ್ನು ಧರಿಸಿದ್ದನು. ದಿವ್ಯವಾದ

ಶವಂ ವಿನಿರ್ಗತಂ ಶ್ರೇಷ್ಠಂ ಸ್ಫುಟಿತಂ ಹಿ ಭಯಂಕರಂ ।
ದುರ್ಗಂಧಸಹಿತಂ ದುಷ್ಟಂ ಪ್ರಾಪ್ತಂ ತತ್ಸರಸಸ್ತಟಂ ॥ ೬೧ ॥

ಅವರುಹ್ಯ ವಿಮಾನಾಗ್ರ್ಯಾತ್ಸಸ್ವರ್ಗೀ ತಚ್ಛವಂ ಯಯೌ ।
ಛಿತ್ವಾ ತಚ್ಛವಮಾಂಸಾದಿ ಭಕ್ಷಯಾಮಾಸ ಸಾದರಂ ॥ ೬೨ ॥

ತತಃ ಪೀತ್ವಾ ಜಲಂ ಸ್ವರ್ಗೀ ವಿಮಾನಂ ಚಾರುರೋಹ ಸಃ ।
ನಿಮಗ್ನಂ ತಚ್ಛವಂ ಚಾಪಿ ಪುನಸ್ತಸ್ಮಿನ್ ಸರೋವರೇ ॥ ೬೩ ॥

ಸ್ವರ್ಗಿಣಂ ಗಂತುಕಾಮಂ ತಂ ದೃಷ್ಟ್ವಾಹಂ ಚಾಪಿ ವಿಸ್ಮಿತಃ ।
ಅಬ್ರುವಂ ಮಧುರಂ ವಾಕ್ಯಂ ರೇ ರೇ ದಿವ್ಯಸ್ವರೂಪಧೃಕ್ ॥ ೬೪ ॥

ಗಂಧವನ್ನು ಪೂಸಿಕೊಂಡಿದ್ದನು. ಆ ಸ್ವರ್ಗದಿಂದ ಬಂದ ವ್ಯಕ್ತಿಯು ಆ ಸರೋವರದ ಬಳಿಗೆ ಬಂದಕೂಡಲೇ ಆ ಸರೋವರದಿಂದ ಒಂದು ಶ್ರೇಷ್ಠವಾದ ಶವವು ಮೇಲಕ್ಕೆ ಬಂದಿತು. ಅದು ನೋಡುವುದಕ್ಕೆ ಭಯಂಕರವಾಗಿದ್ದಿತು. ಕೊಳೆತು ಬಿರುಕು ಬಿಟ್ಟದ್ದಿತು. ದುರ್ವಾಸನೆಯು ಬಂದಿದ್ದಿತು. ಕೆಟ್ಟು ಹೋಗಿದ್ದಿತು. ಇಂತಹ ಹೆಣವು ಆ ಸರೋವರದ ದಡದಲ್ಲಿ ಬಂದು ಬಿದ್ದಿತು.

೬೨. ಸ್ವರ್ಗದಿಂದ ಬಂದ ಆ ಪುರುಷನು ಆ ವಿಮಾನದಿಂದಿಳಿದು ಆ ಹೆಣದ ಬಳಿಗೆ ಬಂದನು. ಒಡನೆಯೇ ಆ ಹೆಣವನ್ನು ಕತ್ತರಿಸಿ ಮಾಂಸ ಮುಂತಾದುವನ್ನು ಬಹು ಪ್ರೀತಿಯಿಂದ ತಿನ್ನಲು ಮೊದಲಿಟ್ಟನು.

೬೩. ಅದನ್ನು ತಿಂದು ಅನಂತರ ಆ ಕೊಳದಲ್ಲಿ ನೀರನ್ನು ಕುಡಿದು ತಾನು ಕುಳಿತುಕೊಂಡು ಬಂದಿದ್ದ ವಿಮಾನವನ್ನು ಮತ್ತೆ ಹತ್ತಿದನು. ಆ ಹೆಣವು ಮತ್ತೆ ಅದೇ ಸರೋವರದಲ್ಲಿ ಬಿದ್ದು ಬಿಟ್ಟಿತು.

೬೪-೬೫. ಆ ಸ್ವರ್ಗದ ಮನುಷ್ಯನು ವಿಮಾನದಲ್ಲಿ ಸ್ವರ್ಗಕ್ಕೆ ಹೊರಡಲು ಮತ್ತೆ ಉದ್ಯುಕ್ತನಾದುದನು. ಅದನ್ನು ನೋಡಿ ನನಗೆ ಬಹು ಆಶ್ಚರ್ಯವಾಯಿತು. ಆಗ ಅವನನ್ನು ಕುರಿತು ನಾನು ಎಲೈ ದಿವ್ಯದೇಹವನ್ನು ಹೊಂದಿರುವವನೇ! ಕ್ಷಣಕಾಲ ನಿಂತುಕೋ. ನನ್ನ ಮಾತಿಗೆ ಉತ್ತರವನ್ನು

ಕ್ಷಣಂ ತಿಷ್ಠೋತ್ತರಂ ದೇಹಿ ಕೌತುಕಂ ತೇ ಮಯೇಕ್ಷಿತಂ ।
ಈದೃಶಸ್ತೇ ಶವಾಹಾರಃ ಕಥಂ ಸ್ವರ್ಗನಿವಾಸಿನಃ ॥ ೬೫ ॥

ಇತಿ ಮದ್ವಚನಂ ಶ್ರುತ್ವಾ ಸ ಸ್ವರ್ಗೀ ಪ್ರಾಹ ಮಾಂ ತದಾ ।
ಸಮುಕ್ತ್ಪೃಷ್ಟಂ ತ್ವಯಾ ಬ್ರಹ್ಮನ್ ಶ್ರುಣು ಸರ್ವಂ ಮಯೋಚ್ಯತೇ ॥ ೬೬ ॥

ಸುದೇವಾಖ್ಯೋ ಹಿ ವೈದರ್ಭೀ ನೃಪತಿಶ್ಚಾಭವತ್ಪುರಾ ।
ತತ್ಪುತ್ರೌ ಶ್ವೇತಸುರಥೌ ಶ್ವೇತೋಹಂ ಪಾರ್ಥಿವೋಭವಂ ॥ ೬೭ ॥

ನೈವ ದಾನಂ ಮಯಾ ತಸ್ಮಿನ್ ಜನ್ಮನ್ಯತ್ರ ಕೃತಂ ಕದಾ ।
ಸ್ವೀಯರಾಜ್ಯಮದಾದ್ಭ್ರಾತಃ ಪಾಪಕರ್ಮರತಸ್ಸದಾ ॥ ೬೮ ॥

ಕೊಡು. ನಿನ್ನಲ್ಲಿ ನಾನು ಒಂದು ಆಶ್ಚರ್ಯವನ್ನು ನೋಡಿದೆನು. ಅದೇನೆಂದರೆ ಸ್ವರ್ಗದಲ್ಲಿರುವ ನೀನು ಇಂತಹ ಹೆಣವನ್ನು ತಿನ್ನಲು ಕಾರಣವೇನು? ಇದಕ್ಕೆ ಉತ್ತರವನ್ನು ಕೊಡು. ಎಂದೆನು.

೬೬. ನನ್ನ ಈ ಪ್ರಶ್ನೆಯನ್ನು ಅವನು ಕೇಳಿ ನನ್ನನ್ನು ಕುರಿತು ಎಲೈ ಬ್ರಾಹ್ಮಣನೇ! ನೀನು ಕೇಳಿದುದು ಸರಿ. ಎಲ್ಲವನ್ನೂ ಹೇಳುತ್ತೇನೆ. ಕೇಳು. ಎಂದು ಹೇಳತೊಡಗಿದನು.

೬೭. ಪೂರ್ವದಲ್ಲಿ ಸುದೇಹನೆಂಬ ಹೆಸರಿನಿಂದ ಪ್ರಸಿದ್ಧನಾದ ವಿದೇಹ ದೇಶದ ರಾಜನೊಬ್ಬನಿದ್ದನು. ಅವನಿಗೆ ಶ್ವೇತನೆಂದೂ ಸುರಥನೆಂದೂ ಇಬ್ಬರು ಮಕ್ಕಳಿದ್ದರು. ಅವರಲ್ಲಿ ನಾನೇ ಶ್ವೇತನು. ನಾನು ತಂದೆಯ ಅನಂತರದಲ್ಲಿ ರಾಜನಾದೆನು.

೬೮. ಆ ಜನ್ಮದಲ್ಲಿ ನಾನು ಒಂದು ದಾನವನ್ನೂ ಕೂಡ ಯಾವಾಗಲೂ ಮಾಡಲೇ ಇಲ್ಲ. ರಾಜನಾಗಿದ್ದುಕೊಂಡು ಸುಖಿಸುತ್ತ ಮದಾಂಧನಾಗಿ ಯಾವಾಗಲೂ ಪಾಪಕರ್ಮದಲ್ಲಿಯೇ ಆಸಕ್ತನಾಗಿದ್ದೆನು.

ತತೋಽಪುತ್ರೀ ತ್ವಹಂ ರಾಜ್ಯೇ ಕೃತ್ವಾ ತಂ ಸುರಥಾನುಜಂ।
ವಾರ್ಧಕೇ ತು ವನಂ ಪ್ರಾಪ್ತಸ್ತಪಸ್ತೀವ್ರಂ ಸಮಾಸ್ಥಿತಃ ॥ ೧೯ ॥

ಏಕದಾ ಸ್ನಾತುಮುದ್ಯುಕ್ತೋ ನಿಮಗ್ನೋಹಂ ಸರೋವರೇ।
ತತೋ ಮೃತೋ ದಿವಂ ಪ್ರಾಪ್ತಸ್ತ್ವಹಂ ಸ್ವೀಯತಪೋಬಲಾತ್ ॥ ೨೦ ॥

ತಪಸಶ್ಚ ಫಲೈಸ್ತತ್ರ ಮಮಾಸನ್ ಸರ್ವಸಂಪದಃ।
ಅದೃಷ್ಟ್ವಾ ಭಕ್ಷಿತುಂ ಕಿಂಚಿನ್ಮಯಾ ಪೃಷ್ಟಸ್ಸುರಾಧಿಪಃ ॥ ೨೧ ॥

ವರ್ತಂತೇ ವಿವಿಧಾಸ್ತ್ವತ್ರ ಮಮಭೋಗಾಸ್ಸುದುರ್ಲಭಾಃ।
ಕಥಂ ನಾಸೀದ್ಭಕ್ಷಣಾರ್ಥಂ ಕಥಂ ಮೇತ್ರ ಸುಖಂ ಭವೇತ್ ॥ ೨೨ ॥

ಇತಿ ಮದ್ವಚನಂ ಶ್ರುತ್ವಾ ಮಾಮಿಂದ್ರಃ ಪ್ರಾಹ ಸಸ್ಮಿತಃ।
ನೈವ ದಾನಂ ತ್ವಯಾ ಭೂಮೌ ಕೃತಂ ರಾಜ್ಯಮದೇನ ಹಿ ॥ ೨೩ ॥

---

೧೯. ನನಗೆ ಮಕ್ಕಳಾಗಲಿಲ್ಲ. ಮುಪ್ಪು ಬರುತ್ತ ಬಂತು. ಆಗ ನನ್ನ ತಮ್ಮನಾದ ಸುರಥನನ್ನು ರಾಜ್ಯದಲ್ಲಿ ಅಭಿಷೇಕಮಾಡಿ ಆ ಮುಪ್ಪಿನಲ್ಲಿ ಕಾಡಿನಲ್ಲಿ ತಪಸ್ಸನ್ನು ಮಾಡುತ್ತ ಮರಣವನ್ನು ಹೊಂದಿ ಸ್ವರ್ಗವನ್ನು ಹೊಂದಿದೆನು.

೨೦. ನನ್ನ ತಪಸ್ಸಿನ ಫಲದಿಂದ ಆ ಸ್ವರ್ಗದಲ್ಲಿ ನನಗೆ ಎಲ್ಲಾ ಸಂಪತ್ತುಗಳೂ ಸಿಕ್ಕಿದುವು. ಆದರೆ ಅಲ್ಲೆಲ್ಲಾ ನೋಡಲು ನನಗೆ ತಿನ್ನುವ ತಿಂಡಿಯೇ ಇರಲಿಲ್ಲ ಇದನ್ನು ನೋಡಿ ದೇವೇಂದ್ರನನ್ನು ಇಂತೆಂದು ಕೇಳಿದೆನು.

೨೧. ಎಲೈ ಇಂದ್ರನೇ! ಈ ಸ್ಥಳದಲ್ಲಿ ನನಗೆ ನಾನಾ ವಿಧವಾದ ಭೋಗ ಪದಾರ್ಥಗಳೂ ಇವೆ. ಅವೆಲ್ಲವೂ ಉತ್ತಮವಾದುವುಗಳೇ. ಆದರೆ ನನಗೆ ತಿನ್ನುವುದಕ್ಕೆ ಬೇಕಾದ ಪದಾರ್ಥಗಳೇ ಇಲ್ಲವಲ್ಲ. ಈ ಪದಾರ್ಥಗಳೆಲ್ಲವೂ ಆ ತಿಂಡಿಯಿಲ್ಲದಿದ್ದರೆ ಹೇಗೆ ತಾನೇ ಸುಖವನ್ನು ಕೊಟ್ಟಾವು?

೨೨. ನಾನು ಹೇಳಿದ ಈ ಮಾತನ್ನು ಕೇಳಿ ಇಂದ್ರನು ನಗುತ್ತ ನನ್ನನ್ನು ಕುರಿತು ಎಲೈ ದೊರೆಯೇ! ನೀನು ರಾಜ್ಯದ ಮದದಿಂದ ಯಾವ ದಾನಗಳನ್ನೂ ಭೂಮಿಯಲ್ಲಿ ಮಾಡಲೇ ಇಲ್ಲ.

೨೩–೨೫. ನಾವು ದಾನಮಾಡದಿರುವ ಪದಾರ್ಥವು ಇತರ ದಾನಗಳಿಂದ ಸಿಕ್ಕುವುದಿಲ್ಲ. ಆದ್ದರಿಂದ ನೀನು ಪ್ರತಿದಿನವೂ ವಿಮಾನದಲ್ಲಿ ಕುಳಿತು ಸರೋವರದ

ಅದತ್ತಂ ಲಭ್ಯತೇ ನೈವ ನೃಪ ಪುಣ್ಯೈಃ ಕದೇತರೈಃ ।
ಅತಸ್ತ್ವಂ ಪ್ರತ್ಯಹಂ ಗತ್ವಾ ವಿಮಾನೇನ ಸರೋವರಂ ॥ ೭೪ ॥
ಭಕ್ಷಯಸ್ವ ಶವಂ ಪುಷ್ಟಂ ಮಿಷ್ಟಾನ್ನೈಃ ಪೋಷಿತಂ ಚ ಯತ್ ।
ಚಿರಕಾಲಂ ಭವೇತತ್ತೇ ಕ್ಷಯಂ ಯಾಸ್ಯತಿ ನೈವ ತತ್ ॥ ೭೫ ॥
ಇತೀಂದ್ರವಚನಂ ಶ್ರುತ್ವಾ ಸ ಪೃಷ್ಟಶ್ಚ ಪುನರ್ಮಯಾ ।
ದಿವ್ಯಾನ್ನಾನಿ ಕಥಂ ಚಾಹಂ ಪ್ರಾಪ್ನುಯಾಂ ತದ್ವದಸ್ವ ಮಾಂ ॥ ೭೬ ॥
ಇತಿ ಮದ್ವಚನಂ ಶ್ರುತ್ವಾ ತದೇಂದ್ರಃ ಪ್ರಾಹ ಮಾಂ ಪುನಃ ।
ಅಧುನಾ ದಂಡಕಾರಣ್ಯಂ ವರ್ತತೇ ಹೀನ ಮಾನುಷಂ ॥ ೭೭ ॥
ವಿಂಧ್ಯವೃದ್ಧಿನಿಷೇದಾರ್ಥಮಗಸ್ತಿಸುರಯಾಚಿತಃ ।
ಯದಾ ಯಾಸ್ಯತಿ ಪತ್ನ್ಯಾ ವೈ ಮುಕ್ತ್ವಾ ಕಾಶೀಂ ಹಿ ದಂಡಕಂ ॥ ೭೮ ॥
ಸರಸ್ಯಸ್ಮಿನ್ ಕದಾ ಸ್ನಾತ್ವಾ ಸ್ಥಿತಂ ಪಶ್ಯಸಿ ತಂ ಮುನಿಂ ।
ತದಾ ತಸ್ಮೈ ಕಂಕಣಂ ತ್ವಂ ದೇಹಿ ತೋಯೈಃ ಪರಿಪ್ಲುತಂ ॥ ೭೯ ॥

ಬಳಿಗೆ ಹೋಗು. ಮೃಷ್ಟಾನ್ನಗಳಿಂದ ಬೆಳಸಿ ಕೊಬ್ಬಿರುವ ನಿನ್ನ ಶವವು ಅಲ್ಲಿರುವುದು. ಅದು ಮುಗಿದು ಹೋಗದೆ ಬಹುಕಾಲದವರೆಗೂ ನಿನಗೆ ಆಹಾರ ವಾಗುತ್ತದೆ. ನೀನು ತಿನ್ನುತ್ತಿದ್ದರೂ ಕಡಿಮೆಯೇ ಆಗುವುದಿಲ್ಲ ಎಂದನು.

೭೬. ಇಂದ್ರನು ಹೀಗೆ ಹೇಳಿದುದನ್ನು ಕೇಳಿ ಮತ್ತೆ ಆ ಇಂದ್ರನನ್ನು ಕುರಿತು ಎಲೈ ಇಂದ್ರನೇ ! ನನಗೆ ದಿವ್ಯಾನ್ನಗಳು ಹೇಗೆ ಸಿಕ್ಕುವುವು ? ಅದು ಸಿಕ್ಕುವ ಬಗೆಯನ್ನು ಹೇಳು ಎಂದು ಕೇಳಿದೆನು.

೭೭-೭೮. ಇಂದ್ರನು ನಾನು ಇಂತೆಂದುದನ್ನು ಕೇಳಿ ಎಲೈ ದೊರೆಯೇ ! ಈ ದಂಡಕಾರಣ್ಯವು ಮನುಷ್ಯರೇ ಇಲ್ಲದುದಾಗಿ ಇರುತ್ತದೆ ವಿಂಧ್ಯಪರ್ವತದ ವೃದ್ಧಿಯನ್ನು ಹೋಗಲಾಡಿಸಲು ದೇವತೆಗಳು ಅಗಸ್ತ್ಯನನ್ನು ಕೇಳಿಕೊಳ್ಳುತ್ತಾರೆ. ಆಗ ಅವನು ಹೆಂಡತಿಯೊಡನೆ ಕಾಶಿಯನ್ನು ಬಿಟ್ಟು ದಂಡಕಾರಣ್ಯಕ್ಕೆ ಬರುತ್ತಾನೆ. ಅವನು ಆ ಸರೋವರದಲ್ಲಿ ಸ್ನಾನಮಾಡಿ ಅಲ್ಲಿರುತ್ತಾನೆ. ಆಗ ನೀನು ನೀರಿನಿಂದ ನೆನೆದ ಈ ಕಂಕಣವನ್ನು ಅವನಿಗೆ ಕೊಡು. ಆ ಕಂಕಣವನ್ನು ನೀನು ಅವನಿಗೆ ಕೊಟ್ಟರೆ ಆ ದಾನದ ಮಹಿಮೆಯಿಂದ ಆಗ ನಿನಗೆ ದಿವ್ಯವಾದ

ತತ್ಸ್ವಕಂಕಣದಾನೇನ ದಿವ್ಯಾನ್ನಂ ಪ್ರಾಪ್ಸ್ಯಸೇ ನೃಪ ।
ಇತೀಂದ್ರವಚನಂ ಶ್ರುತ್ವಾ ತದಾರಭ್ಯ ಚಿರಂ ಮುನೇ ॥ ೮೦ ॥

ಅತ್ರಾಗತ್ಯ ಶವಾಹಾರಃ ಕ್ರಿಯತೇ ಹಿ ಸದಾ ಮಯಾ ।
ಏತಾವತ್ಕಾಲ ಪರ್ಯಂತಂ ನಾತ್ರ ಕಶ್ಚಿನ್ಮಯೇಕ್ಷಿತಃ ॥ ೮೧ ॥

ಮಯಾ ದೃಷ್ಟಸ್ತ್ವಮೇವಾತ್ರ ವೇದ್ಮಿ ತ್ವಾಂ ಕುಂಭಸಂಭವಂ ।
ಅದ್ಯ ತ್ವಯಾ ತಾರಿತೋಽಹಂ ದಾನಂ ಸ್ವೀಕುರು ಮೇ ತ್ವಿದಂ ॥ ೮೨ ॥

॥ ಅಗಸ್ತ್ಯ ಉವಾಚ ॥

ಇತ್ಥಂ ಸ್ವರ್ಗೀ ಸ ಮಾಮುಕ್ತ್ವಾ ದದೌ ಕಂಕಣ ಮುಜ್ವಲಂ ।
ಮಹ್ಯಂ ಸಾರ್ದ್ರಂ ತತಃ ಸ್ವರ್ಗಂ ಯಯೌ ಸ್ವರ್ಗೀಮುದಾ ಯುತಃ ॥೮೩॥

ತದಾರಭ್ಯ ಶವಂ ತೋಯಾದ್ಬಹಿಸ್ತನ್ನ ಯಯೌ ಕದಾ ।
ದಿವ್ಯಾನ್ನಾನಿ ತು ಸಂಪ್ರಾಪ ನಾಕಲೋಕೇ ಯಥಾಸುಖಂ ॥ ೮೪ ॥

ಅನ್ನಗಳು ಲಭಿಸುತ್ತವೆ. ನೀನು ಆ ಸಮಯವನ್ನು ನಿರೀಕ್ಷಿಸುತ್ತಿರು ಎಂದನು. ಇಂದ್ರನು ಹೀಗೆ ಹೇಳಿದುದನ್ನು ಕೇಳಿ ಅದು ಮೊದಲುಗೊಂಡು ಬಹುಕಾಲದಿಂದಲೂ ನಾನು ಇಲ್ಲಿಗೆ ಬಂದು ಯಾವಾಗಲೂ ಈ ಹೆಣವನ್ನು ತಿನ್ನುತ್ತಲೇ ಇರುವೆನು. ಇದುವರೆಗೂ ಇಲ್ಲಿ ನಾನು ಒಬ್ಬ ಮನುಷ್ಯನನ್ನೂ ನೋಡಲೇ ಇಲ್ಲ.

೮೨. ಈಗ ಮಾತ್ರ ಮನುಷ್ಯನಾಗಿ ಸಂಚರಿಸುತ್ತಿರುವ ನಿನ್ನನ್ನು ನೋಡಿದೆನು. ನೀನೇ ಆ ಕುಂಭಸಂಭವನಿರಬೇಕು. ಈಗ ನಿನ್ನಿಂದ ನಾನು ಕೃತಾರ್ಥನಾದೆನು. ನಾನು ಕೊಡತಕ್ಕ ಈ ದಾನವನ್ನು ತೆಗೆದುಕೋ ಎಂದನು.

೮೩. ಅಗಸ್ತ್ಯನು ಹೇಳಿದನು–ಆ ಸ್ವರ್ಗದ ಮನುಷ್ಯನು ಹೀಗೆಂದು ನನಗೆ ಹೇಳಿ ಉತ್ತಮವಾದ ಕಾಂತಿಯುಳ್ಳ ಈ ಕಂಕಣವನ್ನು ಕೊಟ್ಟನು. ಅನಂತರ ಅವನು ಸಂತೋಷದಿಂದ ಸ್ವರ್ಗಕ್ಕೆ ಹೊರಟುಹೋದನು.

೮೪. ಅದು ಮೊದಲುಗೊಂಡು ಶವವು ಆ ಕೊಳದ ನೀರಿನಿಂದ ಮತ್ತೆ ಮೇಲಕ್ಕೆ ಬರುವುದೇ ಇಲ್ಲ. ಅವನು ಸ್ವರ್ಗದಲ್ಲಿ ತನಗೆ ಇಚ್ಛೆಬಂದ ದಿವ್ಯಾನ್ನಗಳನ್ನು ಹೊಂದಿದನು.

ಇತಿ ಯತ್ಕಂಕಣಂ ಲಬ್ಧಂ ಮಯಾ ಲವ ಪುರಾವನೇ ।
ಅರ್ಪಿತಂ ರಾಘವಾಯೇದಂ ತೇನ ತಚ್ಚಾದ್ಯ ತೇರ್ಪಿತಂ ॥ ೮೫ ॥

॥ ರಾಮದಾಸ ಉವಾಚ ॥

ಇತ್ಯಗಸ್ತ್ಯವಚಃ ಶ್ರುತ್ವಾ ಲವಃ ಪಪ್ರಚ್ಛ ತಂ ಪುನಃ ।
ಕಿಮರ್ಥಂ ದಂಡಕಾಖ್ಯಂ ತದ್ಬಭೂವ ವಿಪಿನಂ ವದ ॥ ೮೬ ॥

॥ ಅಗಸ್ತ್ಯ ಉವಾಚ ॥

ಇಕ್ಷ್ವಾಕುವಂಶಸಂಭೂತೋಭೂನ್ನೃಪೋ ವಿಂಧ್ಯ ದಕ್ಷಿಣೇ ।
ನಾಮ್ನಾ ದಂಡಕೇತಿಖ್ಯಾತಃ ಪಾಪಕರ್ಮರತಸ್ಸದಾ ॥ ೮೭ ॥

ಏಕದಾ ಸ ವನಂ ಯಾತೋ ಮೃಗಯಾರ್ಥಂ ಸ್ವಸೇನಯಾ ।
ತತ್ರ ದೃಷ್ಟ್ವಾ ಮೃಗಂ ರಾಜಾ ಮೃಗಪೃಷ್ಠೇ ಪ್ರದುದ್ರುವೇ ॥ ೮೮ ॥

---

೮೫. ಎಲೈ ಲವನೇ ! ನಾನು ಈ ಕಂಕಣವನ್ನು ಹೊಂದಿದ ರೀತಿಯನ್ನು ವಿವರಿಸಿದ್ದೇನೆ. ನನಗೆ ಕೊಟ್ಟ ಈ ಕಂಕಣವನ್ನು ನಾನು ಮೊದಲು ರಾಘವನಿಗೆ ಕೊಟ್ಟೆನು. ಅವನು ಅದನ್ನು ಈಗ ನಿನಗೆ ಕೊಟ್ಟಿರುವನು.

೮೬. ರಾಮದಾಸನು ಹೇಳಿದನು--ಅಗಸ್ತ್ಯನು ಇಂತು ಹೇಳಿದುದನ್ನು ಲವನು ಕೇಳಿ ಮತ್ತೆ ಆ ಮುನಿಯನ್ನು ಕುರಿತು ಇಂತೆಂದು ಕೇಳಿದನು. ಎಲೈ ಮುನಿಯೇ ! ದಂಡಕಾರಣ್ಯವು ನಿರ್ಮಾನುಷವಾಗಿ ಆಗಲು ಕಾರಣವೇನು ? ಅದನ್ನು ಹೇಳು ?

೮೭. ಅಗಸ್ತ್ಯನು ಹೇಳಿದನು--ವಿಂಧ್ಯಪರ್ವತದ ದಕ್ಷಿಣದಲ್ಲಿ ಇಕ್ಷ್ವಾಕು ವಂಶದಲ್ಲಿ ಹುಟ್ಟಿದ್ದ ಒಬ್ಬ ರಾಜನಿದ್ದನು. ಅವನ ಹೆಸರು ದಂಡಕನೆಂಬದಾಗಿ. ಅವನು ಯಾವಾಗಲೂ ಪಾಪಕರ್ಮಗಳನ್ನೇ ಮಾಡಿಕೊಂಡಿದ್ದನು.

೮೮. ಆ ದಂಡಕನು ಒಂದುಸಾರಿ ಸೇನೆಯೊಡನೆ ಕಾಡಿಗೆ ಬೇಟೆಗೆ ಹೋದನು. ಅಲ್ಲಿ ಒಂದು ಮೃಗವನ್ನು ನೋಡಿ ಅದನ್ನು ಹೊಡೆಯಲು ಅವನು ಅದರ ಹಿಂದೆಯೇ ಓಡಿಸಿಕೊಂಡು ಹೋದನು.

ಏಕಾಕೀ ಹಯಮಾರೂಢೋ ದೇಶಾದ್ದೇಶಾಂತರಂ ಯಯೌ ।
ಏವಂ ಹಿ ಗಚ್ಛತಸ್ತಸ್ಯ ಮೃಗೋ ದೃಶ್ಯೋ ಭವತ್ತದಾ ॥ ೮೯ ॥

ತತಸ್ಸೋತಿ ತೃಷಾ ಕ್ರಾಂತಃ ಪ್ರಯಯೌ ವೈ ಜಲಾಶಯಂ ।
ತತ್ರ ಪೀತ್ವಾ ಜಲಂ ಸ್ವಚ್ಛಂ ಸ ರಾಜಾ ಸರಸಸ್ತಟೇ ॥ ೯೦ ॥

ಆಜ್ಞಾತ್ವಾ ಸ್ವಗುರೋಶ್ಚೇತಿ ಭೃಗೋರಾಶ್ರಮುಪಾಯಯೌ ।
ತತ್ರ ತಾತವಿಹೀನಾಂ ತಾಮರಜಸ್ಕಾಂ ಭೃಗೋಸ್ಸುತಾಂ ॥ ೯೧ ॥

ದೃಷ್ಟ್ವಾವ ಚಂದ್ರಾನನಾಂ ರಾಜಾ ಸೋಭೂತ್ಕಾಮವಿಮೋಹಿತಃ ।
ತತಸ್ತಾಂ ಪ್ರಾರ್ಥಯಾಮಾಸ ರತ್ಯರ್ಥಂ ಸಾಬ್ರವೀನ್ನೃಪಂ ॥ ೯೨ ॥

---

೮೯. ಕೊನೆಗೆ ಅವನು ಒಬ್ಬಂಟಿಗನಾಗಿಯೇ ಕುದುರೆಯಮೇಲೆ ಕುಳಿತು ಆ ಮೃಗಹಿಂದೆಯೇ ಓಡುತ್ತಿದ್ದನು. ಅದು ಒಂದು ದೇಶವನ್ನು ಬಿಟ್ಟು ಮತ್ತೊಂದು ದೇಶಕ್ಕೆ ಓಡಿತು. ಇಂತು ಬಹುದೂರದವರೆಗೆ ಓಡಿತು. ಮೃಗವೂ ಇವನೂ ಓಡುತ್ತಿದ್ದಂತೆಯೇ ಕೊನೆಗೆ ಆ ಮೃಗವು ಕಣ್ಣಿಗೆ ಕಾಣಿಸದಂತಾಯಿತು.

೯೦--೯೧. ಆಗ ಅವನಿಗೆ ಬಹು ಬಾಯಾರಿಕೆ ಆಯಿತು. ಆದ್ದರಿಂದ ನೀರನ್ನು ಹುಡುಕುತ್ತ ಒಂದು ಸರೋವರದ ಬಳಿಗೆ ಹೋದನು. ಅಲ್ಲಿ ಸ್ವಚ್ಛವಾದ ನೀರನ್ನು ಕುಡಿದನು. ಅದರ ದಡದಲ್ಲಿದ್ದ ತನ್ನ ಗುರುವಾದ ಭೃಗುವಿನ ಆಶ್ರಮಕ್ಕೆ ಹೋದನು. ಅದು ಭೃಗುವಿನದೆಂದು ಅವನಿಗೆ ಗೊತ್ತಿರಲೂ ಇಲ್ಲ. ಅಲ್ಲಿ ಆ ಭೃಗುವೂ ಇರಲಿಲ್ಲ. ಅವನ ಮಗಳಿದ್ದಳು. ಅವಳಿನ್ನೂ ಋತುಮತಿಯಾಗಿರಲಿಲ್ಲ.

೯೨. ಆಕೆಯು ಬಹು ಸುಂದರಿಯಾಗಿದ್ದಳು. ಇಂತಹ ಚಂದ್ರಾನನೆಯನ್ನು ನೋಡಿ ಆ ರಾಜನು ಕಾಮಮೋಹಿತನಾದನು. ಅದರಿಂದ ಅವನು ಆಕೆಯನ್ನು ಕ್ರೀಡಿಸಲು ಕೇಳಿಕೊಂಡನು ಆಗ ಆಕೆಯು ಅವನನ್ನು ಕುರಿತು ಇಂತೆಂದಳು.

ಸ್ವವಶಾ ನೃಪ ನೈವಾಹಂ ತಾತಾಧೀನಾಸ್ಮಿ ಸಾಂಪ್ರತಂ ।
ಬಹಿರ್ಭೃಗುಸ್ತವ ಗುರುರ್ಗತಸ್ತಾತ್ವಂ ವೇದ್ಮ್ಯಹಂ ನೃಪ ॥ ೯೩ ॥

ಯದಿ ಮಾಮಿಚ್ಛಸಿ ತ್ವಂ ಹಿ ತರ್ಹಿ ತ್ವಂ ಸ್ವಗುರುಂ ಭೃಗುಂ ।
ಪ್ರಾರ್ಥಯಿತ್ವಾ ಭಜ ಸುಖಂ ಮಾಂ ಪತ್ನೀಂ ಸ್ವಾಂ ವಿಧಾಯ ಚ ॥ ೯೪ ॥

ಇತ್ಯುಕ್ತೋಽಪಿ ತಯಾ ರಾಜಾ ದಂಡಸ್ತಾಂ ಕಾಮಪೀಡಿತಃ ।
ಭುಕ್ತ್ವಾ ಸುಖಂ ಬಲಾದೇವ ಜಗಾಮ ನಗರೀಂ ನಿಜಾಂ ॥ ೯೫ ॥

ತತೋಽರಜಸ್ಕಾ ಸಾ ಬಾಲಾ ದೃಷ್ಟ್ವಾ ತಾತಂ ಸಮಾಗತಂ ।
ಶೋಚಂತೀ ಸಕಲಂ ವೃತ್ತಂ ಶ್ರಾವಯಾಮಾಸ ವಿಹ್ವಲಾ ॥ ೯೬ ॥

---

೯೩. ಎಲೈ ದೊರೆಯೇ ! ನಾನು ಸ್ವತಂತ್ರಳಲ್ಲ. ನನಗೆ ಅಧಿಕಾರಿಯಾಗಿ ನನ್ನ ತಂದೆಯಿರುವನು. ಆ ನನ್ನ ತಂದೆಯಾದ ಭೃಗುವು ನಿನಗೆ ಗುರುವೂ ಆಗಿರುವನು. ಆತನು ಈಗ ಎಲ್ಲಿಯೋ ಹೊರಗಡೆಗೆ ಹೋಗಿರುವನೆಂದು ಕಾಣುತ್ತದೆ.

೯೪. ನನ್ನನ್ನು ನೀನು ಅಪೇಕ್ಷಿಸಿದರೆ ನಿನ್ನ ಗುರುವಾದ ಆ ಭೃಗುವನ್ನೇ ಕೇಳು. ಅವನ ಅನುಮತಿಯಿಂದ ನನ್ನನ್ನು ಮದುವೆಮಾಡಿಕೊಂಡು ಸುಖವಾಗಿ ರಮಿಸು.

೯೫. ಆಕೆಯು ಆ ರಾಜನಿಗೆ ಹೀಗೆಂದು ಹೇಳಿದರೂ ಕೂಡ ಅವನು ಕಾಮಮೋಹಿತನಾಗಿ ಬಲಾತ್ಕಾರದಿಂದ ಅವಳಲ್ಲಿ ರಮಿಸಿ ಅನಂತರ ತನ್ನ ಪಟ್ಟಣಕ್ಕೆ ಹೊರಟುಹೋದನು.

೯೬. ಇನ್ನೂ ಋತುಮತಿಯಾಗದಿದ್ದ ಆ ಬಾಲಿಕೆಯು ತನ್ನಲ್ಲಿಬಲಾತ್ಕಾರದಿಂದ ರಮಿಸಿದುದನ್ನು ತನ್ನ ತಂದೆಯು ಬಂದಮೇಲೆ ಹೆದರಿಕೊಂಡು ಅಳುತ್ತಾ ಹೇಳತೊಡಗಿ ಕ್ರಮಕ್ರಮವಾಗಿ ಎಲ್ಲಾ ವಿಷಯವನ್ನೂ ಹೇಳಿದಳು.

ತದ್ವೃತ್ತಂ ಸ ಮುನಿಃ ಶ್ರುತ್ವಾಂಜಲೌ ಕೃತ್ವಾ ಜಲಂ ಕ್ರುಧಾ ।
ಅಬ್ರವೀತ್ಸ್ವಸುತಾಂ ಬಾಲಾಂ ಸಾಂತ್ವಯನ್ ರಕ್ತಲೋಚನಃ ॥ ೯೭ ॥

ದಂಡೇನ ಸಹ ದಂಡಸ್ಯ ರಾಜ್ಯಂ ವೈ ಶತಯೋಜನಂ ।
ಭವತ್ವದ್ಯ ಕ್ಷಣಾದ್ದಗ್ಧಂ ಮದ್ವಾಕ್ಯಾಚ್ಚ ಸಮಂತತಃ ॥ ೯೮ ॥

ಹೀನೋದಕಂ ತಥಾ ಚಾಸ್ತು ತಥಾ ನಷ್ಟಂ ಚರಾಚರಂ ।
ಇತಿ ತಚ್ಛಾಪಮಾಕರ್ಣ್ಯ ತಾತಂ ಸಂಪ್ರಾರ್ಥ್ಯ ಬಾಲಿಕಾ ॥ ೯೯ ॥

ಪ್ರಾರ್ಥಯಾಮಾಸ ಶಾಪಸ್ಯ ಸಾವಧಿಂ ವಿನಯಾನ್ವಿತಾ ।
ತತೋಽಭೃಗುಸ್ಸುತಾಮಾಹ ಯದಾ ಯಾಸ್ಯತಿ ಕುಂಭಜಃ ॥ ೧೦೦ ॥

ಮುನಿಃ ಕಾಶ್ಯಾಸ್ತ್ವಮುಂ ದೇಶಂ ತದಾಯಂ ಸಜಲೋ ಭವೇತ್ ।
ದೇಶಸ್ತಥಾತ್ರ ವಾಸಂ ಹಿ ಕರಿಷ್ಯಂತಿ ಮುನೀಶ್ವರಾಃ । ॥ ೧೦೧ ॥

---

೯೭. ಆ ಮುನಿಯು ಆ ವಿಷಯವೆಲ್ಲವನ್ನೂ ಕೇಳಿದನು. ಒಡನೆಯೇ ಕೋಪವು ಬಂದಿತು. ಬೊಗಸೆಯಲ್ಲಿ ನೀರನ್ನು ತೆಗೆದು ಹಿಡಿದುಕೊಂಡು ಅಳುತ್ತಿರುವ ಮಗಳನ್ನು ಸಮಾಧಾನ ಪಡಿಸುತ್ತ ಇಂತೆಂದನು.

೯೮-೯೯. ಈಗ ಈ ದಂಡನ ರಾಜ್ಯವು ಅವನೊಡನೆ ನೂರು ಯೋಜನಗಳ ಸುತ್ತಳತೆಯಷ್ಟು ದೂರದವರೆಗೂ ನನ್ನ ಶಾಪದಿಂದ ಸುಟ್ಟುಹೋಗಲಿ. ನೀರು ನಿಡಿಗಳಿಲ್ಲದೆಯೂ, ಚರಾಚರಗಳು ನಷ್ಟವಾಗಿಯೂ ಆಗಲಿ ಎಂದು ಹೇಳಿ ಶಪಿಸಿ ನೀರನ್ನು ಚಲ್ಲಿದನು. ತಂದೆಯು ಹೀಗೆ ಶಾಪ ಕೊಟ್ಟುದನ್ನು ಆ ಬಾಲಿಕೆಯು ನೋಡಿ ಇಂತೆಂದು ಪ್ರಾರ್ಥಿಸಿದಳು.

೧೦೦-೧೦೧. ಎಲೈ ತಂದೆಯೇ! ಆ ರಾಜನಿಗೋಸ್ಕರವಾಗಿ ಅವನ ದೇಶವನ್ನೆಲ್ಲಾ ನಾಶಮಾಡುವುದು ಯುಕ್ತವಲ್ಲ. ಆದರೂ ಹಾಗೆ ಮಾಡಿದ್ದೀಯೆ. ಇದಕ್ಕೆ ಒಂದು ಅವಧಿಯನ್ನು ಕಲ್ಪಿಸು ಎಂದಳು. ಆ ಭೃಗುವು ಕುಂಭಸಂಭವನು ಕಾಶಿಯನ್ನು ಬಿಟ್ಟು ಇಲ್ಲಿಗೆ ಬರುವನು. ಆಗ ಈ ಪ್ರದೇಶವು ನೀರು ನಿಡಿಗಳುಳ್ಳದ್ದಾಗಿಯೂ, ಚರಾಚರಗಳುಳ್ಳದ್ದಾಗಿಯೂ ಆಗುತ್ತದೆ. ಆಮೇಲೆ ಅನೇಕ ಮುನೀಶ್ವರರೂ ಸಹ ಇಲ್ಲಿಗೆ ಬಂದು ವಾಸಮಾಡುತ್ತಾರೆ.

ಅರಣ್ಯಂ ದಂಡಹೇತೋರ್ಹಿ ಜಾತಂ ತಸ್ಮಾತ್ಸದಾ ನರಾಃ |
ಅಮುಂ ದೇಶಂ ವದಿಷ್ಯಂತಿ ದಂಡಕಾರಣ್ಯಮೇವ ಹಿ ‖ ೧೦೨ ‖

ಯದಾ ಭವಿಷ್ಯತ್ಯಗ್ರೇತ್ರ ರಾಮಾಗಮನ ಮುತ್ತಮಂ |
ಭವಿಷ್ಯಂತಿ ತದಾಗ್ರೇತ್ರ ನಾನಾಕ್ಷೇತ್ರಾಣಿ ದಂಡಕೇ ‖ ೧೦೩ ‖

ರಾಮಪ್ರಸಾದಾತ್ ಕ್ಷೇತ್ರಾಣಿ ಭವಿಷ್ಯಂತಿ ತತೋ ಜನಾಃ |
ರಾಮಕ್ಷೇತ್ರಮಿತಿ ಸದಾ ವದಿಷ್ಯಂತಿ ಹಿ ದಂಡಕಂ ‖ ೧೦೪ ‖

ಮುನಿರಾಮಪ್ರಸಾದೇನ ದೇಶೋಯಂ ಪೂರ್ವವತ್ಪುನಃ |
ಭವಿಷ್ಯತ್ಯುತ್ತಮಃ ಪುಣ್ಯಸ್ಸೌಖ್ಯದಶ್ಚ ಮನೋರಮಃ ‖ ೧೦೫ ‖

ದೇಶೇಭ್ಯಸ್ಸಕಲೇಭ್ಯಶ್ಚ ಸುಪುಣ್ಯಂ ದಂಡಕಂ ಭವೇತ್ |
ದಂಡಕೇನ ಸಮೋ ದೇಶೋ ನ ಭೂತೋ ನ ಭವಿಷ್ಯತಿ ‖ ೧೦೬ ‖

---

೧೦೨. ಈ ದಂಡನ ಕಾರಣಕ್ಕೋಸ್ಕರವಾಗಿ ದಂಡಕೆಯು ಯಾವಾಗಲೂ ನಿರ್ಮಾನುಷವಾಯಿತು. ಆಗಿನಿಂದಲೂ ಈ ಪ್ರದೇಶವನ್ನು ಜನರು ದಂಡಕಾರಣ್ಯವೆಂದು ಕರೆಯುತ್ತಾರೆ.

೧೦೩-೧೦೪. ಇಲ್ಲಿಗೆ ಮುಂದೆ ಶ್ರೀರಾಮನು ಬರುವನು. ಈ ದಂಡಕಾರಣ್ಯದಲ್ಲಿ ನಾನಾ ಕ್ಷೇತ್ರಗಳು ಉಂಟಾಗುವುವು. ರಾಮನ ಅನುಗ್ರಹದಿಂದ ಇಲ್ಲಿ ಕ್ಷೇತ್ರಗಳುಂಟಾಗುವುದರಿಂದ ಈ ದಂಡಕದಲ್ಲಿ ಅವನ್ನು ಕ್ಷೇತ್ರವೆಂದು ಹೇಳುತ್ತಾರೆ.

೧೦೫. ಆ ಮುನಿಯ ಮತ್ತು ರಾಮನ ಪ್ರಸಾದದಿಂದ ಈ ದಂಡಕಾರಣ್ಯವು ಮೊದಲಿನಂತೆ ಸಮೃದ್ಧವಾಗಿ ಆಗುತ್ತದೆ. ಮತ್ತು ಉತ್ತಮವಾಗಿಯೂ ಪುಣ್ಯವಾಗಿಯೂ ಆಗುತ್ತದೆ. ಸೌಖ್ಯವನ್ನು ಕೊಡುತ್ತದೆ. ಮನೋಹರವಾಗಿಯೂ ಇರುತ್ತದೆ.

೧೦೬. ಅಲ್ಲದೆ ಎಲ್ಲಾ ದೇಶಗಳಿಗಿಂತಲೂ ಈ ದಂಡಕವು ಬಹು ಪುಣ್ಯಕರವಾಗಿ ಆಗುತ್ತದೆ. ಈ ದಂಡಕಕ್ಕೆ ಸಮಾನವಾದ ದೇಶವು ಹಿಂದೆಯೂ ಇರಲಿಲ್ಲ. ಮುಂದೆಯೂ ಇರುವುದಿಲ್ಲ. ಹಾಗಾಗುತ್ತದೆ.

ಇತಿ ತಾಂ ಬಾಲಿಕಾಮುಕ್ತ್ವಾ ಭೃಗುಸ್ತೃಪ್ತಂ ಹಿಮಾಲಯಂ ।
ಯಯೌ ತಾಂ ಮುನಯೇ ದತ್ವಾ ವಿಧಿನಾ ಮುನಿಸಂವೃತಃ ॥ ೧೦೭ ॥

ಭೃಗೋಶ್ಶಾಪಾಚ್ಚ ದಂಡೇನ ದಗ್ಧಂ ತದ್ರಾಜ್ಯಮುತ್ತಮಂ ।
ಶತಯೋಜನಮಾನಂ ತದಭವದ್ಧಿ ಸಮಂತತಃ ॥ ೧೦೮ ॥

ಮದ್ರಾಮಗಮನಾಭ್ಯಾಂ ಚ ತತಃ ಸ್ವಸ್ಥಂ ಬಭೂವ ತತ್ ।
ಪೂರ್ವವದ್ದಂಡಕಾರಣ್ಯಂ ಚರಾಚರಸಮಾಕುಲಂ ॥ ೧೦೯ ॥

ಇತಿ ತ್ವಯಾ ಯಥಾ ಪೃಷ್ಟೇ ತಥಾ ಲವ ಮಯೋದಿತೇ ।
ಕಂಕಣಸ್ಯ ದಂಡಕಸ್ಯ ವಿಚಿತ್ರೇ ತ್ವಾಂ ಕಥಾನಕೇ ॥ ೧೧೦ ॥

॥ ಶ್ರೀ ರಾಮದಾಸ ಉವಾಚ ॥

ಇತ್ಯಗಸ್ತಿಮುಖಾತ್ ಶ್ರುತ್ವಾ ಲವಸ್ತುಷ್ಟೋಽಭವತ್ತದಾ ।
ನತ್ವಾ ಮುನಿಂ ಚ ಶ್ರೀರಾಮಸೇವಾಯಾಂ ತತ್ಪರೋಽಭವತ್ ॥ ೧೧೧ ॥

---

೧೦೭. ಎಂಬುದಾಗಿ ಭೃಗುವು ಆ ಮಗಳಿಗೆ ಹೇಳಿ ಆ ಮಗಳನ್ನು ಒಬ್ಬ ಮುನಿಗೆ ಕೊಟ್ಟು ಮದುವೆ ಮಾಡಿ ತಪಸ್ಸನ್ನು ಮಾಡಲು ಮುನಿಗಳೊಡನೆ ಹಿಮಾಲಯಕ್ಕೆ ಹೊರಟುಹೋದನು.

೧೦೮. ಭೃಗುವಿನ ಈ ಶಾಪದಿಂದ ದಂಡಕಾರಣ್ಯವೇ ಸುಟ್ಟುಹೋಯಿತು. ಅಲ್ಲದೆ ಆ ದಂಡಕನ ರಾಜ್ಯವು ಪೂರ್ತಿಯಾಗಿ ನಾಶವಾಯಿತು. ಸುತ್ತಲೂ ನೂರು ಯೋಜನಗಳವರೆಗೆ ಹೀಗೆ ನಾಶವಾಯಿತು.

೧೦೯-೧೧೦. ಅನಂತರ ನಾನು ದಂಡಕಕ್ಕೆ ಬಂದುದರಿಂದಲೂ ಆ ರಾಮನು ಅಲ್ಲೆಲ್ಲಾ ಸಂಚಾರ ಮಾಡಿದುದರಿಂದಲೂ ಮೊದಲಿನಂತೆ ಸರಿಯಾಯಿತು. ಮೊದಲಿನಂತೆಯೇ ಚರಾಚರಗಳಿಂದ ಕೂಡಿ ಜಲಸಮೃದ್ಧಿಯನ್ನು ಹೊಂದಿತು. ಎಲೈ ಲವನೇ! ನೀನು ಕೇಳಿದ ಕಂಕಣ ಮತ್ತು ದಂಡಕಗಳ ವಿಷಯವನ್ನು ನಿನಗೆ ವಿಸ್ತಾರವಾಗಿ ಹೇಳಿದ್ದೇನೆ.

೧೧೧. ಶ್ರೀ ರಾಮದಾಸನು ಹೇಳಿದನು :— ಅಗಸ್ತ್ಯನು ಹೀಗೆ ಹೇಳಿದುದನ್ನು ಕೇಳಿ ಲವನಿಗೆ ಬಹು ಸಂತೋಷವಾಯಿತು ಅನಂತರ ಲವನು ಆ ಮುನಿಗೆ ನಮಸ್ಕರಿಸಿ ಶ್ರೀರಾಮನ ಸೇವೆಯಲ್ಲಿ ಆಸಕ್ತನಾದನು.

ಅಥ ರಾಮಶ್ಚೋತ್ಸವೇನ ತಸ್ಮೈ ಚಿತ್ರಾಂಗದಾಯ ತಾಂ ।
ಹೇಮಾಂ ದದೌ ವಿವಾಹೇನ ಮಹಾಮಂಗಳಪೂರ್ವಕಂ ॥ ೧೧೨ ॥

ಪಾರಿಬರ್ಹಂ ದದೌ ಕೋಟಿಸಂಮಿತಂ ವಾರಣಾದಿಕಂ ।
ಮಹಾನ್ಮಹೋತ್ಸವಶ್ಚಾಸೀದಯೋಧ್ಯಾಯಾಂ ಪ್ರಭೋರ್ಗೃಹೇ ॥೧೧೩॥

ತತೋ ವಿಸರ್ಜಯಾಮಾಸ ಚೋಗ್ರಬಾಹುಂ ನೃಪಂ ಪ್ರಭುಃ ।
ಮುನಯಃ ಪಾರ್ಥಿವಾಶ್ಚಾಪಿ ಯಯುಃ ಸ್ವಸ್ವಸ್ಥಲಂ ಪ್ರತಿ ॥ ೧೧೪ ॥

ಇತಿ ಶ್ರೀಮದಾನಂದರಾಮಾಯಣೇ ಶತಕೋಟಿ ರಾಮಚರಿತಾಂತರ್ಗತ ವಾಲ್ಮೀಕೀಯೇ ರಾಜ್ಯಕಾಂಡೇ ಉತ್ತರಾರ್ಧೇ ಹೇಮಾಸ್ವಯಂವರೋ ನಾಮ ಸಪ್ತದಶಸ್ಸರ್ಗಃ ಸಮಾಪ್ತಃ

೧೧೨-೧೧೩. ಅನಂತರ ರಾಮನು ಆ ಕುಶನ ಮಗಳಾದ ಹೇಮೆಯನ್ನು ಆ ಚಿತ್ರಾಂಗದನಿಗೆ ಕೊಟ್ಟು ಬಹು ಉತ್ಸವದಿಂದ ಮದುವೆ ಮಾಡಿದನು. ಅಲ್ಲದೆ ಅನೇಕವಾದ ಉಡುಗರೆಗಳನ್ನು ಕೊಟ್ಟನು. ಆಗ ಆ ಅಯೋಧ್ಯೆಯಲ್ಲಿಯೂ ರಾಮನ ಮನೆಯಲ್ಲಿಯೂ ಬಹು ಅದ್ಭುತವಾದ ಮಹೋತ್ಸವಗಳು ನಡೆದುವು.

೧೧೪. ಅನಂತರ ರಾಮನು ಉಗ್ರಬಾಹುವನ್ನು ಪ್ರಯಾಣಮಾಡಿಸಿ ಕಳುಹಿಸಿದನು. ಮದುವೆಗೋಸ್ಕರ ಬಂದಿದ್ದ ಮುನಿಗಳೂ ರಾಜರೂ ಎಲ್ಲರೂ ಅವರವರ ಸ್ಥಳಗಳಿಗೆ ಹೊರಟುಹೋದರು.

ಇಂತು ಶ್ರೀ ವಾಲ್ಮೀಕಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ಹೇಮಾಸ್ವಯಂವರವೆಂಬ ಹದಿನೇಳನೆಯ ಸರ್ಗವು ಮುಗಿದುದು.

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಹದಿನೇಳನೆಯ ಸರ್ಗದ ಸಾರಾಂಶವು

ಒಂದುಸಾರಿ ಶ್ರೀರಾಮನು ಕುಶನ ಮಗಳಾದ ಹೇಮೆಯೆಂಬುವಳಿಗೆ ಸ್ವಯಂವರವನ್ನು ಮಾಡಲು ಉದ್ದೇಶಿಸಿದನು. ಎಲ್ಲಾ ರಾಜರಿಗೂ ಆಹ್ವಾನ ಪತ್ರಿಕೆಗಳು ಹೋದುವು. ಅಯೋಧ್ಯೆಯೂ ಶೃಂಗಾರವಾಯಿತು. ರಾಜರೂ ರಾಜಪುತ್ರರೂ ಒಬ್ಬೊಬ್ಬರಾಗಿ ಎಲ್ಲರೂ ಸೇರಿದರು. ಸ್ವಯಂವರ ಮಂಟಪವು ಎಲ್ಲ ಬಗೆಯ ಜನರಿಂದಲೂ ಕಿಕ್ಕಿರಿದಿದ್ದುದಲ್ಲದೆ ಸಕಲ ಸೌಭಾಗ್ಯಗಳಿಂದಲೂ ರಂಜಿಸುತ್ತಿದ್ದಿತು. ಆಗ ಅಲಂಕೃತಳಾದ ಹೇಮೆಯು ಕೈಯ್ಯಲ್ಲಿ ಚಿನ್ನದ ಹಾರವನ್ನು ಹಿಡಿದುಕೊಂಡು ಮೇನೆಯಲ್ಲಿ ಕುಳಿತು ಆ ಸಭೆಯೊಳಕ್ಕೆ ಬಂದಳು. ಒಂದು ಕಡೆಯಿಂದ ರಾಜರನ್ನೂ ರಾಜಪುತ್ರರನ್ನೂ ನೋಡುತ್ತ ಹೊರಟಳು. ಆಕೆಯ ಕಡೆಗಣ್ಣಿನ ನೋಟವು ಅವರಮೇಲೆ ಬೀಳುತ್ತಿರಲು ಆ ರಾಜರೂ ರಾಜಪುತ್ರರೂ ಕಾಮಪರವಶರಾಗಿ ತಮ್ಮನ್ನು ತಾವೇ ಮರೆತುಬಿಟ್ಟಿದ್ದರು. ಶ್ರೀರಾಮನೂ ಅವನ ತಮ್ಮಂದಿರೂ ಮಕ್ಕಳೂ ಬೇರೆ ಬೇರೆ ಕೆಲಸಗಳಲ್ಲಿ ಆಸಕ್ತರಾಗಿದ್ದರು. ಇದನ್ನು ತಿಳಿದು ಅವಂತಿದೇಶದ ರಾಜನಾದ ಉಗ್ರಬಾಹುವಿನ ಮಗ ಚಿತ್ರಾಂಗದನು ಮೋಹನಾಸ್ತ್ರವನ್ನು ಬಿಟ್ಟು ಆ ಸಭಿಕರನ್ನು ಮೂರ್ಛಿತರನ್ನಾಗಿ ಮಾಡಿ ಆ ಹೇಮೆಯನ್ನು ತನ್ನ ರಥದಲ್ಲಿ ಎತ್ತಿಕೂರಿಸಿಕೊಂಡು ತನ್ನ ಊರಿಗೆ ಹೊರಟನು. ಅಯೋಧ್ಯೆಯಿಂದ ಸ್ವಲ್ಪದೂರ ಹೋಗುತ್ತಿರಲು ಕಳ್ಳನಂತೆ ಕದ್ದುಹೋಗುವುದು ಯೋಗ್ಯವಲ್ಲವೆಂದು ಯೋಚಿಸಿ ಅಲ್ಲಿ ನಿಂತನು.

ಇತ್ತ ಹೇಮೆಯು ಕಳುವಾದ ವಿಷಯವು ಎಲ್ಲರಿಗೂ ತಿಳಿದು ಪಟ್ಟಣದಲ್ಲೆಲ್ಲಾ ಹಾಹಾಕಾರವೆದ್ದಿತು. ಇಷ್ಟರೊಳಗೆ ಆ ಚಿತ್ರಾಂಗದನು ಮೋಹನಾಸ್ತ್ರವನ್ನು ಉಪಸಂಹರಿಸಿದನು. ಮೋಹನಾಸ್ತ್ರದಿಂದ ಮುಕ್ತರಾದ ರಾಜರಲ್ಲಿಯೂ ಕೋಲಾಹಲವೆದ್ದಿತು. ಒಡನೆಯೇ ಅವರೆಲ್ಲರೂ ಸೈನ್ಯದೊಡನೆ ಹೊರಟು ಚಿತ್ರಾಂಗದನನ್ನು ಸಂಧಿಸಿ ಯುದ್ಧಕ್ಕೆ ನಿಂತರು. ಆ ಚಿತ್ರಾಂಗದನು ವಾಯುವ್ಯಾಸ್ತ್ರವನ್ನು ಬಿಟ್ಟು ಆ ರಾಜರೂ ರಾಜಪುತ್ರರೂ ತಮ್ಮತಮ್ಮ ರಥಗಳೊಡನೆ ಅಂತರಿಕ್ಷದಲ್ಲಿ ಗಿರ್ರನೆ ತಿರುಗುವಂತೆ ಮಾಡಿದನು. ಉಗ್ರಬಾಹುವು ದೂರದಲ್ಲಿದ್ದುಕೊಂಡು ಮಗನ ಸಾಮರ್ಥ್ಯವನ್ನು ನೋಡುತ್ತಿದ್ದನು.

ಈ ರಾಜರ ಮತ್ತು ರಾಜಪುತ್ರರ ಪರಾಕ್ರಮವು ಆ ಚಿತ್ರಾಂಗದನ ಮುಂದೆ ನಡೆಯಲಾರದೆಂಬುದು ಶ್ರೀರಾಮನಿಗೆ ತಿಳಿಯಿತು. ಒಡನೆಯೇ ಅವನು ಲವನಿಗೆ ಅಂಗದನೇ ಮುಂತಾದ ಆರುಜನ ವೀರರನ್ನು ಸಹಾಯಕ್ಕೆ ಕೊಟ್ಟುಕಳುಹಿಸಿದನು. ಅವರೆಲ್ಲರೂ ಬಂದು ಚಿತ್ರಾಂಗದನಮೇಲೆ ಬೀಳಲು ಉಗ್ರವಾದ ಕದನವಾಯಿತು. ಕಡೆಗೆ ಆ ಚಿತ್ರಾಂಗದನು ತನ್ನ ಎದುರಿಗೆ ನಿಂತು ಯುದ್ಧಮಾಡುತ್ತಿದ್ದ ಅವರ ಶಸ್ತ್ರಗಳನ್ನು ಖಂಡಿಸಿ ಯೂಪಕೇತುವಿನ ರಥವನ್ನು ನಾಶಮಾಡಿದನು. ಅನಂತರ ಸುಬಾಹು, ತಕ್ಷಕ, ಪುಷ್ಕರ, ಚಿತ್ರಕೇತು, ಅಂಗದ, ಇವರನ್ನೂ ವಿರಥರನ್ನಾಗಿ ಮಾಡಿದನು.

ಇದೆಲ್ಲವನ್ನೂ ನೋಡುತ್ತಿದ್ದ ಲವನು ಈ ಪರಾಕ್ರಮವು ಅವನ ತಪಸ್ಸಿನ ಫಲವೆಂದು ತಿಳಿದು ತಾನೇ ಅವನ ಎದುರಿಗೆ ಬಂದು ದಿವ್ಯವಾದ ಬಾಣವನ್ನು ಬಿಟ್ಟು ಆ ಚಿತ್ರಾಂಗದನ ಧನುಸ್ಸನ್ನು ಕತ್ತರಿಸಿದನು. ಒಡನೆಯೇ ಬಾಣಗಳನ್ನು ಬಿಟ್ಟು ಅವನನ್ನು ಬಹುವಾದ ದುಃಖಕ್ಕೆ ಈಡುಮಾಡಿದನು. ಇದನ್ನು ಉಗ್ರ ಬಾಹುವು ನೋಡಿ ಒಡನೆಯೇ ಮಗನಿಗೆ ನೆರವಾಗಿ ಹೋದನು. ಲವನಿಗೂ ಉಗ್ರಬಾಹುವಿಗೂ ಘೋರವಾದ ಯುದ್ಧವು ಪ್ರಾರಂಭವಾಯಿತು. ಲವನು ಆ ಉಗ್ರಬಾಹುವಿನ ರಥವನ್ನು ನಾಶಮಾಡಿದನು. ಆಗ ಉಗ್ರಬಾಹುವು ಮತ್ತೊಂದು ರಥವನ್ನು ಹತ್ತಿ ಒಂದು ಬಾಣವನ್ನು ಬಿಟ್ಟು ಆ ಲವನನ್ನು ಮೂರ್ಛೆಗೆಡವಿದನು. ಈ ವಿಷಯವನ್ನು ರಾಮನಿಗೆ ತಿಳಿಸಲು ಅವನು ಕುಶನನ್ನು ಸೈನ್ಯದೊಡನೆ ಕಳುಹಿಸಿದನು. ಕುಶನು ಬರುತ್ತಲೂ ಆ ಅಂಗದನೇ ಮುಂತಾದವರು ಬೇರೆಬೇರೆ ರಥವನ್ನು ಹತ್ತಿ ಆ ಕುಶನಿಗೆ ನೆರವಾಗಿ ನಿಂತರು.

ಇವರೆಲ್ಲರೂ ಆ ಉಗ್ರಬಾಹುವಿನಮೇಲೆ ಬಿದ್ದರು. ಆ ಉಗ್ರಬಾಹುವು ಅಂಗದ ಮುಂತಾದವರ ರಥಗಳನ್ನು ನಾಶಮಾಡಿದನು. ಕುಶನು ಒಡನೆಯೇ ಮುಂದೆಬಂದು ಬಾಣಗಳನ್ನು ಬಿಡುತ್ತಾ ಆ ಉಗ್ರಬಾಹುವಿನ ರಥವನ್ನು ನಾಶಮಾಡಿದುದಲ್ಲದೆ ಅವನ ಧನುಸ್ಸನ್ನೂ ಕತ್ತರಿಸಿಹಾಕಿದನು. ಆಗ ಉಗ್ರಬಾಹುವು ನಿಸ್ಸಹಾಯಕನಾಗಲು ಕುಶನು ಆ ತಂದೆ ಮಕ್ಕಳಿಬ್ಬರನ್ನೂ ಸೆರೆಹಿಡಿದನು. ಮತ್ತು ಜಯಭೇರಿಯನ್ನು ಹೊಡೆಸಿದನು. ಉತ್ಸವದಿಂದ ಹಿಂದಿರುಗಿ ಹೋಗಿ ಅವರಿಬ್ಬರನ್ನೂ ಶ್ರೀರಾಮನಿಗೆ ಒಪ್ಪಿಸಿದನು. ಈ ಉಗ್ರಬಾಹುವು ಶ್ರೀರಾಮನಿಗೆ ಉತ್ತಮನಾದ ಸ್ನೇಹಿತನಾದುದರಿಂದ ಅವನನ್ನು ಆ ರಾಮನು ಬಿಡಿಸಿದನು.

ಕುಶನ ಈ ವಿಜಯದಿಂದ ರಾಮನಿಗೆ ಬಹುವಾದ ಸಂತೋಷವಾಯಿತು. ಆಗ ತಾನು ಧರಿಸಿದ್ದ ಅಗಸ್ತ್ಯನು ಕೊಟ್ಟಿದ್ದ ಒಂದು ಕೈಬಳೆಯನ್ನು ಜಯಶಾಲಿಯಾದ ಕುಶನಿಗೆ ಅಗಸ್ತ್ಯನ ಎದುರಿನಲ್ಲಿ ಕೊಟ್ಟನು. ಕುಶನು ಅದನ್ನು ತೊಟ್ಟುಕೊಂಡುದರಿಂದ ಬಹುವಾಗಿ ಶೋಭಿಸಿದನು. ಆಗ ಕುಶನು ಈ ಅಗಸ್ತ್ಯನನ್ನು ನೋಡಿ ಸ್ವಾಮಿ ! ಈ ಕಂಕಣವು ತಮಗೆ ಸಿಕ್ಕಿದ ಬಗೆ ಹೇಗೆಂದು ಪ್ರಶ್ನಿಸಿದನು. ಅದಕ್ಕೆ ಆ ಮುನಿಯು ಎಲೈ ಕುಶನೇ ! ಕೇಳು. ಪೂರ್ವದಲ್ಲಿ ಇಂದ್ರನ ಶತ್ರುಗಳಾದ ರಾಕ್ಷಸರಿಗೆ ಸಮುದ್ರವು ತನ್ನ ಒಳಗೆ ಸ್ಥಳವನ್ನು ಕೊಟ್ಟಿತು. ಹೀಗೆ ಸಮುದ್ರದಲ್ಲಿ ಆಶ್ರಯವನ್ನು ಹೊಂದಿ ಇಂದ್ರನಿಗೆ ಆಗಾಗ ತೊಂದರೆಯನ್ನು ಕೊಡುತ್ತಿದ್ದರಲ್ಲದೆ ಪ್ರಜೆಗಳಿಗೂ ಬಹುವಾಗಿ ತೊಂದರೆಯನ್ನುಂಟುಮಾಡುತ್ತಿದ್ದರು. ಆಗ ಇಂದ್ರನು ಬಂದು ನನ್ನನ್ನು ಪ್ರಾರ್ಥನೆಮಾಡಲು ನಾನು ನನ್ನ ತಪಃಪ್ರಭಾವದಿಂದ ಆ ಸಮುದ್ರದ ನೀರೆಲ್ಲವನ್ನೂ ಅಂಗೈಯ್ಯಲ್ಲಿ ನಿಲ್ಲುವಂತೆ ಮಾಡಿಕೊಂಡು ಕುಡಿದು ಬಿಟ್ಟೆನು. ಆಗ ಆ ಇಂದ್ರನು ಶತ್ರುಗಳೆಲ್ಲರನ್ನೂ ನಾಶಮಾಡಿದನು. ಅನಂತರ ಮತ್ತೆ ಬಂದು ನನ್ನನ್ನು ಪ್ರಾರ್ಥಿಸಲು ನಾನು ಆ ನೀರನ್ನು ಮೂತ್ರ ರೂಪವಾಗಿ ಬಿಟ್ಟು ಮತ್ತೆ ಆ ಸಮುದ್ರವು ನೊದಲಿನಂತೆ ಇರುವಂತೆ ಮಾಡಿದೆನು. ಆಗ ಆ ಸಮುದ್ರದರಾಜನು ವಿಧ ವಿಧವಾದ ಮಣಿಗಳಿಂದ ಕೂಡಿ ಸೂರ್ಯನಂತೆ ಹೊಳೆಯುತ್ತಿರುವ ಈ ಕಂಕಣವನ್ನು ನನಗೆ ಕೊಟ್ಟನು. ಇದನ್ನು ಪೂರ್ವದಲ್ಲಿ ನಾನು ರಾಮನಿಗೆ ಕೊಟ್ಟಿದ್ದೆನು. ಅದನ್ನು ಈಗ ಅವನು ನಿನಗೆ ಕೊಟ್ಟಿರುವನು. ಎಂದನು.

ಋಷಿಯು ಇಂತು ಹೇಳಿ ಸುಮ್ಮನಾಗಲು ಕುಶನು ಮತ್ತೆ ಅತನನ್ನು ಕುರಿತು ಸ್ವಾಮಿ ! ಈ ಲವನು ಶತ್ರುವಿನಏಟಿನಿಂದ ಗಾಯಗೊಂಡು ಮೂರ್ಛಿತನಾಗಿ ಬಿದ್ದಿರುವನು. ಈತನು ಎಚ್ಚೆತ್ತು ಮೇಲಕ್ಕೇಳುವಂತೆ ಒಂದು ಉಪಾಯವನ್ನು ಹೇಳಿರಿ ಎಂದನು.

ಕುಶನ ಈ ಮಾತನ್ನು ಕೇಳಿ ಅಗಸ್ತ್ಯನು ಇಂತೆಂದನು. ಎಲೈ ಕುಶನೆ ! ಹಿಂದೆ ಭರತನು ರಾಜರೊಡನೆ ಯುದ್ಧಮಾಡಿ ಮೂರ್ಛೆಬಿದ್ದಿದ್ದಾಗ ಮುದ್ಗಲ ಋಷಿಯ ಆಶ್ರಮದಿಂದ ಸೌಮಿತ್ರಿಯು ಮಹೌಷಧಿಗಳನ್ನು ತಂದು ಎಚ್ಚರಗೊಳಿಸಿದನು. ನೀನೂ ಕೂಡ ಆ ಮುದ್ಗಲನ ಆಶ್ರಮದಿಂದ ಮಹೌಷಧಿಗಳನ್ನು ತಂದು ಲವನನ್ನು ಬದುಕಿಸು. ನಿನಗೆ ಹೋಗಲು ಆಗದಿದ್ದರೆ ಹನುಮಂತನನ್ನು ಅಲ್ಲಿಗೆ ಕಳುಹಿಸು. ಅವನು ತರುವನು ಎಂದನು. ಅಗಸ್ತ್ಯನು ಹೀಗೆಂದು ಹೇಳಿದೊಡನೆಯೇ ಹನುಮಂತನು ಔಷಧಿಯನ್ನು ತರಲು ಹೋದನು. ಮತ್ತು ಕ್ಷಣಕಾಲದಲ್ಲಿಯೇ ಹಿಂದಿರುಗಿ ಬಂದನು. ಅದರಿಂದ ಲವನನ್ನೂ ಅವನ ಸೈನ್ಯವನ್ನೂ ಬದುಕಿಸಿದನು.

ಕುಶನು ಪುತ್ತೆ ಅಗಸ್ತ್ಯನನ್ನು ಕುರಿತು ಎಲೈ ಋಷಿಯೇ! ಆ ಮುದ್ಗಲ ಋಷಿಯ ಆಶ್ರಮದಲ್ಲಿ ಮೃತಸಂಜೀವಿನೀ ಮಹೌಷಧಿಯು ಹುಟ್ಟಲು ಕಾರಣ ವೇನು? ಹಿಂದೆ ಲಕ್ಷ್ಮಣನು ಇಂದ್ರಜಿತುವಿನಿಂದ ಏಟನ್ನು ತಿಂದು ಮೂರ್ಛಿತ ನಾಗಿದ್ದಾಗ ಜಾಂಬುವಂತನು ಹನುಮಂತನನ್ನು ದ್ರೋಣಪರ್ವತಕ್ಕೆ ಕಳುಹಿಸಿ ಆ ಔಷಧಿಗಳನ್ನು ತರಿಸಿದನು. ಹತ್ತಿರದಲ್ಲಿದ್ದ ಈ ಮುದ್ಗಲನ ಆಶ್ರಮವನ್ನು ಬಿಟ್ಟು ದೂರದಲ್ಲಿರುವ ದ್ರೋಣಪರ್ವತಕ್ಕೆ ಆ ಹನುಮಂತನನ್ನು ಕಳುಹಿಸಲು ಕಾರಣವೇನು! ಈ ನನ್ನ ಸಂಶಯವನ್ನು ಪರಿಹಾರಮಾಡು ಎಂದು ಕೇಳಿದನು.

ಅದಕ್ಕೆ ಆ ಮುನಿಯು ಎಲೈ ಕುಶನೆ! ಕೇಳು. ಹಿಂದೆ ಗರುಡನು ತನ್ನ ತಾಯಿಯ ದಾಸ್ಯವನ್ನು ಬಲತಾಯಿಂದ ಬಿಡಿಸಲು ಅವಳ ಮಾತಿನಂತೆ ಅಮೃತ ಕಲಶವನ್ನು ತರಲು ಸ್ವರ್ಗಲೋಕಕ್ಕೆ ಹೋಗಿ ಅಲ್ಲಿ ಇಂದ್ರನೊಡನೆ ಹೋರಾಡಿ ಆ ಕಲಶವನ್ನು ತಂದನಷ್ಟೆ! ಅದನ್ನು ಕೊಕ್ಕಿನಲ್ಲಿ ಹಿಡಿದುಕೊಂಡು ಬರುತ್ತಿದಾಗ ಆ ಕಲಶವು ತುಳುಕಿ ಅದರಿಂದ ಒಂದು ತೊಟ್ಟು ಅಮೃತವು ಈ ಮುದ್ಗಲನ ಆಶ್ರಮದಲ್ಲಿ ಬಿದ್ದಿತು. ಅಲ್ಲದೆ ಈ ಮುದ್ಗಲನು ಮಹಾತಪಸ್ವಿಯು. ಇವೆರಡು ಕಾರಣಗಳಿಂದ ಈ ಆಶ್ರಮದಲ್ಲಿ ಮೃತಸಂಜೀವಿನೀ ಬಳ್ಳಿಗಳು ಹುಟ್ಟಿದವು. ಇಲ್ಲಿ ಈ ರೀತಿಯಾಗಿ ಮೃತಸಂಜೀವನೀ ಬಳ್ಳಿಯು ಹುಟ್ಟಿರುವುದನ್ನು ಆ ಜಾಂಬ ವಂತನು ತಿಳಿದುಕೊಂಡಿರಲಿಲ್ಲ. ಆದ್ದರಿಂದಲೇ ಅವನು ಹನುಮಂತನನ್ನು ದ್ರೋಣಪರ್ವತಕ್ಕೆ ಕಳುಹಿಸಿದನು ಎಂದನು.

ಅನಂತರ ಈ ಲವನ ಜೀವಿತದಿಂದ ಎಲ್ಲರೂ ಸಂತೋಷಗೊಂಡು ಹೋಗಿ ರಾಮನಿಗೆ ನಮಸ್ಕರಿಸಿ ಊರಿನಲ್ಲಿ ಮಹೋತ್ಸವವನ್ನು ಮಾಡಿಸಿದರು. ರಾಮನು ಈ ಲವನು ಜೀವಿಸಿದುದರಿಂದ ಬಹು ಸಂತೋಷಗೊಂಡು ಅವನನ್ನು ಆಲಿಂಗಿಸಿ ಕೊಂಡನು. ಮಗನನ್ನು ಬದುಕಿಸಿದುದರಿಂದ ರಾಮನಿಗೆ ಹನುಮಂತನ ವಿಷಯ ದಲ್ಲಿ ಬಹು ಸಂತೋಷವಾಗಲು ತನ್ನ ಕೈಯ್ಯಲ್ಲಿ ತೊಟ್ಟುಕೊಂಡಿದ್ದ ಒಂದು ಕಂಕಣ ಬಳೆಯನ್ನು ರಾಮನು ಮಾರುತಿಗೆ ಕೊಟ್ಟನು. ಮಾರುತಿಯು ಅದನ್ನು ತೊಟ್ಟುಕೊಂಡು ಮನೋಹರವಾಗಿ ಕಂಡುಬಂದನು. ಅಲ್ಲದೆ ಆ ರಾಮನು ಮತ್ತೊಂದು ಕಂಕಣವನ್ನು ಆ ಲವನಿಗೂ ಕೊಟ್ಟನು. ಲವನಿಗೆ ಕೊಟ್ಟ ಈ ಕಂಕಣವನ್ನು ಹಿಂದೆ ರಾಮನಿಗೆ ಈ ಅಗಸ್ತ್ಯನೇ ಕೊಟ್ಟಿದ್ದನು.

ಲವನು ಅಗಸ್ತ್ಯನನ್ನು ಕುರಿತು ಎಲೈ ಮುನಿಯೇ ನಿನಗೆ ಈ ಕಂಕಣವು ಹೇಗೆ ಬಂದಿತು ಎಂದನು. ಅದಕ್ಕೆ ಅಗಸ್ತ್ಯನು ಇಂತೆಂದನು. ಎಲೈ ಲವನೇ! ಕೇಳು, ಒಂದು ಸಾರಿ ದಂಡಕಾರಣ್ಯಕ್ಕೆ ಹೋಗಿದ್ದಾಗ ಅಲ್ಲಿ ಒಂದು ಸರೋವರ ದಲ್ಲಿ ಸ್ನಾನಮಾಡಲು ಹೋದೆನು. ಸ್ನಾನಮಾಡಿ ಸಂಧ್ಯಾವಂದಥಯನ್ನು ಮಾಡಿ

ಕೊಂಡು ಒಂದು ಕ್ಷಣಕಾಲ ಅಲ್ಲಿ ಕುಳಿತಿದ್ದೆನು. ಆ ಕಾಲದಲ್ಲಿ ಒಬ್ಬ ಸ್ವರ್ಗನಿವಾಸಿಯು ಅಲ್ಲಿಗೆ ಬಂದು ದಿವ್ಯವಾದ ವಿಮಾನದಲ್ಲಿ ಕುಳಿತುಕೊಂಡು ಬಂದನು. ಅನೇಕ ಜನ ಅಪ್ಸರ ಸ್ತ್ರೀಯರು ಆವನ ಬಳಿಯಲ್ಲಿದ್ದರು. ಅವನು ದಿವ್ಯವಾದ ಮಾಲೆಯನ್ನು ಹಾಕಿಕೊಂಡು ದಿವ್ಯವಾದ ಉಡುಗೆಯನ್ನುಟ್ಟು ಗಂಧಾದಿಗಳನ್ನು ಪೂಸಿಕೊಂಡಿದ್ದನು. ಆ ಸ್ವರ್ಗನಿವಾಸಿಯು ಆ ಸರೋವರದ ದಡಕ್ಕೆ ಬಂದ ಒಡನೆಯೇ ಆ ಸರೋವರದಿಂದ ಬಂದು ಹೆಣವು ಮೇಲಕ್ಕೆದ್ದಿತು. ಅದು ಊದಿಕೊಂಡು ಭಯಂಕರವಾಗಿದ್ದುದಲ್ಲದೆ ನೋಡಲು ಅಸಹ್ಯವಾಗಿ ದುರ್ವಾಸನೆಯು ತಡೆಯುವುದಕ್ಕಾಗದಂತೆ ಅದರಿಂದ ಬರುತ್ತಲಿದ್ದಿತು.

ಈ ಸ್ವರ್ಗನಿವಾಸಿಯು ಆ ವಿಮಾನದಿಂದ ಒಡನೆಯೇ ಕೆಳಗಿಳಿದು ಆ ಹೆಣದ ಬಳಿಗೆ ಹೋಗಿ ಅದನ್ನು ಕತ್ತರಿಸಿ ಬಹುವಿಶ್ವಾಸದಿಂದ ತಿಂದನು. ಅನಂತರ ಆ ಸರೋವರದಲ್ಲಿ ನೀರನ್ನು ಕುಡಿದು ಸ್ವರ್ಗಕ್ಕೆ ಹೋಗಲು ಮತ್ತೆ ಆ ವಿಮಾನವನ್ನು ಹತ್ತಿದನು. ಆ ಹೆಣವು ಮತ್ತೆ ಆ ಸರೋವರದಲ್ಲಿ ಮುಳುಗಿಕೊಂಡಿತು. ಇದನ್ನು ನೋಡಿ ನನಗೆ ಬಹು ಆಶ್ಚರ್ಯವಾಯಿತು. ಆಗ ನಾನು ಆಶ್ಚರ್ಯದಿಂದ ಆ ಸ್ವರ್ಗನಿವಾಸಿಯನ್ನು ಕೂಗಿ ಅಯ್ಯಾ! ಒಂದು ಕ್ಷಣಕಾಲ ಸಾವಕಾಶಮಾಡಿ ನಿಂತುಕೋ. ನಿನ್ನನ್ನೂ ನಿನ್ನ ವೇಷವನ್ನೂ ನಿನ್ನ ಆಹಾರವನ್ನೂ ನೋಡಿ ನನಗೆ ಆಶ್ಚರ್ಯವಾಗಿದೆ. ನಾನು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಟ್ಟು ಅನಂತರ ಹೊರಡು. ಸ್ವರ್ಗನಿವಾಸಿಯಾದ ನಿನಗೆ ಈ ರೀತಿಯಾದ ಶವಾಹಾರವು ಬರಲು ಕಾರಣವೇನು? ಎಂದೆನು.

ಆಗ ಅವನು ನನ್ನನ್ನು ಕುರಿತು ಎಲೈ ಬ್ರಾಹ್ಮಣನೆ! ನೀನು ಕೇಳಿದುದು ಸರಿ. ಎಲ್ಲವನ್ನೂ ಹೇಳುತ್ತೇನೆ ಕೇಳು. ಹಿಂದೆ ಸುದೇವನೆಂಬ ಹೆಸರುಳ್ಳ ವಿದರ್ಭದೇಶದ ರಾಜನೊಬ್ಬನಿದ್ದನು, ಅವನಿಗೆ ಶ್ವೇತಸುರಥ ಎಂಬವರು ಇಬ್ಬರು ಮಕ್ಕಳಿದ್ದರು. ತಂದೆಯ ಕಾಲಾನಂತರದಲ್ಲಿ ಹಿರಿಯವನಾದ ಶ್ವೇತನೆಂಬ ನಾನು ರಾಜನಾದೆನು. ನಾನು ರಾಜನಾದರೂ ಕೂಡ ರಾಜಮದದಿಂದ ಕೊಬ್ಬಿ ಆ ಜನ್ಮದಲ್ಲಿಯೇ ಒಂದು ದಾನವನ್ನೂ ಕೂಡ ಮಾಡಲಿಲ್ಲ. ಅಲ್ಲದೆ ಪಾಪಕರ್ಮದಲ್ಲಿಯೇ ಯಾವಾಗಲೂ ಆಸಕ್ತನಾಗಿದ್ದೆನು. ನನಗೆ ಮಕ್ಕಳೇ ಆಗಲಿಲ್ಲ. ಕೊನೆಗೆ ಮುಪ್ಪು ಬಂದಿತು. ಆಗ ತಮ್ಮನಾದ ಸುರಥನಿಗೆ ರಾಜ್ಯವನ್ನು ಕೊಟ್ಟು ಕಾಡಿಗೆ ಹೋಗಿ ಉಗ್ರವಾದ ತಪಸ್ಸನ್ನು ಮಾಡಿದೆನು. ಒಂದು ಸಾರಿ ಈ ಕೊಳಕ್ಕೆ ಬಂದು ಸ್ನಾನವನ್ನು ಮಾಡಲು ಇಳಿದಾಗ ಕಾಲುಜಾರಿ ನೀರಿನೊಳಕ್ಕೆ ಬಿದ್ದೆನು. ಅಂತೆಯೇ ಆ ನೀರಿನಿಂದ ಏಳಲಾರದೆ ಸತ್ತು ಹೋದೆನು. ನನ್ನ ತಪಸ್ಸಿನ ಫಲದಿಂದ

ಸ್ವರ್ಗವು ಲಭಿಸಿತು. ಅಲ್ಲದೆ ಆ ತಪಸ್ಸಿನ ಫಲದಿಂದಲೇ ನನಗೆ ಬರಬೇಕಾದ ಎಲ್ಲಾ ಸೌಖ್ಯಗಳೂ ಸಿಕ್ಕಿದುವು ಆದರೆ ತಿನ್ನುವುದಕ್ಕೂ ಕುಡಿಯುವುದಕ್ಕೂ ಮಾತ್ರ ಇರಲಿಲ್ಲ. ಆಗ ನಾನು ದೇವೇಂದ್ರನ ಬಳಿಗೈಹೋಗಿ ಎಲೈ ಸುರಾಧಿಪನೇ! ಇತರರಿಗೆ ಇಲ್ಲದಿರುವ ಅನೇಕವಾದ ಭೋಗಗಳೂ ಕೂಡ ನನಗೆ ಇಲ್ಲಿ ದೊರೆತಿವೆ. ಆದರೆ ನನಗೆ ತಿನ್ನುವುದಕ್ಕಾಗಲಿ ಕುಡಿಯುವುದಕ್ಕಾಗಲಿ ಇಲ್ಲಿ ಏನೂ ಇಲ್ಲವಲ್ಲ! ಅವಿಲ್ಲದಿದ್ದರೆ ಯಾವುವು ಎಷ್ಟಿದ್ದರೆ ತಾನೇ ಸುಖವುಂಟಾಗುವುದು? ಅದು ಇಲ್ಲದಿರಲು ಕಾರಣವೇನು? ಎಂದೆನು. ಆಗ ಆ ಇಂದ್ರನು ನಗುತ್ತಾ ನನ್ನನ್ನು ಕುರಿತು ಇಂತೆಂದನು. ಅಯ್ಯಾ ರಾಜನೆ! ನೀನು ರಾಜ್ಯಮದದಿಂದ ಮದಿಸಿದವನಾಗಿ ಒಂದು ದಾನವನ್ನೂ ಭೂಮಿಯಲ್ಲಿ ಮಾಡಲೇ ಇಲ್ಲ. ತಾನು ಮಾಡದಿರುವ ದಾನವು ಇತರ ಪುಣ್ಯಗಳಿಂದ ಸಿಕ್ಕುವುದೇ ಇಲ್ಲ. ಆದ್ದರಿಂದ ಈ ನಿನ್ನ ಹಸಿವನ್ನು ಬೇರೆಯ ರೀತಿಯಿಂದ ಅಡಗಿಸಿಕೊಂಡು ಉಳಿದ ಭೋಗಗಳನ್ನು ಅನುಭವಿಸು. ನಿತ್ಯವೂ ವಿಮಾನದಲ್ಲಿ ಕುಳಿತು ನಿನ್ನ ಹಿಂದಿನ ಜನ್ಮದ ಶರೀರವು ಬಿದ್ದಿರುವ ಆ ಸರೋವರಕ್ಕೆ ಹೋಗು. ನೀನು ವೃಷ್ಟಾನ್ನದಿಂದ ಯಾವ ಶರೀರವನ್ನು ಪೋಷಿಸಿಕೊಂಡಿದ್ದೆಯೋ ಅದನ್ನೇ ಅಲ್ಲಿ ತಿನ್ನು. ನೀನು ಎಷ್ಟುಕಾಲತಿಂದರೂ ಅದು ಕಡಿಮೆಯಾಗದೆ ಇದ್ದಂತೆಯೇ ಇರುತ್ತಾ ನಿನಗೆ ಆಹಾರವಾಗಿದ್ದುಕೊಂಡೇ ಇರುತ್ತದೆ. ಎಂದನು. ಇಂದ್ರನ ಈ ಮಾತನ್ನೂ ಕೇಳಿ ನಾನು ಎಲೈ ದೇವಾಧಿಪನೇ! ನಾನು ಏನುಮಾಡಿದರೆ ನನಗೆ ದಿವ್ಯವಾದ ಅನ್ನವು ಸಿಕ್ಕುತ್ತದೆ? ಅದನ್ನು ಹೇಳು ಎಂದೆನಲು ಅವನು ಅಯ್ಯಾ! ಈಗ ದಂಡಕಾರಣ್ಯವು ಮನುಷ್ಯರ ಸಂಚಾರವಿಲ್ಲದುದಾಗಿರುತ್ತದೆ. ವಿಂಧ್ಯಪರ್ವತದ ವೃದ್ಧಿಯನ್ನು ತಡೆಯಲು ಅಗಸ್ತ್ಯನು ದೇವತೆಗಳಿಂದ ಚಿತನಾಗಿ ಕಾಶಿಯನ್ನು ಬಿಟ್ಟು ಹೆಂಡತಿಯೊಡನೆ ದಕ್ಷಿಣದಿಕ್ಕಿನ ದಂಡಕಾರಣ್ಯಕ್ಕೆ ಬರುವನು. ಆತನು ಈ ಸರೋವರದಲ್ಲಿ ಸ್ನಾನಮಾಡಿ ಕುಳಿತಿರುವಾಗ ನೀನು ಆತನನ್ನು ನೋಡುತ್ತೀಯೆ. ಆಗ ನಿನ್ನ ಕೈಯ್ಯಲ್ಲಿರುವ ಈ ಕಂಕಣವನ್ನು ಅವನಿಗೆ ನೀರಿನಿಂದ ನೆನಸಿ ದಾನಮಾಡು. ಆ ದಾನದಿಂದ ನಿನಗೆ ಉತ್ತಮವಾದ ಅನ್ನವು ಸಿಕ್ಕುತ್ತದೆ ಎಂದನು. ಅದು ಮೊದಲುಗೊಂಡು ನಾನು ಇಲ್ಲಿಗೆ ಬರುತ್ತ ಈ ಶವವನ್ನು ತಿನ್ನುತ್ತಲಿರುವೆನು. ಇದುವರೆಗೂ ಇಲ್ಲಿ ಒಬ್ಬನನ್ನೂ ಕಾಣಲಿಲ್ಲ. ಈಗಲೇ ಇಲ್ಲಿ ಮನುಷ್ಯನಿರುವುದನ್ನು ನೋಡಿದುದು. ಇದನ್ನು ನೋಡಿದರೆ ನೀನೇ ಆ ಅಗಸ್ತ್ಯನೆಂದು ತೋರುತ್ತದೆ. ಈಗ ನಾನು ಧನ್ಯನಾದೆನು. ಈ ದಾನವನ್ನು ತೆಗೆದುಕೊಂಡು ನನ್ನನ್ನು ಉದ್ಧಾರಮಾಡು. ಎಂದು ಹೇಳಿ ಆತನು ಈ ಕಂಕಣವನ್ನು ನೀರಿನಲ್ಲಿ ನೆನಸಿ ನನಗೆ ಕೊಟ್ಟು ವಿಮಾನದಲ್ಲಿ

ಕುಳಿತು ಹೊರಟುಹೋದನು ಅದು ಮೊದಲುಗೊಂಡು ಆ ಶವವೂ ಮೇಲಕ್ಕೇಳು ವುದನ್ನು ಬಿಟ್ಟು ಬಿಟ್ಟಿತು ಆತನಿಗೂ ಉತ್ತಮವಾದ ಆಹಾರವೂ ಸಿಕ್ಕುತ್ತ ಬಂದಿತು ಸುಖವಾಗಿದ್ದನು. ಈ ರೀತಿಯಾಗಿ ಈ ಕಂಕಣವು ನನಗೆ ಬಂದಿರುವುದು. ಇದನ್ನು ನಾನು ರಾಮನಿಗೆ ಕೊಟ್ಟಿನು. ಅವನು ಅದನ್ನು ಈಗ ನಿನಗೆ ಕೊಟ್ಟನು. ಎಂದನು.

ಅಗಸ್ತ್ಯನ ಈ ಮಾತನ್ನು ಕೇಳಿ ಲವನು ಎಲೈ ಮಹರ್ಷಿಯೇ ! ನೀನು ಹೋಗಿದ್ದ ಆ ಅರಣ್ಯಕ್ಕೆ ದಂಡಕಾರಣ್ಯವೆಂದು ಏಕೆ ಹೆಸರಾಯಿತು ? ಅದು ನಿರ್ಜನವಾದುದೇಕೆ ? ಎಂದೆನಲು ಅಗಸ್ತ್ಯನು ಇಂತೆಂದನು.

ಎಲೈ ಲವನೆ ! ವಿಂಧ್ಯಪರ್ವತದ ದಕ್ಷಿಣದಲ್ಲಿ ಇಕ್ಷ್ವಾಂಕುವಶಂಶದಲ್ಲಿ ಹುಟ್ಟಿದ ದಂಡಕನೆಂಬುವನೊಬ್ಬ ರಾಜನಿದ್ದನು. ಅವನು ಯಾವಾಗಲೂ ಪಾಪಕರ್ಮವನ್ನೇ ಮಾಡುತ್ತಲಿದ್ದನು. ಒಂದುಸಾರಿ ಬೇಟೆಯಾಡಲು ಇವನು ಸೇನೆಯೊಡನೆ ಕಾಡಿಗೆ ಹೋದನು. ಅಲ್ಲಿ ಆ ರಾಜನು ಒಂದು ಮೃಗವನ್ನು ನೋಡಿ ಅದನ್ನು ಹೊಡೆಯಲು ಅದರ ಹಿಂದೆ ಹೋದನು. ಹಿಂದೆ ಹೋಗುತ್ತ ಹೋಗುತ್ತ ಒಬ್ಬಂಟಿಗನಾಗಿಯೇ ಬಹುದೂರ ಹೋದನು. ಕೊನೆಗೆ ಆ ಮೃಗವು ಕಾಣಿಸದಂತೆ ಮಾಯವಾಯಿತು. ಅವನು ಬಹುವಾಗಿ ದಣಿದಿದ್ದುದರಿಂದ ಬಾಯಾರಿಕೆ ಯಾಗಲು ಒಂದು ಸರೋವರಕ್ಕೆ ಹೋಗಿ ನೀರನ್ನು ಕುಡಿದನು. ಅನಂತರ ಆ ಸರೋವರದ ದಡದಲ್ಲಿದ್ದ ಭೃಗುವಿನ ಆಶ್ರಮಕ್ಕೆ ಹೋದನು. ಆ ಆಶ್ರಮವು ತನ್ನ ಗುರುವಾದ ಆ ಭೃಗುವಿನದೆಂದು ಗೊತ್ತಿರಲಿಲ್ಲ. ಅಲ್ಲಿ ಅವನ ಮಗಳಿದ್ದಳು ತಂದೆಯು ಇರಲಿಲ್ಲ. ಆ ಹುಡುಗಿಯು ಪುಷ್ಪವತಿಯಾಗಿದ್ದರೂ ತತ್ಕಾಲದಲ್ಲಿ ಗರ್ಭಧರಿಸತಕ್ಕ ರೀತಿಯಲ್ಲಿರಲಿಲ್ಲ. ಆ ರಾಜನು ಈಕೆಯನ್ನು ನೋಡಿ ಕಾಮಮೋಹಿತನಾಗಿ ರತಿಗೆ ಕರೆದನು. ಅದಕ್ಕೆ ಆಕೆಯು ಎಲೈ ರಾಜನೇ ! ನಾನು ಸ್ವತಂತ್ರಳಲ್ಲ. ತಂದೆಯ ಅಧೀನದಲ್ಲಿರುವವಳು. ಅವನು ಹೊರಗೆ ಎಲ್ಲಿಗೋ ಹೋಗಿರುವನು. ನೀನು ರಾಜನೆಂಬುದನ್ನೂ ನನ್ನ ತಂದೆಯು ನಿನ್ನ ಗುರುವೆಂಬುದನ್ನೂ ಬಲ್ಲೆನು. ನೀನು ನನ್ನನ್ನು ಅಪೇಕ್ಷಿಸುವ ಪಕ್ಷದಲ್ಲಿ ಆ ನನ್ನ ತಂದೆಯನ್ನು ಕೇಳಿ ಮದುವೆಯಾಗಿ ನನ್ನೊಡನೆ ಸುಖಿಸು. ಎಂದಳು.

ಆಕೆಯು ಹೀಗೆ ಹೇಳಿದರೂ ಆ ದಂಡನು ಬಲಾತ್ಕಾರದಿಂದ ಆಕೆಯಲ್ಲಿ ರಮಿಸಿ ತನ್ನ ಊರಿಗೆ ಹೊರಟುಹೋದನು. ಇತ್ತ ಭೃಗುವು ಬಂದಮೇಲೆ ಆ ಹುಡುಗಿಯು ಅಳುತ್ತ ತಂದೆಯ ಬಳಿಗೆ ಹೋಗಿ ನಡೆದ ವಿಷಯವೆಲ್ಲವನ್ನೂ

ಹೇಳಿದಳು. ಇದೆಲ್ಲವನ್ನೂ ಕೇಳಿ ಆ ಋಷಿಯು ಕೋಪಗೊಂಡು ಬೊಗಸೆಯಲ್ಲಿ ನೀರನ್ನು ತೆಗೆದುಕೊಂಡು ತನ್ನ ಮಗಳನ್ನು ಸಮಾಧಾನಮಾಡುತ್ತ ಈ ದಂಡನೂ ದಂಡನ ಶತಯೋಜನ ವಿಸ್ತೀರ್ಣವುಳ್ಳ ರಾಜ್ಯವೂ ಕ್ಷಣಕಾಲದಲ್ಲಿ ನನ್ನ ಶಾಪದಿಂದ ಸುಟ್ಟುಹೋಗಲಿ. ಮತ್ತೂ ಇಲ್ಲಿ ಕುಡಿಯಲು ನೀರೂ ಕೂಡ ಸಿಕ್ಕದೆ ಚರಾ ಚರಗಳೊಂದೂ ಇಲ್ಲದಂತಾಗಲಿ. ಎಂದು ಶಪಿಸಿದನು. ಆಗ ಆ ಬಾಲೆಯು ಕನಿಕರದಿಂದ ತಂದೆಯನ್ನು ಕುರಿತು ಈ ಶಾಪಕ್ಕೆ ಬಂದು ಅವಧಿಯನ್ನು ಕಲ್ಪಿಸು ಎಂದಳು. ಆಗ ಭೃಗುವು ಕುಂಭಸಂಭವನಾದ ಅಗಸ್ತ್ಯನು ಕಾಶಿಯನ್ನು ಬಿಟ್ಟು ಈ ದಂಡಕಕ್ಕೆ ಬಂದಾಗ ಇಲ್ಲಿ ನೀರೂ ಸಿಕ್ಕುವುದು. ಚರಾಚರವಾದ ಪ್ರಾಣಿಗಳೂ ವಾಸಿಸುವುವು. ಮುನಿಗಳೂ ಕೂಡ ವಾಸಮಾಡಲು ಯೋಗ್ಯ ವಾಗುವುದು. ಅಲ್ಲಿಂದೀಚೆಗೆ ಈ ಪ್ರದೇಶವನ್ನು ಜನರು ದಂಡಕಾರಣ್ಯವೆಂದು ಕರೆಯುವರು. ಶ್ರೀರಾಮನು ಈ ದಂಡಕಕ್ಕೆ ಬಂದಾಗ ಅನೇಕ ವಿಧವಾದ ಕ್ಷೇತ್ರಗಳೂ ಅಲ್ಲಿ ಉಂಟಾಗುವುವು. ಅಲ್ಲಿಂದೀಚೆಗೆ ಈ ದಂಡಕವನ್ನು ರಾಮಕ್ಷೇತ್ರವೆಂದು ಕರೆಯುತ್ತಾರೆ. ಆ ಅಗಸ್ತ್ಯನ ಮತ್ತು ರಾಮನ ಇವರಿಬ್ಬರ ಅನುಗ್ರಹದಿಂದ ಈ ದಂಡಕವು ಮೊದಲಿನಂತೆ ಸರ್ವಸಮೃದ್ಧವಾಗುವುದು. ಉತ್ತಮವೂ ಪುಣ್ಯಪ್ರದವೂ ಸೌಖ್ಯಕರವೂ ಆಗುವುದು ಎಂದನು. ಅನಂತರ ಅವನು ಆಕೆಯನ್ನು ಒಬ್ಬ ಋಷಿಗೆ ಕೊಟ್ಟು ಮದುವೆಮಾಡಿ ತಪಸ್ಸನ್ನು ಮಾಡಲು ಹಿಮಾಲಯಕ್ಕೆ ಹೋದನು.

ಈ ರೀತಿಯಾಗಿ ಭೃಗುವಿನ ಶಾಪದಿಂದ ಈ ಉತ್ತಮವಾದ ರಾಜ್ಯವು ಭಸ್ಮವಾದುದಲ್ಲದೆ ರಾಜನೂ ನಾಶವಾದನು. ಅನಂತರ ನನ್ನ ಮತ್ತು ರಾಮನ ಆಗಮನದಿಂದ ಪೂರ್ವದಂತೆಯೂ ಆಯಿತು. ಎಂದನು.

ಅಗಸ್ತ್ಯನ ಈ ಮಾತನ್ನು ಕೇಳಿ ಲವನು ಸಂತುಷ್ಟನಾಗಿ ಅವನಿಗೆ ನಮಸ್ಕರಿಸಿ ಶ್ರೀರಾಮಸೇವೆಯಲ್ಲಿ ನಿರತನಾದನು. ಅನಂತರ ಹೇಮೆಯನ್ನು ರಾಮನು ಚಿತ್ರಾಂಗದನಿಗೆ ಕೊಟ್ಟು ವೈಭವದಿಂದ ವಿವಾಹವನ್ನು ಮಾಡಿ ಅನೇಕವಾದ ಉಡುಗೆರೆಗಳನ್ನು ಕೊಟ್ಟನು. ಅನಂತರ ಮದುವೆಗೆ ಬಂದಿದ್ದವ ರೆಲ್ಲರೂ ತಮ್ಮ ತಮ್ಮ ಊರುಗಳಿಗೆ ಪ್ರಯಾಣಮಾಡಿದರು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ
ಉತ್ತರಾರ್ಧೇ ಅಷ್ಟಾದಶಸ್ಸರ್ಗಃ

॥ ಶ್ರೀ ರಾಮದಾಸ ಉವಾಚ ॥

ಅಥ ರಾಮಸ್ತ್ವಯೋಧ್ಯಾಯಾಂ ರಂಜಯಾಮಾಸ ಜಾನಕೀಂ ।
ಜುಗೋಪ ಮೇದಿನೀಂ ಕೃತ್ಸ್ನಾಂ ಸಪ್ತಸಾಗರಮೇಖಲಾಂ ॥ ೧ ॥

ರಾಮಮುದ್ರಾಂ ವಿನಾ ಕಸ್ಯ ಸಾಕೇತೇ ಶಸ್ತ್ರಧಾರಿಣಃ ।
ನೈವಾಸೀತ್ಸುಪ್ರವೇಶಶ್ಚ ರಾಮರಾಜ್ಯೇ ಕದಾಚನ ॥ ೨ ॥

ನೈವಾಸೀನ್ನಿರ್ಗಮಶ್ಚಾಪಿ ವಿನಾ ಮುದ್ರಾಂ ಕದಾ ಬಹಿಃ ।
ರಾಮಮುದ್ರಾಂಕಿತಂ ಪತ್ರಂ ಗೃಹೀತ್ವಾ ತೇ ನೃಪೋತ್ತಮಾಃ ॥ ೩ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ
ಹದಿನೆಂಟನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಇತ್ತ ರಾಮನು ಅಯೋಧ್ಯೆಯಲ್ಲಿ ಸುಖಿಸುತ್ತ ಜಾನಕಿಯನ್ನು ಸಂತೋಷಪಡಿಸುತ್ತಿದ್ದನು. ಸಪ್ತಸಮುದ್ರಗಳಿಂದ ಕೂಡಿರುವ ಈ ಭೂಮಿಯೆಲ್ಲವನ್ನೂ ಕಾಪಾಡುತ್ತಿದ್ದನು.

೨-೩. ರಾಜನ ಮುದ್ರೆಯಿಲ್ಲದೆ ಅಯೋಧ್ಯೆಯಲ್ಲಾಗಲಿ ಕೊನೆಗೆ ಅವನ ದೇಶದಲ್ಲಾಗಲಿ, ಶಸ್ತ್ರವನ್ನು ಧರಿಸಿ ಯಾವನೂ ಬರುವಂತಿಲ್ಲ. ಹೋಗುವಂತಿರಲೂ ಇಲ್ಲ. ರಾಮನ ಮುದ್ರೆಯಿಲ್ಲದೆ ಸಾಮಾನ್ಯನಾದವನೂ ಯಾವನೂ ಹೊರಗೆ ಹೋಗುವಂತಿರಲೂ ಇಲ್ಲ. ಬರುವಂತಿರಲೂ ಇಲ್ಲ. ರಾಜರೆಲ್ಲರೂ ಕೂಡ ಆ ರಾಮ ಮುದ್ರೆಯನ್ನೇ ತೆಗೆದುಕೊಂಡು ಹೋಗಿಬರುತ್ತಿದ್ದರು.

ಗಮನಾ ಗಮನೇ ಚಕ್ರುರ್ಭೂರ್ವನ್ಯಾಂ ಕುತ್ರಾಪ್ಯಕುಂಠಿತಾಃ ।
ರಾಮಮುದ್ರಾಸ್ವರೂಪಂ ಚ ತೇ ವದಾಮಿ ಶೃಣುಷ್ವ ತತ್ ॥ ೪ ॥

ತಿರ್ಯಗೂರ್ಧ್ವಂ ಪಂಚದಶ ರಕ್ತಾಃ ರೇಖಾಃ ಪ್ರಕಲ್ಪಯೇತ್ ।
ಪೀತಾ ಪ್ರಥಮಿಕಾ ಪಙ್ಕ್ತಿಃ ಶ್ಚತುರ್ದಿಕ್ಷು ಪ್ರಕಾರಯೇತ್ ॥ ೫ ॥

ಪಙ್ಕ್ತಿರ್ದ್ವಿತೀಯಾ ಶುಭ್ರೈವ ಜ್ಞಾತವ್ಯಾ ಚ ತಥಾಷ್ಟಮಿ ।
ತತಶ್ಚೇಶದಿಗಾರಭ್ಯ ತೃತೀಯಾಯಾಂ ತತಃ ಕ್ರಮಾತ್ ॥ ೬ ॥

ವಕ್ಷ್ಯಮಾಣಪದಾನ್ಯೇವ ಕೃಷ್ಣಾನಿ ಹಿ ಸಮಾಚರೇತ್ ।
ಆರಂಭಶ್ಚೋತ್ತರಾಯಾಂ ಹಿ ಸಮಾಪ್ತಿರ್ದಕ್ಷಿಣೇ ಸ್ಮೃತಾ ॥ ೭ ॥

---

೪. ರಾಮನ ಆಜ್ಞೆಯು ಎಲ್ಲಾ ಕಡೆಯಲ್ಲಿಯೂ ಅಪ್ರತಿಹತವಾಗಿ ನಡೆಯುತ್ತಿದ್ದಿತು. ರಾಮನ ಮುದ್ರೆಯು ಎಲ್ಲಾ ಕಡೆಯಲ್ಲಿಯೂ ಯಾವ ಆತಂಕವೂ ಇಲ್ಲದೆ ಪ್ರಚಾರದಲ್ಲಿದ್ದಿತು. ರಾಮನ ಆ ಮುದ್ರೆಯ ಸ್ವರೂಪವನ್ನು ನಿನಗೆ ಹೇಳುತ್ತೇನೆ ಕೇಳು.

೫-೬. ಮೇಲಿನಿಂದ ಕೆಳಗಡೆಗೆ ಹದಿನೈದು ರೇಖೆಗಳನ್ನೂ, ಅದಕ್ಕೆ ಅಡ್ಡಡ್ಡಲಾಗಿ ಹದಿನೈದು ರೇಖೆಗಳನ್ನೂ ಎಳೆಯಬೇಕು. (ಎಂದರೆ ನೆಟ್ಟಗೂ ಅಡ್ಡಲಾಗಿಯೂ ಹದಿನೈದು ಹದಿನೈದು ರೇಖೆಗಳಿರಬೇಕು) ಹೀಗೆ ಎಳೆಯುವ ಹದಿನೈದು ಹದಿನೈದು ರೇಖೆಗಳನ್ನು ಕೆಂಪುಬಣ್ಣದಿಂದ ಎಳೆಯಬೇಕು. ನಾಲ್ಕೂ ಕಡೆಗೂ ಹೊರಗಡೆ ಇರುವ ಮನೆಗಳನ್ನು ಹೊಂಬಣ್ಣದಿಂದ ಮುಚ್ಚಬೇಕು. ಅನಂತರ ಮೇಲಿನಿಂದ ಎರಡನೆಯ ಸಾಲಿನ ಮನೆಯೂ ಅಂತೆಯೇ ಎಂಟನೆಯ ಸಾಲಿನ ಮನೆಯೂ ಬಿಳಿಯ ಬಣ್ಣದಿಂದ ತುಂಬಲ್ಪಟ್ಟದಾಗಿರಬೇಕು. ಎಂದರೆ ಅವು ಖಾಲಿಯ ಮನೆಗಳು ಹೀಗೆ ಎಳೆದರೆ ರೇಖೆಗಳಿಂದ ನೂರತೊಂಭತ್ತಾರು ಮನೆಗಳು ಏರ್ಪಡುತ್ತವೆ.

೭. ಮೇಲಿನಿಂದ ಈಶಾನ್ಯದಿಕ್ಕಿನಿಂದ ಮುಂದಕ್ಕೆ ಕ್ರಮವಾಗಿ ಮುಂದೆ ಹೇಳುವ ಮನೆಗಳನ್ನು ಕಪ್ಪು ಬಣ್ಣದಿಂದ ಮುಚ್ಚಬೇಕು. ಉತ್ತರದಿಂದ ಆರಂಭ ಮಾಡಿಕೊಂಡು ದಕ್ಷಿಣದ ಕಡೆಗೆ ಮುಗಿಸಿ ನಿಲ್ಲಿಸಬೇಕು.

ಪಶ್ಚಿಮಾಭಿಮುಖಂ ಸ್ಥಾಪ್ಯ ಮುದ್ರಾ ಕರ್ತ್ರಾತ್ಮಸಮ್ಮುಖಂ ।
ಪೂರ್ವಾಸ್ಯೇನ ಸದಾ ಸ್ಥೇಯಂ ತದಾ ಕರ್ತ್ರಾ ವಿನಿಶ್ಚಯಾತ್ ॥ ೮ ॥

ಪ್ರಥಮಂ ಹಿ ದ್ವಿತೀಯಂ ಚ ಚತುರ್ಥಂ ಷಷ್ಠಸಪ್ತಮೇ ।
ಅಷ್ಟಮಂ ನವಮಂ ಚೈವ ತಥೈಕಾದಶಮುಚ್ಯತೇ ॥ ೯ ॥

ತತಶ್ಚತುರ್ಥ್ಯಾಂ ಪಙ್ಕ್ತ್ಯಾಂ ಹಿ ಚತುರ್ಥಂ ಷಷ್ಠಸಪ್ತಮೇ ।
ತಥೈಕಾದಶಮಂ ಜ್ಞೇಯಂ ಪಂಚಮಾಯಾಃ ಕ್ರಮೋಽಧುನಾ ॥ ೧೦ ॥

ಪ್ರಥಮಂ ಹಿ ದ್ವಿತೀಯಂ ಚ ಚತುರ್ಥಂ ಷಷ್ಠ ಸಪ್ತಮೇ ।
ನವಮ್ಯೇಕಾದಶೇ ಚಾಪಿ ಷಷ್ಠ್ಯಾಯಾಶ್ಚ ಕ್ರಮೋಽಧುನಾ ॥ ೧೧ ॥

ಪ್ರಥಮಂ ಹಿ ದ್ವಿತೀಯಂ ಚ ಚತುರ್ಥಂ ಷಷ್ಠಮುತ್ತಮಂ ।
ನವಮ್ಯೇಕಾದಶೇ ಚಾಪಿ ಸಪ್ತಮೀ ಸಕಲಾಸಿತಾ ॥ ೧೨ ॥

---

೮. ಕರ್ತೃವಾದವನು ಪೂರ್ವಾಭಿಮುಖವಾಗಿ ಕುಳಿತುಕೊಳ್ಳಬೇಕು. ಚಕ್ರವನ್ನು ಕರ್ತೃವಿನ ಎದುರಿಗಿರುವಂತೆ ಮಾಡಿ ಪಶ್ಚಿಮದ ಕಡೆಗೆ ಮುಖ ಮಾಡಿ ಇರಬೇಕು.

೯. ಮತ್ತಲೂ ಒಂದೊಂದು ಸಾಲನ್ನು ಬಿಟ್ಟಿರಬೇಕೆಂದು ಹೇಳಿರುವುದನ್ನೂ ಮೇಲಿನಿಂದ ಎರಡನೆಯ ಸಾಲನ್ನು ಬಿಟ್ಟಿದೆ ಎಂಬುದನ್ನೂ ಮರೆಯಬಾರದು. ಅವೆಲ್ಲವೂ ಏನೂ ಇಲ್ಲದೆ ಶೂನ್ಯವಾದ ಮನೆಗಳು. ಎಂದರೆ ಬಿಳಿಯವು. ಮೂರನೆಯ ಸಾಲಿನಲ್ಲಿ ಒಂದು ಎರಡು, ನಾಲ್ಕು, ಆರು, ಏಳು, ಎಂಟು, ಒಂಭತ್ತು ಹನ್ನೊಂದು ಈ ಮನೆಗಳು ಕಪ್ಪು ಬಣ್ಣದಿಂದ ತುಂಬಲ್ಪಟ್ಟವಾಗಿರಬೇಕು.

೧೦-೧೧. ನಾಲ್ಕನೆಯ ಸಾಲಿನಲ್ಲಿ ನಾಲ್ಕು, ಆರು, ಏಳು, ಹನ್ನೊಂದು ಈ ಮನೆಗಳು ಕಪ್ಪು ಬಣ್ಣದಿಂದ ತುಂಬಲ್ಪಟ್ಟಿರಬೇಕು. ಐದನೆಯ ಸಾಲಿನಲ್ಲಿ ಒಂದು ಎರಡು, ನಾಲ್ಕು, ಆರು, ಏಳು, ಒಂಬತ್ತು, ಹನ್ನೊಂದು, ಈ ಮನೆಗಳು ಕಪ್ಪುಬಣ್ಣದ್ದಾಗಿರಬೇಕು.

೧೨. ಆರನೆಯ ಸಾಲಿನಲ್ಲಿ ಒಂದು, ಎರಡು, ನಾಲ್ಕು, ಆರು, ಎಂಟು, ಒಂಭತ್ತು, ಹನ್ನೊಂದು ಇವು ಕಪ್ಪುಬಣ್ಣವಾಗಿರಬೇಕು. ಏಳನೆಯ ಸಾಲೆಲ್ಲವೂ ಕಪ್ಪುಬಣ್ಣದಿಂದ ತುಂಬಲ್ಪಟ್ಟಿರಬೇಕು.

ನವಮ್ಯಾಃ ಪ್ರಥಮಂ ಕೃಷ್ಣಂ ದ್ವಿತೀಯಂ ಚ ಚತುರ್ಥಕಂ ।
ಷಷ್ಠಂ ಹಿ ಸಪ್ತಮಂ ಚಾಪಿ ನವಮಂ ದಶಮಂ ಸ್ಮೃತಂ ॥ ೧೩ ॥

ತಥೈವ ದ್ವಾದಶಂ ಚಾಪಿ ದಶಮ್ಯಾಶ್ಚ ಕ್ರಮೋಽಧುನಾ ।
ಚತುರ್ಥಂ ಚ ಕಥಾ ಷಷ್ಠಂ ಸಪ್ತಮಾರ್ಕೇ ತಥಾ ಸಿತೇ ॥ ೧೪ ॥

ಏಕಾದಶ್ಯಾಶ್ಚ ಪ್ರಥಮಂ ದ್ವಿತೀಯಂ ಹಿ ಚತುರ್ಥಕಂ ।
ಷಷ್ಠಾಷ್ಟನವಮಾನ್ಯೇವ ದಶಮಾರ್ಕೇ ತಥಾ ಸ್ಮೃತೇ ॥ ೧೫ ॥

ದ್ವಾದಶ್ಯಾಃ ಪ್ರಥಮಂ ಕೃಷ್ಣಂ ದ್ವಿತೀಯಂ ಹಿ ಚತುರ್ಥಕಂ ।
ಷಷ್ಠಂ ಚ ಸಪ್ತಮಂ ಚಾಪಿ ಹ್ಯಷ್ಟಮಂ ನವಮಂ ತಥಾ ॥ ೧೬ ॥


ದಶಮಾರ್ಕೇ ತಥಾ ಪ್ರೋಕ್ತೇ ಕೃಷ್ಣಾ ಕೃತ್ಸ್ನಾ ತ್ರಯೋದಶೀ ।
ಏವಂ ಬುಧ್ಯಾ ಪೂರಯಿತ್ವಾ ರಾಜಾಽರಾಮೋತಿ ವೈ ಸ್ಫುಟಂ ॥ ೧೭ ॥

೧೩-೧೪, ಒಂಭತ್ತನೆಯುದರಲ್ಲಿ ಒಂದು ಎರಡು, ನಾಲ್ಕು, ಆರು, ಏಳು, ಒಂಭತ್ತು ಹತ್ತು, ಹನ್ನೆರಡು ಇವು ಕಪ್ಪು ಬಣ್ಣದ್ದಾಗಿರಬೇಕು. ಹತ್ತನೆಯುದರಲ್ಲಿ ನಾಲ್ಕು, ಆರು, ಏಳು, ಹನ್ನೆರಡು, ಇವು ಕಪ್ಪುಬಣ್ಣದ್ದಾಗಿರಬೇಕು.

೧೫. ಹನ್ನೊಂದನೆಯುದರಲ್ಲಿ ಒಂದು, ಎರಡು, ನಾಲ್ಕು, ಆರು. ಎಂಟು ಒಂಭತ್ತು, ಹತ್ತು, ಹನ್ನೆರಡು, ಕಪ್ಪುಬಣ್ಣದ್ದಾಗಿರಬೇಕು.

೧೬-೧೭. ಹನ್ನೆರಡನೆಯ ಸಾಲಿನಲ್ಲಿ ಒಂದು, ಎರಡು, ನಾಲ್ಕು, ಆರು. ಏಳು, ಎಂಟು, ಒಂಭತ್ತು, ಹತ್ತು, ಹನ್ನೆರಡು ಇವು ಕಪ್ಪುಬಣ್ಣದ್ದಾಗಿರಬೇಕು. ಈ ರೀತಿಯಾಗಿ ಬುದ್ಧಿವಂತಿಕೆಯಿಂದ ಮೇಲೆ ಹೇಳಿದ ಸಾಲುಗಳಲ್ಲಿ ಆ ಮನೆಗಳನ್ನು ಕಪ್ಪುಬಣ್ಣದಿಂದ ಮುಚ್ಚಬೇಕು. ಹದಿಮೂರನೆಯ ಸಾಲು ಪೂರ್ತಿಯಾಗಿ ಕಪ್ಪಾಗಿರಬೇಕು.





ಸಿತವರ್ಣಂ ರಾಮನಾಮ ಮುದ್ರಾಯಾಂ ಹಿ ನಿರೀಕ್ಷಯೇತ್ ।
ಏವಂ ರಾಮಮುದ್ರಿಕಾಯಾಃ ಸ್ವರೂಪಂ ತೇ ಮಯೋದಿತಂ ॥ ೧೮ ॥

ಏವಂ ಮುದ್ರಾಂಕಿತಾಂ ರಾಮಶ್ಶಿಲಾಂ ವಿಪ್ರೇಭ್ಯ ಆದರಾತ್ ।
ದದೌ ಸಾದ್ಯಾಪಿ ಭೂಮ್ಯಾಂ ಹಿ ರಾಮನಾಥ ಪುರೇಽಸ್ತಿ ಹಿ ॥ ೧೯ ॥

॥ ವಿಷ್ಣುದಾಸ ಉವಾಚ ॥
ಕಿಮರ್ಥಂ ಭೂಸುರೇಭ್ಯಶ್ಚ ರಾಘವೇಣ ಸಮರ್ಪಿತಾ ।
ರಾಮನಾಥ ಪುರೇ ಪೂರ್ವಂ ಸ್ವೀಯಮುದ್ರಾಂಕಿತಾ ಶಿಲಾ ॥ ೨೦ ॥

ತತ್ಸರ್ವಂ ವಿಸ್ತರೇಣೈವ ಕಥಯಸ್ವಾದ್ಯ ಮಾಂ ಗುರೋ ।
ಆಶ್ಚರ್ಯಂ ಚ ತ್ವಯಾ ಪ್ರೋಕ್ತಂ ಶ್ರೋತುಮಿಚ್ಛಾಮಿ ತ್ವನ್ಮುಖಾತ್ ॥ ೨೧ ॥

॥ ರಾಮದಾಸ ಉವಾಚ ॥
ಏಕದಾ ರಾಘವಂ ಶ್ರುತ್ವಾ ವಿಪ್ರವಾಂಛಿತದಾಯಿನಂ ।
ಹರ್ಷಾದ್ಬ್ರಹ್ಮಪುರಸ್ಥಾಸ್ತೇ ದಾಕ್ಷಿಣಾತ್ಯಾ ದ್ವಿಜೋತ್ತಮಾಃ ॥ ೨೨ ॥

---

೧೮. ಅನಂತರ ಬಿಟ್ಟಿರುವ ಬಿಳಿಯ ಮನೆಗಳನ್ನು ನೋಡಿದರೆ ರಾಜಾರಾಮ ಎಂಬದಾಗಿ ರಾಮನಾಮವು ಕಂಡುಬರುವುದು. ಇದೇ ರಾಮ ಮುದ್ರಿಕೆಯ ಸ್ವರೂಪವು. ಇದನ್ನು ನಿನಗೆ ಹೇಳಿದ್ದೇನೆ.

೧೯. ರಾಮನು ಈ ರೀತಿಯಾಗಿ ಕಲ್ಲಿನಲ್ಲಿ ಮುದ್ರಿಸಿ ಬಹು ವಿಶ್ವಾಸದಿಂದ ಬ್ರಾಹ್ಮಣರಿಗೆ ಕೊಟ್ಟನು. ಅದು ಈಗಲೂ ಭೂಲೋಕದಲ್ಲಿ ಇರುವುದು.

೨೦-೨೧. ವಿಷ್ಣುದಾಸನು ಹೇಳಿದನು :—ಎಲೈ ಗುರುವೇ ! ರಾಮನು ತನ್ನ ಮುದ್ರಾಂಕಿತವಾದ ಶಿಲೆಯನ್ನು ರಾಮನಾಥಪುರದಲ್ಲಿ ಬ್ರಾಹ್ಮಣರಿಗೆ ಕೊಡಲು ಕಾರಣವೇನು ? ಅದೆಲ್ಲವನ್ನೂಕೂಡ ಈಗ ನನಗೆ ವಿಸ್ತಾರವಾಗಿ ಹೇಳು. ನೀನು ಬಹು ಆಶ್ಚರ್ಯಕರವಾದ ವಿಷಯವನ್ನು ಹೇಳಿದೆ. ಅದನ್ನು ವಿಸ್ತಾರವಾಗಿ ನಿನ್ನ ಬಾಯಿಂದಲೇ ಕೇಳಬೇಕು.

೨೨-೨೩. ರಾಮದಾಸನು ಹೇಳಿದನು :—ರಾಮನು ಬ್ರಾಹ್ಮಣರಿಗೆ ಕೇಳಿದುದನ್ನೆಲ್ಲಾ ಕೊಡುವನು ಎಂಬುದು ಲೋಕಪ್ರಸಿದ್ಧವಾಯಿತು ಇದನ್ನು ದಕ್ಷಿಣ ದೇಶದ ಬ್ರಹ್ಮಪುರಿಯಲ್ಲಿರುವ ಬಾಹ್ಮಣರು ಕೇಳಿದರು. ಆಗ

ಯಯುಯುಸ್ತೇ ರಾಘವಂ ದ್ರಷ್ಟುಮಯೋಧ್ಯಾಂ ತಾಂ ಸಹಸ್ರಶಃ ।
ಏತಸ್ಮಿನ್ನಂತರೇ ರಾಮಸ್ತ್ವಯೋಧ್ಯಾಯಾಂ ಮುದಾನ್ವಿತಃ ॥ ೨೩ ॥

ಗಂಧರ್ವ ರಾಜಗೇಹೇ ಸ ಭೋಜನಂ ಕರ್ತುಮುದ್ಯತಃ ।
ಸ್ನಾತ್ವಾ ತತ್ರ ಸುಹೃದ್ಗೇಹೇ ಸೀತಯಾ ಬಂಧುಭಿಸ್ಸುಖಂ ॥ ೨೪ ॥

ಪುತ್ರಾಭ್ಯಾಂ ಭೋಜನಂ ಕರ್ತುಮಾಸನೇ ಸಂಸ್ಥಿತೋಭವತ್ ।
ಗಂಧರ್ವರಾಜಶ್ಶ್ರೀರಾಮಂ ಪೂಜಯಾಮಾಸ ಸಾದರಂ ॥ ೨೫ ॥

ಪರಿವೇಷಿತಾನಿ ಪಾತ್ರಾಣಿ ಸುಹೃತ್ಸ್ತ್ರೀಭಿಸ್ತದಾ ಜವಾತ್ ।
ದಿವ್ಯಾನ್ನೈರ್ಮಧುರೈಶ್ಚಿತ್ರೈಃ ಪಕ್ವಾನ್ನೈರ್ವಿವಿಧೈರಪಿ ॥ ೨೬ ॥

ಏತಸ್ಮಿನ್ನಂತರೇ ವಿಪ್ರಾ ರಾಮನಾಥ ಪುರಸ್ಥಿತಾಃ ।
ಸುಹೃದ್ಗೇಹೇ ಗತಂ ರಾಮಂ ಶ್ರುತ್ವಾ ತತ್ರ ಯಯುರ್ಮುದಾ ॥ ೨೭ ॥

ಅವರೆಲ್ಲರೂ ಸಾವಿರ ಗಟ್ಟಲೆಯಲ್ಲಿ ಗುಂಪುಗುಂಪಾಗಿ ರಾಮನನ್ನು ನೋಡಲು ಅಯೋಧ್ಯೆಗೆ ಬಂದರು. ಈ ಸಮಯದಲ್ಲಿ ರಾಮನು ಅಯೋಧ್ಯಾನಗರದಲ್ಲಿ ಗಂಧರ್ವರಾಜನ ಮನೆಗೆ ಊಟಕ್ಕೆ ಹೋಗಿದ್ದನು.

೨೪-೨೫. ಸ್ನೇಹಿತನಾದ ಗಂಧರ್ವರಾಜನ ಮನೆಯಲ್ಲಿ ಸ್ನಾನಮಾಡಿ ಸೀತೆ ತಮ್ಮಂದಿರು ಮಕ್ಕಳು ಇವರೊಡನೆ ಭೋಜನಕ್ಕೋಸ್ಕರ ಆಸನದ ಮೇಲೆ ಕುಳಿತಿದ್ದನು. ಆ ಗಂಧರ್ವರಾಜನು ಶ್ರೀ ರಾಮನನ್ನು ಆದರದಿಂದ ಗೌರವಿಸಿ ಪೂಜಿಸಿದನು.

೨೬. ಆ ರಾಮನ ಸ್ನೇಹಿತನಾದ ಗಂಧರ್ವರಾಜನ ಕಡೆಯ ಹೆಂಗಸರು ಬೇಗಬೇಗನೆ ಪಾತ್ರೆಗಳಿಗೆ ಪದಾರ್ಥಗಳನ್ನು ಬಡಿಸಿದರು. ದಿವ್ಯಾನ್ನಗಳನ್ನೂ ಮಧುರಾನ್ನಗಳನ್ನೂ ಚಿತ್ರಾನ್ನಗಳನ್ನೂ ವಿಧವಿಧವಾದ ಪಕ್ವಾನ್ನಗಳನ್ನೂ ಬಡಿಸಿದರು.

೨೭. ಆ ರಾಮನಾಥಪುರದ ಬ್ರಾಹ್ಮಣರು ಶ್ರೀ ರಾಮನು ಸ್ನೇಹಿತನ ಮನೆಗೆ ಹೋಗಿರುವನೆಂದು ಕೇಳಿ ಅವರೆಲ್ಲರೂ ಅಲ್ಲಿಗೆ ಬಂದರು.

ಗಂಧರ್ವರಾಜದ್ವಾರಸ್ಥೈರ್ದೂತೈಃ ಶ್ರೀ ರಾಘವಾಯ ಹಿ ।
ಭೂಸುರಾಣಾಮಾಗಮನಂ ತದಾ ಶೀಘ್ರಂ ನಿವೇದಿತಂ ॥ ೨೮ ॥

ತದ್ದೂತವಚನಂ ಶ್ರುತ್ವಾ ರಾಘವಶ್ಚಾತಿ ಸಂಭ್ರಮಾತ್ ।
ಪ್ರತ್ಯುದ್ಗಮ್ಯ ಸ್ವಯಂ ವಿಪ್ರಾನ್ನನಾಮ ಶಿರಸಾ ಪ್ರಭುಃ ॥ ೨೯ ॥

ಗಧರ್ವರಾಜಗೇಹೇ ತಾನ್ನೀತ್ವಾ ದತ್ವಾಸನಾನಿ ಹಿ ।
ಸ್ನಾತುಮಾಜ್ಞಾಪಯತ್ಸರ್ವಾನ್ ಭೋಜನಾರ್ಥಂ ರಘೂತ್ತಮಃ ॥ ೩೦ ॥

ತದಾ ಸಮ್ಮಂತ್ರಯಾಮಾಸುರ್ವಿಪ್ರಾಸ್ಸರ್ವೇ ಪರಸ್ಪರಂ ।
ಭೋಜನಾತ್ಪೂರ್ವಮೇವೈಸಂ ಯಾಚನೀಯಂ ಸ್ವವಾಂಛಿತಂ ॥ ೩೧ ॥

ಕೇಚಿದೂಚುಸ್ತದಾ ವಿಪ್ರಾ ನಿರ್ಬಂಧಂ ಚ ರಘೂತ್ತಮೇ ।
ನೋಪೇಕ್ಷಾಸ್ತಿ ಸದೈವಾಯಂ ದದಾತಿ ದ್ವಿಜವಾಂಛಿತಂ ॥ ೩೨ ॥

---

೨೮. ಆಗ ಆ ಗಂಧರ್ವರಾಜನ ಬಾಗಲು ಕಾಯುವ ದೂತರು ಬೇಗನೆ ಬಂದು ಶ್ರೀ ರಾಮನಿಗೆ ಬ್ರಾಹ್ಮಣರು ಬಂದಿರುವುದನ್ನು ಶೀಘ್ರವಾಗಿ ಹೇಳಿದರು.

೨೯. ದೂತರು ಹೇಳಿದ ಮಾತನ್ನು ಕೇಳಿ ರಾಮನು ಬಹು ಅವಸರದಿಂದ ಹೋಗಿ ಆ ಬ್ರಾಹ್ಮಣರನ್ನು ಎದುರುಗೊಂಡು ತಲೆ ಬಗ್ಗಿಸಿ ನಮಸ್ಕರಿಸಿದನು.

೩೦. ಮತ್ತು ಆ ಗಂಧರ್ವರಾಜನ ಮನೆಗೆ ಕರೆದುಕೊಂಡು ಹೋಗಿ ಆಸನಗಳನ್ನು ಕೊಟ್ಟು ಭೋಜನವನ್ನು ಮಾಡುವುದಕ್ಕೋಸ್ಕರ ಸ್ನಾನ ಮಾಡುವಂತೆ ಹೇಳಿದನು.

೩೧. ಆಗ ಆ ಬ್ರಾಹ್ಮಣರೆಲ್ಲರೂ ಸೇರಿ ನಾವು ಈ ರಾಮನನ್ನು ಊಟಕ್ಕೆ ಮೊದಲೇ ಬೇಕಾದುದನ್ನು ಯಾಚಿಸಬೇಕು. ಎಂದು ಒಬ್ಬರಿಗೊಬ್ಬರು ಮಾತನಾಡಿಕೊಂಡರು.

೩೨. ಅವರಲ್ಲಿ ಕೆಲವರು ಇದು ರಾಮನನ್ನು ನಿರ್ಬಂಧ ಪಡಿಸಿದಂತಾಗುವುದು. ರಾಮನು ಯಾರನ್ನೂ ಉಪೇಕ್ಷಿಸುವುದಿಲ್ಲ. ಈತನು ಯಾವಾಗ ಬೇಕಾದರೂ ದಾನ ಮಾಡತಕ್ಕವನೇ. ಎಂದರು.

ವ್ರತಮೇವಾಸ್ಯ ರಾಮಸ್ಯ ದ್ವಿಜವಾಂಛಿತಕಪೂರಣಂ ।
ಏವಂ ತಾನ್ಮಂತ್ರ್ಯಮಾಣಾಂಶ್ಚ ರಾಮೋ ದೃಷ್ಟ್ವಾಬ್ರವೀದ್ವಿಜಃ ॥ ೩೩ ॥

ಜ್ಞಾತಂ ಮಯಾಭಿಲಷಿತಂ ಯುಷ್ಮಾಕಂ ಮುನಿಪುಂಗವಾಃ ।
ರಾಜ್ಯೇಚ್ಛಯಾ ಸಮಾಯಾತಾಃ ಕಿಮರ್ಥಂ ಶ್ರಮಿತಾ ದ್ವಿಜಾಃ ॥ ೩೪ ॥

ಕಥಂ ನ ಪ್ರೇಷಿತಶ್ಶಿಷ್ಯಸ್ತದ್ವಾಕ್ಯೇನೈವ ವೈ ಮಯಾ ।
ವಾಂಛಾಭವಿಷ್ಯದ್ಯುಷ್ಮಾಕಂ ಪೂರಿತಾ ಕ್ಷಣಮಾತ್ರತಃ ॥ ೩೫ ॥

ಏವಂ ತಾನ್ಬ್ರಾಹ್ಮಣಾನುಕ್ತ್ವಾ ಲಕ್ಷ್ಮಣಂ ಪ್ರಾಹ ರಾಘವಃ ।
ಮಯಾ ಬ್ರಹ್ಮಪುರಸ್ಯಾದ್ಯ ವಿಪ್ರೇಭ್ಯೋ ರಾಜ್ಯಮರ್ಪಿತಂ ॥ ೩೬ ॥

ಶಿಲಾಯಾಂ ಲಿಖ ಮನ್ನಾಮ ದಾನಂ ದತ್ತಮಿದಂ ತ್ವಿತಿ ।
ತಥೇತಿ ರಾಮವಾಕ್ಯೇನ ಲಕ್ಷ್ಮಣಶ್ಚಾತಿಸಂಭ್ರಮಾತ್ ॥ ೩೭ ॥

---

೩೩. ಬ್ರಾಹ್ಮಣರಿಗೆ ಬೇಕಾದುದುದನ್ನು ಕೊಡುವುದೇ ಇವನಿಗೆ ವ್ರತವು. ಎಂದು ಮತ್ತೆ ಕೆಲವರು ಹೇಳುತ್ತಿದ್ದರು. ಈ ರೀತಿಯಾಗಿ ಇವರೆಲ್ಲರೂ ಮಾತನಾಡಿಕೊಳ್ಳುತ್ತಿದ್ದುದನ್ನು ರಾಮನು ಕೇಳಿದನು.

೩೪-೩೫. ಎಲೈ ಮುನಿಪುಂಗವರಿರಾ! ನಿಮ್ಮ ಮನಸ್ಸಿನಲ್ಲಿರುವುದು ನನಗೆ ತಿಳಿಯಿತು. ನೀವು ರಾಜ್ಯಾಪೇಕ್ಷೆಯಿಂದ ಇಲ್ಲಿಗೆ ಬಂದಿದ್ದೀರಿ. ನೀವೆಲ್ಲರೂ ಇಷ್ಟು ಶ್ರಮವನ್ನೇಕೆ ತೆಗೆದುಕೊಂಡಿದ್ದೀರಿ? ನೀವೆಲ್ಲರೂ ಒಬ್ಬ ಶಿಷ್ಯನನ್ನು ನನ್ನ ಬಳಿಗೆ ಕಳುಹಿಸಬೇಕಾಗಿತ್ತಲ್ಲ. ಹಾಗೇಕೆ ಮಾಡದೆ ಹೋದಿರಿ? ಆ ಶಿಷ್ಯನ ಮಾತಿನಿಂದಲೇ ನಿಮ್ಮ ಇಚ್ಛೆಯನ್ನು ಕ್ಷಣಮಾತ್ರದಲ್ಲಿ ಪೂರ್ಣಮಾಡುತ್ತಿದ್ದೆನು.

೩೬. ಎಂಬುದಾಗಿ ಆ ಬಾಹ್ಮಣರಿಗೆ ಹೇಳಿ ರಾಮನು ಲಕ್ಷ್ಮಣನನ್ನು ಕರೆದು ಇಂತೆಂದನು ಎಲೈ ಲಕ್ಷ್ಮಣನೆ! ನಾನು ಬ್ರಹ್ಮಪುರಿಯ ರಾಜ್ಯವನ್ನು ಈ ಬ್ರಾಹ್ಮಣರಿಗೆ ಕೊಟ್ಟದ್ದೇನೆ.

೩೭-೩೮. ನಾನು ಅವರಿಗೆ ಬ್ರಹ್ಮಪುರಿ ರಾಜ್ಯವನ್ನು ಕೊಟ್ಟದ್ದೇನೆಂದು ಕಲ್ಲಿನಲ್ಲಿ ಕೆತ್ತಿಸು. ಎನ್ನಲು ಲಕ್ಷ್ಮಣನು ಹಾಗೆಯೇ ಆಗಲೆಂದು ಬಹು ಸಡಗರದಿಂದ

ದೃಷತ್ಕಾರಾನ್ಸಮಾಹೂಯ ಶಿಲಾಮಾನೀಯತಾಮಿತಿ ।
ಶೀಘ್ರಮಾಜ್ಞಾಪಯಾಮಾಸ ತೇ ಜಗ್ಮುರ್ವೇಗವತ್ತರಾಃ ॥ ೩೮ ॥

ಏತಸ್ಮಿನ್ನಂತರೇ ವಿಪ್ರಾಃ ಪ್ರೋಚುಸ್ತೇ ರಾಘವಂ ಮುದಾ ।
ಕೃತ್ವಾಶನಂ ಲೇಖನೀಯಾ ಶಿಲಾ ಪಶ್ಚಾದ್ರಘೂತ್ತಮ ॥ ೩೯ ॥

ಕಿಮರ್ಥಂ ಕ್ರಿಯತೇ ರಾಮ ತ್ವರಾ ಲೇಖನಕರ್ಮಣಿ ।
ಪರಿವೇಷಿತಾನಿ ಪಾತ್ರಾಣಿ ವಯಂ ಚಾಪಿ ಕ್ಷುಧಾರ್ದಿತಾಃ ॥ ೪೦ ॥

ತತ್ತೇಷಾಂ ವಚನಂ ಶ್ರುತ್ವಾ ಫಲಭಾರಾನ್ವಿಚಿತ್ರಿತಾನ್ ।
ಪುರತಃ ಸ್ಥಾಪಯಾಮಾಸ ವಿಪ್ರಾಣಾಂ ಪರಮಾದರಾತ್ ॥ ೪೧ ॥

ಉವಾಚ ಮಧುರಂ ವಾಕ್ಯಂ ರಾಘವಃ ಸ್ಮಿತಪೂರ್ವಕಂ ।
ಫಲಾನೀಮಾನಿ ಭೋ ವಿಪ್ರಾ ಭಕ್ಷಯಧ್ವಂ ಯಥಾಸುಖಂ ॥ ೪೨ ॥

ಲೇಖಯಿತ್ವಾ ಶಿಲಾಯಾಂ ಹಿ ಯದಾ ಮುದ್ರಾಂ ಕರೋಮ್ಯಹಂ ।
ತದಾಶನಾದಿಕಂ ಕರ್ಮ ಸರ್ವಮನ್ಯತ್ಕರೋಮ್ಯಹಂ ॥ ೪೩ ॥

ಕಲ್ಲು ಕೆಲಸದವರನ್ನು ಕರೆಸಿ ಕಲ್ಲನ್ನು ತರಹೇಳಿ ಅವರಿಗೆ ಶಾಸನವನ್ನು ಬರೆಯುವಂತೆ ಅಪ್ಪಣೆ ಮಾಡಲು ಅವರು ಬೇಗನೆ ಹೋದರು.

೩೯. ಆಗ ಬ್ರಾಹ್ಮಣರು ಎಲೈ ರಾಮನೆ ನೀನು ಮೊದಲು ಊಟಮಾಡು. ಊಟ ಮಾಡಿದಮೇಲೆ ಶಿಲಾ ಶಾಸನವನ್ನು ಬರೆಸಬಹುದು.

೪೦. ಏತಕ್ಕೋಸ್ಕರ ಶಾಸನವನ್ನು ಬರೆಸಲು ಇಷ್ಟು ಅವಸರವನ್ನು ಪಡುತ್ತಿದ್ದೀಯೆ ! ಆಮೇಲೆ ಬರಸಿದರಾಯಿತು. ಪಾತ್ರೆಗಳಿಗೆ ಎಲ್ಲವನ್ನೂ ಬಡಿಸಿದೆ. ನಮಗೂ ಹೊಟ್ಟೆಯು ಹಸಿಯುತ್ತಿರುವುದು. ಎಂದರು.

೪೧–೪೩. ಆ ಬ್ರಾಹ್ಮಣರು ಹಾಗೆ ಹೇಳಿದುದನ್ನು ಕೇಳಿ ಅವರ ಮುಂದೆ ಅನೇಕವಾದ ಫಲಗಳನ್ನು ವಿಶ್ವಾಸದಿಂದ ತಂದಿಟ್ಟನು. ಅನಂತರ ಮಧುವಾದ ಮಾತಿನಿಂದ ರಾಮನು ನಗುತ್ತಾ ಇಂತೆಂದು ಹೇಳಿದನು. ಎಲೈ ವಿಪ್ರರಿರಾ ! ಈ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಿರಿ. ನಾನು ಶಿಲಾಶಾಸನವನ್ನು ಬರೆಸಿ ಮುದ್ರಿಸಿದ ಮೇಲೆ ಊಟ ಮುಂತಾದ ಬೇರೆ ಕೆಲಸಗಳನ್ನು ಮಾಡುತ್ತೇನೆ.

ಕ್ಷಣಂ ವಿತ್ತಂ ಕ್ಷಣಂ ಚಿತ್ತಂ ಕ್ಷಣಿಕಂ ಚ ಸ್ವಜೀವಿತಂ ।
ಯಮೋಽತಿನಿರ್ಘೃಣಸ್ಸೋಽಸ್ತಿ ಧರ್ಮಂ ಶೀಘ್ರಮತಶ್ಚರೇತ್ ॥ ೪೪ ॥

ಶತಂ ವಿಹಾಯ ಭೋಕ್ತವ್ಯಂ ಸಹಸ್ರಂ ಸ್ನಾನಮಾಚರೇತ್ ।
ಕ್ಷಣಂ ತ್ಯಕ್ತ್ವಾ ತು ದಾತವ್ಯಂ ಕೋಟಿಂ ತ್ಯಕ್ತ್ವಾ ಶಿವಂ ಭಜೇತ್ ॥

ಕೋಟಿವಿಘ್ನಾನಿ ಗೀತಾಯಾಂ ದಶಕೋಟೀನಿ ಜಾಹ್ನವೀಂ ।
ಶತಕೋಟೀನಿ ಜಾಯಂತೇ ದಾನೇ ವಿಘ್ನಾನಿ ಭೂಸುರಾಃ ॥ ೪೬ ॥

ಅತಃ ಕಾರ್ಯಾ ತ್ವರಾ ದಾನೇ ಸರ್ವದಾ ತು ನರೋತ್ತಮೈಃ ।
ನಿದ್ರಾಯಾಃ ಪೂರ್ವಕಾಲೇ ತು ನಿದ್ರಾಯಾಃ ಪರತಸ್ತಥಾ ॥ ೪೭ ॥

---

೪೪. ಹಣವೂ ಕ್ಷಣಿಕವಾದುದು. ಚಿತ್ತವೂ ಕ್ಷಣಿಕವಾದುದು. ನಮ್ಮ ಜೀವಿತವೂ ಕೂಡ ಕ್ಷಣಿಕವಾದುದು. ಯಮನು ದಯಾ ಶೂನ್ಯನಾಗಿ ಕಾದುಕೊಂಡೇ ಇರುವನು. ಆದ್ದರಿಂದ ಧರ್ಮವನ್ನು ಬೇಗನೆ ಮಾಡಬೇಕು.

೪೫. ನೂರು ಕೆಲಸಗಳಿದ್ದರೂ ಅವನ್ನು ಬಿಟ್ಟು ಊಟಮಾಡಬೇಕು. ಸಾವಿರ ಕೆಲಸಗಳಿದ್ದರೂ ಅವನ್ನು ಬಿಟ್ಟು ಸ್ನಾನಮಾಡಬೇಕು, ಲಕ್ಷ ಕೆಲಸವಿದ್ದರೂ ಅದನ್ನು ಬಿಟ್ಟು ದಾನ ಮಾಡಬೇಕು. ಕೋಟಿ ಕೆಲಸವಿದ್ದರೂ ಬಿಟ್ಟು ಶಿವನನ್ನು ಭಜಿಸಬೇಕು.

೪೬. ಎಲೈ ಭೂಸುರರಿರಾ! ಲೋಕದಲ್ಲಿ ಒಳ್ಳೆಯ ಪುಣ್ಯ ಕಥೆಗಳನ್ನು ಗೀತೆಯನ್ನು ಕೇಳಲು ಹೊರಟರೆ ಕೋಟಿ ವಿಘ್ನಗಳು ಬರುತ್ತವೆ. ದಾನಮಾಡಲು ಹೊರಟರೆ ನೂರು ಕೋಟಿ ವಿಘ್ನಗಳು ಬರುತ್ತವೆ.

೪೭–೪೮. ಆದ್ದರಿಂದ ದಾನಮಾಡುವವರಲ್ಲಿ ಯಾವಾಗಲೂ ಬಹುವಾಗಿ ಅವರಸರ ಪಡಬೇಕು. ಮಲಗುವುದಕ್ಕೆಮೊದಲು ಇವ ಬುದ್ಧಿಗೂ

ಭೋಜನಾತ್ಪೂರ್ವಕಾಲೇ ತು ಭೋಜನಾತ್ಪರತಸ್ತಥಾ ।
ಕ್ಷಣೇ ಕ್ಷಣೇ ಮತಿರ್ಭಿನ್ನಾ ಜಾಯತೇತ್ರ ದ್ವಿಜೋತ್ತಮಾಃ ॥ ೪೮ ॥

ತಸ್ಮಾತ್ತ್ವರ್ಯಾ ತ್ವರಾ ದಾನೇ ಮತಿರ್ಯಾ ಪ್ರಥಮೇ ಕ್ಷಣೇ ।
ಕೃತಾ ಕ್ಷಣೇನಾಪರೇ ಸಾಸ್ತಿ ಕ್ಕೇ ತದೇವ ಮತಂ ಮಮ ॥ ೪೯ ॥

ಏತಸ್ಮಿನ್ನಂತರೇ ತತ್ರ ದೃಷತ್ಕಾರೈಶ್ಶಿಲಾ ವರಾ ।
ಸಮಾನೀತಾ ಗಂಡಕೀಜಾ ನವಹಸ್ತಾ ಸಮಂತತಃ ॥ ೫೦ ॥

ತಸ್ಯಾಂ ತೇ ಲೇಖಯಾಮಾಸುಃ ದೃಷತ್ಕಾರಾಃ ಸ್ಫುಟಾಕ್ಷರೈಃ ।
ಸೂರ್ಯವಂಶೋದ್ಭವೇನಾಥ ಸಪ್ತದ್ವೀಪೇಶ್ವರೇಣ ಹಿ ॥ ೫೧ ॥

ತ್ರೇತಾಯಾಂ ದಾಶರಥಿನಾ ರಾಮರಾಜ್ಞಾ ದ್ವಿಜೋತ್ತಮಾಃ ।
ಮಯಾ ಬ್ರಹ್ಮಪುರಸ್ಯೈವ ರಾಜ್ಯದಾನಂ ಕೃತಂ ಮುದಾ ॥ ೫೨ ॥

ನಿದ್ದೆಯಿಂದ ಎದ್ದ ಮೇಲೆ ಇರುವ ಬುದ್ಧಿಗೂ ವ್ಯತ್ಯಾಸವಿರುವುದು. ಅಂತೆಯೇ ಊಟಕ್ಕೆ ಮೊದಲಿರುವ ಬುದ್ಧಿಯೇ ಬೇರೆ. ಊಟವಾದ ಮೇಲಿರುವ ಬುದ್ಧಿಯೇ ಬೇರೆ.

೪೯. ಆದ್ದರಿಂದ ದಾನಮಾಡುವುದರಲ್ಲಿ ಬಹುವಾದ ಅವಸರವನ್ನು ಪಡುತ್ತಿರಬೇಕು. ಮೊದಲನೆಯ ಕ್ಷಣದಲ್ಲಿರುವ ಬುದ್ಧಿಯು ಎರಡನೆಯ ಕ್ಷಣದಲ್ಲಿರುವುದಿಲ್ಲ ಎಂಬುದಾಗಿಯೇ ನನ್ನ ಸಿದ್ಧಾಂತವಾದ ಮನಸ್ಸು.

೫೦. ಇಷ್ಟರ ವೇಳೆಗೆ ಕಲ್ಲು ತರುವವರು ಕಲ್ಲನ್ನು ತಂದರು. ಅದು ಗಂಡಕಿಯ ಕಲ್ಲಾಗಿದ್ದಿತು. ಒಂಭತ್ತು ಮೊಳ ಅಗಲವೂ ಇದ್ದಿತು. ನಾಲ್ಕು ಮೂಲೆಯೂ ಒಂದೇ ಸಮವಾಗಿದ್ದಿತು.

೫೧-೫೨. ಆ ಕಲ್ಲಿನಲ್ಲಿ ಕಲ್ಲು ಕೆಲಸದವರು ಸ್ಫುಟವಾದ ಅಕ್ಷರಗಳನ್ನು ಕೆತ್ತಿದರು. ಅದೇಂತೆಂದರೆ ಸೂರ್ಯವಂಶದಲ್ಲಿ ಹುಟ್ಟಿದವನೂ ಸಪ್ತದ್ವೀಪಗಳಿಗೆ ಒಡೆಯನೂ ದಶರಥನ ಮಗನೂ ಆದ ರಾಮರಾಜನು ತ್ರೇತಾಯುಗದಲ್ಲಿ ಬ್ರಹ್ಮಪುರಿಯಲ್ಲಿರುವ ಬ್ರಾಹ್ಮಣರಿಗೆ ಬ್ರಹ್ಮಪುರಿಯ ರಾಜ್ಯವನ್ನು ದಾನವನ್ನು ಮಾಡಿರುವನು.

ಯಾವತ್ತಪತಿ ಖೇಭಾನುರ್ಯಾವದಸ್ಯತ್ರ ಮೇ ಕಥಾ ।
ಯಾವತ್ಪ್ರವರ್ತತೇ ವಾಯುಸ್ತಾವದ್ದಾನಂ ಮಮಾಸ್ತ್ವಿದಂ ॥ ೫೩ ॥

ಸಾಮಾನ್ಯೋಽಯಂ ಧರ್ಮಸೇತುರ್ದ್ವಿಜಾನಾಂ ।
ಕಾಲೇ ಕಾಲೇ ಪಾಲನೀಯೋ ಭವದ್ಭಿಃ ॥
ಸರ್ವಾನೇತಾನ್ಭಾವಿನಃ ಪಾರ್ಥಿವೇಂದ್ರಾ೯ ।
ಭೂಯೋ ಭೂಯೋ ಯಾಚತೇ ರಾಮಚಂದ್ರಃ ॥ ೫೪ ॥

ಏವಂ ವಿಲಿಖ್ಯ ಶ್ರೀರಾಮಃ ಶಿಲಾಯಾಂ ನಿಜಮುದ್ರಿಕಾಂ ।
ರಾಮನಾಮಾಂಕಿತಾಂ ವಾಯುಪುತ್ರೇಣಾಸ್ಪರ್ಶಯತ್ತದಾ ॥ ೫೫ ॥

ಆಂಜನೇಯಸ್ಯ ಭಾರೇಣ ಶಿಲಾ ಜಾತಾ ತದಂಕಿತಾ ।
ರಾಜಾರಾಮೇತಿ ತಸ್ಯಾಂತೇ ದದೃಶುಶ್ಚ ಸ್ಫುಟಾಕ್ಷರಂ ॥ ೫೬ ॥

---

೫೩. ಸೂರ್ಯನು ಆಕಾಶದಲ್ಲಿ ಎಲ್ಲಿಯವರೆಗೆ ಬೆಳಗುತ್ತಿರುವನೋ, ಲೋಕದಲ್ಲಿ ಎಲ್ಲಿಯವರೆಗೂ ನನ್ನ ಕಥೆಯು ಪ್ರಚಾರದಲ್ಲಿರುವುದೋ ವಾಯುವು ಎಲ್ಲಿಯವರೆಗೂ ಪ್ರಪಂಚದಲ್ಲಿ ಬೀಸುತ್ತಿರುವನೋ ಅಲ್ಲಿಯವರೆಗೂ ನಾನು ಮಾಡಿದ ಈ ದಾನವು ಶಾಶ್ವತವಾಗಿರಲಿ.

೫೪. ಆಯಾ ಕಾಲದಲ್ಲಿ ಬರತಕ್ಕ ರಾಜರಿರಾ! ನೀವು ಈ ನನ್ನ ಧರ್ಮವನ್ನು ಗೌರವಿಸಿ ಕಾಪಾಡಿರಿ. ಕಷ್ಟಕಾಲ ಬಂದಾಗ ಕಾಪಾಡಿ ಉಳಿಸಿಕೊಡಿರಿ. ಮುಂದೆ ಬರತಕ್ಕ ಆಯಾ ಕಾಲದ ರಾಜರಾದ ನಿಮ್ಮೆಲ್ಲರನ್ನೂ ಪದೇ ಪದೇ ರಾಮಚಂದ್ರನಾದ ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ.

೫೫. ರಾಮನು ಈ ರೀತಿಯಾಗಿ ಕಲ್ಲಿನಲ್ಲಿ ತನ್ನ ಮುದ್ರಿಕೆಯನ್ನು ಕೆತ್ತಿಸಿ ಹನುಮಂತನ ಕೈಯ್ಯಿಂದ ತನ್ನ ನಿಜವಾದ ಮುದ್ರೆಯನ್ನು ಅದರ ಮೇಲೆ ಒತ್ತಿಸಿದನು.

೫೬. ಆಂಜನೇಯನು ಆ ಕಲ್ಲಿನ ಮೇಲೆ ಅದನ್ನು ಒತ್ತಲು ಅವನ ಭಾರದಿಂದ ಆ ಗುರುತು ಚೆನ್ನಾಗಿ ಬಿದ್ದಿತು. ರಾಜಾ ರಾಮ ಎಂಬ ಅಕ್ಷರಗಳು ಆ ಕಲ್ಲಿನ ಮೇಲೆ ಕಂಡು ಬಂದುವು.

ರಾಮನಾಥೇನ ಯದ್ದತ್ತಂ ಪುರದಾನಂ ದ್ವಿಜೋತ್ತಮಾನ್ ।
ರಾಮನಾಥಪುರಂ ಚೇತಿ ತದಾರಭ್ಯ ಪ್ರಥಾಂ ಗತಂ ॥ ೫೭ ॥

ತಸ್ಯ ಬ್ರಹ್ಮಪುರಂ ನಾಮ ವೃದ್ಧೈಃ ಪ್ರಾಥಮಿಕಂ ಸ್ಮೃತಂ ।
ರಾಮನಾಥಪುರಂ ಚೇತಿ ತಸ್ಯೈವಾಖ್ಯಾಪರಾ ಸ್ಮೃತಾ ॥ ೫೮ ॥

ಶಿಲಾಭಾರಮಿತಂ ದ್ರವ್ಯಂ ದಕ್ಷಿಣಾರ್ಥಂ ನಿಧಾಯ ಸಃ ।
ತಾಂ ಶಿಲಾಂ ಪೂಜ್ಯ ವಿಪ್ರೇಭ್ಯಃ ಶ್ರೀ ರಾಮಸ್ಸೀತಯಾ ದದೌ ॥ ೫೯ ॥

ತತೋಽಬ್ರವೀದ್ವಾಯುಪುತ್ರಂ ಭೋಜನಾನಂತರಂ ತ್ವಯಾ ।
ವಿಮಾನೇನ ಶಿಲಾ ನೇಯಾ ರಾಮನಾಥಪುರಂ ದ್ವಿಜೈಃ ॥ ೬೦ ॥

ಕಂಬುಕಂಠೇ ತತಃ ಪತ್ರಂ ಲೇಖಯಾಮಾಸ ರಾಘವಃ ।
ಬ್ರಾಹ್ಮಣಾನಾಂ ತ್ವಯಾ ಕಾರ್ಯಂ ಸಾಹಾಯ್ಯಂ ಸರ್ವದೇತಿ ವೈ ॥ ೬೧ ॥

---

೫೭. ರಾಮನಾಥನು (ರಾಮರಾಜನು) ಬ್ರಾಹ್ಮಣರಿಗೆ ಪುರದಾನವನ್ನು ಕೊಟ್ಟದರಿಂದ ಆ ಬ್ರಹ್ಮಪುರಿಗೆ ರಾಮನಾಥಪುರವೆಂದು ಹೆಸರು ಬಂದಿತು. ಆಗಿನಿಂದ ಅದೇ ಹೆಸರು ಅದಕ್ಕೆ ಖ್ಯಾತಿಯಾಗಿ ಬಂದಿರುವುದು.

೫೮. ಜನರು ಮೊದಲು ಅದಕ್ಕೆ ಬ್ರಹ್ಮಪುರವೆಂದು ಹೆಸರನ್ನಿಟ್ಟಿದ್ದರು. ಅನಂತರ ಅದಕ್ಕೆ ರಾಮನಾಥಪುರವೆಂಬ ಹೆಸರು ಬಂದಿತು.

೫೯. ಅನಂತರ ಆ ಕಲ್ಲನ್ನು ತೂಗಿಸಿ ಅದರ ತೂಕದ ಹಣವನ್ನು ದಕ್ಷಿಣೆಗೋಸ್ಕರ ಅದರ ಜೊತೆಯಲ್ಲಿಟ್ಟು ಅನಂತರ ಆ ಕಲ್ಲನ್ನು ಪೂಜಿಸಿ ರಾಮನು ಸೀತೆಯೊಡನೆ ಅದನ್ನು ಬ್ರಾಹ್ಮಣರಿಗೆ ಕೊಟ್ಟನು.

೬೦. ಅನಂತರ ಶ್ರೀ ರಾಮನು ವಾಯುಪುತ್ರನನ್ನು ಕುರಿತು ಎಲೈ ಹನುಮಂತನೇ! ಭೋಜನವಾದ ಮೇಲೆ ವಿಮಾನದಲ್ಲಿ ಈ ಬ್ರಾಹ್ಮಣರನ್ನು ಕೂರಿಸಿಕೊಂಡು ಈ ಶಿಲಾಶಾಸನವನ್ನು ಇಟ್ಟುಕೊಂಡು ರಾಮನಾಥಪುರಕ್ಕೆ ತೆಗೆದುಕೊಂಡು ಹೋಗಬೇಕು. ಎಂದು ಹೇಳಿದನು.

೬೧. ಅನಂತರ ಅಲ್ಲಿದ್ದ ರಾಜನಾದ ಕಂಬುಕಂಠನಿಗೆ ಬ್ರಾಹ್ಮಣರಿಗೆ ನೀನು ಯಾವಾಗಲೂ ಸಹಾಯಮಾಡುತ್ತಿರಬೇಕೆಂದು ಕಾಗದವನ್ನು ಬರೆಸಿದನು.

ತತಸ್ತುಷ್ಟಾ ದ್ವಿಜಾಸ್ಸರ್ವೇ ದದುರಾಶೀಸ್ಸಹಸ್ರಶಃ ।
ಚಕಾರ ಭೋಜನಂ ರಾಮಸ್ತತಸ್ತೈಃ ಪರಿವೇಷ್ಟಿತಃ ॥ ೬೨ ॥

ತತಸ್ಸರ್ವೇ ವಿಮಾನೇನ ಯಯುರ್ವಿಪ್ರಾಃ ಪುರಂ ಪ್ರತಿ ।
ತಾನ್ ಪೃಷ್ಟ್ವಾ ಮಾರುತಿಶ್ಚಾಪಿ ವಿಮಾನೇನ ಯಯೌ ಪುನಃ ॥ ೬೩ ॥

ಏವಂ ಚಕಾರ ದಾನಾನಿ ಸಪ್ತದೀಪಾಂತರೇಷು ಹಿ ।
ಸಹಸ್ರಶೋ ರಾಮಚಂದ್ರಸ್ತೇಷಾಂ ಸಂಖ್ಯಾ ನ ವಿದ್ಯತೇ ॥ ೬೪ ॥

ರಾಮನಾಥಪುರಸ್ಥಾಸ್ತೇ ವಿಪ್ರಾಃ ಕಾಲಾಂತರೇ ಚ ವೈ ।
ದುಷ್ಟರಾಜಭಯಾದಗ್ರೇ ತಾಂ ಶಿಲಾಂ ಭಯವಿಹ್ವಲಾಃ ॥ ೬೫ ॥

ತಟಾಕೇ ಪ್ರಕ್ಷಿಪಿಷ್ಯಂತಿ ತತಃ ಕಷ್ಟಂ ಭಜಂತಿ ತೇ ।
ಮರ್ತುಕಾಮಾನ್ ದ್ವಿಜಾನ್ ದೃಷ್ಟ್ವಾ ತಟಾಕಾನ್ಮಾರುತಿಃ ಪುನಃ ॥ ೬೬ ॥

---

೬೨. ಅನಂತರ ಆ ಬ್ರಾಹ್ಮಣರು ಬಹು ಸಂತೋಷಗೊಂಡು ಅನೇಕ ವಿಧವಾಗಿ ಆಶೀರ್ವದಿಸಿದರು. ಅನಂತರ ಆ ರಾಮನು ಆ ಬ್ರಾಹ್ಮಣರೊಡನೆಯೂ ಬಂಧುಗಳೊಡನೆಯೂ ಭೋಜನಮಾಡಿದನು.

೬೩. ಅನಂತರ ಆ ಬ್ರಾಹ್ಮಣರೆಲ್ಲರೂ ವಿಮಾನದಲ್ಲಿ ಕುಳಿತು ರಾಮನಾಥಪುರಕ್ಕೆ ಹೊರಟು ಹೋದರು. ಅವರ ಜೊತೆಯಲ್ಲಿ ಹೋಗಿದ್ದ ಮಾರುತಿಯು ಅವರಿಗೆ ಹೇಳಿ ಮತ್ತೆ ಅಯೋಧ್ಯೆಗೆ ಹೊರಟು ಬಂದನು.

೬೪. ಇದೇ ರೀತಿಯಾಗಿ ರಾಮನು ಸಪ್ತದ್ವೀಪಗಳಲ್ಲಿಯೂ ಅನೇಕ ವಿಧವಾದ ದಾನಗಳನ್ನು ಮಾಡಿದನು. ಅಂತಹ ದಾನಗಳನ್ನು ಸಾವಿರಾರು ಸಂಖ್ಯೆಯಲ್ಲಿ ಮಾಡಿರುವನು. ಲೆಕ್ಕಸಲೇ ಆಗುವುದಿಲ್ಲ.

೬೫. ರಾಮನಾಥಪುರದ ಆ ಬ್ರಾಹ್ಮಣರು ಕಾಲಾನಂತರದಲ್ಲಿ ಮುಂದೆ ದುಷ್ಟರಾದ ರಾಜರ ಭಯದಿಂದ ಭಯಪಟ್ಟು ಆ ಶಿಲಾಶಾಸನವನ್ನು ಕೆರೆಯಲ್ಲಿ ಬಿಸಾಡುವರು. ಅನಂತರ ಅವರಿಗೆ ಬಹುವಾದ ಕಷ್ಟವು ಬರುವುದು.

೬೬. ಆಗ ಅವರೆಲ್ಲರೂ ಕಷ್ಟವನ್ನು ತಡೆಯಲಾರದೆ ಸಾಯಲು ಸಿದ್ಧರಾಗುವರು. ಮಾರುತಿಯು ಇದನ್ನು ನೋಡಿ ಆ ಕೆರೆಯಿಂದ ಶಿಲಾಶಾಸನವನ್ನು ಎತ್ತಿಕೊಡುವನು.

ಬಹಿರ್ನಿಷ್ಕಾಸ್ಯತಿ ಶಿಲಾಮಗ್ರೇ ಕಾಲಾಂತರೇಣ ಹಿ ।

॥ ವಿಷ್ಣುದಾಸ ಉವಾಚ ॥

ಕಿಂ ಕಷ್ಟಂ ಭೂಸುರಾನಗ್ರೇ ಭವಿಷ್ಯತಿ ಸ್ವಜೀವಿತಂ ॥ ೬೭ ॥

ಯತಸ್ತೇ ತ್ಯಕ್ತುಕಾಮಾಶ್ಚ ಭವಿಷ್ಯಂತಿ ವದಸ್ವ ತತ್ ।

॥ ರಾಮದಾಸ ಉವಾಚ ॥

ಅಗ್ರೇ ಕಶ್ಚಿದ್ದುಷ್ಟರಾಜಾ ಭವಿಷ್ಯತ್ಯವನೀತಲೇ ॥ ೬೮ ॥

ಸ ತಾನ್ನಿರ್ಬಂಧ್ಯ ವಿಪ್ರಾಂಶ್ಚ ತದ್ರಾಜ್ಯ ಹರಣೇಚ್ಛಯಾ ।
ವದಿಷ್ಯತಿ ಕದಾ ರಾಜಾ ಯುಷ್ಮಾಕಂ ದಾನಮರ್ಪಿತಂ ॥ ೬೯ ॥

ಯದಿ ರಾಮೇಣ ತದ್ದಾನಪತ್ರಂ ಮೇ ದೃಷ್ಟಿಗೋಚರಂ ।
ಕರಣೀಯಂ ನ ಚೇಚ್ಛೀಘ್ರಂ ಯಾವತ್ಕಾಲಂ ಪುರೋದ್ಭವಂ ॥ ೭೦ ॥

ಯುಷ್ಮಾಭಿರ್ವಸು ಯದ್ಭುಕ್ತಂ ತತ್ಸರ್ವಂ ದೀಯತಾಂ ಮಮ ।
ನೋ ಚೇತ್ಸರ್ವಾನ್ ವಧಿಷ್ಯಾಮಿ ಭೂಸುರಾಣಾಂ ಯಮಸ್ತ್ವಹಂ ॥ ೭೧ ॥

೬೭–೬೮. ವಿಷ್ಣುದಾಸನು ಹೇಳಿದನು–ಎಲೈ ಗುರುವೇ ! ಆ ಬ್ರಾಹ್ಮಣರಿಗೆ ಮುಂದೆ ಯಾವ ರೀತಿಯಾದ ಕಷ್ಟವು ಬರುವುದು ? ಅವರು ಪ್ರಾಣವನ್ನಾದರೂ ಆ ಕಷ್ಟದ ದೆಸೆಯಿಂದ ಬಿಡಲು ಸಿದ್ಧರಾಗಲು ಕಾರಣವೇನು ? ಅದನ್ನು ಹೇಳು. ರಾಮದಾಸನು ಹೇಳಿದನು—ಮುಂದೆ ಒಬ್ಬ ದುಷ್ಟನಾದ ರಾಜನು ಹುಟ್ಟಿ ರಾಜ್ಯಕ್ಕೆ ಬರುವನು.

೬೯–೭೧. ಅವನು ಅವರ ರಾಜ್ಯವನ್ನು ಅಪಹರಿಸಲಿಚ್ಛೆಯಿಂದ ಅವರನ್ನು ನಿರ್ಬಂಧಮಾಡಿ ಇಂತೆಂದು ಕೇಳುವನು. ಆಗ ಕಲಿಯುಗವು ಬಂದಿರುವುದು. ರಾಮನು ನಿಮಗೆ ದಾನವನ್ನು ಕೊಟ್ಟಿರುವ ಪಕ್ಷದಲ್ಲಿ ಆ ಪತ್ರವನ್ನು ನನ್ನ ಕಣ್ಣಿಗೆ ಕಾಣುವಂತೆ ಬೇಗನೆ ತೋರಿಸಬೇಕು. ಹಾಗಿಲ್ಲದಿದ್ದರೆ ನೀವು ಎಷ್ಟುಕಾಲದಿಂದ ಈ ಪಟ್ಟಣವನ್ನು ಅನುಭವಿಸಿರುವಿರೋ ಅಷ್ಟು ದಿನದ ಆ ಊರಿನಲ್ಲಿ ಆದಾಯವನ್ನು ನನಗೆ ಕೊಟ್ಟುಬಿಡಬೇಕು. ಇಲ್ಲದಿದ್ದರೆ ನಿಮ್ಮೆಲ್ಲರನ್ನೂ ಕೊಂದುಬಿಡುತ್ತೇನೆ. ನಾಫು ವಿಪ್ರರಿಗೆ ಯಮನೆಂದು ತಿಳಿಯಿರಿ.

ತತಸ್ತೇ ಬ್ರಾಹ್ಮಣಾಸ್ಸರ್ವೇ ಶ್ರುತ್ವೇದಂ ನೃಪತೇರ್ವಚಃ ।
ಭಯಭೀತಾ ಮಂತ್ರಯಿತ್ವಾ ನೃಪಂ ಪ್ರೋಚುಸ್ತ್ವರಾನ್ವಿತಾಃ ॥ ೭೨ ॥

ಮಾಸೇನೈಕೇನ ಪತ್ರಂ ತೇ ದರ್ಶಯಿಷ್ಯಾಮಹೇ ವಯಂ ।
ತತೋ ಮುಮೋಚ ತಾನ್ರಾಜಾ ತೇಽಪಿ ತೂಷ್ಣೀಂ ಪುರಾ ಯಯುಃ ॥

ತಟಾಕಸ್ಯ ತಟಂ ಭಿತ್ವಾ ಪ್ರವಾಹಾಚ್ಛತಶಸ್ತತಃ ।
ಮೋಚಯಾಮಾಸುಸ್ಸರ್ವತ್ರ ನಾಂತಂ ತಸ್ಯ ಜಲಸ್ಯತೇ ॥ ೭೪ ॥

ದದೃಶುಸ್ಸಕಲಾ ವಿಪ್ರಾಸ್ತತಸ್ತೇ ಪ್ರಾಣ ಸಂಕಟಂ ।
ಜ್ಞಾತ್ವಾ ತತ್ರ ನಿರಾಹಾರಾ ನಿಷೇದುಸ್ಸರಸಸ್ತಟೇ ॥ ೭೫ ॥

ರಾಘವಂ ಪರಮಾತ್ಮಾನಂ ಚಿಂತಯಾಮಾಸುರಾದರಾತ್ ।
ಏವಂ ಮಾಸೇ ವ್ಯತಿಕ್ರಾಂತೇ ವಧಂ ಜ್ಞಾತ್ವಾತ್ಮನೋ ನೃಪಾತ್ ॥ ೭೬ ॥

---

೭೨. ಆ ರಾಜನ ಮಾತನ್ನು ಬ್ರಾಹ್ಮಣರೆಲ್ಲರೂ ಕೇಳಿ ಹೆದರಿದವರಾಗಿ ಎಲ್ಲರೂ ಸೇರಿ ಯೋಚಿಸಿಕೊಂಡು ಆ ರಾಜನಿಗೆ ಇಂತೆಂದು ಹೇಳುವರು.

೭೩. ಎಲೈ ದೊರೆಯೇ! ನಾವು ಆ ಶಾಸನವನ್ನು ನಿನಗೆ ತೋರಿಸಬೇಕಾದರೆ ನಮಗೆ ಒಂದು ತಿಂಗಳು ಅವಧಿಯನ್ನು ಕೊಡು. ಅಷ್ಟರೊಳಗೆ ತೋರಿಸುತ್ತೇವೆ. ಹಾಗೆಯೇ ಆಗಲೆಂದು ಹೇಳಿ ಅವರೆಲ್ಲರನ್ನೂ ಆ ರಾಜನು ಬಿಟ್ಟುಬಿಡುವನು. ಅವರೆಲ್ಲರೂ ಮಾತನಾಡದೆ ಊರಿಗೆ ಹೊರಟು ಹೋಗುವರು.

೭೪. ಅವರೆಲ್ಲರೂ ಕೆರೆಯ ಕಟ್ಟೆಯನ್ನು ಒಡೆದು ನೀರನ್ನು ಅನೇಕ ರೀತಿಯಲ್ಲಿ ಬಿಟ್ಟು ಬಿಡುವರು. ಆದರೂ ಕೂಡ ಆ ನೀರಿನ ಆಳವು ಸಿಕ್ಕದೆ ನೆಲವೇ ಸಿಕ್ಕುವುದಿಲ್ಲ.

೭೫. ಆಗ ಅವಧಿಯು ಮುಗಿಯುತ್ತ ಬರಲು ತಮಗೆ ಪ್ರಾಣಸಂಕಟವು ಬಂದಿತೆಂದು ತಿಳಿದುಕೊಳ್ಳುವರು. ಆಗ ನಿರಾಹಾರವಾಗಿ ಆ ಕೆರೆಯ ದಡದಲ್ಲಿ ಕುಳಿತುಕೊಳ್ಳುವರು.

೭೬–೭೭. ಆಗ ಶ್ರೀ ರಾಮನನ್ನು ಬಹು ಭಕ್ತಿಯಿಂದ ಭಜಿಸಲು ಮೊದಲು ಮಾಡುವರು. ಇದೇ ರೀತಿಯಲ್ಲಿ ಆ ಅವಧಿಯಾದ ಒಂದು ತಿಂಗಳಿನ ಕಾಲವೂ ಕಳೆದು ಹೋಗುವುದು. ರಾಜನು ತಮ್ಮೆಲ್ಲರನ್ನೂ ಕೊಲ್ಲಿಸುವನೆಂದು ನಿರ್ಧರಿಸಿ

ಭಯಾತ್ಪ್ರಾಣಾಂಸ್ತ್ಯಕ್ತುಕಾಮಾ ಆಸಂಸ್ತಸ್ಮಿನ್ ಜಲಾಶಯೇ ।
ತದಾ ತೇಷಾಂ ಸ್ತ್ರಿಯಃ ಪುತ್ರಾ ಶ್ಚಕ್ರುಃ ಕೋಲಾಹಲಂ ಭೃಶಂ ॥ ೭೭ ॥

ತಾನ್ಸರ್ವಾನ್ ಸಾಂತ್ವಯಾಮಾಸುರ್ನಾ ನಾನೀತ್ಯುತ್ತರೈಃ ದ್ವಿಜಾಃ ।
ಸ್ವಯಂ ಸ್ನಾತ್ವಾ ದ್ವಿಜಾಸರ್ವೇ ದದುರ್ದಾನಾನ್ಯನೇಕಶಃ ॥ ೭೮ ॥

ಚಕ್ರುಃ ಪ್ರದಕ್ಷಿಣಾಸ್ಸಪ್ತ ತಟಾಕಾಯೋತ್ತರಾನನಾಃ ।
ಊಚುರ್ದೀರ್ಘಸ್ವರೇಣೈವ ಪ್ರಬದ್ಧಕರಸಂಪುಟಾಃ ॥ ೭೯ ॥

ಹೇರಾಮ ಜಾನಕೀಕಾಂತ ತ್ವದ್ದಾನಾದೀದೃಶೀಗತಿಃ ।
ಜಾತೋಸ್ಮಾಕಂ ಮೃತಾನ್ನಸ್ತ್ವಂ ಸರ್ವಾನ್ಪಶ್ಯ ರಘೂತ್ತಮ ॥ ೮೦ ॥

ಪುರೋದ್ಭವಂ ತು ಯದ್ದ್ರವ್ಯಂ ಪೂರ್ವಜೈರ್ಭುಕ್ತಮೇವ ತತ್ ।
ಏತಾವತ್ಕಾಲಪರ್ಯಂತಮಸ್ಮಾಭಿಶ್ಚಾಧುನಾ ಕುತಃ ॥ ೮೧ ॥

ಕೊಳ್ಳುವರು ಭಯದಿಂದ ತಮ್ಮ ಪ್ರಾಣಗಳನ್ನು ಆ ಕೆರೆಗೆ ಬಿದ್ದು ತ್ಯಜಿಸಲು ನಿರ್ಧರಿಸಿಕೊಳ್ಳುವರು. ಅನಂತರ ಆ ಕೆರೆಯ ದಡದಲ್ಲಿ ಕುಳಿತುಕೊಂಡು ಅವರ ಹೆಂಡತಿಯರೂ ಮಕ್ಕಳೂ ಬಹುವಾಗಿ ಕೋಲಾಹಲವಾಡುತ್ತ ಅಳುತ್ತಿರುವರು.

೭೮. ಆಗ ಆ ಬ್ರಾಹ್ಮಣರೆಲ್ಲರೂ ಆ ಹೆಂಡತಿಯರನ್ನೂ ಮಕ್ಕಳನ್ನೂ ಅನೇಕ ವಿಧಗಳಿಂದ ಸಮಾಧಾನ ಪಡಿಸುವರು. ಅನಂತರ ಅವರೆಲ್ಲರೂ ಸ್ನಾನ ಮಾಡಿಕೊಂಡು ಅನೇಕ ವಿಧವಾದ ದಾನಗಳನ್ನು ಕೊಡುವರು.

೭೯. ಆ ಕೆರೆಯ ಸುತ್ತಲೂ ಏಳು ಪ್ರದಕ್ಷಿಣೆಯನ್ನು ಮಾಡಿ ಉತ್ತರ ಮುಖವಾಗಿ ನಿಂತುಕೊಂಡು ಕೈ ಮುಗಿದುಕೊಂಡು ಗಟ್ಟಿಯಾಗಿ ಇಂತೆನ್ನುವರು.

೮೦. ಎಲೈ ರಾಮನೇ! ಜಾನಕೀನಾಥನೇ! ನೀನು ದಾನವನ್ನು ಕೊಟ್ಟುದರಿಂದ ನಮಗೆ ಈ ರೀತಿಯಾದ ಗತಿಯು ಬಂದಿತು. ಆದರಿಂದಲೇ ನಾವು ಸಾಯುತ್ತಿದ್ದೇವೆ ನೀನೇ ನೋಡಿಕೋ.

೮೧-೮೩. ಈ ಊರಿನಲ್ಲಿ ಬಂದ ಹಣವನ್ನು ನಮ್ಮ ಹಿಂದಿನವರೇ ತಿಂದು ಬಿಟ್ಟರು. ಅನಂತರ ಬಂದುದನ್ನು ನಾವು ತಿಂದು ಬಿಟ್ಟೆವು. ಆ ಹಣವಾದರೋ

ತತ್ತ್ವದೇಯಮಸಂಖ್ಯಾತಮತಸ್ತ್ಯಕ್ಷ್ಯಾಮ ಜೀವಿತಂ ॥
ಇತ್ಯುಕ್ತ್ವಾ ಬ್ರಾಹ್ಮಣಾಸ್ಸರ್ವೇ ನಿಮೀಲ್ಯ ನಯನಾನಿ ತೇ ॥ ೮೨ ॥

ಚಿಂತಯಾಮಾಸುಃ ಸ್ವೀಯೇಷ್ಟಾಂ ದೇವತಾಂ ಮರಣೋತ್ಸುಕಾಃ ।
ಏತಸ್ಮಿನ್ನಂತರೇ ತತ್ರ ದೇವಾಗಾರೇ ಹನೂಮತಃ ॥ ೮೩ ॥

ಪಾಷಾಣಮೂರ್ತೇಃ ಪ್ರಕಟಸ್ಸಂಬಭೂವಾಂಜನೀಸುತಃ ।
ದೀರ್ಘಸ್ವರೇಣ ತಾನ್ಪ್ರಾಹ ಭೂಸುರಾನ್ ಸಂಭ್ರಮಾದ್ಧರಿಃ ॥ ೮೪ ॥

ಮಾ ಯೂಯಂ ಜೀವಿತಾನ್ಯದ್ಯ ತ್ಯಜಧ್ವಂ ಬ್ರಾಹ್ಮಣೋತ್ತಮಾಃ ।
ಆಗತೋ ರಾಘವಸ್ಯಾಹಂ ದೂತೋಽಂಜನಿಸಮುದ್ಭವಃ ॥ ೮೫ ॥

ಇತಿ ತದ್ವಚನಂ ಶ್ರುತ್ವಾ ದ್ವಿಜಾಸ್ತೇ ವಿಸ್ಮಯಾನ್ವಿತಾಃ ।
ಉನ್ಮೀಲ್ಯ ನಯನಾನ್ಯಗ್ರೇ ದದೃಶುರ್ವಾಯುನಂದನಂ ॥ ೮೬ ॥

ಅಸಂಖ್ಯಾತವಾಗಿರುವುದು. ಅದನ್ನು ಕೊಡಲಾಗುವುದೇ ಇಲ್ಲ. ಆದ್ದರಿಂದ ಪ್ರಾಣವನ್ನು ಬಿಟ್ಟುಬಿಡುತ್ತೇವೆ.

೮೩-೮೪. ಹೀಗೆಂದು ಹೇಳುತ್ತ ಅವರೆಲ್ಲರೂ ಕಣ್ಣುಗಳನ್ನು ಮುಚ್ಚಿಕೊಂಡು ಮರಣವನ್ನು ನಿಶ್ಚಯಿಸಿಕೊಂಡು ತಮ್ಮ ತಮ್ಮ ಇಷ್ಟದೇವತೆಗಳನ್ನು ಧ್ಯಾನಿಸುತ್ತಿರುವರು. ಇಷ್ಟರೊಳಗೆ ಆ ದೇವಸ್ಥಾನದಲ್ಲಿದ್ದ ಹನುಮಂತನ ಕಲ್ಲಿನ ವಿಗ್ರಹದಿಂದ ಅಂಜನೇಯನು ಹೊರಗೆ ಹೊರಟು ಕಾಣಿಸಿಕೊಂಡು ಗಟ್ಟಿಯಾಗಿ ಕೂಗಿಕೊಳ್ಳುತ್ತ ಅವಸರದಿಂದ ಆ ಬ್ರಾಹ್ಮಣರನ್ನು ಕುರಿತು ಇಂತೆಂದು ಹೇಳುವನು.

೮೫. ಎಲೈ ಬ್ರಾಹ್ಮಣೋತ್ತಮರಿರಾ! ನೀವು ಈಗ ಪ್ರಾಣವನ್ನು ಬಿಡಬೇಡಿರಿ. ಅಂಜನಿಯ ಹೊಟ್ಟೆಯಲ್ಲಿ ಹುಟ್ಟಿದ ರಾಮದಾಸನಾದ ಆಂಜನೇಯನಾದ ನಾನು ಬಂದಿರುವೆನು.

೮೬. ಆಂಜನೇಯನು ಹೀಗೆ ಹೇಳಿದುದನ್ನು ಕೇಳಿ ಆ ಬ್ರಾಹ್ಮಣರೆಲ್ಲರೂ ಆಶ್ಚರ್ಯಪಡುವರು. ಕಣ್ಣುಗಳನ್ನು ಬಿಟ್ಟು ಮುಂದೆ ನಿಂತಿರುವ ಆಂಜನೇಯನನ್ನು ನೋಡುವರು.

ದೀರ್ಘಬಾಹುಂ ಮಹಾಘೋರಂ ಪಿಂಗಕೇಶವಿರಾಜಿತಂ ।
ಜರಠಂ ಪರ್ವತಾಕಾರಂ ರಾಮನಾಮಪ್ರಭಾಷಿಣಂ ॥ ೮೭ ॥

ತಂ ದೃಷ್ಟ್ವಾ ತೇ ದ್ವಿಜಾಸ್ಸರ್ವೇ ಪ್ರಣೇಮುಃ ಹೃಷ್ಟಮಾನಸಾಃ ।
ಕಥಯಾಮಾಸುಸ್ತಂ ಸರ್ವಂ ಸ್ವೀಯಂ ವೃತ್ತಂ ಸವಿಸ್ತರಂ ॥ ೮೮ ॥

ತತಸ್ಸ ಮಾರುತಿರ್ವೇಗಾತ್ಸರಸಸ್ತಾಂ ಶಿಲಾಂ ಬಹಿಃ ।
ನಿಷ್ಕಾಸ್ಯ ವಿಪ್ರವರ್ಯೈಸ್ತೈಃ ಶಿಲಾಂ ಧೃತ್ವಾ ಸ್ವಯಂ ಕಪಿಃ ॥ ೮೯ ॥

ಜಗಾಮ ದುಷ್ಟರಾಜಾನಂ ದರ್ಶಯಾಮಾಸ ತಾಂ ಶಿಲಾಂ ।
ರಾಮಮುದ್ರಾಂಕಿತಾಂ ಲಿಪಿಂ ದೃಷ್ಟ್ವಾ ರಾಜಾತಿವಿಸ್ಮಿತಃ ॥ ೯೦ ॥

ತಂ ತದಾರೋಪಯಾಮಾಸ ಶೂಲಾಗ್ರೇ ವಾಯುಜೋ ನೃಪಂ ।
ತಸ್ಮಿನ್ನೇವ ತಟಾಕೇ ಹಿ ಯತ್ರ ವಿಪ್ರಾಃ ಸ್ಥಿತಾಃ ಪುರಾ ॥ ೯೧ ॥

---

೮೭. ಅವನ ತೋಳುಗಳು ಉದ್ದವಾಗಿರುವುವು. ಆಕಾರವು ಭಯಂಕರವಾದುದು ಹೊಂಬಣ್ಣದ ಮೈಗೂದಲುಗಳಿರುವುವು. ಮುದುಕನಾಗಿರುವನು. ಪರ್ವತದಂತೆ ದೊಡ್ಡದಾಗಿರುವನು. ರಾಮನಾಮವನ್ನು ಜಪಿಸುತ್ತಲೇ ಇರುವನು.

೮೮. ಇಂತಹ ಆಂಜನೇಯನನ್ನು ನೋಡಿ ಸಂತೋಷಗೊಂಡು ಆ ಬ್ರಾಹ್ಮಣರೆಲ್ಲರೂ ಅವನಿಗೆ ನಮಸ್ಕರಿಸುವರು. ತಮ್ಮ ವಿಷಯಗಳನ್ನೆಲ್ಲಾ ವಿಸ್ತಾರವಾಗಿ ಆತನಿಗೆ ಹೇಳುವರು.

೮೯-೯೦. ಆಗ ಆ ಮಾರುತಿಯು ವೇಗವಾಗಿ ಆ ನೀರಿಗೆ ಧುಮುಕಿ ಆ ಕೆರೆಯಿಂದ ಶಿಲಾಶಾಸನವನ್ನು ಹೊರಗೆ ತರುವನು. ಮತ್ತು ಆ ಶಿಲೆಯನ್ನು ಕೈಯಲ್ಲಿ ಹಿಡಿದು ಕೊಂಡು ಆ ದುಷ್ಟ ರಾಜನ ಬಳಿಗೆ ಹೋಗಿ ರಾಮಮುದ್ರಾಂಕಿತವಾದ ಆ ಶಿಲೆಯನ್ನು ಆತನಿಗೆ ತೋರಿಸುವನು. ಅದನ್ನು ನೋಡಿ ಆ ರಾಜನು ಬಹು ಆಶ್ಚರ್ಯಗೊಳ್ಳುವನು.

೯೧. ಅನಂತರ ಆ ವಾಯುನಂದನನು ಆ ದುಷ್ಟ ರಾಜನನ್ನು ಶೂಲಕ್ಕೇರಿಸುವನು. ಆ ಬ್ರಾಹ್ಮಣರು ಯಾವ ಕೆರೆಯ ಬಳಿಯಲ್ಲಿ ಪ್ರಾಣಬಿಡಲು ಸಿದ್ಧರಾಗಿದ್ದರೋ ಆ ಕೆರೆಯ ಬಳಿಯಲ್ಲಿಯೇ ಶೂಲವು ನೆಡಲ್ಪಡುವುದು.

ನೃಪಂ ಮೋಚಯಿತುಂ ಯೇ ಯೇ ರಾಜದೂತಾಸ್ಸಮಾಯಯುಃ ।
ತಾನ್ಸರ್ವಾ ಮರ್ದಯಾಮಾಸ ಪುಚ್ಛೇನೈವ ಸ ಮಾರುತಿಃ ॥ ೯೨ ॥

ದ್ವಿಜಹೃತ್ತಾಪಶಮನಾದ್ಧೃತ್ತಾಪಶಮನಂ ಸರಃ ।
ಬಭೂವ ನಾಮ್ನಾ ತತ್ಪುಣ್ಯಂ ತತ್ರ ಶ್ರೀವಾಯುಸೂನುನಾ ॥ ೯೩ ॥

ರಾಜ್ಯದಾನೇನ ರಾಮಸ್ಯೌದಾರ್ಯಂ ಲೋಕೇ ಪ್ರದರ್ಶಿತುಂ ।
ಉದಾರರಾಘವೇಶಾಖ್ಯಃ ಶಂಭುಃ ಸಂಸ್ಥಾಪಿತಃ ಶುಭಃ । ॥ ೯೪ ॥

ಉದಾರರಾಘವಶ್ಚೇತಿ ನಾಮ್ನಾ ಮೂರ್ತಿಃ ಪ್ರತಿಷ್ಠಿತಾ ।
ಸ್ನಾನಾದಿನಾ ತತ್ಸರಸಿ ನೃಣಾಂ ತಾಪತ್ರಯಂ ನ ಹಿ ॥ ೯೫ ॥

ತತಃ ಪ್ರಾಹ ಪುನರ್ವಿಪ್ರಾನ್ ಹನೂಮಾನ್ ತುಷ್ಟಮಾನಸಾ ।
ಭೂಮ್ಯಾಂ ಕೃತ್ವಾ ಗುಹಾಂ ಶ್ರೇಷ್ಠಾಂ ತತ್ರೇಯಂ ಸ್ಥಾಪ್ಯತಾಂ ಶಿಲಾ ॥

---

೯೨. ರಾಜನನ್ನು ಶೂಲಕ್ಕೇರಿಸುವಾಗ ಆ ರಾಜನ ಕಡೆಯ ದೂತರು ಅವನನ್ನು ಬಿಡಿಸಲು ಯಾರು ಯಾರು ಬರುವರೋ ಅವರನ್ನೆಲ್ಲಾ ಮಾರುತಿಯು ಬಾಲದಿಂದಲೇ ಹೊಡೆದು ಓಡಿಸುವನು.

೯೩. ಬ್ರಾಹ್ಮಣರ ಮನಸ್ಸಿನ ತಾಪವನ್ನು ನಾಶಮಾಡಿದುದರಿಂದ ಅಂದಿನಿಂದೀಚೆಗೆ ಆ ಕೆರೆಗೆ ಹೃತ್ತಾಪಶಮನಸರಸ್ಸೆಂದು ಪುಣ್ಯಕರವಾದ ಹೆಸರನ್ನು ವಾಯುಸೂನುವು ಇಡುವನು.

೯೪-೯೫. ರಾಜ್ಯದಾನಮಾಡಿದುದರಿಂದ ಶ್ರೀ ರಾಮನ ಔದಾರ್ಯವು ಎಷ್ಟಿದೆ ಎಂಬುವನ್ನು ಲೋಕಕ್ಕೆ ತೋರಿಸಲು ಆ ಕೆರೆಯ ಬಳಿಯಲ್ಲಿ ಉದಾರ ರಾಘವನೆಂಬ ಶಂಭುವಿನ ಮೂರ್ತಿಯನ್ನು ಆ ಅಂಜನೇಯನು ಪ್ರತಿಷ್ಠೆಮಾಡಿರುವನು. ಆ ಕೆರೆಯಲ್ಲಿ ಸ್ನಾನ ಮುಂತಾದುವನ್ನು ಮಾಡಿದರೆ ಮನುಷ್ಯರಿಗೆ ತಾಪತ್ರಯಗಳು ಇರುವುದಿಲ್ಲ.

೯೬. ಆ ವಿಪ್ರರೆಲ್ಲರೂ ಸಂತೋಷಗೊಂಡು ಆ ಆಂಜನೇಯನನ್ನು ಹೊಗಳುತ್ತಿರಲು ಆ ಆಂಜನೇಯನು ಅವರನ್ನು ಕುರಿತು ಇಂತೆನ್ನುವನು. ಎಲೈ ಬ್ರಾಹ್ಮಣರಿರಾ! ಭೂಮಿಯಲ್ಲಿ ಒಂದು ಗುಹೆಯನ್ನು(ನೆಲಮೊಳಿಗೆಯನ್ನು) ಮಾಡಿ ಅದರಲ್ಲಿ ಆ ಶಿಲೆಯನ್ನಿಡಿರಿ.

ನ ಭಯಂ ವೋಽಸ್ತು ಭೋ ವಿಪ್ರಾ ಯುಷ್ಮಾಭಿಸ್ಸನ್ನಿಧಿಸ್ತ್ವಹಂ ।
ಸರ್ವದಾಸ್ಮಿ ನ ಭೇತವ್ಯಂ ಸ್ಮರಧ್ವಂ ರಘುನಂದನಂ ॥ ೯೭ ॥

ಇತ್ಯುಕ್ತ್ವಾ ಗುಪ್ತರೂಪೋಽಭೂತ್ಸ್ವೀಯಮೂರ್ತ್ಯಾಂ ದ್ವಿಜಾಗ್ರತಃ ।
ತಾಂ ಶಿಲಾಂ ಸ್ಥಾಪಯಾಮಾಸುರ್ಭೂಮ್ಯಾಮೇವಾತಿಯತ್ನತಃ ॥ ೯೮ ॥

ತತಸ್ತುಷ್ಟಾ ದ್ವಿಜಾಸ್ಸರ್ವೇ ಜಗ್ಮುಸ್ಸ್ವಂ ಸ್ವಂ ಗೃಹಂ ಪ್ರತಿ ।
ತದಾರಭ್ಯ ನ ಕೇನಾಪಿ ತೇಷಾಂ ರಾಜ್ಯಂ ಹೃತಂ ಕದಾ ॥ ೯೯ ॥

ಏವಂ ಶಿಷ್ಯ ಮಯಾ ಪ್ರೋಕ್ತಾ ಕಥಾ ಭಾವಿ ತವಾಗ್ರತಃ ।
ಪೂರ್ವಮೇವ ಜ್ಞಾನದೃಷ್ಟ್ಯಾ ಕೌತುಕಾರ್ಥಂ ಸವಿಸ್ತರಾ ॥ ೧೦೦ ॥

ಅದ್ಯಾಪಿ ತತ್ರ ತೈರ್ವಿಪ್ರೈಸ್ತದ್ರಾಜ್ಯಂ ಭುಜ್ಯತೇ ಸದಾ ।
ಯೇ ಯೇ ಜಾತಾ ನೃಪಾ ಭೂಮ್ಯಾಂ ರಾಮಾಜ್ಞಾಂ ಮಾನಯಂತಿ ತೇ ॥

---

೯೭. ಎಲೈ ಬ್ರಾಹ್ಮಣರಿರಾ! ಭಯಪಡಬೇಡಿರಿ. ನಿಮ್ಮಗಳ ಬಳಿಯಲ್ಲಿಯೇ ನಾನು ಯಾವಾಗಲೂ ಇದ್ದುಕೊಂಡಿರುತ್ತೇನೆ. ಹೆದರಬೇಡಿರಿ. ಯಾವಾಗಲೂ ರಾಮನನ್ನು ಸ್ಮರಿಸುತ್ತಿರಿ.

೯೮. ಇಂತೆಂದು ಹೇಳಿ ಹನುಮಂತನು ಒಡನೆಯೇ ಅಲ್ಲಿದ್ದ ಶಿಲಾಮೂರ್ತಿಯಲ್ಲಿ ಸೇರಿಹೋಗುವನು. ಅನಂತರ ಆ ಬ್ರಾಹ್ಮಣರು ಆ ಶಿಲಾಶಾಸನವನ್ನು ಭೂಮಿಯಲ್ಲಿ ಗುಹೆಯನ್ನು ಮಾಡಿ ಅಲ್ಲಿಡುವರು.

೯೯. ಅನಂತರ ಆ ಬ್ರಾಹ್ಮಣರೆಲ್ಲರೂ ಸಂತೋಷಪಟ್ಟು ತಮ್ಮ ತಮ್ಮ ಮನೆಗಳಿಗೆ ಹೋಗುವರು. ಅದು ಮೊದಲುಗೊಂಡು ಅವರ ರಾಜ್ಯವನ್ನು ಯಾವನೂ ಯಾವಾಗಲೂ ಅಪಹರಿಸುವುದಿಲ್ಲ.

೧೦೧. ಎಲೈ ಶಿಷ್ಯನೇ! ಮುಂದೆ ಬರುವ ಕಥೆಯನ್ನು ಈ ರೀತಿಯಾಗಿ ನಿನಗೆ ಹೇಳಿದ್ದೇನೆ. ಇದನ್ನು ಜ್ಞಾನದೃಷ್ಟಿಯಿಂದ ಒಂದುಸಲ ನೋಡಿ ನಿನ್ನ ಆಶೆಗೋಸ್ಕರವಾಗಿ ಮೊದಲೇ ಹೇಳಿದ್ದೇನೆ.

೧೦೧. ಈಗಲೂ ಕೂಡ ಅಲ್ಲಿ ಬ್ರಾಹ್ಮಣರು ಸ್ವರಾಜ್ಯವನ್ನು ಯಾವಾಗಲೂ ಅನುಭವಿಸುತ್ತಿರುವರು. ಯಾವ ಯಾವ ರಾಜರು ಹುಟ್ಟುವರೋ ಅವರೆಲ್ಲರೂ ಆ ರಾಮಾಜ್ಞೆಯನ್ನು ಗೌರವಿಸುತ್ತ ಬರುತ್ತಿರುವರು.

ಏವಂ ನಾನಾಕೌತುಕಾನಿ ರಾಘವೇಣ ಕೃತಾನಿ ಹಿ ।
ಪುತ್ರಾಭ್ಯಾಂ ಸೀತಯಾಯೋಧ್ಯಾಪುರ್ಯಾಂ ಬಂಧುಜನೈಸ್ಸಹ ॥ ೧೦೨ ॥

ಇತಿಶ್ರೀಶತಕೋಟಿರಾಮಚರಿತಾಂತರ್ಗತಾನಂದ ರಾಮಾಯಣೇ ವಾಲ್ಮೀಕಿಯೇ ರಾಜ್ಯಕಾಂಡೇ ರಾಮನಾಥಪುರ ರಾಜ್ಯ ಪ್ರದಾನಂ ನಾಮಾಷ್ಟಾದಶಸ್ಸರ್ಗಃ ಸಮಾಪ್ತಃ

---

೧೦೨. ರಾಮನು ಇದೇ ರೀತಿಯಾಗಿ ಅನೇಕವಾದ ಆಶ್ಚರ್ಯಕರವಾದ ಕೆಲಸಗಳನ್ನು ಮಾಡಿದನು. ಮಕ್ಕಳೊಡನೆಯೂ ಸೀತೆಯೊಡನೆಯೂ ತಮ್ಮಂದಿರೊಡನೆಯೂ ಇರುತ್ತ ಪಂಡಿತರೊಡನೆಯೂ ವ್ಯವಹರಿಸುತ್ತ ಸಂತೋಷದಿಂದಿದ್ದನು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ರಾಮನಾಥಪುರ ರಾಜ್ಯಪ್ರದಾನವೆಂಬ ಹದಿನೆಂಟನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಹದಿನೆಂಟನೆಯ ಸರ್ಗದ ಸಾರಾಂಶವು

ಶ್ರೀರಾಮನು ಅಯೋಧ್ಯೆಯಲ್ಲಿ ರಾಜ್ಯಭಾರವನ್ನು ಮಾಡುತ್ತ ಸೀತೆಯೊಡನೆ ಸುಖವಾಗಿದ್ದನು. ಆಗ ರಾಮಮುದ್ರೆಯಿಲ್ಲದೆ ಶಸ್ತ್ರವನ್ನು ಧರಿಸಿದವನೊಬ್ಬನೂ ಆ ರಾಜಧಾನಿಗೆ ಬರುವಂತೆಯೂ ಇರಲಿಲ್ಲ. ಹೋಗುವಂತೆಯೂ ಇರಲಿಲ್ಲ. ರಾಜರೂ ಕೂಡ ರಾಮಮುದ್ರೆಯನ್ನು ಹೊಂದಿಯೇ ಹೋಗುತ್ತಲೂ ಬರುತ್ತಲೂ ಇರಬೇಕಾಗಿದ್ದಿತು. ಆ ರಾಮಮುದ್ರೆಯ ಸ್ವರೂಪವು ಅಡ್ಡವಾಗಿ ಹದಿನಾಲ್ಕು ಮನೆಗಳೂ ಉದ್ದವಾಗಿ ಹದಿನಾಲ್ಕು ಮನೆಗಳೂ ಒಟ್ಟಿನಲ್ಲಿ ನೂರುತೊಂಭತ್ತಾರು ಮನೆಗಳೂ ಇವೆ. ಈ ಮನೆಗಳಲ್ಲಿ ರಾಜಾರಾಮ ಎಂದು ಅಡಕವಾಗಿರುವುದು.

ಶ್ರೀರಾಮನು ಇಂತಹ ಮುದ್ರೆಯಿಂದ ಅಂಕಿತವಾದ ದಾನಗಳನ್ನೂ ಮಾಡಿರುವನು. ಅದರಿಂದ ಅಂಕಿತವಾಗಿ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟ ರಾಮನಾಥಪುರವು ಈಗಲೂ ಇರುವುದು.

ಅದು ಹೇಗೆಂದರೆ ಒಂದುಸಾರಿ ದಕ್ಷಿಣದೇಶದ ಬ್ರಹ್ಮಪುರಿಯ ಬ್ರಾಹ್ಮಣರು ರಾಘವನು ಬಹುವಾಗಿ ಬ್ರಾಹ್ಮಣರಿಗೆ ದಾನಗಳನ್ನು ಮಾಡುತ್ತಿರುವನೆಂದು ಕೇಳಿ ಆ ಊರಿನವರೆಲ್ಲರೂ ಗುಂಪಾಗಿ ರಾಮನನ್ನು ಯಾಚಿಸಲು ಅಯೋಧ್ಯೆಗೆ ಬಂದರು.

ಆ ರಾಮನು ತಮ್ಮಂದಿರೊಡನೆಯೂ ಮಕ್ಕಳೊಡನೆಯೂ ಗಂಧರ್ವ ರಾಜನ ಮನೆಗೆ ಭೋಜನಕ್ಕೆ ಹೋಗಿದ್ದನು. ಸ್ನಾನಮಾಡಿ ತಟ್ಟೆಯ ಮುಂದೆ ಕುಳಿತಿದ್ದನು. ಮುಕ್ಕಾಲುಪಾಲು ಬಡಿಸಿಯೂ ಆಗಿದ್ದಿತು. ಇಷ್ಟರೊಳಗೆ ಆ ಬ್ರಾಹ್ಮಣರು ಬಂದು ಹೇಳಿಕಳುಹಿಸಲು ದೂತರು ಅದನ್ನು ರಾಮನಿಗೆ ಹೇಳಿದರು.

ಒಡನೆಯೇ ಶ್ರೀರಾಮನು ಹೊರಗೆ ಬಂದು ಅವರನ್ನು ಒಳಕ್ಕೆ ಕರೆದು ಕೊಂಡು ಹೋಗಿ ಗೌರವಿಸಿ ಭೋಜನಕ್ಕೆ ಎಬ್ಬಿಸಿದನು. ಅವರೆಲ್ಲರೂ ಊಟಕ್ಕೆ ಮೊದಲೇ ಯಾಚಿತಾರ್ಥವನ್ನು ಹೊಂದಬೇಕೆಂದು ನಿಶ್ಚಯಿಸಿಕೊಂಡು ಹಿಂದು ಮುಂದು ನೋಡುತ್ತಿದ್ದರು

ಅವರ ಅಭಿಪ್ರಾಯವನ್ನು ತಿಳಿದು ರಾಮನು ಅಯ್ಯಾ ! ನೀವು ರಾಜ್ಯದಾನ ಕ್ಕೋಸ್ಕರ ಬಂದಿದ್ದೀರಿ. ನಿಮ್ಮ ಅಭಿಪ್ರಾಯವು ತಿಳಿಯಿತು. ನೀವು ಒಬ್ಬ ಶಿಷ್ಯನನ್ನು ಕಳುಹಿಸಿದ್ದರೇನೇ ಇಷ್ಟಾರ್ಥವನ್ನು ಪೂರ್ತಿಮಾಡುತ್ತಿದ್ದೆನು. ಇಲ್ಲಿಗೆ ಬರುವ ಶ್ರಮವನ್ನು ನೀವೇತಕ್ಕೆ ತೆಗೆದುಕೊಂಡಿರಿ ? ಎಂದೆನ್ನುತ್ತಾ ಲಕ್ಷ್ಮಣನಿಗೆ ಹೇಳಿ ಹಣ್ಣುಹಂಪಲುಗಳನ್ನು ತರಿಸಿ ಆ ಬ್ರಾಹ್ಮಣರಿಗೆ ಕೊಟ್ಟು ಶಿಲ್ಪಿಯನ್ನು ಕರೆಸಿ ರಾಮಮುದ್ರೆಯನ್ನು ಕಲ್ಲಿನಲ್ಲಿ ಕೆತ್ತಿಸಿ ಅದರಲ್ಲಿ ಬ್ರಹ್ಮ ಪುರಿಯನ್ನು ದಾನವಾಗಿ ಕೊಟ್ಟಿದ್ದೇನೆಂದು ಬರೆಸಿ ಮುಂದಿನ ರಾಜರು ತನ್ನ ದಾನವನ್ನು ನಡೆಸಿಕೊಂಡು ಬರಬೇಕೆಂದು ಪ್ರಾರ್ಥಿಸಿ ಆಂಜನೇಯನ ಆಕಾರವನ್ನು ಅದರಲ್ಲಿ ಒತ್ತಿಸಿ ಊಟಕ್ಕೆ ಮುಂಚೆಯೇ ಅವರಿಗೆ ದಾನ ಮಾಡಿದನು. ಸೀತೆಯು ನೀರನ್ನು ಬಿಟ್ಟಳು. ಆ ಕಲ್ಲಿನ ತೂಕಕ್ಕೂ ದಾನವಾಗಿ ಚಿನ್ನವನ್ನು ಕೊಟ್ಟನು. ಅನಂತರ ಅವರಿಗೆ ಆ ಸ್ನೇಹಿತನ ಮನೆಯಲ್ಲಿಯೇ ಭೋಜನವನ್ನು ಮಾಡಿಸಿ ವಿಮಾನದಲ್ಲಿ ಮಾರುತಿಯೊಡನೆ ಆ ಶಾಸನವನ್ನು ಕೊಟ್ಟು ಅವರ ಊರಿಗೆ ಕಳುಹಿಸಿದನು. ಅದು ಮೊದಲುಗೊಂಡು ಆ ಬ್ರಹ್ಮಪುರಿಗೆ ರಾಮನಾಥಪುರವೆಂದು ಹೆಸರು ಬಂದಿತು.

ಹೀಗಿರುತ್ತಿರಲು ಬಹುಕಾಲವಾದಮೇಲೆ ಒಬ್ಬ ದುಷ್ಟರಾಜನು ಬಂದು ಆ ಬ್ರಾಹ್ಮಣರನ್ನು ನಿಮ್ಮ ದಾನಶಾಸನವನ್ನು ತೋರಿಸಿ. ಇಲ್ಲದಿದ್ದರೆ ನೀವು ಹಿಂದಿನ ತಲೆಗಳಿಂದಲೂ ಇದರ ಆದಾಯವನ್ನು ಕೊಡಬೇಕಾಗುವುದೆಂದು ನಿರ್ಬಂಧಪಡಿಸಿದನು. ಈ ಬ್ರಾಹ್ಮಣರು ಆ ದಾನಶಾಸನವನ್ನು ಒಂದು ಕೆರೆಯೊಳಕ್ಕೆ ಹಾಕಿದ್ದರು. ರಾಜನ ಈ ಅಪ್ಪಣೆಯನ್ನು ಕೇಳಿ ಒಂದು ತಿಂಗಳಿನ ಅವಧಿಯನ್ನು ತೆಗೆದುಕೊಂಡು ಆ ಕೆರೆಯ ಏರಿಯನ್ನು ಒಡೆದು ನೀರನ್ನು ಬಿಟ್ಟರು. ಆದರೂ ನೀರು ಆಳವಾಗಿಯೇ ನಿಂತಿರಲು ಆ ಶಾಸನವು ಸಿಕ್ಕಲಿಲ್ಲ. ಅವಧಿಯು ಮುಗಿಯುತ್ತ ಬಂದಿತು. ಆಗ ಅವರಿಗೆ ತೊಂದರೆಯು ಬಂದೊದಗಲು ಎಲ್ಲರೂ ಅನ್ನಾಹಾರಗಳನ್ನು ಬಿಟ್ಟು ಆ ಕೆರೆಯಮೇಲೆ ಪ್ರಾಣಬಿಡಲು ಸಿದ್ಧರಾಗಿ ಮಲಗಿದರು. ಮತ್ತು ಇಷ್ಟದೇವತೆಯನ್ನು ಚಿಂತಿ ಸುತ್ತಲಿದ್ದರು. ಇವರು ಹೀಗೆ ತೊಂದರೆಗೀಡಾಗಿ ಮಲಗಿರಲು ಆ ಕೆರೆಯ ಏರಿಯಮೇಲಿದ್ದ ಆಂಜನೇಯನ ದೇವಸ್ಥಾನದಲ್ಲಿದ್ದ ಆಂಜನೇಯಮೂರ್ತಿಯಿಂದ ಒಬ್ಬ ಮುದುಕನು ಹೊರಗೆ ಬಂದನು. ಅವನೇ ಆಂಜನೇಯನಾಗಿದ್ದನು. ಆ ಬ್ರಾಹ್ಮಣರು ಅವನಿಗೆ ನಮಸ್ಕರಿಸಿ ವಿಷಯವೆಲ್ಲವನ್ನೂ ತಿಳಿಸಿದರು. ಆಗ ಆ ಮಾರುತಿಯು ನೀರಿಗಿಳಿದು ಆ ಶಿಲಾಶಾಸನವನ್ನು ತಂದು ಅವರಿಗೆ ಕೊಟ್ಟನು. ಮತ್ತು ಆ ಬ್ರಾಹ್ಮಣರ ಜೊತೆಯಲ್ಲಿ ತಾನೇ ಆ ರಾಜನ ಬಳಿಗೆ ಹೋಗಿ

ಅದನ್ನು ಕೊಟ್ಟನು. ಅಲ್ಲದೆ ಆ ರಾಜನನ್ನು ಶೂಲಕ್ಕೇರಿಸಿದನು. ಮತ್ತು ಆ ರಾಜನನ್ನು ಬಿಡಿಸಲು ಬಂದವರನ್ನೆಲ್ಲಾ ಬಾಲದಿಂದಲೇ ಹೊಡೆದು ಕೊಂದನು. ಬ್ರಾಹ್ಮಣರ ಹೃದಯದ ತಾಪವನ್ನು ಶಮನಮಾಡಿದುದರಿಂದ ಆ ಕೆರೆಗೆ ಹೃತ್ತಾಪಶಮನವೆಂಬ ಹೆಸರನ್ನಿಟ್ಟನು. ಮತ್ತು ರಾಮನ ಔದರ್ಯವನ್ನು ತೋರಿಸಲು ಅಲ್ಲಿ ಉದಾರರಾಘವನೆಂಬ ಹೆಸರಿನಿಂದ ಒಂದು ಲಿಂಗವನ್ನು ಸ್ಥಾಪಿಸಿದನು. ಅದು ಉದಾರರಾಘವೇಶ್ವರವೆಂಬ ಹೆಸರಿನಿಂದ ಈಗಲೂ ಪ್ರಸಿದ್ಧವಾಗಿದೆ. ಅಲ್ಲಿ ಸ್ನಾನಮಾಡಿದರೆ ಬಹು ಪುಣ್ಯವೂ ಬರುವುದು. ಅನಂತರ ಹನುಮಂತನು ಭೂಮಿಯಲ್ಲಿ ಒಂದು ಗುಹೆಯನ್ನು ಮಾಡಿ ಅಲ್ಲಿ ಈ ಶಾಸನ ವನ್ನಿಟ್ಟನು. ಮತ್ತೂ ಅಯ್ಯಾ! ನೀವು ಹೆದರಬೇಡಿರಿ. ನಿಮ್ಮ ಬಳಿಯಲ್ಲಿಯೇ ನಾನು ಯಾವಾಗಲೂ ಇರುತ್ತೇನೆ. ಶ್ರೀರಾಮನನ್ನು ಸ್ಮರಿಸುತ್ತಿರಿ ಎಂದು ಹೇಳಿ ಆ ಶಿಲಾಮೂರ್ತಿಯಲ್ಲಿಯೇ ಅಂತರ್ಧಾನನಾದನು.

ಇದರಿಂದ ಸಂತುಷ್ಟರಾದ ಬ್ರಾಹ್ಮಣರು ಅವರವರ ಮನೆಗಳಿಗೆ ಹೊರಟು ಹೋದರು. ಅದು ಮೊದಲುಗೊಂಡು ಆ ರಾಮನಾಥಪುರವನ್ನು ಯಾರೂ ಅಪಹರಿಸಲಿಲ್ಲ. ಈಗಲೂ ಆ ಬ್ರಾಹ್ಮಣರು ಆ ರಾಜ್ಯವನ್ನು ಅನುಭವಿಸು ತ್ತಿರುವರು. ರಾಮನು ತಮ್ಮಂದಿರೊಡನೆಯೂ ಮಕ್ಕಳೊಡನೆಯೂ ಹೆಂಡತಿ ಯೊಡನೆಯೂ ಸುಖದಿಂದಿರುತ್ತ ಈ ರೀತಿಯಾದ ಅನೇಕ ಆಕರ್ಷಣೀಯವಾದ ಕೆಲಸಗಳನ್ನು ಮಾಡಿದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ ಉತ್ತರಾರ್ಧೇ ಏಕೋನವಿಂಶಸ್ಸರ್ಗಃ

॥ ಶ್ರೀರಾಮದಾಸ ಉವಾಚ ॥

ಶೃಣು ಶಿಷ್ಯ ವದಾಮ್ಯದ್ಯ ರಾಮರಾಜ್ಞಾ ಶುಭಾ ವಹಾ ।
ದಿನಚರ್ಯಾ ರಾಜ್ಯಕಾಲೇ ಕೃತಾ ಲೋಕಾರ್ನ್ ಹಿ ಶಿಕ್ಷಿತುಂ ॥ ೧ ॥

ಪ್ರಭಾತೇ ಗಾಯಕೈರ್ಗೀತೈರ್ಬೋಧಿತೋ ರಘುನಂದನಃ ।
ನವವಾದ್ಯನಿನಾದಾಂಶ್ಚ ಸುಖಂ ಶುಶ್ರಾವ ಸೀತಯಾ ॥ ೨ ॥

ತತೋ ಧ್ಯಾತ್ವಾ ಶಿವಂ ದೇವೀಂ ಗುರುಂ ದಶರಥಂ ಸುರಾನ್ ।
ಪುಣ್ಯತೀರ್ಥಾನಿ ಮಾತೃಶ್ಚ ದೇವತಾಯತನಾನಿ ಚ ॥ ೩ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ಹತ್ತೊಂಬತ್ತನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಎಲೈ ಶಿಷ್ಯನೇ ! ರಾಮನು ಲೋಕದ ಜನರಿಗೆ ತೋರಿಸಿ ಆದರಂತೆ ಅವರು ನಡೆದುಕೊಳ್ಳಲೆಂದು ಯಾವ ರೀತಿಯಾಗಿ ದಿನಚರ್ಯಗಳನ್ನು ನಡೆಸುತ್ತಿದ್ದನೆಂಬುದನ್ನು ವಿವರಿಸುತ್ತೇವೆ.

೨. ಬೆಳಗಿನ ಹೊತ್ತಿನಲ್ಲಿ ಸ್ತುತಿಪಾಠಕರ ಗಾನವನ್ನು ಕೇಳಿ ಎಚ್ಚೆತ್ತು ಕೊಂಡು ಏಳುತ್ತಿದ್ದನು. ಆಗ ಸೀತೆಯೊಡನೆ ಅಲ್ಲಿ ನಡೆಯುತ್ತಿದ್ದ ನವವಾದ್ಯಗಳ ಮಧುರ ಸ್ವರವನ್ನು ಕೇಳುತ್ತಿದ್ದನು.

೩–೪. ಅನಂತರ ಆತನು ಶಿವನನ್ನೂ ಪಾರ್ವತಿಯನ್ನೂ ಗುರುವನ್ನೂ ಧಶರಥನನ್ನೂ ದೇವತೆಗಳನ್ನೂ ಪುಣ್ಯತೀರ್ಥಗಳನ್ನೂ, ತಾಯಿಯರನ್ನೂ,

ನಾನಾಕ್ಷೇತ್ರಾಣ್ಯರಣ್ಯಾನಿ ಪರ್ವತಾನ್ ಸಾಗರಾಂಸ್ತಥಾ ।
ನದಾಂಶ್ಚೈವ ನದೀಃ ಪುಣ್ಯಾಸ್ತತಸ್ಸೀತಾಂ ದದರ್ಶ ಸಃ ॥ ೪ ॥

ಪ್ರಣಮಂತೀಂ ಸಮುತ್ಥಾಪ್ಯ ಧೃತ್ವಾ ಸೀತಾಕರಂ ಪ್ರಭುಃ ।
ಮಂಚಕಾದವತೀರ್ಯಾಥ ದಾಸೀಭಿಃ ಪರಿವೇಷ್ಟಿತಃ ॥ ೫ ॥

ಬಹಿಃ ಕಕ್ಷ್ಯಾಂ ಶನೈರ್ಗತ್ವಾ ಸಂಪಾದ್ಯಾವಶ್ಯಕಂ ಪ್ರಭುಃ ।
ಯಯೌ ಪುನಸ್ಸ ದಾಸೀಭಿಃ ಕ್ರೀಡಾಶಾಲಾಂ ರಘೂತ್ತಮಃ ॥ ೬ ॥

ಕೃತ್ವಾ ಶೌಚವಿಧಿಂ ರಾಮೋ ದಂತಶುದ್ಧಿಂ ಚಕಾರ ಸಃ ।
ತತಃ ಸ್ನಾನಂ ಕದಾ ಗೇಹೇ ಸರಯ್ವಾಂ ವಾ ಕರೋತ್ಪ್ರಭುಃ ॥ ೭ ॥

ಆರುಹ್ಯ ಶಿಬಿಕಾಯಾಂ ಸಃ ಭೂಸುರೈರ್ಯಾನಸಂಸ್ಥಿತೈಃ ।
ವೇಷ್ಟಿತಸ್ಸರಯೂಂ ಗತ್ವಾ ಯಾನಂ ಮುಕ್ತ್ವಾ ತಟೇಪ್ರಭುಃ ॥ ೮ ॥

ದೇವಸ್ಥಾನಗಳನ್ನೂ, ಅನೇಕವಾದ ಕ್ಷೇತ್ರಗಳನ್ನೂ, ಅರಣ್ಯಗಳನ್ನೂ, ಪರ್ವತಗಳನ್ನೂ ಸಮುದ್ರಗಳನ್ನೂ, ನದಿಗಳನ್ನೂ, ಧ್ಯಾನಿಸುತ್ತಿದ್ದನು.

೫. ಅನಂತರ ಸೀತೆಯನ್ನು ನೋಡುತ್ತಿದ್ದನು. ಆಕೆಯು ನಮಸ್ಕರಿಸುವಳು. ಆಗ ಅವಳನ್ನು ಕೈಹಿಡಿದು ಮೇಲಕ್ಕೆತ್ತುತ್ತಿದ್ದನು. ಅನಂತರ ಮಂಚದಿಂದಿಳಿಯುತ್ತಿದ್ದನು. ಒಡನೆಯೇ ದಾಸಿಯರೆಲ್ಲರೂ ಬರುತ್ತಾ ಇದ್ದರು.

೬. ಅನಂತರ ಮನೆಯಿಂದ ಹೊರಗೆ ಹೋಗಿ ಅಲ್ಲಿ ಜಲಬಾಧೆ ಮಲಬಾಧೆಗಳನ್ನು ವಿಸರ್ಜಿಸಿ ದಾಸಿಯರೊಡನೆ ಕ್ರೀಡಾಶಾಲೆಗೆ ಬರುತ್ತಿದ್ದನು.

೭. ಅಲ್ಲಿ ಶೌಚವನ್ನು ಶಾಸ್ತ್ರದಲ್ಲಿ ಹೇಳಿರುವಂತೆ ಮಾಡಿಕೊಳ್ಳುತ್ತಿದ್ದನು. ಅನಂತರ ಹಲ್ಲು ನಾಲಿಗೆಗಳನ್ನು ಉಜ್ಜಿ ದಂತಶುದ್ಧಿಯನ್ನು ಮಾಡಿಕೊಳ್ಳುತ್ತಿದ್ದನು. ಅನಂತರ ಒಂದೊಂದುಸಾರಿ ಮನೆಯಲ್ಲಿಯೂ ಒಂದೊಂದುಸಾರಿ ನದಿಯಲ್ಲಿಯೂ ಸ್ನಾನಮಾಡುತ್ತಿದ್ದನು.

೮. ಸರಯೂನದಿಯಲ್ಲಿ ಸ್ನಾನಮಾಡುತ್ತಿರುವಾಗ ಪಲ್ಲಕ್ಕಿಯಲ್ಲಿ ಕುಳಿತು ನದಿಗೆ ಹೋಗುತ್ತಿದ್ದನು. ಅವನ ಜೊತೆಯಲ್ಲಿ ಅನೇಕಜನ ಬ್ರಾಹ್ಮಣರೂ ಕೂಡ ಯಾನದಲ್ಲಿ ಕುಳಿತುಕೊಂಡು ಹೋಗುತ್ತಿದ್ದರು. ಆ ನದಿಯ ಬಳಿಗೆ ಹೋದಮೇಲೆ ಅದರ ದಡದಲ್ಲಿ ಪಲ್ಲಕ್ಕಿಯಿಂದ ಇಳಿಯುವನು.

ಪದ್ಭ್ಯಾಮೇವ ಶನೈರ್ಗತ್ವಾ ಸರಯೂಂ ಪ್ರಣಿಪತ್ಯ ಚ ।
ಸರಯ್ವಾಃ ಪುರತಃ ಸ್ಥಾಪ್ಯ ನಾರಿಕೇಳಂ ಸದಕ್ಷಿಣಂ ॥ ೯ ॥

ಸತಾಂಬೂಲಂ ಪುನರ್ನತ್ವಾ ಸ್ತುತ್ವಾ ಸಮ್ಯಕ್ಪ್ರಸಾದ್ಯ ಚ ।
ಸ್ನಾತ್ವಾ ಯಥಾ ವಿಧಾನೇನ ಬ್ರಹ್ಮಘೋಷಪುರಸ್ಸರಂ ॥ ೧೦ ॥

ಪ್ರಾತಸ್ಸಂಧ್ಯಾಂ ತತಃ ಕೃತ್ವಾ ಬ್ರಹ್ಮಯಜ್ಞಂ ವಿಧಾಯ ಚ ।
ದತ್ವಾ ದಾನಾನ್ಯನೇಕಾನಿ ಯಯೌ ಗೇಹಂ ರಥೇನ ಹಿ ॥ ೧೧ ॥

ರುಕ್ಮಬಂಧೈರ್ವೇಷ್ಟಿತೇನ ರೌಪ್ಯರತ್ನಮಯೇನ ಚ ।
ಸುಸ್ನಾತಸೂತತುರಗಯುಕ್ತೇನ ಧ್ವನಿತೇನ ಚ ॥ ೧೨ ॥

ಹುತ್ವಾ ಹೋಮಂ ವಿಧಾನೇನ ಶಿವಂ ಸಂಪೂಜ್ಯ ಸಾದರಂ ।
ಕೌಸಲ್ಯಾಂ ಚ ಸುಮಿತ್ರಾಂ ಚ ಕೈಕೇಯೀಂ ಚ ಸಮರ್ಚಯೇತ್ ॥ ೧೩ ॥

೯-೧೦. ಮುಂದಕ್ಕೆ ಕಾಲಿನಿಂದಲೇ ನಡೆದುಹೋಗಿ ಆ ಸರಯೂನದಿಗೆ ನಮಸ್ಕರಿಸುತ್ತಿದ್ದನು. ಸರಯೂನದಿಯ ಮುಂದೆ ತೆಂಗಿನಕಾಯನ್ನು ದಕ್ಷಿಣೆ ತಾಂಬೂಲವನ್ನೂ ಇಟ್ಟು ಮತ್ತೆ ನಮಸ್ಕರಿಸುತ್ತಿದ್ದನು. ಅನಂತರ ಆ ನದಿಯನ್ನು ಸ್ತುತಿಸುತ್ತಿದ್ದನು. ಅನಂತರ ವೇದವನ್ನು ಹೇಳುತ್ತ ಸ್ನಾನಮಾಡುತ್ತಿದ್ದನು.

೧೧. ಅನಂತರ ಪ್ರಾತಃಕಾಲದ ಸಂಧ್ಯಾವಂದನೆಯನ್ನು ಮಾಡಿಕೊಂಡು ಬ್ರಹ್ಮಯಜ್ಞವನ್ನು ಮಾಡುತ್ತಿದ್ದನು. ಅಲ್ಲಿ ಬ್ರಾಹ್ಮಣರಿಗೆ ಅನೇಕವಾಗಿ ದಾನಗಳನ್ನು ಕೊಟ್ಟು ರಥದಲ್ಲಿ ಕುಳಿತು ಮನೆಗೆ ಬರುತ್ತಿದ್ದನು.

೧೨. ಆ ರಥಕ್ಕೆ ಚಿನ್ನದ ಕಟ್ಟುಗಳನ್ನು ಹಾಕಿದ್ದರು. ಅಲ್ಲಲ್ಲಿಯೇ ಬೆಳ್ಳಿಯಲ್ಲಿ ನಕಾಸಿಯನ್ನು ಮಾಡಿ ರತ್ನಗಳನ್ನು ಅಳವಡಿಸಿದ್ದರು. ಅದಕ್ಕೂ ನೀರನ್ನು ಹಾಕಿ ಸ್ನಾನಮಾಡಿಸುತ್ತಿದ್ದರು. ಸೂತನೂ ಸ್ನಾನಮಾಡಿರುತ್ತಿದ್ದನು. ಕುದುರೆಗಳನ್ನು ತೊಳೆದು ಸ್ನಾನಮಾಡಿಸುತ್ತಿದ್ದರು. ಇಂತಹ ರಥದಲ್ಲಿ ಕುಳಿತು ಮನೆಗೆ ಮತ್ತೆ ಬರುತ್ತಿದ್ದನು.

೧೩. ಮನೆಗೆ ಬಂದ ಮೇಲೆ ಅಗ್ನಿಹೋತ್ರವನ್ನು ಮಾಡುತ್ತಿದ್ದನು. ಅನಂತರ ಶಿವಪೂಜೆಯನ್ನು ಮಾಡುತ್ತಿದ್ದನು. ಅನಂತರ ತಾಯಿಯರಾದ ಕೌಸಲ್ಯೆ, ಸುಮಿತ್ರೆ, ಕೈಕೇಯರಿಗೆ ನಮಸ್ಕರಿಸಿ ಪೂಜಿಸುತ್ತಿದ್ದನು.

ಕಾಮಧೇನುಂ ಕಲ್ಪವೃಕ್ಷಂ ಪಾರಿಜಾತಂ ತು ಪುಷ್ಪಕಂ ।
ಚಿಂತಾಮಣಿಂ ಕೌಸ್ತುಭಂ ಚ ಪೂಜ್ಯ ಸೀತಾಯುತೋ ಹರಿಃ ॥ ೧೪ ॥

ಮುನಿವೃಕ್ಷಂ ವಟಂ ಬಿಲ್ವಮಶ್ವತ್ಥಂ ತುಲಸೀಂ ತಥಾ ।
ಶಮೀಂ ಪಲಾಶಂ ದೂರ್ವಾಂ ಚ ರಾಜವೃಕ್ಷಂ ಪ್ರಪೂಜಯತ್ ॥ ೧೫ ॥

ಭಾನುಂ ಸಂಪೂಜ್ಯ ತಂ ನತ್ವಾ ಸಂಪೂಜ್ಯ ದ್ವಾರದೇವತಾಂ ।
ಗೋವೃಷಾಶ್ವ ವಾರಣಾಂಶ್ಚ ರಥಂ ಶಸ್ತ್ರಾಣಿ ಭೂಸುರಾನ್ ॥ ೧೬ ॥

ಕೋಷ್ಠಾಗಾರಾಣಿ ಕೋಶಾನಿ ಪಾಕಶಾಲಾಂ ಪ್ರಪೂಜಯತ್ ।
ಸಿಂಹಾಸನಂ ತಥಾ ಛತ್ರಂ ಚಾಮರೇ ವ್ಯಜನೇ ತಥಾ ॥ ೧೭ ॥

ಸಂಪೂಜ್ಯ ಮುಕುಟಂ ರಾಮಃ ಪೂಜಯಾಮಾಸ ಮಂಚಕಂ ।
ದೀಪಿಕಾಂ ದರ್ಪಣಂ ಪೂಜ್ಯ ಪುಸ್ತಕಾದೀನ್ ಪ್ರಪೂಜಯತ್ ॥ ೧೮ ॥

---

೧೪. ಅನಂತರ ಕಾಮಧೇನು, ಕಲ್ಪವೃಕ್ಷ, ಪಾರಿಜಾತ, ಪುಷ್ಪಕ, ಚಿಂತಾಮಣಿ, ಕೌಸ್ತುಭ ಇವನ್ನು ಪೂಜಿಸುತ್ತಿದ್ದನು. ಪೂಜೆಮಾಡುವಾಗ ಸೀತೆಯೊಡನೆ ಪೂಜಿಸುತ್ತ ಇದ್ದನು.

೧೫. ಅಗಸೆಮರ, ಆಲದಮರ, ಬಿಲ್ವಪತ್ರೆಯ ಮರ, ಅರಳಿಯಮರ, ತುಳಸಿ, ಬನ್ನಿಯಮರ, ಮುತ್ತುಗದಮರ, ಗರಿಕೆ, ರಾಜವೃಕ್ಷ ಇವನ್ನು ಪೂಜಿಸುತ್ತಿದ್ದನು.

೧೬-೧೭. ಅನಂತರ ಸೂರ್ಯನನ್ನು ಪೂಜಿಸಿ ಅವನಿಗೆ ನಮಸ್ಕರಿಸಿ, ದ್ವಾರದೇಶದಲ್ಲಿ ವಾಸ್ತುಪುರುಷನನ್ನಾರಾಧಿಸಿ ಗೋವು, ಗೂಳಿ, ಕುದುರೆ, ಆನೆ, ರಥ, ಶಸ್ತ್ರ, ಬ್ರಾಹ್ಮಣರು, ಭಂಡಾರ, ಕೊಟ್ಟಿಗೆ, ಪಾಕಾದಿಶಾಲೆಗಳು ಇವನ್ನು ಪೂಜಿಸಿ ಅನಂತರ ಸಿಂಹಾಸನವನ್ನೂ ಛತ್ರಿ, ಚಾಮರ, ವ್ಯಜನಗಳನ್ನೂ ಪೂಜಿಸುತ್ತಿದ್ದನು.

೧೮-೧೯. ಕಿರೀಟವನ್ನು ಪೂಜಿಸಿ, ಮಂಚವನ್ನು ಪೂಜಿಸುತ್ತಿದ್ದನು. ದೀಪ, ಕನ್ನಡಿ, ಪುಸ್ತಕಗಳನ್ನು ಪೂಜಿಸುತ್ತಿದ್ದನು. ಮೊದಲೇ ವಿಪ್ರರ ಜೊತೆಯಲ್ಲಿ

ಪುನಸ್ಸಂಪೂಜ್ಯ ಸ್ವಗುರುಂ ಪೂರ್ವಂ ವಿಪ್ರೇಷು ಪೂಜಿತಂ ।
ಉಚ್ಚಾಸನಸ್ಥಿತಂ ನತ್ವಾ ಕಥಾಂ ಶುಶ್ರಾವ ತನ್ಮುಖಾತ್ ॥ ೧೯ ॥

ಪುತ್ರಾಭ್ಯಾಂ ಬಂಧುಭಿಃ ಪತ್ನ್ಯಾ ಪಂಡಿತೈಃ ಪರಿವೇಷ್ಟಿತಃ ।
ತತಸ್ಸಂಪ್ರಾರ್ಥಿತೋ ರಾಮಸ್ಸೀತಯಾ ಸ ಮುಹುರ್ಮುಹುಃ ॥ ೨೦ ॥

ವಿಪ್ರಾದಿಭಿಶ್ಚೋಪಹಾರಂ ಚಕಾರ ಸ್ವಸ್ಥಮಾನಸಃ ।
ಕಾಮಧೇನೂದ್ಭವೈರನ್ನೈಃ ಕಲ್ಪವೃಕ್ಷಸಮುದ್ಭವೈಃ ॥ ೨೧ ॥

ಮಣಿದ್ವಯವಿನಿರ್ಮಿತೈಶ್ಚ ಮಹ್ಯಾ ಸೀತಾಕೃತೈರಪಿ ।
ತತೋ ಭುಕ್ತ್ವಾ ಹಿ ತಾಂಬೂಲಂ ಬಿಭ್ರದ್ವಾಸಾಂಸಿ ರಾಘವಃ ॥ ೨೨ ॥

ಬಧ್ವಾ ಕಟಿಂ ದಿವ್ಯವಸ್ತ್ರೈಃ ವಸ್ತ್ರಾಣ್ಯಪಿ ದಧಾರ ಸಃ ।
ಏತಸ್ಮಿನ್ನಂತರೇ ಪೂರ್ವಂ ಸಮಾಹೂತೋ ಯಯೌ ಭಿಷಕ್ ॥ ೨೩ ॥

ಪೂಜಿಸಿದ್ದ ಗುರುವನ್ನು ಮತ್ತೆ ಪೂಜಿಸುತ್ತಿದ್ದನು. ಅವನನ್ನು ಎತ್ತರವಾದ ಆಸನದಲ್ಲಿ ಕೂರಿಸಿ ಅವನ ಮುಖದಿಂದ ಪುರಾಣದ ಕಥೆಯನ್ನು ಕೇಳುತ್ತಿದ್ದನು.

೨೦. ಜೊತೆಯಲ್ಲಿ ಮಕ್ಕಳೂ, ತಮ್ಮಂದಿರೂ ಅವರ ಹೆಂಡತಿಯರೂ, ಪಂಡಿತರೂ, ಪುರಾಣಗಳನ್ನು ಕೇಳುತ್ತಿದ್ದರು. ಅನಂತರ ಸೀತೆಯು ರಾಮನನ್ನು ಉಪಹಾರಕ್ಕೆ ಪದೇ ಪದೇ ಪ್ರಾರ್ಥಿಸುತ್ತಿದ್ದಳು.

೨೧-೨೨. ಆಗ ಎದ್ದು ಬ್ರಾಹ್ಮಣರೊಡನೆಯೂ, ಬಂಧುಗಳೊಡನೆಯೂ, ಉಪಹಾರವನ್ನು ಮಾಡುತ್ತಿದ್ದನು. ಅನಂತರ ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ, ಕೌಸ್ತುಭಮಣಿ ಇವುಗಳಿಂದ ಉತ್ಪನ್ನವಾದ ಮತ್ತು ಸೀತೆಯು ತಾನೇ ಬೆಂಕಿಯಲ್ಲಿ ಪಾಕಮಾಡಿದ ವಿಧವಿಧವಾದ ಪಕ್ವಾನ್ನಗಳನ್ನು ಊಟಮಾಡಿ ಅನಂತರ ತಾಂಬೂಲವನ್ನು ಹಾಕಿಕೊಂಡು ಸರಿಯಾದ ಬಟ್ಟೆಗಳನ್ನು ಉಟ್ಟುಕೊಳ್ಳುತ್ತಿದ್ದನು.

೨೩-೨೪. ದಿವ್ಯವಾದ ವಸ್ತ್ರಗಳನ್ನು ಸೊಂಟಕ್ಕೆ ಬಿಗಿದುಕೊಂಡು ಶಸ್ತ್ರವನ್ನು ಕಟ್ಟಿಕೊಳ್ಳುತ್ತಿದ್ದನು. ಇಷ್ಟರವೇಳೆಗೆ ವೈದ್ಯನಿಗೆ ಹೇಳಿ ಕಳುಹಿಸಿ ಅವನನ್ನು

ಗಣಕೋಪಿ ರಾಘವೇಣ ಪ್ರತ್ಯುದ್ಗಮ್ಯಾತಿಮಾನಿತೌ ।
ನಿಷೇದತೂ ರಾಘವಾಗ್ರೇ ಪೂಜಯಾಮಾಸ ತೌ ಪ್ರಭುಃ ॥ ೨೪ ॥

ತತೋ ಭಿಷಕ್ ಸುಖಂ ಸ್ಥಿತ್ವಾ ರಾಘವಾಗ್ರೇ ತದಾಜ್ಞಯಾ ।
ದದರ್ಶ ದಕ್ಷಿಣಕರೇ ನಾಡೀಂ ರಾಮಸ್ಯ ಸಾದರಂ ॥ ೨೫ ॥

ರತ್ನಮುದ್ರಾಕಂಕಣಾದ್ಯೈಃ ಶೋಭಿತಸ್ಯೋಜ್ಜ್ವಲಸ್ಯ ಚ ।
ಕರಸ್ಯಾಂಗುಷ್ಠಮೂಲೇ ಯಾ ಧಮನೀ ಜೀವಸಾಕ್ಷಿಣೀ ॥ ೨೬ ॥

ತಚ್ಚೇಷ್ಟಯಾ ಸುಖಂ ದುಃಖಂ ಜ್ಞಾಯತೇ ಚ ಭಿಷಗ್ವರೈಃ ।
ಅತಸ್ತಾಂ ವೈದ್ಯವರ್ಯಸ್ಸ ಸೂಕ್ಷ್ಮಬುಧ್ಯಾ ವ್ಯಲೋಕಯತ್ ॥ ೨೭ ॥

ರಾಮಕರ್ಣೇ ವಿಹಸ್ಯಾಹ ರಾತ್ರಾವಾಚರಿತಶ್ಶ್ರಮಃ ।
ತದ್ವೈದ್ಯವಚನಂ ಶ್ರುತ್ವಾಽಕರೋದ್ರಾಮಃ ಸ್ಮಿತಾನನಂ ॥ ೨೮ ॥

ಕರೆಸಲು ಅವನು ಬರುತ್ತಿದ್ದನು. ಜೋಯಿಸನನ್ನು ಕರೆಸಲು ಅವನೂ ಬರುತ್ತಿದ್ದನು. ರಾಮನು ಅವರನ್ನು ಗೌರವಿಸಿ ಎದುರಿಗೆ ಕೂರಿಸಿಕೊಳ್ಳುತ್ತಿದ್ದನು.

೨೫. ವೈದ್ಯನು ರಾಮಾಜ್ಞೆಯಂತೆ ಅವನೆದುರಿಗೆ ಕುಳಿತುಕೊಂಡು ರತ್ನದ ಉಂಗುರ, ಕೈಬಳೆಗಳಿಂದ ಪ್ರಕಾಶಿಸುತ್ತಿರುವ ಆ ರಾಮನ ಬಲಗೈಯ್ಯನ್ನು ಹಿಡಿದು ನಾಡಿಯನ್ನು ಪರೀಕ್ಷಿಸುತ್ತಿದ್ದನು.

೨೬–೨೭. ಕೈಯ್ಯಿನ ಅಂಗುಷ್ಠದ ಮೂಲಭಾಗದಲ್ಲಿ ಮನುಷ್ಯನಿಗೆ ಜೀವದ ಸಾಕ್ಷಿಯಾಗಿರುವ ನಾಡಿಯನ್ನು ಹಿಡಿದು ನೋಡುತ್ತಿದ್ದನು. ಅದರ ಆಡುವಿಕೆಯಿಂದ ಆ ಪ್ರಾಣಿಯ ಸುಖದುಃಖಗಳು ವೈದ್ಯನಿಗೆ ತಿಳಿದುಬರುತ್ತವೆ. ಆದ್ದರಿಂದಲೇ ವೈದ್ಯರು ಅದನ್ನೇ ಸೂಕ್ಷ್ಮಬುದ್ಧಿಯಿಂದ ಪರೀಕ್ಷಿಸುತ್ತಾರೆ. ಮತ್ತು ಪರೀಕ್ಷಿಸಬೇಕು.

೨೮. ಆಗ ವೈದ್ಯನು ಪರೀಕ್ಷಿಸಿ ರಾಮನ ಕಿವಿಯಲ್ಲಿ ರಾತ್ರಿಯಲ್ಲಿ ಶ್ರಮಪಟ್ಟಿರುವಂತೆ ಕಾಣುತ್ತದೆ ಎಂದೆನ್ನುತ್ತಿದ್ದನು. ವೈದ್ಯನ ಈ ಮಾತನ್ನು ಕೇಳಿ ರಾಮನು ನಗುತ್ತಿದ್ದನು.

ತತೋ ವೈದ್ಯಾಯ ತಾಂಬೂಲಂ ದದೌ ರಾಮಸ್ಸದಕ್ಷಿಣಂ ।
ತತಸ್ಸಗಣಕಃ ಪ್ರಾಹ ವಿಸ್ತೀರ್ಯ ಸುಸ್ಫುಟಾಕ್ಷರಂ ।
ಪಂಚಾಂಗಪತ್ರಂ ಚಿತ್ರಂ ಚ ರಾಘವಾಗ್ರೇ ಸ್ಥಿತಸ್ಸುಧೀಃ ॥೨೯॥

ವಿಘ್ನೇಶ್ವರೋ ಬ್ರಹ್ಮಹರೀಶ್ವರಾಸ್ಸುರಾ ।
ಭಾನುಶ್ಶಶೀ ಭೂಮಿಸುತೋ ಬುಧಶ್ಶುಭಃ ॥
ಗುರುಶ್ಚ ಶುಕ್ರಶ್ಶನಿರಾಹುಕೇಶವಃ ।
ಸರ್ವೇ ಗ್ರಹಾ ಮಂಗಳದಾ ಭವಂತು ತೇ ॥ ೩೦ ॥

ಲಕ್ಷ್ಮೀಸ್ಸ್ಯಾದಚಲಾ ತಿಥಿಶ್ರವಣತೋ ವಾರಾತ್ತಥಾಯುಶ್ಚಿರಂ ।
ನಕ್ಷತ್ರಂ ಕೃತಪಾಪಸಂಚಯಹರಂ ಯೋಗೋ ವಿಯೋಗಾಪಹಃ ॥
ಸರ್ವಾರ್ಥಭೀಷ್ಟಕರಂ ತಥೈವ ಕರಣಂ ಪಂಚಾಂಗಮೇತತ್ ಸ್ಫುಟಂ ।
ಶ್ರೋತವ್ಯಂ ಪ್ರತಿವಾಸರಂ ದ್ವಿಜಮುಖಾತ್ ಶ್ರೇಯಸ್ಕರಂ ಸಗ್ರಹಂ ॥ ೩೧ ॥

---

೨೯. ಆ ವೈದ್ಯನಿಗೆ ದಕ್ಷಿಣೆ ತಾಂಬೂಲಗಳನ್ನು ಕೊಟ್ಟು ಕಳುಹಿಸುತ್ತಿದ್ದನು. ಆಮೇಲೆ ಜೋಯಿಸನು ಬರುತ್ತಿದ್ದನು. ಆ ಜೋಯಿಸನು ಸ್ಫುಟವಾದ ಅಕ್ಷರಗಳುಳ್ಳ ಪಂಚಾಂಗವನ್ನು ತೆಗೆದು ಇಂತೆಂದು ಹೇಳುತ್ತಿದ್ದನು.

೩೦. ರಾಮನ ಮುಂದೆ ಕುಳಿತುಕೊಂಡು ಆ ಪಂಚಾಂಗವನ್ನು ಬಿಚ್ಚಿ ಇಂತೆಂದು ಹೇಳುತ್ತಿದ್ದನು. ವಿಘ್ನೇಶ್ವರ, ಬ್ರಹ್ಮ ಹರಿ, ಈಶ್ವರ, ದೇವತೆಗಳು, ಸೂರ್ಯ, ಚಂದ್ರ, ಅಂಗಾರಕ, ಬುಧ, ಗುರು, ಶುಕ್ರ, ಶನಿ, ರಾಹು, ಕೇತು, ಎಲ್ಲಾ ಗ್ರಹಗಳೂ ಕೂಡ ನಿನಗೆ ಮಂಗಳವನ್ನು ಕೊಡಲಿ.

೩೧. ತಿಥಿಯನ್ನು ಕೇಳುವುದರಿಂದ ಲಕ್ಷ್ಮಿಯು ಸ್ಥಿರವಾಗಿರುವಳು. ವಾರವನ್ನು ಕೇಳುವುದರಿಂದ ದೀರ್ಘಾಯುಸ್ಸು ಉಂಟಾಗುವುದು. ನಕ್ಷತ್ರವನ್ನು ಕೇಳುವುದರಿಂದ ಮಾಡಿದ ಪಾಪಗಳೆಲ್ಲವೂ ಹೋಗುತ್ತವೆ. ಯೋಗವನ್ನು ಕೇಳುವುದರಿಂದ ವಿಯೋಗವು ಉಂಟಾಗುವುದಿಲ್ಲ. ಕರಣವನ್ನು ಕೇಳುವುದರಿಂದ ಎಲ್ಲಾ ಇಷ್ಟಾರ್ಥಗಳೂ ಲಭಿಸುತ್ತವೆ. ಆದ್ದರಿಂದ ಈ ಪಂಚಾಂಗವನ್ನು ಪ್ರತಿದಿನದಲ್ಲಿಯೂ ಬ್ರಾಹ್ಮಣನ ಮುಖದಿಂದ ಕೇಳುತ್ತಿರಬೇಕು. ಇದು ಬಹು ಶ್ರೇಯಸ್ಕರವಾದುದು.

ಸ್ವಸ್ತಿಶ್ರೀ ರಾಘವೇಂದ್ರಾಸ್ತಿ ತಿಥಿಶ್ಚ ದಶಮೀ ಸಿತಾ ।
ಭಾನುವಾರಂ ಸುನಕ್ಷತ್ರಂ ಪುಷ್ಯಾಖ್ಯಂ ತ್ವದ್ಯ ವರ್ತತೇ ॥ ೩೨ ॥

ಐಂದ್ರಯೋಗೋ ಮಹಾನದ್ಯ ಬವಾಖ್ಯಂ ಕರಣಂ ಶುಭಂ ।
ಕರ್ಕಸ್ಥಿತೋದ್ಯ ಚಂದ್ರೋಸ್ತಿ ದ್ವಿತೀಯಸ್ತೇ ರಘೂತ್ತಮ ॥ ೩೩ ॥

ಮಾಸೋಯಂ ಚೈತ್ರಮಾಸೋಸ್ತಿ ವಸಂತಾಖ್ಯಋತುಸ್ತ್ವಯಂ ।
ಸುಖಂ ಕುರುಷ್ವ ರಾಜ್ಯಂ ತ್ವಂ ಚಿರಂ ತಿಷ್ಠಾವನೀತಲೇ ॥ ೩೪ ॥

ಸರ್ವೇಪಿ ಸುಖಿನಸ್ಸಂತು ಸರ್ವೇ ಸಂತು ನಿರಾಪದಾಃ ।
ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿದ್ದುಃಖಮಾಪ್ನುಯಾತ್ ॥ ೩೫ ॥

ಏವಂ ಜ್ಯೋತಿರ್ವಿದಾ ಗೀತಂ ಪಂಚಾಂಗಂ ರಘುನಂದನಃ ।
ಶ್ರುತ್ವಾ ತಂ ದಕ್ಷಿಣಾಂ ದತ್ವಾ ಸತಾಂಬೂಲಂ ನನಾಮ ಸಃ ॥ ೩೬ ॥

---

೩೨. ಎಲೈ ರಾಘವನೇ! ನಿನಗೆ ಮಂಗಳವಾಗಲಿ. ಈ ದಿನವು ಶುಭವಾಗಿರುವುದು. ಈದಿನ ಶುದ್ಧ ದಶಮಿಯು. ಭಾನುವಾರವು. ನಕ್ಷತ್ರವು ಪುಷ್ಯನಕ್ಷತ್ರವು. ಬಹು ಉತ್ತಮವಾದುದು.

೩೩. ಐಂದ್ರಯೋಗವಿರುವುದು ಒಳ್ಳೆಯದು. ಬವವೆಂಬ ಕರಣವು ಶುಭವಾದುದು. ಈ ದಿನ ಕರ್ಕಾಟಕದಲ್ಲಿ ಚಂದ್ರನಿದ್ದಾನೆ. ನಿನಗೆ ಅದು ಧನಸ್ಥಾನವಾಗಿರುವುದು.

೩೪-೩೫. ಇದು ಚೈತ್ರಮಾಸವು. ವಸಂತಋತುವು. ನೀನು ಸುಖವಾಗಿ ರಾಜ್ಯಭಾರಮಾಡುತ್ತ ಭೂಮಿಯಲ್ಲಿ ಬಹುಕಾಲದವರೆಗೂ ಇರು. ಎಲ್ಲರೂ ಸುಖಿಗಳಾಗಲಿ. ಎಲ್ಲರೂ ರೋಗವನ್ನು ಹೊಂದದಿರಲಿ. ಆಪತ್ತನ್ನು ಹೊಂದದಿರಲಿ. ಎಲ್ಲರೂ ಮಂಗಳಗಳನ್ನು ನೋಡಲಿ. ಒಬ್ಬನೂ ದುಃಖಭಾಗಿಯಾಗಬೇಡ.

೩೬. ಈ ರೀತಿಯಾಗಿ ಜೋಯಿಸನು ಹೇಳಿದ ಪಂಚಾಂಗವನ್ನು ರಾಮನು ಕೇಳಿ ಅವನಿಗೆ ದಕ್ಷಿಣೆ ತಾಂಬೂಲವನ್ನು ಕೊಟ್ಟು ನಮಸ್ಕರಿಸುತ್ತಿದ್ದನು.

ತತೋ ರಾಮಂ ಯಯೌ ವೇಗಾನ್ಮಾಲಾಕಾರೋ ಮನೋಹರಾಃ ।
ರಾಮಾಗ್ರೇ ವಂಶಪಾತ್ರಸ್ಥಾಃ ಪುಷ್ಪಹಾರಾನ್ ನ್ಯವೇದಯತ್ ॥ ೩೭ ॥

ರಾಮಸ್ತಾನ್ ಸಕಲೇಭ್ಯಶ್ಚ ದತ್ವಾ ಬಿಭ್ರತ್ಸ್ವಯಂ ತತಃ ।
ಪುತ್ರಾಭ್ಯಾಮುವತಂಸಾಂಶ್ಚ ದತ್ವಾ ಬಿಭ್ರತ್ಸ್ವಯಂ ಕರೇ ॥ ೩೮ ॥

ಏತಸ್ಮಿನ್ನಂತರೇ ರಾಮಂ ನಾಪಿತಃ ಪ್ರಯಯೌ ಜವಾತ್ ।
ಮುಕುರಂ ದರ್ಶಯಾಮಾಸ ರುಕ್ಮಬಂಧನರಂಜಿತಂ ॥ ೩೯ ॥

ತತ್ರಾದರ್ಶೇ ದದರ್ಶಾಥ ಸ್ವಮುಖಂ ರಘುನಂದನಃ ।
ಚಂದ್ರೋಪಮಂ ಸುಸ್ಮಿತಂ ಚ ಕಂಜಲೋಚನಶೋಭಿತಂ ॥ ೪೦ ॥

ಋಜುನಾಸಂ ಮಾಂಸಲಂ ಚ ಶ್ಮಶ್ರುಯುಕ್ತಂ ಸುವರ್ತುಲಂ ।
ವರಕುಂಡಲಮುಕ್ತಾನಾಂ ವರದೀಪ್ತ್ಯಾತಿಭಾಸುರಂ ॥ ೪೧ ॥

---

೩೭. ಅನಂತರ ಹೂವಾಡಿಗನು ಮನೋಹರವಾದ ಮಾಲೆಗಳನ್ನು ಕಟ್ಟಿ ಅವನ್ನು ಬಿದುರಿನ ಬುಟ್ಟಿಯಲ್ಲಿಟ್ಟು ಬೇಗನೆ ತಂದು ಒಪ್ಪಿಸುತ್ತಿದ್ದನು.

೩೮-೩೯. ರಾಮನು ಆ ಹಾರಗಳನ್ನು ಎಲ್ಲರಿಗೂ ಕೊಟ್ಟು ತಾನೂ ಧರಿಸಿಕೊಳ್ಳುತ್ತಿದ್ದನು. ಮಕ್ಕಳಿಗೂ ಕೊಟ್ಟು ಅಲಂಕರಿಸುತ್ತಿದ್ದನು. ಇಷ್ಟರ ವೇಳೆಗೆ ಕ್ಷೌರಕನು ಬರುತ್ತಿದ್ದನು. ಅವನು ಚಿನ್ನದ ಕಟ್ಟನ್ನು ಹಾಕಿರುವ ಕನ್ನಡಿಯನ್ನು ತೋರಿಸುತ್ತಿದ್ದನು.

೪೦. ಆ ಕನ್ನಡಿಯಲ್ಲಿ ರಾಮನು ಚಂದ್ರನಂತಿರುವ ಮುಗುಳು ನಗೆಯುಳ್ಳ ಕಮಲದಂತಿರುವ ಕಣ್ಣುಗಳಿಂದ ಅಲಂಕೃತವಾದ ತನ್ನ ಮುಖವನ್ನು ನೋಡಿಕೊಳ್ಳುತ್ತಿದ್ದನು.

೪೧. ಮೂಗು ಡೊಂಕಿಲ್ಲದೆ ನೀಳವಾಗಿದ್ದಿತು. ಮುಖವು ಮಾಂಸದಿಂದ ಕೂಡಿ ದಪ್ಪವಾಗಿದ್ದಿತು. ಮೀಸೆಗಳಿದ್ದುವು. ದುಂಡಗಿದ್ದಿತು. ಕರ್ಣಾಭರಣ ದಲ್ಲಿರುವ ಮುತ್ತುಗಳ ಕಾಂತಿಯಿಂದ ಪ್ರಕಾಶಿಸುತ್ತಿದ್ದಿತು.

ಪ್ರೋಚ್ಚಗಂಡಸ್ಥಲಂ ಸುಭ್ರು ತ್ರಿವಳೀಫಾಲಮಂಡಿತಂ ।
ರುಕ್ಮರತ್ನಸಮುದ್ಭೂತಮುಕುಟೇನಾತಿಶೋಭಿತಂ　　　॥ ೪೨ ॥

ಏವಂ ಮುಖಂ ನಿರೀಕ್ಷ್ಯಾಥ ತುತೋಷ ನಿತರಾಂ ಪ್ರಭುಃ ।
ತತೋ ಯಯೌ ಧೂಪಪಾಣಿರ್ಧೂಪಂ ಸ್ಥಾಪ್ಯ ಪ್ರಭೋಃ ಪುರಃ ॥ ೪೩ ॥

ನತ್ವಾ ರಾಮಂ ದೂತಮಧ್ಯೇ ತಸ್ಥಿವಾನ್ ರಾಘವಾಗ್ರತಃ ।
ತತೋ ರಾಮಶ್ಶಿಬಿಕಾಯಾಂ ಸ್ಥಿತ್ವಾ ಗೇಹಾದ್ಬಹಿರ್ಯಯೌ　　　॥ ೪೪ ॥

ದದರ್ಶ ಮಾಗಧಾದೀಂಶ್ಚ ಬಹಿಃ ಕಕ್ಷ್ಯಸ್ಥಿತಾನ್ ಪ್ರಭುಃ ।
ತತಸ್ತೇ ಮಾಗಧಾ ರಾಮಂ ನತ್ವಾ ದೀರ್ಘಸ್ವರೇಣ ವೈ　　　॥ ೪೫ ॥

ಸೂರ್ಯವಂಶಭವಾನ್ ಸರ್ವಾನ್ ನೃಪಾನ್ ಸಂವರ್ಣಯಂಸ್ತದಾ ।
ತತಸ್ತೇ ವಂದಿನಸ್ಸರ್ವೇ ತುಷ್ಟುವೂ ರಘುನಂದನಂ　　　॥ ೪೬ ॥

---

೪೨. ಕಪೋಲವು ದಪ್ಪವಾಗಿದ್ದಿತು. ಎತ್ತರವಾಗಿದ್ದಿತು. ಹುಬ್ಬುಗಳು ಚೆನ್ನಾಗಿದ್ದುವು. ಹಣೆಯಲ್ಲಿ ಮೂರುಗೆರೆಗಳಿದ್ದುವು. ರತ್ನ ಚಿನ್ನಗಳಿಂದ ಅಲಂಕೃತ ವಾದ ಕಿರೀಟದಿಂದ ಶೋಭಿಸುತ್ತಿದ್ದಿತು.

೪೩–೪೪. ಈ ರೀತಿಯಾಗಿರುವ ತನ್ನ ಮುಖವನ್ನು ಕನ್ನಡಿಯಲ್ಲಿ ನೋಡಿಕೊಂಡು ರಾಮನು ಬಹು ಸಂತೋಷಪಡುತ್ತಿದ್ದನು. ಅನಂತರ ಧೂಪದ ಹೊಗೆಯನ್ನು ತಂದು ಧೂಪದವನು ಶ್ರೀರಾಮನ ಎದುರಿಗೆ ಇಟ್ಟು ರಾಮನಿಗೆ ನಮಸ್ಕರಿಸಿ ಹಿಂದಕ್ಕೆ ಹೋಗಿ ದೂತರೊಳಗೆ ತಾನೊಬ್ಬ ದೂತನಂತೆ ನಿಂತುಕೊಳ್ಳುತ್ತಿದ್ದನು. ಅನಂತರ ರಾಮನು ಪಲ್ಲಕ್ಕಿಯಲ್ಲಿ ಕುಳಿತು ಮನೆಯಿಂದ ಹೊರಗೆ ಹೋಗುತ್ತಿದ್ದನು.

೪೫–೪೬. ಹೊರಗಿನ ಅಂಗಳದಲ್ಲಿರುವ ವಂದಿಗಳನ್ನು ನೋಡುತ್ತಿದ್ದನು. ಆಗ ಆ ಮಾಗಧರು ರಾಮನನ್ನೂ ಸೂರ್ಯವಂಶದ ರಾಜರನ್ನೂ ಗಟ್ಟಿಯಾಗಿ ಕೂಗುತ್ತ ವರ್ಣಿಸಿ ಹೊಗಳುತ್ತಿದ್ದರು. ಅನಂತರ ಆ ರಾಮನನ್ನು ಬಗೆ ಬಗೆಯಾಗಿ ಹೊಗಳುತ್ತಾ ಇದ್ದರು.

ನಾನಾತತ್ಕೃತಚಾರಿತ್ರೈ ರಾವಣಾದಿವಧಾದಿಕೈಃ ।
ತತಸ್ತೇ ಚಾರಣಾ ಗಾನಂ ಪ್ರಚಕ್ರುರ್ಮುದಿತಾನನಾಃ ॥ ೪೭ ॥

ನಟಾ ವೇಶ್ಯಾ ನನೃತುಶ್ಚ ನಾನಾವಾದ್ಯಪುರಸ್ಸರಂ ।
ಅನ್ಯೇ ಚಕ್ರುರ್ವಿನೋದಾಂಶ್ಚ ಯೈಸ್ಸಂತುಷ್ಯೇತ್ಸ ರಾಘವಃ ॥ ೪೮ ॥

ತತೋ ನಿನೇದುರ್ವಾದ್ಯಾನಿ ನವನಾದ್ಯಸ್ವನಾ ಅಪಿ ।
ತತಸ್ತೃತೀಯಕಕ್ಷಾಯಾಂ ದದರ್ಶ ನೃಪಪನಂದನಃ ॥ ೪೯ ॥

ವಾರಣೇಂದ್ರಾನ್ ತುರಂಗಾಂಶ್ಚ ಶಿಬಿಕಾಶ್ಚ ರಥಾಂಸ್ತಥಾ ।
ನಾನಾಲಂಕಾರಯುಕ್ತಾಂಶ್ಚ ವರವಸ್ತ್ರೈಸ್ಸಮನ್ವಿತಾನ್ ॥ ೫೦ ॥

ತತಶ್ಚ ರಥಕಕ್ಷಾಯಾಂ ನೃಪಾನ್ ಪೌರಾನ್ಸುಹೃಜ್ಜನಾನ್ ।
ಸಮಾಗತಾನ್ ದರ್ಶನಾರ್ಥಂ ದದರ್ಶ ರಘುನಂದನಃ ॥ ೫೧ ॥

---

೪೭. ಆ ರಾಮನು ಮಾಡಿರುವ ರಾವಣನ ವಧೆಯೇ ಮುಂತಾದ ಚರಿತ್ರೆಗಳನ್ನು ಹೇಳುತ್ತಾ ವರ್ಣಿಸುವರು. ಅನಂತರ ಚಾರಣರು ಹೊಸ ಹೊಸದಾಗಿ ಗಾನವನ್ನು ಮಾಡುತ್ತಿದ್ದರು.

೪೮. ನಟರೂ. ಸೂಳೆಯರೂ ಅಲ್ಲಿ ನರ್ತನವನ್ನು ಮಾಡುತ್ತಿದ್ದರು. ಅನೇಕ ಬಗೆಯಾದ ವಾದ್ಯಗಳನ್ನು ಬಾರಿಸುತ್ತಿದ್ದರು. ಮತ್ತೆ ಕೆಲವರು ರಾಮನು ಸಂತೋಷಪಡುವ ರೀತಿಯಲ್ಲಿ ವಿನೋದಗಳನ್ನು ಮಾಡುತ್ತಿದ್ದರು.

೪೯–೫೦. ಅನಂತರ ಹೊಸ ಹೊಸ ರೀತಿಯಲ್ಲಿ ವಾದ್ಯಗಳನ್ನು ವಾದಿಸುತ್ತಿದ್ದರು. ಅನಂತರ ಮೂರನೆಯ ಅಂಗಳಕ್ಕೆ ಬರುತ್ತಿದ್ದನು. ಅಲ್ಲಿ ಉತ್ತಮವಾದ ಆನೆಗಳೂ, ಕುದುರೆಗಳೂ, ಪಲ್ಲಕ್ಕಿಗಳೂ, ರಥಗಳೂ, ಇರುತ್ತಿದ್ದುವು. ಅವೆಲ್ಲಕ್ಕೂ ಬಗೆಬಗೆಯಾಗಿ ಬಟ್ಟೆಗಳನ್ನು ಹೊದ್ದಿಸಿ ಒಡವೆಗಳಿಂದ ಅಲಂಕರಿಸಿರುತ್ತಿದ್ದರು. ಅವೆಲ್ಲವನ್ನೂ ಈ ಶ್ರೀರಾಮನು ನೋಡುವನು.

೫೧. ಅನಂತರ ನಾಲ್ಕನೆಯ ತೊಟ್ಟಿಯ ಅಂಗಳಕ್ಕೆ ಬರುತ್ತಿದ್ದನು. ಅಲ್ಲಿ ಸಾಮಂತರಾಜರೂ, ಸ್ನೇಹಿತರೂ, ಪಟ್ಟಣದ ಪ್ರಮುಖರೂ ಇರುತ್ತಿದ್ದರು. ಈ ರಾಮನ ದರ್ಶನಕ್ಕೆ ಬರುವವರು ಅವನನ್ನು ನಿರೀಕ್ಷಿಸುವ ಸ್ಥಳವಾಗಿದ್ದಿತು. ರಾಮನು ಅವರೆಲ್ಲರನ್ನೂ ನೋಡಿ ಮಾತನಾಡಿಸುತ್ತಾ ಇದ್ದನು.

ತತಃ ಪಂಚಮಕಕ್ಷಾಯಾಂ ಪುಷ್ಪಕಂ ಪುಷ್ಪವಾಟಿಕಾಃ ।
ದೂತಾನ್ದದರ್ಶ ಶ್ರೀರಾಮಶ್ಶಸ್ತ್ರಹಸ್ತಾನ್ ಸಹಸ್ರಶಃ ॥ ೫೨ ॥

ತತಸ್ಸ ಷಷ್ಠಕಕ್ಷಾಯಾಮಾಶ್ವಾರೂಢಾನ್ ಸಹಸ್ರಶಃ ।
ವೀರಾನ್ ದದರ್ಶ ಶ್ರೀರಾಮಃ ಪ್ರಬದ್ಧಕರಸಂಪುಟಾನ್ ॥ ೫೩ ॥

ತತಸ್ಸಪ್ತಮಕಕ್ಷಾಯಾಂ ಯಯೌ ರಾಮಸ್ಸಭಾಂ ಪ್ರತಿ ।
ಶಿಬಿಕಾಯಾಶ್ಚಾವತೀರ್ಯ ಶನೈಸ್ಸಿಂಹಾಸನಂ ಯಯೌ ॥ ೫೪ ॥

ಸವ್ಯಂ ಕೃತ್ವಾ ನಮಸ್ಕೃತ್ಯ ಸೋಪಾನೈಸ್ಸ ಶನೈಃ ಪ್ರಭುಃ ।
ಸಿಂಹಾಸನಮಾರುರೋಹ ವರಚ್ಛತ್ರಸುಶೋಭಿತಂ ॥ ೫೫ ॥

ದಧಾರ ಛತ್ರಂ ಸೌಮಿತ್ರಿಶ್ಚಾಮರಂ ಭರತಸ್ತದಾ ।
ಶತ್ರುಘ್ನೋ ವ್ಯಜನಂ ರಮ್ಯಂ ಪಾದುಕೇ ವಾಯುನಂದನಃ ॥ ೫೬ ॥

---

೫೨. ಅನಂತರ ಐದನೆಯ ತೊಟ್ಟಿಯ ಅಂಗಳಕ್ಕೆ ಬರುತ್ತಿದ್ದನು. ಅಲ್ಲಿ ಹೂದೋಟವೂ, ವಿಮಾನವೂ ಇರುತ್ತಿದ್ದುವು. ಅವುಗಳನ್ನು ನೋಡುತ್ತಿದ್ದನು. ಅಲ್ಲಿ ಅನೇಕ ಸಾವಿರಜನ ಶಸ್ತ್ರಪಾಣಿಗಳಾದ ದೂತರಿರುತ್ತಿದ್ದರು. ಅವರೆಲ್ಲರನ್ನೂ ನೋಡುತ್ತಿದ್ದನು.

೫೩. ಅನಂತರ ಆರನೆಯ ತೊಟ್ಟಿಯ ಅಂಗಳಕ್ಕೆ ಬರುತ್ತಿದ್ದನು. ಅಲ್ಲಿ ಕುದುರೆ ರಾಹುತರು ಕುದುರೆಯ ಮೇಲೆ ಕುಳಿತುಕೊಂಡು ಸಾವಿರಾರು ಜನರಿರುತ್ತಿದ್ದರು. ಅವರೆಲ್ಲರನ್ನೂ ರಾಮನು ಅಲ್ಲಿ ನೋಡುತ್ತಿದ್ದನು.

೫೪. ಅಲ್ಲಿಂದ ಏಳನೆಯ ತೊಟ್ಟಿಯ ಅಂಗಳಕ್ಕೆ ಹೋಗುವನು. ಅದೇ ರಾಜಸಭೆಯು ನಡೆಯುವ ಸ್ಥಳವು. ಅಲ್ಲಿ ಪಲ್ಲಕ್ಕಿಯಿಂದ ಇಳಿದು ನಿಧಾನವಾಗಿ ನಡೆದುಹೋಗುತ್ತಾ ಸಿಂಹಾಸನದ ಬಳಿಗೆ ಹೋಗುತ್ತಿದ್ದನು.

೫೫. ದಿವ್ಯವಾದ ಸೋಪಾನಗಳಿಂದಲೂ, ಛತ್ರಿಯಿಂದಲೂ, ರಮ್ಯವಾಗಿರುವ ಆ ಸಿಂಹಾಸನವನ್ನು ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಸೋಪಾನದ ಮೇಲೆ ನಿಧಾನವಾಗಿ ಹೋಗಿ ಅದರ ಮೇಲೆ ಕುಳಿತುಕೊಳ್ಳುತ್ತಿದ್ದನು.

೫೬. ಸೌಮಿತ್ರಿಯು ಛತ್ರವನ್ನೂ, ಭರತನು ಚಾಮರವನ್ನೂ, ಶತ್ರುಘ್ನನು ವ್ಯಜನವನ್ನೂ, ವಾಯುನಂದನನಾದ ಹನುಮಂತನು ಪಾದುಕೆಗಳನ್ನೂ ಹಿಡಿದಿರುತ್ತಿದ್ದರು.

ಸುಗ್ರೀವೋ ಜಲಪಾತ್ರಂ ಚ ವರಾದರ್ಶಂ ವಿಭೀಷಣಃ |
ದಧಾರ ಹಸ್ತೇ ತಾಂಬೂಲಪಾತ್ರಂ ಸ ವಾಲಿನಂದನಃ || ೫೭ ||

ವಸ್ತ್ರಕೋಶಂ ಜಾಂಬವಾಂಶ್ಚ ದಧಾರ ವೇಗವತ್ತರಃ |
ತಸ್ಥೌ ಸಿಂಹಾಸನೇ ರಾಮಸ್ಸ ಪೃಷ್ಠ್ಯಂಕೋಪಬರ್ಹಣಃ || ೫೮ ||

ತಸ್ಥೌ ಪೃಷ್ಠೇ ಲಕ್ಷ್ಮಣಶ್ಚ ಭರತಸ್ಸವ್ಯಪಾರ್ಶ್ವಕೇ |
ಶತ್ರುಘ್ನೋಽಸೌ ವಾಮಪಾರ್ಶ್ವೇ ಪುರತೋ ವಾಯುನಂದನಃ || ೫೯ ||

ವಾಯವ್ಯಕೋಣೇ ರಾಮಸ್ಯ ಸುಗ್ರೀವಸ್ಸಂಸ್ಥಿತೋಽಭವತ್ |
ಈಶಾನ್ಯಾಂ ರಾಕ್ಷಸೇಂದ್ರೋಽಸಾವಾಗ್ನೇಯ್ಯಾಮಂಗದಃ ಸ್ಥಿತಃ || ೬೦ ||

ನೈಋತ್ಯಾಂ ಜಾಂಬವಾಂಶ್ಚಾಪಿ ಪೌರಾಸ್ಸರ್ವೇ ಸಮಂತತಃ |
ರಾಘವಾಗ್ರೇ ನೃಪಾಸ್ಸರ್ವೇ ಸ್ಥಿತಾಸ್ಸಂಬದ್ಧಪಾಣಯಃ || ೬೧ ||

---

೫೭. ಸುಗ್ರೀವನು ನೀರಿನ ಕಲಶವನ್ನೂ, ವಿಭೀಷಣನು ಕನ್ನಡಿಯನ್ನೂ, ವಾಲಿನಂದನನಾದ ಅಂಗದನು ತಾಂಬೂಲ ಪಾತ್ರೆಯನ್ನೂ, ಹಿಡಿದಿರುತ್ತಿದ್ದರು.

೫೮. ಜಾಂಬವಂತನು ವಸ್ತ್ರಗಳ ಪೆಟ್ಟಿಗೆಯನ್ನೂ ಹಿಡಿದಿರುತ್ತಿದ್ದನು. ಈ ರೀತಿಯಾಗಿ ಅವರೆಲ್ಲರೂ ಹಿಡಿದಿರುತ್ತಿರಲು ಶ್ರೀರಾಮನು ಹಿಂದಕ್ಕೂ ಮುಂದಕ್ಕೂ, ಅಕ್ಕಪಕ್ಕಗಳಿಗೂ ದಿಂಬುಗಳಿರುವ ಕೆಳಗೆ ಒಳ್ಳೆಯ ಬಟ್ಟೆಯನ್ನು ಹಾಸಿರುವ ಆ ಸಿಂಹಾಸನದಲ್ಲಿ ಕುಳಿತುಕೊಳ್ಳುತ್ತಿದ್ದನು.

೫೯–೬೧. ಆ ಸಿಂಹಾಸನದ ಹಿಂದೆ ಲಕ್ಷ್ಮಣನೂ, ಎಡಗಡೆಯಲ್ಲಿ ಭರತನೂ ಬಲಗಡೆಯಲ್ಲಿ ಶತ್ರುಘ್ನನೂ, ಎದುರಿನಲ್ಲಿ ಹನುಮಂತನೂ, ವಾಯುವ್ಯದಲ್ಲಿ ಸುಗ್ರೀವನೂ, ಈಶಾನ್ಯದಲ್ಲಿ ರಾಕ್ಷಸೇಂದ್ರನಾದ ವಿಭೀಷಣನೂ, ಆಗ್ನೇಯದಲ್ಲಿ ಅಂಗದನೂ, ನೈಋತ್ಯದಲ್ಲಿ ಜಾಂಬವನೂ ಉಳಿದ ಪ್ರಮುಖರಾದ ಪೌರರು ಸುತ್ತಲೂ ಎದುರಿಗೆ ರಾಜರೆಲ್ಲರೂ ಕೈಮುಗಿದುಕೊಂಡು ಕುಳಿತುಕೊಳ್ಳುತ್ತಿದ್ದರು.

ಪಾರ್ಶ್ವಯೋಸ್ತೇ ರಾಘವಸ್ಯ ಪ್ರೋಚ್ಚಸ್ಥಾನೇ ಮುನೀಶ್ವರಾಃ ।
ಪುರತೋ ನನೃತುಸ್ಸರ್ವಾ ವಾರವೇಶ್ಯಾಸ್ಸಹಸ್ರಶಃ ॥ ೬೨ ॥

ತತೋ ವೀರಾಸ್ತತೋ ದೂತಾ ಸ್ಸಭಾಯಾಂ ಸಂಸ್ಥಿತಾಃ ಕ್ರಮಾತ್ ।
ನಿಷೇದುರ್ಮುನಯಸ್ಸರ್ವೇ ರಾಮಪುತ್ರೌ ನಿಷೇದತುಃ ॥ ೬೩ ॥

ರಾಮಮಿತ್ರಾ ನಿಷೇದುಸ್ತೇ ತಥಾ ರಾಮಾಜ್ಞಯಾ ನೃಪಾಃ ।
ಯೇ ಯೇ ಮುಖ್ಯಾ ನಿಷೇದುಸ್ತೇ ತಥಾ ಪೌರಾಃ ಸುಹೃಜ್ಜನಾಃ ॥ ೬೪ ॥

ಏಭ್ಯೋಽನ್ಯೇ ತೇ ಸ್ಥಿತಾ ಏವ ನ ನಿಷೇದುಃ ಪ್ರಭೋಃ ಪುರಃ ।
ತೇಷಾಂ ಮಧ್ಯೇ ರಾಮಚಂದ್ರಶ್ಶುಶುಭೇಽನುಪಮಸ್ತದಾ ॥ ೬೫ ॥

ಸೇವಕಾದ್ಯಾ ನ ನಿಷೇದುಃ ಸುಮಂತ್ರ ಏವ ತಸ್ಥಿವಾನ್ ।
ಏವಂ ಸ್ಥಿತ್ವಾ ಸಭಾಯಾಂ ಸ ಕೃತ್ವಾ ಕಾರ್ಯಾಣ್ಯನೇಕಶಃ ॥ ೬೬ ॥

೬೨-೬೩. ಆ ರಾಮನ ಪಕ್ಕಗಳಲ್ಲಿ ಮುನಿಗಳು ಎತ್ತರವಾದ ಆಸನದಲ್ಲಿ ಕುಳಿತಿರುತ್ತಿದ್ದರು. ಅವನ ಎದುರಿಗೆ ವಾರಸ್ತ್ರೀಯರು ಸಾವಿರಗಟ್ಟಲೆಯಲ್ಲಿ ನರ್ತನಮಾಡುತ್ತಿದ್ದರು. ಅನಂತರ ವೀರರೂ ಅವರಾದ ಮೇಲೆ ದೂತರೂ ಕ್ರಮವಾಗಿ ನಿಂತುಕೊಂಡಿರುತ್ತಿದ್ದರು. ರಾಮನು ಕುಳಿತುಕೊಂಡ ಮೇಲೆ ಮುನಿಗಳು ಕುಳಿತುಕೊಳ್ಳುತ್ತಿದ್ದರು. ಅನಂತರ ರಾಮನ ಮಕ್ಕಳು ಕುಳಿತುಕೊಳ್ಳುತ್ತಿದ್ದರು.

೬೪. ಅನಂತರ ರಾಮನ ಮಿತ್ರರು ಕುಳಿತುಕೊಳ್ಳುತ್ತಿದ್ದರು. ಅನಂತರ ರಾಮನ ಅಪ್ಪಣೆಯನ್ನು ಪಡೆದು ರಾಜರು ಕುಳಿತುಕೊಳ್ಳುತ್ತಿದ್ದರು. ಪಟ್ಟಣಿಗರಲ್ಲಿ ಮುಖ್ಯರಾದವರೂ, ಸ್ನೇಹಿತರೂ ಕುಳಿತುಕೊಳ್ಳುತ್ತಿದ್ದರು.

೬೫. ಇವರನ್ನು ಬಿಟ್ಟು ಉಳಿದವರೆಲ್ಲರೂ ಪ್ರಭುವಿನ ಎದುರಿನಲ್ಲಿ ನಿಂತಿರುತ್ತಿದ್ದರು. ಶ್ರೀರಾಮನು ಅವರ ಮಧ್ಯದಲ್ಲಿ ಕುಳಿತುಕೊಂಡು ಅದ್ವಿತೀಯನಾಗಿ ಪ್ರಕಾಶಿಸುತ್ತಿದ್ದನು.

೬೬-೬೭. ಸೇವಕರು ನಿಂತಿರುತ್ತಿದ್ದರು. ಸಭೆಯಲ್ಲಿ ಸುಮಂತ್ರನೂ ನಿಂತಿರುತ್ತಿದ್ದನು. ಸಭೆಯಲ್ಲಿ ಎಲ್ಲರೂ ಹೀಗಿರುತ್ತಿರಲು ಅನೇಕ ಕೆಲಸಗಳನ್ನು ಈ ರಾಮನು ಮಾಡುತ್ತಿದ್ದನು. ಅಲ್ಲದೆ ಬೇರೆಬೇರೆಯ ಕೆಲಸಗಳಲ್ಲ

ನಾನಾಕಾರ್ಯೇಷು ಬಂಧೂಂಶ್ಚ ಪುತ್ರಾನಾಜ್ಞಾಪ್ಯ ರಾಘವಃ ।
ದೃಷ್ಟ್ವಾ ನಾನಾಕೌತುಕಾನಿ ಪೂರ್ವವದ್ಗೃಹಮಾಯಯೌ ॥ ೬೭ ॥

ತದಾ ನಿನೇದುರ್ವಾದ್ಯಾನಿ ಗೋಮುಖಾದೀನ್ಯನೇಕಶಃ ।
ಶ್ರುತ್ವಾ ವಾದ್ಯನಿನಾದಾಂಶ್ಚ ಜಾನಕೀಸಂಭ್ರಮಾತ್ಪರಃ ॥ ೬೮ ॥

ಪ್ರತ್ಯುದ್ಗಮ್ಯ ತೋಯಹಸ್ತಾ ತತ್ಪ್ರತೀಕ್ಷಾಂ ಚಕಾರ ಸಾ ।
ರಾಮೋ ಹಿ ಪೂರ್ವವಲ್ಲೋಕಾನ್ ಸಪ್ತಕಕ್ಷಾಸ್ವನುಕ್ರಮಂ ॥ ೬೯ ॥

ಪ್ರವಿಶನ್ಸಕಲಾನಾಜ್ಞಾಂ ದದೌ ತಾಂಸ್ತಾಂಸ್ತ್ವತೋಷಯತ್ ।
ತತೋಽಗ್ರೇ ಬಂಧುಭಿರ್ಗೇಹಂ ಪುತ್ರಾಭ್ಯಾಂ ಸಂವಿವೇಶ ಸಃ ॥ ೭೦ ॥

ದದರ್ಶ ಜಾನಕೀಂ ರಾಮಃ ಪೀತಕೌಶೇಯವಾಸಸಾಂ ।
ಸಾಽಪಿ ರಾಮಂ ಯಯೌ ಸೀತಾ ಲಜ್ಜಯಾಽವನತಾನನಾ ॥ ೭೧ ॥

ತಮ್ಮಂದಿರನ್ನು ನಿಯಮಿಸಿ ಮಕ್ಕಳಿಗೂ ಕೆಲವು ಕೆಲಸಗಳನ್ನು ನಿಯಮಿಸು ತ್ತಿದ್ದನು. ಆ ಕೆಲಸವೆಲ್ಲವನ್ನೂ ಮಾಡಿಕೊಂಡು ಮತ್ತೆ ಹೊರಟು ಹಿಂದಿನಂತೆಯೇ ಮನೆಗೆ ಬರುತ್ತಿದ್ದನು.

೬೮. ಅನಂತರ ಗೋಮುಖಗಳೂ, ವಾದ್ಯಗಳೂ, ಧ್ವನಿಮಾಡುತ್ತಿದ್ದುವು. ಈ ವಾದ್ಯಗಳ ಧ್ವನಿಯನ್ನು ಕೇಳಿ ಜಾನಕಿಯು ಆತುರದಿಂದ ಮತ್ತೆ ಎದುರಿಗೆ ಬಂದು ಆ ರಾಮನನ್ನು ಎದುರುಗೊಳ್ಳುತ್ತಿದ್ದಳು.

೬೯-೭೦. ಬರುವಾಗ ಕಾಲನ್ನು ತೊಳೆಯಲು ನೀರನ್ನು ತಂದು ಕಾದು ಕೊಂಡಿರುವಳು. ಅನಂತರ ರಾಮನು ಆ ಏಳು ತೊಟ್ಟಿಗಳಲ್ಲಿರುವವರನ್ನೂ ಗೌರವಿಸಿ ಅವರಿಗೆ ಯತೋಚಿತವಾಗಿ ಅಪ್ಪಣೆಯನ್ನು ಕೊಡುತ್ತಿದ್ದನು. ಅನಂತರ ತಮ್ಮಂದಿರೊಡನೆಯೂ, ಮಕ್ಕಳೊಡನೆಯೂ ಮನೆಗೆ ಬರುತ್ತಿದ್ದನು.

೭೧ ಅಲ್ಲಿ ರೇಷ್ಮೆಯ ಮಡಿಬಟ್ಟೆಯನ್ನುಟ್ಟುಕೊಂಡು ತನ್ನನ್ನೇ ನಿರೀಕ್ಷಿಸುತ್ತಿರುವ ಜಾನಕಿಯನ್ನು ನೋಡುತ್ತಿದ್ದನು. ಆ ಸೀತೆಯು ಲಜ್ಜೆಯಿಂದ ತಲೆಯನ್ನು ತಗ್ಗಿಸಿಕೊಂಡು ರಾಮನ ಬಳಿಗೆ ಬರುತ್ತಿದ್ದಳು.

ವಕ್ರನೇತ್ರಕಟಾಕ್ಷೈಶ್ಚ ಮೋಹಯಂತೀ ರಘೂತ್ತಮಂ ।
ನಾನಾಲಂಕಾರಸಂಯುಕ್ತಾ ವರನೂಪುರನಿಸ್ವನಾ ॥ ೭೨ ॥

ತತೋ ರಾಮೋ ಜಲಂ ಸ್ಪೃಷ್ಟ್ವಾ ಧೃತ್ವಾ ಸೀತಾಕರಂ ಮುದಾ ।
ಲಕ್ಷ್ಮಣಾದೀನ್ ಸಂವಿಸರ್ಜ್ಯ ಸೀತಾಗೇಹಂ ವಿವೇಶ ಸಃ ॥ ೭೩ ॥

ಬಹಿರ್ದೃಷ್ಟಂ ಶ್ರುತಂ ವಾಪಿ ಯದ್ಯತ್ಕೌತುಕಮುತ್ತಮಂ ।
ತತ್ಸರ್ವಂ ಜಾನಕೀಂ ಪ್ರಾಹ ತೋಷಯಾಮಾಸ ತಾಂ ಮುಹುಃ ॥ ೭೪ ॥

ತತಸ್ಸರ್ವಾನ್ ಸಮಾಹೂಯ ಭೋಜನಾರ್ಥಂ ಸಮುದ್ಯತಃ ।
ಸ್ನಾನಂ ಕೃತ್ವಾ ಸ ಮಾಧ್ಯಾಹ್ನಂ ಕರ್ಮ ಚಕ್ರೇ ರಘೂತ್ತಮಃ ॥ ೭೫ ॥

ತರ್ಪಯಿತ್ವಾ ಪಿತೄಂಶ್ಚಾಪಿ ನೈವೇದ್ಯಾನ್ ಶಂಭವೇ ದದೌ ।
ವೈಶ್ವದೇವಂ ತತಃ ಕೃತ್ವಾ ಬಲಿದಾನಂ ವಿಧಾಯ ಸಃ ॥ ೭೬ ॥

---

೭೨. ಬಗೆಬಗೆಯ ಅಲಂಕಾರಗಳನ್ನು ಮಾಡಿಕೊಂಡು ಕಾಲುಬಳೆಗಳನ್ನು ಸದ್ದುಮಾಡುತ್ತ ರಾಮನನ್ನು ಕಡೆಗಣ್ಣಿನಿಂದ ನೋಡಿ ಮೋಹಿಸುವಂತೆ ಮಾಡುತ್ತ ಬರುತ್ತಿದ್ದಳು.

೭೩. ರಾಮನು ಕಾಲುಗಳನ್ನು ತೊಳೆದುಕೊಂಡು ಸೀತೆಯ ಕೈಯ್ಯನ್ನು ಹಿಡಿದುಕೊಂಡು ಲಕ್ಷ್ಮಣ ಮುಂತಾದವರನ್ನು ಕಳುಹಿಸಿಬಿಟ್ಟು ಸೀತೆಯ ಮನೆಗೆ ಹೋಗುತ್ತಿದ್ದನು.

೭೪. ಅಲ್ಲಿ ರಾಮನು ಹೊರಗಡೆಯಲ್ಲಿ ನೋಡಿದ ಮತ್ತು ಕೇಳಿದ ಕೌತುಕಗಳನ್ನು ಜಾನಕಿಗೆ ಹೇಳಿ ಅವಳನ್ನು ಸಂತೋಷಪಡಿಸುತ್ತಿದ್ದನು.

೭೫. ಆನಂತರ ಮಧ್ಯಾಹ್ನದ ಊಟಕ್ಕೆ ಎಲ್ಲರನ್ನೂ ಕರೆಯುವುದಕ್ಕೆ ಕಳುಹಿಸಿ ತಾನು ಸ್ನಾನವನ್ನು ಮಾಡಿ ಮಾಧ್ಯಾಹ್ನಿಕಾದಿಗಳನ್ನು ಮಾಡುತ್ತಿದ್ದನು.

೭೬–೭೭. ಪಿತೃಗಳಿಗೆ ತರ್ಪಣವನ್ನು ಮಾಡಿ ಶಿವನಿಗೆ ನಿವೇದನವನ್ನು ಮಾಡುತ್ತಿದ್ದನು. ಆನಂತರ ವೈಶ್ವದೇವವನ್ನು ಮಾಡಿ ಬಲಿದಾನವನ್ನು ಮಾಡುತ್ತಿದ್ದನು. ಅನಂತರಭೂತಗಳಿಗೆ ಬಲಿಯನ್ನು ಹಾಕಿ ಸ್ವಧಾಕಾರವನ್ನುಚ್ಚರಿಸಿ

ದತ್ವಾ ಭೂತಬಲಿಂ ಚಾಪಿ ಪಿತೄಂಶ್ಚಾಪಿ ಸ್ವಧೇತಿ ಚ ।
ಬಹಿಸ್ತ್ವೈತ್ವಾ ಕಾಕಬಲಿಂ ತ್ವತಿಥೀನ್ ಪೂಜ್ಯ ಸಾದರಂ ॥ ೭೭ ॥

ಯತೀಂಶ್ಚ ಬ್ರಾಹ್ಮಣಾನ್ ಪೂಜ್ಯ ಹೇಮಪಾತ್ರೇಷು ರಾಘವಃ ।
ಪರಿವಿಷ್ಟೇ ತು ಜಾನಕ್ಯಾ ತ್ರಿಪದಾಸು ಧೃತೇಷು ಚ ॥ ೭೮ ॥

ತೈಸರ್ವೈರ್ಭೋಜನಂ ಚಕ್ರೇ ಸ್ನುಷಾಭಿರ್ವೀಜಿತೋ ಮುದಾ ।
ಕರಶುದ್ಧಿಂ ತತಃ ಕೃತ್ವಾ ಭುಕ್ತ್ವಾ ತಾಂಬೂಲಮುತ್ತಮಂ ॥ ೭೯ ॥

ದದೌ ತೇಭ್ಯೋ ದಕ್ಷಿಣಾಶ್ಚ ವಿಪ್ರೇಭ್ಯೋ ರಘುನಾಯಕಃ ।
ಗತ್ವಾ ಶತಪಥಂ ರಾಮೋ ನಿದ್ರಾಶಾಲಾಂ ಯಯೌ ಶನೈಃ ॥ ೮೦ ॥

ಪಿತೃಗಳಿಗೆ ಅನ್ನವನ್ನು ಹಾಕಿ ಹೊರಕ್ಕೆ ಹೋಗಿ ಕಾಕಬಲಿಯನ್ನು ಹಾಕಿ ಅನಂತರ ಅತಿಥಿಗಳನ್ನು ಪೂಜಿಸುತ್ತಿದ್ದನು.

೭೮. ಅಲ್ಲಿಗೆ ಬಂದಿದ್ದ ಯತಿಗಳನ್ನೂ ಬ್ರಾಹ್ಮಣರನ್ನೂ ಶ್ರದ್ಧೆಯಿಂದ ಪೂಜಿಸುತ್ತಿದ್ದನು. ಅನಂತರ ಭೋಜನಕ್ಕೆ ಕೂತುಕೊಳ್ಳಲು ಮೂರುಕಾಲಿನ ಮಣೆಯನ್ನು ಹಾಕಿ ಅದರಮೇಲೆ ಚಿನ್ನದ ಪಾತ್ರೆಯನ್ನಿಟ್ಟು ಅದಕ್ಕೆ ಜಾನಕಿಯು ಉತ್ತಮವಾದ ಪಕ್ವಾನ್ನಗಳನ್ನೂ ಉತ್ತಮವಾದ ತುಪ್ಪವನ್ನೂ ಬಡಿಸುತ್ತಿದ್ದಳು.

೭೯. ಎಲ್ಲರೊಡನೆಯೂ ಕುಳಿತುಕೊಂಡು ಭೋಜನಮಾಡುತ್ತಿದ್ದನು ಆಗ ಸೊಸೆಯರು ಬಂದು ಎಲ್ಲರಿಗೂ ಸೆಖೆಯು ಹೋಗಿ ಆಯಾಸವು ಪರಿಹಾರ ವಾಗುವಂತೆ ಬೀಸುತ್ತಿದ್ದರು. ಅನಂತರ ಕೈತೊಳೆದುಕೊಂಡು ತಾಂಬೂಲವನ್ನು ಹಾಕಿಕೊಳ್ಳುತ್ತಿದ್ದನು.

೮೦. ಮೊದಲು ಬ್ರಾಹ್ಮಣರಿಗೆ ದಕ್ಷಿಣೆ ತಾಂಬೂಲಗಳನ್ನು ಕೊಟ್ಟು ಅನಂತರ ಮಿಕ್ಕವರಿಗೆ ತಾಂಬೂಲವನ್ನು ಕೊಡುತ್ತಿದ್ದನು. ಅನಂತರ ಸುಮಾರು ನೂರುಹೆಜ್ಜೆಗಳಷ್ಟು ಸಂಚಾರಮಾಡಿ ನಿದ್ದೆಮಾಡುವ ಮನೆಗೆ ಮೆಲ್ಲಗೆ ಹೋಗುತ್ತಿದ್ದನು.

ಏತಸಿನ್ನಂತರೇ ಸಿತಾ ಭುಕ್ತ್ವಾ ರಾಮಾಂತಿಕಂ ಯಯೌ |
ವೀಜಯಾಮಾಸ ಶ್ರೀರಾಮಂ ಮಂಚಕಸ್ಥಂ ಪುರಃ ಸ್ಥಿತಾ ॥ ೮೧ ॥

ಚಕಾರ ನಿದ್ರಾಂ ಶ್ರೀರಾಮೋ ಮಂಚಕೇ ಸೀತಯಾ ಸಹ |
ತೌ ದಾಸ್ಯೋ ವೀಜಯಾಮಾಸುಃ ದಿವ್ಯಾಲಂಕಾರಭೂಷಿತಾಃ ॥ ೮೨ ॥

ತತಃ ಪ್ರಬುದ್ಧಾ ಸಾ ಸೀತಾ ಪ್ರಬುದ್ಧೋಽಭೂದ್ರಮಾಪತಿಃ |
ಸಾರಿಭಿಸ್ಸೀತಯಾ ಕ್ರೀಡಾಂ ತಥಾ ಬುದ್ಧಿಬಲೇನ ಹಿ ॥ ೮೩ ॥

ನಾನಾ ಕೃತ್ರಿಮಸೈನ್ಯೈಸ್ಸಾಽಕರೋದನ್ಯೈರಪಿ ಪ್ರಭುಃ |
ತತೋ ದ್ರಾಕ್ಷಾಮಂಟಪಾಧೋ ಜಲಯಂತ್ರಾದಿಕೌತುಕಂ ॥ ೮೪ ॥

ದೃಷ್ಟ್ವಾ ಪಕ್ಷಿಕುಲಾನ್ ಸರ್ವಾನ್ ಪಂಜರಸ್ಥಾನ್ ದದರ್ಶಸಃ |
ಗತ್ವಾ ಸೋಪಾನಮಾರ್ಗೇಣ ಪ್ರಾಸಾದಾಗ್ರಂ ಪುರೀಂ ನಿಜಾಂ ॥ ೮೫ ॥

---

೮೧. ಇಷ್ಟುಹೊತ್ತಿಗೆ ಸೀತೆಯು ಭೋಜನವನ್ನು ಮಾಡಿಕೊಂಡು ರಾಮನ ಬಳಿಗೆ ಬರುತ್ತಿದ್ದಳು. ರಾಮನು ಮಂಚದಮೇಲೆ ಮಲಗಿರುತ್ತಿರಲು ಸೀತೆಯು ಮಂಚದಮುಂದೆ ನಿಂತುಕೊಂಡು ಮೆಲ್ಲಗೆ ಬೀಸುತ್ತಿದ್ದಳು.

೮೨. ಅನಂತರ ರಾಮನು ಸೀತೆಯೊಡನೆ ಮಂಚದಮೇಲೆ ಮಲಗಿ ನಿದ್ದೆಯನ್ನು ಮಾಡುತ್ತಿದ್ದನು. ಆಗ ದಿವ್ಯಾಲಂಕಾರಗಳಿಂದ ಭೂಷಿತರಾದ ದಾಸಿಯರು ಅವರಿಬ್ಬರನ್ನೂ ಬೀಸುತ್ತಾ ಇರುತ್ತಿದ್ದರು.

೮೩-೮೪. ಅನಂತರ ನಿದ್ದೆಮಾಡಿ ಮೊದಲು ಸೀತೆಯು ಏಳುತ್ತಿದ್ದಳು. ಅನಂತರ ಶ್ರೀರಾಮನು ಏಳುತ್ತಿದ್ದನು. ಅನಂತರ ಸೀತೆಯೊಡನೆ ಚತುರಂಗದ ಸಾರಿಕೆಯಿಂದ ಕ್ರೀಡೆಯನ್ನು ಆಡುತ್ತ ಇರಲು ತನ್ನ ಬುದ್ಧಿಬಲದಿಂದ ಸೀತೆಯು ಕೃತ್ರಿಮಸೈನ್ಯಗಳಿಂದ ಕಟ್ಟುತ್ತಿದ್ದಳು. ರಾಮನೂ ಕೂಡ ಅದನ್ನು ತಪ್ಪಿಸಿಕೊಂಡು ಆಡುತ್ತಿದ್ದನು. ಅನಂತರ ದ್ರಾಕ್ಷಿಯ ಬಳ್ಳಿಯ ಮಂಟಪದ ಕೆಳಗೆಹೋಗಿ ಜಲಯಂತ್ರದ ಕೌತುಕವನ್ನು ನೋಡುತ್ತಾ ಇರುತ್ತಿದ್ದನು.

೮೫-೮೬ ಅನಂತರ ಪಂಜರದಲ್ಲಿರುವ ಪಕ್ಷಿಗಳನ್ನು ನೋಡಿ ಆಟವಾಡುತ್ತಿದ್ದನು. ಅನಂತರ ಸೋಪಾನದ ಮೆಟ್ಟಲಿನಿಂದ ಮಹಡಿಯ ಮೇಲಕ್ಕೆ ಹತ್ತಿ ಉಪವನಗಳಿಂದಲೂ ತೋಟಗಳಿಂದಲೂ ಅಂಗಡಿಬೀದಿಗಳಿಂದಲೂ ಉತ್ತಮವಾದ

ವನಾರಾಮಾನ್ವಿತಾಂ ದೃಷ್ಟ್ವಾ ಹಟ್ಟವಿಥ್ಯಾsತಿರಂಜಿತಾಂ ।
ಶನೈರ್ಯಯೌ ಪ್ರಭುರ್ಗೋಷ್ಠಂ ನಾನಾಧೇನೂಃ ದದರ್ಶ ಸಃ ॥ ೮೬ ॥

ತಾಂ ಸಂಪ್ರೇಷ್ಯ ಗೃಹಂ ಸೀತಾಂ ಸ್ವದಾಸೀಪರಿವೇಷ್ಟಿತಾಂ ।
ದ್ವಾರಾಂತಿಕಂ ಯಯೌ ರಾಮಸ್ತತ್ರ ತೇ ಲಕ್ಷ್ಮಣಾದಯಃ ॥ ೮೭ ॥

ಚಕ್ರುಃ ಪ್ರಣಾಮಂ ಶ್ರೀರಾಮಂ ತೈಸ್ಸಹೈವ ಶನೈಶ್ಶನೈಃ ।
ವಾಜಿಶಾಲಾಂ ಯಯೌ ರಾಮೋ ದೃಷ್ಟ್ವಾ ತತ್ರ ಸ ವಾಜಿನಃ ॥ ೮೮ ॥

ಗಜಶಾಲಾಮುಷ್ಟ್ರಶಾಲಾಂ ದೃಷ್ಟ್ವಾ ರಾಮಶ್ಶನೈಶ್ಶನೈಃ ।
ದದರ್ಶ ಶಸ್ತ್ರಶಾಲಾಂ ಚ ವ್ಯಾಘ್ರಶಾಲಾಂ ಪ್ರಭುರ್ಯಯೌ ॥ ೮೯ ॥

ದೃಷ್ಟ್ವಾsಥ ಶಿಬಿಕಾಶಾಲಾಂ ಮಾಹಿಷೇಯೀ ವಿಲೋಕ್ಯ ಚ ।
ಮಹಿಷೀರ್ವೃಷಶಾಲಾಂ ಚ ರಥಶಾಲಾಂ ದದರ್ಶ ಸಃ ॥ ೯೦ ॥

ಮಾರ್ಗಗಳಿಂದಲೂ ರಂಜಿತವಾದ ಪಟ್ಟಣವನ್ನು ನೋಡುತ್ತಿದ್ದನು. ಅನಂತರ ದನಗಳ ಕೊಟ್ಟಿಗೆಗಳಿಗೆ ಹೋಗಿ ಅಲ್ಲಿರುವ ಬಗೆ ಬಗೆಯಾದ ಹಸುಗಳನ್ನು ನೋಡುತ್ತಿದ್ದನು.

೮೭. ಅನಂತರ ದಾಸಿಯರನ್ನೂ ಸೀತೆಯನ್ನೂ ಮನೆಗೆ ಕಳುಹಿಸಿ ಬಿಡುತ್ತಿದ್ದನು. ಅಲ್ಲಿಂದ ಬಾಗಿಲಿನ ಬಳಿಗೆ ಹೋಗುತ್ತಿದ್ದನು. ಅಲ್ಲಿ ಲಕ್ಷ್ಮಣನೇ ಮುಂತಾದವರು ಇರುತ್ತಿದ್ದರು.

೮೮. ಅವರೆಲ್ಲರೂ ಅಲ್ಲಿಗೆ ಬಂದ ಶ್ರೀರಾಮನನ್ನು ನೋಡಿ ಅವನಿಗೆ ನಮಸ್ಕರಿಸುತ್ತಿದ್ದರು. ಅವರೊಡನೆ ಮೆಲ್ಲಮೆಲ್ಲಗೆ ಕುದುರೆಯ ಲಾಯಕ್ಕೆ ಹೋಗುತ್ತಿದ್ದನು. ಅಲ್ಲಿ ಅವರೊಡನೆ ಅವೆಲ್ಲವನ್ನೂ ನೋಡುತ್ತಿದ್ದನು.

೮೯. ಅನಂತರ ಗಜಶಾಲೆಗೂ ಉಷ್ಟ್ರ (ಒಂಟೆ) ಶಾಲೆಗೂ ಹೋಗುತ್ತಿದ್ದನು. ಅಲ್ಲಿ ಅವೆಲ್ಲವನ್ನೂ ನೋಡಿಕೊಂಡು ಶಸ್ತ್ರಶಾಲೆಗೆ ಹೋಗಿ ಆಮೇಲೆ ವ್ಯಾಘ್ರಶಾಲೆಗೆ ಹೋಗುತ್ತಿದ್ದನು.

೯೦. ಅನಂತರ ವಾಹನಗಳ (ಪಲ್ಲಕ್ಕಿಗಳ) ಶಾಲೆಗೆ ಹೋಗಿ ಅವನ್ನು ನೋಡುತ್ತಿದ್ದನು. ಅನಂತರ ಎಮ್ಮೆಗಳ ಕೊಟ್ಟಿಗೆಗೆ ಹೋಗುತ್ತಿದ್ದನು. ಅಲ್ಲಿಂದ ಹೋರಿಗಳಿರುವ ಶಾಲೆಗೆ ಹೋಗಿ ಅವನ್ನು ನೋಡಿಕೊಂಡು ರಥಶಾಲೆಗೆ ಹೋಗುತ್ತಿದ್ದನು.

ಆರುಹ್ಯ ಸ್ಯಂದನೇ ರಾಮಃ ಶನೈಸ್ಸರ್ವೈರ್ಬಹಿರ್ಯಯೌ |
ಸಪ್ತಕಕ್ಷಾನ್ಸಮುಲ್ಲಂಘ್ಯ ತತ್ರಸ್ಥೈಃ ಪೂರ್ವವಜ್ಜನೈಃ ॥ ೯೧ ॥
ಸರ್ವೈರ್ಯುಕ್ತಶ್ಚಾಷ್ಟಮಾಂ ತಾಂ ಶ್ರೇಷ್ಠಾಂ ಕಕ್ಷಾಂ ದದರ್ಶ ಸಃ |
ತತ್ರ ಯಂತ್ರಾಣಿ ಶ್ರೀರಾಮಶ್ಶತಘ್ನೀಶ್ಶಕಟಸ್ಥಿತಾಃ ॥ ೯೨ ॥
ತೃಣಕಾಷ್ಠಾದಿಸದ್ಮಾನಿ ದೂತಸ್ಥಾನಾನ್ಯಪಶ್ಯತ |
ತತೋ ನವಮಕಕ್ಷಾಯಾಂ ದದರ್ಶ ರಘುನಂದನಃ ॥ ೯೩ ॥
ಶಸ್ತ್ರಪಾಣೀನ್ ವಾರಣಸ್ಥಾನ್ ತುರಗಸ್ಥಾನನೇಕಶಃ |
ರಕ್ಷಯಂತಿಹಿ ಯೇ ಸರ್ವೇ ಸ್ವೀಯಂ ಗೇಹಂ ತ್ವಹರ್ನಿಶಂ ॥ ೯೪ ॥
ಏವಂ ಸ ನವಕಕ್ಷಾಶ್ಚ ಸಮುಲ್ಲಂಘ್ಯ ರಘೂತ್ತಮಃ |
ಬಹಿಸ್ಸ ಸದ್ಮನೋ ದೃಷ್ಟ್ವಾ ಪರಿಖಾಸ್ಸಜಲಾ ನವ ॥ ೯೫ ॥

೯೧-೯೨. ಅಲ್ಲಿ ರಥದಮೇಲೆ ಕುಳಿತು ಎಲ್ಲರೊಡನೆಯೂ ಹೊರಗೆ ಹೊರಡುತ್ತಿದ್ದನು. ಆ ಏಳು ತೊಟ್ಟಿಗಳನ್ನು ದಾಟಿ ಮುಂದಿರುವ ಎಂಟನೆಯ ಶಾಲೆಗೆ ಹೋಗುತ್ತಿದ್ದನು. ಅದು ಶ್ರೇಷ್ಠವಾದ ಶಾಲೆಯು. ಅಲ್ಲಿ ಅನೇಕವಾದ ಫಿರಂಗಿಗಳೇ ಮುಂತಾದುವು ಗಾಡಿಗಳಮೇಲೆ ಇರುತ್ತಿದ್ದುವು. ಅವೆಲ್ಲವನ್ನೂ ನೋಡುತ್ತಿದ್ದನು.

೯೩. ಅನಂತರ ಹುಲ್ಲುಗಳನ್ನು ತುಂಬಿರುವ ಮನೆಗಳನ್ನೂ ಸೌದೆಗಳನ್ನು ಸೇರಿಸಿರುವ ಮನೆಯನ್ನೂ ನೋಡಿಕೊಂಡು ಸೈನ್ಯಗಳಿರುವ ಸ್ಥಳಕ್ಕೆ ಹೋಗುತ್ತಿದ್ದನು. ಅವೆಲ್ಲವನ್ನೂ ನೋಡುತ್ತಿದ್ದನು. ಅನಂತರ ಒಂಭತ್ತನೆಯ ತೊಟ್ಟಿಗೆ ಹೋಗುತ್ತಿದ್ದನು.

೯೪. ಅಲ್ಲಿ ಶಸ್ತ್ರಪಾಣಿಗಳಾದ ದೂತರು ಆನೆಯಮೇಲೆಯೂ ಕುದುರೆಯ ಮೇಲೆಯೂ ಕುಳಿತಿರುತ್ತಿದ್ದರು. ಅವರೆಲ್ಲರೂ ಆ ರಾಮನ ಅರಮನೆಯನ್ನು ಸುತ್ತಲೂ ಯಾವಾಗಲೂ ಕಾಯುತಿದ್ದರು.

೯೫. ರಾಮನು ಈ ರೀತಿಯಾಗಿ ಒಂಭತ್ತು ತೊಟ್ಟಿಗಳನ್ನು ನೋಡಿಕೊಂಡು ಅರಮನೆಯ ಹೊರಗೆ ಹೊರಟು ಅಲ್ಲಿ ನೀರು ತುಂಬಿರುವ ಒಂಭತ್ತು ಕಂದುಕಗಳನ್ನು ನೋಡುತ್ತಿದ್ದನು.

ಶನೈಃ ಪಶ್ಯನ್ನಯೋಧ್ಯಾಂ ತಾಂ ರಾಜಮಾರ್ಗೇ ಮುದಾನ್ವಿತಃ |
ಶೀಘ್ರಂ ಯಯೌ ಪುರದ್ವಾರಂ ದದರ್ಶ ದ್ವಾರರಕ್ಷಕಾನ್ ॥ ೯೬ ॥

ನವಕಕ್ಷಾಸ್ತ್ವಯೋಧ್ಯಾಯಾಸ್ಸಮುಲ್ಲಂಘ್ಯ ಶನೈಃ ಪ್ರಭುಃ |
ನವಾಃಪಶ್ಯತ್ಸ ಪರಿಖಾಸ್ತೋಯಪಹ್ನಾಕ್ಯದಿಪೂರಿತಾಃ ॥ ೯೭ ॥

ತತೋ ನಾನಾವನಾರಾಮಂ ಕೌತುಕಾನಿ ರಘೂತ್ತಮಃ |
ಪಶ್ಯನ್ಸ ಬಂಧುಪುತ್ರೈಶ್ಚ ಸರಯ್ವಾಸ್ತೀರಮಾಯಯೌ ॥ ೯೮ ॥

ತತ್ರ ಸ್ಥಿತ್ವಾ ಸುನೌಕಾಯಾಂ ಕ್ರೀಡಾಂ ಕೃತ್ವಾ ಕಿಯತ್ ಕ್ಷಣಂ |
ನದ್ಯಾಸ್ತಟೇ ಸಭಾಯಾಂ ಸ ತಸ್ಥೌ ಸೈನ್ಯಯುತಃ ಪ್ರಭುಃ ॥ ೯೯ ॥

ತತ್ರಾಪಿ ವಾರವೇಶ್ಯಾನಾಂ ಪಶ್ಯನ್ನೃತ್ಯಾನಿ ರಾಘವಃ |
ಕಿಯತ್ಕಾಲಮತಿಕ್ರಮ್ಯ ಯಯೌ ಶೀಘ್ರಂ ತತಃ ಪುರೀಂ ॥ ೧೦೦ ॥

---

೯೬. ಅನಂತರ ಪಟ್ಟಣದೊಳಕ್ಕೆ ಹೊರಟು ರಾಜಮಾರ್ಗದಲ್ಲಿ ಹೋಗುತ್ತಾ ಬೇಗನೆ ಹೋಗಿ ಕೋಟೆಯ ಬಾಗಿಲು ಕಾಯುವವರನ್ನು ನೋಡುತ್ತಿದ್ದನು.

೯೭-೯೮. ಅಯೋಧ್ಯೆಯಲ್ಲಿರುವ ಒಂಭತ್ತು ಕೋಟೆಗಳನ್ನೂ ನೋಡಿಕೊಂಡು ನೀರು, ಬೆಂಕಿ ಮುಳ್ಳು ಮುಂತಾದುವುಗಳಿಂದ ತುಂಬಿದ ಒಂಭತ್ತು ಕಂದುಕಗಳನ್ನೂ ನೋಡಿಕೊಂಡು ಹೊರಟು ವನಗಳನ್ನೂ ನೋಡಿ ತಮ್ಮಂದಿರೊಡನೆಯೂ ಮಕ್ಕಳೊಡನೆಯೂ ಸರಯೂ ನದಿಯ ತೀರಕ್ಕೆ ಹೋಗುತ್ತಿದ್ದನು.

೯೯. ಆ ನದಿಯಲ್ಲಿರುವ ದೋಣಿಯಲ್ಲಿ ಕುಳಿತು ಸ್ವಲ್ಪಹೊತ್ತು ಜಲಕ್ರೀಡೆಯನ್ನಾಡಿ ಅನಂತರ ದಡಕ್ಕೆ ಬಂದು ಆ ನದಿಯ ತೀರದಲ್ಲಿಯೇ ಸೈನ್ಯಗಳಿಂದ ಕೂಡಿಕೊಂಡು ಸಭೆಯನ್ನು ನಡೆಸುತ್ತಿದ್ದನು.

೧೦೦. ಅಲ್ಲಿಯೂ ವಾರನಾರಿಯರು ನರ್ತನಮಾಡುತ್ತಿದ್ದರು. ಅಲ್ಲಿ ಅದನ್ನು ನೋಡುತ್ತಿದ್ದನು. ಅಲ್ಲಿ ಸ್ವಲ್ಪ ಹೊತ್ತಿನವರೆಗಿದ್ದು ಅನಂತರ ಪಟ್ಟಣಕ್ಕೆ ಹೋಗುತ್ತಿದ್ದನು.

ತತಶ್ಚಾನ್ಯೈಸ್ಸಭಾಂ ಗತ್ವಾ ಪೂರ್ವೋಕ್ತೈಶ್ಚೋಪಕಾರಕೈಃ ।
ಲಕ್ಷ್ಮಣಾದ್ಯೈಸ್ಸೇವಿತಸ್ತು ತಸ್ಥೌ ಸಿಂಹಾಸನೋಪರಿ ॥ ೧೦೧ ॥

ತತಃ ಕೃತ್ವಾ ಹ್ಯನೇಕಾನಿ ನಾನಾಕಾರ್ಯಾಣಿ ರಾಘವಃ ।
ಆಜ್ಞಾಪ್ಯ ಬಂಧುಪುತ್ರಾಂಶ್ಚ ಪೂರ್ವವತ್ಸ್ವಗೃಹಂ ಯಯೌ ॥ ೧೦೨ ॥

ಸಾಯಂಕಾಲೇ ತತಸ್ಸಂಧ್ಯಾಂ ಕೃತ್ವಾ ಹುತ್ವಾ ಯಥಾವಿಧಿ ।
ಗಂಧಾದ್ಯೈ ರುಪಚಾರೈಶ್ಚ ಶಿವಂ ಸಂಪೂಜ್ಯ ಭಕ್ತಿತಃ ॥ ೧೦೩ ॥

ಕೃತ್ವೋಪಹಾರಂ ವಿಪ್ರೈಶ್ಚ ಪುತ್ರಾಭ್ಯಾಂ ಬಂಧುಭಿಸ್ಸಹ ।
ಶಿಬಿಕಾಯಾಂ ಪುನಃ ಸ್ಥಿತ್ವಾ ದೇವತಾಯತನೇಷು ಚ ॥ ೧೦೪ ॥

ಸಾಕೇತಸ್ಥೇಷು ಶ್ರೀ ರಾಮೋ ಗತ್ವಾ ನತ್ವಾ ಶಿವಾದಿಕಾನ್ ।
ನಾನಾವಿಧಾನ್ ದೇವಸಂಘಾನ್ ಫಲೈಃ ಪುಷ್ಪೈಃ ಪ್ರಪೂಜಯತ್ ॥ ೧೦೫ ॥

---

೧೦೧. ಅಲ್ಲಿ ಸಭೆಗೆ ಹೋಗಿ ಹಿಂದೆ ಹೇಳಿದಂತೆ ಎಲ್ಲರೊಡನೆಯೂ ಇರುತ್ತ ಅವರಿಂದ ಸೇವಿಸಿಕೊಳ್ಳುತ್ತ ಲಕ್ಷ್ಮಣಾದಿಗಳು ಸೇವಿಸುತ್ತಿರಲು ಸಿಂಹಾಸನದಲ್ಲಿ ಕುಳಿತುಕೊಳ್ಳುತ್ತಿದ್ದನು.

೧೦೨. ಆ ಸಭೆಯಲ್ಲಿ ಕುಳಿತು ಅನೇಕ ಕೆಲಸಗಳನ್ನು ನೆರವೇರಿಸುತ್ತಿದ್ದನು. ಅನಂತರ ತಮ್ಮಂದಿರನ್ನೂ ಮಕ್ಕಳನ್ನೂ ಕಳುಹಿಸಿಬಿಟ್ಟು ಮೊದಲಿನಂತೆ ತನ್ನ ಮನೆಗೆ ಬರುತ್ತಿದ್ದನು.

೧೦೩. ಅಲ್ಲಿ ಸಾಯಂಕಾಲದ ಸಂಧ್ಯಾ ವಂದನೆಯನ್ನು ಮಾಡಿ ಅನಂತರ ಔಪಾಸನವನ್ನು ಮಾಡುತ್ತಿದ್ದನು. ಅನಂತರ ಗಂಧ ಪುಷ್ಪಾದಿಗಳಿಂದ ಶಿವನನ್ನು ಭಕ್ತಿಯಿಂದ ಪೂಜಿಸುತ್ತಿದ್ದನು.

೧೦೪. ಅನಂತರ ತಮ್ಮಂದಿರೊಡನೆಯೂ ಮಕ್ಕಳೊಡನೆಯೂ ಬ್ರಾಹ್ಮಣರೊಡನೆಯೂ ಕುಳಿತು ಉಪಹಾರವನ್ನು ತೆಗೆದುಕೊಳ್ಳುತ್ತಿದ್ದನು. ಮತ್ತೆ ಪಲ್ಲಕ್ಕಿಯಲ್ಲಿ ಕುಳಿತು ದೇವಸ್ಥಾನಗಳಿಗೆ ಹೋಗುತ್ತಿದ್ದನು.

೧೦೫. ಆ ಅಯೋಧ್ಯೆಯಲ್ಲಿರುವ ದೇವಸ್ಥಾನಗಳಿಗೆಲ್ಲಾ ಹೋಗುತ್ತಿದ್ದನು. ಅಲ್ಲಿರುವ ಶಿವನೇ ಮುಂತಾದ ದೇವರುಗಳನ್ನು ದರ್ಶನಮಾಡುತ್ತಿದ್ದನು. ಫಲಪುಷ್ಪಗಳನ್ನು ಅರ್ಪಿಸುತ್ತಿದ್ದನು.

ದೇವಾಲಯೇಷು ಸರ್ವೇಷು ಸುಶಾಣಾಂ ತೇಷು ರಾಘವಃ ।
ಶೃಣ್ವನ್ನಾನಾಕೀರ್ತನಾನಿ ವಾರಸ್ತ್ರೀನರ್ತನಾನ್ಯಪಿ ॥ ೧೦೬ ॥

ಪಶ್ಯನ್ ನಾನಾಕೌತುಕಾನಿ ಪರಾಂ ಮುದಮುಪಾಪ ಸಃ ।
ವಾಹನಾರೂಢದೇವಾನಾಮಪಶ್ಯತ್ಕೌತುಕಾನಿ ಚ ॥ ೧೦೭ ॥

ತತೋ ಯಯೌ ವಾಹನೇನ ಹಟ್ಟಮಾರ್ಗೇಣ ರಾಘವಃ ।
ರತ್ನದೀಪಪ್ರಕಾಶೈಶ್ಚ ವಿವೇಶ ನಿಜಮಂದಿರಂ ॥ ೧೦೮ ॥

ತತೋ ನಾನಾಕಥಾಭಿಶ್ಚ ವಾರ್ತಾಭಿಃ ಪುತ್ರಬಂಧುಭಿಃ ।
ಸಾರ್ಧಯಾಮಾಂ ನಿಶಾಂ ನೀತ್ವಾ ರತಿಗೇಹೇ ವಿವೇಶ ಸಃ ॥ ೧೦೯ ॥

ಏತಸ್ಮಿನಂತರೇ ತತ್ರ ಸೀತಾಗ್ರೇ ರತಿಮಂದಿರೇ ।
ಪುಷ್ಪಶಯ್ಯಾದಿ ಸಂಪಾದ್ಯ ತತ್ಪ್ರತೀಕ್ಷಾಂ ಚಕಾರ ಸಾ ॥ ೧೧೦ ॥

೧೦೬-೧೦೭. ರಾಮನು ಆ ದೇವಸ್ಥಾನಗಳನ್ನೆಲ್ಲಾ ದೇವರ ನಾಮುಗಳನ್ನು ನಾನಾ ವಿಧವಾಗಿ ಹಾಡುತ್ತಿರುವುದನ್ನು ಕೇಳುತ್ತ ಅಲ್ಲಿ ವಾರ ಸ್ತ್ರೀಯರ ನರ್ತನವನ್ನು ನೋಡುತ್ತ ಅನೇಕ ಬಗೆಯ ಕೌತುಗಳನ್ನು ನೋಡುತ್ತ ಬಹುವಾಗಿ ಸಂತೋಷಗೊಳ್ಳುತ್ತಿದ್ದನು. ಅಲ್ಲಿ ವಾಹನದ ಮೇಲೆ ಕುಳಿತಿರುವ (ಉತ್ಸವ ವಾಗುತ್ತಿರುವ) ದೇವರ ಸೊಬಗನ್ನು ನೋಡುತ್ತಿದ್ದನು.

೧೦೮. ಅನಂತರ ವಾಹನದಲ್ಲಿ ಕುಳಿತು ಅಂಗಡಿಯ ಬೀದಿಯಲ್ಲಿ ಹೊರಡುತ್ತಿದ್ದನು. ಅಲ್ಲಿ ಆ ರಾಮನಿಗೆ ರತ್ನದ ದೀಪದಿಂದ ಹಾದಿಯು ಕಾಣುವಂತೆ ಮಾಡುತ್ತಿದ್ದರು. ಆ ಪ್ರಕಾಶದಿಂದ ತನ್ನ ಮನೆಗೆ ಹೋಗುತ್ತಿದ್ದನು.

೧೦೯. ಅನಂತರ ಮನೆಯಲ್ಲಿ ತಮ್ಮಂದಿರೊಡನೆಯೂ ಮಕ್ಕಳೊಡನೆಯೂ ಕೌತುಕವಾದ ಮಾತುಗಳನ್ನಾಡುತ್ತ ಅರ್ಧಯಾಮದಷ್ಟು ರಾತ್ರಿಯನ್ನು ಕಳೆದು ರತಿ ಗೃಹಕ್ಕೆ ಹೋಗುತ್ತಿದ್ದನು.

೧೧೦. ಇಷ್ಟು ಹೊತ್ತಿಗೆ ಸೀತೆಯು ಆ ರತಿ ಮಂದಿರದಲ್ಲಿ ಮೊದಲೇ ಹೂವಿನ ಹಾಸಿಗೆಯನ್ನು ಹಾಸಿ ಆ ಶ್ರೀರಾಮನನ್ನು ಎದುರು ನೋಡುತ್ತಿರುವಳು.

ತಾವದಾಯಾಂತಮಾಲೋಕ್ಯ ಸಹಸೋತ್ಥಾಯ ಜಾನಕೀ |
ಧೃತ್ವಾ ಹಸ್ತೇ ರಾಘವೇಂದ್ರಂ ರತಿಶಾಲಾಂ ನಿನಾಯ ಸಾ || ೧೧೧ ||

ಸರ್ವಾ ವಿಸರ್ಜ್ಯ ದಾಸೀಶ್ಚ ಮುಕ್ತಾಜಾಲಾನ್ಯನೇಕಶಃ |
ಸಮಂತತೋ ವಿಮುಚ್ಯಾಥ ತಸ್ಥೌ ರಾಮಸ್ಯ ಮಂಚಕೇ || ೧೧೨ ||

ತತಸ್ತಾಂ ಮೈಥಿಲೀಂ ಧೃತ್ವಾ ಮಂಚಕೇ ಸಂನ್ಯವೇಶಯತ್ |
ರಾಮಃ ಕ್ರೀಡಾಂ ವಿಧಾಯಾಥ ರಂಜಯಾಮಾಸ ಜಾನಕೀಂ || ೧೧೩ ||

ತತಸ್ತುಷ್ಟಂ ರಮಾನಾಥಂ ಜಾನಕೀ ಲಜ್ಜಿತಾಬ್ರವೀತ್ |
ರಾಮ ರಾಜೀವಪತ್ರಾಕ್ಷ ಕಿಂಚಿತ್ಪೃಚ್ಛಾಮಿ ತೇ ವದ || ೧೧೪ ||

ಕುಶಜನ್ಮಾನಂತರಂ ಹಿ ಕಥಂ ಗರ್ಭೋ ಮಯಾ ನ ವೈ |
ಧಾರ್ಯತೇ ಕಾರಣಂ ತ್ವಸ್ಯ ಕಿಮಸ್ತಿ ತದ್ವದಸ್ವ ಮಾಂ || ೧೧೫ ||

---

೧೧೧. ಅಷ್ಟರಲ್ಲಿಯೇ ಆ ರಾಮನು ಬರುತ್ತಿರುವುದನ್ನು ನೋಡಿ ಜಾನಕಿಯು ಬೇಗನೆ ಎದ್ದು ಹಸ್ತಲಾಘವವನ್ನು ಕೊಟ್ಟು ಕೈಹಿಡಿದು ರತಿಶಾಲೆಗೆ ಕರೆದುಕೊಂಡು ಹೋಗುತ್ತಿದ್ದಳು.

೧೧೨. ಅಲ್ಲಿ ಸೀತೆಯು ದಾಸಿಯರೆಲ್ಲರನ್ನೂ ಕಳುಹಿಸಿ ಬಿಟ್ಟು ತನ್ನ ರತ್ನಗಳ ಒಡವೆಯನ್ನು ತೆಗೆದಿಟ್ಟು ರಾಮನು ಕುಳಿರುವ ಮಂಚದ ಎದುರಿಗೆ ಅವನೆದುರಿಗೆ ನಿಂತುಕೊಳ್ಳುತ್ತಿದ್ದಳು.

೧೧೩. ಆಗ ರಾಮನು ಮೈಥಿಲಿಯ ಕೈಯನ್ನು ಹಿಡಿದು ಮಂಚದ ಮೇಲೆ ಕೂರಿಸಿಕೊಳ್ಳುತ್ತಿದ್ದನು. ಆನಂತರ ರಾಮನು ಆ ಜಾನಕಿಯಲ್ಲಿ ಕ್ರೀಡಿಸಿ ಆಕೆಯನ್ನು ಸಂತೋಷಪಡಿಸುತ್ತಿದ್ದನು.

೧೧೪. ಸಂತೋಷಗೊಂಡಿರುವ ನಾಥನಾದ ರಮಾನಾಥನನ್ನು ನೋಡಿ ಜಾನಕಿಯು ಲಜ್ಜೆಗೊಳ್ಳುವವಳಾಗಿ ಎಲೈ ರಾಜೀವ ಪತ್ರಾಕ್ಷನಾದ ರಾಮನೆ! ನಿನ್ನನ್ನು ಒಂದು ವಿಷಯವನ್ನು ಕೇಳುತ್ತೇನೆ. ಅದನ್ನು ಹೇಳು ಎಂದು ಕೇಳುತ್ತಿದ್ದಳು.

೧೧೫. ಎಲೈ ರಾಮನೆ! ಕುಶನು ಹುಟ್ಟಿದ ಮೇಲೆ ನಾನು ಗರ್ಭಿಣಿಯಾಗದಿರುವೆನಲ್ಲ! ಅದಕ್ಕೆ ಕಾರಣವೇನು? ಅದಕ್ಕೆ ಕಾರಣವೇನಾದರೂ ಇದ್ದಲ್ಲಿ ದಯವಿಟ್ಟು ಅದನ್ನು ನನಗೆ ಹೇಳು.

ತಚ್ಛೀತಾವಚನಂ ಶ್ರುತ್ವಾ ಸಸ್ಮಿತಂ ಪ್ರಾಹ ರಾಘವಃ ।
ಹೇ ಸೀತೇ ಕಂಜನಯನೇ ಸಮ್ಯಕ್ಪೃಷ್ಟಂ ತ್ವಯಾ ಮಮ ॥ ೧೧೬ ॥

ತತ್ಸರ್ವಂ ತೇ ವದಾಮ್ಯದ್ಯ ತಚ್ಛೃಣುಷ್ವ ಸುಮಧ್ಯಮೇ ।
ಕಿಮರ್ಥಂ ಚ ಬಹೂನ್ಪುತ್ರಾಂ ಸ್ತ್ವತ್ರ ತ್ವಂ ವಾಂಛಸಿ ಪ್ರಿಯೇ ॥ ೧೧೭ ॥

ಸದ್ವಂಶೇ ಬಹವಃ ಪುತ್ರಾ ನ ಯೋಗ್ಯಾಸ್ತತ್ರ ವೈ ಭುವಿ ।
ಕದ್ಯೈಕಸ್ಯ ದುರಾಚಾರಾತ್ಕುಲಸ್ಯ ಲಾಂಛನಂ ಭವೇತ್ ॥ ೧೧೮ ॥

ಅತ ಏವ ಮಮೇಚ್ಛಾ ನ ಬಹುಪುತ್ರೇಷು ಮೈಥಿಲಿ ।
ಮದಿಚ್ಛಯಾ ತ್ವಯಾ ಗರ್ಭೋ ಧಾರ್ಯತೇ ನ ಕದಾಚನ ॥ ೧೧೯ ॥

---

೧೧೬. ಸೀತೆಯು ಇಂತು ಹೇಳಿದುದನ್ನು ರಾಮನು ಕೇಳಿ ನಗುತ್ತ ಇಂತೆಂದನು. ಕಂಜನಯನೆಯಾದ ಸೀತೆಯೇ ! ನೀನು ಕೇಳಿದುದು ಬಹು ಸಮಂಜಸವಾಗಿದೆ.

೧೧೭. ಅದೆಲ್ಲವನ್ನೂ ಕೂಡ ನಿನಗೆ ಹೇಳುತ್ತೇನೆ. ಅದನ್ನು ಮನಸ್ಸಿಟ್ಟು ಕೇಳು. ನೀನು ಬಹು ಮಕ್ಕಳನ್ನು ಪಡೆಯಬೇಕೆಂದು ಕೇಳಲು ಕಾರಣವೇನು ? ಆ ಅಪೇಕ್ಷೆಯು ನಿನಗೆ ಏತಕ್ಕೆ ಆಯಿತು ?

೧೧೮. ಸದ್ವಂಶದಲ್ಲಿ ಬಹು ಜನ ಮಕ್ಕಳು ಭೂಲೋಕದಲ್ಲಿ ಹುಟ್ಟಬಾರದು. ಒಂದು ವೇಳೆ ಅಷ್ಟು ಜನರಲ್ಲಿ ಒಬ್ಬನು ದುರಾಚಾರಿಯಾದರೂ ಆ ಕುಲಕ್ಕೇನೆ ಕಳಂಕವು ಉಂಟಾಗುವುದು.

೧೧೯. ಎಲೈ ಮೈಥಿಲಿಯೆ ಆದ್ದರಿಂದಲೇ ನನಗೆ ಬಹುಮಂದಿ ಮಕ್ಕಳಾಗಬೇಕೆಂದು ಅಪೇಕ್ಷೆಯುಂಟಾಗುವುದಿಲ್ಲ. ಇದೂ ಅಲ್ಲದೆ ನನ್ನ ಇಚ್ಛೆಯಿದ್ದಂತೆ ನೀನು ಗರ್ಭವನ್ನು ಧರಿಸುವುದೂ ಇಲ್ಲ. ಅದು ದೇವರ ಸಂಕಲ್ಪವಾಗಿರುವುದು.

ಪುತ್ರಸ್ತ್ವೇಕಃ ಪ್ರತೀಕ್ಷ್ಯೋ ಹಿ ಯಃ ಕುಲಂ ಭೂಷಯೇದ್ಗುಣೈಃ ।
ಕಿಂ ಜಾತಾ ಬಹವಃ ಪುತ್ರಾ ದುಷ್ಟಾಸ್ತೇ ಕ್ರಿಮಯೋ ಯಥಾ ॥

ದ್ವಾವೇವಾಸ್ತಾಂ ಕದಾಚಿಚ್ಚ ಯಥಾ ನೇತ್ರೇ ಭುಜೌ ಯಥಾ ।
ಯಥಾ ತೌ ಶಶಿಸೂರ್ಯೌ ಚ ಯಥಾಹಂ ಲಕ್ಷ್ಮಣಸ್ತಥಾ ॥ ೧೨೧ ॥

ತವಾಪಿ ಜಾತೌ ದ್ವೌ ಪುತ್ರೌ ಮಾಗ್ರೇಸ್ತು ಸಂತತಿಸ್ತ್ವತಃ ।
ತತಃ ಪ್ರಾಹ ಪುನಸ್ಸೀತಾ ನ ಜಾತಾ ದುಹಿತಾ ಮಮ ॥ ೧೨೨ ॥

ಏಕಾಪಿ ಕಾರಣಂ ತತ್ರ ಕಿಮತ್ರಾಸ್ತಿ ವದಸ್ವ ಮಾಂ ।
ತತ್ಸೀತಾವಚನಂ ಶ್ರುತ್ವಾ ಜಾನಕೀಂ ಪ್ರಾಹ ರಾಘವಃ ॥ ೧೨೩ ॥

---

೧೨೦. ಕುಲವನ್ನು ಭೂಷಿಸುವ ಒಬ್ಬ ಮಗನನ್ನು ಮಾತ್ರ ಬುದ್ಧಿವಂತರಾದವರು ಅಪೇಕ್ಷಿಸಬೇಕು. ಅದರಂತೆ ನಿರೀಕ್ಷಿಸಬೇಕು. ದುಷ್ಟರಾದ ಬಹು ಜನರು ಹುಳುಗಳಂತೆ ಹುಟ್ಟಿದರೆ ಪ್ರಯೋಜನವೇನು ?

೧೨೧. ಒಂದು ವೇಳೆ ಹೆಚ್ಚು ಜನ ಮಕ್ಕಳಾಗದೆ ನಮಗೆ ಈ ಕುಶಲವರಿಬ್ಬರೇ ಇರಲಿ. ಕಣ್ಣುಗಳೂ, ಕೈಗಳೂ ಇರುವಂತೆ ಜಾಣರಾಗಿರಲಿ. ಸೂರ್ಯಚಂದ್ರರಂತೆ ಪ್ರಸಿದ್ಧರಾಗಿರಲಿ. ಅದಿಲ್ಲದಿದ್ದರೆ ನನ್ನಂತೆಯೂ ಲಕ್ಷ್ಮಣನಂತೆಯೂ ಇದ್ದರೆ ಅವರೇ ಸಾಕು.

೧೨೨. ನಿನಗೂ ಕೂಡ ಇಬ್ಬರು ಮಕ್ಕಳಾಗಿದ್ದಾರೆ. ಮುಂದೆ ಮಕ್ಕಳಾಗಬೇಡ. ನಾನು ಹೇಳಿದ ಕಾರಣಗಳಿಂದ ಈ ಇಬ್ಬರೇ ಸಾಕು. ಎನ್ನಲು ಆಗ ಸೀತೆಯು ಅದು ಸರಿ. ನನಗೆ ಹೆಣ್ಣುಮಕ್ಕಳಾಗಲಿಲ್ಲವಲ್ಲ!

೧೨೩. ಅದಕ್ಕೆ ಯಾವುದಾದರೂ ಒಂದು ಕಾರಣವಿದ್ದರೆ ಹೇಳು ಎಂದಳು. ಅವಳು ಹೀಗೆ ಹೇಳಿದುದನ್ನು ಕೇಳಿ ರಾಮನು ಅವಳನ್ನು ಕುರಿತು ಇಂತೆಂದನು.

ತ್ವತ್ಕನ್ಯಾ ಚ ಮಯಾ ಕಸ್ಮೈ ದೇಯಾತ್ರ ಜಗತೀತಲೇ ।
ಮತ್ಸಮಾನೋ ನೃಪಃ ಕೋಽಸ್ತಿ ಸಪ್ತದ್ವೀಪಪತಿರ್ಮಹಾನ್ ॥ ೧೨೪ ॥

ಯಸ್ಯ ಪತ್ನ್ಯೈ ತ್ವಯಾ ಕಾರ್ಯಂ ಶಿರಸಾ ನಮನಂ ತದಾ ।
ಕೋ ವರೋಽಸ್ತಿ ಜಗತ್ಯಾಂ ಹಿ ನೃಪಸ್ಯ ತನಯೋ ಮಹಾನ್ ॥ ೧೨೫ ॥

ಪ್ರಕ್ಷಾಳನೀಯೌ ಚರಣೌ ವಿವಾಹೇ ಯಸ್ಯ ವೈ ಮಯಾ ।
ಅತ ಏವ ನ ಮೇಚ್ಛಾಭೂತ್ಕನ್ಯಾಯಾಮಪಿ ಜಾನಕೀ ॥ ೧೨೬ ॥

ಕುಶಾದೀನಾಂ ತು ಯಾಃ ಕನ್ಯಾಸ್ತಾಸ್ತೇ ಕಿಂ ನೈವ ಬಾಲಿಕಾಃ ।
ಕಿಂ ಯೌವನಮದಾತ್ಸೀತೇ ಮೋಹಂ ಪ್ರಾಪ್ತಾಸಿ ಭೂತಲೇ ॥ ೧೨೭ ॥

---

೧೨೪. ನೀನಂತೂ ಮಗಳಾಗಬೇಕೆನ್ನುತ್ತೀಯೆ. ನಿನಗೆ ಮಗಳಾದರೆ ಆ ಮಗಳನ್ನು ಈ ಭೂಮಿಯಲ್ಲಿ ನಾನು ಯಾರಿಗೆ ಮದುವೆಮಾಡಿಕೊಡಬೇಕು ? ನನಗೆ ಸಮಾನನಾದ ಸಪ್ತದ್ವೀಪದ ಪತಿಯಾದ ರಾಜರಾಜನು ಯಾವನು ತಾನೆ ಇರುವನು ?

೧೨೫. ಹಾಗಿಲ್ಲದ ಮೇಲೆ ನಿನ್ನ ಕೈಯಲ್ಲಿ ತಲೆ ಬಗ್ಗಿ ನಮಸ್ಕರಿಸಿಕೊಳ್ಳುವವನ ಹೆಂಡತಿಯು ಯಾವಳಿರುವಳು ? ಈ ಜಗತ್ತಿನಲ್ಲಿ ಅಂತಹ ರಾಜನ ಮಗನು ಶ್ರೇಷ್ಠನಾದವನು ಯಾವನು ತಾನೆ ಇರುವನು ?

೧೨೬. ವಿವಾಹ ಕಾಲದಲ್ಲಿ ಆ ವರನ ಪಾದಗಳನ್ನು ನಾನು ತೊಳೆಯಬೇಕಲ್ಲ ! ನನ್ನ ಕೈಯಲ್ಲಿ ಕಾಲುಗಳನ್ನು ತೊಳೆಸಿಕೊಳ್ಳುವ ಯೋಗ್ಯತೆಯುಳ್ಳವನು ಯಾವನು ತಾನೆ ಇರುವನು ? ಆದ್ದರಿಂದಲೇ ಹೆಣ್ಣುಮಗಳಾಗಬೇಕೆಂದು ನನಗೆ ಇಚ್ಛೆಯುಂಟಾಗಲಿಲ್ಲ.

೧೨೭. ಅಲ್ಲದೆ ಹೇಳುತ್ತೇನೆ ಕೇಳು. ಕುಶನೇ ಮುಂತಾದವರಿಗೆ ಹೆಣ್ಣುಮಕ್ಕಳಿರುವರಷ್ಟೆ ! ಅವರು ನಿನಗೆ ಹೆಣ್ಣುಮಕ್ಕಳಲ್ಲವೆ ? ಎಲೈ ಸೀತೆಯೇ ! ಯೌವನದಿಂದ ಈ ಭೂಮಿಯಲ್ಲಿ ಅಜ್ಞಾನವನ್ನು ಹೊಂದಿದೆಯೋ ಹೇಗೆ ?

ಆತ್ಮಾನಂ ವಿಸ್ಮೃತಾಸ್ಯದ್ಯ ತ್ರೈಲೋಕ್ಯಜನನೀಮಿತಿ ।
ಯದತ್ರ ವಿಶ್ವೇ ಸ್ತ್ರೀರೂಪಂ ದೃಶ್ಯತೇ ತತ್ತವಾಂಶಜಂ ॥ ೧೨೮ ॥

ಪೌರುಷಂ ದೃಶ್ಯತೇ ಯಚ್ಚ ತತ್ಸರ್ವಂ ಚ ಮಮಾಂಶಜಂ ।
ಅತ್ರ ಸ್ತ್ರೀಪುರುಷಾ ಯೇ ಚ ತೇ ಪುತ್ರದುಹಿತಾಸ್ತವ ॥ ೧೨೯ ॥

ಏಷ್ಟವ್ಯಾ ಬಹವಃ ಪುತ್ರಾ ಯದ್ಯೇಕೋಽಪಿ ಗಯಾಂ ವ್ರಜೇತ್ ।
ಇತಿ ತದ್ವಚನಂ ಸೀತೇ ಸಾಮಾನ್ಯಂ ವಿದ್ಧಿ ನೋ ವರಂ ॥ ೧೩೦ ॥

ಏಕಸ್ಸ ತನಯೋ ಧನ್ಯಃ ಕುಲಂ ಯಸ್ತಾರಯೇನ್ನಿಜಂ ।
ಕ್ರಿಮಿತುಲ್ಯಾಶ್ಚ ತೇ ಪುತ್ರಾಶ್ಯತಶೋ ದುಷ್ಟಮಾರ್ಗಗಾಃ ॥ ೧೩೧ ॥

---

೧೨೮. ನೀನು ಮೂರು ಲೋಕಕ್ಕೂ ತಾಯಿಯಾಗಿರುವೆನೆಂಬುದನ್ನು ಮರೆತುಬಿಟ್ಟಿದ್ದೀಯೆ. ಈ ಪ್ರಪಂಚದಲ್ಲಿ ಹೆಂಗಸರ ರೂಪವನ್ನು ಹೊಂದಿ ಯಾವ ಯಾವುದು ಕಾಣುತ್ತದೆಯೋ ಅವೆಲ್ಲವೂನಿನ್ನ ಅಂಶದಿಂದ ಹುಟ್ಟಿರುವುವಲ್ಲವೇ !

೧೨೯. ಈ ಲೋಕದಲ್ಲಿ ಪುರುಷರೂಪವು ಯಾವುದು ಕಾಣುತ್ತದೆಯೋ ಅವೆಲ್ಲವೂ ನನ್ನ ಅಂಶದಿಂದ ಹುಟ್ಟಿದುವೇ ಆಗಿರುವುವು. ಆದ್ದರಿಂದ ಈ ಲೋಕದಲ್ಲಿ ಕಾಣುವ ಸ್ತ್ರೀರೂಪವೆಲ್ಲವೂ ನಿನಗೆ ಹೆಣ್ಣುಮಕ್ಕಳು. ಪುರುಷ ರೂಪವೆಲ್ಲವೂ ಗಂಡುಮಕ್ಕಳು ಎಂದು ತಿಳಿ.

೧೩೦. ಅನೇಕ ಜನ ಮಕ್ಕಳಾಗಬೇಕು. ಏಕೆಂದರೆ ಒಬ್ಬನಾದರೂ ಗಯೆಗೆ ಹೋದಾನು ! ಎಂಬದಾಗಿ ಹೇಳುವ ಮಾತು ಸಾಮಾನ್ಯವಾದುದೇ ಹೊರತು ಅದು ವಿಶೇಷವಾದ ಮಾತೆಂದು ತಿಳಿಯಬೇಡ.

೧೩೧. ಯಾವನು ಕುಲವನ್ನುದ್ಧಾರಮಾಡುವನೋ ಅಂತಹ ಒಬ್ಬನೇ ಮಗನಿದ್ದರೂ ಸಾಕು. ಅವನೇ ಧನ್ಯನು. ಅನೇಕ ಜನರು ಹುಟ್ಟಿ ಅವರು ಕೆಟ್ಟಮಾರ್ಗದಲ್ಲಿ ಹೋದರೆ ಅವರೆಲ್ಲರೂ ಕ್ರಿಮಿಗಳ ರೀತಿಯಂತಿರುವರೆಂದು ತಿಳಿ.

ಇತಿ ಯುದ್ವಚನಂ ಸೀತೇ ವರಿಷ್ಠಂ ತತ್ಸ್ಮೃತಂ ಬುಧೈಃ ।
ಅನ್ಯತ್ತೇ ಕಾರಣಂ ವಚ್ಮಿ ಯಸ್ಮಾತ್ತೇ ಬಹವಸ್ಸುತಾಃ ॥ ೧೩೨ ॥

ಮಯಾ ನೈವಾರ್ಪಿತಾಸ್ತ್ವತ್ರ ತಚ್ಛೃಣು ಶುಚಿಸ್ಮಿತೇ ।
ವಿನೋದಾತ್ತೇ ವದಾಮ್ಯದ್ಯ ಮಾನ್ಯಥಾ ಕುರು ಮದ್ವಚಃ ॥ ೧೩೩ ॥

ಬಹುಪುತ್ರೈಶ್ಚ ತಾರುಣ್ಯಂ ನಾರೀಣಾಂ ಸ್ಥಾಸ್ಯತೇ ನ ಹಿ ।
ಮತ್ವೇತಿ ತವ ತಾರುಣ್ಯಚ್ಛೇದಿನೀ ಬಹುಸಂತತಿಃ ॥ ೧೩೪ ॥

ನ ಮಯಾತ್ರಾರ್ಪಿತಾ ಸೀತೇ ಗುಹ್ಯಂ ವಿದ್ಧೀತಿ ಮೇ ಪ್ರಿಯೇ ।
ಯದೀಚ್ಛಾಸ್ತಿ ಬಹೂನಾಂ ತೇ ತನಯಾನಾಂ ವಿದೇಹಜೇ ॥ ೧೩೫ ॥

ತರ್ಹಿ ತೇ ದ್ವಾಪರೇ ಕೃಷ್ಣರೂಪೇಣ ದ್ವಾರಕಾಪುರಿ ।
ದಶ ಪುತ್ರಾನ್ ಪ್ರದಾಸ್ಯಾಮಿ ತದಾ ತೇಷಾಂ ಸುಖಂ ಭಜ ॥ ೧೩೬ ॥

೧೩೨-೧೩೩. ಹೀಗೆ ಹೇಳತಕ್ಕ ಮಾತೇ ದೊಡ್ಡದೂ ಉತ್ತಮವೂ ಆದುದೆಂದು ವಿದ್ವಾಂಸರೂ ತಿಳಿದಿರುತ್ತಾರೆ. ಇದೂ ಅಲ್ಲದೆ ನಾನು ನಿನಗೆ ಅನೇಕ ಜನ ಮಕ್ಕಳನ್ನು ಕೊಡದಿರುವುದಕ್ಕೆ ಮತ್ತೊಂದು ಕಾರಣವನ್ನು ಹೇಳುತ್ತೇನೆ. ಕೇಳು. ನಾನು ನಿನಗೆ ವಿನೋದದಿಂದ ಹೇಳುತ್ತೇನೆ. ಅಷ್ಟೆ! ಇದರಲ್ಲಿ ಬೇರೆಯ ರೀತಿಯಾದ ಭಾವನೆಯನ್ನು ಮಾಡಬೇಡ.

೧೩೪-೧೩೫. ಬಹುಜನ ಮಕ್ಕಳಾದರೆ ಹೆಂಗಸರಿಗೆ ವಯಸ್ಸು ಕಡಿಮೆ ಯಾಗಿದ್ದರೂ ಯೌವನವು (ತಾರುಣ್ಯವು) ನಿಲ್ಲುವುದಿಲ್ಲ. ಹೊರಟುಹೋಗುತ್ತದೆ. ಎಂದು ತಿಳಿದು ಆ ತಾರುಣ್ಯವನ್ನೇ ನಾಶಮಾಡುವ ಬಹು ಸಂತತಿಯನ್ನು ನಿನಗೆ ಕೊಡಲಿಲ್ಲ. ಇದೇ ತತ್ವವೆಂದು ನೀನು ತಿಳಿ. ಎಲೈ ಸೀತೆಯೇ! ನಿನಗೆ ಬಹಳ ಮಕ್ಕಳಾಗಬೇಕೆಂದು ಇಚ್ಛೆ ಇದೆಯೇ ?

೧೩೬. ಹಾಗೆ ಇಚ್ಛೆಯಿದ್ದರೆ ನಾನು ದ್ವಾರಕಾಪುರದಲ್ಲಿ ಕೃಷ್ಣನಾಗಿ ಅವತರಿಸುತ್ತೇನೆ. ಆಗ ನಿನಗೆ ಹತ್ತುಜನ ಮಕ್ಕಳನ್ನು ಕೊಡುತ್ತೇನೆ. ಆಗ ಅವರ ಸುಖವನ್ನು ನೀನು ಹೊಂದು.

ಕನ್ಯಾಮಪಿ ತದೈಕಾಂತೇ ಪ್ರದಾಸ್ಯಾಮಿ ನ ಸಂಶಯಃ ।
ತದಾ ತೇ ಬಹುಪುತ್ರೈಶ್ಚ ತಾರುಣ್ಯಂ ಸ್ಥಾಸ್ಯತೇ ನ ಹಿ ॥ ೧೩೭ ॥

ಅತಃ ಸ್ತ್ರೀಣಾಂ ಸಹಸ್ರಾಣಿ ಷೋಡಶೈಕಶತಂ ಪುನಃ ।
ತಥಾ ಮುಖ್ಯಾಸ್ತ್ವಷ್ಟ ನಾರ್ಯಸ್ತ್ವಯಾ ಸಹ ಕರೋಮ್ಯಹಂ ॥ ೧೩೮ ॥

ತದಾ ಬಹೂನಾಂ ಪುತ್ರಾಣಾಂ ಸ್ನುಷಾಣಾಂ ತ್ವಂ ಸುಖಂ ಭಜ ।
ಅಹಂ ಚಾಪಿ ಬಹುಸ್ತ್ರೀಣಾಂ ತದಾ ಸೌಖ್ಯಂ ಭಜಾಮಿ ವೈ ॥ ೧೩೯ ॥

ಇತಿ ರಾಮವಚಃ ಶ್ರುತ್ವಾ ತದಾ ಸೀತಾ ಸ್ಮಿತಾನನಾ ।
ರಾಘವಂ ಹರ್ಷಿತಾ ಪ್ರಾಹ ವಾಕ್ಚಾತುರ್ಯಂ ಕುತಃ ಪ್ರಭೋ ॥ ೧೪೦ ॥

ಏತಲ್ಲಬ್ಧಂ ತ್ವಯಾ ರಾಮ ಯೇನ ಸಂಜಯಸೀಹ ಮಾಂ ।
ಏವಂ ಪರಸ್ಪರಂ ಚೋಕ್ತ್ವಾ ರಮಾಲಿಂಗ್ಯ ಪರಿಸ್ಪರಂ ॥ ೧೪೧ ॥

---

೧೩೭. ಆಗ ಒಬ್ಬಳು ಮಗಳನ್ನು ಕೊಡುತ್ತೇನೆ. ಆಗ ನೀನು ಬಹುಜನ ಮಕ್ಕಳನ್ನು ಪಡೆಯುವುದರಿಂದ ನಿನಗೆ ತಾರುಣ್ಯವು ನಾಶವಾಗಿ ಹೋಗುತ್ತದೆ.

೧೩೮. ಆದ್ದರಿಂದಲೇ ಆ ಕೃಷ್ಣಾವತಾರದಲ್ಲಿ ನಾನು ಹದಿನಾರುಸಾವಿರದ ಒಂದುನೂರುಜನ ಹೆಂಡತಿಯರನ್ನು ಹೊಂದಿರುತ್ತೇನೆ. ಅವರಲ್ಲಿ ಎಂಟುಜನ ಮುಖ್ಯರಾದ ಹೆಂಡತಿಯರಾಗುತ್ತಾರೆ. ಆ ಮುಖ್ಯ ಹೆಂಡತಿಯರಲ್ಲಿ ನೀನೂ ಒಬ್ಬಳಾಗಿರುತ್ತೀಯೆ.

೧೩೯. ಆಗ ನೀನು ಬಹು ಪುತ್ರರ ಸುಖವನ್ನೂ ಬಹುಜನ ಸೊಸೆಯರ ಸುಖವನ್ನೂ ಹೊಂದು. ನಾನೂ ಕೂಡ ಬಹುಜನ ಹೆಂಡತಿಯರ ಸುಖವನ್ನು ಆಗ ಹೊಂದುತ್ತೇನೆ.

೧೪೦–೧೪೧. ಈ ರೀತಿಯಾಗಿ ರಾಮನು ಹೇಳಿದುದನ್ನು ಸೀತೆಯು ಕೇಳಿ ನಗುತ್ತ ಹರ್ಷಗೊಂಡು ರಾಮನನ್ನು ಕುರಿತು ಎಲೈ ಪ್ರಭುವೇ! ಈ ಮಾತಿನ ಚಾತುರ್ಯವನ್ನು ನೀನು ಎಲ್ಲಿ ಕಲಿತೆ? ಈ ವಾಕ್ಚಾತುರ್ಯದಿಂದಲೇ ನನ್ನನ್ನು ಸಂತೋಷಪಡಿಸುತ್ತಿರುವೆಯಲ್ಲ! ಎನ್ನುತ್ತಿದ್ದಳು. ಈ ರೀತಿಯಾಗಿ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತ ಒಬ್ಬರನ್ನೊಬ್ಬರು ಆಲಂಗಿಸಿಕೊಂಡರು.

ಅರ್ಧರಾತ್ರ್ಯಾಂ ಸುಖಂ ನಿದ್ರಾಂ ಚಕ್ರತುರ್ಜಾನಕೀಪ್ರಭೂ |
ಏವಂ ಪ್ರೋಕ್ತಾ ಮಯಾ ಶಿಷ್ಯ ದಿನಚರ್ಯಾ ರಮಾಪತೇಃ ॥ ೧೪೨ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಉತ್ತರಾರ್ಧೇ ದಿನಚರ್ಯಾವರ್ಣನಂ ನಾಮೈಕೋನವಿಂಶಸ್ಸರ್ಗಃ ಸಮಾಪ್ತಃ

---

೧೪೨. ಅನಂತರ ಅರ್ಧರಾತ್ರಿಯಲ್ಲಿ ಮತ್ತೆ ಮಲಗಿ ಆ ಸೀತಾರಾಮರು ನಿದ್ದೆಯನ್ನು ಮಾಡಿದರು. ಎಲೈ ಶಿಷ್ಯನೇ ! ಈ ರೀತಿಯಾಗಿ ರಮಾಪತಿಯಾದ ರಾಮನ ದಿನಚರ್ಯೆಯನ್ನು ನಿನಗೆ ಹೇಳಿದ್ದೇನೆ.

ಇಂತು ಶ್ರೀ ವಾಲ್ಮೀಕಿ ರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ರಾಮನ ದಿನಚರ್ಯಾವರ್ಣನವೆಂಬ ಹತ್ತೊಂಭತ್ತನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಹತ್ತೊಂಭತ್ತನೆಯ ಸರ್ಗದ ಸಾರಾಂಶವು

ಶ್ರೀರಾಮನು ತಾನು ರಾಜ್ಯಭಾರವಾಡುತ್ತಿರುವಾಗ ಪ್ರತಿದಿನವೂ ತನ್ನ ದಿನಚರಿಕರ್ಮಗಳನ್ನು ಮಾಡುತ್ತಿದ್ದನಷ್ಟೆ. ಅದು ಇತರರಿಗೂ ಮೇಲ್ಪಂಕ್ತಿಯಾಗಿರಲೆಂದು ಅದನ್ನು ಈ ಸರ್ಗದಲ್ಲಿ ಹೇಳಿದೆ.

ಆತನು ಮಂಗಳವಾದ್ಯಗಳ ಧ್ವನಿಯನ್ನೂ ವಂದಿಗಳ ಹೊಗಳಿಕೆಯನ್ನೂ ಕೇಳಿ ಬೆಳಗ್ಗೆ ಹಾಸಿಗೆಯಿಂದೇಳುತ್ತಿದ್ದನು. ಎದ್ದಒಡನೆಯೇ ಪಾರ್ವತೀ ಪರಮೇಶ್ವರರನ್ನೂ ಗುರುವನ್ನೂ ತಂದೆತಾಯಿಗಳನ್ನೂ ದೇವತೆಗಳನ್ನೂ ಪುಣ್ಯ ತೀರ್ಥಗಳನ್ನೂ ಉತ್ತಮದೇವಸ್ಥಾನಗಳನ್ನೂ ಕ್ಷೇತ್ರಗಳನ್ನೂ ಅರಣ್ಯಗಳನ್ನೂ ಪರ್ವತಗಳನ್ನೂ ಸಾಗರಗಳನ್ನೂ ನದಿಗಳನ್ನೂ ಸ್ಮರಿಸುತ್ತಿದ್ದನು. ಅನಂತರ ಸೀತೆಯನ್ನು ನೋಡುತ್ತಿದ್ದನು. ಆಕೆಯು ಗಂಡನಿಗೆ ಬೆಳಗ್ಗೆ ಎದ್ದೊಡನೆಯೇ ನಮಸ್ಕರಿಸುತ್ತಿದ್ದಳು. ಆಕೆಯನ್ನು ಕೈಹಿಡಿದು ಎಬ್ಬಿಸಿ ಮಂಚದಿಂದಿಳಿದು ಹೊರಗಿನ ತೊಟ್ಟಿಗೆ ಹೋಗಿ ಶೌಚಕ್ಕೂ ದಂತಶುದ್ಧಿಗೂ ಬೇಕಾದ ಪದಾರ್ಥ ಗಳನ್ನು ತೆಗೆದುಕೊಂಡು ಕ್ರೀಡಾಶಾಲೆಗೆ ಹೋಗಿ ಅಲ್ಲಿ ಶೌಚವನ್ನು ಮುಗಿಸಿ ಕೊಂಡು ಹಲ್ಲುನಾಲಿಗೆಗಳನ್ನು ಉಜ್ಜಿಕೊಂಡು ಮುಖವನ್ನು ತೊಳೆದುಕೊಳ್ಳು ತ್ತಿದ್ದನು. ಸ್ನಾನಮಾಡಬೇಕಾದರೆ ಒಂದೊಂದು ಸಲ ಮನೆಯಲ್ಲಿ ಮಾಡು ತ್ತಿದ್ದನು. ಒಂದೊಂದು ಸಲ ಸರಯೂನದಿಗೆ ಹೋಗುತ್ತಿದ್ದನು. ನದಿಗೆ ಸ್ನಾನಕ್ಕೆ ಹೋಗಬೇಕಾದರೆ ಪಲ್ಲಕ್ಕಿಯಲ್ಲಿ ಕುಳಿತುಹೋಗುತ್ತಿದ್ದನು. ಜೊತೆಯಲ್ಲಿ ಬ್ರಾಹ್ಮಣರೂ ಹೋಗುತ್ತಿದ್ದರು. ನದಿಯ ಬಳಿಗೆ ಹೋಗುತ್ತಲೂ ಪಲ್ಲಕಿಯಿಂದ ಕೆಳಗಿಳಿದು ಆ ನದಿಗೆ ನಮಸ್ಕರಿಸಿ ಸ್ತುತಿಸಿ ಆ ನದಿಗೆ ದಕ್ಷಿಣಾ ತಾಂಬೂಲಗಳನ್ನೂ ಫಲಗಳನ್ನೂ ಅರ್ಪಿಸುತ್ತಿದ್ದನು. ಅನಂತರ ಮಂತ್ರಗಳನ್ನು ಹೇಳಿಕೊಂಡು ಸ್ನಾನಮಾಡುತ್ತಿದ್ದನು. ಈ ಪ್ರಾತಃ ಸ್ನಾನವಾದ ಮೇಲೆ ಬ್ರಹ್ಮಯಜ್ಞವನ್ನು ಮಾಡಿ ಬ್ರಾಹ್ಮಣರಿಗೆ ದಾನಗಳನ್ನು ಮಾಡು ತ್ತಿದ್ದನು. ಅನಂತರ ರಥದಲ್ಲಿ ಕುಳಿತು ಮನೆಗೆ ಬರುತ್ತಿದ್ದನು. ಸಾರಥಿಯು ತಾನು ಸ್ನಾನಮಾಡಿ ರಥವನ್ನೂ ಕುದುರೆಗಳನ್ನು ತೊಳೆದಿರುತ್ತಿದ್ದನು. ಮನೆಗೆ

ಹೋಗಿ ಔಪಾಸನವನ್ನು ಮಾಡಿ ದೇವರಪೂಜೆಯನ್ನು ಮಾಡುತ್ತಿದ್ದನು. ಅನಂತರ ತಾಯಿಯರ ಪೂಜೆಯನ್ನು ಮಾಡುತ್ತಿದ್ದನು. ಅನಂತರ ಕಾಮಧೇನು ಕಲ್ಪವೃಕ್ಷ, ಪಾರಿಜಾತ ಪುಷ್ಪಕ, ಚಿಂತಾಮಣಿ, ಕೌಸ್ತುಭ, ಅಗಸೆಮರ, ಮುತ್ತುಗದಮರ, ಬಿಲ್ವದಮರ, ಅರಳಿಯಮರ, ತುಲಸಿ, ಬನ್ನಿಮರ, ಗರಿಕೆಗಳನ್ನು ಪೂಜಿಸಿ ಅನಂತರ ಸೂರ್ಯನಮಸ್ಕಾರವನ್ನು ಮಾಡಿ ದಾರ್ವ ದೇವತೆಯನ್ನು ಪೂಜಿಸುತ್ತಿದ್ದನು. ಅನಂತರ ಗೋವು, ಗೂಳಿ, ಕುದುರೆ, ಆನೆ, ರಥ, ಶಸ್ತ್ರ, ಬ್ರಾಹ್ಮಣರು, ಕೊಟ್ಟಿಗೆ, ಕೋಶ, ಪಾಕಶಾಲೆ. ಸಿಂಹಾಸನ, ಛತ್ರ, ಚಾಮರ, ವ್ಯಜನ, ಕಿರೀಟ, ಮಂಚ, ದೀಪ, ಕನ್ನಡಿ, ಪುಸ್ತಕಗಳು, ಇವನ್ನು ಪೂಜಿಸುತ್ತಿದ್ದನು. ಅಷ್ಟರವೇಳೆಗೆ ವಸಿಷ್ಠನು ಪುರಾಣವನ್ನು ಹೇಳಲು ಎತ್ತರವಾದ ಪೀಠದಲ್ಲಿ ಕುಳ್ಳಿರುತ್ತಿದ್ದನು. ರಾಮನು ಅವನನ್ನು ಪೂಜಿಸಿ ಅವನಿಂದ ಪುರಾಣವನ್ನು ಕೇಳುತ್ತಿದ್ದನು. ತಮ್ಮಂದಿರೂ ಸೀತೆಯೂ ಮಕ್ಕಳೂ ಜೊತೆಯಲ್ಲಿ ಪುರಾಣವನ್ನು ಕೇಳುತ್ತಿದ್ದರು. ಅನಂತರ ಇಷ್ಟಮಿತ್ರರೊಡನೆ ಕೂಡಿಕೊಂಡು ಉಪಹಾರವನ್ನು ಮಾಡುತ್ತಿದ್ದನು. ಅನಂತರ ಬೇರೆಯ ಉಡುಪನ್ನು ಉಟ್ಟು ಸೊಂಟಕಟ್ಟನ್ನು ಕಟ್ಟಿಕೊಂಡು ಕತ್ತಿಯನ್ನು ಕಟ್ಟಿಕೊಳ್ಳು ತ್ತಿದ್ದನು. ಇಷ್ಟರವೇಳೆಗೆ ವೈದ್ಯನೂ ಜೋಯಿಸನೂ ಬರುತ್ತಿದ್ದರು. ವೈದ್ಯನು ಬಂದು ರಾಮನ ನಾಡಿಯನ್ನು ನೋಡಿ ಆರೋಗ್ಯಭಾಗ್ಯವನ್ನು ಹೇಳುತ್ತಿದ್ದನು. ಅನಂತರ ಜೋಯಿಸನು ದಿನ ಶುದ್ಧಿಯನ್ನು ಹೇಳುತ್ತಿದ್ದನು. ಅನಂತರ ಅವರಿಬ್ಬರೂ ಗೌರವಿತರಾಗಿ ಹೊರಟುಹೋಗುತ್ತಿದ್ದರು. ಅನಂತರ ಹೂವಿನವನು ಬಂದು ಹೂವನ್ನು ಒಪ್ಪಿಸುತ್ತಿದ್ದನು. ರಾಮನು ಆ ಹೂವನ್ನು ಎಲ್ಲರಿಗೂ ಕೊಟ್ಟು ತಾನೂ ಧರಿಸಿಕೊಳ್ಳುತ್ತಿದ್ದನು. ಅನಂತರ ನಾಪಿತನು ಬರುತ್ತಿದ್ದನು. ಅವನು ರಾಮನಿಗೆ ಕನ್ನಡಿಯನ್ನು ತೋರಿಸುತ್ತಿದ್ದನು. ಆ ರಾಮನು ಅದರಲ್ಲಿ ತನ್ನ ಮುಖವನ್ನು ನೋಡಿಕೊಂಡು ಸಂತೋಷಪಡುತ್ತಿದ್ದನು. ಅನಂತರ ಧೂಪದವನು ಬಂದು ಧೂಪವನ್ನು ತೋರಿಸುತ್ತಿದ್ದನು. ಇದಾದಮೇಲೆ ಆ ಪ್ರಭುವು ಪಲ್ಲಕ್ಕಿಯಲ್ಲಿ ಕುಳಿತು ಹೊರಗೆ ಹೊರಟು ಹೊರಗಿರುವ ವಂದಿಗಳನ್ನು ನೋಡುತ್ತಿದ್ದನು. ಅವರು ಅವನನ್ನೂ ಅವನ ವಂಶದವರನ್ನೂ ಹೊಗಳು ತ್ತಿದ್ದರು. ಆಮೇಲೆ ಮೂರನೆಯ ತೊಟ್ಟಿಗೆ ಹೋಗಿ ಅಲ್ಲಿರುವ ಆನೆ, ಕುದುರೆ, ಮೊದಲಾದುವನ್ನು ನೋಡುತ್ತಿದ್ದನು. ಅನಂತರ ನಾಲ್ಕನೆಯ ತೊಟ್ಟಿಗೆ ಹೋಗುತ್ತಿದ್ದನು. ಅಲ್ಲಿ ತನ್ನ ದರ್ಶನಕ್ಕೋಸ್ಕರ ಬಂದು ಕಾದಿರುವ ರಾಜರನ್ನೂ ರಾಜಪುತ್ರರನ್ನು ಪಟ್ಟಣಿಗರೇ ಮುಂತಾದವರನ್ನೂ ನೋಡುತ್ತಿದ್ದನು. ಅನಂತರ ಐದನೆಯ ತೊಟ್ಟಿಗೆ ಹೋಗುತ್ತಿದ್ದನು. ಅಲ್ಲಿ ಪುಷ್ಪಕ ವಿಮಾನವನ್ನೂ

ಹೂದೋಟವನ್ನೂ ನೋಡಿ ದೂತರನ್ನೂ ನೋಡುತ್ತಿದ್ದನು. ಅನಂತರ ಆರನೆಯ ತೊಟ್ಟಿಗೆ ಹೋಗಿ ಕುದುರೆಯ ರಾವುತರನ್ನು ನೋಡುತ್ತಿದ್ದನು. ಅನಂತರ ಏಳನೆಯ ತೊಟ್ಟಿಗೆ ಹೋಗಿ ಅಲ್ಲಿ ಪಲ್ಲಕ್ಕಿಯಿಂದಿಳಿದು ಸಭೆಗೆ ಹೋಗಿ ಸಿಂಹಾಸನದಲ್ಲಿ ಕುಳಿತುಕೊಳ್ಳುತ್ತಿದ್ದನು. ಅಲ್ಲಿ ಲಕ್ಷ್ಮಣನು ಛತ್ರಿಯನ್ನೂ ಭರತನು ಚಾಮರವನ್ನೂ ಶತ್ರುಘ್ನನು ವ್ಯಜನವನ್ನೂ ಮಾರುತಿಯು ಪಾದುಕೆಗಳನ್ನೂ ಸುಗ್ರೀವನು ಜಲಪಾತ್ರೆಯನ್ನೂ ವಿಭೀಷಣನು ಕನ್ನಡಿಯನ್ನೂ ಅಂಗದನು ತಾಂಬೂಲ ಪಾತ್ರೆಯನ್ನೂ ಜಾಂಬುವನು ವಸ್ತ್ರಕೋಶವನ್ನೂ ಹಿಡಿದು ಆ ರಾಮನ ಸುತ್ತಲೂ ಹಿಂದುಗಡೆಯಲ್ಲಿಯೂ ಅಕ್ಕಪಕ್ಕಗಳಲ್ಲಿಯೂ ನಿಂತಿರುತ್ತಿದ್ದರು. ಮುನಿಗಳೂ ಮಂತ್ರಿಗಳೂ ವೀರರೂ ಯಥೋಚಿತವಾಗಿ ಕುಳಿತಿರುತ್ತಿದ್ದರು ಉಳಿದವರು ನಿಂತಿರುತ್ತಿದ್ದರು. ಆಗ ತಾನು ಆ ಸಭೆಯಲ್ಲಿ ಮುಖ್ಯವಾದ ಕೆಲಸಗಳನ್ನು ವಿಚಾರಿಸಿ ಸರಿಮಾಡುತ್ತಿದ್ದುದಲ್ಲದೆ ತಮ್ಮಂದಿರಿಗೂ ಮಕ್ಕಳಿಗೂಕೆಲಕೆಲವು ಕೆಲಸಗಳನ್ನು ಕೊಟ್ಟು ಮಾಡಿಸುತ್ತಿದ್ದನು.

ಆ ಕೆಲಸಗಳಾಗುತ್ತಲೂ ಮತ್ತೆ ಹಿಂದಿನಂತೆಯೇ ಮನೆಗೆ ಬರುತ್ತಿದ್ದನು. ಆಗ ಸೀತೆಯು ರಾಮನು ಬಂದುದನ್ನು ತಿಳಿದು ಕಾಲಿಗೆ ನೀರನ್ನು ಕೊಡುತ್ತಿದ್ದಳು. ಆ ರಾಮನು ಕಾಲನ್ನು ತೊಳೆದುಕೊಂಡು ತಮ್ಮಂದಿರನ್ನೂ ಮಕ್ಕಳನ್ನೂ ಅವರವರ ಮನೆಗಳಿಗೆ ಕಳುಹಿಸಿಬಿಟ್ಟು ಸೀತೆಯ ಮನೆಗೆ ಹೋಗಿ ಅಂದು ನಡೆದ ವಿಷಯಗಳನ್ನು ಆಕೆಗೆ ಹೇಳುತ್ತಿದ್ದನು.

ಅನಂತರ ಎಲ್ಲರನ್ನೂ ಊಟಕ್ಕೆ ಬರುವಂತೆ ಹೇಳಿಕಳುಹಿಸುವನು. ತಾನು ಸ್ನಾನಮಾಡಿ ಮಾಧ್ಯಾಹ್ನಿಕ ವೈಶ್ವದೇವಾದಿಗಳನ್ನು ಮಾಡುತ್ತಿದ್ದನು. ಎಲ್ಲರೂ ಬಂದಮೇಲೆ ಅವರ ಜೊತೆಯಲ್ಲಿ ಊಟಮಾಡಿ ಕೈತೊಳೆದುಕೊಂಡು ತಾಂಬೂಲವನ್ನು ಹಾಕಿಕೊಳ್ಳುತ್ತಿದ್ದನು. ಅನಂತರ ಶತಪಥವನ್ನು ತಿರುಗಿ ಬಂದು ಕ್ಷಣಕಾಲ ಮಲಗುತ್ತಿದ್ದನು. ಅಷ್ಟುಹೊತ್ತಿಗೆ ಸೀತೆಯೂ ಊಟಮಾಡಿ ಬಂದು ಕ್ಷಣಕಾಲ ಮಲಗುತ್ತಿದ್ದಳು.

ಅನಂತರ ಇಬ್ಬರೂ ಎದ್ದು ಚದುರಂಗವನ್ನಾಡುತ್ತಿದ್ದರು. ಅನಂತರ ಪಕ್ಷಿಗಳನ್ನು ನೋಡಿಕೊಂಡು ಮುಹಡಿಯಮೇಲೆಕ್ಕೆ ಹತ್ತಿ ಪಟ್ಟಣವನ್ನು ನೋಡಿಕೊಂಡು ಇಳಿದು ಗೋಶಾಲೆಗೆ ಹೋಗಿ ಹಸುಗಳನ್ನು ನೋಡುತ್ತಿದ್ದನು. ಅಷ್ಟರವೇಳೆಗೆ ಲಕ್ಷ್ಮಣನೇ ಮುಂತಾದವರು ಬಂದು ಸೇರುತ್ತಿದ್ದರು. ಅನಂತರ ಎಮ್ಮೆಯ ಕರೋಟಿ. ರಥಶಾಲೆಗಳಿಗೆ ಹೋಗಿ ನೋಡಿಕೊಂಡು ಭಂಡಾರಗಳಿಗೆ ಭೇಟಿಕೊಡುತ್ತಿದ್ದನು. ಅನಂತರ ಕೋಟೆಗಳನ್ನೂ ಅಗಳುಗಳನ್ನೂ

ನೋಡುತ್ತಿದ್ದನು. ಮುಂದೆಹೋಗಿ ತೋಟಗಳನ್ನೂ ನೋಡುತ್ತಿದ್ದನು. ಮುಂದೆ ಹೊರಟು ನದಿಗೆ ಹೋಗಿ ದೋಣಿಯಲ್ಲಿ ಸ್ವಲ್ಪಹೊತ್ತು ಸುಖಿಸುತ್ತಿದ್ದನು. ಅನಂತರ ಆ ನದಿಯ ದಡದಲ್ಲಿಯೇ ಸಭೆಯನ್ನು ಮಾಡುತ್ತಿದ್ದನು. ಅನಂತರ ಅಲ್ಲಿಯೇ ಸಾಯಂಕಾಲದ ಸಂಧ್ಯಾವಂದನೆಯನ್ನು ಮಾಡಿ ಮನೆಗೆ ಬಂದು ಔಪಾಸನವನ್ನು ಮಾಡಿಕೊಂಡು ದೇವಸ್ಥಾನಕ್ಕೆ ಹೋಗಿ ದೇವರ ದರ್ಶನವನ್ನು ಮಾಡುತ್ತಿದ್ದನು.ಅನಂತರ ಮನೆಗೆ ಬಂದು ಉಪಹಾರವನ್ನು ಮಾಡಿಕೊಂಡು ರತಿಶಾಲೆಗೆ ಹೋಗುತ್ತಿದ್ದನು. ಅಲ್ಲಿ ಸೀತೆಯೊಡನೆ ಸರಸಸಲ್ಲಾಪದಲ್ಲಿರುತ್ತಿದ್ದನು.

ಆಗ ಸೀತೆಯು ಒಂದುಸಾರಿ ತನಗೆ ಹೆಚ್ಚುಜನ ಮಕ್ಕಳೇಕೆ ಆಗಲಿಲ್ಲವೆಂದು ಕೇಳಲು ಅವಳಿಗೆ ಹೆಣ್ಣುಮಕ್ಕಳಾಗದಿರುವಿಕೆಯನ್ನು ಯುಕ್ತಿಯಿಂದ ಹೇಳಿ ಸಮಾಧಾನಪಡಿಸುತ್ತಿದ್ದನು.

ಅಲ್ಲದೆ ತಾನು ಮುಂದೆ ಕೃಷ್ಣಾವತಾರವನ್ನು ಮಾಡಿ ಅನೇಕ ಹೆಂಡಿರ ಸುಖವನ್ನು ಅನುಭವಿಸುವುದಾಗಿಯೂ ಸೀತೆಯು ಆಗ ತನಗೆ ಹೆಂಡತಿಯಾಗಿದ್ದು ಅನೇಕ ಮಕ್ಕಳ ಸೌಖ್ಯವನ್ನು ಹೊಂದುವುದಾಗಿಯೂ ಹೇಳಿ ಆಕೆಯನ್ನು ಸಂತೋಷಪಡಿಸುತ್ತಿದ್ದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ

ಉತ್ತರಾರ್ಧೇ ವಿಂಶಸ್ಸರ್ಗಃ

॥ ರಾಮದಾಸ ಉವಾಚ ॥

ಅಥೈಕದಾ ವಸಿಷ್ಠಂ ಹಿ ಪ್ರಭಾತೇ ಚಾಬ್ರವೀಲ್ಲವಃ ।
ಕಿಂಚಿತ್ತೇ ಪ್ರಷ್ಟುಮಿಚ್ಛಾಮಿ ತತ್ವಂ ವದ ಮುನೀಶ್ವರ ॥ ೧ ॥

ಸರ್ವಂ ಯದ್ಯಪಿ ಜಾನಾಮಿ ವಾಲ್ಮೀಕೇಶ್ಚ ಪ್ರಸಾದತಃ ।
ತಥಾಪಿ ಲೋಕಾನ್ ಸಕಲಾನ್ ಜ್ಞಾತುಂ ಪೃಚ್ಛಾಮಿ ತೇದ್ಯ ಹಿ ॥ ೨ ॥

ಯದಾಸ್ಮಾಭಿರ್ನಿಶಾಯಾಂ ಹಿ ಸರ್ವೈರ್ನಿದ್ರಾ ವಿಧೀಯತೇ ।
ತದಾ ಸಂಶ್ರೂಯತೇ ಕರ್ಣೇ ಭಸ್ತ್ರಾವತ್ಕಸ್ಯ ವೈ ಧ್ವನಿಃ ॥ ೩ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ಇಪ್ಪತ್ತನೆಯ ಸರ್ಗವು

೧. ರಾಮದಾಸನು ಹೇಳಿದನು:—ಹೀಗಿರುತ್ತಲು ಒಂದು ಸಾರಿ ಬೆಳಗಿನ ಹೊತ್ತಿನಲ್ಲಿ ಅವನು ವಸಿಷ್ಠನನ್ನು ಕುರಿತು ಎಲೈ ಮುನೀಶ್ವರನೇ! ನಿನ್ನಲ್ಲಿ ಒಂದು ವಿಷಯವನ್ನು ಕೇಳಬೇಕೆಂದಿದ್ದೇನೆ. ಅದನ್ನು ಹೇಳಬೇಕು.

೨. ವಾಲ್ಮೀಕಿಯ ಅನುಗ್ರಹದಿಂದ ಎಲ್ಲವನ್ನೂ ತಿಳಿದಿರುವೆನು. ಆದರೂ ಕೂಡ ಲೋಕದವರೆಲ್ಲರೂ ತಿಳಿಯಲೆಂದು ಈಗ ನಿನ್ನನ್ನು ಕೇಳುತ್ತೇನೆ.

೩. ಎಲೈ ಗುರುವೇ! ನಾವು ರಾತ್ರಿಯಲ್ಲಿ ಎಲ್ಲರೂ ನಿದ್ರೆಯನ್ನು ಮಾಡು ತ್ತಿರುವಾಗ ತಿದಿಯನ್ನು ಒತ್ತಿದಂತೆ ಎಲ್ಲೆಲ್ಲೂ ಒಂದು ಬಗೆಯ ಧ್ವನಿಯು ಕೇಳು ತ್ತಿರುವುದಲ್ಲ! ಅದು ಯಾರ ಧ್ವನಿ?

ಅಮುಂ ಮತ್ಸಂಶಯಂ ಛಿಂಧಿ ಪರಂ ಕೌತೂಹಲಂ ಗುರೋ ।
ಲವಸ್ಯೇತಿ ವಚಃ ಶ್ರುತ್ವಾ ವಸಿಷ್ಠಸ್ಸ ತಮಬ್ರವೀತ್ ॥ ೪ ॥
ಬಹವೋ ಬ್ರಹ್ಮಹತ್ಯಾಶ್ಚ ರಾವಣೇನ ಕೃತಾಃ ಪುರಾ ।
ಯೇನ ದೇಹೇನ ಸೋದ್ಯಾಪಿ ಲಂಕಾಯಾಂ ಜ್ವಲತೇ ಲವ ॥ ೫ ॥
ರಾವಣೋ ರಾಮಹಸ್ತೇನ ವಧಾನ್ಮುಕ್ತಿಂ ಗತಃ ಕ್ಷಣಾತ್ ।
ರಾಮಚಿಂತನಪುಣ್ಯೇನ ವೈರಬುಧ್ಯಾ ಕೃತೇನ ಚ ॥ ೬ ॥
ಆತ್ಮನಸ್ಸಕಲಂ ಪಾಪಂ ತೇನ ದಗ್ಧಂ ಪುರೈವ ಹಿ ।
ದೇಹೇನ ನ ಕೃತಂ ತಸ್ಯ ದೇವಾನಾಂ ನಮನಂ ಪುರಾ ॥ ೭ ॥
ಸಮ್ಮಾರ್ಜನಾದಿಕಂ ಕರ್ಮ ದೇವಾಗಾರೇಪಿ ನೋ ಕೃತಂ ।
ನ ಕೃತಾ ತೀರ್ಥಯಾತ್ರಾ ಹಿ ತಸ್ಯ ದೇಹೇನ ಭಕ್ತಿತಃ ॥ ೮ ॥

---

೪. ಇದನ್ನು ಕೇಳಬೇಕೆಂದು ಬಹುವಾದ ಕುತೂಹಲವಿರುವುದು. ಎಲೈ ಗುರುವೇ! ಈ ನನ್ನ ಸಂಶಯವನ್ನು ಹೋಗಲಾಡಿಸು ಎಂದನು. ಲವನು ಹೀಗೆ ಹೇಳಿದುದನ್ನು ಕೇಳಿ ವಸಿಷ್ಠನು ಆತನನ್ನು ಕುರಿತು ಇಂತೆಂದನು.

೫. ರಾವಣನು ಪೂರ್ವದಲ್ಲಿ ಬಹುವಾಗಿ ಬ್ರಹ್ಮಹತ್ಯೆಗಳನ್ನು ಮಾಡಿದನು. ಅವನು ಆ ಬ್ರಹ್ಮತ್ಯೆಗಳ ದೋಷವನ್ನು ಹೊಂದಿರುವ ದೇಹದಿಂದ ಈಗಲೂ ಲಂಕೆಯಲ್ಲಿ ಜ್ವಲಿಸುತ್ತಿರುವನು.

೬. ರಾವಣನು ರಾಮನ ಕೈಯಿಂದ ಸತ್ತುದರಿಂದ ಒಂದು ಕ್ಷಣಕಾಲ ದಲ್ಲಿಯೇ ಮುಕ್ತಿಯನ್ನು ಹೊಂದಿದನು. ಅವನು ರಾಮನ ಮೇಲೆ ವೈರವನ್ನಿಟ್ಟು ಅವನನ್ನೇ ಜಪಿಸುತ್ತಲೂ ಇದ್ದುದರಿಂದ ಅವನು ಮುಕ್ತಿಯನ್ನು ಹೊಂದಿದುದರಲ್ಲಿ ಅನುಮಾನವಿಲ್ಲ.

೭-೮. ಆ ರಾಮನಾಮದ ಸ್ಮರಣೆಯಿಂದಲೇ ಅವನ ಪಾಪವೆಲ್ಲವೂ ಮೊದಲೇ ನಾಶವಾಗಿವೆ. ಆದರೆ ಅವನು ತನ್ನ ಆ ದೇಹದಿಂದ ದೇವತೆಗಳಿಗೆ ನಮಸ್ಕರಿಸಲಿಲ್ಲ. ದೇವಸ್ಥಾನಗಳಲ್ಲಿ ಗುಡಿಸುವುದು, ಸಾರಿಸುವುದೇ ಮುಂತಾದ ಯಾವ ಕೆಲಸಗಳನ್ನೂ ಆ ದೇಹದಿಂದ ಮಾಡಿಲ್ಲ. ಅವನು ಆ ದೇಹದಿಂದ ಭಕ್ತಿ ಯಿಂದ ತೀರ್ಥಯಾತ್ರೆಗಳನ್ನೂ ಮಾಡಲಿಲ್ಲ.

ನ ದೇಹೇನ ತು ನಿಷ್ಕಾಮಂ ತಪಶ್ಚರ್ಯಾ ವ್ರತಂ ಕೃತಂ ।
ನ ದೇಹಃ ಶ್ರಮಿತಸ್ತಸ್ಯ ಶೀತೋಷ್ಣಸಹನಾದಿಭಿಃ ॥ ೯ ॥

ಏತಾದೃಶಸ್ತಸ್ಯ ದೇಹೋ ಬಹುಬ್ರಾಹ್ಮಣಹಿಂಸಕಃ ।
ಲಂಕಾಯಾಂ ಜ್ವಲತೇದ್ಯಾಪಿ ನಿಶಾಯಾಂ ಶ್ರೂಯತೇತ್ರ ಸಃ ॥ ೧೦ ॥

ಜ್ವಾಲಾನಾಂ ಭಸ್ತ್ರವಚ್ಛಬ್ದೋ ಯಃ ಪೃಷ್ಟೋ ಮಾಂ ತ್ವಯಾ ಲವ ।
ಜನಶಬ್ದಾದ್ದಿನೇ ನೈವ ಶ್ರೂಯತೇತ್ರ ಜನೈಸ್ಸದಾ ॥ ೧೧ ॥

ಚಿತಾಯಾಂ ತಸ್ಯ ಚಾದ್ಯಾಪಿ ವಾಯುಪುತ್ರೇಣ ಪ್ರತ್ಯಹಂ ।
ಕಾಷ್ಠಭಾರಶತಂ ನೀತ್ವಾ ಲಂಕಾಯಾಂ ಕ್ಷಿಪ್ಯತೇ ಮುಹುಃ ॥ ೧೨ ॥

ಯದಾ ತತ್ಪಾಪಶಾಂತಿಸ್ಸ್ಯಾತ್ತದಾ ಭಸ್ಮೀಭವಿಷ್ಯತಿ ।
ಅನ್ಯತ್ತೇ ಕಾರಣಂ ವಚ್ಮಿ ತಚ್ಛೃಣುಷ್ವ ಶಿಶೋ ಲವ ॥ ೧೩ ॥

---

೯. ಆ ದೇಹದಿಂದ ನಿಷ್ಕಾಮನಾಗಿ ತಪಸ್ಸನ್ನು ಕೂಡ ಮಾಡಲಿಲ್ಲ. ಅವನ ದೇಹವು ಶಿತೋಷ್ಣಗಳ ಸಹನೆಯಿಂದ ದಂಡಿಸಲ್ಪಡಲಿಲ್ಲ.

೧೦. ಈ ರೀತಿಯಾದ ಅವನು ಆ ದೇಹದಿಂದಲೇ ಬಹು ಜನ ಬ್ರಾಹ್ಮಣರನ್ನು ಕೊಂದಿರುವನು. ಆ ದೇಹವು ಈಗಲೂ ಕೂಡ ಲಂಕೆಯಲ್ಲಿ ಜ್ವಲಿಸುತ್ತಿರುವುದು. ಅದರ ಶಬ್ದವು ಇಲ್ಲಿಯವರೆಗೂ ಕೇಳಿಸುತ್ತಾ ಇರುವುದು.

೧೧. ಎಲೈ ಲವನೇ ! ಉರಿಯುತ್ತಿರುವ ಅವನ ದೇಹದ ಜ್ವಾಲೆಗಳ ಶಬ್ದವೇ ತಿದಿಯ ಶಬ್ದದಂತೆ ಕೇಳಿ ಬರುತ್ತಿರುವುದು. ಹಗಲು ಹೊತ್ತಿನಲ್ಲಿ ಜನಗಳ ಶಬ್ದವು ಹೆಚ್ಚಾಗಿರುವುದರಿಂದ ಅದು ಕೇಳಿ ಬರುವುದಿಲ್ಲ.

೧೨. ಅವನ ದೇಹವು ಉರಿಯುತ್ತಿರುವ ಆ ಚಿತೆಗೆ ಈಗಲೂ ವಾಯುಪುತ್ರನು ನಿತ್ಯವೂ ಕೂಡ ಅನೇಕ ಹೊರೆ ಸೌದೆಗಳನ್ನು ತೆಗೆದುಕೊಂಡು ಹೋಗಿ ಹಾಕುತ್ತಿರುವನು.

೧೩. ಅವನ ಆ ಬ್ರಹ್ಮಹತ್ಯೆಯು ಪಾಪವು ನಾಶವಾದಾಗ ಆ ದೇಹವು ಸುಟ್ಟು ಭಸ್ಮವಾಗುತ್ತದೆ. ಅಲ್ಲದೆ ಮತ್ತೊಂದು ಕಾರಣವನ್ನು ಹೇಳುತ್ತೇನೆ. ಅದನ್ನು ಕೇಳು.

ದೇಹಾಂತೇ ರಾವಣೇನಾಪಿ ರಾಮಾಯ ಯಾಚಿತೋ ವರಃ ।
ವರೇಣ ಯೇನ ಲೋಕಾನಾಂ ಸ್ಮರಣಂ ಮೇ ಭವಿಷ್ಯತಿ ॥ ೧೪ ॥

ಸ ತ್ವಯಾ ಮೇ ವರೋ ದೇಯಸ್ತಚ್ಛ್ರುತ್ವಾ ರಾಘವೋಽಬ್ರವೀತ್ ।
ತ್ವದ್ದೇಹಜ್ವಲನೇ ಜ್ವಾಲಾಶಬ್ದಾನ್ ಸರ್ವೇ ಜನಾ ಭುವಿ ॥ ೧೫ ॥

ಶ್ರೋಷ್ಯಂತಿ ಸಪ್ತದ್ವೀಪೇಷು ತೇನ ತೇ ಸ್ಮರಣಂ ಸದಾ ।
ಭವಿಷ್ಯತಿ ಹಿ ಸರ್ವೇಷಾಂ ಬ್ರಹ್ಮಾಂಡಾಂತರ್ನಿವಾಸಿನಾಂ ॥ ೧೬ ॥

ಏವಂ ಶ್ರುತ್ವಾ ದಶಾಸ್ಯಸ್ಸ ವರಂ ರಾಮೇ ಲಯಂ ಯಯೌ ।
ಏವಂ ಯಚ್ಚ ತ್ವಯಾ ಪೃಷ್ಟಂ ತತ್ಸರ್ವಂ ಕಥಿತಂ ಮಯಾ ॥ ೧೭ ॥

ಗುರೋರಿತಿ ವಚಃ ಶ್ರುತ್ವಾ ತಂ ನತ್ವಾ ಸ ಲವೋಽಪಿ ಚ ।
ಸ್ವಗೇಹಂ ಗತಸಂದೇಹಃ ಪ್ರಯಯೌ ಶಿಬಿಕಾಸ್ಥಿತಃ ॥ ೧೮ ॥

---

೧೪. ರಾವಣನು ಸಾಯುವಾಗ ರಾಮನನ್ನು ಕುರಿತು ನೀನು ನನಗೆ ವರವನ್ನು ಕೊಡಬೇಕು ಆ ವರದಿಂದ ಎಲ್ಲಾ ಜನಗಳೂ ನನ್ನನ್ನು ಸ್ಮರಿಸಬೇಕು. ಎಂದು ಕೇಳಿಕೊಂಡನು.

೧೫-೧೬. ಅಂತಹ ವರವನ್ನು ಕೊಡಬೇಕೆಂದು ಕೇಳಿಕೊಳ್ಳಲು ಅದನ್ನು ಕೇಳಿ ರಾಮನು ನಿನ್ನ ದೇಹವನ್ನು ಸುಡುವಾಗ ಆ ಜ್ವಾಲೆಯ ಶಬ್ದವನ್ನು ಲೋಕದಲ್ಲಿರುವ ಜನಗಳೆಲ್ಲ ಕೇಳುತ್ತಿರುತ್ತಾರೆ. ಅದರಿಂದ ಎಲ್ಲರಿಗೂ ನಿನ್ನ ಸ್ಮರಣೆಯು ಬರುತ್ತಲೇ ಇರುವುದು. ಈ ಲೋಕದಲ್ಲಿರುವವರಲ್ಲದೆ ಈ ಬ್ರಹ್ಮಾಂಡದಲ್ಲಿರುವವರೆಲ್ಲರಿಗೂ ನಿನ್ನ ಸ್ಮರಣೆಯು ಅದರಿಂದ ಬರುತ್ತದೆ ಎಂದನು.

೧೭. ರಾವಣನು ರಾಮನಿಂದ ಈ ರೀತಿಯಾದ ವರವನ್ನು ಹೊಂದಿ ಸತ್ತು ರಾಮನಲ್ಲಿಯೇ ಸೇರಿಹೋದನು. ಈ ಶಬ್ದವು ಈ ರೀತಿಯಾಗಿರುವುದು ನೀನು ಕೇಳಿದುದನ್ನು ಈ ರೀತಿಯಾಗಿ ಹೇಳಿದ್ದೇನೆ.

೧೮. ಗುರುವು ಹೀಗೆ ಹೇಳಿದುದನ್ನು ಕೇಳಿ ಲವನು ಸಂಶಯವನ್ನು ಪರಿಹಾರಮಾಡಿಕೊಂಡು ಪಲ್ಲಕ್ಕಿಯಲ್ಲಿ ಕುಳಿತು ತನ್ನ ಮನೆಗೆ ಹೊರಟುಹೋದನು.

ಏಕದಾ ಬಂಧುಭಿರ್ಗೇಹೇ ಪುತ್ರಾಭ್ಯಾಂ ಸೀತಯಾ ಸಹ ।
ಮುನಿಭಿರ್ಗುರುಣಾ ರಾಮಸ್ಸಂಸ್ಥಿತಃ ಪ್ರಾಹ ಹರ್ಷಿತಃ ॥ ೧೯ ॥

॥ ಶ್ರೀರಾಮಚಂದ್ರ ಉವಾಚ ॥

ಶೃಣ್ವಂತು ಮುನಯಸ್ಸರ್ವೇ ಸರ್ವೇ ಶೃಣ್ವಂತು ಬಂಧವಃ ।
ಪುತ್ರೌ ಸೀತಾ ಮಂತ್ರಿಣಶ್ಚ ಸರ್ವಾಶ್ಶೃಣ್ವಂತು ಮಾತರಃ ॥ ೨೦ ॥

ಯಥಾ ಮಯಾವತಾರೇಽಸ್ಮಿ ಸುಖಂ ಭುಕ್ತಂ ಹಿ ಸೀತಯಾ ।
ನ ತಥಾನ್ಯೇಷು ಸರ್ವೇಷು ಹ್ಯವತಾರೇಷು ವೈ ಕದಾ ॥ ೨೧ ॥

ಅವತಾರಾಸ್ತು ಬಹವಶ್ಶತಶೋಽತ್ರ ಮಯಾ ಧೃತಾಃ ।
ನಾನಾಕಾರ್ಯಾಣಿ ವೈ ಕರ್ತುಂ ತೇಷಾಂ ಸಂಖ್ಯಾ ನ ವಿದ್ಯತೇ ॥ ೨೨ ॥

---

೧೯. ಒಂದು ಸಾರಿ ರಾಮನು ತಮ್ಮಂದಿರೊಡನೆಯೂ ಮಕ್ಕಳೊಡನೆಯೂ ಸೀತೆಯೊಡನೆಯೂ, ಮುನಿಗಳು ಮತ್ತು ಗುರುಗಳೊಡನೆಯೂ ಮನೆಯಲ್ಲಿ ಕುಳಿತಿದ್ದನು. ಆಗ ಆ ರಾಮನು ಇಂತೆಂದನು.

೨೦. ಶ್ರೀರಾಮಚಂದ್ರನು ಹೇಳಿದನು:–ಋಷಿಗಳಿರಾ! ನೀವೆಲ್ಲರೂ ಕೇಳಿರಿ. ತಮ್ಮಂದಿರಾ ! ನೀವೂ ಕೇಳಿರಿ, ಮಕ್ಕಳೂ, ಮಂತ್ರಿಗಳೂ. ಸೀತೆಯೂ ಎಲ್ಲರೂ ಕೇಳಲಿ. ನನ್ನ ತಾಯಿಯರೂ ಕೇಳಲಿ.

೨೧. ನಾನು ಈ ರಾಮಾವತಾರವನ್ನು ಹೊಂದಿ ಸೀತೆಯೊಡನೆ ಯಾವ ರೀತಿಯಾಗಿ ಸುಖಗಳನ್ನು ಅನುಭವಿಸುತ್ತಿರುವೆನೋ ಆ ರೀತಿಯಾಗಿ ಮತ್ತೊಂದು ಅವತಾರದಲ್ಲಿಯೂ ಅನುಭವಿಸಲಿಲ್ಲ.

೨೨. ನಾನಾದರೋ ನೂರಾರು ಅವತಾರಗಳನ್ನು ತಾಳಿರುವೆನು. ಅನೇಕ ಬಗೆಯಾದ ಕೆಲಸಗಳನ್ನು ಮಾಡಬೇಕಾಗಿ ಬಂದುದರಿಂದ ಅವಗಳಿಗನುಸಾರವಾಗಿ ಆಯಾಯಾ ಅವತಾರಗಳನ್ನು ಎತ್ತಿದೆನು. ಅವುಗಳ ಲೆಖ್ಖವೇ ಇರುವುದಿಲ್ಲ.

ಸಪ್ತಾವತಾರಾಸ್ತೇಷ್ವೇವ ಶ್ರೇಷ್ಠಾಸ್ತ್ವತ್ರ ಮಯಾ ಧೃತಾಃ |
ಈದೃಶಂ ನ ಸುಖಂ ತೇಷು ಕದಾ ಭುಕ್ತಂ ಮಯಾ ಭುವಿ ॥ ೨೩ ॥

ಶಂಖಾಸುರೋ ಮಹಾದೈತ್ಯೋ ಪೂರ್ವಂ ಜಾತೋ ಮಹೋದಧೌ |
ಯೇನ ವೇದಾ ಹೃತಾಸ್ಸರ್ವೇ ಸತ್ಯಲೋಕಾತ್ ಕೃತೇ ಯುಗೇ ॥ ೨೪ ॥

ತದರ್ಥಂ ಮತ್ಸ್ಯರೂಪೇಣ ಹ್ಯವತಾರೋ ಮಯಾ ಧೃತಃ |
ತಂ ಹತ್ವಾ ಕ್ಷಣಮಾತ್ರೇಣ ವಿಷ್ಣುರೂಪಂ ಮಯಾ ಧೃತಂ ॥ ೨೫ ॥

ಕಿಂ ಸಂಖಂ ಝುಷಜಾತ್ಯಾಂ ಹಿ ತಿರ್ಯಗ್ಯೋನ್ಯಪಿ ಗರ್ಹಿತಾ |
ಅತಸ್ತಸ್ಮಿನ್ನವತಾರೇ ನ ಸ್ಥಿತಂ ಹಿ ಚಿರಂ ಮಯಾ ॥ ೨೬ ॥

---

೨೩. ಈ ಅವತಾರಗಳಲ್ಲಿ ನಾನು ಎತ್ತಿದ ದೊಡ್ಡ ಅವತಾರಗಳೆಂದರೆ ಏಳು ಅವತಾರಗಳು. ಆದರೆ ಈ ರಾಮಾವತಾರದಲ್ಲಿ ಹೊಂದಿದ ಸುಖದಂತೆ ಅವು ಯಾವುದರಲ್ಲಿಯೂ ಸುಖವನ್ನು ಹೊಂದಲೇ ಇಲ್ಲ.

೨೪. ಹಿಂದೆ ಸಮುದ್ರದಲ್ಲಿ ಶಂಖಾಸುರನೆಂಬ ರಾಕ್ಷಸನು ಹುಟ್ಟಿದನು. ಆಗ ಕೃತಯುಗವು ನಡೆಯುತ್ತಿದ್ದಿತು. ಆ ಅಸುರನು ಸತ್ಯಲೋಕದಿಂದ ವೇದಗಳೆಲ್ಲವನ್ನೂ ಕದ್ದುಕೊಂಡು ಹೊರಟುಹೋದನು.

೨೫. ಅವನನ್ನು ಕೊಂದು ಆ ವೇದಗಳನ್ನು ತರುವುದಕ್ಕೋಸ್ಕರ ನಾನು ಮತ್ಸ್ಯಾವತಾರವನ್ನು ಮಾಡಿದೆನು. ಆ ಮತ್ಸ್ಯಾವತಾರದಿಂದ ಅವನನ್ನು ಕ್ಷಣಕಾಲದಲ್ಲಿಯೇ ಕೊಂದು ಮತ್ತೆ ವಿಷ್ಣುವಿನ ರೂಪವನ್ನೇ ಧರಿಸಿದೆನು.

೨೬. ಆ ಮೀನಿನ ಜನ್ಮದಲ್ಲಿ ಯಾವ ಸುಖವು ತಾನೇ ಇದ್ದೀತು? ಅದರಲ್ಲಿಯೂ ಅದು ಕೀಳುಜನ್ಮವಾಗಿರುವುದು. ಆದ್ದರಿಂದ ಆ ಅವತಾರದಲ್ಲಿ ಬಹುಕಾಲ ನಾನು ಇರಲೇ ಇಲ್ಲ.

ತತಸ್ಸಮುದ್ರಮಥನೇ ಮಜ್ಜಂತಂ ಮಂದರಾಚಲಂ।
ದೃಷ್ಟ್ವಾ ಧೃತ್ವಾ ಕೂರ್ಮರೂಪಂ ಸ್ವಪೃಷ್ಠೇ ಪರ್ವತೋ ಧೃತಃ ॥ ೨೭ ॥

ತಚ್ಚಾಪಿ ಗರ್ಹಿತಂ ರೂಪಂ ಮತ್ವಾ ನೈವ ಚಿರಂ ಧೃತಂ ।
ಕಿಂ ವಾರಿಚರಜಾತ್ಯಾಂ ಹಿ ಸುಖಂ ತತ್ರ ಭವೇಜ್ಜಲೇ ॥ ೨೮ ॥

ತತೋ ದೃಷ್ಟ್ವಾ ಸಾಗರೇ ಹಿ ಮಜ್ಜಂತೀಂ ಪೃಥಿವೀಂ ಮಯಾ ।
ಕ್ರೋಡರೂಪಂ ಮಹದ್ಧೃತ್ವಾ ದಂಷ್ಟ್ರಯಾಮವನಿರ್ಧೃತಾ ॥ ೨೯ ॥

ಮಮ ಪೃಥ್ವೀತಿ ಸಂಸ್ಪರ್ಧ್ಯ ಹಿರಣ್ಯಾಕ್ಷೋ ಮಯಾ ಹತಃ ।
ಕಿಂ ಸುಖಂ ಪಶುಯೋನ್ಯಾಂ ಹಿ ಗರ್ಹಿತಾಯಾಂ ಭವೇತ್ತಲೇ ॥ ೩೦ ॥

---

೨೭. ಅನಂತರ ದೇವದಾನರು ಅಮೃತಕ್ಕೋಸ್ಕರ ಸಮುದ್ರವನ್ನು ಕಡೆಯುವುದಕ್ಕೆ ಮಂದರಾಚಲವನ್ನು ಹಾಕಲು ಅದು ಮುಳುಗುತ್ತಿದ್ದಿತು. ಅದನ್ನು ನೋಡಿ ಆ ಪರ್ವತವನ್ನು ಧರಿಸಲು ಕೂರ್ಮ(ಆಮೆ)ದ ಅವತಾರವನ್ನು ಮಾಡಿದೆನು. ಆಗ ಆ ಪರ್ವತವು ನನ್ನ ಬೆನ್ನಿನಮೇಲೆ ಸರಿಯಾಗಿ ನಿಂತು ಕೊಂಡಿತು.

೨೮. ಆ ಕೂರ್ಮರೂಪವೂ ಕೂಡ ತಿರಸ್ಕೃತವಾದುದು ನಿಂದ್ಯವಾದುದು ಎಂದು ತಿಳಿದು ಅದರಲ್ಲಿಯೂ ಬಹುಕಾಲವಿರಲೇ ಇಲ್ಲ. ನೀರಿನಲ್ಲಿ ಸಂಚಾರ ಮಾಡುವ ಆ ಕೂರ್ಮಜಾತಿಯಲ್ಲಿ ನನಗೆ ಯಾವ ಸುಖವು ತಾನೇ ಉಂಟಾ ದೀತು ?

೨೯. ಹಿರಣ್ಯಾಕ್ಷನು ಭೂಮಿಯನ್ನು ಕದ್ದುಕೊಂಡು ಸಮುದ್ರದಲ್ಲಿ ಮುಳುಗುತ್ತಿರಲು ಆಗ ಹಂದಿಯ ಅವತಾರವನ್ನು ಹೊಂದಿ ಕೋರೆದಾಡೆಗಳಿಂದ ಆ ಭೂಮಿಯನ್ನು ಮೇಲಕ್ಕೆತ್ತಿದೆ.

೩೦. ಆಗ ಆ ಹಿರಣ್ಯಾಕ್ಷನು ನಿನ್ನದು ಆ ಭೂಮಿ ಎಂಬುದಾಗಿ ಮೇಲೆ ಬೀಳಲು ಬಂದಾಗ ಅವನನ್ನು ಕೊಂದೆನು. ಆ ಮೃಗದ ಅವತಾರವು ಪಶುವಿನ ಅವತಾರವು. ಅದೂ ತಿರಸ್ಕೃತವಾದುದು. ಆ ಅವತಾರದಲ್ಲಿ ಯಾವ ಸುಖವು ತಾನೆ ಬರುವುದು ?

ಅತಸ್ತಸ್ಮಿಂಶ್ಚಾವತಾರೇ ನ ಲಬ್ಧಂ ಹಿ ಸುಖಂ ಮಯಾ ।
ಪ್ರಹ್ಲಾದವಚನಾತ್ ಸ್ತಂಭಾನ್ನರಸಿಂಹಸ್ವರೂಪಧೃಕ್ ॥ ೩೧ ॥

ಅವತೀರ್ಣಸ್ತ್ವಹಂ ಭೂಮ್ಯಾಂ ಹಿರಣ್ಯಕಶಿಪುಃ ಕ್ಷಣಾತ್ ।
ಮಯಾ ತದಾ ಹತಃ ಕ್ರೋಧಾತ್ತದ್ರೂಪಮತಿಭಾಸುರಂ ॥ ೩೨ ॥

ಯದ್ಭಯಾತ್ಕೀಟಕಶ್ಚಾಪಿ ಪ್ರಹ್ಲಾದಾಚ್ಚ ವಿನಾ ಪರಃ ।
ನ ಮಾನವಃ ಸ್ಥಿತೋ ಭೂಮ್ಯಾಂ ತತ್ರ ವಾರ್ತಾ ಸುಖಸ್ಯ ಕಾ ॥ ೩೩ ॥

ತದಾತಿಕ್ರೋಧರೂಪೇಣ ಸಿಂಹಯೋನ್ಯಾಂ ತು ಕಿಂ ಸುಖಂ ।
ಮಯಾನುಭೂತಂ ವಿಪುಲಂ ಸುಖೇಚ್ಛಾ ತೃಪ್ತಿಮಾಪ ನ ॥ ೩೪ ॥

ತತೋ ಬಲೇರ್ಮೋಹನಾರ್ಥಂ ಖರ್ವರೂಪಂ ತು ವಾಮನಂ ।
ಧೃತ್ವಾ ಕೃತ್ವಾ ತ್ರಿಪಾದ್ಯಾಚ್ಞಾಮವನೇಃ ಪಾತಾಳಗಃ ॥ ೩೫ ॥

---

೩೧. ಆದ್ದರಿಂದ ಆ ಅವತಾರದಲ್ಲಿಯೂ ಕೂಡ ನಾನು ಸುಖವನ್ನು ಹೊಂದಲೇ ಇಲ್ಲ. ಪ್ರಹ್ಲಾದನ ಮಾತಿನಂತೆ ನರಸಿಂಹಾವತಾರವನ್ನು ಮಾಡಿ ಕಂಬದಿಂದ ಈಚೆಗೆ ಬಂದೆನು.

೩೨-೩೩. ಆಗ ಹಿರಣ್ಯಕಶಿಪುವೆಂಬ ರಾಕ್ಷಸನನ್ನು ಕ್ಷಣಕಾಲದಲ್ಲಿಯೇ ಕೊಂದೆನು. ಆ ರೂಪವಾದರೋ ಬಹು ಭಯಂಕರವಾದುದು. ಆ ಭಯದಿಂದ ಅಲ್ಲಿ ಒಂದು ಹುಳುವೂ ಕೂಡ ಇರಲಿಲ್ಲ. ಆಗ ಪ್ರಹ್ಲಾದನು ಹೊರತಾಗಿ ಮನುಷ್ಯನೊಬ್ಬನೂ ಅಲ್ಲಿಲ್ಲದಿರುವಾಗ ಆ ಭಯಂಕರವಾದ ಆಕಾರದಲ್ಲಿ ಸುಖದ ಹೆಸರೆಲ್ಲಿ ಬಂದೀತು ?

೩೪. ಬಹು ಕೋಪವನ್ನು ಹೊಂದಿರತಕ್ಕ ಸಿಂಹದ ಜಾತಿಯಲ್ಲಿ ಯಾವ ಸುಖವು ತಾನೇ ಇರುವುದು ? ಬಹು ಮುಖವಾದ ಆ ಸುಖೇಚ್ಛೆಯು ತೃಪ್ತಿಯಾಗಲೇ ಇಲ್ಲ.

೩೫. ಬಲಿಯನ್ನು ವಂಚಿಸುವುದಕ್ಕೋಸ್ಕರವಾಗಿ ಕುಳ್ಳನಾಗಿರುವ ವಾಮನರೂಪವನ್ನು ಹೊಂದಿದೆನು. ಆಗ ಮೂರುಹೆಜ್ಜೆ ಭೂಮಿಗಳನ್ನು ಯಾಚಿಸಿ ಆ ಬಲಿಯನ್ನು ಭೂಮಿಯಿಂದ ಕೆಳಗಿರುವ ಪಾತಾಳಲೋಕಕ್ಕೆ ನೂಕಿದೆನು.

ತತ್ರ ಕಿಂ ಮುನಿದೇಹೇನ ವನೇ ಸೌಖ್ಯಂ ಭವೇನ್ಮಮ ।
ನ ಯತ್ರಾಸ್ತಿ ಯಥಾಯೋಗ್ಯಂ ದೇಹಮಪ್ಯತಿಸುಂದರಂ ॥ ೩೬ ॥

ತತ್ರ ಕಾ ಸುಖವಾರ್ತಾಸ್ತಿ ಭೂಮ್ಯಾಂ ಮೇ ಬ್ರಹ್ಮಚಾರಿಣಃ ।
ಅತಸ್ತದೈವ ಸಹಸಾ ನಾಕಲೋಕಂ ಗತಂ ಮಯಾ ॥ ೩೭ ॥

ಪುನರ್ವಿಪ್ರೋದ್ಭವೇನೈವ ಜಾಮದಗ್ನ್ಯಸ್ವರೂಪಿಣಾ ।
ಏಕವಿಂಶತಿವಾರಂ ಹಿ ನಿಃಕ್ಷತ್ರೀ ಪೃಥಿವೀ ಕೃತಾ ॥ ೩೮ ॥

ಸಹಸ್ರಾರ್ಜುನನಾಮಾ ಸಃ ಮಹಾವೀರೋ ಹತಸ್ತದಾ ।
ತಚ್ಚಾಪಿ ಕ್ರೋಧಸಂಯುಕ್ತಂ ಮುನಿರೂಪಂ ಮಯಾ ಧೃತಂ ॥ ೩೯ ॥

---

೩೬. ಆ ವಾಮನದೇಹವು ಮುನಿದೇಹವು. ವನದಲ್ಲಿ ವಾಸಮಾಡುವ ದೇಹವು. ಆ ವನದಲ್ಲಿ ಯಾವ ಸೌಖ್ಯವು ತಾನೇ ಇದ್ದೀತು ? ಆ ಋಷಿಗಳಲ್ಲಿ ಅತಿಸುಂದರವಾದ ದೇಹವೂ ಕೂಡ ಇರುವುದಿಲ್ಲ.

೩೭. ಈ ರೀತಿಯಲ್ಲಿ ಭೂಮಿಯಲ್ಲಿ ನನಗೆ ಯಾವ ಸುಖವು ತಾನೇ ಇರುವುದು ? ಅದರಲ್ಲಿಯೂ ನಾನು ಬ್ರಹ್ಮಚಾರಿಯು. ಆದ್ದರಿಂದಲೇ ಆಗ ಆ ದೇಹವನ್ನು ಬಿಟ್ಟು ಬೇಗನೆ ನಾನು ಸ್ವರ್ಗಲೋಕಕ್ಕೆ ಹೊರಟು ಹೋದೆನು.

೩೮. ಮತ್ತೆ ಜಮದಗ್ನಿಯ ಹೊಟ್ಟೆಯಲ್ಲಿ ಬ್ರಾಹ್ಮಣನಾಗಿ ಹುಟ್ಟಿದೆನು. ಆಗ ಇಪ್ಪತ್ತೊಂದುಸಾರಿ ಭೂಮಿಯನ್ನು ಸಂಚರಿಸಿ ಕ್ಷತ್ರಿಯರನ್ನು ಕೊಂದು ಭೂಮಿಯಲ್ಲಿ ಕ್ಷತ್ರಿಯರೇ ಇಲ್ಲದಂತೆ ಮಾಡಿದೆನು.

೩೯. ಆಗ ಸಹಸ್ರಾರ್ಜುನನೆಂಬ ಮಹಾವೀರನೊಬ್ಬನಿದ್ದನು. ಅವನನ್ನು ಆ ಅವತಾರದಲ್ಲಿ ಕೊಂದೆನು. ಆ ಪರಶುರಾಮಾವತಾರವೂ ಕೂಡ ಬಹು ಕೋಪದ ರೂಪವುಳ್ಳದ್ದು ಅಲ್ಲದೆ ಋಷಿಯಾಗಿ ಹುಟ್ಟಿರುವುದು.

ಸುಖವಾರ್ತಾ ಮುನೀನಾಂ ಹಿ ಕಾ ತತ್ರ ವನಚಾರಿಣಾಂ ।
ಜ್ಞಾತ್ವೇತ್ಥಂ ಜನ್ಮನಾ ತೇನ ತಪಶ್ಚರ್ಯಾ ಮಯಾ ಕೃತಾ ॥ ೪೦ ॥

ಕಿಂ ಸುಖಂ ತಪಸಸ್ತತ್ರ ವನೇ ಮೇ ಜಾತಮುತ್ತಮಂ ।
ಏವಂ ಷಡ್ವೈ ಧೃತಾಃ ಪೂರ್ವಮವತಾರಾ ಮಯಾ ಭುವಿ ॥ ೪೧ ॥

ನ ಜಾತಾ ಸುಖವಾರ್ತಾಪಿ ತತ್ರ ಕ್ವಾಪಿ ಮುನೀಶ್ವರಾಃ ।
ದ್ವಾಪರೇಗ್ರೇ ಕೃಷ್ಣರೂಪಂ ಗೋಕುಲೇತ್ರ ಕರೋಮ್ಯಹಂ ॥ ೪೨ ॥

ನೇದೃಶಂ ತತ್ರ ಭೋಕ್ಷ್ಯಾಮಿ ಸುಖಂ ಶ್ರುಣುತ ವಿಸ್ತರಾತ್ ।
ಕಾರಾಗೃಹಸ್ಥಿತಿಃ ಪಿತ್ರೋರ್ಜನ್ಮಾದಾವೇವ ಮೇ ಭವೇತ್ ॥ ೪೩ ॥

ಮಾತಾಪಿತೃವಿಹೀನಶ್ಚ ತದಾ ಸ್ಥಾಸ್ಯಾಮಿ ಶೈಶವೇ ।
ಪಾರಕೀಯೇ ನಂದಗೇಹೇ ವೃದ್ಧಿಂ ಗಚ್ಛಾಮಿ ಗೋಕುಲೇ ॥ ೪೪ ॥

---

೪೦. ವನಚಾರಿಗಳಾದ ಮುನಿಗಳಿಗೆ ಸುಖದ ಮಾತೆಲ್ಲಿ ಬಂದೀತು? ಅದನ್ನು ತಿಳಿದೇ ಆಗ ಆ ಜನ್ಮದಲ್ಲಿ ತಪಸ್ಸಿಗೆ ಹೋಗಿ ತಪಸ್ಸನ್ನೇ ಮಾಡಿದೆನು.

೪೧. ಆಗ ನನಗೆ ತಪಸ್ಸಿನಲ್ಲಿ ಯಾವ ಸುಖವು ತಾನೇ ಇರುವುದು? ಅದರಲ್ಲಿಯೂ ಕಾಡಿನಲ್ಲಿ ಸುಖದ ಹೆಸರೇ ಇರುವುದಿಲ್ಲವಷ್ಟೆ? ಈ ರೀತಿಯಾಗಿ ಆರು ಅವತಾರಗಳನ್ನು ಹಿಂದೆ ನಾನು ಭೂಮಿಯಲ್ಲಿ ಹೊಂದಿದ್ದೇನೆ.

೪೨. ಎಲೈ ಮುನೀಶ್ವರರಿರಾ! ಆ ಅವತಾರಗಳಲ್ಲಿ ಯಾವುದರಲ್ಲಿಯೂ ಸ್ವಲ್ಪ ಸುಖವೂ ನನಗೆ ಇರಲೇ ಇಲ್ಲ. ದ್ವಾಪರ ಯುಗದಲ್ಲಿ ಗೋಕುಲದಲ್ಲಿ ಕೃಷ್ಣಾವತಾರವನ್ನು ಮಾಡುವೆನು.

೪೩. ಈ ರೀತಿಯಾದ ಸುಖವನ್ನು ಅಗಲೂ ಹೊಂದುವುದಿಲ್ಲ. ಆ ವಿಷಯವನ್ನು ಹೇಳುತ್ತೇನೆ. ನಾನು ಹುಟ್ಟುವುದಕ್ಕೆ ಮೊದಲೇ ನನ್ನ ತಾಯಿತಂದೆಗಳು ಕಾರಾಗ್ರಹದಲ್ಲಿರುವರು.

೪೪. ತಾಯಿತಂದೆಗಳಿಲ್ಲದೇನೇ ಬಾಲ್ಯದಲ್ಲಿ ಗೋಕುಲದಲ್ಲಿರುವೆನು. ಗೋಕುಲದಲ್ಲಿದ್ದುಕೊಂಡು ಹೊರಗಿನವನಾದ ನಂದನ ಮನೆಯಲ್ಲಿ ಬೆಳೆಯುತ್ತೇನೆ.

ಗೋಪವೇಷಸ್ಯ ಕಿಂ ಸೌಖ್ಯಂ ಗೋಪೃಷ್ಠೇ ಭ್ರಮತೋ ಮಮ ।
ಸ್ತ್ರೀಗೋನಾಗಾಶ್ವ ಪಕ್ಷ್ಯಾದಿ ಬಹೂಂಸ್ತತ್ರ ನಿಹನ್ಮ್ಯಹಂ ॥ ೪೫ ॥

ದೇವಪತ್ನೀವರಾತ್ಕುರ್ಯಾಂ ಪರಸ್ತ್ರೀಗಮನಾದಿಕಂ ।
ನಾನಾಚೌರ್ಯಾದಿ ದುಷ್ಕರ್ಮ ಕೃತ್ವಾ ತು ಗೋಕುಲೇ ತತಃ ॥ ೪೬ ॥

ಮಥುರಾಯಾಂ ಹನಿಷ್ಯಾಮಿ ಸಗಜಂ ಕಂಸಮಾತುಲಂ ।
ತತ್ರ ದಾಸ್ಯಾ ರತಿಂ ಕುರ್ಯಾಂ ನೈಷ್ಠುರ್ಯಂ ಗೋಪಿಕಾದಿಷು ॥ ೪೭ ॥

ಮದ್ಭುಕ್ತಾ ಗೋಪಿಕಾಸ್ಸರ್ವಾ ರಾಮೋ ಬಂಧುರ್ಭಜಿಷ್ಯತಿ ।
ಅನ್ಯಚ್ಚ ಕಾಲಯವನಭಯಾನ್ಮೇ ಹಿ ಪರಾಭವಃ ॥ ೪೮ ॥

---

೪೫. ಗೋಪವೇಷವನ್ನು ಹೊಂದಿ ದನಗಳ ಹಿಂದೆ ಓಡಿಯಾಡುವ ನನಗೆ ಯಾವ ಸುಖವು ತಾನೇ ಇರುವುದು ? ಆಗ ಹೆಂಗಸರು, ಗೋವುಗಳು, ಆನೆಗಳು, ಸರ್ಪಗಳು, ಕತ್ತೆಗಳು, ಕುದುರೆಗಳು, ಪಕ್ಷಿಗಳು, ಇಂತಹ ಬಹಳ ಪ್ರಾಣಿಗಳನ್ನು ಕೊಲ್ಲುವೆನು.

೪೬. ದೇವತಾ ಸ್ತ್ರೀಯರು ನನಗೆ ಕೊಟ್ಟಿರುವ ವರದ ದೆಸೆಯಿಂದ ಪರಸ್ತ್ರೀ ಗಮನವನ್ನು ಮಾಡುತ್ತೇನೆ. ಆ ಗೋಕುಲದಲ್ಲಿ ಕಳ್ಳತನವೇ ಮುಂತಾದ ಅನೇಕ ಕೆಟ್ಟ ಕೆಲಸಗಳನ್ನು ಮಾಡುತ್ತೇನೆ.

೪೭. ಮಥುರೆಗೆ ಹೋಗಿ ಅಲ್ಲಿ ಆನೆಯನ್ನೂ ಸೋದರ ಮಾವನಾದ ಕಂಸನನ್ನೂ ಕೊಲ್ಲುತ್ತೇನೆ. ಅಲ್ಲಿ ದಾಸಿಯಲ್ಲಿ ರಮಿಸುತ್ತೇನೆ. ಗೋಪಿಕಾ ಸ್ತ್ರೀಯರಲ್ಲಿ ನಿಷ್ಠುರವನ್ನು ಕಟ್ಟಿಕೊಳ್ಳುತ್ತೇನೆ.

೪೮. ನಾನು ಅನುಭವಿಸುವ ಗೋಪಿಕೆಯರನ್ನು ನನ್ನ ಅಣ್ಣನಾದ ಬಲರಾಮನೂ ಅನುಭವಿಸುವನು. ಇದಲ್ಲದೆ ಕಾಲಯವನರು ನನ್ನೊಡನೆ ಯುದ್ಧ ಮಾಡಿ ನನ್ನನ್ನು ಸೋಲಿಸುವರು.

ನ ಪರಾಭವತೋ ದುಃಖಂ ಕಿಂಚಿದಸ್ತಿ ಜಗತ್ರಯೇ ।
ತತೋಽಹಂ ಸ್ವಸ್ಥಲಂ ತ್ಯಕ್ತ್ವಾ ತಟಾಕೇ ಸಾಗರಸ್ಯ ಚ ॥ ೪೯ ॥

ಸ್ಥಾಸ್ಯಾಮಿ ಸ್ವಲ್ಪಕಾಲಂ ಹಿ ಚಿರಕಾಲಂ ನ ಮೇ ಸ್ಥಿತಿಃ ।
ನಸ್ಥಲಂ ಮಧ್ಯದೇಶೇ ಹಿ ನ ರಾಜ್ಯಂ ಮೇ ಭವಿಷ್ಯತಿ ॥ ೫೦ ॥

ವಿನಾ ರಾಜ್ಯೇನ ಕಿಂ ಸೌಖ್ಯಂ ಪರಾಜ್ಞಾವಶವರ್ತಿನಃ ।
ಛತ್ರಾದಿರಾಜ್ಯಂ ಭೋಗಾಶ್ಚ ತಸ್ಮಿನ್ ಜನ್ಮನಿ ಮೇ ನ ಹಿ ॥ ೫೧ ॥

ಬಹುಸ್ತ್ರೀಣಾಮೇಕದೇಹಸ್ತದಾಯಂ ಮೇ ಭವಿಷ್ಯತಿ ।
ತದಾ ಕಾಸಾಂ ಸುಖಂ ದೇಯಂ ದುಃಖಂ ಕಾಸಾಂ ತದಾ ಮಯಾ ॥

ಏವಂ ಸದಾ ವ್ಯಗ್ರಚಿತ್ತಸ್ತಾಸಾಂ ರಂಜನಕರ್ಮಣಿ ।
ತತ್ರ ಕಾ ಸುಖವಾರ್ತಾಸ್ತಿ ನಿಶಾಯಾಂ ಭ್ರಮತೋ ಮಮ ॥ ೫೩ ॥

೪೯–೫೦. ಸೋಲುವಿಕೆಯಿಂದ ಉಂಟಾಗುವ ದುಃಖಕ್ಕಿಂತಲೂ ಹೆಚ್ಚಿನ ದುಃಖವು ಮೂರು ಲೋಕದಲ್ಲಿ ಯಾವುದೂ ಇರುವುದಿಲ್ಲ. ಅವರ ಹೆದರಿಕೆಯಿಂದ ನಾನು ನನ್ನ ಸ್ಥಾನವನ್ನು ಬಿಟ್ಟು ಸಮುದ್ರದ ಮಧ್ಯದಲ್ಲಿಯೂ ಕೆರೆಯ ಮಧ್ಯದಲ್ಲಿಯೂ, ಕೂಡ ಸ್ವಲ್ಪಕಾಲದವರೆಗೆ ಇರುವೆನು. ಅಲ್ಲಿಯೂ ಕೂಡ ಹೆಚ್ಚು ಕಾಲದವರೆಗೆ ಇರುವಂತಿಲ್ಲ ನನಗೆ ರಾಜ್ಯವೂ ಕೂಡ ಇಲ್ಲವೇ ಇಲ್ಲ.

೫೧. ರಾಜ್ಯವಿಲ್ಲದೆ ಪರರ ಅಪ್ಪಣೆಯಂತೆ ನಡೆದುಕೊಂಡಿರುವವನಿಗೆ ಸೌಖ್ಯವೆಲ್ಲಿಂದ ತಾನೆ ಬಂದೀತು? ಛತ್ರ ಚಾಮರ ಮುಂತಾದ ರಾಜಭೋಗ ಗಳು ಆ ಜನ್ಮದಲ್ಲಿ ನನಗೇ ಇರುವುದೇ ಇಲ್ಲ.

೫೨. ನಾನು ಒಂದೇ ದೇಹದಿಂದ ಅನೇಕ ಜನ ಹೆಂಗಸರನ್ನು ಅನುಭವಿಸ ಬೇಕಾಗುವುದು. ಆಗ ನಾನು ದುಃಖವನ್ನು ಯಾರಿಗೆ ಉಂಟು ಮಾಡಲಿ? ಸುಖವನ್ನು ತಾನೆ ಯಾರಿಗೆ ಉಂಟುಮಾಡಲಿ?

೫೩. ಈ ರೀತಿಯಾಗಿ ನನ್ನ ಮನಸ್ಸಿಗೆ ಶಾಂತಿಯಿಲ್ಲದೆ ಅವರನು ಸಂತೋಷಪಡಿಸುವುದಕ್ಕೆ ಪ್ರಯತ್ನ ಪಡಬೇಕಾಗುತ್ತದೆ. ಅದಕ್ಕೋಸ್ಕರವಾಗಿ ರಾತ್ರಿಯಲ್ಲಿಯೂ ಕೂಡ ಓಡಾಡುತ್ತಿರುವ ನನಗೆ ಸುಖವೆಲ್ಲಿ ಬಂದೀತು.

ಘಟಿಕಾಯಾಶ್ಚ ಷಟ್ತ್ರಿಂಶತ್ಪಂಚಶತಗೃಹಾಣಿ ಹಿ ।
ಪರ್ಯಟನ್ನಷ್ಟಾವಿಂಶತ್ ಸ್ತ್ರೀಗೇಹಾನಿ ತದಾ ಮಮ ॥ ೫೪ ॥

ಶೇಷಾಣಿ ಗಂತುಂ ನೈವಾಸ್ತಿ ಕಾಲೋ ಭಾನುರುದೇಷ್ಯತಿ ।
ತ್ರಿಂಶದ್ಘಟಿಮಯೀ ರಾತ್ರಿಸ್ತ್ವೇವಂ ಮೇ ಸಾ ಗಮಿಷ್ಯತಿ ॥ ೫೫ ॥

ತದಾ ಮೇ ಭ್ರಮತೋ ರಾತ್ರೌ ಕುತೋ ನಿದ್ರಾ ಕುತಸ್ಸುಖಂ ।
ಯದಾ ಭವೇನ್ನಿಶಾವೃದ್ಧಿಃ ಕಿಂಚಿನ್ನಿದ್ರಾಂ ತದಾಪ್ನುಯಾಂ ॥ ೫೬ ॥

---

೫೪. ರಾತ್ರಿಯಲ್ಲಿ ಓಡಾಡುವಾಗ ಬಂದುಗಳಿಗೆ ಐನೂರಮೂವತ್ತಾರು ಮನೆಗಳಿಗೆ ಹೋಗುತ್ತೇನೆ. ಆದರೂ ಬೆಳಗಿನ ಹೊತ್ತಿಗೆ ಇಪ್ಪತೆಂಟು ಮನೆಗಳು ಉಳಿದುಹೋಗುತ್ತವೆ.

೫೫. ಅವುಗಳಿಗೆ ಹೋಗಲು ಕಾಲವೇ ಸಾಕಾಗುವುದಿಲ್ಲ. ಅಷ್ಟು ಹೊತ್ತಿಗೆ ಸೂರ್ಯನು ಹುಟ್ಟಿ ಬಿಡುವನು. ರಾತ್ರಿಯು ಮೂವತ್ತುಗಳಿಗೆಗಳೂ ಈ ರೀತಿಯಾದ ಓಡಾಟದಲ್ಲಿಯೇ ಕಳೆದು ಹೋಗುತ್ತವೆ. (ಕೃಷ್ಣನಿಗೆ ಹದಿನಾರು ಸಾವಿರದ ನೂರಎಂಟುಜನ ಹೆಂಡತಿಯರು ಒಬ್ಬೊಬ್ಬರಿಗೂ ಒಂದೊಂದು ಮನೆಯನ್ನು ಕಟ್ಟಿಕೊಟ್ಟಿರುವನು. ವರ್ಜ್ಯವೇಳೆಗಳನ್ನು ಬಿಡದೆ ಮೂವತ್ತುಘಳಿಗೆ ಯೆಂದು ಹೇಳಿರುವ ಮಾತು ಹೀಗೆ ಓಡಾಡಿ ಅವರ ಮನೆಗಳಿಗೆ ಹೋದರೂ ಬಂದುಗಳಿಗೆಗೆ ಐನೂರಮೂವತ್ತಾರರಂತೆ ಮೂವತ್ತುಗಳಿಗೆಗೆ ಹದಿನಾರುಸಾವಿರದ ಎಂಭತ್ತು ಮನೆಗಳಾಗುತ್ತವೆ. ಮತ್ತು ಇಪ್ಪತ್ತೆಂಟು ಉಳಿದುಹೋಗುತ್ತದೆ. ಎಂದು ತನ್ನ ದುಃಖವನ್ನು ತೋರ್ಪಡಿಸುವುದಕ್ಕೆ.)

೫೬. ಈ ರೀತಿಯಾಗಿ ರಾತ್ರಿಯೆಲ್ಲವೂ ನಾನು ಸಂಚರಿಸುತ್ತಿದ್ದರೆ ನಿದ್ರೆಯೆಲ್ಲಿಂದ ಬಂದೀತು ? ಸುಖತಾನೆ ಹೇಗೆ ಬಂದೀತು ? ರಾತ್ರಿಯು ಕೆಲವು ಕಾಲದಲ್ಲಿ ಹೆಚ್ಚುತ್ತದೆ. ಕೆಲವು ಕಾಲದಲ್ಲಿ ಹಗಲು ಹೆಚ್ಚುತ್ತದಷ್ಟೆ! ರಾತ್ರಿಯು ಹೆಚ್ಚಿದ್ದಾಗ ಮಾತ್ರ ನನಗೆ ಸ್ವಲ್ಪನಿದ್ದೆಮಾಡಲು ಅವಕಾಶವು ಸಿಕ್ಕುವುದು. ಆಗ ಮಾತ್ರ ಸ್ವಲ್ಪನಿದ್ದೆಯನ್ನು ಮಾಡುವೆನು.

ಯಸ್ಯೇಚ್ಛಾಸ್ತ್ಯತ್ರ ದುಃಖಂ ಹಿ ಭೋಕ್ತುಂ ತೇನ ನರೇಣ ಹಿ ।
ಕರ್ತವ್ಯಾ ಬಹವಃ ಪತ್ನ್ಯೋ ದ್ರಷ್ಟವ್ಯಂ ತತ್ಫಲಂ ತತಃ ॥ ೫೭ ॥

ಏವಂ ಭವೇನ್ನ ಮೇ ಸೌಖ್ಯಂ ದ್ವಾಪರೇ ಕೃಷ್ಣಜನ್ಮನಿ ।
ಭವಿಷ್ಯತ್ಯವತಾರಸ್ಯ ಸಮಾಪ್ತಿಶ್ಚಾಪಿ ಶಾಪತಃ ॥ ೫೮ ॥

ತತೋ ದೈತ್ಯಾನ್ ಯಜ್ಞಕರ್ಮಸಕ್ತಾನ್ ದೃಷ್ಟ್ವಾ ಪುನಸ್ತ್ವಹಂ ।
ಕಲಾವಗ್ರೇ ಬುದ್ಧರೂಪಂ ಧರಿಷ್ಯಾಮ್ಯತಿಮೋಹನಂ ॥ ೫೯ ॥

ನಿಜವಾಕ್ಯೈರ್ಮತಿಸ್ತೇಷಾಂ ದೈತ್ಯಾನಾಂ ಯಜ್ಞಕರ್ಮತಃ ।
ಪರಿವರ್ತ್ಯ ಕಿಯತ್ಕಾಲಂ ಸ್ಥಾಸ್ಯಾಮಿ ಜಗತೀತಲೇ ॥ ೬೦ ॥

ತದಾಹಂ ಮೌನಮಾಶ್ರಿತ್ಯ ಮಲಿನಃ ಕೇಶಲುಂಛಕಃ ।
ಯುಗಾದಿ ಜೀವಧಾರೀ ಚ ಸರ್ವೇಷಾಮುಪದೇಶಕೃತ್ ॥ ೬೧ ॥

---

೫೭. ಯಾವ ಮನುಷ್ಯನಿಗೆ ದುಃಖವನ್ನು ಅನುಭವಿಸಬೇಕೆಂದು ಮನಸ್ಸಿರುವುದೋ ಅವನು ಅದರ ಫಲವನ್ನು ತಿಳಿಯಲು ಬಹುಜನ ಹೆಂಗಸರನ್ನು ಮದುವೆಮಾಡಿಕೊಳ್ಳಬೇಕು. ಆಗ ಅದರ ಫಲವು ತಿಳಿಯುತ್ತದೆ.

೫೮. ದ್ವಾಪರಯುಗದ ಆ ಕೃಷ್ಣಜನ್ಮದಲ್ಲಿಯೂ ಹೀಗಿರುತ್ತ ನನಗೆ ಸೌಖ್ಯವೆಂಬುದೇ ಇರುವುದಿಲ್ಲ. ಅಲ್ಲದೆ ವಿಪ್ರಶಾಪದಿಂದ ಆ ಅವತಾರದ ಪರಿಸಮಾಪ್ತಿಯಾಗುವುದು.

೫೯–೬೦. ಅನಂತರ ಯಜ್ಞಕರ್ಮದಲ್ಲಿ ದೈತ್ಯರು ಆಶಕ್ತರಾಗುತ್ತಿರುವುದನ್ನು ನೋಡಿ ಅವರು ಯಜ್ಞವನ್ನು ಮಾಡದಂತೆ ಮಾಡಲು ಕಲಿಯುಗದಲ್ಲಿ ಅತಿಮೋಹನಕರವಾದ ಬುದ್ಧರೂಪವನ್ನು ಹೊಂದುತ್ತೇನೆ. ಆಗ ನನ್ನ ಮಾತಿನಿಂದ ಅವರು ಯಜ್ಞಮಾಡದಂತೆ ಮಾಡಿ ಸ್ವಲ್ಪಕಾಲದವರೆಗೂ ಭೂಲೋಕದಲ್ಲಿರುತ್ತೇನೆ.

೬೧. ಆಗ ನಾನು ಮೌನವನ್ನು ಧರಿಸಿರುವೆನು. ಕೊಳಕಾಗಿರುವೆನು. ಕೂದಲನ್ನು ಕೀಳಿಸಿಕೊಳ್ಳುವೆನು. ಯುಗದ ಆದಿಯಲ್ಲಿ ಜೀವಧಾರಿಯಾಗಿ ಎಲ್ಲರಿಗೂ ಉಪದೇಶಕನಾಗಿರುವೆನು.

ಅಹಿಂಸನವ್ರತಂ ಸರ್ವಾನ್ ದರ್ಶಯಿಷ್ಯಾಮ್ಯಹಂ ಜನಾನ್ ।
ತಜ್ಜನ್ಮನ್ಯತಿದುಃಖಂ ಮೇ ಕೇಶಯೂಕಾಮಲಾದಿನಾ ॥ ೬೨ ॥
ತತೋಗ್ರೇಹಂ ಧರಿಷ್ಯಾಮಿ ಕಲ್ಕಿರೂಪಂ ಮಹತ್ಕಲೇಃ ।
ಅಂತೇ ದೃಷ್ಟ್ವಾ ಜನಾನಾಂ ಚ ಸರ್ವತ್ರ ವರ್ಣಸಂಕರಂ ॥ ೬೩ ॥
ಭೂತ್ವಾತ್ರ ವಿಪ್ರದೇಹೇನ ಖಡ್ಗದಾರೀ ಹಯಸ್ಥಿತಃ ।
ಸಂಹಾರಂ ಕ್ಷಣಮಾತ್ರೇಣ ದುಷ್ಟಾನಾಂ ಹಿ ಕರೋಮ್ಯಹಂ ॥ ೬೪ ॥
ಸೋವತಾರೋ ನಾತಿಚಿರಂ ಮಮ ಸ್ಥಾಸ್ಯತಿ ಭೂತಲೇ ।
ನ ತತ್ರ ಸುಖಲೇಶೋಪಿ ಮೇ ಭವಿಷ್ಯತಿ ಭೂಸುರಾಃ ॥ ೬೫ ॥
ಪ್ರವರ್ತಯಿಷ್ಯತಿ ಪುನಸ್ತತೋಗ್ರೇ ತತ್ಕೃತಂ ಯುಗಂ ।
ಪೂರ್ವವಚ್ಚ ಪುನಸ್ತತ್ರ ಹ್ಯವತಾರಾನ್ಕರೋಮ್ಯಹಂ ॥ ೬೬ ॥

---

೬೨. ಆಗ ಎಲ್ಲರಿಗೂ ಅಹಿಂಸೆಯ ವ್ರತವನ್ನು ಉಪದೇಶಿಸಿ ತೋರಿಸಿಕೊಡುತ್ತೇನೆ. ಆ ಜನ್ಮದಲ್ಲಿ ನನಗೆ ಕೆಲವು ಜಾಗದಲ್ಲಿ ಕೇಶಗಳನ್ನು ಕೀಳಿಸಿಕೊಳ್ಳುವುದರಿಂದಲೂ ಕೆಲವು ಜಾಗದಲ್ಲಿ ಕೇಶವು ಬೆಳೆದು ಅವುಗಳಲ್ಲ ಹೇನು ಸೀರು ಸೇರಿಕೊಂಡು ಕಚ್ಚುವುದರಿಂದಲೂ ಕೊಳೆಯಿಂದ ಮೈಕಡಿಯುವುದರಿಂದಲೂ ಬಹುವಾದ ದುಃಖವನ್ನು ಹೊಂದುತ್ತೇನೆ.

೬೩-೬೪. ಅನಂತರ ನಾನು ಮಹಾಕಲಿಯರೂಪವಾದ ಕಲ್ಕಿಯ ಅವತಾರವನ್ನು ಹೊಂದುತ್ತೇನೆ. ಆ ಕಲಿಯ ಕೊನೆಯಲ್ಲಿ ಎಲ್ಲಕಡೆಯಲ್ಲಿಯೂ ವರ್ಣಸಂಕರವಾಗುತ್ತದೆ. ಆಗ ನಾನು ಬ್ರಾಹ್ಮಣವೇಷವನ್ನು ಹಾಕಿಕೊಂಡು ಕುದುರೆಯಮೇಲೆ ಕುಳಿತು ಖಡ್ಗವನ್ನು ಹಿಡಿದುಕೊಂಡು ಹೊರಡುತ್ತೇನೆ. ಆಗ ದುಷ್ಟರಾದವರನ್ನು ಕ್ಷಣಕಾಲದಲ್ಲಿ ಸಂಹಾರಮಾಡುತ್ತೇನೆ.

೬೫. ಆ ಅವತಾರವೂ ಕೂಡ ಭೂಲೋಕದಲ್ಲಿ ಬಹುದಿನಗಳವರೆಗೂ ಇರುವುದಿಲ್ಲ. ಎಲೈ ಬ್ರಾಹ್ಮಣರಿರಾ! ಆ ಅವತಾರದಲ್ಲಿಯೂ ಕೂಡ ನನಗೆ ಸ್ವಲ್ಪವೂ ಸುಖವಿರುವುದಿಲ್ಲ.

೬೬. ಕಲ್ಕ್ಯವತಾರದಲ್ಲಿ ಕಲಿಯುಗವು ಮುಗಿದುಹೋಗುತ್ತದೆ. ಅನಂತರ ಮತ್ತೆ ಕೃತಯುಗವು ಬರುತ್ತದೆ. ಮತ್ತೆ ಮೊದಲಿನಂತೆಯೇ ನಾನು ಅವತಾರಗಳನ್ನು ಮಾಡುತ್ತೇನೆ.

ಏವಂ ನವಾವತಾರೇಷು ನ ಭುಕ್ತಂ ಹಿ ಸುಖಂ ಮಯಾ ।
ಅತಸ್ತ್ವಸ್ಮಿನ್ನ ಅವತಾರೇ ಸುಖಂ ಭುಕ್ತಂ ಯಥೇಚ್ಛಯಾ ॥ ೬೭ ॥

ನಾನೇನ ಸದೃಶಂ ಕಶ್ಚಿದವತಾರೋಽವನೀತಲೇ ।
ಪೂರ್ವಭೂತೋ ಮಾಮಾಗ್ರೇಽಪಿ ನ ಭವಿಷ್ಯತಿ ವೈ ಕದಾ ॥ ೬೮ ॥

ಸಪ್ತದ್ವೀಪಪತಿರ್ಯತ್ರ ಯತ್ರ ಸೀತಾ ಶುಭಪ್ರಿಯಾ ।
ಯತ್ರೇಮೌ ಬಾಲಕೌ ಪುತ್ರೌ ಮಹಾವೀರೌ ಧನುರ್ಧರೌ ॥ ೬೯ ॥

ತ್ರಯಸ್ತ್ವೇತೇ ಬಂಧವಶ್ಚ ತ್ರೈಲೋಕ್ಯಜಯಿನಶ್ಶುಭಾಃ ।
ಕಾಮಧೇನ್ವಾದಿರತ್ನಾನಿ ಸಪ್ತ ಯತ್ರ ಮಮಾಂತಿಕೇ ॥ ೭೦ ॥

---

೬೭. ಈ ರೀತಿಯಾಗಿ ಒಂಭತ್ತು ಅವತಾರಗಳಲ್ಲಿ ಒಂದರಲ್ಲಿಯೂ ನಾನು ಸುಖವನ್ನು ಅನುಭವಿಸುವುದೇ ಇಲ್ಲ. ಆದರೆ ಇದು ಒಂದು ಅವತಾರದಲ್ಲಿ ಮಾತ್ರ ನಾನು ಬೇಕಾದಂತೆ ಸುಖಗಳನ್ನು ಅನುಭವಿಸುತ್ತೇನೆ.

೬೮. ಈ ರಾಮಾವತಾರಕ್ಕೆ ಸಮಾನವಾದ ಅವತಾರವು ಭೂಮಿಯಲ್ಲಿ ಯಾವುದೂ ಇಲ್ಲವೇ ಇಲ್ಲ. ಇದರಲ್ಲಿರುವಂತಹ ಸುಖವನ್ನು ಹಿಂದೆಯೂ ಕೂಡ ಅವತರಿಸಿ ಅನುಭವಿಸಿಲ್ಲ. ಮುಂದೆಯೂ ಕೂಡ ಅವತರಿಸಿ ಅನುಭವಿಸುವುದಿಲ್ಲ.

೬೯. ಈ ಅವತಾರದಲ್ಲಿ ನಾನು ಸಪ್ತದ್ವೀಪಗಳಿಗೂ ಚಕ್ರವರ್ತಿಯಾಗಿರುವೆನು. ಈ ಅವತಾರದಲ್ಲಿ ಪ್ರಿಯಳೂ ಮಂಗಳಕರಳೂ ಆದ ಸೀತೆಯು ಹೆಂಡತಿಯಾಗಿರುವಳು ಈ ಅವತಾರದಲ್ಲಿ ಈ ಲವಕುಶರಿಬ್ಬರೂ ಮಕ್ಕಳಾಗಿ ಮಹಾ ವೀರರಾಗಿ ಧನುರ್ಧಾರಿಗಳಾಗಿ ಇರುವರು.

೭೦. ಈ ಲಕ್ಷ್ಮಣ ಭರತ ಶತ್ರುಘ್ನರು ಮೂರುಜನ ತಮ್ಮಂದಿರೂ ಕೂಡ ಮೂರುಲೋಕವನ್ನು ಜಯಿಸತಕ್ಕವರು. ನನಗೆ ಶುಭವನ್ನು ಕೋರುವವರು ಈ ರಾಮಾವತಾರದಲ್ಲಿ ನನ್ನ ಹತ್ತಿರದಲ್ಲಿ ಕಾಮಧೇನುವೇ ಮುಂತಾದ ಏಳು ಉತ್ತಮರತ್ನಗಳಿರುವುವು.

ಸಾಕ್ಷಾದಯಂ ವೇದರೂಪೋ ವಶಿಷ್ಠಸ್ತ್ವಸ್ತಿ ಮೇ ಗುರುಃ ।
ಆರ್ಯಾವರ್ತೇ ಪುಣ್ಯದೇಶೇಯೋಧ್ಯಾಯಾಂ ವಸತಿರ್ಮಮ ॥ ೭೧ ॥

ರಾಜ್ಯಭೋಗಾದಿಭೋಗಾನಾಂ ಭೋಕ್ತಾಹಂ ತ್ವತ್ರ ನೋಪರಃ।
ಯತ್ರ ಸತ್ಯವ್ರತಂ ಮೇಽಸ್ತಿ ಯತ್ರೈಕದಯಿತಾವ್ರತಂ ॥ ೭೨ ॥

ಯತ್ರೈಕೇನೈವ ಬಾಣೇನ ಮಯಾ ವಾಲ್ಯಾದಿಕಾ ಹತಾಃ ।
ಯತ್ರೈಕಸ್ಯೈವ ಹಿ ಸೀತಾಯಾ ಮಮ ಶಯ್ಯಾ ನ ಚಾಪರಾ ॥ ೭೩ ॥

ಯತ್ರ ಯಾನಂ ಪುಷ್ಪಕಂ ತು ಯತ್ರ ದೂತೋಽಂಜನೀಸುತಃ ॥ ೭೪ ॥

---

೭೧. ವೇದಸ್ವರೂಪಿಯಾದ ಈ ವಸಿಷ್ಠನೇ ನನಗೆ ಪ್ರತ್ಯಕ್ಷ ಗುರುವಾಗಿರುವನು. ಈ ಆರ್ಯಾವರ್ತವೆಂಬ ಪುಣ್ಯದೇಶದಲ್ಲಿರುವ ಅಯೋಧ್ಯೆಯಲ್ಲಿಯೇ ನಾನು ಇರುವೆನು.

೭೨. ರಾಜ್ಯಭೋಗವೇ ಮುಂತಾದ ಭೋಗಗಳನ್ನು ನಾನು ಇಲ್ಲಿ ಅನುಭವಿಸುವಂತೆ ಮತ್ತೊಬ್ಬನೂ ಅನುಭವಿಸುವುದಿಲ್ಲ. ಈ ಜನ್ಮದಲ್ಲಿ ನಾನು ಸತ್ಯವನ್ನು ವ್ರತವನ್ನಾಗಿ ಹೊಂದಿರುವೆನು. ಈ ಅವತಾರದಲ್ಲಿ ನಾನು ಏಕಪತ್ನೀ ವ್ರತದಲ್ಲಿರುವೆನು.

೭೩. ಈ ಅವತಾರದಲ್ಲಿಯೇ ನಾನು ವಾಲಿಯೇ ಮುಂತಾದ ವೀರರನ್ನು ಒಂದೊಂದು ಬಾಣದಿಂದಲೇ ಕೊಂದೆನು. ಈ ಅವತಾರದಲ್ಲಿ ನಾನು ಸೀತೆಯೊಬ್ಬಳ ಹಾಸಿಗೆಯಲ್ಲಿ ಮಲಗುತ್ತೇನೆಯೇ ಹೊರತು ಮತ್ತೊಬ್ಬಳ ಹಾಸಿಗೆಯಲ್ಲಿ ಮಲಗುವುದಿಲ್ಲ.

೭೪. ಈ ಅವತಾರದಲ್ಲಿ ನನ್ನ ಅಪ್ಪಣೆಯು ಮೂರುಲೋಕದಲ್ಲಿಯೂ ಅಪ್ರತಿಹತವಾಗಿರುವುದು. ಈ ಅವತಾರದಲ್ಲಿ ಉತ್ತಮವಾದ ಪುಷ್ಪಕಯಾನವು ನನಗಿರುವುದು. ಬುದ್ಧಿವಂತನೂ, ಶೂರನೂ, ಭಕ್ತನೂ, ಆದ ಆಂಜನೇಯನು ದೂತನಾಗಿರುವನು.

ಸುಗ್ರೀವರಾಕ್ಷಸೇಂದ್ರೌ ಚ ಯತ್ರ ಮಿತ್ರೌ ಮಮಾಂತಿಕೇ ।
ಕೋದಂಡಸದೃಶಂ ಚಾಪಂ ಯತ್ರಮೇರಿನಿಷೂದನಂ ॥ ೭೫ ॥

ಸೂರ್ಯವಂಶೇ ಯತ್ರ ಜನ್ಮ ಜಾತೋ ದಶರಥೋ ವರಃ ।
ಕೌಸಲ್ಯಾ ಯತ್ರ ಜನನೀ ಯತ್ರಾಹಂ ಸ್ವವಶಸ್ಸದಾ ॥ ೭೬ ॥

ಸುಮೇಧಾ ಸದೃಶೀ ಯತ್ರ ಮೇ ಶ್ವಶ್ರೂಃ ಸ್ನೇಹವರ್ಧಿನೀ ।
ವಿದೇಹಃ ಶ್ವಶುರೋ ಯತ್ರ ವಿದ್ಯಾದೋ ಯತ್ರ ಗಾಧಿಜಃ ॥ ೭೭ ॥

ಲಕ್ಷ್ಮಣೋ ಯತ್ರ ಮೇ ಮಂತ್ರೀ ಸರಯೂರ್ಯತ್ರ ಮೇ ನದೀ ।
ಪಾರ್ಶ್ವಗಾ ಹ್ಯಂಗದಾದ್ಯಾಶ್ಚ ಚತುರ್ದಂತೋ ಗಜೋ ಮಹಾನ್ ॥ ೭೮ ॥

---

೭೫. ಸುಗ್ರೀವನೂ ವಿಭೀಷಣನೂ ಇಬ್ಬರೂ ಮಿತ್ರರಾಗಿ ನನ್ನ ಬಳಿಯಲ್ಲಿಯೇ ಇರುತ್ತಿರುವರು. ಕೋದಂಡಕ್ಕೆ ಸಮಾನವಾದ ಬಿಲ್ಲೂ ಕೂಡ ಈ ಜನ್ಮದಲ್ಲಿ ನನ್ನ ಬಳಿಯಲ್ಲಿರುವುದು. ಅದೇ ಶತ್ರುಗಳನ್ನು ಗೆಲ್ಲುವುದು.

೭೬. ಈ ಅವತಾರದಲ್ಲಿ ನಾನು ಉತ್ತಮವಾದ ಸೂರ್ಯವಂಶದಲ್ಲಿ ಹುಟ್ಟಿರುವೆನು. ಉತ್ತಮನಾದ ದಶರಥನೇ ನನಗೆ ತಂದೆಯಾಗಿರುವನು. ಪತಿಭಕ್ತಳೂ ಪುತ್ರವತ್ಸಲಳೂ, ಆದ ಕೌಸಲ್ಯೆಯು ತಾಯಿಯಾಗಿರುವಳು. ನಾನು ಯಾವಾಗಲೂ ಸ್ವತಂತ್ರನಾಗಿಯೇ ಇದ್ದುಕೊಂಡು ಇರುವೆನು.

೭೭. ಈ ಜನ್ಮದಲ್ಲಿಯೇ ಸ್ನೇಹಪರಳಾದ ಸುಮೇಧೆಯು ಅತ್ತೆಯಾಗಿರುವಳು. ನನ್ನ ಮಾವನು ಕೂಡ ಉತ್ತಮೋತ್ತಮನಾದ ಸುದೇಹನು. ವಿದ್ಯೆಯನ್ನು ಪದೇಶಿಸಿರುವನು ಉತ್ತಮನಾದ ವಿಶ್ವಾಮಿತ್ರನು.

೭೮. ಈ ಅವತಾರದಲ್ಲಿ ಉತ್ತಮನಾದ ಲಕ್ಷ್ಮಣನೇ ನನಗೆ ಮಂತ್ರಿಯಾಗಿರುವನು. ನನ್ನ ನದಿಯೂ ಕೂಡ ಉತ್ತಮವಾದ ಸರಯೂ ನದಿಯಾಗಿದೆ. ಅಂಗದನೇ ಮುಂತಾದ ಶೂರನು ಪೈಗಾವಲಿನವರಾಗಿರುವರು. ನನ್ನ ಅಂಬಾರಿಯ ಆನೆಯು ಚತುರ್ದಂತ (ನಾಲ್ಕು ಕೊಂಬು) ಉಳ್ಳದ್ದಾಗಿರುವುದು.

ದ್ವಿಜೇಚ್ಛಾಪೂರಣಂ ಯತ್ರ ವ್ರತಂ ಮೇಕುಂಠಿತಂ ಸದಾ ।
ಇದಂ ವೈಕುಂಠಸದೃಶಂ ಗೃಹಂ ಯತ್ರಾತಿಭಾಸುರಂ ॥ ೭೯ ॥

ಚಿಂತಾಮಣಿರಲಂಕಾರೋ ಹೃದಯೇ ಯತ್ರ ವರ್ತತೇ ।
ಏಕಾದಶಸಹಸ್ರಾಣಿ ವರ್ಷಾಣ್ಯಾಯುಶ್ಚಿರಂ ಮಮ ॥ ೮೦ ॥

ಅನಮ್ರಂ ಮೇ ಶಿರಶ್ಚೇದಂ ಕೇಷಾಮಪ್ಯವನೀಭೃತಾಂ ।
ಏವಂ ಮಯಾ ಸುಖಂ ಭುಕ್ತಮಿಹಜನ್ಮನಿ ಭೂಸುರಾಃ ॥ ೮೧ ॥

ನಾಲ್ಪಾಪ್ಯಪೂರ್ವರಿತಾಸ್ತಿ ಸುಖೇಚ್ಛಾ ಮಮ ಭೂತಲೇ ।
ಅತ ಏವಾವತಾರೋಽಯಂ ಪೂರ್ಣರೂಪಾನ್ಮಯಾ ಧೃತಃ ॥ ೮೨ ॥

---

೭೯. ದ್ವಿಜರ ಇಚ್ಛೆಯನ್ನು ಪೂರ್ತಿಮಾಡುವ ವ್ರತವು ಈ ಅವತಾರದಲ್ಲಿ ಸ್ವಲ್ಪವೂ ತಡೆಯಿಲ್ಲದೆ ನಡೆಯುತ್ತಿರುವುದು. ಈ ಅರಮನೆಯು ಬಹು ಪ್ರಕಾಶಮಾನವಾಗಿ ವೈಕುಂಠದಂತೆಯೇ ಸುಖದಾಯಕವಾಗಿರುವುದು.

೮೦. ಎಲ್ಲಾ ಇಷ್ಟಗಳನ್ನೂ ಕೊಡುವ ಚಿಂತಾಮಣಿಯೆಂಬ ರತ್ನವೇನೇ ನನ್ನ ಹೃದಯದ ಮೇಲೆ ಅಲಂಕಾರವಾಗಿ ಪ್ರಕಾಶಿಸುತ್ತಿರುವುದು. ಈ ಅವತಾರದಲ್ಲಿ ನನಗೆ ಹನ್ನೊಂದು ಸಾವಿರ ವರ್ಷಗಳವರೆಗೂ ಇರುವ ದೀರ್ಘಾಯುಸ್ಸು ಇರುವುದು.

೮೧. ನನ್ನ ಈ ತಲೆಯು ಒಬ್ಬ ರಾಜನಿಗೂ ಕೂಡ ಬಗ್ಗದೆ ಇರುವುದು. ಎಂದರೆ ಯಾರಿಗೂ ಆ ರಾಜನು ದೊಡ್ಡವನೆಂದು ತಲೆಬಾಗಲಿಲ್ಲ. ಈ ರೀತಿಯಾಗಿ ನಾನು ಬಹುವಾದ ಸೌಖ್ಯವನ್ನು ಅನುಭವಿಸಿದೆನು.

೮೨. ನನಗೆ ನಡಯುದೇ ಇರುವ ಆಸೆಯೆಂಬುದು ಈಗ ಈ ಭೂತಳದಲ್ಲಿ ಒಂದೂ ಇರುವುದಿಲ್ಲ. ಆದ್ದರಿಂದಲೇ ಈ ಅವತಾರವನ್ನು ಪೂರ್ಣವಾಗಿ ಮಾಡಿದೆನು.

ಭೂತಭಾವ್ಯವತಾರಾ ಯೇ ತೇಂಶಾದೇವ ಮಯಾ ಧೃತಾಃ ।
ಯತ್ಕೃತಂ ತು ವನೇ ಪೂರ್ವಂ ಸೀತಯಾ ಬಂಧುನಾ ಮಯಾ ॥ ೮೩ ॥

ತತ್ತುಜ್ಜನೋಪದೇಶಾರ್ಥಂ ಭೂಭಾರಹರಣಾಯ ಚ ।
ಜನೋಪದೇಶಃ ಕೀದೃಕ್ಸ ಕೃತಸ್ತಂ ಪ್ರವದಾಮ್ಯಹಂ ॥ ೮೪ ॥

ಪಿತುರ್ವಚೋ ಮಾನನೀಯಂ ಯದ್ಯಪ್ಯತಿಶ್ರಮಪ್ರದಂ ।
ಪುತ್ರೈರಿತ್ಯುಪದೇಶಾರ್ಥಂ ಮಯಾ ವಾಕ್ಯಂ ಪಿತುಃ ಕೃತಂ ॥ ೮೫ ॥

ನ ತದಾನೀಂ ಮೃಷಾ ಕರ್ತುಂ ಪಿತುರ್ವಾಕ್ಯಂ ಬಲಂ ಮಮ ।
ತಥಾಪಿ ಲೋಕಶಿಕ್ಷಾರ್ಥಂ ತದ್ವಾಕ್ಯಂ ಪಾಲಿತಂ ಮಯಾ ॥ ೮೬ ॥

ನ ಹಂತವ್ಯಾ ಮಮಾ ಕ್ರೋಧಾತ್ ದುಷ್ಟಾ ಕಿಂ ಕೈಕಯೀ ತದಾ ।
ತಥಾ ಸಾ ಮಂಥರಾ ಚಾಪಿ ಮೇ ರಾಜ್ಯೇ ವಿಘ್ನಕಾರಿಣೀ ॥ ೮೭ ॥

೮೩-೮೪. ಹಿಂದೆ ಮಾಡಿದ ಮತ್ತು ಮುಂದೆ ಮಾಡುವ ಅವತಾರಗಳು ಎಲ್ಲವೂ ನಾನು ಅಂಶದಿಂದ ಮಾಡಿದುವೇ ಹೊರತು ಪೂರ್ಣಾವತಾರಗಳಲ್ಲ. ನಾನು ಕಾಡಿಗೆ ಹೋಗಿ ಲಕ್ಷ್ಮಣನೊಡನೆಯೂ ಸೀತೆಯೊಡನೆಯೂ ಆ ಕಾಡಿನಲ್ಲಿ ಮಾಡಿದ ಕೆಲಸಗಳು ಇವೆಯಲ್ಲ! ಅವೆಲ್ಲವೂ ಜನಗಳಿಗೆ ಉಪದೇಶ ಮಾಡುವುದಕ್ಕೂ ಭೂಭಾರವನ್ನು ನಾಶಮಾಡುವುದಕ್ಕೂ ಆಗಿವೆ. ಜನಗಳಿಗೆ ಉಪದೇಶವನ್ನು ಹೇಗೆ ಮಾಡಿದೆನು ಎಂದು ಕೇಳಿದರೆ ಅದನ್ನು ಈಗ ನಿಮಗೆ ನಾನು ಹೇಳುತ್ತೇನೆ.

೮೫. ತಂದೆಯ ಮಾತು ಎಷ್ಟು ಕಷ್ಟವನ್ನು ಕೊಡುವುದಾದರೂ ಕೂಡ ಅದನ್ನು ಮಕ್ಕಳು ಗೌರವಿಸಿ ಅದರಂತೆ ನಡೆಯಬೇಕು ಎಂಬುದಾಗಿ ಉಪದೇಶವನ್ನು ಮಾಡಲು ಪಿತೃವಾಕ್ಯವನ್ನು ಪರಿಪಾಲಿಸಿದೆನು.

೮೬. ತಂದೆಯ ಮಾತನ್ನು ಮೀರುವುದಕ್ಕು ಅದನ್ನು ಸುಳ್ಳುಮಾಡುವುದಕ್ಕೂ ಸಾಕಾದಷ್ಟು ಬಲವು ನನ್ನಲ್ಲಿದ್ದಿತು. ಆದರೂ ಆ ಪಿತೃವಾಕ್ಯವನ್ನು ಪಾಲಿಸುವುದನ್ನು ಜನರಿಗೆ ತಿಳಿಸಲು ಪಾಲಿಸಿದೆನು.

೮೭-೮೮. ಆಗ ನಾನು ಕೋಪಿಸಿಕೊಂಡಿದ್ದರೆ ಆ ಕೈಕೆಯನ್ನು ಕೊಲ್ಲಲಾರದಿದ್ದೆನೆ? ಅದೂ ಅಲ್ಲದೆ ನನ್ನ ರಾಜ್ಯಭಾರದ ವಿಷಯದಲ್ಲಿ ವಿಘ್ನವನ್ನುಂಟು ಮಾಡಿದ ಆ ಮಂಥರೆಯನ್ನು ಕೊಲ್ಲಲಾರದಿದ್ದೆನೇನು? ಆಗ ನನ್ನ ಈ ಶಕ್ತಿಯು

ಕಿಂ ತದಾ ಕುಂಠಿತಾ ಶಕ್ತಿಃ ಕೈಕೇಯೀಮಂಥರಾವಧೇ ।
ಸ್ತ್ರೀಹತ್ಯಾ ನೈವ ಕರ್ತವ್ಯಾ ಚೇತಿ ಸರ್ವಾನ್ಸ್ವಶಿಕ್ಷಿತಂ ॥ ೮೮ ॥

ಸಾಪತ್ನಮಾತೃವಾಕ್ಯಂ ತು ಪಾಲನೀಯಂ ಸ್ವಮಾತೃವತ್ ।
ಸ್ವಸುಖಾರ್ಥಂ ವಧೋನ್ಯಸ್ಯ ನ ಕರ್ತವ್ಯೋ ಜನೈರಿತಿ ॥ ೮೯ ॥

ಉಪದೇಷ್ಟುಂ ಮಯಾ ನೈವ ಕೈಕೇಯೀಮಂದರೇ ಹತೇ ।
ನ ಬಂಧುಹಿಂಸಾ ಸಾ ಕಾರ್ಯಾ ಪರರಾಜ್ಯಂ ನ ಕಾಂಕ್ಷಯೇತ್ ॥ ೯೦ ॥

ಅಹಮುಪದಿಶನ್ನಿತ್ಥಂ ಜನಾನ್ಬಂಧುರ್ಹತೋ ನ ಮೇ ।
ಮೃತೇ ಪಿತರ್ಯಪಿ ಹೃತಂ ನ ತದ್ರಾಜ್ಯಂ ಬಲಾನ್ಮಯಾ ॥ ೯೧ ॥

ರಾಜ್ಯಾಸಕ್ತಾ ನರಾ ಭೂಮ್ಯಾಂ ಭೋಗಾಸಕ್ತಾ ಭವಂತು ನ ।
ಉಪದೇಷ್ಟುಂ ಜನಾನಿತ್ಥಮಹಂ ಪೂರ್ವಂ ವನಂ ಗತಃ ॥ ೯೨ ॥

ಆ ಕೈಕೆಯಿ ಮಂಥರೆಯರನ್ನು ಕೊಲ್ಲುವುದರಲ್ಲಿ ಕಡಿಮೆಯಾಗಿದ್ದಿತೇನು ? ಹಾಗೆ ಅವರನ್ನು ಕೊಲ್ಲದೆ ಬಿಟ್ಟುದರಿಂದ ಸ್ತ್ರೀಹತ್ಯೆಯನ್ನು ಮಾಡಬಾರದು ಎಂದು ಜನರಿಗೆ ತಿಳಿಸಲು ಮಾಡಿದುದಾಯಿತು.

೮೯. ಅಲ್ಲದೆ ಬಲತಾಯಿಯ ಮಾತನ್ನು ತಾಯಿಯ ಮಾತಿನಂತೆ ಪಾಲಿಸಬೇಕು. ಎಂಬುದನ್ನು ತೋರಿಸಿದೆನು. ಮತ್ತು ಜನಗಳು ತನ್ನ ಸುಖಕ್ಕೋಸ್ಕರ ಮತ್ತೊಬ್ಬರನ್ನು ಕೊಲ್ಲಬಾರದು ಎಂಬುದನ್ನು ಬೋಧಿಸಿದೆನು.

೯೦-೯೨. ಈ ಉಪದೇಶಮಾಡುವುದಕ್ಕೇನೆ ಕೈಕೇಯಿ ಮಂಥರೆಯರನ್ನು ಕೊಲ್ಲಲಿಲ್ಲ ಅಣ್ಣತಮ್ಮಂದಿರಿಗೆ ಹಿಂಸೆಯನ್ನು ಮಾಡಬಾರದು. ಪರರ ರಾಜ್ಯವನ್ನು ಅಪೇಕ್ಷಿಸಬಾರದು, ಎಂಬುದಾಗಿ ಜನರಿಗೆ ತಿಳಿಸಲು ತಮ್ಮನಾದ ಭರತನನ್ನು ಕೊಲ್ಲಲಿಲ್ಲ. ತಂದೆಯು ಸತ್ತರೂ ಕೂಡ ಆ ರಾಜ್ಯವನ್ನು ನಾನು ತೆಗೆದುಕೊಳ್ಳಲೇ ಇಲ್ಲ. ಇದರಿಂದ ಜನರು ರಾಜ್ಯ ರಾಜ್ಯಾಸಕ್ತರೂ ಆಗಬಾರದೆಂದ ಭೋಗಾಸಕ್ತರೂ ಬೋಧಿಸಲು ನಾನೇ ಮೊದಲು ಕಾಡಿಗೆ ಹೋದೆನು.

ಮಾತೃಪಿತೃಸುಹೃತ್ಪುತ್ರಸ್ನೇಹಾಸಕ್ತಿಂ ನ ಕಾರಯೇತ್ ।
ಇತ್ಥಂ ಮಯೋಪದಿಶತಾ ತ್ಯಕ್ತಃ ಸ್ನೇಹಸ್ತದಾ ದ್ವಿಜಾಃ ॥ ೯೩ ॥

ಸುಖಂ ದುಃಖಂ ಸಮಂ ಜ್ಞೇಯಂ ಸುಖೇ ಹರ್ಷೋ ನ ಮಾನಯೇತ್ ।
ಶೋಕಃ ಕಾರ್ಯೋ ವಿಪತ್ತೌ ನ ತ್ವಿತಿ ಲೋಕಾನ್ಪ್ರದರ್ಶಿತುಂ ॥ ೯೪ ॥

ರಾಜ್ಯಸೌಖ್ಯಂ ಮಯಾ ತ್ಯಕ್ತ್ವಾ ಭುಕ್ತಾಃ ಕ್ಲೇಶಾಸ್ತದಾ ವನೇ ।
ಕಾಮಾದೀನಾಂ ರಿಪೂಣಾಂ ಚ ದುಷ್ಟಾನಾಂ ಹಿ ವಧೋ ಭುವಿ ॥ ೯೫ ॥

ಜನೈಃ ಕಾರ್ಯಸ್ಸದಾ ಚೇತಿ ಹ್ಯುಪದೇಷ್ಟುಂ ಸದಾ ವನೇ ।
ಬಹವೋ ನಿಹತಾಸ್ತತ್ರ ರಾಕ್ಷಸಾ ಮುನಿಹಿಂಸಕಾಃ ॥ ೯೬ ॥

ಸ್ತ್ರೀಸಂಗಸ್ಸರ್ವದಾ ತ್ಯಾಜ್ಯಸ್ತ್ವೇಕಾಕೀ ಚ ತಪಶ್ಚರೇತ್ ।
ನಾಸಕ್ತಂ ನಿಜಚಿತ್ತಂ ಹಿ ಸ್ತ್ರೀಷು ಕಾರ್ಯಂ ನರೈಃ ಕದಾ ॥ ೯೭ ॥

---

೯೩. ತಾಯಿ, ತಂದೆ, ಅಣ್ಣ, ತಮ್ಮ, ಸ್ನೇಹಿತ, ಮಗ ಇವರಲ್ಲಿ ಸ್ನೇಹವನ್ನೇ ಇಡಬಾರದು ಎಂಬುದನ್ನು ತೋರಿಸಲು ನಾನು ಅವರಲ್ಲಿ ಸ್ನೇಹವನ್ನು ಬಿಟ್ಟು ಹೊರಟುಹೋಗಿದ್ದೆನು.

೯೪–೯೬. ಸುಖದುಃಖಗಳನ್ನು ಸಮವಾಗಿ ತಿಳಿಯಬೇಕು. ಸುಖದಲ್ಲಿ ಹರ್ಷವನ್ನು ಹೊಂದಬಾರದು. ವಿಪತ್ತಿನಲ್ಲಿ ದುಃಖಗಳನ್ನೂ ಹೊಂದಬಾರದು ಎಂಬುದನ್ನು ಜನರಿಗೆ ತೋರಿಸಲು ನಾನು ರಾಜ್ಯಸೌಖ್ಯವನ್ನು ಬಿಟ್ಟುವನದಲ್ಲಿ ಬಹುವಾದ ಕಷ್ಟಗಳನ್ನು ಅನುಭವಿಸಿದೆನು. ಕಾಮ, ಕ್ರೋಧಾದಿಗಳುಳ್ಳ ದುಷ್ಟರನ್ನು ನಿಗ್ರಹಿಸಬೇಕು ಎಂಬುದನ್ನು ಜನರಿಗೆ ಉಪದೇಶಮಾಡಲು ಮುನಿ ಹಿಂಸಕರೆಂಬ ನೆವದಲ್ಲಿ ರಾಕ್ಷಸರಾದ ಅನೇಕರನ್ನು ಕೊಂದೆನು.

೯೭. ಸ್ತ್ರೀಯರ ಸಂಗವನ್ನು ಎಲ್ಲಾ ರೀತಿಯಿಂದಲೂ ಬಿಟ್ಟುಬಿಡಬೇಕು. ಒಬ್ಬಂಟಿಗನಾಗಿ ತಪಸ್ಸನ್ನು ಮಾಡಬೇಕು. ಮನುಷ್ಯನು ತನ್ನ ಮನಸ್ಸನ್ನು ಹೆಂಗಸರಲ್ಲಿ ಆಸಕ್ತಿಯುಳ್ಳದ್ದನ್ನಾಗಿ ಮಾಡಿಕೊಳ್ಳಲೇ ಕೂಡದು.

ಇತ್ಥಂ ಮಯೋಪದಿಶತಾ ಸೀತಾಯಾಶ್ಚ ತದಾ ವನೇ ।
ವಿಯೋಗೋ ದರ್ಶಿತೋ ಲೋಕಾ ಮತ್ತೋ ಭಿನ್ನಾ ನ ಜಾನಕೀ ॥

ಕದಾಪಿ ಜಾಯತೇ ವಿಪ್ರಾಸ್ಸತ್ಯಂ ಚೇದಂ ಬ್ರವೀಮ್ಯಹಂ ।
ಆರ್ತಸ್ಯ ರಕ್ಷಣಂ ಕಾರ್ಯಂ ಕಾರ್ಯೋ ದುಷ್ಟಸ್ಯ ನಿಗ್ರಹಃ ॥ ೯೯ ॥

ಮಯೋಪದಿಶತಾ ಚೇತ್ಥಂ ಜನಾನ್ಸುಗ್ರೀವರಾಕ್ಷಸೌ ।
ರಕ್ಷಿತೌ ನಿಹತೌ ವಾಲಿರಾವಣಾವಿತರೇ ಹತಾಃ ॥ ೧೦೦ ॥

ಕೀರ್ತಿಃ ಕಾರ್ಯಾ ಜನೇಷ್ವತ್ರ ಮಯೋಪದಿಶತಾತ್ವಿತಿ ।
ಪಾಷಾಣಾಸ್ತಾರಿತಾ ನೀರೇ ಕಿಮಾಕಾಶಗತಿರ್ನ ಮೇ ॥ ೧೦೧ ॥

ಯದ್ಯಪಿ ಶುದ್ಧಂ ಸ್ವೇ ಚಿತ್ತೇ ವಿರುದ್ಧಂ ಚ ಜನೇಷು ಯತ್ ।
ತ್ಯಕ್ತವ್ಯಂ ತತ್ಪ್ರಿಯಂ ಚಾಪಿ ಮಯೋಪದಿಶತಾತ್ವಿತಿ ॥ ೧೦೨ ॥

---

೯೮. ಇದನ್ನು ಉಪದೇಶಮಾಡಲು ಸೀತೆಯನ್ನು ಕಾಡಿನಲ್ಲಿ ಬಿಟ್ಟು ವಿಯೋಗವನ್ನು ಹೊಂದಿ ತೋರಿಸಿದ್ದೇನೆ. ಜಾನಕಿಯಾದರೋ ನನಗಿಂತ ಬೇರೆಯವಳಲ್ಲ. ನಾನೂ ಅವಳೂ ಒಂದೇ.

೯೯. ನನಗೂ ಜಾನಕಿಗೂ ವಿಯೋಗವು ಯಾವಾಗಲೂ ಆಗುವುದೇ ಇಲ್ಲ. ಈ ಮಾತು ಸತ್ಯವೆಂದು ತಿಳಿಯಿರಿ. ತೊಂದರೆಯಲ್ಲಿರುವವರಿಗೆ ಸಹಾಯವನ್ನು ಮಾಡಬೇಕು. ದುಷ್ಟನಾದವನನ್ನು ನಿಗ್ರಹಿಸಬೇಕು,

೧೦೦. ಇಂತೆಂದು ಉಪದೇಶಮಾಡಲು ಸುಗ್ರೀವನೆಂಬ ಕಪಿಯನ್ನೂ ವಿಭೀಷಣನೆಂಬ ರಾಕ್ಷಸನನ್ನೂ ಕಾಪಾಡಿದೆನು. ವಾಲಿಯನ್ನೂ, ರಾವಣನನ್ನೂ, ಇತರರನ್ನೂ ಕೊಂದೆನು.

೧೦೧. ಜನಗಳು ಹೇಗಾದರೂ ಕೀರ್ತಿಯನ್ನು ಹೊಂದಬೇಕು ಎಂಬುದನ್ನು ಉಪದೇಶಿಸಲು ಕಲ್ಲುಗಳನ್ನು ನೀರಿನಲ್ಲಿ ತೇಲುವಂತೆ ಮಾಡಿ ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿದೆನು. ಆಕಾಶ ಮಾರ್ಗದಿಂದ ಲಂಕೆಗೆ ಹೋಗಲು ನನ್ನ ಕೈಯ್ಯಲ್ಲಿ ಆಗುತ್ತಿರಲಿಲ್ಲವೇನು ?

೧೦೨-೧೦೩. ಮನುಷ್ಯನಿಗೆ ಅವನ ಮನಸ್ಸಿಗೆ ಶುದ್ಧವೆಂದು ನಿಶ್ಚಿತವಾಗಿರಬಹುದು. ಜನರಿಗೆ ಅವುಗಳು ವಿರುದ್ಧವಾಗಿರಬಹುದು. ಅಂತಹ ವಿಷಯಗಳನ್ನು ಅವನಿಗೆ ಪ್ರಿಯವಾಗಿದ್ದರೂ

ಜನಾನಪಾಪಾಂ ಜ್ಞಾತ್ವಾಪಿ ಲಂಕಾಯಾಂ ದಿವ್ಯದಾನತಃ ।
ಲೋಕಾಪವಾದಭೀತ್ಯಾ ಸಾ ಪುರಾ ತ್ಯಕ್ತಾತ್ರ ಜಾನಕೀ ॥ ೧೦೩ ॥

ಸ್ವಯಮೇವಾತ್ರ ಯತ್ತ್ಯಕ್ತಾಂ ಶುದ್ಧಾಂ ಜ್ಞಾತ್ವಾ ಹಿ ತತ್ಪುನಃ ।
ಅಗೀಕಾರ್ಯಂ ಜನೈರ್ಬುಧ್ಯಾ ಮಯೋಪದಿಶತಾ ತ್ವಿತಿ ॥ ೧೦೪ ॥

ಜನಾನಂಗೀಕೃತಾ ಸೀತಾ ಪುರಾ ತ್ಯಕ್ತಾ ಮಯಾ ಶುಭಾ ।
ಏಕಪತ್ನೀವ್ರತಾದೀನಿ ರಾಜ್ಯಕರ್ಮಾಣ್ಯನೇಕಶಃ ॥ ೧೦೫ ॥

ಅಶ್ವಮೇಧಾದಿಯಜ್ಞಾಶ್ಚ ಸದಾಚಾರೋಜಪಸ್ತಪಃ ।
ಸ್ನಾನಸಂಧ್ಯಾದಿಕಂ ಯದ್ಯನ್ಮಯಾತ್ರ ಕ್ರಿಯತೇ ಸದಾ ॥ ೧೦೬ ॥

ತತ್ಸರ್ವಂ ಜನಶಿಕ್ಷಾರ್ಥಂ ಮುಕ್ತಸಂಗಸ್ಯ ಕಿಂ ಮಮ ।
ಕರ್ಮಾತೀತಸ್ಯ ಭೋ ವಿಪ್ರಾಸ್ಸದಾನಂದರೂಪಿಣಃ ॥ ೧೦೭ ॥

ಬಿಟ್ಟುಬಿಡಬೇಕು ಎಂಬುದಾಗಿ ಉಪದೇಶಮಾಡಲು ಜನಗಳು ಇದು ಸರಿ ಎಂದು ತಿಳಿಯಲು ಲಂಕೆಯಲ್ಲಿ ದಿವ್ಯವಾದ ಅಗ್ನಿದಹನವೇ ಮುಂತಾದುವುಗಳಿಂದ ಜಾನಕಿಯನ್ನು ಅಪವಾದ ಭೀತಿಯಿಂದ ಶುದ್ಧಿಮಾಡಿ ಪರಿಗ್ರಹಿಸಿದನು.

೧೦೪. ಆ ಸೀತೆಯು ಶುದ್ಧಳೆಂದು ತಿಳಿದಿದ್ದರೂ ನಾನು ಅಪವಾದದ ಭೀತಿಯಿಂದ ಮತ್ತೆ ಬಿಟ್ಟುಬಿಟ್ಟೆನು. ಇದರಿಂದ ಯಾವ ವಿಷಯವನ್ನೇ ಆಗಲಿ ಜನಗಳು ಬುದ್ಧಿಯಿಂದ ವಿಮರ್ಶಿಸಿ ತಿಳಿದುಕೊಳ್ಳಲೆಂದು ಉಪದೇಶಿಸಲು ಆಚರಿಸಿದೆನು.

೧೦೫-೧೦೭. ಏಕಪತ್ನೀವ್ರತ, ರಾಜ್ಯಭಾರ, ಅಶ್ವಮೇಧಾದಿ ಯಜ್ಞಗಳು, ಸದಾಚಾರ, ಜಪ, ತಪಸ್ಸು, ಸ್ನಾನ, ಸಂಧ್ಯಾವಂದನೆ ಮುಂತಾದ ಯಾವು ಯಾವುವನ್ನು ಆಚರಿಸುತ್ತಿದ್ದೇನೆಯೋ ಅವೆಲ್ಲವೂ ಕೂಡ ಜನಗಳಿಗೆ ತೋರಿಸಿ ಕೊಡುವುದಕ್ಕೆ ಹೊರತು ಮತ್ತೇನೂ ಇಲ್ಲ. ನಾನು ಯಾವಾಗಲೂ ಮುಕ್ತನು. ನನಗೆ ಇವೆಲ್ಲವೂ ಬೇಕಾಗಿಯೇ ಇರುವುದಿಲ್ಲ. ನಾನು ಕರ್ಮಾತೀತನು, ಸದಾ ನಂದಸ್ವರೂಪಿಯು.

ಅಹಂ ಸದಾನಂದಮಯಸ್ಸುಖಾತ್ಮಾ ಸುಖದೋನೃಣಾಂ ।
ಅವತಾರಪರತ್ವೇನ ಸುಖಂ ದುಃಖಂ ಮಯಾಽ ಕಥಿ ॥ ೧೦೮ ॥

ಯದತ್ರ ಭವತಾಮಗ್ರೇ ಕೌತುಕಾರ್ಥಂ ನ ಸಂಶಯಃ ।
ಉಪಾಸಕಾನಾಂ ತೋಷಾರ್ಥಮವತಾರಃ ಸ್ವಯಂ ಮಯಾ ॥ ೧೦೯ ॥

ವಿಶೇಷಗುಣವಾನುಕ್ತಸ್ಸಂತಿ ಸರ್ವೇ ಸಮಾ ಮಮ ।
ಸಮ್ಯಗ್ಬುಧ್ಯಾ ವಿಚಾರಾಚ್ಚ ವಿಶಿಷ್ಟಸ್ಸಕಲೇಷ್ವಯಂ ॥ ೧೧೦ ॥

ದ್ವಾವರೌರೌ ಜಲಚರೌ ದ್ವೌ ತ್ವೌ ವಲ್ಕಲಧಾರಿಣೌ ।
ಏಕೋ ವೈಶ್ಯೋ ಗೋವಲೌದ್ವೌ ಪರೌ ದ್ವೌ ವನಚಾರಿಣೌ ॥ ೧೧೧ ॥

ಏಕಸ್ತು ಮಲಿನಶ್ಚಾಪಿ ಪರಸ್ತು ಕ್ಷಣಿಕಸ್ತಥಾ ।
ಏವಂ ಭೂತಾ ಭವಿಷ್ಯಾಸ್ತೇ ವತಾರಾಸ್ತ್ವೇಷದಾ ನ ಮೇ ॥ ೧೧೨ ॥

---

೧೦೮. ನಾನು ಯಾವಾಗಲೂ ಆನಂದಮಯನು. ಸುಖಸ್ವರೂಪನು. ಮನುಷ್ಯರಿಗೆ ಸುಖವನ್ನು ಕೊಡುವವನು. ಆದರೂ ಅವತಾರಗಳ ರೀತಿಯಿಂದ ನಿಮಗೆ ಸುಖದುಃಖಗಳನ್ನು ಹೇಳಿದೆನು.

೧೦೯-೧೧೦. ನಿಮ್ಮ ಎದುರಿಗೆ ಹೇಳಿದುದೆಲ್ಲವೂ ಒಂದು ಸಂತೋಷಕ್ಕೆಂದು ತಿಳಿಯಿರಿ. ಇದರ ವಿಷಯದಲ್ಲಿ ಸಂಶಯವಿಲ್ಲ. ನನ್ನನ್ನು ಉಪಾಸನೆ ಮಾಡುವವರ ಸಂತೋಷಕ್ಕೋಸ್ಕರ ಈ ಅವತಾರವು ವಿಶೇಷಗುಣವುಳ್ಳದ್ದು ಎಂದು ನಾನು ಹೇಳಿದೆನು. ನನಗೆ ಎಲ್ಲಾ ಅವತಾರಗಳೂ ಒಂದೇ ಆಗಿರುವುವು. ಬುದ್ಧಿಯಿಂದ ಸರಿಯಾಗಿ ವಿಚಾರಿಸಿ ನೋಡಿದರೆ ಈ ಅವತಾರವು ಹೆಚ್ಚಿನದು.

೧೧೧-೧೧೨. ನನ್ನ ಮತ್ಸ್ಯ ಕೂರ್ಮಾವತಾರಗಳೆರಡೂ ನೀರಿನಲ್ಲಿ ಓಡಾಡತಕ್ಕವುಗಳು. ವಾಮನ ಪರಶುರಾಮಾವತಾರಗಳೆರಡೂ ನಾರು ಬಟ್ಟೆಯನ್ನುಟ್ಟು ಕಾಡಿನಲ್ಲಿ ಸಂಚರಿಸಲು ಯೋಗ್ಯವಾದುವು. ಕೃಷ್ಣಾವತಾರವು ಗೋಪಿಯರೊಡನೆ ಇದ್ದುಕೊಂಡು ದನಕಾಯುವುದು, ನಾರಸಿಂಹ, ವರಾಹಾವತಾರಗಳು ಕಾಡಿನಲ್ಲಿ ಸಂಚರಿಸುವ ಮೃಗರೂಪವಾದುವು. ಬುದ್ಧಾವತಾರವು ಬಹು ಮಲಿನವಾದುದು. ಕಲ್ಕ್ಯವತಾರವು ಕ್ಷಣಿಕವಾದುದು. ಈ ರೀತಿಯಾಗಿ ನನ್ನ ಮಿಕ್ಕ ಅವತಾರಗಳು ಸುಖವಿಲ್ಲದವುಗಳಾಗಿ ಆಗಿರುವುವು. ಮುಂದೆಯೂ ಆಗುತ್ತವೆ.

ಅಯಂ ಸರ್ವವಿಶಿಷ್ಟೋತ್ರ ಹ್ಯುಪಾಸಕಜನಪ್ರಿಯಃ ।
ಅವತಾರಸ್ತ್ವಹಂ ವೇದ್ಮಿ ಸೇವನಾನ್ಮಂಗಳಪ್ರದಃ ॥ ೧೧೩ ॥

ಚರಿತ್ರಾಣ್ಯತಿರಮ್ಯಾಣಿ ಪಾತಕಘ್ನಾನಿ ವೈ ಮಯಾ ।
ಕೃತಾನ್ಯಸ್ಮಿನ್ನವತಾರೇ ಶ್ರವಣಾನ್ಮುಕ್ತಿದಾನಿ ಹಿ ॥ ೧೧೪ ॥

ಸದಾ ಜನಾ ಭಜಂತ್ವತ್ರ ಹ್ಯವತಾರಮಮುಂ ಮಮ ।
ಭಕ್ತಾಸ್ತ್ವಸ್ಯಾವತಾರಸ್ಯ ತೇ ಮೇತೀವ ಪ್ರಿಯಾಸ್ಸದಾ ॥ ೧೧೫ ॥

ಏವಂ ಸರ್ವಮಿದಂ ವಿಪ್ರಾಶ್ಚಾನಂದೇನ ಮಯೋದಿತಂ ।
ದೋಷಮಾರೋಪಯಂತ್ಯಸ್ಮಿನ್ನವತಾರೇಪಿ ಯೇ ಜನಾಃ ॥ ೧೧೬ ॥

---

೧೧೩. ಇವೆಲ್ಲದರಲ್ಲಿಯೂ ಈ ರಾಮಾವತಾರವು ಬಹು ಪ್ರಶಸ್ತವಾದುದು. ಉಪಾಸಕ ಜನರಿಗೆ ಬಹು ಪ್ರಿಯವಾದುದು. ಈ ಅವತಾರದಲ್ಲಿರುವ ನನ್ನನ್ನು ಸೇವಿಸಿದರೆ ಅವರಿಗೆ ಮಂಗಳವುಂಟಾಗುತ್ತದೆ.

೧೧೪. ಈ ಅವತಾರದಲ್ಲಿ ಪಾಪನಾಶಕವಾಗುವಂತೆ ಅನೇಕ ಕೆಲಸಗಳನ್ನು ಮಾಡಿ ನನ್ನ ಚರಿತ್ರೆಯನ್ನು ಜನರು ಕೀರ್ತಿಸುವಂತೆ ಮಾಡಿದ್ದೇನೆ. ಈ ಚರಿತ್ರೆಗಳನ್ನು ಕೇಳಿದರೆ ಪಾಪವು ಹೋಗುವುದು ಇರಲಿ. ಮುಕ್ತಿಯೂ ಕೂಡ ಲಭಿಸುತ್ತದೆ.

೧೧೫. ಜನಗಳು ಯಾವಾಗಲೂ ಈ ನನ್ನ ರಾಮಾವತಾರವನ್ನು ಸೇವಿಸಲಿ. ಇದನ್ನು ಸೇವಿಸುವ ಭಕ್ತರು ನನಗೆ ಬಹುವಾದ ಪ್ರೀತಿಪಾತ್ರರು.

೧೧೬-೧೧೮. ಎಲೈ ವಿಪ್ರರಿರಾ! ಇದೆಲ್ಲವನ್ನೂ ಕೂಡ ಆನಂದದಿಂದ ಹೇಳಿದ್ದೇನೆ. ಯಾರು ಈ ರಾಮಾವತಾರದಲ್ಲಿ ದೋಷವನ್ನು ಕಲ್ಪಿಸುವರೋ ಅವರು ನನಗೆ ದ್ವೇಷ್ಯರಾಗಿ ಅವರ ಹಿಂದಿನವರನ್ನೂ ನರಕದಲ್ಲಿ ಕೆಡಗಿ ತಾವೂ

ತೇ ಮದ್ದ್ವೇಷ್ಯಾ ನರಕೇಷು ಪತಂತಿ ಸಹ ಪೂರ್ವಜೈಃ ।

॥ ಶ್ರೀರಾಮದಾಸ ಉವಾಚ ॥

ಏವಮುಕ್ತ್ವಾ ರಾಮಚಂದ್ರಸ್ಸಂಪೂಜ್ಯ ಹಿ ಮುನೀಶ್ವರಾನ್ ॥ ೧೧೭ ॥

ವಿಸೃಜ್ಯ ಸಕಲಾನ್ ಸೀತಾಂ ರಂಜಯಾಮಾಸ ರಾಘವಃ ।
ಏವಂ ಶಿಷ್ಯ ಮಯಾ ಪ್ರೋಕ್ತಮವತಾರಪ್ರವರ್ಣನಂ ॥ ೧೧೮ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಉತ್ತರಾರ್ಧೇ ಅವತಾರ ವರ್ಣನಂ ನಾಮ ವಿಂಶಸ್ಸರ್ಗಃ ಸಮಾಪ್ತಃ

ನರಕದಲ್ಲಿಯೇ ಬೀಳುತ್ತಾರೆ. ರಾಮದಾಸನು ಹೇಳಿದನು—ರಾಮಚಂದ್ರನು ಹೀಗೆ ಹೇಳಿ ಮುನಿಗಳನ್ನು ಗೌರವಿಸಿ ಎಲ್ಲರನ್ನೂ ಕಳುಹಿಸಿದನು. ಮತ್ತು ಸೀತೆಯನ್ನು ಬಹುವಾಗಿ ಸಂತೋಷಪಡಿಸಿದನು. ಎಲೈ ಶಿಷ್ಯನೇ ! ಈ ರೀತಿಯಾಗಿ ಅವತಾರಗಳನ್ನು ವರ್ಣಿಸಿದ್ದೇನೆ.

ಇಂತು ಶ್ರೀ ವಾಲ್ಮೀಕಿ ರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ಅವತಾರ ವರ್ಣನನೆಂಬ ಇಪ್ಪತ್ತನೆಯ ಸರ್ಗವು ಮುಗಿದುದು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಇಪ್ಪತ್ತನೆಯ ಸರ್ಗದ ಸಾರಾಂಶವು

ಶ್ರೀರಾಮನು ರಾಜ್ಯಭಾರ ಮಾಡುತ್ತಿರಲು ಒಂದು ಸಾರಿ ಲವನು ವಶಿಷ್ಠನನ್ನು ಕುರಿತು ಇಂತೆಂದು ಪ್ರಶ್ನಿಸಿದನು.

ಎಲೈ ಗುರುವೆ! ವಾಲ್ಮೀಕಿ ಮಹರ್ಷಿಯು ಅನುಗ್ರಹದಿಂದ ಲೋಕದ ವಿಷಯವೆಲ್ಲವನ್ನೂ ತಿಳಿದಿದ್ದೇನೆ. ಆದರೆ ಲೋಕದಲ್ಲಿರುವ ಜನರು ಎಲ್ಲರೂ ತಿಳಿದುಕೊಳ್ಳಲೆಂದು ಎಲ್ಲರೆದುರಿಗೂ ನಿನ್ನನ್ನು ಪ್ರಶ್ನಿಸುತ್ತೇನೆ.

ರಾತ್ರಿಯಲ್ಲಿ ಎಲ್ಲರೂ ಮಲಗಿದ ಮೇಲೆ ಕಿವಿಯನ್ನು ಒತ್ತಿದರೆ ಗಾಳಿಯ ಶಬ್ದವು ಕೇಳುವಂತೆ ಒಂದು ಶಬ್ದವು ಕೇಳಿ ಬರುತ್ತದೆಯಲ್ಲ! ಅದು ಯಾವ ಧ್ವನಿ ? ಇದನ್ನು ತಿಳಿದುಕೊಳ್ಳಬೇಕೆಂದು ನನಗೆ ಬಹಳ ಆಶೆಯಾಗಿದೆ. ನನ್ನ ಈ ಸಂಶಯವನ್ನು ಪರಿಹರಿಸು ಎಂದನು.

ಲವನು ಇಂತೆನ್ನಲು ವಶಿಷ್ಠನು ಅವನನ್ನು ಕುರಿತು ಇಂತೆಂದನು.

ಎಲೈ ಲವನೇ! ರಾವಣನು ಬಹುವಾಗಿ ಯಾವ ದೇಹದಿಂದ ಬ್ರಹ್ಮಹತ್ಯೆಗಳನ್ನು ಮಾಡಿದ್ದನೋ ಅದೇ ದೇಹವು ಲಂಕೆಯಲ್ಲಿ ಈಗಲೂ ಉರಿಯುತ್ತಿದೆ. ರಾವಣನು ಶ್ರೀರಾಮನ ಕೈಯ್ಯಿಂದ ಮರಣವನ್ನು ಹೊಂದಿದುದರಿಂದಲೂ ವೈರ ಬುದ್ಧಿಯಿಂದ ಯಾವಾಗಲೂ ರಾಮನನ್ನೇ ಸ್ಮರಿಸುತ್ತಿದ್ದುದರಿಂದಲೂ ಅವನ ಆತ್ಮವು ಪಾಪವನ್ನು ಕಳೆದುಕೊಂಡು ಕ್ಷಣಕಾಲದಲ್ಲಿಯೇ ಮುಕ್ತಿಯನ್ನು ಹೊಂದಿತು. ಆದರೆ ಅವನು ತಾನು ಧರಿಸಿದ್ದ ಈ ರಾವಣ ಜನ್ಮದ ದೇಹದಿಂದ ಒಂದು ದೇವರಿಗೂ ನಮಸ್ಕರಿಸಲಿಲ್ಲ. ದೇವಸ್ಥಾನಗಳಿಗೆ ಹೋಗಿ ಅದನ್ನು ಗುಡಿಸುವುದಾಗಲೀ, ಸಾರಿಸುವುದಾಗಲೀ ಯಾವುದನ್ನೂ ಮಾಡಲೇ ಇಲ್ಲ. ಆ ದೇಹದಿಂದ ತೀರ್ಥಯಾತ್ರೆಯೊಂದನ್ನೂ ಭಕ್ತಿಯಿಂದ ಮಾಡಲಿಲ್ಲ. ನಿಷ್ಕಾಮದಿಂದ ತಪಸ್ಸನ್ನು ಮಾಡಲಿಲ್ಲ. ಈ ದೇಹವನ್ನು ಶೀತೋಷ್ಣಗಳಿಗೆ ಈಡುಮಾಡಿ ಯಾವ ಪುಣ್ಯ ಕೆಲಸವನ್ನೂ ಮಾಡಲಿಲ್ಲ.

ಬಹುಜನ ಬ್ರಾಹ್ಮಣರನ್ನು ಹಿಂಸಿಸಿದ ಈ ರೀತಿಯಾದ ಅವನ ದೇಹವು ಈಗಲೂ ಕೂಡ ಲಂಕೆಯಲ್ಲಿ ಉರಿಯುತ್ತಿರುವುದು. ಉರಿಯುವಾಗ ಹೊರಡುವ ಜ್ವಾಲೆಯ ಶಬ್ದವು ತಿದಿಯೊಂತ್ತಿದಂತೆ ಕೇಳಿಬರುತ್ತಿರುವುದು. ಹಗಲು ಹೊತ್ತಿನಲ್ಲಿ ಜನಗಳ ಶಬ್ದವು ಹೆಚ್ಚಾಗಿರುವುದರಿಂದ ಈ ಶಬ್ದವು ಕೇಳಿಬರುವುದಿಲ್ಲ. ರಾತ್ರಿಯಲ್ಲಿ ಎಲ್ಲರೂ ಮಲಗಿರುವುದರಿಂದ ಗದ್ದಲವಿರುವುದಿಲ್ಲ. ಆದ್ದರಿಂದ ಆಗ ಆ ಶಬ್ದವು ಕೇಳಿಬರುತ್ತದೆ. ಆ ದೇಹವು ಉರಿದು ಭಸ್ಮವಾಗಲೆಂದು ಮಾರುತಿಯು ಲಂಕೆಗೆ ಹೋಗಿ ಈಗಲೂ ಆ ರಾವಣನ ಶವವಿರುವ ಚಿತೆಗೆ ಸೌದೆಯನ್ನು ಹಾಕುತ್ತಿರುವನು. ಅವನ ಆ ದೇಹದ ಪಾಪಶಾಂತಿಯು ಆದಾಗ ಆ ದೇಹವು ಭಸ್ಮವಾಗುತ್ತದೆ.

ಇದೂ ಅಲ್ಲದೆ ಮತ್ತೊಂದು ಕಾರಣವನ್ನು ಹೇಳುತ್ತೇನೆ. ಕೇಳು.

ರಾವಣನು ಸಾಯುವಾಗ ರಾಮನನ್ನು ಕುರಿತು ತನ್ನನ್ನು ಜನಗಳು ಯಾವಾಗಲೂ ಸ್ಮರಿಸಿಕೊಳ್ಳುತ್ತಿರುವಂತೆ ವರವನ್ನು ಕೊಡಬೇಕೆಂದು ಕೇಳಿಕೊಂಡನು. ಅದನ್ನು ಕೇಳಿ ರಾಮನು ನಿನ್ನ ದೇಹವನ್ನು ಸುಡುವ ಬೆಂಕಿಯ ಜ್ವಾಲೆಯ ಶಬ್ದವನ್ನು ಬ್ರಂಹ್ಮಾಂಡದಲ್ಲಿರುವವರೆಲ್ಲರೂ ಕೇಳುತ್ತಾರೆ. ಆಗ ನಿನ್ನ ಸ್ಮರಣೆಯು ಎಲ್ಲರಿಗೂ ಉಂಟಾಗಲಿ ಎಂದು ವರವನ್ನು ಕೊಟ್ಟಮೇಲೆ ಆ ರಾವಣನು ರಾಮನಲ್ಲಿ ಸೇರಿಹೋದನು.

ಎಂಬುದಾಗಿ ವಸಿಷ್ಠನು ಹೇಳಲು ಲವನು ಅವನಿಗೆ ನಮಸ್ಕರಿಸಿ ಮನೆಗೆ ಹೊರಟುಹೋದನು.

ಒಂದುಸಾರಿ ರಾಮನು ಎಲ್ಲರೊಡನೆಯೂ ಕುಳಿತಿರುವಾಗ ಅವರನ್ನು ಕುರಿತು ಇಂತೆಂದನು.

ನಾನು ಈ ರಾಮಾವತಾರದಲ್ಲಿ ಸೀತೆಯೊಡಗೂಡಿ ಸುಖವನ್ನು ಅನುಭವಿಸಿದಂತೆ ಮತ್ತೆ ಯಾವ ಅವತಾರದಲ್ಲಿಯೂ ಅನುಭವಿಸಲಿಲ್ಲ.

ನಾನು ಅನೇಕ ಕಾರ್ಯಗಳನ್ನು ಮಾಡಲು ಅನೇಕ ಅವತಾರಗಳನ್ನು ಮಾಡಿದೆನು. ಅವುಗಳನ್ನು ಲೆಕ್ಕಮಾಡುವುದಕ್ಕೇ ಆಗುವುದಿಲ್ಲ. ನಾನು ಧರಿಸಿದ ಅವತಾರಗಳಲ್ಲಿ ಏಳು ಅವತಾರಗಳು ಮಾತ್ರ ಉತ್ತಮವಾದುವು. ಈ ರಾಮಾವತಾರದ ಸುಖವು; ಅವುಗಳಲ್ಲಿ ಒಂದು ಶಂಖಾಸುರನೆಂಬ ಒಬ್ಬ ದೈತ್ಯನು ಸಮುದ್ರದಲ್ಲಿ ಹುಟ್ಟಿ ಕೃತಯುಗದಲ್ಲಿ ಬ್ರಹ್ಮಲೋಕದಿಂದ ವೇದಗಳನ್ನೆಲ್ಲಾ ಕದ್ದುಕೊಂಡು ಹೋದನು. ಅದಕ್ಕೋಸ್ಕರವಾಗಿ ನಾನು ಮತ್ಸ್ಯಾವತಾರವನ್ನು

ಮಾಡಿ ಆ ಶಂಖಾಸುರನನ್ನು ಕೊಂದು ವೇದಗಳನ್ನು ಬ್ರಹ್ಮನಿಗೆ ಕೊಟ್ಟು ಮತ್ತೆ ವಿಷ್ಣುವಾದೆನು. ಕೀಳುಜಾತಿಯದಾದ ಆ ಮೀನಿನ ಜನ್ಮದಲ್ಲಿ ಯಾವ ಸುಖವು ತಾನೆ ಇರವುದು! ಆದ್ದರಿಂದ ಆ ಅವತಾರದಲ್ಲಿ ನಾನು ಹೆಚ್ಚುಕಾಲದವರೆಗಿರಲಿಲ್ಲ.

ಸಮುದ್ರ ಮಥನಕಾಲದಲ್ಲಿ ಮಂದರಾಚಲವು ಆ ಸಮುದ್ರದ ನೀರಿನಲ್ಲಿ ಮುಳುಗುಹೋಗುತ್ತಿರುವುದನ್ನು ನೋಡಿ ಕೂರ್ಮಾವತಾರವನ್ನು ಮಾಡಿ ಆ ಪರ್ವತವನ್ನು ಬೆನ್ನಿನಮೇಲೆ ಧರಿಸಿಕೊಂಡೆನು. ಆ ಅವತಾರವೂ ನಿಂದಿತವಾದುದೆಂದು ತಿಳಿದು ಅದರಲ್ಲಿಯೂ ಬಹುಕಾಲವಿರಲಿಲ್ಲ. ಯಾವಾಗಲೂ ನೀರಿನಲ್ಲಿ ಓಡಾಡುತ್ತಿರುವ ಆ ಕೀಳುಜಾತಿಯಲ್ಲಿ ನೀರಿನಲ್ಲಿ ಯಾವ ಸುಖವು ತಾನೆ ಇರುವುದು!

ಹಿರಣ್ಯಾಕ್ಷನು ಈ ಭೂಮಿಯು ನನ್ನದು ಎಂದು ಹೇಳಿಕೊಂಡು ಸನ್ನಮೇಲಿನ ಹೊಟ್ಟೆಗಿಚ್ಚಿನಿಂದ ಆ ಭೂಮಿಯನ್ನೇ ಹೊತ್ತುಕೊಂಡು ಸಮುದ್ರದಲ್ಲಿ ಮುಳುಗಿದನು ಆಗ ನಾನು ಹಂದಿಯ ಅವತಾರವನ್ನು ಹೊಂದಿ ಆ ಹಿರಣ್ಯಾಕ್ಷನನ್ನು ಕೊಂದು ಕೋರೆದಾಡೆಯಲ್ಲಿ ಭೂಮಿಯನ್ನು ಹೊತ್ತುಕೊಂಡು ಬಂದೆನು. ಪಶುಯೋನಿಯು ಗರ್ಹಿತವಾದುದು. ಆದುದರಿಂದ ಆ ಅವತಾರದಲ್ಲಿಯೂ ನನಗೆ ಸುಖವು ಕಂಡುಬರಲಿಲ್ಲ.

ಭಕ್ತನಾದ ಪ್ರಹಲ್ಲಾದನ ಪ್ರಾರ್ಥನೆಯಂತೆ ನರಸಿಂಹಾವತಾರವನ್ನು ಮಾಡಿ ಕಂಬದಿಂದ ಹೊರಗೆ ಬಂದು ಹಿರಣ್ಯಕಶಿಪುವನ್ನು ಕೊಂದೆನು. ಆಗ ನನ್ನ ಕೋಪವು ಬಹಳವಾಗಿದ್ದಿತು. ನನ್ನೆದುರಿಗೆ ಪ್ರಹ್ಲಾದನು ಹೊರತಾಗಿ ಮತ್ತಾರೂ ನಿಲ್ಲಲಿಲ್ಲ. ಅಂತಹ ಕೋಪವಿರುವ ಅವತಾರದಲ್ಲಿ ಸುಖದ ಹೆಸರೇ ಇಲ್ಲವೆಂದು ಹೇಳಬೇಕಾಗಿಲ್ಲ.

ಬಲಿಚಕ್ರವರ್ತಿಯನ್ನು ಮೋಸಪಡಿಸಲು ವಾಮನಾವತಾರವನ್ನು ಮಾಡಿ ಋಷಿಯಾಗಿ ಬಲಿಯ ಬಳಿಗೆ ಹೋಗಿ ಮೂರು ಹೆಜ್ಜೆಗಳ ಸ್ಥಳವನ್ನು ಯಾಚಿಸಿ ಬಲಿಯನ್ನು ಪಾತಾಳಕ್ಕೆ ತಳ್ಳಿದೆನು. ಋಷಿಗಳಿಗೆ ಸೌಖ್ಯವು ಎಲ್ಲಿಂದ ಬರಬೇಕು? ಆದರಲ್ಲಿಯೂ ಕಾಡಿನಲ್ಲಿದ್ದರೆ ಸುಖಲೇಶವೂ ಇಲ್ಲವೇ ಇಲ್ಲ. ಆ ಅವತಾರದಲ್ಲಿ ನಾನು ವಾಮನನಾಗಿ ಕುರೂಪಿಯಾಗಿಯೂ ಬ್ರಹ್ಮಚಾರಿಯಾಗಿ ಕಾಡಿನಲ್ಲೂ ಇದ್ದುದರಿಂದ ಸೌಖ್ಯವೇ ಇರಲಿಲ್ಲ.

ಮತ್ತೆ ಪರಶುರಾಮಾವತಾರವನ್ನು ಮಾಡಿ ಬ್ರಾಹ್ಮಣನಾಗಿ ಹುಟ್ಟಿದೆನು. ಆಗ ಕ್ಷತ್ರಿಯರನ್ನು ಕೊಲ್ಲಲು ಇಪ್ಪತ್ತೊಂದುಬಾರಿ ಭೂಮಿಯನ್ನು ಸುತ್ತಿ ಭೂಮಿಯಲ್ಲಿಯೇ ಕ್ಷತ್ರಿಯರಿಲ್ಲದಂತೆ ಮಾಡಿದೆನು. ಮಹಾವೀರನಾದ ಕಾರ್ತವೀರ್ಯಾರ್ಜುನನನ್ನು ಕೊಂದೆನು. ಅದೂ ಕೂಡ ಕೋಪದಿಂದ ಕೂಡಿದ ಅವತಾರವಾಯಿತು. ಮುನಿಯಾಗಿ ಕಾಡಿನಲ್ಲಿ ಸಂಚರಿಸುತ್ತಿರುವವನಿಗೆ ಸುಖವೇ ಇರುವುದಿಲ್ಲ. ಆ ಅವತಾರದಲ್ಲಿ ಸುಖವಿಲ್ಲವೆಂಬುದನ್ನು ತಿಳಿದೇ ಬಹುವಾಗಿ ತಪಸ್ಸನ್ನು ಮಾಡಿದೆನು.

ಈ ರೀತಿಯಾಗಿ ನಾನು ಭೂಮಿಯಲ್ಲಿ ಆರು ಅವತಾರಗಳನ್ನು ಮಾಡಿದೆನು. ಇವುಗಳಲ್ಲೊಂದರಲ್ಲಿಯೂ ಕೂಡ ಸುಖದ ಮಾತೇ ನನಗಿರಲಿಲ್ಲ. ಮುಂದೆ ಬರುವ ದ್ವಾಪರಯುಗದಲ್ಲಿ ಕೃಷ್ಣರೂಪವನ್ನು ಹೊಂದುತ್ತೇನೆ. ಅದರಲ್ಲಿಯೂ ಕೂಡ ಈ ರಾಮಾವತಾರದಂತೆ ಸುಖವಿರುವುದಿಲ್ಲ. ಆದರಲ್ಲಿ ನಾನು ಹುಟ್ಟುವಾಗಲೇನೇ ತಾಯಿತಂದೆಗಳು ಕಾರಾಗೃಹದಲ್ಲಿರುವರು. ಬಾಲ್ಯದಲ್ಲಿ ತಾಯಿ ತಂದೆಗಳಿಲ್ಲದಿರುವವನಿಗೆ ಯಾವ ಸೌಖ್ಯವು ಬಂದೀತು ? ಅಲ್ಲದೆ ಪರನಾದ ನಂದನ ಮನೆಯಲ್ಲಿದ್ದು ಬೆಳೆಯುವೆನು. ಗೋಪನಾಗಿ ಗೋವುಗಳನ್ನು ಕಾಯುತ್ತ ಪರರ ಮನೆಯಲ್ಲಿದ್ದರೆ ಸುಖವೇ ಇಲ್ಲ. ಅಲ್ಲಿ ನಾನು ಅನುಭವಿಸುತ್ತಿರುವ ಗೋಪಿಕೆಯರನ್ನು ನಮ್ಮ ಅಣ್ಣನಾದ ಬಲರಾಮನು ಅನುಭವಿಸುವನು. ಅಲ್ಲದೆ ಕಾಲಯವನರ ಹೆದರಿಕೆಯು ನನಗುಂಟಾಗಿ ಅವರಿಂದ ಆಗಾಗ ಸೋಲುಂಟಾಗುವುದು. ಸೋಲುವಿಕೆಗಿಂತಲೂ ಅಪಮಾನವು ಯಾವುದಿರುವುದು ? ಅಲ್ಲದೆ ಅವತಾರದಲ್ಲಿ ಬಹುಜನ ಹೆಂಡಿರಿರುವುದರಿಂದ ಎಲ್ಲರಿಗೂ ಸುಖವುಂಟಾಗುವಂತೆ ತೋರಬೇಕು. ಒಬ್ಬರಿಗೂ ದುಃಖವುಂಟಾಗಬಾರದು ಎಂದು ಭಾವಿರ್ಧರಿಸಿ ರಾತ್ರಿಯಲ್ಲಿ ಗಂಟೆಯೊಂದಕ್ಕೆ ನಿದ್ದೆಯಿಲ್ಲದೆ ಐನೂರಮುವತ್ತಾರು ಮನೆಗಳನ್ನು ಸುತ್ತುವೆನು ಹೀಗಾದರೂ ಇಪ್ಪತ್ತೆಂಟು ಮನೆಗಳು ಬಿಟ್ಟುಹೋಗುವುವು. ರಾತ್ರಿಯು ಹೆಚ್ಚಿದಾಗ ಮಾತ್ರ ಸ್ವಲ್ಪನಿದ್ದೆಯನ್ನು ಮಾಡುತ್ತೇನೆ. ದುಃಖವನ್ನು ಅನುಭವಿಸಬೇಕೆನ್ನುವವನು ಬಹುಜನ ಹೆಂಡಿರನ್ನು ಮಾಡಿಕೊಳ್ಳಬೇಕು. ಅನಂತರ ಅದರ ಫಲವನ್ನು ಅನುಭವಿಸಬೇಕು. ಈ ರೀತಿಯಾಗಿ ದ್ವಾಪರಯುಗದ ಕೃಷ್ಣಜನ್ಮದಲ್ಲಿಯೂ ನನಗೆ ಸುಖವಿರುವುದಿಲ್ಲ. ಅನಂತರ ಕಲಿಯುಗದಲ್ಲಿ ಬುದ್ಧನ ಅವತಾರವನ್ನು ಮಾಡಿ ಯಜ್ಞಕರ್ಮವನ್ನು ಮಾಡುತ್ತಿರುವ ದೈತ್ಯರನ್ನು ಮೋಸಗೊಳಿಸುತ್ತೇನೆ ಆಗ ನಾನು ಮೌನದಿಂದಿರುತ್ತ ಕೂದಲುಗಳನ್ನು ಕೀಳಿಸಿಕೊಳ್ಳುತ್ತಾ ಮಲಿನನಾಗಿರುತ್ತೇನೆ. ಆಗ ಕೂದಲುಗಳನ್ನು ಕೀಳಿಸಿಕೊಳ್ಳುವುದರಿಂದಲೂ ಹೇನು ಶೀರುಗಳಿಂದಲೂ ಕೊಳೆಯಾಗಿರುವುದರಿಂದಲೂ ಬಹು ದುಃಖಕ್ಕೆ ಭಾಗಿಯಾಗುವೆನು.

ಅನಂತರ ಕಲ್ಕಿರೂಪವನ್ನು ಧರಿಸುತ್ತೇನೆ. ಆಗ ಕೈಯ್ಯಲ್ಲಿ ಕತ್ತಿಯನ್ನು ಹಿಡಿದು ದುಷ್ಟರನ್ನು ಸಂಹಾರಮಾಡುತ್ತೇನೆ. ಅದರಲ್ಲಿಯೂ ನನಗೆ ಸುಖ ವಿರುವುದಿಲ್ಲ. ಈ ರೀತಿಯಾಗಿ ಒಂಭತ್ತು ಅವತಾರಗಳಲ್ಲಿ ಒಂದರಲ್ಲಿಯೂ ನನಗೆ ಸುಖವೇ ಇಲ್ಲ. ಈ ರಾಮಾವತಾರದಲ್ಲಿ ಮಾತ್ರ ಯಥೇಚ್ಛವಾಗಿ ಸುಖವನ್ನು ಅನುಭವಿಸಿದೆನು. ಈ ರಾಮಾವತಾರಕ್ಕೆ ಸಮವಾದ ಅವತಾರವು ಭೂಮಿಯಲ್ಲಿ ಮತ್ತೊಂದಿಲ್ಲ. ಈ ಅವತಾರದಲ್ಲಿ ನಾನು ಸಪ್ತದ್ವೀಪಗಳಿಗೂ ರಾಜಾಧಿರಾಜನಾಗಿರುವೆನು. ಇಂತಹ ಉತ್ತಮಳಾದ ಸೀತೆಯು ಹೆಂಡತಿ ಯಾಗಿರುವಳು. ಕಾಮಧೇನುವೇ ಮುಂತಾದ ಏಳುರತ್ನಗಳು ನನ್ನಲ್ಲಿವೆ. ಲೋಕೈಕವೀರರಾದ ಮಕ್ಕಳೂ ತಮ್ಮಂದಿರೂ ಸಹಾಯಕರಾಗಿರುವರು. ವೇದಸ್ವರೂಪಿಯಾದ ಈ ವಸಿಷ್ಠನೇ ಗುರುವಾಗಿರುವನು. ಆರ್ಯಾವರ್ತದಲ್ಲಿ ಅದರಲ್ಲಿಯೂ ಈ ಪುಣ್ಯಕರವಾದ ಅಯೋಧ್ಯೆಯಲ್ಲಿ ರಾಜನಾಗಿರುವೆನು. ನನಗೆ ಇಲ್ಲಿ ಶತ್ರುಗಳ ಹೆಸರೇ ಇಲ್ಲ. ನನ್ನ ಅಜ್ಞೆಯು ಮೂರುಲೋಕಗಳಲ್ಲಿಯೂ ತಡೆಯಿಲ್ಲದೆ ನಡೆಯುತ್ತಿರುವುದು. ಇಂದ್ರನಿಗಿರುವಂತೆ ನಾಲ್ಕು ದಂತಗಳುಳ್ಳ ಆನೆಯು ನನ್ನ ಬಳಿಯಲ್ಲಿರುವುದು. ಬಂಧುಗಳೆಲ್ಲರೂ ಉತ್ತಮೋತ್ತಮರು. ಹನ್ನೊಂದುಸಾವಿರ ವರ್ಷಗಳವರೆಗೆ ಆಯುಸ್ಸು ನನಗಿರುವುದು.

ನಾನು ಕಾಡಿಗೆ ಹೋದುದು ದೋಷವಾಗಿರಬಹುದೆನ್ನಬಹುದು ಅದು ದೋಷವಲ್ಲ. ನಾನು ಆಗಲೇ ನನಗೆ ಪ್ರತಿಯಾಗಿದ್ದವರನ್ನು ಕೊಂದು ರಾಜ್ಯವನ್ನು ಹೊಂದಬಹುದಾಗಿದ್ದಿತು. ಅಷ್ಟು ಶಕ್ತಿಯೂ ಸಹಾಯವೂ ನನಗಿದ್ದುವು. ಆದರೆ ಪಿತೃವಾಕ್ಯಪರಿಪಾಲನೆಯು ಜನರಿಗೆ ಅವಶ್ಯಕವೆಂದು ತೋರಿಸಲು ಹಾಗೆ ಮಾಡಿದೆನು. ಆ ಕಾಡಿನಲ್ಲಿ ಸೀತೆಯನ್ನು ನಾನಾಗಿಯೇ ತ್ಯಜಿಸಿ ಹೆಂಗಸರಲ್ಲಿ ಜನರು ಕಾಮಾಸಕ್ತರಾಗಿರಕೂಡದು ಎಂಬುದನ್ನು ಬೋಧಿಸಿದೆನು. ಯಾರು ಯಷ್ಟೇ ಶುದ್ಧರಾಗಿದ್ದರೂ ಜನಗಳನ್ನು ಮೆಚ್ಚಿಸಲು ಪ್ರಯತ್ನಿಸ ಬೇಕೆಂದು ತೋರಿಸಲು ಸೀತೆಯನ್ನು ಶುದ್ಧಳೆಂದು ತೋರಿಸಿ ಪರಿಗ್ರಹಿಸಿದೆನು.

ಇದೆಲ್ಲವನ್ನೂ ನಿಮ್ಮೆದುರಿಗೆ ಲೋಕವು ತಿಳಿಯಲೆಂದು ಹೇಳಿದ್ದೇನೆ. ಉಪಾಸಕರಿಗೆ ನನ್ನ ಎಲ್ಲಾ ಅವತಾರಗಳೂ ಸಮವಾದರೂ ಈ ರಾಮಾವತಾರವು ಬಹು ಗುಣವುಳ್ಳುದು. ನನ್ನ ಅವತಾರಗಳು ಸೇವನೆಯಿಂದ ಮಂಗಳವನ್ನು ಕೊಡುತ್ತವೆ. ನನ್ನ ಚರಿತ್ರೆಯನ್ನು ಕೇಳುವುದರಿಂದ ಪಾಪಗಳು ಹೋಗುತ್ತವೆ. ಈ ರಾಮಾವತಾರಕ್ಕೆ ಭಕ್ತರಾಗಿರುವವರೇ ನನಗೆ ಬಹು ಪ್ರಿಯರು. ಈ ಅವತಾರದಲ್ಲಿ ಯಾರಾದರೂ ನನ್ನಲ್ಲಿ ದೋಷವನ್ನು ಹುಡುಕಿದರೆ ಅವರು ನನಗೆ ದ್ವೇಷಿಗಳಾಗಿ ನರಕದಲ್ಲಿ ಬೀಳುವರು ಇಂತೆಂದು ಹೇಳಿ ಎಲ್ಲರನ್ನು ಕಳುಹಿಸಿದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ ಉತ್ತರಾರ್ಧೇ ಏಕವಿಂಶಸ್ಸರ್ಗಃ

॥ ಶ್ರೀರಾಮದಾಸ ಉವಾಚ ॥

ಏಕದಾ ಜಾನಕೀಂ ದ್ರಷ್ಟುಂ ಸಪ್ತದ್ವೀಪಾಂತರಸ್ತ್ರಿಯಃ ।
ಮುನೀನಾಂ ಪಾರ್ಥಿವಾನಾಂ ಚ ಸುಹೃದಾಂ ವ್ಯವಸಾಯಿನಾಂ ॥ ೧ ॥

ಸಾಮಾನ್ಯಕ್ಷತ್ರಿಯಾಣಾಂ ಚ ವೈಶ್ಯಾನಾಂ ಚ ಸಹಸ್ರಶಃ ।
ಚೈತ್ರಸ್ನಾನಮಿಷೇಣೈವ ಪ್ರಯಯುರ್ಯಾನಸಂಸ್ಥಿತಾಃ ॥ ೨ ॥

ದೃಷ್ಟ್ವಾ ಸಮಾಗತಾಸ್ತಾಶ್ಚ ಜಾನಕೀ ಗಜಗಾಮಿನೀ ।
ಪ್ರತ್ಯುದ್ಗಮ್ಯಾನಯಾಮಾಸ ಸ್ತ್ರೀಶಾಲಾಮತಿಸಂಭ್ರಮಾತ್ ॥ ೩ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ಇಪ್ಪತ್ತೊಂದನೆಯ ಸರ್ಗವು

೧-೨. ಶ್ರೀರಾಮದಾಸನು ಹೇಳಿದನು-ಒಂದುಸಾರಿ ಸಪ್ತದ್ವೀಪಗಳಲ್ಲಿಯೂ ಇರುವ ಮುನಿಗಳ, ರಾಜರ, ಸ್ನೇಹಿತರ, ರೈತರ, ಸಾಮಾನ್ಯ ಕ್ಷತ್ರಿಯರ, ವೈಶ್ಯರ, ಹೆಂಗಸರು ಚೈತ್ರಮಾಸದ ಸ್ನಾನವನ್ನು ನೆವಮಾಡಿಕೊಂಡು ಯಾನದಲ್ಲಿ ಕುಳಿತು ಕೊಂಡು ಸೀತೆಯನ್ನು ನೋಡಲು ಬಂದರು.

೩. ಗಜಗಾಮಿನಿಯಾದ ಜಾನಕಿಯು ತನ್ನನ್ನು ನೋಡಲು ಬಂದ ಆ ಹೆಂಗಸರನ್ನು ಎದುರುಗೊಂಡು ಗೌರವಿಸಿ ಸ್ತ್ರೀ ಶಾಲೆಗೆ ಕರೆದುಕೊಂಡು ಬಂದಳು.

ಪೂಜಯಾಮಾಸ ತಾಸ್ಸರ್ವಾ ನಾನಾಲಂಕಾರಭೂಷಣೈಃ ।
ತಾಸ್ಸರ್ವಾಃ ಪೂಜಯಾಮಾಸುಸ್ಸೀತಾಂ ಸಿಂಹಾಸನಸ್ಥಿತಾಂ ॥ ೪ ॥

ದಿವ್ಯಾಲಂಕಾರವಸ್ತ್ರಾದ್ಯೈರ್ನಾನಾದೇಶೋದ್ಭವೈರ್ವರೈಃ ।
ಪರಿವಾರ್ಯ ತತಸ್ಸೀತಾಂ ತಸ್ಥುಸ್ಸರ್ವಾಸ್ಸ್ತ್ರಿಯಶ್ಚ ತಾಃ ॥ ೫ ॥

ಶ್ರುತ್ವಾ ಸೀತಾಮುಖಾದ್ರಾಮಾಚರಿತ್ರಾಣಿ ಸಹಸ್ರಶಃ ।
ತಾಸ್ತುಷ್ಟಾಃ ಶ್ಲೋಘ್ಯೇತುಮುದ್ಯುಕ್ತಾಸ್ತತ್ಪಾಣಿಗ್ರಹಣಂ ಶುಭಂ ॥ ೬ ॥

ಸ್ಮಿತಾಸ್ಯಾಸ್ತಾಃ ಸ್ತ್ರಿಯಸ್ಸರ್ವಾಸ್ತದಾ ಪ್ರೋಚುರ್ವಿದೇಹಜಾಂ ।
ತ್ವತ್ಪಾಣಿಗ್ರಹಣೋತ್ಸಾಹಂ ಶ್ರೋತುಂ ವಾಂಛಾಮಹೇ ವಯಂ ॥ ೭ ॥

ತತ್ಸರ್ವಂ ವಿಸ್ತರೇಣಾದ್ಯ ವಕ್ತುಮರ್ಹಸಿ ಜಾನಕಿ ।
ಇತಿ ತಾಸಾಂ ವಚಃ ಶ್ರುತ್ವಾ ಲಜ್ಜಯಾ ಜಾನಕೀ ತದಾ ॥ ೮ ॥

೪-೫. ಅಲ್ಲಿ ಅನೇಕ ಅಲಂಕಾರಗಳನ್ನು ಕೊಟ್ಟು ಅವರೆಲ್ಲರನ್ನೂ ಪೂಜಿಸಿದಳು. ಆ ಹೆಂಗಸರೂ ಕೂಡ ಸಿಂಹಾಸನದಲ್ಲಿ ಕುಳಿತಿರುವ ಸೀತೆಯನ್ನು ಕಪ್ಪಕಾಣಿಕೆಗಳನ್ನು ಕೊಟ್ಟು ಪೂಜಿಸಿದರು. ಆ ಕಪ್ಪಕಾಣಿಕೆಗಳು ಅನೇಕ ದೇಶದವರಿಂದ ತಂದಿದ್ದುದರಿಂದ ಅನೇಕ ಬಗೆಯಾಗಿ ಇದ್ದುವು. ಅನಂತರ ಅವರೆಲ್ಲರೂ ಸೀತೆಯ ಸುತ್ತಲೂ ಸುತ್ತುವರಿದುಕೊಂಡು ಕುಳಿತುಕೊಂಡರು.

೬. ಸೀತೆಯು ಅವರೆಲ್ಲರಿಗೂ ರಾಮನ ಆಶ್ಚರ್ಯಕರವಾದ ಚರಿತ್ರೆಗಳನ್ನು ಹೇಳಿದಳು. ಅದೆಲ್ಲವನ್ನೂ ಅವರು ಕೇಳಿ ಆ ಸೀತೆಯು ರಾಮನನ್ನು ಮದುವೆಯಾದ ವಿಷಯವನ್ನು ಬಹುವಾಗಿ ಸಂತೋಷದಿಂದ ಹೊಗಳಿದರು.

೭-೮. ಅವರೆಲ್ಲರೂ ನಗುತ್ತ ಜಾನಕಿಯನ್ನು ಕುರಿತು ಇಂತೆಂದು ಕೇಳಿದರು. ನಿನ್ನ ಪಾಣಿಗ್ರಹಣವು ಹೇಗೆ ನಡೆಯಿತೆಂಬುದನ್ನು ಕೇಳಬೇಕೆಂದು ನಮಗೆಲ್ಲರಿಗೂ ಅಪೇಕ್ಷೆಯಾಗಿದೆ, ಅದೆಲ್ಲವನ್ನೂ ಈಗ ವಿಸ್ತಾರವಾಗಿ ನೀನು ಹೇಳಬೇಕು ಎನ್ನಲು ಅವರ ಈ ಮಾತನ್ನು ಕೇಳಿ ಜಾನಕಿಗೆ ಬಹುವಾಗಿ ಲಜ್ಜೆಯಾಯಿತು.

ಸ್ವಾಂ ಸಖೀಂ ಚೋದಯಾಮಾಸ ತುಲಸೀಂ ರುಕ್ಮಭೂಷಿತಾಂ ।

। ತುಲಸ್ಯುವಾಚ ॥

ಶೃಣುಧ್ವಂ ಸಕಲಾ ನಾರ್ಯಃ ಪಾಣಿಗ್ರಹಣಮುತ್ತಮಂ ॥ ೯ ॥

ಜಾನಕ್ಯಾಃ ಕಥಯಾಮ್ಯದ್ಯ ಮಹಾಮಂಗಳದಾಯಕಂ ।
ವಸ್ತೋಷಾರ್ಥಂ ಹಿ ಸಂಕ್ಷೇಪಾಚ್ಛ್ರವಣಾತ್ಪುಣ್ಯವರ್ಧನಂ ॥ ೧೦ ॥

ಸಾಕೇತಾದ್ರಘುನಂದನೇನ ಸ ಮುನಿರ್ಭ್ರಾತ್ರಾ ಯುತೇನಾಶ್ರಮಂ ।
ಸ್ವಂ ಗತ್ವಾ ವಿನಿಹತ್ಯ ರಾಕ್ಷಸಬಲಂ ತೇನೈವ ಯಜ್ಞಂ ನಿಜಂ ।
ಸಂಪಾದ್ಯಾಶು ರಥಸ್ಥಿತಶ್ಚ ಮಿಥಿಲಾಮಾರ್ಗೇ ಹರೇರಂಘ್ರಿಣಃ ।
ಸಂಸ್ಪರ್ಶಾದ್ಗತಕಲ್ಮಷಾಂ ಸಮಕರೋದ್ಭಾರ್ಯಾಂ ಮುನೇರ್ಗಾಧಿಜಃ ॥

---

೯. ಆಗ ಸರ್ವಾಲಂಕಾರಭೂಷಿತೆಯಾದ ತನ್ನ ಸಖಿಯಾದ ತುಲಸಿಯನ್ನು ಕುರಿತು ನೀನು ಇವರು ಕೇಳಿದದಕ್ಕೆ ಉತ್ತರವನ್ನು ಹೇಳು ಎನ್ನಲು ಅವಳು ಅವರಿಗೆ ಇಂತೆಂದು ಹೇಳಿದಳು.

ತುಳಸಿಯು ಹೇಳಿದಳು—ಸೀತೆಯ ಉತ್ತಮವಾದ ಪಾಣಿಗ್ರಹಣದ ವಿಷಯವನ್ನು ಹೇಳುತ್ತೇನೆ. ನೀವೆಲ್ಲರೂ ಮನಸ್ಸಿಟ್ಟು ಕೇಳಿರಿ.

೧೦. ಆ ಜಾನಕಿಯ ಪಾಣಿಗ್ರಹಣದ ವಿಷಯವು ಬಹು ಮಂಗಳಕರವಾದುದು. ಅದನ್ನು ಕೇಳಿದರೆ ಪುಣ್ಯವು ಹೆಚ್ಚುತ್ತದೆ. ಅದನ್ನು ನಿಮ್ಮ ಸಂತೋಷಕ್ಕೋಸ್ಕರ ಸಂಕ್ಷೇಪವಾಗಿ ಹೇಳುತ್ತೇನೆ.

೧೧. ವಿಶ್ವಾಮಿತ್ರನು ರಾಮಲಕ್ಷ್ಮಣರನ್ನು ಜೊತೆಯಲ್ಲಿ ಕರೆದುಕೊಂಡು ತನ್ನ ಆಶ್ರಮಕ್ಕೆ ಹೋದನು. ಅಲ್ಲಿ ರಾಕ್ಷಸರನ್ನು ರಾಮನ ಕೈಯ್ಯಿಂದ ಕೊಲ್ಲಿಸಿ ಅವನ ಸಹಾಯದಿಂದ ತಾನು ಯಜ್ಞವನ್ನು ನೆರವೇರಿಸಿಕೊಂಡು ರಥದಲ್ಲಿ ಕುಳಿತು ಮಿಥಿಲೆಗೆ ಹೋಗುತ್ತಾ ದಾರಿಯಲ್ಲಿ ಆ ರಾಮನ ಪಾದಧೂಳಿನಿಂದ ಗೌತಮನ ಹೆಂಡತಿಯಾದ ಅಹಲ್ಯೆಯ ಪಾಪವನ್ನು ನಾಶಮಾಡಿ ಆಕೆಯನ್ನು ಸರಿಯಾದ ಸ್ಥಿತಿಗೆ ತಂದನು.

ಗತ್ವಾ ಗಾಧಿಜಸಂ ಯುತಶ್ಚ ಮಿಥಿಲಾಂ ಭ್ರಾತ್ರಾ ಸಭಾಸಂಸ್ಥಿತಃ ।
ಚಾಪಾಧಃ ಪತಿತಂ ನಿರೀಕ್ಷ್ಯ ಚ ರಿಪುಂ ಸ್ವೀಯಂ ಮುನೇರಾಜ್ಞಯಾ ।
ತನ್ನತ್ವಾ ಗಿರಿಜೇಶ್ವರಸ್ಯ ಚ ಧನುಃ ಕೃತ್ವಾ ತ್ರಿಖಂಡಂ ಕ್ಷಣಾತ್ಸೀ ।
ತಾಹಸ್ತವಿಸರ್ಜಿತಾಂ ನಿಜಗಳೇ ಮಾಲಾಂ ದಧೌ ರಾಘವಃ ॥ ೧೨ ॥

ಬಂಧೂನಾಂ ಚ ನಿಜಂ ವಿಧಾಯ ಮಿಥಿಲಾಪುರ್ಯಾಂ ವಿವಾಹಾನ್ ಶುಭಾನ್
ಪಿತೃಭ್ಯಾಂ ಸಹ ಭಾರ್ಯಯಾ ರಘುಪತೀ ರಾಜ್ಞಾತಿಸಂಪೂಜಿತಃ ।
ತ್ಯಕ್ತ್ವಾತ್ವತಾಂ ಮಿಥಿಲಾಂ ಯಯೌ ನಿಜಪುರೀಂ ಮಾರ್ಗೇ ಕ್ರುಧಾಶಿಷ್ಟತೋ
ದುರ್ದರ್ಪಂ ಜಮದಗ್ನಿಜಸ್ಯ ಧನುಷಾ ಸೋಽಪಾಹರಲ್ಲೀಲಯಾ ॥ ೧೩ ॥

ಏವಂ ನಾರ್ಯಶ್ಚ ಸೀತಾಯಾಃ ವಿವಾಹಃ ಕಥಿತೋ ಮಯಾ ।
ಯುಷ್ಮಾಭಿಃ ಕೌತುಕಾತ್ಪೃಷ್ಟೋ ಯಸ್ಸರ್ವಮಂಗಳಪ್ರದಃ ॥ ೧೪ ॥

---

೧೨. ಅನಂತರ ಆ ವಿಶ್ವಾಮಿತ್ರನು ರಾಮಲಕ್ಷ್ಮಣರನ್ನು ಮಿಥಿಲೆಗೆ ಕರೆದುಕೊಂಡು ಹೋದನು. ಅಲ್ಲಿ ಆ ಜನಕನ ಸಭೆಯಲ್ಲಿ ರಾಮಲಕ್ಷ್ಮಣರು ಕುಳಿತರು. ಜನಕನು ಪಣವಾಗಿಟ್ಟಿದ್ದ ಧನುಸ್ಸನ್ನು ಎತ್ತಲು ಹೋಗಿ ರಾವಣನು ಆ ಧನುಸ್ಸನ್ನು ತನ್ನ ತಲೆಯಮೇಲೆ ಎತ್ತಿ ಹಾಕಿಕೊಂಡು ಬಿದ್ದಿರುವುದನ್ನು ನೋಡಿದನು. ಅನಂತರ ವಿಶ್ವಾಮಿತ್ರನ ಅಪ್ಪಣೆಯಿಂದ ಆ ಶಿವನ ಧನುಸ್ಸನ್ನು ನಮಸ್ಕರಿಸಿ ಎತ್ತಿ ಅದನ್ನು ಮೂರುತುಂಡುಗಳನ್ನಾಗಿ ಮಾಡಿ ಅನಂತರ ಸೀತೆಯು ಹಾಕಿದ ಮಾಲೆಯನ್ನು ಆ ರಾಮನು ಸ್ವೀಕರಿಸಿದನು.

೧೩. ಆ ಶ್ರೀರಾಮನು ತನ್ನ ತಮ್ಮಂದಿರಿಗೂ ಆ ಮಿಥಿಲೆಯಲ್ಲಿಯೇ ಮದುವೆಯನ್ನು ಮಾಡಿಸಿ ಅನಂತರ ತಾವೂ, ತಮ್ಮ ತಾಯಿತಂದೆಗಳೂ ಆ ಬೀಗರಿಂದ ಗೌರವವನ್ನು ಹೊಂದಿ ಮಿಥಿಲೆಯನ್ನು ಬಿಟ್ಟು ತನ್ನ ರಾಜಧಾನಿಗೆ ಬರುತ್ತಿರಲು ದಾರಿಯಲ್ಲಿ ಕೋಪದಿಂದ ಎದುರಿಗೆ ಬಂದ ಪರಶುರಾಮನ ದರ್ಪವನ್ನೂ ಲೀಲೆಯಿಂದಲೇ ಅಡಗಿಸಿದನು.

೧೪. ಎಲೈ ನಾರಿಯರಿರಾ ! ಈ ರೀತಿಯಾಗಿ ರಾಮನ ಮತ್ತು ಸೀತೆಯ ವಿವಾಹವನ್ನು ಹೇಳಿದ್ದೇನೆ. ಇದನ್ನು ನೀವು ಆಸೆಯಿಂದ ಕೇಳಿದ್ದೀರಿ. ಇದು ಬಹು ಮಂಗಳವನ್ನುಂಟುಮಾಡತಕ್ಕದ್ದಾಗಿರುತ್ತದೆ.

॥ ಶ್ರೀರಾಮದಾಸ ಉವಾಚ ॥

ಏವಂ ಸ್ತ್ರೀಯಶ್ಚ ತಾಃ ಶ್ರುತ್ವಾ ಪರಯಾಂ ಮುದಮಾಪ್ನುಯುಃ ।
ತತಸ್ತಾಃ ಪೂಜಯಾಮಾಸುಃ ಪುನಸ್ಸಿತಾಂ ಮುದಾನ್ವಿತಾಃ ॥ ೧೫ ॥

ಸೀತಯಾ ಪೂಜಿತಾಸ್ಸರ್ವಾಸ್ತಾಂ ನತ್ವಾ ಮಂತ್ರ್ಯ ಜಾನಕೀಂ ।
ಚೈತ್ರಸ್ನಾನಂ ಸಮಾಪ್ಯಾಥ ಜಗ್ಮುಃ ಸ್ವಂ ಸ್ವಂ ಸ್ಥಲಂ ಪ್ರತಿ ॥ ೧೬ ॥

ಅಥೈಕದಾ ಗುರಾರೋಸ್ಯಾದ್ರಾಮಾಗ್ರೇ ಸಂಸ್ಥಿತೋ ಲವಃ ।
ಶೃಣ್ವನ್ಪುರಾಣಂ ಪಪ್ರಚ್ಛ ಶ್ರೋತುಂ ಸರ್ವಾನ್ ಜನಾನ್ ಗುರುಂ ॥ ೧೭ ॥

ಗುರೋ ತೇ ಪ್ರಷ್ಟುಮಿಚ್ಛಾಮಿ ತತ್ತ್ವಂ ವದ ಮುನೀಶ್ವರ ।
ಪುಸ್ತಕೇಷು ಚ ಸರ್ವತ್ರ ಪತ್ರೇ ಪತ್ರೇ ಪೃಥಕ್ ಪೃಥಕ್ ॥ ೧೮ ॥

ಏಕತ್ರ ಲಿಖ್ಯತೇ ಶ್ರೀತಿ ರಾಮೇತ್ಯೇಕತ್ರ ಲಿಖ್ಯತೇ ।
ಕಿಮರ್ಥಂ ಮಾನವೈಸ್ತಚ್ಚ ತತ್ಸರ್ವಂ ಕಥಯಸ್ವ ಮಾಂ ॥ ೧೯ ॥

---

೧೫. ಶ್ರೀ ರಾಮದಾಸನು ಹೇಳಿದನು—ಆ ಹೆಂಗಸರು ಈ ಮದುವೆಯ ವಿಷಯವನ್ನು ಕೇಳಿ ಬಹು ಸಂತೋಷಗೊಂಡರು. ಅನಂತರ ಮತ್ತೆ ಮತ್ತೆಯೂ ಕೂಡ ಅವರು ಸಂತೋಷದಿಂದ ಸೀತೆಯನ್ನು ಗೌರವಿಸಿದರು.

೧೬. ಅನಂತರ ಅವರೆಲ್ಲರೂ ಸೀತೆಯಿಂದ ಗೌರವವನ್ನು ಹೊಂದಿ ಅವಳಿಗೆ ನಮಸ್ಕರಿಸಿ ಹೊರಟು ಚೈತ್ರ ಸ್ನಾನವನ್ನು ಮುಗಿಸಿಕೊಂಡು ಅವರವರ ಸ್ಥಳಗಳಿಗೆ ಹೊರಟುಹೋದರು.

೧೭. ಒಂದು ಸಾರಿ ಗುರುವು ಪುರಾಣವನ್ನು ಹೇಳುತ್ತಿರಲು ರಾಮನ ಮುಂದೆ ಕುಳಿತು ಲವನು ಅದನ್ನು ಕೇಳುತ್ತಿದ್ದು ಜನಗಳಿಗೆ ಎಲ್ಲವೂ ತಿಳಿಯಲೆಂದು ಆ ಗುರುವನ್ನು ಕುರಿತು ಇಂತೆಂದು ಕೇಳಿದನು.

೧೮-೧೯. ಎಲೈ ಮುನೀಶ್ವರನಾದ ಗುರುವೇ! ನಿನ್ನಲ್ಲಿ ಒಂದು ವಿಷಯವನ್ನು ಕೇಳಬೇಕೆಂದಿದ್ದೇನೆ ಅದನ್ನು ದಯವಿಟ್ಟು ಹೇಳು. ಪುಸ್ತಕಗಳಲ್ಲಿಯೂ ಎಲ್ಲಾ ಪತ್ರಗಳಲ್ಲಿಯೂ ಕೂಡ ಬೇರೆಬೇರೆಯಾಗಿ ಶ್ರೀ ಎಂದು ಒಂದು ಕಡೆಯಲ್ಲಿಯೂ ರಾಮ ಎಂದು ಮತ್ತೊಂದು ಕಡೆಯಲ್ಲಿಯೂ ಬರೆದಿರುತ್ತದೆ. ಮನುಷ್ಯರು ಹಾಗೇಕೆ ಬರೆಯುವರು? ಎಂಬುದನ್ನು ಹೇಳು.

ಇತಿ ತದ್ವಚನಂ ಶ್ರುತ್ವಾ ಗುರುಸ್ತಂ ವಾಕ್ಯಮಬ್ರವೀತ್ ।
॥ ವಸಿಷ್ಠ ಉವಾಚ ॥
ಸಮ್ಯಕ್ ಪೃಷ್ಟಂ ತ್ವಯಾ ವತ್ಸ ಲೋಕಸಂದೇಹಹೃತ್ಪರಂ ॥ ೨೦ ॥

ಶ್ರೀರಾಮಚರಿತಂ ಪೂರ್ವಂ ವ್ಯಾಸೇನ ಮುನಿನಾ ಪೃಥಕ್ ।
ಅಷ್ಟಾದಶಪುರಾಣಾನಿ ತಥೋಪಪುರಾಣಾನಿ ಚ ॥ ೨೧ ॥

ಕೃತಾನ್ಯನ್ಯೈಶ್ಚ ಮುನಿಭಿಃ ಷಟ್‌ಶಾಸ್ತ್ರಾದೀನ್ಯನೇಕಶಃ ।
ಶ್ರೀರಾಮಚರಿತಾದೇವ ಶ್ಲೋಕಮಾತ್ರಮಪೀಹ ಯತ್ ॥ ೨೨ ॥

ಸರ್ವಮಸ್ತೀತಿ ತದ್ಬೋಧ್ಧುಮಾದಾವೇಕತ್ರ ಶ್ರೀತಿ ಚ ।
ವಿಲಿಖ್ಯೈಕತ್ರ ರಾಮೇತಿ ತನ್ಮಧ್ಯೇ ಪರಿಲಿಖ್ಯತೇ ॥ ೨೩ ॥

ಅನಯಾ ಸಂಜ್ಞಯಾ ಸರ್ವೇ ಜ್ಞಾಸ್ಯಂತ್ವಗ್ರೇ ಜನಾ ಭುವಿ ।
ಶ್ರೀರಾಮಮಧ್ಯೇ ಲಿಖಿತಂ ಶ್ರೀರಾಮಚರಿತಾದಿದಂ ॥ ೨೪ ॥

---

೨೦. ಅವನು ಹೀಗೆ ಹೇಳಿದುದನ್ನು ಕೇಳಿ ಗುರುವು ಅವನಿಗೆ ಇಂತೆಂದು ಹೇಳಿದನು. ವಸಿಷ್ಠನು ಹೇಳಿದನು—ಎಲೈ ವತ್ಸನೇ! ನೀನು ಕೇಳಿದುದು ಚೆನ್ನಾಗಿದೆ. ಅದು ಲೋಕದವರ ಸಂದೇಹವನ್ನು ನಾಶಮಾಡತಕ್ಕದ್ದಾಗಿದೆ

೨೧-೨೨-೨೩. ಪೂರ್ವದಲ್ಲಿ ವ್ಯಾಸನು ಶ್ರೀರಾಮಚರಿತ್ರೆಯನ್ನೂ ಹದಿನೆಂಟು ಪುರಾಣಗಳನ್ನೂ ಅಂತೆಯೇ ಉಪಪುರಾಣಗಳನ್ನೂ ರಚಿಸಿದನು ಇದರಂತೆಯೇ ಬೇರೆಯವರು ಋಷಿಗಳೂ ಕೂಡ ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ ಜೋತಿಷ ಕಲ್ಪಗಳೆಂಬ ಆರು ಶಾಸ್ತ್ರಗಳನ್ನು ರಚಿಸಿದರು. ಇವೆಲ್ಲವೂ ಕೂಡ ಶ್ರೀರಾಮಚರಿತ್ರೆಯ ಶ್ಲೋಕದಲ್ಲಿಯೇ ಇರುವುದೆಂಬುದನ್ನು ತಿಳಿಸಲು ಆದಿಯಲ್ಲಿ ಶ್ರೀ ಎಂದು ಬರೆಯುತ್ತಾರೆ. ಮಧ್ಯದಲ್ಲಿ ಗ್ರಂಥವನ್ನು ಬರೆದು ಅನಂತರ ರಾಮ ಎಂದು ಬರೆಯುತ್ತಾರೆ.

೨೪-೨೫. ಈ ರೀತಿಯಾದ ಸಂಜ್ಞೆಯಿಂದ ಎಲ್ಲಾ ಶಾಸ್ತ್ರಗಳೂ ಶ್ರೀರಾಮ ಚರಿತ್ರೆಯಲ್ಲಿ ಅಡಕವಾಗಿವೆ ಎಂಬುದಾಗಿ ಲೋಕದಲ್ಲಿ ಜನಗಳು ತಿಳಿಯಲಿ ಎಂಬುದೇ ಅವರ ಅಭಿಪ್ರಾಯವು. ಶ್ರೀರಾಮನ ಚರಿತ್ರೆಯ ಮಧ್ಯದಲ್ಲಿ ಬರೆದಿದ್ದೇನೆ

ಕೃತಮಸ್ತಿ ಪೃಥಗ್ಭಿನ್ನಂ ಪುರಾ ವ್ಯಾಸಾದಿಭಿಸ್ತ್ವಿತಿ ।
ಏತಸ್ಮಿನ್ನಂತರೇ ಬಾಲ ಸೂಚನಾರ್ಥಂ ವಿಲಿಖ್ಯತೇ ॥ ೨೫ ॥

ಶ್ರೀರಾಮೇತಿ ಪೃಥಕ್ಪತ್ರೇ ಸರ್ವತ್ರ ಜಗತೀತಲೇ ।
ಅನ್ಯತ್ತೇ ಕಾರಣಂ ವಚ್ಮಿ ತಚ್ಛೃಣುಷ್ವ ಶಿಶೋ ಲವ ॥ ೨೬ ॥

ಅಶುದ್ಧಂ ಲಿಖಿತಂ ಯಚ್ಚಾಜ್ಞಾನೇನ ಭ್ರಾಂತಿತೋಽಪಿ ಹಿ ।
ಪತ್ರಂ ತಚ್ಚಾತಿಶುದ್ಧಂ ಹಿ ಭವತ್ವಿತಿ ಮನೀಷಯಾ ॥ ೨೭ ॥

ಶ್ರೀರಾಮೇತಿ ಚ ಸರ್ವತ್ರ ಪತ್ರೇ ಪತ್ರೇ ವಿಲಿಖ್ಯತೇ ।
ಯದಂಕಿತಂ ಶ್ರೀರಾಮೇತಿ ನಾಮ್ನಾ ಪತ್ರಂ ತು ಲೇಖಕೈಃ ॥ ೨೮ ॥

ಜ್ಞೇಯಂ ತಚ್ಚಾಪಿ ಶುದ್ಧಂ ಹಿ ಗತದೋಷಸ್ತು ಲೇಖಕಃ ।
ಭವತ್ಯತ್ರ ಜಗತ್ಯಾಂ ಹಿ ಸತ್ಯಂ ಲವ ವದಾಮ್ಯಹಂ ॥ ೨೯ ॥

ಎಂದು ಅದರ ಅರ್ಥವು. ಇದನ್ನು ಆ ಚರಿತ್ರೆಯಿಂದಲೇ ವ್ಯಾಸಾದಿಗಳು ತೆಗೆದು ಬರೆದಿರುವರು ಎಂದು ಬಾಲಕರು ಅದನ್ನು ತಿಳಿದುಕೊಳ್ಳಲು ಶ್ರೀರಾಮ ಎಂಬ ಅವೆರಡರ ಮಧ್ಯದಲ್ಲಿ ಬರೆದಿರುತ್ತಾರೆ.

೨೬–೨೭. ಶ್ರೀರಾಮ ಎಂಬುದಾಗಿ ಲೋಕದ ಜನರು ಬೇರೆಯಾಗಿ ಒಂದೇ ಕಡೆ ಕಾಗದದಲ್ಲಿ ಬರೆದಿರುವುದಕ್ಕೆ ಮತ್ತೊಂದು ಕಾರಣವನ್ನು ಹೇಳುತ್ತೇನೆ. ಅದನ್ನು ಕೇಳು ಅಶುದ್ಧವನ್ನು ಅಜ್ಞಾನದಿಂದಲಾಗಲಿ ಭ್ರಾಂತಿಯಿಂದಾಗಲಿ ಯಾವುದನ್ನಾದರೂ ಬರೆದಿದ್ದರೂ ಕೂಡ ಆ ಪತ್ರವು ಶುದ್ಧವಾಗಲಿ, ಎಂಬ ಬುದ್ಧಿಯೂ ಅದಕ್ಕೆ ಮತ್ತೊಂದು ಕಾರಣವು.

೨೮–೨೯. ಕೆಲವು ಪುಸ್ತಕಗಳಲ್ಲಿ ಎಲ್ಲಾ ಪತ್ರಗಳಲ್ಲಿಯೂ ಶ್ರೀರಾಮ ಎಂದು ಬರೆದಿರುತ್ತಾರೆ. ಯಾವ ಪತ್ರದಲ್ಲಿ ಶ್ರೀರಾಮ ಎಂದು ಲೇಖಕರು ಬರೆದಿರುವರೋ ಆ ಅಶುದ್ಧವೂ ಕೂಡ ಶುದ್ಧವಾದುದೆಂದು ತಿಳಿದುಕೊಳ್ಳಬೇಕು. ಆ ಶ್ರೀರಾಮ ಸ್ಮರಣೆಯಿಂದಲೇ ಲೇಖಕನು ದೋಷವನ್ನು ಕಳೆದುಕೊಳ್ಳುತ್ತಾನೆ. ಈ ರೀತಿಯಾಗಿ ಲೋಕದಲ್ಲಿ ನಡೆಯುತ್ತಿದೆ. ಇದು ಸತ್ಯವಾದ ಮಾತು ಎಂದು ತಿಳಿ.

ಇತಿ ಶ್ರುತ್ವಾ ಗುರೋರ್ವಾಕ್ಯಂ ವಸಿಷ್ಠಂ ಪ್ರಣಿಪತ್ಯ ಚ ।
ಲವಸ್ಸ ಗತ ಸಂದೇಹಸ್ತೂಷ್ಣೀಮಾಸೀನ್ಮುದಾನ್ವಿತಃ ॥ ೩೦ ॥

ಏಕದಾ ರಘುನಾಥಸ್ತು ಮಂಚಕೋಪರಿ ಸಂಸ್ಥಿತಃ ।
ಮುಖಾತ್ತಾಂಬೂಲಸುರಸಂ ಪ್ರಥಮಂ ದೋಷಕಾರಕಂ ॥ ೩೧ ॥

ತ್ಯಕ್ತುಕಾಮೋ ನ ದದರ್ಶ ಪಾತ್ರಂ ನಿಷ್ಠೀವನಸ್ಯ ಸಃ ।
ತಸ್ಯಾಂತಿಕಸ್ಥಿತಾ ದಾಸೀ ನಾಮ್ನಾ ವೈ ಸುಗುಣೇತಿ ಚ ॥ ೩೨ ॥

ತಾದೃಶಂ ರಾಮಮಾಲೋಕ್ಯ ಪಾತ್ರಂ ದೂರಂ ವಿಲೋಕ್ಯ ಚ ।
ಕೃತ್ವಾ ಪಾತ್ರಂ ಸ್ವಹಸ್ತಾಭ್ಯಾಮಂಜಲಾವೇವ ತದ್ರಸಂ ॥ ೩೩ ॥

ರಾಮೇಣ ಮುಕ್ತಮಾಸ್ಯಾಚ್ಚ ಜಗ್ರಾಹ ವೇಗವತ್ತರಾ ।
ತತಸ್ಸಾ ಪ್ರಾಶನಂ ರಾಮೋಚ್ಛಿಷ್ಟಂ ದಾಸೀ ಚಕಾರ ತತ್ ॥ ೩೪ ॥

---

೩೦. ಲವನು ಗುರುವಿನ ಈ ಮಾತನ್ನು ಕೇಳಿ ಅವನಿಗೆ ನಮಸ್ಕರಿಸಿ ಸಂದೇಹವನ್ನು ಕಳೆದುಕೊಡು ಸುಮ್ಮನೆ ಆದನು.

೩೧-೩೨. ಶ್ರೀರಾಮನು ಒಂದುಸಾರಿ ಮಂಚದಮೇಲೆ ಕುಳಿತಿದ್ದನು. ತಾಂಬೂಲವನ್ನು ಹಾಕಿಕೊಂಡನು ಅದನ್ನು ಅಗಿದರೆ ಮೊದಲು ಬರುವ ರಸವು ದೋಷವನ್ನುಂಟುಮಾಡುತ್ತದೆ. ಆದ್ದರಿಂದ ಅದನ್ನು ಉಗಿಯಲು ಉಗಿಯುವ ಪಾತ್ರೆಯನ್ನು ನೋಡಿದನು. ಅದು ಅಲ್ಲಿರಲಿಲ್ಲ. ಆಗ ಅವನ ಹತ್ತಿರದಲ್ಲಿ ಸುಗುಣೆ ಎಂಬ ದಾಸಿಯಿದ್ದಳು.

೩೩-೩೪. ರಾಮನು ಉಗಿಯಲು ಸಿದ್ಧನಾಗಿರುವುದನ್ನೂ ಪಾತ್ರೆಯು ಹತ್ತಿರದಲ್ಲಿಲ್ಲದಿರುವುದನ್ನೂ ಆಕೆಯು ತಿಳಿದುಕೊಂಡಳು. ಆಗ ಅವಳು ಬೊಗಸೆಯನ್ನು ತೋರಿಸಿ ಅದರಲ್ಲಿಯೇ ಉಗಿಯುವಂತೆ ಹೇಳಿದಳು. ರಾಮನು ಅಂತೆಯೇ ಆಕೆಯ ಕೈಯ್ಯಲ್ಲಿ ಉಗಿಯಲು ಆ ದಾಸಿಯು ಅದನ್ನು ಚೆಲ್ಲದೆ ತಾನೇ ತಿಂದು ಬಿಟ್ಟಳು.

ಮಹಾಪ್ರಸಾದಂ ತಂ ಮತ್ವಾ ದೈವಾಲ್ಲಬ್ಧಂ ವಿಚಿಂತ್ಯ ಚ ।
ತದಾತಿತುಷ್ಟಃ ಶ್ರೀರಾಮಸ್ತಸ್ಯೈ ತತ್ಕರ್ಮಣಾಬ್ರವೀತ್ ॥ ೩೫ ॥

ವರಯಸ್ವ ವರಂ ದಾಸಿ ಯತ್ತೇ ಮನಸಿ ವರ್ತತೇ ।
ತದ್ರಾಮವಚನಂ ಶ್ರುತ್ವಾ ದಾಸೀ ಪ್ರಾಹ ರಘೂತ್ತಮಂ ॥ ೩೬ ॥

ಏಕಪತ್ನೀವ್ರತಂ ತೇಽಸ್ತಿ ಸಾಂಪ್ರತಂ ತ್ವಿಹ ಜನ್ಮನಿ ।
ಜನ್ಮಾಂತರೇ ತ್ವಯಾ ಸಂಗಂ ವಾಂಛಾಮಿ ರಘುನಾಯಕ ॥ ೩೭ ॥

ತತ್ತಸ್ಯಾ ವಚನಂ ಶ್ರುತ್ವಾ ರಾಘವೋ ವಾಕ್ಯಮಬ್ರವೀತ್ ।
ಯದಾಗ್ರೇ ಕೃಷ್ಣರೂಪೇಣ ಗೋಕುಲೇಽವತರಾಮ್ಯಹಂ ॥ ೩೮ ॥

ತದಾ ರಾಧೇತಿ ನಾಮ್ನಾ ತ್ವಂ ಗೋಪಪತ್ನೀ ಭವಿಷ್ಯಸಿ ।
ತದಾ ಮಯಾ ಚಿರಂ ಕ್ರೀಡಾಂ ತ್ವಂ ಭೋಕ್ಷ್ಯಸಿ ನ ಸಂಶಯಃ ॥ ೩೯ ॥

ತದಾ ಮಮಾತಿಪ್ರೀತಾ ತ್ವಂ ಗೋಪಿಕಾಸು ಭವಿಷ್ಯಸಿ ।
ಇತಿ ದಾಸೀ ರಾಮಚಂದ್ರಾದ್ವರಂ ಲಬ್ಧ್ವಾ ತುತೋಷ ಸಾ ॥ ೪೦ ॥

೩೫-೩೬. ಅವಳು ಅದನ್ನು ತನ್ನ ಅದೃಷ್ಟ ವಿಶೇಷದಿಂದ ಸಿಕ್ಕಿದುದೆಂದೂ ಮಹಾ ಪ್ರಸಾದವೆಂದೂ, ತಿಳಿದುಕೊಂಡಳು. ಇದರಿಂದ ರಾಮನಿಗೆ ಬಹಳವಾದ ಸಂತೋಷವಾಯಿತು. ಆಗ ರಾಮನು ಎಲೈ ದಾಸಿಯೆ! ನಿನಗೆ ಬೇಕಾದುದನ್ನು ಕೋಳಿಕೋ ಎಂದನು. ದಾಸಿಯು ರಾಮನನ್ನು ಕುರಿತು ಇಂತೆಂದಳು.

೩೭. ಎಲೈ ರಾಮನೇ! ಈ ಜನ್ಮದಲ್ಲಿ ನೀನು ಏಕಪತ್ನೀ ವ್ರತವನ್ನು ಹೊಂದಿದ್ದೀಯೆ ಆದ್ದರಿಂದ ಜನ್ಮಾಂತರದಲ್ಲಿಯಾದರೂ ನಿನ್ನ ಸಂಗವು ಬೇಕೆಂದು ಅಪೇಕ್ಷಿಸುತ್ತೇನೆ ಎಂದಳು.

೩೮-೩೯. ಆಕೆಯ ಆ ಮಾತನ್ನು ಕೇಳಿ ರಾಮನು ನಾನು ಮುಂದೆ ಗೋಕುಲದಲ್ಲಿ ಕೃಷ್ಣನ ರೂಪದಿಂದ ಹುಟ್ಟುತ್ತೇನೆ. ಆಗ ನೀನು ರಾಧೆ ಎಂಬ ಹೆಸರಿನಿಂದ ಪ್ರಸಿದ್ಧಳಾಗಿ ಗೋಪನ ಹೆಂಡತಿಯಾಗಿರುತ್ತೀಯೆ. ಆಗ ನೀನು ಬಹು ಕಾಲದವರೆಗೆ ನನ್ನೊಡನೆ ಸುಖವಾಗಿ ಕ್ರೀಡಿಸುತ್ತೀಯೆ.

೪೦. ಆಗ ನೀನು ಗೋಪಿಕೆಯರೊಳಗೆ ನನಗೆ ಬಹು ಪ್ರೀತಿಪಾತ್ರಳಾಗುತ್ತೀಯೆ ಎಂಬುದಾಗಿ ರಾಮನು ವರವನ್ನು ಕೊಡಲು ಇದನ್ನು ಕೇಳಿ ದಾಸಿಯು ಬಹು ಸಂತೋಷಗೊಂಡಳು.

ಅನ್ಯಚ್ಛೃಣು ವಿಷ್ಣುದಾಸ ಶ್ರೀರಾಘವಕಥಾನಕಂ ।
ಯತ್ತ್ವೋಚ್ಯತೇ ಮಯಾ ತೇಽಗ್ರೇ ಮಹತ್ಕೌತುಕಕಾರಕಂ ॥ ೪೧ ॥

ಏಕದಾ ರಾಘವಃ ಶ್ರೀಮಾನ್ ಸಭಾಯಾಮಾಸನೋಪರಿ ।
ಸಂಸ್ಥಿತೋ ಬಂಧುಭಿಃ ಪುತ್ರಮಂತ್ರಿಭಿಃ ಪುರವಾಸಿಭಿಃ ॥ ೪೨ ॥

ಏತಸ್ಮಿನ್ನಂತರೇ ಕಶ್ಚಿತ್ ಬ್ರಹ್ಮಚಾರೀ ಸಮಾಯಯೌ ।
ಯುವಾ ದಂಡಧರಃ ಶ್ರೇಷ್ಠಃ ಕಮಂಡಲುಧರಶ್ಶುಚಿಃ ॥ ೪೩ ॥

ಏಣಕೃಷ್ಣಾಜಿನಧರಃ ಕಾಷಾಯವಸನೋ ವ್ರತೀ ।
ತಂ ದೃಷ್ಟ್ವಾ ರಾಘವಃ ಶ್ರೀಮಾನವತೀರ್ಯ ವರಾಸನಾತ್ ॥ ೪೪ ॥

ಪ್ರತ್ಯುದ್ಗಮ್ಯಾಥ ತಂ ನತ್ವಾಸನೇ ಸಮುಪವೇಶ್ಯ ಚ ।
ಪೂಜಯಾಮಾಸ ವಿಧಿನಾ ಧೇನುಮಗ್ರೇ ನಿವೇದ್ಯ ಚ ॥ ೪೫ ॥

---

೪೧. ಎಲೈ ವಿಷ್ಣುದಾಸನೇ! ರಾಘವನ ಮತ್ತೊಂದು ಕಥೆಯನ್ನು ಹೇಳುತ್ತೇನೆ. ಕೇಳು. ನಾನು ಈಗ ನಿನಗೆ ಹೇಳತಕ್ಕ ಕಥೆಯು ಬಹು ಆಶ್ಚರ್ಯವನ್ನು ಉಂಟುಮಾಡುತ್ತದೆ.

೪೨. ಒಂದು ಸಾರಿ ರಾಮನು ಸಭೆಯಲ್ಲಿ ಸಿಂಹಾಸನದ ಮೇಲೆ ಕುಳಿತಿದ್ದನು. ಆ ಸಭೆಯಲ್ಲಿ ತಮ್ಮಂದಿರೂ, ಮಕ್ಕಳೂ, ಮಂತ್ರಿಗಳೂ, ಪಟ್ಟಣಿಗರೂ ಪುರವಾಸಿಗಳೂ ಸಭೆಯ ತುಂಬ ಕುಳಿತಿದ್ದರು.

೪೩. ಆಗ ಸಭೆಗೆ ಒಬ್ಬ ಬ್ರಹ್ಮಚಾರಿಯು ಬಂದನು. ಅವನು ಯುವಕನು. ದಂಡವನ್ನು ಹಿಡಿದಿದ್ದನು. ಕಮಂಡಲವು ಕೈಯಲ್ಲಿದ್ದಿತ್ತು. ಶ್ರೇಷ್ಠನಾಗಿಯೂ ಶುಚಿಯಾಗಿಯೂ ಇದ್ದನು.

೪೪. ಕೃಷ್ಣಾಜಿನವನ್ನು ಧರಿಸಿದ್ದನು. ಕಾಷಾಯದ ಬಟ್ಟೆಯನ್ನು ಧರಿಸಿದ್ದನು. ಅವನು ಬಂದುದನ್ನು ಶ್ರೀರಾಮನು ನೋಡಿ ಒಡನೆಯೇ ಅವನು ಸಿಂಹಾಸನದಿಂದ ಇಳಿದನು.

೪೫-೪೬. ಅವನನ್ನು ಎದುರುಗೊಂಡು ಕರೆತಂದು ನಮಸ್ಕರಿಸಿ ಆಸನದಲ್ಲಿ ಕೂರಿಸಿದನು. ಧೇನುವನ್ನು ಕೊಟ್ಟು ವಿಧಿಯಂತೆ ಪೂಜೆ ಮಾಡಿದನು.

ತತಸ್ಸಂಪೂಜಿತಂ ವಿಪ್ರಂ ರಾಘವೋ ವಾಕ್ಯಮಬ್ರವೀತ್ ।
ಅದ್ಯ ಧನ್ಯೋಽಸ್ಮ್ಯಹಂ ವಿಪ್ರ ಯಶಸ್ತೇ ದರ್ಶನಂ ಮಮ ॥ ೪೬ ॥

ಜಾತಮಾಜ್ಞಾಪ್ಯತಾಂ ಕಿಂಚಿದ್ಯದರ್ಥಂ ಭವತಾಗತಂ ।
ತದ್ರಾಘವವಚಶ್ಶ್ರುತ್ವಾ ಬ್ರಹ್ಮಚಾರೀ ವಚೋಽಬ್ರವೀತ್ ॥ ೪೭ ॥

ವಾಲ್ಮೀಕಿನಾ ಪ್ರೇಷಿತೋಽಹಂ ಯಸ್ಮಾತಚ್ಛೃಣು ರಾಘವ ।
ಯಷ್ಟುಕಾಮೋ ಮಹಾಯಜ್ಞಂ ಸ ವಾಲ್ಮೀಕಿರ್ಮಹಾಮುನಿಃ ॥ ೪೮ ॥

ತ್ವಾಮಾಕಾರಯಿತುಂ ಮಾಂ ತ್ವನ್ನಿಕಟಂ ವೇಗವತ್ತರಂ ।
ಪ್ರೇಷಿತವಾನತಸ್ತ್ವಂ ಹಿ ಸೀತಯಾ ಬಂಧುಭಿಸ್ಸಹ ॥ ೪೯ ॥

ಪ್ರಸ್ಥಾನಂ ಕುರು ರಾಜೇಂದ್ರ ಮುಹೂರ್ತಸ್ತ್ವದ್ಯ ವರ್ತತೇ ।
ಏವಂ ವದತಿ ಶ್ರೀರಾಮಂ ಭೂಸುರೇ ಸದಸಿ ಸ್ಥಿತೇ ॥ ೫೦ ॥

ಪೂಜೆಯೆಲ್ಲವೂ ಆದಮೇಲೆ ಶ್ರೀರಾಮನು ಆ ಬ್ರಹ್ಮಚಾರಿಯನ್ನು ಕುರಿತು ಇಂತೆಂದನು. ಎಲೈ ವಿಪ್ರನೇ! ನಿನ್ನ ದರ್ಶನವಾದುದರಿಂದ ನಾನು ಧನ್ಯನಾದೆನು.

೪೭. ತಾವು ಏತಕ್ಕೆ ಬಂದಿರಿ ಎಂಬುದನ್ನು ಆಜ್ಞಾಪಿಸಿರಿ. ಅದನ್ನು ಕೊಟ್ಟು ಧನ್ಯನಾಗುತ್ತೇನೆ ಎಂದು ರಾಘವನು ಕೇಳಲು ಬ್ರಹ್ಮಚಾರಿಯು ಇಂತೆಂದನು.

೪೮. ಎಲೈ ರಾಘವನೇ! ನನ್ನನ್ನು ವಾಲ್ಮೀಕಿ ಮಹರ್ಷಿಯು ನಿನ್ನಲ್ಲಿಗೆ ಕಳುಹಿಸಿರುವನು. ಏತಕ್ಕೆ ಕಳುಹಿಸಿರುವನು ಎಂಬುದನ್ನು ಹೇಳುತ್ತೇನೆ ಕೇಳು. ವಾಲ್ಮೀಕಿ ಋಷಿಯು ಒಂದು ಮಹಾಯಾಗವನ್ನು ಮಾಡಬೇಕೆಂದಿರುವನು.

೪೯-೫೦. ನಿನ್ನನ್ನು ಆ ಯಾಗಕ್ಕೆ ಬರಹೇಳಿ ನನ್ನನ್ನು ಬೇಗಹೋಗಿ ಕರೆದುಕೊಂಡು ಬಾ ಎಂದು ಅಪ್ಪಣೆಮಾಡಿದನು. ಆದ್ದರಿಂದ ನೀನು ತಮ್ಮಂದಿರೊಡನೆಯೂ ಸೀತೆಯೊಡನೆಯೂ ವಾಲ್ಮೀಕಿಯ ಆಶ್ರಮಕ್ಕೆ ಬರಬೇಕು. ಈಗಲೇ ಮುಹೂರ್ತವು ಚೆನ್ನಾಗಿರುವುದು. ಎಂದು ಹೇಳಿ ಆ ಬ್ರಹ್ಮಚಾರಿಯು ಆ ಸಭೆಯಲ್ಲಿ ಕುಳಿತನು.

ಸಮಾಯಾತೋ ಬ್ರಹ್ಮಚಾರೀ ದ್ವಿತೀಯೋ ಗಾಧಿಜಾಶ್ರಮಾತ್ ।
ತಂ ದೃಷ್ಟ್ವಾ ಪೂರ್ವವದ್ರಾಮಃ ಪ್ರತ್ಯುದ್ಗಮ್ಯ ದ್ವಿಜೋತ್ತಮಂ ॥ ೫೧ ॥

ಆಸನೇನ್ಯೇ ಚೋಪವೇಶ್ಯ ಪೂಜಯಾಮಾಸ ಸಾದರಂ ।
ತತಸ್ತತ್ಪುರತಃ ಸ್ಥಿತ್ವಾ ತಂ ಪಪ್ರಚ್ಛ ರಘೂತ್ತಮಃ ॥ ೫೨ ॥

ಯದರ್ಥಂ ಶ್ರಮಿತೋಽಸಿ ತ್ವಂ ತನ್ಮಮಾಜ್ಞಾಪ್ಯತಾಂ ಮುನೇ ।
ತದ್ರಾಮವಚನಂ ಶ್ರುತ್ವಾ ಬ್ರಹ್ಮಚಾರೀ ವಚೋಽಬ್ರವೀತ್ ॥ ೫೩ ॥

ರಾಮ ತ್ವಾಂ ಗಾಧಿಜೇನಾಹಂ ಪ್ರೇಷಿತೋಽಸ್ಮಿ ಜವೇನ ಹಿ ।
ಯಷ್ಟುಕಾಮೋ ಮಹಾಯಜ್ಞಂ ವಿಶ್ವಾಮಿತ್ರೋಽಸ್ತಿ ರಾಘವ ॥ ೫೪ ॥

ತ್ವಂ ತೇನಾಕಾರಿತಶ್ಚಾಸಿ ಪ್ರಸ್ಥಾನಂ ಕುರು ಸತ್ವರಂ ।
ಬ್ರಹ್ಮಚಾರಿಣೋಸ್ತದ್ವಾಕ್ಯಮುಭಯೋಸ್ಸ ರಘೂತ್ತಮಃ ॥ ೫೫ ॥

೫೧-೫೨. ಆ ಬ್ರಹ್ಮಚಾರಿಯು ಹೀಗೆ ಹೇಳಿ ಕುಳಿತುಕೊಳ್ಳುವರೊಳಗೆ ವಿಶ್ವಾಮಿತ್ರ ಋಷಿಯ ಕಡೆಯಿಂದ ಮತ್ತೊಬ್ಬ ಬ್ರಹ್ಮಚಾರಿಯು ಅಲ್ಲಿಗೆ ಬಂದನು. ಅವನನ್ನು ನೋಡಿದ ಕೂಡಲೇ ಶ್ರೀರಾಮನು ಎದುರುಗೊಂಡು ಪೂರ್ವದಂತೆ ಪೂಜಿಸಿದನು. ಆತನು ಆಸನದಲ್ಲಿ ಕುಳಿತುಕೊಂಡ ಮೇಲೆ ಅವನೆದುರಿಗೆ ನಿಂತುಕೊಂಡು ಶ್ರೀರಾಮನು ಇಂತೆಂದು ಹೇಳಿದನು.

೫೩. ಎಲೈ ಮುನಿಯೇ! ಇಲ್ಲಿಗೆ ಬರುವ ಶ್ರಮವನ್ನು ತಾವೇಕೆ ತೆಗೆದುಕೊಳ್ಳೋಣವಾಯಿತು? ಆ ವಿಷಯವನ್ನು ನನಗೆ ಅಜ್ಞಾಪಿಸಿರಿ. ಎನ್ನಲು ರಾಮನ ಆ ಮಾತನ್ನು ಕೇಳಿ ಬ್ರಹ್ಮಚಾರಿಯು ಇಂತೆಂದನು.

೫೪--೫೫. ಎಲೈ ರಾಮನೇ! ಗಾಧಿಜನಾದ ವಿಶ್ವಾಮಿತ್ರನು ನಿನ್ನ ಬಳಿಗೆ ಬೇಗ ಹೋಗುವಂತೆ ಹೇಳಿದನು. ಆ ವಿಶ್ವಾಮಿತ್ರನು ಮಹಾ ಯಜ್ಞವನ್ನು ಮಾಡಬೇಕೆಂದು ಸಿದ್ಧನಾಗಿರುವನು. ನಿನ್ನನ್ನು ಬೇಗನೆ ಕರೆದುಕೊಂಡು ಬರುವಂತೆ ನನ್ನನ್ನು ಕಳುಹಿಸಿರುವನು. ಬೇಗನೆ ಪ್ರಯಾಣವನ್ನು ಮಾಡು. ಎಂದನು. ಆಗ ಶ್ರೀರಾಮನು ಈ ಇಬ್ಬರು ಬ್ರಹ್ಮಚಾರಿಯರ ಮಾತನ್ನೂ ಕೇಳಿದನು.

ಶ್ರುತ್ವಾ ವಿಹಸ್ಯ ಪ್ರೋವಾಚ ದ್ವಿಜಾಭ್ಯಾಂ ವೈ ತಥೇತಿ ಚ ।
ತದಾಶ್ಚರ್ಯಂ ಜನಾಃ ಪ್ರಾಪುಃ ಪ್ರೋಚುಸ್ತೇ ತು ಪರಸ್ಪರಂ ॥ ೫೬ ॥

ಕಥಮುದ್ಯೋಭಯೋಸ್ಸಾಕಂ ರಾಮೋ ಗಚ್ಛತಿ ತನ್ಮಖೌ ।
ಕೇಚಿದೂಚೂ ರಾಘವಾಯ ಕಿಮಶಕ್ಯಂ ತವಾತ್ರ ಹಿ ॥ ೬೬ ॥

ಯಥಾ ಸ್ತ್ರೀಣಾಂ ವನೇ ಪೂರ್ವಂ ಯಥಾಸ್ಮಾಕಂ ಹಿ ದರ್ಶನಂ ।
ಯದಾಗತೋಸಿ ಲಂಕಾಯಾಃ ಪುರಾ ಭರತದರ್ಶನೇ ॥ ೫೮ ॥

ಭಿನ್ನರೂಪೇಣ ರಾಮೇಣ ಸರ್ವೇಷಾಮರ್ಪಿತಂ ಪೃಥಕ್ ।
ತದ್ವದತ್ರಾಪಿ ದ್ವಿವಿಧಾ ಭೂತ್ವಾ ಗಂತಾಸಿ ತನ್ಮಖೌ ॥ ೫೯ ॥

---

೫೬. ಇದನ್ನು ಕೇಳಿ ನಕ್ಕು ಆ ರಾಮನು ಆ ಇಬ್ಬರು ಬ್ರಹ್ಮಚಾರಿಗಳಿಗೂ ಆಗಲಿ ಬರುತ್ತೇನೆ ಎಂದು ಹೇಳಿದನು. ರಾಮನು ಇಬ್ಬರಿಗೂ ಬರುತ್ತೇನೆಂದು ಹೇಳಿದುದನ್ನು ಕೇಳಿ ಜನರು ಬಹುವಾಗಿ ಆಶ್ಚರ್ಯವನ್ನು ಹೊಂದಿ ಒಬ್ಬರಿಗೊಬ್ಬರು ಇಂತೆಂದು ಮಾತನಾಡಿಕೊಂಡರು.

೫೭. ರಾಮನು ಈಗ ಬೇರೆ ಬೇರೆಯ ದಿಕ್ಕಿನಲ್ಲಿ ಎರಡು ಕಡೆಯಲ್ಲಿ ನಡೆಯುವ ಯಾಗಗಳಿಗೂ ಬರುತ್ತೇನೆ. ಎಂದು ಹೇಳಿದನಲ್ಲ ! ಹೇಗೆ ಹೋಗುವನು ? ಅವರಲ್ಲಿ ಕೆಲವರು ರಾಮನಿಗೆ ಯಾವುದು ತಾನೇ ಅಸಾಧ್ಯ !

೫೮. ಪೂರ್ವದಲ್ಲಿ ವನದಲ್ಲಿ ಹೆಂಗಸರಿಗೆ ಯಾವ ರೀತಿಯಾಗಿ ಅನೇಕ ರೀತಿಯಲ್ಲಿ ದರ್ಶನವನ್ನು ಕೊಟ್ಟನೋ, ಲಂಕೆಯಿಂದ ಬಂದಾಗ ಭರತನೇ ಮುಂತಾದವರಿಗೂ ನಮಗೂ ಹೇಗೆ ಅನೇಕ ರಾಮನಾಗಿ ದರ್ಶನವನ್ನು ಕೊಟ್ಟನೋ ಅದರಂತೆ ಎರಡು ಯಜ್ಞಗಳಿಗೂ ಹೋಗಿ ದರ್ಶನವನ್ನು ಕೊಡುವನು.

೫೯. ಆಗ ರಾಮನು ಒಬ್ಬೊಬ್ಬರಿಗೂ ಒಬ್ಬೊಬ್ಬನಾಗಿ ದರ್ಶನವನ್ನು ಬೇರೆ ಬೇರೆಯಾಗಿ ಕೊಟ್ಟನಲ್ಲವೇ ? ಹಾಗೆಯೇ ಈಗಲೂ ಕೂಡ ಎರಡು ರೀತಿಯಾಗಿ ಆಕಾರವನ್ನು ಹೊಂದಿ ಅವರಿಬ್ಬರ ಯಾಗಗಳಿಗೂ ಹೋಗುವನು.

ಕಿಮಾಶ್ಚರ್ಯಮಿದಂ ಚಾದ್ಯ ಕಿಮಶಕ್ಯಂ ಪರಾತ್ಮನಿ ।
ಏವಂ ವದತ್ಸು ಪೌರೇಷು ಲಕ್ಷ್ಮಣಂ ಪ್ರಾಹ ರಾಘವಃ ॥ ೬೦ ॥

ಅದ್ಯೈವಾಹಂ ಗಮಿಷ್ಯಾಮಿ ಭೋಜನಾನಂತರಂ ಬಹಿಃ ।
ವಾಸೋಗೇಹಾನಿ ನೇಯಾನಿ ಬಹಿಸ್ಸೇನಾಂ ಪ್ರಚೋದಯ ॥ ೬೧ ॥

ಆಜ್ಞಾಪನೀಯಂ ವಾದ್ಯಾನಾಂ ಧ್ವನಿಂ ಕರ್ತುಂ ಹಿ ಸೇವಕಾನ್ ।
ತದ್ರಾಮವಚನಂ ಶ್ರುತ್ವಾ ತಥೇತ್ಯುಕ್ತ್ವಾ ಸ ಲಕ್ಷ್ಮಣಃ ॥ ೬೨ ॥

ಕಾರಯಾಮಾಸ ವಾದ್ಯಾನಾಂ ಧ್ವನಿಂ ದೂತೈಶ್ಚ ಸಂಭ್ರಮಾತ್ ।
ಸೈನ್ಯಂ ಪ್ರಚೋದಯಾಮಾಸ ಬಹಿರ್ವಾಸೋಗೃಹಾಣ್ಯಪಿ ॥ ೬೩ ॥

ನೇತುಮಾಜ್ಞಾಪಯಾಮಾಸುರ್ದೂತಾಸ್ತೇ ನಿನ್ಯುರಾದರಾತ್ ।
ತತೋ ರಾಮೋಽಪಿ ವಿಪ್ರಾಭ್ಯಾಂ ಗೃಹಂ ಗತ್ವಾ ವಿದೇಹಜಾಂ ॥ ೬೪ ॥

---

೬೦. ಪರಮಾತ್ಮನಾದ ರಾಮನಿಗೆ ಯಾವುದು ಆಶ್ಚರ್ಯವು ? ಯಾವುದು ತಾನೆ ಅಸಾಧ್ಯವು ? ಅವನ ವಿಷಯದಲ್ಲಿ ಯಾವುದೂ ಆಶ್ಚರ್ಯಕರವಲ್ಲ. ಯಾವುದೂ ಅಸಾಧ್ಯವಲ್ಲ. ಈ ರೀತಿಯಾಗಿ ಪಟ್ಟಣಿಗರು ಮಾತನಾಡಿಕೊಳ್ಳುತ್ತಿರಲು ರಾಮನು ಲಕ್ಷ್ಮಣನನ್ನು ಕುರಿತು ಇಂತೆಂದನು.

೬೧. ಎಲೈ ಲಕ್ಷ್ಮಣನೇ ! ಈದಿನ ಊಟಮಾಡಿದಕೂಡಲೇ ನಾನು ಹೊರಗೆ ಹೊರಡುತ್ತೇನೆ. ಸೇನೆಯೆಲ್ಲವನ್ನೂ ಹೊರಕ್ಕೆ ಕಳುಹಿಸಿ ಬಿಡಾರವನ್ನು ಬಿಡಿಸು. ಜೊತೆಯಲ್ಲಿ ಬಟ್ಟೆಯ ಡೇರೆಗಳನ್ನು ತೆಗೆದುಕೊಂಡು ಈಗಲೇ ಹೋಗಲಿ.

೬೨-೬೩. ಸೇವಕರು ಈಗಲೇ ತುತ್ತೂರಿಯನ್ನು ಊದುವಂತೆ ಹೇಳು. ಎನ್ನಲು ರಾಮನ ಈ ಮಾತನ್ನು ಕೇಳಿ ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ದೂತರನ್ನು ಕರೆದು ಬೇಗನೆ ಸೈನ್ಯವು ಸಿದ್ಧವಾಗುವಂತೆ ತುತ್ತೂರಿಯನ್ನು ಊದಿಸಿದನು. ಅದರಂತೆಯೇ ಎಲ್ಲ ಸೈನ್ಯವೂ ಬಂದು ಸೇರಲು ಅದನ್ನು ಹೊರಗೆ ಹೊರಡಿಸಿದನು. ಮತ್ತು ಡೇರೆಗಳನ್ನೂ ಕಳುಹಿಸಿದನು.

೬೪-೬೫ ದೂತರೆಲ್ಲರೂ ಅಂತೆಯೇ ಅವನ್ನು ತೆಗೆದುಕೊಂಡು ಹೊರಟರು. ಅನಂತರ ರಾಮನು ಆ ಇಬ್ಬರು ಬ್ರಹ್ಮಚಾರಿಗಳನ್ನೂ ಕರೆದು

ಸರ್ವಂ ವೃತ್ತಂ ನಿವೇದ್ಯಾಥ ಕೃತ್ವಾ ವಿಪ್ರೈರ್ಹಿ ಭೋಜನಂ ।
ಸೀತಾಂ ಚ ಕರಿಣೀಪೃಷ್ಠೇ ಬಂಧುನಾರೋಹಯತ್ಪ್ರಭುಃ ॥ ೬೫ ॥

ಪುಷ್ಪಕೇ ಪೌರನಾರೀಶ್ಚ ಕರಿಣೀಷೂರ್ಮಿಲಾದಿಕಾಃ ।
ಸಮಾರೋಹಯಚ್ಛ್ರೀರಾಮಃ ಸ್ವಯಂ ತಸ್ಥೌ ಗಜೋಪರಿ ॥ ೬೬ ॥

ಲಕ್ಷ್ಮಣಾದ್ಯಾ ಗಜೇಷ್ವೇವ ತೇ ಸಮಾರುರುಹುಸ್ತದಾ ।
ನಿನೇದುಶ್ಚಾಥ ವಾದ್ಯಾನಿ ನನೃತುರ್ವಾರಯೋಷಿತಃ ॥ ೬೭ ॥

ತುಷ್ಟುವುರ್ಮಾಗಧಾದ್ಯಾಶ್ಚ ಪ್ರಜಗುಸ್ಸುಸ್ವರಂ ನಟಾಃ ।
ಏವಂ ಸಮಾಯಯೌ ರಾಮಸ್ತದಾ ವಾಸೋಗೃಹಾಣಿ ಸಃ ॥ ೬೮ ॥

ತಾಂ ರಾತ್ರಿಂ ಸಮತಿಕ್ರಮ್ಯ ಪ್ರಭಾತೇ ರಘುನಂದನಃ ।
ಸ್ನಾತ್ವಾ ನಿತ್ಯವಿಧಿಂ ಕೃತ್ವಾ ಗಜಾರೂಢೋಭವತ್ಪುನಃ ॥ ೬೯ ॥

ಕೊಂಡು ಒಳಕ್ಕೆ ಹೋಗಿ ಸೀತೆಗೆ ಎಲ್ಲಾ ವಿಷಯಗಳನ್ನು ತಿಳಿಸಿದನು. ಮತ್ತು ಆ ಬ್ರಹ್ಮಚಾರಿಗಳೊಡನೆ ಭೋಜನಮಾಡಿದನು. ಅನಂತರ ಸೀತೆಯನ್ನು ಆನೆಯಮೇಲೆ ಕೂರಿಸಿದನು.

೬೬--೬೭. ಪಟ್ಟಣದ ಹೆಂಗಸರು ಪುಷ್ಪಕದಲ್ಲಿ ಕುಳಿತರು. ಊರ್ಮಿಳೆ ಮುಂತಾದ ವಾರಗಿತ್ತಿಯರು ಆನೆಯಮೇಲೆ ಕುಳಿತರು. ರಾಮನು ತಾನೂ ಆನೆಯಮೇಲೆ ಕುಳಿತನು. ಲಕ್ಷ್ಮಣ, ಭರತ, ಶತ್ರುಘ್ನರೂ ಆನೆಯಮೇಲೆ ಕುಳಿತರು. ವಾದ್ಯಗಳು ಮೊಳಗುತ್ತಿದ್ದುವು. ವಾರನಾರಿಯರು ಕುಣಿಯುತ್ತಿದ್ದರು.

೬೮. ವಂದಿಗಳು ಹೊಗಳುತ್ತಿದ್ದರು. ನಟರು ಸುಸ್ವರವಾಗಿ ಹಾಡಿದರು. ಈ ರೀತಿಯಾದ ಅಟ್ಟಹಾಸದಿಂದ ಶ್ರೀರಾಮನು ಊರಹೊರಗೆ ಹಾಕಿದ್ದ ಡೇರೆಗೆ ಬಂದು ಇಳಿದನು.

೬೯. ಅಲ್ಲಿ ಆ ರಾತ್ರಿಯೆಲ್ಲವೂ ಇದ್ದನು. ಬೆಳಗಾಗುತ್ತಲೂ ಎದ್ದು ಸ್ನಾನವನ್ನು ಮಾಡಿ ನಿತ್ಯವಿಧಿಯನ್ನು ಮುಗಿಸಿಕೊಂಡು ಮತ್ತೆ ಆನೆಯಮೇಲೆ ಕುಳಿತನು.

ಕ್ರೋಶದ್ವಯಂ ತತೋ ಗತ್ವಾಗ್ರೇ ದೃಷ್ಟ್ವಾ ಮಾರ್ಗೌ ನಿರೀಕ್ಷ್ಯ ಚ ।
ಸಸೈನ್ಯೇ ದ್ವೇ ನಿಜೇ ದೇಹೇ ಚಕಾರ ರಘುನಂದನಃ ॥ ೭೦ ॥

ತದಾ ದ್ವಯೋರ್ಮಾರ್ಗಯೋಶ್ಚ ಸಸೈನ್ಯೌ ಸೀತಯಾ ಯುತೌ ।
ಪುತ್ರಾಭ್ಯಾಂ ಬಂಧುಭಿರ್ಯುಕ್ತೌ ದೃಷ್ಟ್ವಾ ರಾಮೌ ಸಕಲಾ ಜನಾಃ ॥ ೭೧ ॥

ದದೃಶುಃ ಪುಷ್ಪಕೇ ದ್ವೇಥ ಜಾತೌ ದೃಷ್ಟ್ವಾ ಬ್ರಹ್ಮಚಾರಿಣೌ ।
ವಾಲ್ಮೀಕೀಯೋ ಬ್ರಹ್ಮಚಾರೀ ತ್ವೇಕಸ್ಸ ಸ್ವಂ ಗುರುಂ ಯಯೌ ॥ ೭೨ ॥

ವಿಶ್ವಾಮಿತ್ರಾಧ್ವರಂ ಚಾನ್ಯಃ ಶ್ರೀರಾಮೇಣ ಮುದಾ ಯಯೌ ।
ಗಾಧಿಜೀಯೋ ಬ್ರಹ್ಮಚಾರೀ ತ್ವೇಕಸ್ಸಸ್ವಂ ಗುರುಂ ಯಯೌ ॥ ೭೩ ॥

ವಾಲ್ಮೀಕೇರಧ್ವರಂ ಚಾನ್ಯಃ ಶ್ರೀರಾಮೇಣ ಯಯೌ ಮುದಾ ।
ಏವಂ ತೇ ಸಾರಮೇಯಾಂತಾಸ್ಸರ್ವದೇಹದ್ವಯಾನಿ ಹಿ ॥ ೭೪ ॥

೭೦–೭೧. ಮೊದಲು ಎರಡು ಕ್ರೋಶಗಳಷ್ಟು ದೂರ ತನ್ನ ಪ್ರಯಾಣವನ್ನು ಮಾಡಿದನು. ಅಲ್ಲಿ ಎರಡು ಕಡೆಗೆ ದಾರಿಯು ಕವಲಾಗಿ ಒಡೆದುಹೋಗುತ್ತಿದ್ದಿತು. ಅಲ್ಲಿ ತಾನು ಎರಡು ದೇಹಗಳನ್ನು ಹೊಂದಿ ಜೊತೆಯಲ್ಲಿದ್ದ ಅನುಚರರೂ ಎರಡು ದೇಹವನ್ನು ಹೊಂದುವಂತೆ ಮಾಡಿ ಎರಡು ಮಾರ್ಗಗಳಲ್ಲಿಯೂ ಸೈನ್ಯದೊಡನೆ ತಾನೂ ಹೋಗುತ್ತಿದ್ದನು. ಆ ಎರಡು ರಾಮರ ಬಳಿಯಲ್ಲಿಯೂ ಸೀತೆ, ಭರತ, ಶತ್ರುಘ್ನ, ಲಕ್ಷ್ಮಣರೂ ಕುಶಲವರೂ ಕೂಡ ಎಲ್ಲರೂ ಇದ್ದರು

೭೨–೭೪. ಎರಡು ಪುಷ್ಪಕವಿಮಾನಗಳು ಹೋಗುತ್ತಿದ್ದುವು. ಆ ಬ್ರಹ್ಮಚಾರಿಗಳು ಇಬ್ಬಿಬ್ಬರಾದರು. ವಾಲ್ಮೀಕಿಯ ಬ್ರಹ್ಮಚಾರಿಯು ತನ್ನ ಕಡೆಯ ದಾರಿಯಲ್ಲಿ ಹೊರಟನು. ವಿಶ್ವಾಮಿತ್ರನ ಕಡೆಯ ಬ್ರಹ್ಮಚಾರಿಯು ತನ್ನ ಕಡೆಯ ಮಾರ್ಗದಲ್ಲಿ ಹೊರಟನು. ಇವರಿಬ್ಬರೂ ರಾಮನೊಡನೆ ಅವರವರ ಗುರುಗಳ ಆಶ್ರಮಕ್ಕೆ ಸಂತೋಷದಿಂದ ಹೋಗುತ್ತಿದ್ದರು. ವಿಶ್ವಾಮಿತ್ರಶಿಷ್ಯ ಬ್ರಹ್ಮಚಾರಿಯು ಒಬ್ಬನು ವಾಲ್ಮೀಕಿಯ ಆಶ್ರಮಕ್ಕೂ ಮತ್ತೊಬ್ಬನು ವಿಶ್ವಾಮಿತ್ರನ ಆಶ್ರಮಕ್ಕೂ ಹೋದರು. ವಾಲ್ಮೀಕಿಯ ಬ್ರಹ್ಮಚಾರಿಯೊಬ್ಬನು ವಾಲ್ಮೀಕಿಯ ಆಶ್ರಮಕ್ಕೂ ಮತ್ತೊಬ್ಬನು ವಿಶ್ವಾಮಿತ್ರನ ಆಶ್ರಮಕ್ಕೂ ಹೋದರು. ಈ ರೀತಿಯಾಗಿ ರಾಮನು ತನ್ನಿಂದ ಮೊದಲುಮಾಡಿಕೊಂಡು ತನ್ನ ಜೊತೆಯಲ್ಲಿ ಹೊರಟಿದ್ದ ನಾಯಿಯ ವರಿಯುವರೆಗೆ ಎರಡು ದೇಹವನ್ನು ಹೊಂದಿದ್ದುದನ್ನು ಎಲ್ಲರೂ ನೋಡಿದರು.

ನಿಜಾನಿ ದದೃಶುಸ್ತತ್ರ ವಿಸ್ಮಯಾವಿಷ್ಟಮಾನಸಾಃ ।
ಏವಂ ತೌ ರಘುವೀರೌ ಹಿ ತಯೋರ್ಮುನ್ಯೋಸ್ತದಾಶ್ರಮೇ ॥ ೭೫ ॥

ಸಸೈನ್ಯೌ ಸೀತಯಾ ಯುಕ್ತೌ ಬಂಧುಪುತ್ರಸಮನ್ವಿತೌ ।
ಜಗ್ಮತುರ್ವೈ ಮುನಿಭ್ಯಾಂ ಹಿ ಪ್ರತ್ಯುದ್ಗಮ್ಯಾತಿಪೂಜಿತೌ ॥ ೭೬ ॥

ತಯೋರ್ಯಾಗೌ ವಿಧಾಯಾಥ ಪರಿಪೂರ್ಣೌ ಪುನಃ ಪುರೀಂ ।
ಸಮಾಜಗ್ಮತುಃ ಶ್ರೀರಾಮೌ ಸಸೈನ್ಯೌ ಪೂರ್ವವನ್ಮುದಾ ॥ ೭೭ ॥

ಯತ್ರ ದ್ವೇ ನಿಜದೇಹೇ ವೈ ಕೃತೇ ತತ್ರ ರಘೂತ್ತಮಃ ।
ಸಮಾಗತ್ಯ ಪುನಶ್ಚೈಕಂ ನಿಜದೇಹಂ ಚಕಾರ ಸಃ ॥ ೭೮ ॥

---

೭೫. ಎರಡು ದೇಹವು ತಮ ತಮಗಾಗಿರುವುದನ್ನು ನೋಡಿ ತಾವು ತಾವೇ ಆಶ್ಚರ್ಯಪಡುತ್ತಿದ್ದರು. ಈ ರೀತಿ ಪರಿವಾರಗಳನ್ನು ಕರೆದುಕೊಂಡು ಆ ಇಬ್ಬರು ರಾಮರೂ ಆ ಮುನಿಗಳ ಆಶ್ರಮಕ್ಕೆ ಪ್ರತ್ಯೇಕ ಪ್ರತ್ಯೇಕವಾಗಿ ಹೋದರು.

೭೬. ಅವರಿಬ್ಬರ ಬಳಿಯಲ್ಲಿಯೂ ಸೈನ್ಯವೂ ಸೀತಾಲಕ್ಷ್ಮಣ ಭರತ ಶತ್ರುಘ್ನರೂ, ಕುಶಲವರೂ, ಎಲ್ಲರೂ ಎರಡೆರಡಾಗಿ ಬೇರೆ ಬೇರೆಯಾಗಿ ಹೋದರು. ಆ ಇಂತಹ ರಾಮರನ್ನು ಬ್ರಹ್ಮಚಾರಿಗಳು ತಮ್ಮ ತಮ್ಮ ಗುರುಗಳ ಆಶ್ರಮಕ್ಕೆ ಕರೆದುಕೊಂಡು ಹೋಗಲು ಅವರವರ ಆಶ್ರಮಗಳಲ್ಲಿ ವಿಶ್ವಾಮಿತ್ರನೂ ವಾಲ್ಮೀಕಿಯೂ ಎದುರುಗೊಂಡು ಪೂಜಿಸಿದರು.

೭೭. ಆ ಋಷಿಗಳು ಯಾಗವನ್ನು ಮಾಡಿ ಪೂರ್ತಿಗೊಳಿಸಲು ಆ ರಾಮರು ಮತ್ತೆ ಪಟ್ಟಣಕ್ಕೆ ಅಂತೆಯೇ ಸೈನ್ಯ ಮುಂತಾದುವುಗಳೊಡನೆ ಹೊರಟು ದಾರಿಯಲ್ಲಿ ಸರಸಲ್ಲಾಪಗಳನ್ನಾಡುತ್ತ ಊರಿಗೆ ಬರುತ್ತಿದ್ದರು.

೭೮. ಅನಂತರ ಅವರು ಬರುತ್ತ ಯಾವ ಜಾಗದಲ್ಲಿ ದಾರಿಯು ಒಡೆದು ರಾಮನು ಎರಡು ದೇಹವನ್ನು ಹೊಂದಿದ್ದನೋ ಅಲ್ಲಿಯವರೆಗೂ ಬಂದು ಅಲ್ಲಿ ಒಂದೇ ದೇಹವನ್ನು ಹೊಂದಿದರು.

ವಾಲ್ಮೀಕೀಯೋ ಬ್ರಹ್ಮಚಾರೀ ವಿಶ್ವಾಮಿತ್ರದ್ವಿಜಸ್ತಥಾ।
ಭಿನ್ನದೇಹೇ ತ್ವೇಕರೂಪಂ ಭಜತಸ್ತೌ ತದಾ ದ್ವಿಜೌ ॥ ೭೯ ॥

ಸೈನ್ಯಂ ಚ ಪುಷ್ಪಕಂ ಚಾಪಿ ಬಭೂವೈಕಂ ತು ಪೂರ್ವವತ್ ।
ತತಶ್ಶ್ರೀರಾಮಚಂದ್ರಸ್ಸ ವಿವೇಶ ನಗರೀಂ ನಿಜಾಂ ॥ ೮೦ ॥

ತದಾ ನಿನೇದುರ್ವಾದ್ಯಾನಿ ನನೃತುರ್ವಾರಯೋಷಿತಃ ।
ಪೌರನಾರ್ಯೋ ವಿಮಾನಸ್ಥಾ ವವರ್ಷುಃ ಪುಷ್ಪವೃಷ್ಟಿಭಿಃ ॥ ೮೧ ॥

ತುಷ್ಟುವುರ್ಮಾಗಧಾದ್ಯಾಶ್ಚ ಪ್ರಜಗುಸ್ತೇ ನಟಾನಯಃ ।
ಏವಂ ನಾನಾಕೌತುಕಾನಿ ಪಶ್ಯನ್ಮಾರ್ಗೇ ಶನೈಶ್ಶನೈಃ ॥ ೮೨ ॥

ಯಯೌ ನಿಜಗೃಹಂ ರಾಮಸ್ಸಭಾಯಾಂ ಸಂವಿವೇಶಹ ।
ಸೀತಾಪಿ ನಿಜಗೇಹಂ ಸಾ ಸಂವಿವೇಶೋರ್ಮಿಲಾದಿಭಿಃ ॥ ೮೩ ॥

---

೭೯. ಇಬ್ಬಬ್ಬರಾಗಿದ್ದ ವಾಲ್ಮೀಕಿ ಶಿಷ್ಯ ಬ್ರಹ್ಮಚಾರಿಯೂ ವಿಶ್ವಾಮಿತ್ರ ಬ್ರಹ್ಮಚಾರಿಯೂ ಒಬ್ಬೊಬ್ಬರೇ ಆದರು. ಎಲ್ಲರ ಎರಡೆರಡು ದೇಹಗಳೂ ಒಂದೊಂದು ದೇಹವನ್ನು ಹೊಂದಿದುವು.

೮೦. ಸೈನ್ಯವೂ ಪುಷ್ಪಕವೂ ಮೊದಲಿನಂತೆಯೇ ಒಂದೊಂದೇ ಆದುವು. ಅನಂತರ ಶ್ರೀರಾಮಚಂದ್ರನು ಮೊದಲು ಹೊರಟದ್ದಂತೆ ಒಂದೇ ದೇಹದಿಂದ ಸೈನ್ಯದೊಡನೆ ರಾಜಧಾನಿಗೆ ಹೊರಟನು.

೮೧. ವಾದ್ಯಗಳು ಮೊಳಗುತ್ತಿದ್ದುವು. ವೇಶ್ಯೆಯರು ಕುಣಿಯುತ್ತಿದ್ದರು. ಪಟ್ಟಣದ ಹೆಂಗಸರು ವಿಮಾನದಲ್ಲಿದ್ದುಕೊಂಡು ಹೂಮಳೆಯನ್ನು ಸುರಿಸುತ್ತಿದ್ದರು.

೮೨-೮೩. ವಂದಿಗಳು ಸ್ತುತಿಸುತ್ತಿದ್ದರು. ನಟಾದಿಗಳು ಹಾಡುತ್ತಿದ್ದರು. ಇವೇ ಮೊದಲಾದ ಆಶ್ಚರ್ಯಗಳನ್ನು ದಾರಿಯಲ್ಲಿ ನೋಡುತ್ತ ಮೆಲ್ಲಮೆಲ್ಲನೆ ರಾಮನು ತನ್ನ ಮನೆಗೆ ಹೋದನು. ಅಲ್ಲಿ ಸಭೆಯ ಸ್ಥಾನವನ್ನು ಪ್ರವೇಶಿಸಿದನು. ಸೀತೆಯನ್ನು ತನ್ನ ಓರಗಿತ್ತಿಯರೊಡನೆ ಅವಳ ಮನೆಗೆ ಕಳುಹಿಸಿದನು.

ಏವಂ ಭೂಸುರ ರಾಮೇಣ ಕೌತುಕಾನಿ ಮಹಾಂತಿ ಚ ।
ಅಮಾನುಷಾಣಿ ಯಾನ್ಯತ್ರ ಕೃತಾನಿ ಚ ಸಹಸ್ರಶಃ　　　॥ ೮೪ ॥

ವಾಲ್ಮೀಕಿನಾ ವಿಸ್ತರೇಣ ವರ್ಣಿತಾನಿ ಹಿ ಕೃತ್ಸ್ನಶಃ ।
ಸಾರಂ ಸಾರಂ ಮಯಾ ತೇಭ್ಯಃ ಸಂಗೃಹ್ಯಾಥ ಕಥಾನಕಂ　　　॥ ೮೫ ॥

ತವಾಗ್ರೇ ಕಥ್ಯತೇ ಶಿಷ್ಯ ಸಂಕ್ಷೇಪೇಣಾಜ್ಞಯಾ ಪ್ರಭೋಃ ।
ತ್ವಂ ಧನ್ಯೋಽಸಿ ಯದಾ ತೇನ ರಾಮೇಣಾಜ್ಞಾಪಿತಸ್ತ್ವಹಂ　　　॥ ೮೬ ॥

ವಕ್ತುಂ ಸ್ವಚರಿತಂ ಪುಣ್ಯಂ ರಮ್ಯಮಾನಂದದಾಯಕಂ ।
ವಾಲ್ಮೀಕಿಶ್ಚಾಪಿ ಧನ್ಯಸ್ಸ ಭಾವಿ ಸಂವಾದಮಾವಯೋಃ　　　॥ ೮೭ ॥

ಯಃ ಪೂರ್ವಂ ವಿರಚಿತವಾನ್ ಸ್ವೀಯಕಾಲೇತ್ರ ಭೂತವತ್ ।
ತಥಾ ರಾಮಸ್ಯ ಚರಿತಂ ಪೂರ್ವಂ ರಾಮಾವತಾರತಃ　　　॥ ೮೮ ॥

---

೮೪. ಎಲೈ ಶಿಷ್ಯನೇ ! ಈ ರೀತಿಯಾಗಿ ಶ್ರೀರಾಮನು ಅನೇಕ ಉತ್ಕೃಷ್ಟವಾದ ಆಶ್ಚರ್ಯಗಳನ್ನು ತೋರಿಸಿರುವನು. ಅವೆಲ್ಲವೂ ಮನುಷ್ಯರು ಮಾಡಲು ಸಾಧ್ಯವಿಲ್ಲದುವು. ಇಂತಹವನ್ನು ಸಾವಿರಾರು ಬಾರಿ ಸಾವಿರಾರು ರೀತಿಯಲ್ಲಿ ಮಾಡಿರುವನು.

೮೫-೮೬. ವಾಲ್ಮೀಕಿಯು ಎಲ್ಲವನ್ನೂ ಬೇರೆಬೇರೆಯಾಗಿ ಪೂರ್ತಿಯಾಗಿ ವರ್ಣಿಸಿರುವನು. ನಾನು ಅವುಗಳಲ್ಲಿ ಕಾಲುಪಾಲನ್ನು ಕೊಂಚಕೊಂಚವಾಗಿ ತೆಗೆದುಕೊಂಡು ಆ ಕಥೆಗಳನ್ನು ನಿನಗೆ ಹೇಳಿದ್ದೇನೆ. ಆದೂ ಆ ಪ್ರಭುವಿನ ಅಪ್ಪಣೆಯಂತೆ ಹೇಳಿದ್ದೇನೆಯೇ ಹೊರತು ಬೇರೆಯಿಲ್ಲ. ರಾಮನ ಅಪ್ಪಣೆಯನ್ನು ಪಡೆದು ನಾನು ನಿನಗೆ ಅವನ ಚರಿತ್ರೆಯನ್ನು ಹೇಳುತ್ತಿರುವುದರಿಂದ ನೀನೇ ಧನ್ಯನು.

೮೭. ಈ ಆನಂದ ರಾಮಾಯಣವು ಪುಣ್ಯಪ್ರದವಾದುದು. ಆನಂದವನ್ನುಂಟುಮಾಡುತ್ತದೆ. ಇಂತಹದನ್ನು ರಾಮನ ಆಜ್ಞೆಯಿಂದ ಹೇಳುತ್ತಿರುವುದರಿಂದ ನಾನು ಧನ್ಯನು. ಕೇಳುತ್ತಿರುವುದರಿಂದ ನೀನೂ ಧನ್ಯನು.

೮೮-೮೯. ವಾಲ್ಮೀಕಿಯು ಈ ರಾಮಚರಿತ್ರೆಯನ್ನೂ ಮುಂದೆ ನಡೆಯುವ ನಮ್ಮಗಳ ಸಂವಾದ ರೂಪವನ್ನು ಭೂತಕಾಲವಂತೆ ಹೇಳಿರುವುದರಿಂದ ಅವನೂ ಧನ್ಯನು. ರಾಮನ ಈ ಚರಿತ್ರೆಯನ್ನು ರಾಮನ ಅವತಾರವನ್ನು ಮೊದಲು

ಏವಂ ಸಂವರ್ಣಿತಂ ಕೃತ್ಸ್ನಂ ಗೋಪ್ಯಂ ಯಚ್ಚ ಕೃತಂ ರಹಃ |
ನ ವಾಲ್ಮೀಕೋಪಮಃ ಕಶ್ಚಿತ್ಕವಿರ್ಭೂತೋ ಭವಿಷ್ಯತಿ ॥ ೮೯ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಉತ್ತರಾರ್ಧೇ ದಾಸೀವರದಾನಂ ತಥಾ ರಾಮಾದೀನಾಂ ದೇಹದ್ವಯಕರಣಂ ನಾಮೈಕ ವಿಂಶಸ್ಸರ್ಗಃ

ಮಾಡಿಕೊಂಡು ಈ ರೀತಿಯಾಗಿ ಹೇಳಿದ್ದೇನೆ. ಇದು ಗೋಪ್ಯವಾಗಿ ರಹಸ್ಯವಾಗಿ ರತಕ್ಕದ್ದು. ಇದನ್ನು ಮಾಡಿದ ವಾಲ್ಮೀಕಿಯಂತಹ ಕವಿಯು ಹಿಂದೆ ಹುಟ್ಟಿಯೂ ಇಲ್ಲ. ಮುಂದೆ ಹುಟ್ಟುವುದೂ ಇಲ್ಲ.

ಇಂತು ಶ್ರೀಮದ್ವಾಲ್ಮೀಕಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದಲ್ಲಿ ರಾಜ್ಯಕಾಂಡದ ಉತ್ತರಾರ್ಧದಲ್ಲಿ ದಾಸೀ ವರದಾನವೆಂಬ ರಾಮನ ದೇಹದ್ವಯಗ್ರಹಣವೆಂಬ ಇಪ್ಪತ್ತೊಂದನೆಯ ಸರ್ಗವು ಮುಗಿದುದು.

—o—o—

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಇಪ್ಪತ್ತೊಂದನೆಯ ಸರ್ಗದ ಸಾರಾಂಶವು

ಒಂದು ಸಾರಿ ದೂರದೇಶದ ನಾನಾ ಬಗೆಯ ಅಂತಸ್ಥಿನ ಹೆಂಗಸರು ಜಾನಕಿಯನ್ನು ನೋಡಲು ಚೈತ್ರಸ್ನಾನದ ನೆವವನ್ನು ಮಾಡಿಕೊಂಡು ಅಯೋಧ್ಯೆಗೆ ಬಂದರು. ಜಾನಕಿಯು ಅವರೆಲ್ಲರನ್ನೂ ಎದುರುಗೊಂಡು ಅಲಂಕಾರಗಳನ್ನು ಕೊಟ್ಟು ಗೌರವಿಸಿದಳು. ಅನಂತರ ಹೆಂಗಸರ ಸಭೆಯು ನಡೆಯಿತು. ಸೀತೆಯು ಸಿಂಹಾಸನದಲ್ಲಿ ಕುಳಿತಿದ್ದಳು. ಮಿಕ್ಕವರು ಸುತ್ತಲೂ ಕುಳಿತಿದ್ದರು. ಸೀತೆಯು ರಾಮನು ಮಾಡಿದ ಅನೇಕ ಬಗೆಯಾದ ಕೌತುಕಗಳನ್ನು ತಾನೇ ಹೇಳಿ ಸಂತೋಷಪಡಿಸಿದಳು.

ಆದರೆ ಸೀತೆಯು ರಾಮನ ಮದುವೆಯಾದ ವಿಷಯವನ್ನು ಆಕೆಯನ್ನೇ ಕೇಳಬೇಕೆಂಬ ಆಸೆಯಿಂದ ಆಕೆಯನ್ನು ಕೇಳಿದಳು. ಅದನ್ನು ಹೇಳಲು ಸೀತೆಗೆ ನಾಚಿಕೆಯಾಯಿತು. ಅದರಿಂದ ಆಕೆಯು ಹತ್ತಿರದಲ್ಲಿದ್ದ ತುಲಸಿಗೆ ತನ್ನ ಪಾಣಿಗ್ರಹಣದ ವಿಷಯವನ್ನು ಹೇಳುವಂತೆ ಆಜ್ಞೆ ಮಾಡಿ ಹೇಳಿಸಿದಳು. ಇದರಿಂದ ತುಷ್ಟರಾದ ಹೆಂಗಸರು ಸೀತೆಗೆ ಉಪಾಯನಗಳನ್ನು ಕೊಟ್ಟು ಗೌರವಿಸಿ ಆಕೆಯಿಂದ ಉಡುಗೆರೆಗಳನ್ನು ಹೊಂದಿ ಚೈತ್ರಸ್ನಾನವನ್ನು ಮುಗಿಸಿಕೊಂಡು ತಮ್ಮ ತಮ್ಮ ಸ್ಥಾನಗಳಿಗೆ ಹೊರಟುಹೋದರು.

ಒಂದುಸಾರಿ ವಸಿಷ್ಠನು ಪುರಾಣವನ್ನು ಹೇಳುತ್ತಿದ್ದಾಗ ಲವನು ಎದುರಿಗೆ ಕುಳಿತ್ತಿದ್ದನು. ಆಗ ತನಗೆ ವಾಲ್ಮೀಕಿಯ ಅನುಗ್ರಹದಿಂದ ಎಲ್ಲ ವಿಷಯವೂ ತಿಳಿದಿದ್ದರೂ ಜನರೆಲ್ಲರೂ ಕೇಳಿ ತಿಳಿದುಕೊಳ್ಳಲೆಂದು ಇಂತೆಂದು ಕೇಳಿದನು. ಎಲೈ ಗುರುವೆ ! ಪುಸ್ತಕಗಳಲ್ಲಿ ಒಂದೊಂದು ಪತ್ರದಲ್ಲಿಯೂ ಮೊದಲು ಶ್ರೀ ಎಂದು ಬರೆದು ಅನಂತರ ಪ್ರಕೃವಿಷಯವನ್ನು ಬರೆದು ಆ ಪತ್ರದ ಕೊನೆಯಲ್ಲಿ ರಾಮ ಎಂದು ಬರೆಯುತ್ತಾರೆ. ಮತ್ತೆ ಕೆಲವು ಕಾಗದಗಳಲ್ಲಿ ಶ್ರೀರಾಮ ಎಂದು ಒಂದೇ ಸ್ಥಳದಲ್ಲಿ ಬರಯುತ್ತಾರೆ. ಇದಕ್ಕೆ ಕಾರಣವೇನು ? ಎಂದನು.

ಅದಕ್ಕೆ ವಸಿಷ್ಠನು ಹೌದು. ನೀನು ಕೇಳಿದುದು ಸರಿ. ವ್ಯಾಸಮುನಿಯು ಪೂರ್ವದಲ್ಲಿ ಹದಿನೆಂಟು ಪುರಾಣಗಳನ್ನೂ ಅಂತೆಯೇ ಉಪಪುರಾಣಗಳನ್ನೂ ಮಾಡಿದನು. ಬೇರೆಬೇರೆ ಋಷಿಗಳು ಪ್ರಸಿದ್ಧವಾದ ಆರು ಶಸ್ತ್ರಗಳನ್ನೂ

ಮಾಡಿದರು. ಇವೆಲ್ಲವೂ ಕೂಡ ಹಿಂದೆ ವಾಲ್ಮೀಕಿಯು ಬರೆದ ಶ್ರೀರಾಮ ಚರಿತ್ರೆಯಲ್ಲಿದೆ ಅಲ್ಲಿಂದ ಸಂಗ್ರಹಿಸಿ ತೆಗೆದುದು ಎಂದು ತೋರಿಸಲು ಮೊದಲು ಶ್ರೀಕಾರವನ್ನೂ ಕೊನೆಯಲ್ಲಿ ರಾಮ ಎಂಬ ಶಬ್ದವನ್ನು ಬರೆಯುತ್ತಾರೆ.

ಅಂತೆಯೇ ಜನಗಳೂ ಲೋಕದಲ್ಲಿ ತಿಳಿದುಕೊಳ್ಳುತ್ತಾರೆ. ಇದೂ ಅಲ್ಲದೆ ಮತ್ತೊಂದು ಕಾರಣವೂ ಇರುವುದು. ಶ್ರೀರಾಮ ಎಂದು ಬರೆದರೆ ಅಜ್ಞಾನ ದಿಂದಾಗಲಿ ಭ್ರಾಂತಿಯಿಂದಾಗಲಿ ಅಶುದ್ಧವನ್ನು ಬರೆದಿದ್ದರೆ ಅದು ಅತಿ ಶುದ್ಧವಾಗುತ್ತದೆ. ಲೇಖಕನೂ ಕೂಡ ಆ ದೋಷಕ್ಕೆ ಒಳಗಾಗುವುದಿಲ್ಲ. ಎನ್ನಲು ಲವನು ನಮಸ್ಕರಿಸಿ ಸುಮ್ಮನಾದನು.

ಒಂದುಸಾರಿ ಶ್ರೀರಾಮನು ಮಂಚದ ಮೇಲೆ ಕುಳಿತುಕೊಂಡು ತಾಂಬೂಲವನ್ನು ಹಾಕಿಕೊಂಡನು. ತಾಂಬೂಲವನ್ನು ಹಾಕಿಕೊಂಡು ಅಗಿದಾಗ ಮೊದಲನೆಯಸಲ ಬಂದರಸವನ್ನು ನುಂಗಕೂಡದು ಎಂದು ಶಾಸ್ತ್ರವಿರುವುದು. ಈ ಶಾಸ್ತ್ರದಂತೆ ಆ ಮೊದಲನೆಯ ಬರಿಯರಸವನ್ನು ಉಗಿಯಲು ರಾಮನು ಉಗುಳು ದಾನಿಯನ್ನು ನೋಡಿದನು. ಅದು ಅಲ್ಲಿರಲಿಲ್ಲ. ಆಗ ಅವನ ಬಳಿಯಲ್ಲಿ ಸುಗುಣೆಯೆಂಬ ದಾಸಿಯಿದ್ದಳು. ಆಕೆಯು ಇದನ್ನು ನೋಡಿ ಒಡನೆಯೇ ಬೊಗಸೆಯನ್ನು ಒಡ್ಡಿದಳು ರಾಮನು ಆ ಬೊಗಸೆಗೆ ಅದನ್ನು ಉಗಿದನು. ಈ ದಾಸಿಯು ಆ ರಾಮನ ಎಂಜಲು ಪವಿತ್ರಾವಾದುದೆಂದೂ ದೈವಯೋಗದಿಂದ ಸಿಕ್ಕಿದ ಮಹಾಪ್ರಸಾದವೆಂದೂ ಭಾವಿಸಿ ಅದನ್ನು ನುಂಗಿದಳು. ಇದರಿಂದ ರಾಮನಿಗೆ ಬಹುಸಂತೋಷವಾಯಿತು. ಆಗ ಅವನು ಎಲೈ ದಾಸಿಯೆ ! ನಿನಗೇನು ಬೇಕೋ ಅಂತಹ ವರವನ್ನು ಕೇಳಿಕೋ. ಕೊಡುತ್ತೇನೆ. ಎಂದನು. ಅದಕ್ಕೆ ಆ ದಾಸಿಯು ಎಲೈ ರಘೂತ್ತಮನೆ ! ಈ ಜನ್ಮದಲ್ಲಿ ನೀನು ಏಕಪತ್ನೀ ವ್ರತವನ್ನು ಅವಲಂಬಿಸಿದ್ದೀಯೆ. ಮತ್ತೊಂದು ಜನ್ಮದಲ್ಲಿಯಾದರೂ ನಿನ್ನ ಅಂಗಸಂಗವನ್ನು ನನಗೆ ದಯಪಾಲಿಸು ಎಂದಳು. ಅದನ್ನು ಕೇಳಿದ ರಾಮನು ನಾನು ಮುಂದೆ ಗೋಕುಲದಲ್ಲಿ ಕೃಷ್ಣನಾಗಿ ಅವತರಿಸುವೆನು. ಆಗ ನೀನು ರಾಧೆಯೆಂಬ ಹೆಸರಿನಿಂದ ಗೋಪಪತ್ನಿಯಾಗಿರುತ್ತೀಯೆ. ಆಗ ನೀನು ನನ್ನೊಡನೆ ಬಹುಕಾಲದವರೆಗೆ ಕ್ರೀಡಿಸುತ್ತೀಯೆ. ಸಂಶಯುವಿಲ್ಲ. ಎನ್ನಲು ರಾಮನ ಈ ವರದಿಂದ ದಾಸಿಯು ಸಂತೋಷಗೊಂಡು ಸುಮ್ಮನಾದಳು.

ಒಂದುಸಾರಿ ಶ್ರೀರಾಮನು ಸಭೆಯಲ್ಲಿ ಕುಳಿತಿದ್ದನು. ಆಗ ಒಬ್ಬ ಬ್ರಹ್ಮಚಾರಿಯು ಆ ಸಭೆಗೆ ಬಂದನು. ಅವನನ್ನು ನೋಡಿ ರಾಮನು

ಎದುರುಗೊಂಡು ಪೂಜಿಸಿ ಆಸನದಲ್ಲಿ ಕೂರಿಸಿ ತಾವಾರು ? ಏಕೆ ಬಂದಿರಿ ? ಎಂದು ಕೇಳಿದರು. ಅದಕ್ಕೆ ಆ ಬ್ರಹ್ಮಚಾರಿಯು ಅಯ್ಯಾ ? ರಘುರಾಮನೇ ನಾನು ವಾಲ್ಮೀಕಿಮಹರ್ಷಿಯ ಶಿಷ್ಯನು. ವಾಲ್ಮೀಕಿಯ ಆಶ್ರಮದಿಂದ ಬಂದಿರುವೆನು. ಆ ವಾಲ್ಮೀಕಿಯು ಯಜ್ಞಮಾಡಬೇಕೆಂದಿರುವೆನು. ನಿನ್ನನ್ನು ಈಗಲೇ ಎಲ್ಲರೊಡನೆಯೂ ಕರೆದುಕೊಂಡು ಬರುವಂತೆ ನನ್ನನ್ನು ಕಳುಹಿಸಿರುವನು. ಈಗ ಪ್ರಯಾಣವನ್ನು ಬೆಳೆಸು ಎಂದನು.

ಈ ಬ್ರಹ್ಮಚಾರಿಯು ಸಭೆಯಲ್ಲಿ ಇಷ್ಟು ಮಾತುಗಳನ್ನು ಆಡುತ್ತಿರುವಾಗಲೇ ಮತ್ತೊಬ್ಬ ಬ್ರಹ್ಮಚಾರಿಯು ಅಲ್ಲಿಗೆ ಬಂದನು. ಒಡನೆಯೇ ರಾಮನು ಅವನನ್ನೂ ಎದುರುಗೊಂಡು ಪೂಜಿಸಿ ಆಸನದಲ್ಲಿ ಕುಳ್ಳಿರಿಸಿ ತಾವಾರು ಏಕೆ ಬಂದಿರಿ ? ಎಂದನು. ಆದಕ್ಕೆ ಅವನು, ನಾನು ವಿಶ್ವಾಮಿತ್ರ ಮಹರ್ಷಿಯ ಶಿಷ್ಯನು. ಅವನು ಯಾಗವನ್ನು ಮಾಡಬೇಕೆಂದಿದ್ದಾನೆ. ಅದಕ್ಕೆ ನೀನು ಪರಿವಾರದೊಡನೆ ಈಗಲೇ ಬರಬೇಕಂತೆ ಹೊರಡು ಎಂದನು. ಆಗ ರಾಮನು ನಗುತ್ತ ಆ ಬ್ರಹ್ಮಚಾರಿಗಳಿಬ್ಬರಿಗೂ ಬರುತ್ತೇನೆಂದು ಹೇಳದರು ಆಗ ಜನಗಳು ಇದನ್ನು ಕೇಳಿ ವಿಶ್ವಾಮಿತ್ರನ ಮತ್ತು ವಾಲ್ಮೀಕಿಯ ಆಶ್ರಮಗಳು ಬೇರೆಬೇರೆಯಾಗಿ ಬೇರೆ ಬೇರೆ ದಿಕ್ಕುಗಳಲ್ಲಿ ಇರುವುವು. ಇಬ್ಬರಿಗೂ ಬರುತ್ತೇನೆಂದು ಈ ರಾಮನು ಹೇಳಿದನು. ಒಬ್ಬನೇ ಎರಡುಕಡೆಗೂ ಹೇಗೆ ಹೋಗುವನು ? ಎಂದು ಆಶ್ಚರ್ಯ ಪಡುತ್ತಿದ್ದರು. ಆದಕ್ಕೆ ಕೆಲವರುಆ ರಾಮನು ಕಾಡಿನಲ್ಲಿದ್ದ ಹೆಂಗಸರಿಗೆ ಒಬ್ಬೊಬ್ಬ ರಾಮನಾಗಿ ದರ್ಶನವನ್ನು ಕೊಡಲಿಲ್ಲವೆ ? ಆ ರಾಮನು ಲಂಕೆಯಿಂದ ಅಯೋಧ್ಯೆಗೆ ಬಂದು ಭರತನಿಗೆ ದರ್ಶನವನ್ನು ಕೊಟ್ಟಾಗ ಅಲ್ಲಿದ್ದವರಿಗೆ ಒಬ್ಬೊಬ್ಬ ರಾಮನಾಗಿ ದರ್ಶನವನ್ನು ಕೊಡಲಿಲ್ಲವೇ ! ಹಾಗೆಯೇ ಈಗಲೂ ಇಬ್ಬರು ರಾಮರಾಗಿ ಎರಡು ಕಡೆಗೂ ಹೋಗುವನು ಎನ್ನುತ್ತಿದ್ದರು.

ಅಲ್ಲಿದ್ದ ಜನರು ಇಂತೆಂದು ಮಾತನಾಡುತ್ತಿರಲು ರಾಮನು ಲಕ್ಷ್ಮಣನನ್ನು ಕುರಿತು ಎಲೈ ಲಕ್ಷ್ಮಣನೇ ! ಇಂದು ಭೋಜನವಾದ ಕೂಡಲೇ ಪ್ರಯಾಣವನ್ನು ಮಾಡಬೇಕು. ಆದ್ದರಿಂದ ಸೇವಕರು ಡೇರೆ ಮುಂತಾದವನ್ನು ತೆಗೆದುಕೊಂಡು ಹೊರಗೆ ಹೊರಡಲಿ. ಆದ್ದರಿಂದ ತುತೂರಿಯನ್ನು ಊದಿಸು ಎಂದನು. ರಾಮನ ಮಾತಿನಂತೆ ಲಕ್ಷ್ಮಣನು ತುತೂರಿಯನ್ನು ಊದಿಸಿದನು, ಆದರಂತೆ ಸೈನ್ಯದವರೂ ಸೇವಕರೂ ಡೇರೆಗಳನ್ನು ತೆಗೆದುಕೊಂಡು ಹೊರಕ್ಕೆ ಹೊರಟರು.

ರಾಮನು ಆ ಬ್ರಹ್ಮಚಾರಿಗಳೊಡನೆ ಒಳಗೆ ಹೋಗಿ ಊಟಮಾಡಿ ಸೀತೆಗೆ ಎಲ್ಲ ವಿಷಯಗಳನ್ನೂ ಹೇಳಿದನು.

ಅನಂತರ ಸೀತೆಯನ್ನೂ ಆಕೆಯ ಓರಗಿತ್ತಿಯರನ್ನೂ ಆನೆಗಳ ಮೇಲೆ ಕೂರಿಸಿ ಹೊರಡುವಂತೆ ಹೇಳಿದನು. ಮಿಕ್ಕವರು ಯಥಾಯೋಗ್ಯವಾಗಿ ಹೊರಟರು. ತಾನೂ ತನ್ನ ತಮ್ಮಂದಿರೂ ಮಕ್ಕಳೂ ಆನೆಗಳ ಮೇಲೆಯೇ ಹೊರಟು ಊರಿನ ಹೊರಗೆ ನಿರ್ಮಿಸಿದ್ದ ಡೇರೆಗಳಲ್ಲಿ ಬಂದು ಬಿಡಾರವನ್ನು ಮಾಡಿದರು.

ಅಲ್ಲಿ ಆ ದಿನದ ರಾತ್ರಿಯನ್ನು ಕಳೆದರು. ಬೆಳಗಾಗುತ್ತಲೂ ಸ್ನಾನ ಸಂಧ್ಯಾ ವಂದನೆಗಳನ್ನು ಮುಗಿಸಿಕೊಂಡು ವಾಹನಗಳ ಮೇಲೆ ಕುಳಿತು ಮುಂದಕ್ಕೆ ಪ್ರಯಾಣ ಮಾಡಿದರು. ಐದಾರು ಮೈಲಿಗಳಷ್ಟು ದೂರ ಕಳೆದ ಮೇಲೆ ವಿಶ್ವಾಮಿತ್ರನ ಆಶ್ರಮದ ಕಡೆಗೆ ಒಂದು ದಾರಿಯೂ ವಾಲ್ಮೀಕಿಯ ಆಶ್ರಮದ ಕಡೆಗೆ ಮತ್ತೊಂದು ದಾರಿಯೂ ಒಡೆಯಿತು.

ಇದನ್ನು ನೋಡಿ ಆ ರಾಮನು ಸೈನ್ಯಗಳ ದೇಹವೂ ತನ್ನ ದೇಹವೂ ಒಟ್ಟಿನಲ್ಲಿ ಅಲ್ಲಿ ಬಂದಿರುವವರೆಲ್ಲರೂ ಎರಡೆರಡು ದೇಹಗಳನ್ನು ಹೊಂದುವಂತೆ ಮಾಡಿದನು. ಅನಂತರ ಒಂದು ಪಂಗಡವು ಒಂದು ದಾರಿಯಲ್ಲಿಯೂ ಮತ್ತೊಂದು ಪಂಗಡವು ಮತ್ತೊಂದು ದಾರಿಯಲ್ಲಿಯೂ ಹೊರಟಿತು. ಈ ಬ್ರಹ್ಮಚಾರಿಗಳಿಬ್ಬರೂ ಕೂಡ ಎರಡೆರಡು ದೇಹಗಳನ್ನು ಹೊಂದಿ ಅವರು ಎರಡೂ ಕಡೆಗೂ ಜೋದರು. ಆ ಸಮೂಹದಲ್ಲಿದ್ದ ರಾಮನ ಮೊದಲುಗೊಂಡು ಕೀಳುಜಾತಿಯ ನಾಯಿಯವರೆಗೂ ತಮ್ಮ ತಮ್ಮ ದೇಹಗಳು ಎರಡು ಬಗೆಯಾಗಿರುವುದನ್ನು ನೋಡಿ ಎಲ್ಲರೂ ಆಶ್ಚರ್ಯಪಡುತ್ತಿದ್ದರು. ಹಾಗೆ ಹೊರಟ ಪಂಗಡವು ಆಯಾ ಋಷಿಗಳ ಆಶ್ರಮಕ್ಕೆ ಹೋಯಿತು. ಅಲ್ಲಿ ಅವರನ್ನು ಆ ಋಷಿಗಳು ಗೌರವಿಸಿದರು. ಯಾಗವೆಲ್ಲವೂ ಪೂರ್ತಿಯಾಗಿ ಮುಗಿಯಿತು. ಹಿಂದಿರುಗಿ ಪಟ್ಟಣಕ್ಕೆ ಎರಡು ಕಡೆಯ ಗುಂಪೂ ಹೊರಟಿತು. ಹೊರಟು ಬಂದವರು ಮೊದಲು ತಾವು ಎರಡೆರಡು ದೇಹವನ್ನು ಹೊಂದಿದ್ದ ಕವಲುದಾರಿಯ ಬುಡಕ್ಕೆ ಬಂದರು. ಅಲ್ಲಿ ಅವರ ಎರಡೆರಡು ದೇಹಗಳು ಪೂರ್ವವಂತೆ ಒಂದಾದುವು. ಅಲ್ಲಿಂದ ಹೊರಟು ಅಯೋಧ್ಯೆಗೆ ಬಂದರು. ಹೀಗೆ ಶ್ರೀರಾಮನು ಅನೇಕ ಬಗೆಯಾದ ಆಶ್ಚರ್ಯಕರವಾದ ಕಾರ್ಯಗಳನ್ನು ಮಾಡಿರುವನು. ಅವೆಲ್ಲವನ್ನೂ ವಾಲ್ಮೀಕಿಯು ವಿಸ್ತಾರವಾಗಿ ಹೇಳಿರುವನು.

—·—○—

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ ಉತ್ತರಾರ್ಧೇ ದ್ವಾವಿಂಶಸ್ಸರ್ಗಃ

॥ ಶ್ರೀರಾಮದಾಸ ಉವಾಚ ॥

ಇದಾನೀಂ ರಾಮಚಂದ್ರಸ್ಯ ಲೀಲಾಕೌತುಕಮುತ್ತಮಂ ।
ಅನ್ಯದ್ರಮ್ಯಂ ವರ್ಣ್ಯತೇ ಹಿ ಮಯಾ ತಚ್ಛೃಣು ಸಾದರಂ ॥ ೧ ॥

ಏಕದಾ ರಾಘವಸ್ತಸ್ಥೌ ಸಭಾಯಾಮಾಸನೋಪರಿ ।
ಬಂಧುಭಿರ್ಮಂತ್ರಿವರ್ಗೈಶ್ಚ ಪೌರೈರ್ಜಾನಪದೈಸ್ಸಹ ॥ ೨ ॥

ಪುತ್ರಾಭ್ಯಾಂ ಚ ಸುಹೃದ್ಭಿಶ್ಚ ಮಿತ್ರೈರ್ಮಂತ್ರಿಜನೈಸ್ಸಹ ।
ಏತಸ್ಮಿನ್ನಂತರೇ ಭೂರಿಕೀರ್ತಿನಾ ಸುಹೃದಾ ಚರೈಃ ॥ ೩ ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ಇಪ್ಪತ್ತೆರಡನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು--ಎಲೈ ಶಿಷ್ಯನೇ! ಶ್ರೀರಾಮಚಂದ್ರನು ಮಾಡಿದ ಮತ್ತೊಂದು ಕೌತುಕವನ್ನು ವರ್ಣಿಸುತ್ತೇನೆ. ಅದನ್ನು ಮನಸ್ಸಿಟ್ಟು ಕೇಳು.

೨-೪. ಶ್ರೀರಾಮನು ಒಂದುಸಾರಿ ಸಭೆಯಲ್ಲಿ ಸಿಂಹಾಸನದಮೇಲೆ ಕುಳಿತಿದ್ದನು. ತಮ್ಮಂದಿರು, ಮಂತ್ರಿಗಳು, ಪೌರರು, ಜಾನಪದರು, ಮಕ್ಕಳು, ಸ್ನೇಹಿತರು, ಮಿತ್ರರು ಎಲ್ಲರೂ ಈ ಸಭೆಯಲ್ಲಿ ಯಥೋಚಿತವಾಗಿ ಕುಳಿತಿದ್ದರು. ಹೀಗೆ ಕುಳಿತಿರುವ ಸಮಯದಲ್ಲಿ ಅವನ ಸ್ನೇಹಿತನಾದ ಭೂರಿಶ್ರವಸ್ಸು ದೂತರ

ದ್ರಾಕ್ಷಾಫಲಾದಿಭಿಃ ಪೂರ್ಣಾಸ್ತಥಾ ಪುಷ್ಪೈಸ್ಸುಪೂರಿತಾಃ ।
ಕರಂಡಿಕಾಃ ಪ್ರೇಷಿತಾಶ್ಚ ರಾಘವಾರ್ಥಂ ಸಹಸ್ರಶಃ ॥ ೪ ॥

ತಾಸ್ಸರ್ವಾ ರಾಘವೋ ದೃಷ್ಟ್ವಾ ಪ್ರೇಷಯಾಮಾಸ ಜಾನಕೀಂ ।
ಯುಕ್ತಾ ಸಖೀಭಿಸ್ಸೀತಾ ಸಾ ಕ್ರೀಡಾಶಾಲಾಸ್ಥಿತಾ ಮುದಾ ॥ ೫ ॥

ದೃಷ್ಟ್ವಾ ಕರಂಡಿಕಾಸ್ಸರ್ವಾಸ್ತ್ವೇಕಾಮುದ್ಘಾಟಯತ್ತದಾ ।
ತಸ್ಯಾಂ ಹಿ ಕುಸುಮಾನ್ಯೇವ ದೃಷ್ಟ್ವಾ ರಮ್ಯಾಣಿ ಜಾನಕೀ ॥ ೬ ॥

ಕರೇಣಾದಾಯ ಪದ್ಮಂ ಚ ರಾಘವಾಯಾರ್ಪಣಂ ವಿನಾ ।
ಸಾ ತತ್ಸುಗಂಧಂ ಜಗ್ರಾಹ ವಾರಂ ವಾರಂ ಮುದಾನ್ವಿತಾ ॥ ೭ ॥

ಕರಂಡಿಕಾಂ ಪೂರ್ವವಚ್ಚ ಸಮಾಚ್ಛಾದ್ಯ ವಿದೇಹಜಾ ।
ಸ್ಥಾಪಯಾಮಾಸ ಗೇಹೇಷು ಸರ್ವಾಸ್ತಾಶ್ಚ ಕರಂಡಿಕಾಃ ॥ ೮ ॥

ಕೈಯ್ಯಲ್ಲಿ ದ್ರಾಕ್ಷಿಯೇ ಮುಂತಾದ ಹಣ್ಣುಗಳಿಂದ ಕೂಡಿದ ಮತ್ತು ಹೂವುಗಳಿಂದ ಕೂಡಿದ ಬುಟ್ಟಿಗಳನ್ನು ಕಳುಹಿಸಿದನು. ಅಂತಹ ಸಾವಿರಾರು ಬುಟ್ಟಿಗಳನ್ನು ಆ ಚರರು ರಾಮುನ ಮುಂದೆ ತಂದಿಟ್ಟರು.

೫. ರಾಘವನು ಅವೆಲ್ಲವನ್ನೂ ನೋಡಿ ಅನಂತರ ಅವೆಲ್ಲವನ್ನೂ ಸೀತೆಯ ಬಳಿಗೆ ಕಳುಹಿಸಿದನು. ಆಕೆಯು ಸಖಿಯರೊಡನೆ ಕ್ರೀಡಾಶಾಲೆಯಲ್ಲಿದ್ದಳು. ಆಗ ಹೀಗೆ ಅನೇಕವಾಗಿ ಬಂದ ಈ ಬುಟ್ಟಿಗಳನ್ನು ನೋಡಿದಳು.

೬. ಆ ಎಲ್ಲಾ ಬುಟ್ಟಿಗಳನ್ನು ನೋಡಿ ಅವುಗಳಲ್ಲಿ ಒಂದನ್ನು ಬಿಚ್ಚಿಸಿದಳು. ಅದರಲ್ಲಿ ರಮ್ಯವಾದ ಹೂವುಗಳಿದ್ದುವು. ಅವನ್ನು ನೋಡಿ ಜಾನಕಿಯು ಬಹುವಾಗಿ ಸಂತೋಷಪಟ್ಟಳು.

೭. ಅದರಲ್ಲಿರುವ ಹೂಗಳಲ್ಲಿ ಒಂದು ಪದ್ಮವನ್ನು ತೆಗೆದುಕೊಂಡು ಅದನ್ನು ರಾಮನಿಗೆ ಅರ್ಪಿಸುವುದಕ್ಕಿಂತಲೂ ಮೊದಲು ತಾನೇ ಅದರ ಸುವಾಸನೆಯನ್ನು ಮೂಸಿನೋಡಿದಳು. ಬಹು ಚೆನ್ನಾಗಿದ್ದುದರಿಂದ ಸಂತೋಷಪಟ್ಟು ಮತ್ತೆ ಮತ್ತೆ ಮೂಸಿ ವಾಸನೆಯನ್ನು ತೆಗೆದುಕೊಂಡಳು.

೮-೯. ಅನಂತರ ಆ ಬುಟ್ಟಿಯನ್ನು ಮೊದಲಿನಂತೆಯೇ ಮುಚ್ಚಿಸಿ ಎಲ್ಲಾ ಬುಟ್ಟಿಗಳನ್ನೂ ಮನೆಯೊಳಗೆ ಇಡಿಸಿದಳು. ರಾಮನು ಸಭೆಯಲ್ಲಿದ್ದರೂ ಈ

ತದ್ವೃತ್ತಂ ರಾಮಚಂದ್ರೋಽಪಿ ಸರ್ವಂ ಜ್ಞಾತ್ವಾ ಸಭಾಸ್ಥಿತಃ ।
ಚಿತ್ತೇ ವಿಚಾರಯಾಮಾಸ ವಾರಂ ವಾರಂ ಮುದಾನ್ವಿತಃ ॥ ೯ ॥

ಸೀತಯೇದಂ ಕೃತಂ ಕರ್ಮ ಯೋಗ್ಯಂ ಭುವಿ ಸ್ಮೃತಂ ನ ಹಿ ।
ಯನ್ಮಯಾ ಪತಿನಾಭುಕ್ತಂ ಪದ್ಮಮಾಸ್ವಾದಿತಂ ತಯಾ ॥ ೧೦ ॥

ಅಗ್ರೇ ಚೈವಂ ಸ್ತ್ರಿಯಸ್ಸರ್ವಾಃ ಕರಿಷ್ಯಂತ್ಯತ್ರ ವೈ ಭುವಿ ।
ಸೀತಾದರ್ಶಿತಮಾರ್ಗೇಣ ತಸ್ಮಾಚ್ಛಿಕ್ಷಾಂ ಕರೋಮ್ಯಹಂ ॥ ೧೧ ॥

ಏವಂ ಮನಸಿ ನಿಶ್ಚಿತ್ಯ ತತಸ್ಸ ರಘುನಂದನಃ ।
ತೂಷ್ಣೀಮೇವ ಗೃಹಂ ಗತ್ವಾ ಪೂರ್ವವಜ್ಜಾನಕೀಂ ಮುದಾ ॥ ೧೨ ॥

ರಂಜಯಾಮಾಸ ವಿವಿಧೈರ್ನಾನಾಕ್ರೀಡಾದಿಕೌತುಕೈಃ ।
ಸೀತಾಪಿ ಪೇಟಿಕಾಸ್ಸರ್ವಾಸ್ಸಮುದ್ಘಾಟ್ಯ ಪೃಥಕ್ ಪೃಥಕ್ ॥ ೧೩ ॥

ವಿಷಯವೆಲ್ಲವನ್ನೂ ತಿಳಿದುಕೊಂಡನು. ಸಂತೋಷಪಡುತ್ತ ಮತ್ತೆ ಮತ್ತೆ ಇಂತೆಂದು ಯೋಚಿಸುತ್ತಲೇ ಇದ್ದನು.

೧೦. ಪತಿಯಾದ ನಾನು ಅನುಭವಿಸದಿರುವ ಈ ಹೂವಿನ ವಾಸನೆಯನ್ನು ತೆಗೆದುಕೊಂಡ ಸೀತೆಯು ಮಾಡಿದ ಕೆಲಸವು ತಪ್ಪಾಗಿರುವುದು. ಇದು ಪ್ರಪಂಚಕ್ಕೇ ನಿಂದಿತವು. ನನಗೆ ಕೊಡದೆ ಅವಳು ವಾಸನೆಯನ್ನು ಮೂಸಿನೋಡಬಾರದಾಗಿದ್ದಿತು.

೧೧ ಇದು ಸೀತೆಯು ಮಾಡಿದ ಕೆಲಸವೆಂದು ತಿಳಿದು ಲೋಕದಲ್ಲಿರುವ ಹೆಂಗಸರು ಹೀಗೆಯೇ ಮಾಡಿಯಾರು? ಆದ್ದರಿಂದ ಇದಕ್ಕೆ ತಕ್ಕಶಿಕ್ಷೆಯನ್ನು ಆಕೆಗೆ ವಿಧಿಸಬೇಕು.

೧೨. ಈ ರೀತಿಯಾಗಿ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ಅನಂತರ ಶ್ರೀರಾಮನು ಏನೂ ತಿಳಿಯದವನಂತೆ ಮನೆಗೆ ಹೋಗಿ ಎಂದಿನಂತೆ ಸೀತೆಯೊಡನೆ ಸರಸಸಲ್ಲಾಪವನ್ನು ಮಾಡುತ್ತಿದ್ದನು.

೧೩. ಅನೇಕ ಬಗೆಯ ಆಟಗಳನ್ನಾಡುತ್ತ ರಂಜಕವಾದ ಮಾತುಗಳನ್ನು ಆಡುತ್ತಿರಲು ಸೀತೆಯು ಆ ಪೆಟ್ಟಿಗೆಗಳೆಲ್ಲವನ್ನೂ ತರಿಸಿ ಆ ರಾಮನ ಮುಂದೆ ಅವನ್ನು ಸಾವಿರ ಸಂಖ್ಯೆಯಲ್ಲಿಟ್ಟಳು.

ಆನೀಯ ದರ್ಶಯಾಮಾಸ ಫಲಪುಷ್ಪಾದಿಪೂರಿತಾಃ ।
ರಾಮೋಽಪಿ ದೃಷ್ಟ್ವಾ ತಾಸ್ಸರ್ವಾಸ್ಸಮುದ್ಘಾಟ್ಯ ಪೃಥಕ್ ಪೃಥಕ್ ॥ ೧೪ ॥

ಪ್ರೇಷಯಾಮಾಸ ಬಂಧೂನಾಂ ಗೇಹೇಷು ದಶಪಂಚ ಚ ।
ಫಲಾದಿನಾಂ ಪೇಟಿಕಾಶ್ಚ ನಾನಾಚಿತ್ರವಿಚಿತ್ರಿತಾಃ ॥ ೧೫ ॥

ಮಾತೃಣಾಂ ಸಕಲಾನಾಂ ಚ ಗೃಹೇಷ್ವಪಿ ತಥಾ ಪುನಃ ।
ಪುತ್ರಯೋಸ್ಸುಹೃದಾಂ ಚಾಪಿ ಮಂತ್ರಿಣಾಂ ಚ ಗುರೋಸ್ತಥಾ ॥ ೧೬ ॥

ಪೌರಾಣಾಂ ಚಾಪಿ ಗೇಹೇಷು ಸೇವಕಾನಾಂ ಗೃಹೇಷ್ವಪಿ ।
ದಾಸೀಭ್ಯಶ್ಚ ಶುಭಾ ದತ್ತ್ವಾ ಪೇಟಿಕಾಸ್ಸಪ್ತ ಪಂಚ ಚ ॥ ೧೭ ॥

ಸೀತಾಯೈ ಶತಶೋ ದತ್ವಾ ಮುದಾ ತಾಭ್ಯೋ ರಘೂತ್ತಮಃ ।
ಫಲಾನಿ ದಶ ಪಂಚಾಷ್ಟ ಸ್ವಯಂ ಭುಕ್ತ್ವಾ ತತಃ ಪರಂ ॥ ೧೮ ॥

---

೧೪. ಹಣ್ಣು ಹೂಗಳಿರುವ ಅವನ್ನು ಅವನಿಗೆ ತೋರಿಸಿದಳು. ರಾಮನು ಅವನ್ನು ನೋಡಿ ಒಂದೊಂದನ್ನೂ ಬಿಚ್ಚಿಸಿ ನೋಡಿದನು.

೧೫. ಅವುಗಳಲ್ಲಿ ತಮ್ಮಂದಿರ ಮನೆಗೆ ಅವರವರಿಗೆ ಗೌರವಕ್ಕೂ ಜನಗಳಿರುವುದಕ್ಕೂ ಯೋಗ್ಯವಾಗಿ ಇರುವಂತೆ ಐದು, ಹತ್ತು, ಎಂಟು, ಆರು ಈ ರೀತಿಯಾಗಿ ಆ ಹಣ್ಣುಗಳ ಪೆಟ್ಟಿಗೆಯನ್ನೂ ಹೂವುಗಳ ಪೆಟ್ಟಿಗೆಯನ್ನೂ ಕಳುಹಿಸಿದನು.

೧೬. ಅನಂತರ ತಾಯಿಯರೆಲ್ಲರ ಮನೆಗೂ ಯಥಾಯೋಗ್ಯವಾಗಿ ಕಳುಹಿಸಿದನು. ಮಕ್ಕಳಿಗೂ ಸ್ನೇಹಿತರಿಗೂ ಮಂತ್ರಿಗಳಿಗೂ ಗುರುವಿಗೂ ಕೂಡ ಕೆಲಕೆಲವನ್ನು ಕೊಟ್ಟು ಕಳುಹಿಸಿದನು.

೧೭-೧೮. ಅಲ್ಲದೆ ಪಟ್ಟಣಿಗರಿಗೂ ಸೇವಕರಿಗೂ ದಾಸಿಯರಿಗೂ ಕೂಡ ಐದಾರು ಪೆಟ್ಟಿಗೆಗಳನ್ನು ಕೊಟ್ಟನು. ಅವುಗಳಲ್ಲಿ ಅನೇಕವನ್ನು ಸೀತೆಗೂ ಕೊಟ್ಟನು. ಅಲ್ಲದೆ ಅವುಗಳಲ್ಲಿ ಎಂಟು ಹತ್ತು ಹಣ್ಣುಗಳನ್ನು ತಾನೂ ತಿಂದನು.

ಪದ್ಮಾದೀನಿ ಸುಪುಷ್ಪಾಣಿ ವಿಭಜ್ಯ ಪೂರ್ವವತ್ಪುನಃ ।
ಸೀತಾಯೈ ಶತಶೋ ದತ್ವಾ ಸ್ವಯಮಂಗೀಚಕಾರ ಸಃ ॥ ೧೯ ॥

ಅಜ್ಞಾತ ಇವ ತದ್ವೃತ್ತಂ ಗೋಪಯಾಮಾಸ ಚೇತಸಿ ।
ಅಥೈಕದಾ ಜನಕಜಾ ಹರಿತಿಥ್ಯಾಮುಪೋಷಣಂ ॥ ೨೦ ॥

ಕೃತ್ವಾ ಪರೇ ದಿನೇ ಸ್ನಾತ್ವಾ ಗತ್ವಾ ಬೃಂದಾವನಾಂತಿಕಂ ।
ತುಲಸೀಂ ಪೂಜಯಿತ್ವಾ ತಾಂ ಸಾ ಚಕಾರ ಪ್ರದಕ್ಷಿಣಾಃ ॥ ೨೧ ॥

ಏತಸ್ಮಿನ್ನಂತರೇ ಸೀತಾ ನಿರಾಹಾರಾ ಶ್ರಮಾನ್ವಿತಾ ।
ಕೃತ್ವಾತ್ರ್ಯ ಪ್ರದಕ್ಷಿಣಾಮಾರ್ಗಂ ಕಿಂಚಿದೇವ ಚಚಾಲ ಸಾ ॥ ೨೨ ॥

ಚಲಿತಾಯಾಶ್ಚ ಸೀತಾಯಾಃ ಪಲ್ಲವೇನ ಹಿ ವಾಸಸಃ ।
ಪತ್ರಮೇಕಂ ತುಲಸ್ಯಾಶ್ಚ ಪಪಾತ ಭುವಿ ವೈ ತದಾ ॥ ೨೩ ॥

---

೧೯. ಅವುಗಳಲ್ಲಿದ್ದ ಸುಗಂಧವಾದ ಪದ್ಮಗಳನ್ನೂ ಇತರ ಹೂವುಗಳನ್ನೂ ಭಾಗಮಾಡಿ ಮೊದಲಿನಂತೆಯೇ ಕೊಟ್ಟನು. ಸೀತೆಗೂ ಕೂಡ ಬಹುವಾಗಿ ಕೊಟ್ಟನು. ತಾನೂ ಕೆಲವನ್ನು ತೆಗೆದುಕೊಂಡನು.

೨೦. ಸೀತೆಯು ಆ ಪದ್ಮದ ವಾಸನೆಯನ್ನು ನೋಡಿದುದನ್ನು ಮಾತ್ರ ಮನಸ್ಸಿನಲ್ಲಿಯೇ ಇಟ್ಟುಕೊಂಡು ಗುಟ್ಟಾಗಿದ್ದನು. ಹೀಗಿರಲು ಒಂದು ದಿನ ಸೀತೆಯು ಹರಿವಾಸರದಲ್ಲಿ ಎಂದರೆ ಏಕಾದಶಿಯ ದಿನ ಉಪವಾಸಮಾಡಿದಳು.

೨೧. ಮಾರಣೆಯ ದಿನದಲ್ಲಿ ಸ್ನಾನಮಾಡಿ ಬೃಂದಾವನದ ಹತ್ತಿರಕ್ಕೆ ಹೋಗಿ ತುಲಸಿಯನ್ನು ಪೂಜಿಸಿ ಅದಕ್ಕೆ ಪ್ರದಕ್ಷಿಣೆಯನ್ನು ಮಾಡಿದಳು.

೨೨-೨೩. ಸೀತೆಗೆ ಹಿಂದಿನ ದಿನ ಆಹಾರವಿಲ್ಲದಿದ್ದುದರಿಂದ ಬಹು ಶ್ರಮವಾಗಿದ್ದಿತು. ಪ್ರದಕ್ಷಿಣೆಮಾಡುತ್ತಿರುವಾಗ ತತ್ತರಿಸಿ ಅಲ್ಲಾಡಿದಳು. ಸೀತೆಯು ತತ್ತರಿಸಿದಾಗ ಆಕೆಯ ಬಟ್ಟೆಯ ಸೆರಗು ತುಲಸಿಗೆ ತಗಲಿ ಆ ತುಲಸಿಯ ಒಂದು ಎಲೆಯು ಕಿತ್ತು ಬಂದು ನೆಲದ ಮೇಲೆ ಬಿದ್ದಿತು.

ತತ್ಪತ್ರಂ ಜಾನಕೀ ದೃಷ್ಟ್ವಾ ದ್ವಾದಶ್ಯಾಂ ತ್ರುಟಿತಂ ಶುಭಂ ।
ಜ್ಞಾತ್ವಾಧರ್ಮಃ ಕೃತಶ್ಚೇತಿ ಭಯಭೀತಾಭವತ್ತದಾ ॥ ೨೪ ॥

ತತಸ್ಸಾ ತತ್ಕರೇಣೈವ ಗೃಹೀತ್ವಾ ಪತ್ರಮುತ್ತಮಂ ।
ನತ್ವಾ ಬೃಂದಾವನೇ ಸೀತಾ ಚಿಕ್ಷೇಪ ಪರಮಾದರಾತ್ ॥ ೨೫ ॥

ತತಃ ಪ್ರದಕ್ಷಿಣಾಃ ಕೃತ್ವಾ ಪ್ರಾರ್ಥಯಿತ್ವಾ ಮುಹುರ್ಮುಹುಃ ।
ತುಲಸೀಂ ಸಾ ಯಯೌ ಗೇಹಂ ರಂಜಯಾಮಾಸ ರಾಘವಂ ॥ ೨೬ ॥

ಏತಸ್ಮಿನ್ನಂತರೇ ತತ್ರ ನಾರದಶ್ಚ ಸಮಾಯಯೌ ।
ವೀಣಾವಾದ್ಯ ಸ್ವನೇನೈವ ಕುರ್ವಸ್ಕೀರ್ತನಮುತ್ತಮಂ ॥ ೨೭ ॥

ಪಾಲಯ ಮಾಂ ದೀನಮಿತಿ ರಾಘವೇತಿ ಪುನಃ ಪುನಃ ।
ಪಾಲಯ ಮಾಂ ದೀನಮಿತಿ ಮನುಂ ಪಂಚದಶಾಕ್ಷರಂ ॥ ೨೮ ॥

---

೨೪. ಆ ತುಲಸಿಯ ಎಲೆಯು ಕಿತ್ತು ಬಂದು ನೆಲದ ಮೇಲೆ ಬಿದ್ದುದನ್ನು ಜಾನಕಿಯು ನೋಡಿದಳು. ದ್ವಾದಶಿಯ ದಿವಸ ಈ ಎಲೆಯು ಕಿತ್ತುಹೋಯಿತಲ್ಲಾ! ನಾನು ಮಾಡಿದುದು ಅಧರ್ಮವಾಯಿತಲ್ಲಾ! ಎಂದು ತಿಳಿದು ಭಯಪಟ್ಟಳು.

೨೫. ಆಗಲೇ ಕೈಯಿಂದ ಆ ಎಲೆಯನ್ನು ತೆಗೆದುಕೊಂಡು ಅದಕ್ಕೆ ನಮಸ್ಕರಿಸಿ ಅದನ್ನು ಮತ್ತೆ ಬೃಂದಾವನದೊಳಕ್ಕೆ ಹಾಕಿಬಿಟ್ಟಳು.

೨೬. ಅನಂತರ ನಮಸ್ಕಾರಗಳನ್ನು ಪೂರ್ತಿಯಾಗಿ ಮಾಡಿ ಅನೇಕಬಾರಿ ತುಳಸಿಯನ್ನು ಪ್ರಾರ್ಥಿಸಿಕೊಂಡಳು. ಆಮೇಲೆ ಮನೆಗೆ ಹೋಗಿ ರಾಮನೊಡನೆ ಸುಖಸಲ್ಲಾಪದಲ್ಲಿದ್ದಳು.

೨೭-೨೮ ಹೀಗಿರುತ್ತಿರಲು ಆಗ ಅಲ್ಲಿಗೆ ನಾರದಮುನಿಯು ಬಂದನು. ವೀಣಾವಾದನವನ್ನು ಮಾಡುತ್ತ ಅದರ ಜೊತೆಯಲ್ಲಿ, 'ಪಾಲಯಮಾಂ ದೀನಂ ರಾಘವ ಪಾಲಯಮಾಂ ದೀನಂ' ಎಂಬದಾಗಿ ಹದಿನೈದು ಅಕ್ಷರದ ಮಂತ್ರವನ್ನು ಕೀರ್ತಿಸುತ್ತಾ ಇದ್ದನು.

ಕೀರ್ತಯಾಮಾಸ ಸ ಮುನಿರ್ವಾರಂ ವಾರಂ ಮುದಾನ್ವಿತಃ ।
ಕಲಕಂಠಸ್ವರೇಣೈವ ಮಹಾಪಾಕನಾಶನಂ ॥ ೨೯ ॥

ಪಾಲಯ ಮಾಂದೀನಂರಾಘವ ಪಾಲಯ ಮಾಂ ದೀನಂ ಇತಿಮಂತ್ರಃ ।
ತಂ ಮುನಿಂ ರಾಘವೋ ದೃಷ್ಟ್ವಾ ಪ್ರತ್ಯುದ್ಗಮ್ಯಾಥ ಭಕ್ತಿತಃ
ನತ್ವಾಸನೇ ಸನ್ನಿವೇಶ್ಯ ಪೂಜಯಾಮಾಸ ಸಾದರಂ ॥ ೩೦ ॥

ತತಃ ಪ್ರಕ್ಷಾಲ್ಯ ತತ್ಪಾದೌ ಸೀತಯಾ ರಘುನಂದನಃ ।
ಧೇನುಂ ನಿವೇದ್ಯ ಗಂಧಾದ್ಯೈಃ ಪೂಜ್ಯ ತಂ ಮುನಿಪುಂಗವಂ ॥ ೩೧ ॥

ಹೇಮಪಾತ್ರಂ ಭೋಜನಾರ್ಥಂ ಮುನೇರಗ್ರೇ ನಿವೇಶ್ಯ ಚ ।
ಪರಿವೇಷಣಾರ್ಥಂ ಶ್ರೀರಾಮಸ್ತ್ವರಯಾಮಾಸ ಜಾನಕೀಂ ॥ ೩೨ ॥

ಸೀತಾಪಿ ಕಾಮಧೇನೂತ್ಥವರಾನ್ನಾನಿ ವಿಗೃಹ್ಯ ಸಾ ।
ಹೇಮಪಾತ್ರೇ ಯಯೌ ವೇಗಾತ್ಪಾತ್ರೇಷು ಪರಿವೇಷಣಂ ॥ ೩೩ ॥

---

೨೯. ಆ ಮುನಿಯು ಅದೇ ಹದಿನೈದು ಅಕ್ಷರದ ಮಂತ್ರವನ್ನು ಪದೇ ಪದೇ ಹೇಳುತ್ತ ಅದರಿಂದ ಬಹು ಸಂತೋಷಪಡುತ್ತಿದ್ದನು. ಮತ್ತು ಉತ್ತಮವಾದ ರಾಗದಿಂದಲೂ ಸ್ವರದಿಂದಲೂ ಮಹಾಪಾಪಗಳನ್ನು ನಾಶಮಾಡುವ ಆ ಮಂತ್ರವನ್ನು ಹಾಡುತ್ತಲೇ ಇದ್ದನು.

೩೦. ಹಾಗೆ ರಾಮನಾಮವನ್ನು ಹಾಡುತ್ತ ಬರುತ್ತಿರುವ ಮುನಿಯನ್ನು ರಾಮನು ನೋಡಿ ಭಕ್ತಿಯಿಂದ ನಮಸ್ಕರಿಸಿ ಆಸನದಲ್ಲಿ ಕೂರಿಸಿ ಆದರದಿಂದ ಪೂಜಿಸಿದನು.

೩೧. ಅನಂತರ ರಾಮನು ಸೀತೆಯೊಡನೆ ಆ ಮುನಿಯ ಪಾದಗಳನ್ನು ತೊಳೆದನು. ಧೇನುವನ್ನು ಕೊಟ್ಟನು. ಗಂಧಾದಿಗಳನ್ನು ಕೊಟ್ಟು ಪೂಜಿಸಿದನು.

೩೨. ಅನಂತರ ಮುನಿಗೆ ಭೋಜನಕ್ಕೋಸ್ಕರ ಚಿನ್ನದ ಪಾತ್ರೆಯನ್ನು ಅವನ ಮುಂದೆ ಇಟ್ಟನು. ಆ ತಟ್ಟೆಗೆ ಬಡಿಸುವಂತೆ ಸೀತೆಗೆ ಅವಸರಿಸಿ ಹೇಳಿದನು.

೩೩. ಒಡನೆಯೇ ಸೀತೆಯು ಕಾಮಧೇನುವು ಕೊಟ್ಟ ಪಕ್ವಾನ್ನವನ್ನು ತೆಗೆದುಕೊಂಡು ಅವನ್ನು ಬೇರೆ ಬೇರೆಯಾಗಿ ಚಿನ್ನದ ಪಾತ್ರೆಯಲ್ಲಿಟ್ಟುಕೊಂಡು ಬಡಿಸುವುದಕ್ಕೆ ಬೇಗನೆ ಬಂದಳು.

ಕರಸ್ತಂ ಕಂಕಣ ಮಂಜೀರಂಕಿಂಕಿಣೀನೂಪುರಸ್ವನಾ ।
ತಾಂ ದೃಷ್ಟ್ವಾ ನಾರದಸ್ಸೀತಾಂ ಪ್ರಾಹ ಶ್ರೀರಾಘವಂ ತದಾ ॥ ೩೪ ॥

ರಾಮ ರಾಜೀವಪತ್ರಾಕ್ಷ ನಾಹಂ ಸೀತಾಸಮರ್ಪಿತೈಃ ।
ದಿವ್ಯಾನ್ನೈರಶನಂ ಚಾದ್ಯ ಕರಿಷ್ಯಾಮಿ ರಘೂತ್ತಮ ॥ ೫೫ ॥

ತನ್ಮುನೇರ್ವಚನಂ ಶ್ರುತ್ವಾ ಸೀತಾಸೀಚ್ಚಕಿತಾ ತದಾ ।
ಅಜ್ಞಾತ ಇವ ರಾಮೋಽಪಿ ಸಂಭ್ರಮೇಣ ಮುನಿಂ ತದಾ ॥ ೩೬ ॥

ಪಪ್ರಚ್ಛ ಕಾರಣಂ ವ್ಯಗ್ರಸ್ಸರ್ವಕರ್ತಾ ಸ್ವಯಂ ಪ್ರಭುಃ ।
ಕಿಂ ಕಾರಣಂ ವದ ಮುನೇ ಕಿಮರ್ಥಮನಯಾರ್ಪಿತೈಃ ॥ ೩೭ ॥

ಅನ್ನೈಸ್ತ್ವಂ ಭೋಜನಂ ನಾದ್ಯ ಕರೋಷಿ ಮುನಿಪುಂಗವ ।
ಇತಿ ರಾಮವಚಃ ಶ್ರುತ್ವಾ ನಾರದೋ ವಾಕ್ಯಮಬ್ರವೀತ್ ॥ ೩೮ ॥

---

೩೪. ಕೈಬಳೆಗಳನ್ನೂ, ಕಾಲುಕಡಗಗಳನ್ನೂ ಝಲ್ಲೆಂದು ಸದ್ದುಮಾಡಿಕೊಂಡು ಕೈಯ್ಯಲ್ಲಿ ಪದಾರ್ಥಗಳನ್ನು ಬಡಿಸಲು ಸೀತೆಯು ತರುತ್ತಿರುವುದನ್ನು ಈ ಮುನಿಯು ನೋಡಿದನು. ಆಕೆಯು ಬರುತ್ತಿದ್ದುದನ್ನು ನೋಡಿ ಈ ನಾರದನು ಶ್ರೀರಾಮನನ್ನು ಕುರಿತು ಇಂತೆಂದನು.

೫೫. ರಾಜೀವಪತ್ರಾಕ್ಷನಾದ ರಾಮನೇ! ಸೀತೆಯು ಬಡಿಸಿದ ಈ ದಿವ್ಯಾನ್ನಗಳಿಂದ ನಾನು ಭೋಜನವನ್ನು ಮಾಡುವುದೇ ಇಲ್ಲ, ಎಂದನು.

೩೬. ಮುನಿಯು ಹೀಗೆ ಹೇಳಿದುದನ್ನು ಕೇಳಿ ಸೀತೆಯು ದಿಗ್ಭ್ರಾಂತಳಾಗಿ ನಿಂತಳು. ರಾಮನು ಒಂದನ್ನೂ ತಿಳಿಯದವನಂತೆ ಆ ಮುನಿಯನ್ನು ಕುರಿತು ಆತುರದಿಂದ ಇಂತೆಂದು ಕೇಳಿದನು.

೩೭–೩೮. ಆ ಪ್ರಭುವು ತಾನೇ ಎಲ್ಲಕ್ಕೂ ಕರ್ತನಾದರೂ ಚಕಿತನಾಗಿ ಎಲೈ ಮುನಿಯೇ! ನೀನು ಏತಕ್ಕೆ ಸೀತೆಯು ಬಡಿಸುವುದನ್ನು ಊಟಮಾಡುವುದಿಲ್ಲ? ಕಾರಣವೇನು? ಹೇಳು ಎಂಬುದಾಗಿ ಅದಕ್ಕೆ ಕಾರಣವನ್ನು ಕೇಳಿದನು. ರಾಮನು ಹೀಗೆ ಕೇಳಿದುದನ್ನು ಕೇಳಿ ನಾರದನು ಇಂತೆಂದನು.

॥ ನಾರದ ಉವಾಚ ॥

ಸೀತಯಾದ್ಯ ಕೃತಂ ಪಾಪಂ ಕಿಂ ತ್ವಂ ವೇತ್ಸಿ ನ ನೃ ಪ್ರಭೋ ।
ಯದಿ ತ್ವಂ ನೈವ ಜಾನಾಸಿ ತರ್ಹಿ ಶ್ರುಣು ವದಾಮಿ ತೇ ॥ ೩೯ ॥

ದ್ವಾದಶ್ಯಾಂ ತುಲಸೀಪತ್ರ ಮನಯಾದ್ಯ ನಿಕೃಂತಿತಂ ।
ಯದ್ಯಸತ್ಯಂ ತರ್ಹಿ ಪಶ್ಯ ಗತ್ವಾ ವೃಂದಾವನೇ ಪ್ರಭೋ ॥ ೪೦ ॥

ಸಂಕ್ರಮೇಚ ಚತುರ್ದಶ್ಯೋರ್ದ್ವಾದಶ್ಯೋಃ ಪಾತಪರ್ವಸು ।
ತುಲಸೀಂ ನ ಹರೇತ್ಸಂಧ್ಯೋರ್ಭೃಗ್ವಂಗಾರಾಪರಾಹ್ಣಕೇ ॥ ೪೧ ॥

ನಷ್ಟೇ ಸೂರ್ಯೇಂದುಗ್ರಹಣೇ ಪ್ರಸೂತಿಮರಣೇ ತಥಾ ।
ತುಲಸೀಂ ಯೇ ನಿಕೃಂತಂತಿ ತೇ ಛಿಂದಂತಿ ಹರೇಶ್ಶಿರಃ ॥ ೪೨ ॥

ದ್ವಾದಶ್ಯಾಂ ತುಲಸೀಪತ್ರಂ ಧಾತ್ರೀಪತ್ರಂ ತು ಕಾರ್ತಿಕೇ ।
ಯೋ ಲುನಾತಿ ನರೋ ಗಚ್ಛೇನ್ನಿರಯಾನತಿಗರ್ಹಿತಾತಿ ॥ ೪೩ ॥

---

೩೯. ನಾರದನು ಹೇಳಿದನು—ಎಲೈ ಪ್ರಭುವೇ! ಸೀತೆಯು ಈಗ ಪಾಪ ಕೆಲಸವನ್ನು ಮಾಡಿರುವಳು. ಅದು ನಿನಗೆ ಗೊತ್ತಿಲ್ಲವೇನು ? ಗೊತ್ತಿಲ್ಲದಿದ್ದರೆ ನಾನು ಹೇಳುತ್ತೇನೆ ಕೇಳು.

೪೦. ಈಕೆಯು ದ್ವಾದಶಿಯ ದಿವಸ ತುಲಸಿಯ ಪತ್ರವನ್ನು ಕಿತ್ತಳು. ನಾನು ಹೇಳುವುದು ಸುಳ್ಳೆಂದು ತೋರುವ ಪಕ್ಷದಲ್ಲಿ ಈಗಲೇ ಬೃಂದಾವನದ ಬಳಿಗೆ ಹೋಗಿ ಪರೀಕ್ಷಿಸಬಹುದು.

೪೧–೪೨. ಸಂಕ್ರಮಣಗಳಲ್ಲಿ ಶುಕ್ಲ ಕೃಷ್ಣ ಚತುರ್ದಶಿಗಳಲ್ಲಿ, ದ್ವಾದಶಿಗಳಲ್ಲಿ, ವ್ಯತೀಪಾತಗಳಲ್ಲಿ, ಸಂಧ್ಯಾಕಾಲಗಳಲ್ಲಿ, ಶುಕ್ರವಾರ ಮಂಗಳವಾರಗಳಲ್ಲಿ ಅಪರಾಹ್ನದಲ್ಲಿ, ಜಾತಾಶೌಚ, ಮೃತಾಶೌಚಗಳಲ್ಲಿ, ಸೂರ್ಯಚಂದ್ರಗ್ರಹಣಗಳಲ್ಲಿ ತುಲಸಿಯನ್ನು ಕುಯ್ಯಬಾರದು. ಇಂತಹ ದಿನಗಳಲ್ಲಿ ಅವರು ತುಲಸಿಯನ್ನು ಕುಯ್ದರೆ ಅವರು ಹರಿಯ ತಲೆಯನ್ನು ಕತ್ತರಿಸಿದಂತೆ ಆಗುತ್ತದೆ.

೪೩. ದ್ವಾದಶಿಯ ದಿವಸ ತುಲಸೀಪತ್ರಗಳನ್ನೂ ಕಾರ್ತಿಕದಲ್ಲಿ ನೆಲ್ಲಿಯ ಪತ್ರವನ್ನೂ ಕುಯ್ಯುವವನು ಬಹು ಕ್ರೂರವಾದ ನರಕವನ್ನು ಹೊಂದುವನು.

ಅಕಾಲೇ ತುಲಸೀಪತ್ರಂ ಛೇದಯಂತ್ಯಃ ಸ್ತ್ರಿಯಃ ಪುಮಾಂ ।
ಪತ್ರಮೇಕಂ ಬ್ರಹ್ಮಹತ್ಯಾಸಮಮಾಹುರ್ಮನೀಷಿಣಃ ॥ ೪೪ ॥

ಏವಂ ತು ವಚನಂ ಸರ್ವೈರ್ಮುನಿಭಿರ್ಹಿ ಪ್ರಕೀರ್ತ್ಯತೇ ।
ಪುರುಷಾಣಾ ಮಯಂ ದೋಷಸ್ತತ್ರ ಸ್ತ್ರೀಣಾಂ ಕಥಾತ್ರ ಕಾ ॥ ೪೫ ॥

ಏತನ್ನಿಮಿತ್ತಂ ಶ್ರೀರಾಮ ಸೀತಯಾಪರಿವೇಷಿತೈಃ ।
ವರಾನ್ನೈರ್ಭೋಜನಂ ನಾದ್ಯ ಕರಿಷ್ಯಾಮಿ ವ್ರತಸ್ಥಿತಃ ॥ ೪೬ ॥

ತನ್ಮುನೇರ್ವಚನಂ ಶ್ರುತ್ವಾ ರಾಘವಃ ಪ್ರಾಹ ತಂ ಪುನಃ ।
ಮುನೇ ತ್ವಮೇವ ಸೀತಾಂ ಮೇ ಪೂತಾಂ ಕರ್ತುಮಿಹಾರ್ಹಸಿ ॥ ೪೭ ॥

ವರದಾನಂ ವ್ರತಂ ವಾಪಿ ಯೇನ ಪೂತಾ ಭವೇತ್ ಕ್ಷಣಾತ್ ।
ತ್ವಾಮಹಂ ಪ್ರಾರ್ಥಯಾಮ್ಯದ್ಯ ಸ್ವೀಯಂ ಪಲ್ಲವಮುತ್ತಮಂ ॥ ೪೮ ॥

---

೪೪. ಕಾಲವಿಲ್ಲದ ಕಾಲದಲ್ಲಿ ತುಲಸಿಯ ಪತ್ರೆಯನ್ನು ಕುಯ್ಯುವ ಗಂಡಸಾಗಲಿ, ಹೆಂಗಸಾಗಲಿ ಕುಯ್ದು ಒಂದೊಂದು ಎಲೆಗೂ ಒಂದೊಂದು ಬ್ರಹ್ಮಹತ್ಯೆಯನ್ನು ಹೊಂದುವರೆಂದು ತಿಳಿದವರು ಹೇಳುತ್ತಾರೆ.

೪೫. ಈ ಮಾತನ್ನೇ ಎಲ್ಲ ಮುನಿಗಳೂ ಹೇಳುತ್ತಿರುವರು. ಪುರುಷರು ಕುಯ್ದರೆ ಈ ರೀತಿಯಾಗಿ ದೋಷಗಳನ್ನು ಹೇಳಿರುವಾಗ ಕುಯ್ಯಕೂಡದೆಂದು ವಿಧಿಸಿರುವ ಹೆಂಗಸರು ಅದರಲ್ಲಿಯೂ ನಿಷಿದ್ಧಕಾಲದಲ್ಲಿ ಕುಯ್ದರೆ ಹೇಳತಕ್ಕದ್ದೇನಿರುವುದು ?

೪೬. ಎಲೈ ರಾಮನೇ ! ಈ ಕಾರಣದಿಂದಲೇ ಸೀತೆಯು ಬಡಿಸಿದ ಅನ್ನ ಮುಂತಾದುವುಗಳನ್ನು ವ್ರತದಲ್ಲಿರುವ ನಾನು ಈಗ ಊಟಮಾಡುವುದಿಲ್ಲ.

೪೭. ಮುನಿಯು ಹೀಗೆ ಹೇಳಿದುದನ್ನು ರಾಮನು ಕೇಳಿ ಇಂತೆಂದನು. ಎಲೈ ಮುನಿಯೇ ! ಪಾಪಿನಿಯಾಗಿರುವ ಈ ಸೀತೆಯನ್ನು ನೀನೇ ಪವಿತ್ರಳನ್ನಾಗಿ ಮಾಡಲು ಯೋಗ್ಯನಾಗಿದ್ದೀಯೆ.

೪೮–೪೯. ವರವನ್ನು ಕೊಟ್ಟಾಗಲೀ, ವ್ರತೋಪದೇಶದಿಂದಾಗಲಿ, ಕೊನೆಗೆ ಯಾವುದರಿಂದಲಾದರೂ ಆಗಲಿ ಅವಳು ಪಾಪವನ್ನು ಕಳೆದುಕೊಂಡು ಪವಿತ್ರಳಾಗುವಂತೆ ಕ್ಷಣಕಾಲದಲ್ಲಿ ಮಾಡು. ನಾನು ನನ್ನ ಕೈಗಳನ್ನು ಮುಗಿದು

ಪ್ರಸಾರ್ಯ ಶಿರಸಾ ಚಾಪಿ ನಮಸ್ಕೃತ್ಯ ಪುನಃ ಪುನಃ ।
ತದ್ರಾಮವಚನಂ ಶ್ರುತ್ವಾ ನಾರದೋ ವಾಕ್ಯಮಬ್ರವೀತ್ ॥ ೪೯ ॥

ಬ್ರಹ್ಮಹತ್ಯಾದಿಪಾಪಾನಾಂ ನಿಷ್ಕೃತ್ಯರ್ಥಂ ಮುನೀಶ್ವರೈಃ ।
ಪ್ರಾಯಶ್ಚಿತ್ತಾನಿ ಚೋಕ್ತಾನಿ ಸಂತಿ ನಾನಾವಿಧಾನಿ ಚ ॥ ೫೦ ॥

ದ್ವಾದಶ್ಯಾಂ ತುಲಸೀಪತ್ರಚ್ಛೇದಪಾಪಪ್ರಶಾಂತಯೇ ।
ಪ್ರಾಯಶ್ಚಿತ್ತಂ ಮಯಾ ನೈವ ದೃಷ್ಟಂ ರಾಘವಸತ್ತಮ ॥ ೫೧ ॥

ಉಪಾಯಸ್ತ್ವೇಕ ಏವಾತ್ರ ವರ್ತತೇ ರಘುನಂದನ ।
ಪಾತಿವ್ರತ್ಯಬಲಾತ್ಸೀತಾ ಪತ್ರಂ ತತ್ತುಲಸೀಂ ಪುನಃ ॥ ೫೨ ॥

ಯೋಜಯಿಷ್ಯತಿ ಮೇಽಗ್ರೇದ್ಯ ತರ್ಹಿ ಪೂತಾ ಭವಿಷ್ಯತಿ ।
ಕ್ಷಣಾದೇವ ನ ಸಂದೇಹಸ್ಸತ್ಯಮೇವ ವಚೋ ಮಮ ॥ ೫೩ ॥

ತಲೆಯಮೇಲೆ ಜೋಡಿಸಿಕೊಂಡು ಪದೇ ಪದೇ ನಮಸ್ಕಾರಮಾಡುತ್ತ ಕೇಳಿಕೊಳ್ಳುತ್ತೇನೆ. ರಾಮನು ಇಂತೆಂದುದನ್ನು ಆ ನಾರದನು ಕೇಳಿ ಹೀಗೆಂದು ಹೇಳಿದನು.

೫೦. ಎಲೈ ರಾಮನೇ ! ಬ್ರಹ್ಮಹತ್ಯೆಯೇ ಮುಂತಾದ ಪಾಪಗಳನ್ನು ನಾಶಮಾಡಿಕೊಳ್ಳಲು ಮುನೀಶ್ವರರು ಅನೇಕವಾದ ಪ್ರಾಯಶ್ಚಿತ್ತಗಳನ್ನು ಹೇಳುವರು. ಅವೆಲ್ಲವೂ ಅನೇಕ ಬಗೆಯಾಗಿವೆ.

೫೧-೫೩. ದ್ವಾದಶಿಯ ದಿವಸ ತುಲಸಿಯ ಪತ್ರವನ್ನು ಕೊಯ್ದ ಪಾಪದ ಶಾಂತಿಗೋಸ್ಕರ ಇರುವ ಪ್ರಾಯಶ್ಚಿತ್ತವನ್ನು ಎಲ್ಲಿಯೂ ನಾನು ನೋಡಿಯೇ ಇಲ್ಲ. ಎಲೈ ರಾಮನೇ ! ಆದರೆ ಇದಕ್ಕೆ ಒಂದೇ ಒಂದು ಉಪಾಯವು ಮಾತ್ರ ಇರುವುದು. ಸೀತೆಯು ಪಾತಿವ್ರತ್ಯದ ಬಲದಿಂದ ಆ ತುಲಸೀಪತ್ರವನ್ನು ಮತ್ತೆ ಆ ತುಲಸಿಯ ಗಿಡದಲ್ಲಿಯೇ ಅಂಟಿಕೊಳ್ಳುವಂತೆ ಮಾಡಲಿ. ನನ್ನ ಕಣ್ಣೆದುರಿಗೆ ಆಕೆಯು ಹಾಗೆ ಮಾಡಿದರೆ ಈ ಪಾಪವೂ ಹೋಗಿ ಪವಿತ್ರಳಾಗುತ್ತಾಳೆ. ಅದರಲ್ಲಿಯೂ ಕ್ಷಣಕಾಲದಲ್ಲಿಯೇ ಪವಿತ್ರಳಾಗುವಳು. ಇದರಲ್ಲಿ ಸಂದೇಹವಿಲ್ಲ.

ತನ್ಮುನೇರ್ವಚನಂ ಶ್ರುತ್ವಾ ರಾಮಸ್ಸೀತಾಂ ವ್ಯಲೋಕಯತ್ ।
ತದಾ ಸೀತಾಬ್ರವೀದ್ವಾಕ್ಯಂ ಶ್ರುಣು ಬ್ರಹ್ಮಸುತೋತ್ತಮ ॥ ೫೪ ॥

ಅದ್ಯಾಹಂ ಯೋಜಯಿಷ್ಯಾಮಿ ಪತ್ರಂ ತತ್ತುಲಸೀಂ ಪುನಃ ।
ಪಾತಿವ್ರತ್ಯ ಬಲೇನೈವ ತವಾಗ್ರೇ ಪಶ್ಯ ಕೌತುಕಂ ॥ ೫೫ ॥

ಇತ್ಯುಕ್ತ್ವಾ ಜಾನಕೀ ದೇವೀ ತತ್ಪಾತ್ರಮನ್ನಪೂರಿತಂ ।
ಪಾಕಸ್ಥಾನೇ ಪುನರ್ನೀತ್ವಾ ಸ್ಥಾಪಯಾಮಾಸ ವೇಗತಃ ॥ ೫೬ ॥

ತತೋ ವೃಂದಾವನಂ ಸೀತಾ ಯಯೌ ನೂಪುರನಿಸ್ವನಾ ।
ನಾರದೋ ರಾಮಚಂದ್ರಾದ್ಯಾ ಯಯುರ್ವೃಂದಾವನಂ ಪ್ರತಿ ॥ ೫೭ ॥

ತದಾ ತಾ ಊರ್ಮಿಲಾದ್ಯಾಶ್ಚ ಚಂಪಿಕಾದ್ಯಾಃ ಸ್ತ್ರಿಯೋ ಯಯುಃ ।
ಲಕ್ಷ್ಮಣಾದ್ಯಾ ಬಂಧವಶ್ಚ ಕುಶಶ್ಚಾಥ ಲವಸ್ತಥಾ ॥ ೫೮ ॥

---

೫೪. ಮುನಿಯು ಹೀಗೆ ಹೇಳಲು ರಾಮನು ಅದನ್ನು ಕೇಳಿ ಸೀತೆಯ ಮುಖವನ್ನು ನೋಡಿದನು. ಆಗ ಸೀತೆಯು ಎಲೈ ಬ್ರಹ್ಮನ ಮಗನೇ! ನಾನು ಹೇಳುವುದನ್ನು ಕೇಳು.

೫೫. ನಾನು ಈಗಲೇ ತುಲಸಿಯ ಎಲೆಯನ್ನು ಆ ಗಿಡಕ್ಕೆ ಸೇರಿಸುತ್ತೇನೆ. ನನ್ನ ಪಾತಿವ್ರತ್ಯದ ಬಲವನ್ನು ನೋಡು. ನೀನು ಎಲ್ಲರ ಎದುರಿಗೂ ಈ ಕೌತುಕವನ್ನು ಬಂದು ನೋಡು.

೫೬–೫೭. ಹೀಗೆಂದು ಹೇಳಿ ಸೀತೆಯು ಅನ್ನವನ್ನು ಬಡಿಸಲು ತುಂಬಿ ಕೊಂಡು ಬಂದಿದ್ದ ಪಾತ್ರೆಗಳನ್ನು ಅಡಿಗೆಯ ಮನೆಯಲ್ಲಿಟ್ಟು ಬೇಗನೆ ಬೃಂದಾ ವನದ ಹತ್ತಿರಕ್ಕೆ ಬಂದಳು. ಆಗ ನಾರದನೂ ರಾಮಚಂದ್ರನೇ ಮುಂತಾದವರೂ ಬೃಂದಾವನದ ಬಳಿಗೆ ಹೋದರು.

೫೮. ಅನಂತರ ಊರ್ಮಿಳೆ ಮುಂತಾದ ಓರಗಿತ್ತಿಯರೂ ಚಂಪಿಕೆಯೇ ಮುಂತಾದ ಸೊಸೆಯರೂ ಅಲ್ಲಿಗೆ ಹೋದರು. ಲಕ್ಷ್ಮಣ ಮುಂತಾದ ತಮ್ಮಂದಿರೂ ಕುಶಲವರಾದ ಮಕ್ಕಳೂ ಅಲ್ಲಿಗೆ ಹೋದರು

ತೇಷಾಂ ಮಧ್ಯಗತಾ ಸೀತಾ ತದಾ ವೃಂದಾವನಸ್ಥಿತಾ ।
ನತ್ವಾ ತಾಂ ತುಲಸೀಂ ಭಕ್ತ್ಯಾ ಪ್ರಾಹ ವಾಕ್ಯಂ ಸಖೀಯುತಾ ॥ ೫೯ ॥

ಭೋ ಭೋ ತುಲಸಿ ಮದ್ವಾಕ್ಯಂ ಶೃಣುಷ್ವಾದ್ಯ ಸುಶೋಭನೇ ।
ಪಾತಿವ್ರತ್ಯಬಲಂ ಪೂರ್ಣಂ ಮಯಿ ಯದ್ಯಸ್ತಿ ಪಾವನಂ ॥ ೬೦ ॥

ತರ್ಹ್ಯಸ್ಯ ತವ ಪತ್ರಸ್ಯ ತ್ವಯಿ ಸಂಧಿರ್ಭವಿಷ್ಯತಿ ।
ಏವಮುಕ್ತ್ವಾ ಜಾನಕೀ ಸಾ ಯಾವತ್ಪಶ್ಯತಿ ವೈ ಪುರಃ ॥ ೬೧ ॥

ತಾವತ್ಪತ್ರಂ ತುಲಸ್ಯಾಂ ತತ್ಸಂಧಿಂ ನೈವ ಗತಂ ತದಾ ।
ತದಾ ವಿಷಣ್ಣಾ ಸಾ ಸೀತಾ ಬಭೂವ ಚಕಿತಾಪಿ ಚ ॥ ೬೨ ॥

ತದಾ ದೇವಾಸ್ಸಗಂಧರ್ವಾ ಯಕ್ಷಾ ನಾಗಾಸ್ಸಕಿನ್ನರಾಃ ।
ಗುಹ್ಯಕಾ ಋಷಯಸ್ಸರ್ವೇ ತದ್ದ್ರಷ್ಟುಂ ಕೌತುಕಂ ಯಯುಃ ॥ ೬೩ ॥

---

೫೯. ಸೀತೆಯು ಆ ಬೃಂದಾವನದ ಬಳಿಗೆ ಹೋಗಿ ಅದರ ಮಧ್ಯದಲ್ಲಿ ನಿಂತಳು. ಅನಂತರ ಆ ತುಲಸಿಗೆ ಭಕ್ತಿಯಿಂದ ನಮಸ್ಕರಿಸಿ ಸಖಿಯರೊಡಗೂಡಿ ಇಂತೆಂದಳು.

೬೦–೬೧. ಎಲೈ ಶೋಭನೆಯಾದ ತುಲಸಿಯೇ! ಈಗ ನಾನು ಹೇಳುವುದನ್ನು ಕೇಳು. ಪಾವನವಾದ ಪಾತಿವ್ರತ್ಯವು ನನ್ನಲ್ಲಿ ಪೂರ್ಣವಾಗಿದ್ದರೆ ಬಿದ್ದು ಹೋಗಿರುವ ಈ ಎಲೆಯು ನಿನ್ನಲ್ಲಿ ಸೇರಿಕೊಳ್ಳಲಿ. ಎಂಬದಾಗಿ ಜಾನಕಿಯು ಹೇಳಿ ಮುಂದುಗಡೆ ನೋಡುತ್ತ ನಿಂತುಕೊಂಡಳು.

೬೨. ಆದರೂ ಆ ಎಲೆಯು ಆ ತುಲಸಿಯ ಗಿಡದಲ್ಲಿ ಹೋಗಿ ಸೇರಿಕೊಳ್ಳಲೇ ಇಲ್ಲ. ಆಗ ಆ ಸೀತೆಯು ದುಃಖಗೊಂಡು ಆಶ್ಚರ್ಯಪಡುತ್ತ ನಿಂತುಕೊಂಡಳು.

೬೩. ಆಗ ದೇವತೆಗಳು ಗಂಧರ್ವರು, ನಾಗರು, ಯಕ್ಷರು, ಕಿನ್ನರರು, ಗುಹ್ಯಕರು, ಋಷಿಗಳು ಇವರೆಲ್ಲರೂ ಆ ಆಶ್ಚರ್ಯವನ್ನು ನೋಡಬೇಕೆಂದು ಬಂದು ಸೇರಿದರು.

ತತಸ್ಸೀತಾಂ ವಿಷಣ್ಣಾಂ ತಾಂ ದೃಷ್ಟ್ವಾ ಸ ನಾರದೋ ಮುನಿಃ ।
ಏಕಾಂತೇ ಜಾನಕೀಂ ನೀತ್ವಾ ಬೋಧಯಾಮಾಸ ಸಾದರಂ ॥ ೬೪ ॥

ಶ್ರುಣ್ವತ್ರ ಕಾರಣಂ ಸೀತೇ ಸರ್ವಂ ತ್ವಾಂ ಪ್ರವದಾಮ್ಯಹಂ ।
ಪತಿವ್ರತಾಭಿರ್ನಾರೀಭಿರ್ವಿನಾ ಸ್ವಪತಿನಾ ಮುದಾ ॥ ೬೫ ॥

ಪುಷ್ಪಾದೀನಾಂ ಸುಗಂಧೋಪಿ ನಾವಗ್ರಾಹ್ಯಃ ಕದಾಚನ ।
ಸೋತ್ರಾವಗ್ರಾಹಿತಃ ಪೂರ್ವಂ ಮುದಾ ತಾಮರಸಸ್ಯ ಚ ॥ ೬೬ ॥

ತದ್ಬುಧ್ವಾ ರಾಮಚಂದ್ರೇಣ ಮಾಯೇಯಂ ರಚಿತಾ ಭುವಿ ।
ತದಿಚ್ಛಯಾ ತುಲಸ್ಯಾಶ್ಚ ತತ್ಪತ್ರಂ ಪತಿತಂ ಭುವಿ ॥ ೬೭ ॥

ತ್ವದ್ವಸ್ತ್ರಪಲ್ಲವಾಗ್ರೇಣ ಶಿಕ್ಷಾಂ ಕರ್ತುಂ ತವಾತ್ರ ಹಿ ।
ರಾಮಸ್ಯಾಂತರ್ಗತಂ ಜ್ಞಾತ್ವಾ ದೋಷಾರೋಪಃ ಕೃತಸ್ತ್ವಯಿ ॥ ೬೮ ॥

---

೬೪. ಆ ಎಲೆಯು ಸೇರದಿರುವುದನ್ನು ನೋಡಿ ಖಿನ್ನಳಾಗಿರುವ ಸೀತೆಯನ್ನು ನಾರದನು ನೋಡಿ ಒಂದು ಕಡೆಗೆ ಯಾರೂ ಇಲ್ಲದಿರುವ ಜಾಗಕ್ಕೆ ಆ ಸೀತೆಯನ್ನು ಕರೆದುಕೊಂಡು ಹೋಗಿ ಇಂತೆಂದು ಬೋಧಿಸಿದನು.

೬೫--೬೬. ಎಲೈ ಸೀತೆಯೇ ! ಈ ವಿಷಯದಲ್ಲಿ ಕಾರಣವನ್ನು ಕೇಳು. ಎಲ್ಲವನ್ನೂ ನಾನು ಹೇಳುತ್ತೇನೆ ಪತಿವ್ರತೆಯರಾದ ನಾರಿಯರು ತಮ್ಮ ಗಂಡನಿಗೆ ಸಮರ್ಪಿಸದೆ ಹೂವಿನ ಸುಗಂಧವನ್ನು ಕೂಡ ವಾಸನೆ ನೋಡಲೇ ಕೂಡದು. ನೀನಾದರೋ ಪೂರ್ವದಲ್ಲಿ ರಾಮನಿಗೆ ಸಮರ್ಪಿಸದೆ ತಾವರೆಯ ವಾಸನೆಯನ್ನು ವಾಸಿಸಿದೆ

೬೭. ನೀನು ಹಾಗೆ ಮಾಡಿದುದು ರಾಮಚಂದ್ರನಿಗೆ ತಿಳಿಯಿತು. ಆದ್ದರಿಂದಲೇ ರಾಮಚಂದ್ರನು ಈ ಮಾಯೆಯನ್ನು ರಚಿಸಿದನು. ಆ ರಾಮಚಂದ್ರನ ಇಷ್ಟದಂತೆಯೇ ಆ ತುಲಸಿಯ ಎಲೆಯು ನಿನ್ನ ಸೆರಗಿಗೆ ಸಿಕ್ಕಿಕೊಂಡು ಕಿತ್ತುಹೋಗಿ ನೆಲದಮೇಲೆ ಬಿದ್ದಿತು.

೬೮. ಅದಕ್ಕೆ ನಿನ್ನ ಶೆರಗು ತಗುಲಿ ಸಿಕ್ಕಿಕೊಂಡುದು ಒಂದು ನೆವವಾಯಿತು. ನಿನಗೆ ಅದಕ್ಕೋಸ್ಕರ ಬುದ್ಧಿಯನ್ನು ಕಲಿಸಬೇಕೆಂದು ಅವನು ಯೋಚಿಸಿದನು. ರಾಮನು ಈ ರೀತಿ ಮನಸ್ಸಿನಲ್ಲಿಟ್ಟಿರುವುದನ್ನು ತಿಳಿದು ನಾನು ನಿನ್ನಲ್ಲಿ ದೋಷಾರೋಪಣೆಯನ್ನು ಮಾಡಿದೆನು.

ಮಯಾ ಸೀತೇ ಕ್ಷಮಸ್ವಾದ್ಯ ಮಾ ಕ್ರೋಧಂ ಭಜ ಮಾಂ ಪ್ರತಿ ।
ನಾರೀಣಾಮುಪದೇಶಾರ್ಥಂ ತೇನ ತ್ವಾಮದ್ಯ ಶಿಕ್ಷಿತಂ ॥ ೬೯ ॥

ನೋ ಚೇತ್ತ್ವದ್ಧರ್ಮಿತಪಥಾ ಸ್ತ್ರೀಯಸ್ಸರ್ವಾಃ ಪತಿವ್ರತಾಃ ।
ಏವಮೇವಾಚರಿಷ್ಯಂತಿ ನಾನಾಭೋಗಾನ್ಮುದಾನ್ವಿತಾಃ ॥ ೭೦ ॥

ಇದಾನೀಂ ಶೃಣು ಮದ್ವಾಕ್ಯಂ ಯೇನ ಶ್ರೀರಾಘವಾಗ್ರತಃ ।
ಪತ್ರಸ್ಯ ಚ ತುಲಸ್ಯಾಶ್ಚ ದೃಢಾ ಸಂಧಿರ್ಭವಿಷ್ಯತಿ ॥ ೭೧ ॥

ಬೃಂದಾವನೇ ಪುನರ್ಗತ್ವಾ ತ್ವಂ ಬ್ರೂಹಿ ಯನ್ಮಯೋಚ್ಯತೇ ।
ವಿನಾ ಪದ್ಮಸುಗಂಧಸ್ಯಾವಘ್ರಾಣಾದ್ಯದಿ ರಕ್ಷಿತಂ ॥ ೭೨ ॥

ಪಾತಿವ್ರತ್ಯಂ ಮಯಾಸ್ತ್ಯತ್ರ ತರ್ಹ್ಯೇತತ್ತುಲಸೀದಲಂ ।
ತುಲಸ್ಯಾಸ್ಸಂಧಿಮಾಪ್ನೋತು ನೋ ಚೇನ್ನಾಪ್ನೋತು ವೈ ತ್ವಿದಂ ॥ ೭೩ ॥

---

೬೯. ನಾನು ಈ ದೋಷಾರೋಪವನ್ನು ನಿನ್ನಲ್ಲಿ ಮಾಡಿದುದಕ್ಕೆ ನನ್ನನ್ನು ಕ್ಷಮಿಸು. ನನ್ನ ಮೇಲೆ ಕೋಪಮಾಡಬೇಡ. ಹೆಂಗಸರೆಲ್ಲರಿಗೂ ಬುದ್ಧಿಯನ್ನು ಕಲಿಸುವುದಕ್ಕೆ ಈ ರೀತಿ ಮಾಡಿ ಉಪದೇಶಿಸಿರುವನು.

೭೦. ಹಾಗಿಲ್ಲದಿದ್ದರೆ ಪ್ರತಿವ್ರತೆಯರಾದ ಹೆಂಗಸರು. ನೀನು ಮಾಡಿದ ರೀತಿಯಲ್ಲಿಯೇ ದೊಡ್ಡವಳು ಆಚರಿಸಿದುದೆಂದು ಆಚರಿಸಿಬಿಡುವರು. ಗಂಡನಿಗೆ ಸಮರ್ಪಿಸದೆ ಇನ್ನೂ ಅನೇಕ ಭೋಗಗಳನ್ನು ಅನುಭವಿಸಿಬಿಡುವರು.

೭೧--೭೩. ಈಗ ನನ್ನ ಮಾತನ್ನು ಕೇಳು. ರಾಮನ ಮತ್ತು ಇಲ್ಲಿ ಬಂದಿರುವ ಇತರ ಎದುರಿಗೆ ಈ ತುಳಸಿಯ ಎಲೆಯು ಸೇರುವಂತೆ ಮಾಡುತ್ತೇನೆ. ಬೃಂದಾವನದ ಬಳಿಗೆ ಹೋಗಿ ನಾನು ಹೇಳುವಂತೆ ಹೇಳು. ಏನೆಂದರೆ ಪದ್ಮದ ಗಂಧವೊಂದನ್ನು ಹೊರತಾಗಿ ಮಿಕ್ಕ ವಿಷಯದಲ್ಲಿ ನಾನು ಪಾತಿವ್ರತ್ಯವನ್ನು ರಕ್ಷಿಸಿ ಕೊಂಡಿದ್ದರೆ ಈ ತುಳಸೀ ದಳವು ತುಲಸಿಯ ಗಿಡದೊಡನೆ ಸೇರಿಕೊಳ್ಳಲಿ. ಹಾಗಿಲ್ಲ ದಿದ್ದರೆ ಸೇರಿಕೊಳ್ಳಬೇಡ.

ಅನೇನ ವಚನೇನಾದ್ಯ ತತ್ಪತ್ರಂ ಸಂಧಿಮಾಪ್ನುಯಾತ್ ।
ತುಲಸ್ಯಾಃ ಕ್ಷಣಮಾತ್ರೇಣ ಪೂರ್ವವಚ್ಚ ಭವಿಷ್ಯತಿ ॥ ೭೪ ॥

ಅತಸ್ತ್ವಂ ಯಾಹಿ ತುಲಸೀಂ ವಿಷಾದಂ ಭಜ ಮಾ ರಮೇ ।
ಇತ್ಯುಕ್ತ್ವಾ ಸೀತಯಾ ಶೀಘ್ರಂ ತುಲಸೀಂ ನಾರದೋ ಯಯೌ ॥

ಸೀತಾಪಿ ತುಲಸೀಂ ನತ್ವಾ ಶೃಣ್ವತ್ಸು ಸಕಲೇಷ್ವಪಿ ।
ಸಮೂಹೇಷು ಮುನೀನಾಂ ಚ ದೇವಾದೀನಾಂ ವಚೋಽಬ್ರವೀತ್ ॥ ೭೬ ॥

ವಿನಾ ಪದ್ಮಸುಗಂಧಸ್ಯಾವಘ್ರಾಣಾದ್ಯದಿರಕ್ಷಿತಂ ।
ಪಾತಿವ್ರತ್ಯಂ ಮಯಾಸ್ತ್ಯತ್ರ ತರ್ಹ್ಯೇತತ್ತುಲಸೀದಳಂ ೭೭ ॥

ತುಲಸ್ಯಾಸ್ಸಂಧಿಮಾಪ್ನೋತು ನೋ ಚೇನ್ನಾಪ್ನೋತು ವೈ ತ್ವಿದಂ ।
ಏವಂ ವದತಿ ಜಾನಕ್ಯಾ ವಾಕ್ಯೇ ಪತ್ರಂ ಕ್ಷಣೇನ ತತ್ ॥ ೭೮ ॥

---

೭೪. ಈ ರೀತಿಯಾಗಿ ನೀನು ಹೇಳಿದರೆ ಆ ಎಲೆಯು ಗಿಡದೊಡನೆ ಸೇರಿಕೊಳ್ಳುವುದು. ಒಂದು ಕ್ಷಣಮಾತ್ರದಲ್ಲಿ ಸೇರಿಕೊಂಡು ಮೊದಲಿನಂತೆ ಆಗಿಹೋಗುತ್ತದೆ.

೭೫. ಎಲೈ ಸೀತೆಯೇ! ಆದ್ದರಿಂದ ನೀನು ಬೃಂದಾವನದ ಬಳಿಗೆ ಹೋಗು. ದುಃಖವನ್ನು ಹೊಂದಬೇಡ. ಹೀಗೆಂದು ಹೇಳಿ ನಾರದನು ಸೀತೆಯೊಡನೆ ಬೃಂದಾವನದ ಬಳಿಗೆ ಬಂದನು.

೭೬. ಸೀತೆಯು ಅಲ್ಲಿಗೆ ಬಂದು ತುಲಸಿಗೆ ನಮಸ್ಕಾರವನ್ನು ಮಾಡಿದಳು. ಆಗ ಎಲ್ಲರೂ ಕೇಳುತ್ತಿರುವಂತೆಯೇ ದೇವತೆಗಳು ಮತ್ತು ಆ ಮುನಿಗಳ ಸಮೂಹದಲ್ಲಿ ಇಂತೆಂದು ಹೇಳಿದಳು.

೭೭-೭೮. ಪದ್ಮ ಸುಗಂಧದ ವಾಸನೆ ನೋಡಿರುವುದನ್ನು ಒಂದನ್ನು ಬಿಟ್ಟು ಮಿಕ್ಕ ವಿಷಯದಲ್ಲಿ ನಾನು ಪಾತಿವ್ರತ್ಯವನ್ನು ರಕ್ಷಿಸಿಕೊಂಡಿದ್ದರೆ ತುಲಸೀದಳವು ತುಲಸಿಯೊಡನೆ ಸೇರಿಕೊಳ್ಳಲಿ, ಇಲ್ಲದಿದ್ದರೆ ಬೇಡ ಎಂದಳು. ಜಾನಕಿಯು ಹೀಗೆ ಹೇಳುತ್ತಿರಲು ಆ ತುಲಸೀ ಪತ್ರವು ಕ್ಷಣಕಾಲದಲ್ಲಿ ಮೊದಲಿನಂತೆ

ಪ್ರಾಪ್ತಂ ಸಂಧಿಂ ಪೂರ್ವಪಕ್ಷ ಪಶ್ಯತ್ಸು ಸಕಲೇಷ್ವಪಿ ।
ತದಾ ನಿನೇದುರ್ವಾದ್ಯಾನಿ ದೇವಾನಾಂ ರಾಘವಸ್ಯ ಚ ॥ ೭೯ ॥

ದೇವನಾರ್ಯೋ ವಿಮಾನಾಗ್ರೇ ಸಂಸ್ಥಿತಾಃ ಪುಷ್ಪವೃಷ್ಟಿಭಿಃ ।
ವವರ್ಷುರ್ಜಾನಕೀಂ ರಾಮಂ ವಿಪ್ರಾ ಊಚುರ್ಜಯಸ್ವನಾನ್ ॥ ೮೦ ॥

ತದಾ ಸೀತಾಂ ಸಮಾಲಿಂಗ್ಯ ರಾಘವೋ ಮುದಿತಾನನಾಂ ।
ಅಹ ತುಷ್ಟಮನಾಃ ಶ್ರೀಮಾನ್ ವಸನಾಹಾರಭೂಷಿತಃ ॥ ೮೧ ॥

ಹೇ ಸೀತೇ ಕಂಜನಯನೇ ಮುನೀನಾಮಪಿ ಮೋಹಿನಿ ।
ನೇದಂ ಮಯಾ ಶಿಕ್ಷಿತಂ ತೇ ಸರ್ವಸ್ತ್ರೀಣಾಂ ಸುಶಿಕ್ಷಿತಂ ॥ ೮೨ ॥

ಧರ್ಮಸಂಸ್ಥಾಪನಾರ್ಥಾಯ ಸಾಧೂನಾಂ ಪಾಲನಾಯ ಚ ।
ದುಷ್ಟಾನಾಂ ಚ ವಿನಾಶಾಯ ಮಯೇದಂ ರೂಪಮಾಶ್ರಿತಂ ॥ ೮೩ ॥

ಸೇರಿಕೊಂಡಿತು. ಇದನ್ನು ಎಲ್ಲರೂ ನೋಡುತ್ತಲೇ ಇದ್ದರು. ಆಗ ಸಂತೋಷ ದಿಂದ ದೇವತೆಗಳು ದುಂದುಭಿಯನ್ನು ಬಾರಿಸಿದರು ರಾಮನ ಕಡೆಯವರು ನಾನಾ ವಾದ್ಯಗಳನ್ನು ಬಾರಿಸಿದರು.

೮೦. ದೇವತಾ ಸ್ತ್ರೀಯರು ವಿಮಾನಗಳಲ್ಲಿ ಕುಳಿತುಕೊಂಡು ಜಾನಕಿಯ ಮೇಲೆಯೂ ಶ್ರೀರಾಮನ ಮೇಲೆಯೂ ಹೂಮಳೆಯನ್ನು ಕರೆದರು. ಬ್ರಾಹ್ಮಣರು ಜಯ ಜಯ ಎಂಬ ಧ್ವನಿಯನ್ನು ಮಾಡಿದರು.

೮೧. ಆಗ ರಾಮನು ಸಂತೋಷದಿಂದ ಸೀತೆಯನ್ನು ಆಲಂಗಿಸಿಕೊಂಡನು, ಆ ಸೀತೆಯೂ ಸಂತೋಷದಿಂದ ನಗುತ್ತಿದ್ದಳು. ಆಗ ಶ್ರೀರಾಮನು ಸೀತೆಯನ್ನು ಕುರಿತು ಇಂತೆಂದನು.

೮೨. ಕಂಜನಯನೆಯಾದ ಎಲೈ ಸೀತೆಯೇ! ನೀನು ಮುನಿಗಳಿಗೂ ಕೂಡ ಮೋಹವನ್ನುಂಟುಮಾಡುವವಳು. ಅಂತಹ ನಿನಗೆ ನಾನು ಶಿಕ್ಷೆಮಾಡಿದ್ದೇನೆಂದು ತಿಳಿಯಬೇಡ. ಉಳಿದ ಎಲ್ಲಾ ಸ್ತ್ರೀಯರಿಗೂ ಇದು ಮೇಲ್ಪಂಕ್ತಿಯಾಗಿರುವುದು.

೮೩. ಧರ್ಮವನ್ನು ಸ್ಥಾಪಿಸುವುದಕ್ಕೂ ದುಷ್ಟರನ್ನು ನಾಶಮಾಡುವುದಕ್ಕೂ ನಾನು ಈ ಅವತಾರವನ್ನು ಧರಿಸಿದ್ದೇನೆ.

ಪಾತಿವ್ರತ್ಯಂ ಸದಾ ಸ್ತ್ರೀಭಿಃ ಪಾಲನೀಯಂ ಧಿಯೇತಿ ಚ ।
ಮಯಾ ತೇ ಶಿಕ್ಷಿತಂ ಸೀತೇ ಮಾ ವಿಷಾದಂ ಭಜ ಪ್ರಿಯೇ ॥ ೮೪ ॥

ಇತ್ಯಾಶ್ವಾಸ್ಯ ಮುಹುಸ್ಸೀತಾಂ ಕೃತ್ವಾ ತಾಮತಿಹರ್ಷಿತಾಂ ।
ವಿಸರ್ಜಯಿತ್ವಾ ಶ್ರೀರಾಮಸ್ಸುರಾದೀನ್ಸಮಪೂಜಯತ್ ॥ ೮೫ ॥

ತತಸ್ಸರ್ವಾನ್ನಾರದಾದೀನ್ ಜಾನಕೀ ಪರಿವೇಷಣಂ ।
ವೇಗಾಚ್ಚಕಾರ ಮುದಿತಾ ಸ್ವೇದಬಿಂದ್ವಂಕಿತಾನನಾ ॥ ೮೬ ॥

ತತಸ್ಸರ್ವೇ ನಾರದಾದ್ಯಾಶ್ಚಕ್ರುರ್ಭೋಜನಮುತ್ತಮಂ ।
ತತೋ ಭುಕ್ತ್ವಾಽಥ ತಾಂಬೂಲಂ ರಾಮಂ ತುಷ್ಟಾವ ನಾರದಃ ॥ ೮೭ ॥

॥ ಶ್ರೀ ನಾರದ ಉವಾಚ ॥

ಶ್ರೀರಾಮಂ ಮುನಿ ವಿಶ್ರಾಮಂ ಜನಸದ್ಧಾಮಂಹೃದಯಾರಾಮಂ ।
ಸೀತಾರಂಜನಸತ್ಯಸನಾತನ ರಾಜಾರಾಮಂ ಘನಶ್ಯಾಮಂ ॥
ನಾರೀಸಂಸ್ತುತಕಾಲಿಂದೀನತನಿದ್ರಾಪ್ರಾರ್ಥಿತ ಭೂಪಾಲಂ ।
ರಾಮಂ ತ್ವಾಂ ಶಿರಸಾ ಸತತಂ ಪ್ರಣಮಾಮಿ ಚ್ಛೇದಿತಸತ್ತಾಲಂ ॥ ೮೮ ॥

---

೮೪. ಎಲ್ಲಾ ಹೆಂಗಸರೂ ಪಾತಿಪ್ರತ್ಯವನ್ನು ಪಾಲಿಸಬೇಕು. ಎಂಬ ಬುದ್ಧಿಯಿಂದ ನಿನ್ನನ್ನು ಹೀಗೆ ಶಿಕ್ಷಿಸಿದೆನು. ಇದಕ್ಕೋಸ್ಕರವಾಗಿ ದುಃಖಿಸಬೇಡ.

೮೫-೮೬. ಎಂಬುದಾಗಿ ಸೀತೆಯನ್ನು ಸಮಾಧಾನಮಾಡಿ ಸಂತೋಷಪಡಿಸಿ ಅವಳನ್ನು ಕಳುಹಿಸಿ ಅನಂತರ ಅಲ್ಲಿಗೆ ಬಂದಿದ್ದ ದೇವತೆಗಳನ್ನು ಪೂಜಿಸಿದನು. ಅನಂತರ ನಾರದಾದಿಗಳಿಗೆ ಆ ಸೀತೆಯು ಬೇಗ ಬೇಗನೆ ಭೋಜನಕ್ಕೆ ಬಡಿಸಿದಳು.

೮೭. ಅನಂತರ ನಾರದನೇ ಮುಂತಾದವರು ಅಲ್ಲಿ ಉತ್ತಮವಾದ ಭೋಜನವನ್ನು ಮಾಡಿದರು. ಅನಂತರ ನಾರದನು ತಾಂಬೂಲವನ್ನು ಹಾಕಿಕೊಂಡು ರಾಮನನ್ನು ಕುರಿತು ಇಂತೆಂದು ಸ್ತುತಿಸಿದನು.

೮೮. ಶ್ರೀನಾರದನು ಹೇಳಿದನು-ಮುನಿಗಳಿಗೆ ಸೌಖ್ಯವನ್ನುಂಟುಮಾಡಿದ, ಜನರಿಗೆ ಒಳ್ಳೆಯ ಮುಕ್ತಿಯನ್ನು ಕೊಡುವ, ಎಲ್ಲರ ಹೃದಯದಲ್ಲಿರುತ್ತಿರುವ, ಸೀತಾದೇವಿಯನ್ನು ರಂಜಿಸುವ, ಸತ್ಯಸ್ವರೂಪನನ್ನೂ ಸನಾತನೂ ಆದ ರಾಜರಲ್ಲಿ ಉತ್ತಮನಾದ ನೀಲಮೇಘದಂತೆ ಕಾಂತಿಯುಳ್ಳ, ದೇವತೆಗಳಿಂದ ಹೊಗಳಲ್ಪಟ್ಟ, ಕಾಲಿಂದಿಯಿಂದ ನಮಸ್ಕರಿಸಿಕೊಂಡ, ನಿದ್ರಾದೇವಿಯಿಂದ ಪ್ರಾರ್ಥಿತನಾದ, ತಾಲೆಯ ಮರಗಳನ್ನು ಕತ್ತರಿಸಿದ, ಮನೋಹರನಾದ ಶ್ರೀರಾಮನಾದ ನಿನ್ನನ್ನು ತಲೆ ಬಗ್ಗಿಸಿ ನಮಸ್ಕರಿಸುತ್ತೇನೆ.

ನಾನಾರಾಕ್ಷಸಹರ್ತಾರಂ ಶರಧರ್ತಾರಂ ಜನಭರ್ತಾರಂ ।
ವಾಲೀಮರ್ದನಸಾಗರಬಂಧನನಾನಾಕೌತುಕ ಕರ್ತಾರಂ ॥
ಪೌರಾನಂದದ ನಾರೀತೋಷದ ಕಸ್ತೂರೀಯುತಸತ್ಫಾಲಂ ।
ರಾಮಂ ತ್ವಾಂ ಶಿರಸಾ ಸತತಂ ಪ್ರಣಮಾಮಿ ಚ್ಛೇದಿತಸತ್ತಾಲಂ ॥ ೮೯ ॥

ಶ್ರೀಕಾಂತಂ ಜಗತೀಕಾಂತಂ ಸ್ತುತಸದ್ಭಕ್ತಂ ಬಹುಸದ್ಭಕ್ತಂ ।
ಬಹುಸದ್ಭಕ್ತಂ ಹೃದಯೇಪ್ಸಿತಪೂರಕಪದ್ಮಾಕ್ಷ ನೃಪವರ್ಯಂ ॥
ಭೂಜಾಕಾಂತಂ ಪೃಥ್ವೀಶೇಶಂ ವಿಶ್ವಾಮಿತ್ರಸುವಿದ್ಯಾದರ್ಶಿತಸಚ್ಛೀಲಂ ।
ರಾಮಂ ತ್ವಾಂ ಶಿರಸಾ ಸತತಂ ಪ್ರಣಮಾಮಿ ಚ್ಛೇದಿತಸತ್ತಾಲಂ ॥ ೯೦ ॥

ಸೀತಾರಂಜಿತವಿಶ್ವೇಶಂ ವರಪೃಥ್ವೀಶಂ ಸುರಲೋಕೇಶಂ ।
ಗ್ರಾವೋದ್ಧಾರಣರಾವಣಮರ್ದನತದ್ಭ್ರಾತರಿ ಕೃತಲಂಕೇಶಂ ॥
ಕಿಷ್ಕಿಂಧಾಕೃತಸುಗ್ರೀವಂ ಪ್ಲವಗೋದ್ವೃಂದಾಧಿಪಸತ್ಪಾಲಂ ।
ರಾಮಂ ತ್ವಾಂ ಶಿರಸಾ ಸತತಂ ಪ್ರಣಮಾಮಿಚ್ಛೇದಿತಸತ್ತಾಲಂ ॥ ೯೧ ॥

---

೮೯. ಅನೇಕ ವಿಧವಾದ ರಾಕ್ಷಸರನ್ನು ಕೊಂದ, ಬಿಲ್ಲನ್ನು ಹಿಡಿದಿರುವ ಜರನ್ನು ಪೋಷಿಸುವ, ವಾಲಿಯನ್ನು ನಾಶಮಾಡಿದ, ಸಾಗರವನ್ನು ಬಂಧಿಸಿದ, ಬಗೆಬಗೆಯ ಆಶ್ಚರ್ಯಕರವಾದ ಕೆಲಸಗಳನ್ನು ಮಾಡಿದ, ಪಟ್ಟಣಿಗರಿಗೆ ಆನಂದವನ್ನುಂಟುಮಾಡುತ್ತಿರುವ ಹೆಂಗಸಂಗೆ ಸಂತೋಷವನ್ನುಂಟುಮಾಡುವ, ಕಸ್ತೂರಿಯನ್ನು ಹಣೆಯಲ್ಲಿಟ್ಟುಕೊಂಡಿರುವ, ರಾಮನಾದ ನಿನ್ನನ್ನು ತಲೆತಗ್ಗಿಸಿ ನಮಸ್ಕರಿಸುತ್ತೇನೆ.

೯೦. ಶ್ರೀದೇವಿ ಭೂದೇವಿಯರಿಗೆ ಒಡೆಯನಾದ, ಭಕ್ತರಿಂದ ಸ್ತುತಿಸಿಕೊಳ್ಳುವ ಬಹಳವಾದ ಭಕ್ತರಿರುವ, ಮನಸ್ಸಿನಲ್ಲಿರುವುದನ್ನು ಕೊಡುವ, ಪದ್ಮದಂತೆಕಣ್ಣುಗಳುಳ್ಳ, ರಾಜಶ್ರೇಷ್ಠನಾದ,ಸೀತಾಪತಿಯಾದ, ರಾಜರಾಜನಾದ, ವಿಶ್ವಾಮಿತ್ರನಿಂದ ವಿದ್ಯೆಯನ್ನು ಕಲಿತು ಅದನ್ನು ಪ್ರಯೋಗದಲ್ಲಿಟ್ಟುಕೊಂಡಿರುವ, ಶ್ರೀರಾಮನನ್ನು ತಲೆಬಗ್ಗಿಸಿ ನಮಸ್ಕರಿಸುತ್ತೇನೆ.

೯೧. ಸೀತೆಯಿಂದ ಮನೋಹರನಾದ, ಪ್ರಪಂಚಕ್ಕೆ ಒಡೆಯನಾದ ಉತ್ತಮ ರಾಜನಾದ, ಸ್ವರ್ಗಕ್ಕೂ ಅಧಿಪತಿಯಾದ, ಕಲ್ಲಿನ ರೂಪವನ್ನು ಹೊಂದಿದ್ದ, ಅಹಲ್ಯೆಯನ್ನು ಉದ್ಧರಿಸಿದ, ರಾವಣನನ್ನು ಕೊಂದ, ವಿಭೀಷಣನಿಗೆ ಪಟ್ಟಾಭಿಷೇಕವನ್ನು ಮಾಡಿದ, ಕಿಷ್ಕಿಂಧೆಯನ್ನು ಸುಗ್ರೀವನಿಗೆ ಕೊಟ್ಟ, ಕಪಿಗಳ ಸಮೂಹಕ್ಕೆ ಒಡೆಯನಾದ ಸುಗ್ರೀವನಿಂದ ನಮಸ್ಕೃತನಾದ, ಶ್ರೀರಾಮನನ್ನು ತಲೆಬಗ್ಗಿಸಿ ನಮಸ್ಕರಿಸುತ್ತೇನೆ.

ಶ್ರೀನಾಥಂ ಜಗತಾಂ ನಾಥಂ ಜಗತೀನಾಥಂ ನೃಪವರನಾಥಂ ।
ಭೂದೇವಾಸುರನಿರ್ಜರ ಪನ್ನಗಗಂಧರ್ವಾದಿಕಸನ್ನಾಥಂ ॥
ಕೋದಂಡೋದ್ಧೃತ ತೂಣೀರಾನ್ವಿತವಿ ಗ್ರಹಧಿಕ್ಕೃತಭೂಪಾಲಂ ।
ರಾಮಂ ತ್ವಾಂ ಶಿರಸಾ ಸತತಂ ಪ್ರಣಮಾಮಿಚ್ಛೇದಿತಸತ್ತಾಲಂ ॥ ೯೨ ॥

ರಾಮೇಶಂ ಜಗತಾಮೀಶಂ ಜನಬುದ್ಧೀಶಂ ನತಲೋಕೇಶಂ ।
ವಾಲ್ಮೀಕೀಕೃತಸಂಸ್ತವಹರ್ಷಿತ ಸೀತಾಲಾಲಿತವಾಗೀಶಂ ॥
ಪೃಥ್ವೀಶಂ ಹೃತಭೂಭಾರಂ ನತಯೋಗೀಂದ್ರಂ ಜಗತೀಪಾಲಂ ।
ರಾಮಂ ತ್ವಾಂ ಶಿರಸಾ ಸತತಂ ಪ್ರಣಮಾಮಿಚ್ಛೇದಿತಸತ್ತಾಲಂ ॥ ೯೩ ॥

ಚಿದ್ರೂಪಂ ಜಿತದುರ್ಭೂಪಂ ನತಸದ್ದಿಕ್ಪಂ ನತಸದ್ಭೂಪಂ ।
ಸಪ್ತದ್ವೀಪಜವರ್ಷಜಕಾಮಿನಿ ಸಂನೀರಾಜಿತಪೃಥ್ವೀಶಂ ॥
ನಾನಾಪಾರ್ಥಿವನಾನೋಪಾಯನಸನ್ಮುಕ್ತೋಷಿತಸದ್ಭೂಪಂ ।
ರಾಮಂ ತ್ವಾಂ ಶಿರಸಾ ಸತತಂ ಪ್ರಣಮಾಮಿಚ್ಛೇದಿತಸತ್ತಾಲಂ ॥ ೯೪ ॥

---

೯೨. ಲಕ್ಷ್ಮೀನಾಥನಾದ ಜಗತ್ತಿಗೆ ನಾಥನಾದ ಭೂಮಿಗೆ ಒಡೆಯನಾದ ರಾಜರಾಜನಾದ, ದೇವತೆಗಳು ದಾನವರು ಮನುಷ್ಯರು, ಪನ್ನಗರು, ಗಂಧರ್ವರು ಇವರೇ ಮುಂತಾದವರಿಗೆ ನಾಥನಾದ, ಬಿಲ್ಲುಬಾಣಗಳನ್ನು ಧರಿಸಿ ಯುದ್ಧದಲ್ಲಿ ಎದುರಿಸಿದ ರಾಜರನ್ನು ಗೆದ್ದಿರುವ, ಶ್ರೀರಾಮುನಿಗೆ ತಲೆ ಬಗ್ಗಿ ನಮಸ್ಕರಿಸುತ್ತೇನೆ.

೯೩. ರಮಾಪತಿಯಾದ, ಜಗತ್ತಿಗೇ ಪತಿಯಾದ, ಜನಗಳ ಬುದ್ಧಿಗೆ ಪ್ರೇರಕನಾದ, ರಾಜರಿಂದ ನಮಸ್ಕರಿಸಿಕೊಳ್ಳುವ, ವಾಲ್ಮೀಕಿಯು ಮಾಡಿದ ಸ್ತೋತ್ರದಿಂದ ಹರ್ಷಗೊಂಡು ಸೀತೆಯನ್ನು ಲಾಲಿಸಿದ, ಸರಸ್ವತಿಗೆ ಅಧಿಪತಿಯಾದ, ರಾಜನಾದ ಭೂಭಾರವನ್ನು ನಾಶಮಾಡಿದ, ಯೋಗೀಂದ್ರರಿಂದ ನಮಸ್ಕೃತನಾದ, ಜಗತ್ತಿಗೇ ಪಾಲಕನಾದ, ಶ್ರೀರಾಮುನನ್ನು ತಲೆಬಗ್ಗಿಸಿ ನಮಸ್ಕರಿಸುತ್ತೇನೆ.

೯೪. ಚಿದ್ರೂಪನಾದ, ದುಷ್ಟರಾದ ರಾಜರನ್ನು ಗೆದ್ದಿರುವ, ದಿಕ್ಪಾಲಕರಿಂದ ನಮಸ್ಕೃತನಾದ, ಸಪ್ತದ್ವೀಪಗಳಲ್ಲಿರುವ ಮತ್ತು ವರ್ಷಗಳಲ್ಲಿರುವ ಸ್ತ್ರೀಯರಿಂದ ಆರತಿಯನ್ನೆತ್ತಿಸಿಕೊಂಡ, ರಾಜನಾದ, ಅನೇಕ ರಾಜರು ಅನೇಕ ಬಗೆಯಾದ ಕಪ್ಪಗಳನ್ನು ಕೊಟ್ಟು ಸಂತೋಷಪಡಿಸಿದ, ರಾಜನಾದ ರಾಮುನನ್ನು ತಲೆತಗ್ಗಿಸಿ ನಮಸ್ಕರಿಸುತ್ತೇನೆ.

ಸಂಸೇವ್ಯಂ ಮುನಿಭಿರ್ಗೇಯಂ ಕವಿಭಿಸ್ತವ್ಯಂ ಮುನಿಹೃದಿಧಾರ್ಯಂ ।
ನಾನಾಪಂಡಿತತರ್ಕ ಪುರಾಣಜವಾಕ್ಯಾದಿಷು ಕೃತಸತ್ಕಾವ್ಯಂ ॥
ಸಾಕೇತಸ್ಥಿತಕೌಸಲ್ಯಾಸುತಗಂಧಾದ್ಯಂಕಿತಸತ್ಫಾಲಂ ।
ರಾಮಂ ತ್ವಾಂ ಶಿರಸಾ ಸತತಂ ಪ್ರಣಮಾಮಿಚ್ಛೇದಿತಸತ್ತಾಲಂ ॥ ೯೫ ॥

ಭೂಪಾಲಂ ಘನಸನ್ನೀಲಂ ನೃಪಸದ್ಬಾಲಂ ಕಲಿಸಂಕಾಲಂ ।
ಸೀತಾಜಾನಿವರೋತ್ಪಲಲೋಚನ ಮಂತ್ರೀಮೋಚಿತಸತ್ಕಾಲಂ ॥
ಶ್ರೀಸಿತಾಕೃತ ಪದ್ಮಾಸ್ವಾದನಸಮ್ಯಕ್ ಶಿಕ್ಷಿತಸತ್ಕಾಲಂ ।
ರಾಮಂ ತ್ವಾಂ ಸಿರಸಾ ಸತತಂ ಪ್ರಣಮಾಮಿಚ್ಛೇದಿತಸತ್ತಾಲಂ ॥ ೯೬ ॥

ಹೇ ರಾಜನ್ ನವಭಿಃ ಶ್ಲೋಕೈರ್ಭುವಿ ಪಾಪಘ್ನಂ ನವಕಂ ರಮ್ಯಂ ।
ಮೇ ಬುಧ್ಯಾ ಕೃತಮುತ್ತಮನೂತನಮೇತದ್ರಾಘವಮರ್ತ್ಯಾನಾಂ ॥
ಸ್ತ್ರೀಪೌತ್ರಾದಿಕಸುಕ್ಷೇಮಪ್ರದಮಸ್ಮತ್ಸದ್ವರ ತಶ್ಚಾಲಂ ।
ರಾಮಂ ತ್ವಾಂ ಶಿರಸಾ ಸತತಂ ಪ್ರಣಮಾಮಿಚ್ಛೇದಿತಸತ್ತಾಲಂ ॥ ೯೭ ॥

---

೯೫. ಸೇವಿಸುವುದಕ್ಕೆ ಯೋಗ್ಯನಾದ, ಮುನಿಗಳಿಂದ ಹೃದಯದಲ್ಲಿ ಧರಿಸಲ್ಪಡುವ, ಕವಿಗಳಿಂದ ಸ್ತುತಿಸಲ್ಪಡುವ, ನಾನಾ ಪಂಡಿತರುಗಳಿಂದ ತರ್ಕ, ಪುರಾಣಗಳ ವಾಕ್ಯಗಳ ರೂಪದಲ್ಲಿ ಬರೆಯಲ್ಪಟ್ಟಿರುವ, ಅಯೋಧ್ಯೆಯಲ್ಲಿ ನೆಲಸಿರುವ, ಕೌಸಲ್ಯೆಯ ಮಗನಾದ ಗಂಧ ಕಸ್ತೂರಿಗಳನ್ನು ಹಣೆಗಿಟ್ಟುಕೊಂಡಿರುವ, ಶ್ರೀರಾಮನನ್ನು ತಲೆಬಗ್ಗಿಸಿ ನಮಸ್ಕರಿಸುತ್ತೇನೆ.

೯೬. ಭೂಪಾಲನಾದ, ಮೇಘದಂತೆ ನೀಲಿಬಣ್ಣವುಳ್ಳ, ರಾಜಪುತ್ರರಲ್ಲಿ ಯೋಗ್ಯನಾದ, ಮೇಘದಂತೆ, ನೀಲಿಬಣ್ಣವುಳ್ಳ, ಕಲಿಯನ್ನು ನಾಶಮಾಡುವ, ಸೀತಾಪತಿಯಾದ, ಕನ್ನೈದಿಲೆಯಂತೆ ಕಣ್ಣುಗಳುಳ್ಳ ಮಂತ್ರಿಯಾದ ಸುಮಂತ್ರನನ್ನು ಯಮನಿಂದ ಬಿಡಿಸಿದ, ಶ್ರೀ ಸೀತೆಯು ಪತಿಗೆ ನೀವೇದಿಸದೆ ಪದ್ಮದ ವಾಸನೆಯನ್ನು ನೋಡಲು ಅವಳನ್ನು ಶಿಕ್ಷಿಸಿದಂತಹ ರಾಮನನ್ನು ತಲೆ ಬಗ್ಗಿಸಿ ನಮಸ್ಕರಿಸುತ್ತೇನೆ.

೯೭. ಎಲೈ ದೊರೆಯೇ! ಈ ಒಂಭತ್ತು ಶ್ಲೋಕಗಳನ್ನು ಹೇಳಿರುವೆನು. ಇದು ಪಾಪನಾಶಕವಾದುದು. ರಮ್ಯವಾದುದು. ನನ್ನ ಬುದ್ಧಿಯಿಂದಲೇ ಮಾಡಿದುದು, ಉತ್ತಮವಾಗಿಯೂ ನೂತನವಾಗಿಯೂ ಇರುವುದು. ಇದು ಮನುಷ್ಯರಿಗೆ ಹೆಂಡತಿಮಕ್ಕಳುಗಳಿಗೆ ಕ್ಷೇಮವನ್ನು ಕೊಡತಕ್ಕದ್ದು ಇದಕ್ಕಿಂತಲೂ ಬೇರೆಯುವರೇ ಬೇಕಿರುವುದಿಲ್ಲ. ಇಂತಹ ರಾಮನನ್ನು ತಲೆ ಬಗ್ಗಿಸಿ ನಮಸ್ಕರಿಸುತ್ತೇನೆ.

॥ ಶ್ರೀರಾಮದಾಸ ಉವಾಚ ॥

ಏವಂ ಸ್ತುತ್ವಾ ರಮಾನಾಥಂ ರಾಘವಂ ಭಕ್ತವತ್ಸಲಂ ।
ಪ್ರಣಮ್ಯಾಜ್ಞಾಂ ಪ್ರಭೋಃ ಪ್ರಾಪ್ಯ ಪ್ರಯಯೌ ನಾರದೋ ಮುದಾ ॥
ಅಮರಾ ಮುನಯಸ್ಸರ್ವೇ ಜಗ್ಮುರ್ನೈಜ ಸ್ವಸ್ಥಲಾನಿ ವೈ ।
ಏವಂ ಶ್ರೀರಾಮಚಂದ್ರೇಣ ನರರೂಪಧರೇಣ ಚ ॥ ೯೯ ॥
ಕೌತುಕಾನಿ ವಿಚಿತ್ರಾಣಿ ಕೃತಾನಿ ಜಗತೀತಲೇ ।
ಕಸ್ತಾನ್ಯತ್ರ ಕ್ಷಮೋ ವಕ್ತುಂ ವಿಸ್ತರೇಣ ದ್ವಿಜೋತ್ತಮ ॥ ೧೦೦ ॥
ತೇಷು ಯದ್ಯದ್ರಾಘವೇಣ ಸ್ಮಾರಿತಂ ತ್ವಿಹ ವೈ ಮಮ ।
ತತ್ತತ್ಪ್ರಕಥ್ಯತೇ ಶಿಷ್ಯ ತವಾಗ್ರೇ ರಾಘವಾಜ್ಞಯಾ ॥ ೧೦೧ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಉತ್ತರಾರ್ಧೇ ಸೀತಯಾ ತುಲಸೀ ಪತ್ರಸಂಧಿರ್ನಾಮದ್ವಾವಿಂಶಸ್ಸರ್ಗಃ ಸಮಾಪ್ತಃ

---

೯೮ ಶ್ರೀರಾಮದಾಸನು ಹೇಳಿದನು–ಈ ರೀತಿಯಾಗಿ ಲಕ್ಷ್ಮೀಪತಿಯನ್ನು ಸ್ತುತಿಸಿ ನಮಸ್ಕರಿಸಿ ಆ ಪ್ರಭುವಿನ ಅಪ್ಪಣೆಯನ್ನು ಪಡೆದು ನಾರದನು ಸಂತೋಷದಿಂದ ಹೊರಟುಹೋದನು.

೯೯–೧೦೦. ಅನಂತರ ದೇವತೆಗಳೂ ಮುನಿಗಳೂ ಅವರವರ ಸ್ಥಳಗಳಿಗೆ ಹೊರಟುಹೋದರು. ರಾಮಚಂದ್ರನು ಈ ರೀತಿಯಾಗಿ ನರರೂಪವನ್ನು ಧರಿಸಿ ಈ ಲೋಕದಲ್ಲಿ ಬಗೆ ಬಗೆಯಾದ ಕೌತುಕವನ್ನು ಮಾಡಿ ತೋರಿಸಿರುವುದನ್ನು ಲೋಕದಲ್ಲಿ ವಿವರಿಸಲು ಯಾರಿಂದಲೂ ಸಾಧ್ಯವಿಲ್ಲ.

೧೦೧. ಎಲೈ ಶಿಷ್ಯನೇ! ರಾಮನು ಯಾವಾವುದನ್ನು ಜ್ಞಾಪಕಕ್ಕೆ ಬರುವಂತೆ ಮಾಡುವನೋ ಅವೆಲ್ಲವನ್ನೂ ಆ ರಾಮನ ಅಪ್ಪಣೆಯಮೇಲೆ ನಿನಗೆ ಹೇಳಿದ್ದೇನೆ.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ಸೀತೆಯು ತುಲಸಿಯ ಎಲೆಯನ್ನು ಗಿಡಕ್ಕೆ ಸೇರಿಸಿದಳು ಎಂಬ ಇಪ್ಪತ್ತೆರಡನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಇಪ್ಪತ್ತೆರಡನೆಯ ಸರ್ಗದ ಸಾರಾಂಶವು

ಒಂದುಸಾರಿ ಶ್ರೀರಾಮನು ಸಭೆಯಲ್ಲಿ ಕುಳಿತಿರಲು ಭೂರಿಕೀರ್ತಿಯೆಂಬ ರಾಮನ ಸ್ನೇಹಿತನು ರಾಮನಿಗೆ ಹಣ್ಣುಗಳನ್ನೂ ಹೂವುಗಳನ್ನೂ ಬುಟ್ಟಿಗಳಲ್ಲಿ ತುಂಬಿಕಳುಹಿಸಿದನು. ರಾಮನು ಅವೆಲ್ಲವನ್ನೂ ಸೀತೆಯ ಬಳಿಗೆ ಕಳುಹಿಸಿ ಕೊಟ್ಟನು. ಆ ಸೀತೆಯು ಅವುಗಳಲ್ಲಿ ಏನಿರಬಹುದೆಂಬ ಕುತೂಹಲದಿಂದ ಒಂದು ಬುಟ್ಟಿಯನ್ನು ಬಿಚ್ಚಿ ಅದರಲ್ಲಿ ಒಳ್ಳೆಯ ಹೂವುಗಳಿದ್ದುದನ್ನು ನೋಡಿ ಒಂದನ್ನು ತೆಗೆದುಕೊಂಡು ರಾಮನಿಗೆ ಅರ್ಪಿಸದೆ ಅದರ ಸುವಾಸನೆಯನ್ನು ಅನೇಕಬಾರಿ ಮೂಸಿನೋಡಿದಳು. ಅನಂತರ ಆ ಬುಟ್ಟಿಯನ್ನು ಮೊದಲಿನಂತೆಯೇ ಮುಚ್ಚಿ ಅವುಗಳ ಜೊತೆಯಲ್ಲಿ ಇಟ್ಟುಬಿಟ್ಟಳು.

ರಾಮಚಂದ್ರನು ಸಭೆಯಲ್ಲಿದ್ದರೂ ಸೀತೆಯು ಈ ಹೂವನ್ನು ತೆಗೆದು ನೋಡಿದುದನ್ನು ತಿಳಿದುಕೊಂಡು ಈಕೆಯು ಮಾಡಿದ ಕೆಲಸವು ಯೋಗ್ಯವಲ್ಲ. ಪತಿಯು ವಾಸನೆನೋಡದಿರುವಾಗ ಆಕೆಯು ಅದನ್ನು ವಾಸಿಸಬಾರದಾಗಿದ್ದಿತು. ಈ ಸೀತೆಯನ್ನೇ ಮೇಲ್ಪಂಕ್ತಿಯನ್ನಾಗಿ ಇಟ್ಟುಕೊಂಡು ಉಳಿದ ಹೆಂಗಸರೂ ಅದೇ ರೀತಿಯಾಗಿ ಮಾಡುವರು ಆದ್ದರಿಂದ ಆ ಸೀತೆಗೆ ಶಿಕ್ಷಿಸಿ ಬುದ್ಧಿಯನ್ನು ಕಲಿಸಬೇಕೆಂದು ಕೊಂಡನು.

ಸಭೆಯಿಂದ ಮನೆಗೆ ಹೋದಮೇಲೆ ಈ ವಿಷಯವನ್ನು ತಿಳಿಯದವನಂತೆ ಆಕೆಯೊಡನೆ ಆಟಪಾಟಗಳನ್ನೂ ಸರಸಸಲ್ಲಾಪಗಳನ್ನೂ ಆಡುತ್ತಿದ್ದನು.

ಸೀತೆಯು ರಾಮನು ಕಳುಹಿಸಿದ್ದ ಆ ಬುಟ್ಟಿಗಳೆನ್ನೆಲ್ಲಾ ತಂದು ರಾಮನೆದುರಿಗೆ ಅವುಗಳಲ್ಲಿರುವುದನ್ನು ತೋರಿಸಿದಳು. ರಾಮನು ಅವುಗಳನ್ನು ನೋಡಿ ತಮ್ಮಂದಿರಿಗೂ ಮಕ್ಕಳಿಗೂ ತಾಯಿಯರಿಗೂ ಉಳಿದವರಿಗೂ ಕೂಡ ಯಥಾಯೋಗ್ಯವಾಗಿ ಅವನ್ನು ಕಳುಹಿಸಿದನು. ಸೀತೆಗೂ ಅನೇಕವಾಗಿ ಕೊಟ್ಟನು. ಆದರೆ ಸೀತೆಯು ವಾಸನೆನೋಡಿದ ವಿಷಯವನ್ನು ತಿಳಿಯದವನಂತೆ ಸುಮ್ಮನೇ ಇದ್ದುಬಿಟ್ಟನು.

ಹೀಗಿರುತ್ತಿರಲು ಏಕಾದಶಿಯು ಬಂದಿತು. ಆದಿನ ಸೀತೆಯು ಉಪವಾಸವನ್ನು ಮಾಡಿ ಮಾರನೆಯ ದಿನ ಸ್ನಾನಮಾಡಿ ತುಳಸಿಯ ಪೂಜೆಯನ್ನು ಮಾಡಲು ಬೃಂದಾವನದ ಬಳಿಗೆ ಹೋದಳು.

ಅಲ್ಲಿ ತುಳಸಿಯ ಪೂಜೆಯನ್ನು ವೈಭವದಿಂದ ಮಾಡಿ ಪ್ರದಕ್ಷಿಣೆಯನ್ನು ಮಾಡಲು ಹೊರಟಳು. ಒಂದೆರಡು ಪ್ರದಕ್ಷಿಣೆಗಳಾದುವು. ಈಕೆಗೆ ಹಿಂದಿನದಿನ ಆಹಾರವಿಲ್ಲದುದರಿಂದ ಬಲ ಹೀನಳಾಗಿ ಪ್ರದಕ್ಷಣೆಮಾಡುವಾಗ ತತ್ತರಿಸುತ್ತಿದ್ದಳು. ಆದುದರಿಂದ ಹೆಜ್ಜೆಯಿಡುವುದರಲ್ಲಿ ಸ್ವಲ್ಪ ವ್ಯತ್ಯಾಸವಾಗಿ ತನ್ನ ಸೆರಗಿನ ಅಂಚು ಆ ತುಲಸಿಗಿಡಕ್ಕೆ ಸಿಕ್ಕಿಕೊಂಡಿತು. ಅದನ್ನು ಎಳೆಯಲು ಆದರಿಂದ ಒಂದು ಎಲೆಯು ಕಿತ್ತುಬಂದು ನೆಲದಮೇಲೆ ಬಿದ್ದಿತು. ಇದನ್ನು ನೋಡಿ ದ್ವಾದಶಿಯ ದಿವಸ ಈ ಎಲೆಯನ್ನು ಕಿತ್ತುದು ಅಧರ್ಮವಾಯಿತೆಂದು ಭಯಪಟ್ಟುಕೊಂಡು ಅದಕ್ಕೆ ನಮಸ್ಕರಿಸಿ ಆ ಎಲೆಯನ್ನು ತೆಗೆದುಕೊಂಡು ಅದನ್ನು ಬೃಂದಾವನದೊಳಕ್ಕೆ ಹಾಕಿದಳು. ಅನಂತರ ಆ ತುಳಸಿಗೆ ಮತ್ತೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಮನೆಗೆ ಹೋಗಿ ರಾಮನ ಬಳಿಯಲ್ಲಿದ್ದುಬಿಟ್ಟಳು.

ಇಷ್ಟುಹೊತ್ತಿಗೆ . ನಾರದನು ರಾಮನ ಬಳಿಗೆ ಬಂದನು. ರಾಮನು ಅವನನ್ನು ನೋಡಿ ಎದುರುಗೊಂಡು ಭಕ್ತಿಯಿಂದ ಪೂಜಿಸಿದನು. ಅನಂತರ ಭೋಜನಕ್ಕೋಸ್ಕರವಾಗಿ ಚಿನ್ನದ ತಟ್ಟೆಯನ್ನು ಅವನೆದುರಿಗೆ ಇಟ್ಟು ಅದಕ್ಕೆ ಎಲ್ಲವನ್ನೂ ಬಡಿಸುವಂತೆ ರಾಮನು ಸೀತೆಗೆ ಅಪ್ಪಣೆಮಾಡಿದನು. ಇದನ್ನು ಕೇಳಿದ ಸೀತೆಯು ಆ ನಾರದನಿಗೆ ಬಡಿಸಲು ಕಾಮಧೇನುವಿನಿಂದಲೇ ಸಿದ್ಧಪಡಿಸಲ್ಪಟ್ಟ ಪದಾರ್ಥಗಳನ್ನು ತೆಗೆದುಕೊಂಡು ಅವನ್ನು ಬಡಿಸಲು ಬೇಗನೆ ಬಂದಳು.

ಇದನ್ನು ನೋಡಿ ನಾರದನು ರಾಮನನ್ನು ಕುರಿತು ಎಲೈ ರಾಮನೆ ! ಈ ಸೀತೆಯು ನನಗೆ ಬಡಿಸಿದರೆ ನಾನು ಊಟಮಾಡುವುದಿಲ್ಲ. ಈಕೆಯು ನನಗೆ ಬಡಿಸಬೇಕಾದುದಿಲ್ಲವೆಂದನು. ನಾರದನು ಇಂತೆಂದುದನ್ನು ಕೇಳಿ ಸೀತೆಯು ಆಶ್ಚರ್ಯಪಡುತ್ತ ಹೆದರಿದಳು. ಸರ್ವಾತ್ಮಕನಾದ ರಾಮನು ತನಗೆ ತಿಳಿದಿದ್ದರೂ ತಿಳಿಯದವನಂತೆ ಭಯವನ್ನು ನಟಿಸುತ್ತ ನಾರದನನ್ನು ಕುರಿತು ಎಲೈ ಋಷಿಯೆ ! ಈ ಸೀತೆಯು ಬಡಿಸಿದರೆ ಊಟಮಾಡುವುದಿಲ್ಲವೆನ್ನಲು ಕಾರಣವೇನು ? ಹೇಳು ಎಂದನು.

ಅದನ್ನು ಕೇಳಿ ನಾರದನು ಸೀತೆಯು ಈ ದಿನ ಪಾಪ ಕೆಲಸವನ್ನು ಮಾಡಿರುವಳು ತಿಳಿಯದವನಂತೆ ಕೇಳುತ್ತಿರುವೆಯಲ್ಲಾ ! ಒಂದು ವೇಳೆ ತಿಳಿಯದಿದ್ದರೆ ಕೇಳು ಹೇಳುತ್ತೇನೆ.

ಈಕೆಯು ದ್ವಾದಶಿಯ ದಿವಸದಲ್ಲಿ ತುಳುಸಿಯ ಎಲೆಯನ್ನು ಕಿತ್ತುಬಿಟ್ಟಳು. ನಾನು ಸುಳ್ಳುಹೇಳುತ್ತೇನೆಂದು ನಿನಗೆ ತೋರಿದರೆ ನೀನು ವೃಂದಾವನಕ್ಕೆ ಹೋಗಿ ನೋಡಬಹುದು.

ಸಂಕ್ರಮಣ, ಚತುರ್ದಶಿ, ದ್ವಾದಶಿ, ವ್ಯತೀಪಾತ, ಸಂಧ್ಯಾಕಾಲ, ಶುಕ್ರವಾರ ಮಂಗಳವಾರ, ಅಪರಾಹ್ಣ, ಹೆತ್ತಸೂತಕ, ಸತ್ತಸೂತಕ, ಬಂದಿರುವುದು. ಇಂತಹ ಕಾಲಗಳಲ್ಲಿ ತುಲಸಿಯನ್ನು ಕುಯ್ಯಬಾರದು. ಹಾಗೆ ಕಿತ್ತರೆ ಹರಿಯ ತಲೆಯನ್ನು ಕುಯ್ದ ಪಾಪಕ್ಕೆ ಒಳಗಾಗುತ್ತಾರೆ. ಅಲ್ಲದೆ ದ್ವಾದಶಿಯ ದಿನ ತುಲಸೀ ಪತ್ರೆಯನ್ನೂ ಕಾರ್ತಿಕ ಮಾಸದಲ್ಲಿ ನೆಲ್ಲಿಯ ಎಲೆಯನ್ನೂ ಕಿತ್ತರೆ ಅವರು ಬಹು ಗರ್ಹಿತವಾದ ನರಕಕ್ಕೆ ಹೋಗುತ್ತಾರೆ.

ಅಕಾಲದಲ್ಲಿ ತುಲಸೀ ಪತ್ರವನ್ನು ಕೀಳುವ ಗಂಡಸಾಗಲಿ ಹೆಂಗಸಾಗಲಿ ಬ್ರಹ್ಮಹತ್ಯೆಗೊಳಗಾಗುತ್ತಾರೆ ಎಂದಿರುವುದು. ಇದನ್ನು ಎಲ್ಲಾ ಋಷಿಗಳೂ ಒಮ್ಮತದಿಂದ ಒಪ್ಪಿಕೊಂಡಿರುತ್ತಾರೆ. ಪುರುಷರಿಗೇನೇ ದೋಷಗಳು ಈ ರೀತಿಯಲ್ಲಿರುವಾಗ ಸ್ವಭಾವವಾಗಿಯೇ ಅನೇಕ ದೋಷಗಳಿಗಳೊಳಗಾಗಿರುವ ಹೆಂಗಸರ ವಿಷಯದಲ್ಲಿ ಹೇಳತಕ್ಕದ್ದೇನಿರುವುದು.

ಎಲೈ ರಾಮನೇ ! ಈ ಕಾರಣದಿಂದಲೇ ಸೀತೆ ಬಡಿಸಿದರೆ ವ್ರತದಲ್ಲಿರುವ ನಾನು ಭೋಜನವನ್ನು ಮಾಡುವುದಿಲ್ಲವೆಂದು ಹೇಳಿದೆನು ಎಂದನು.

.ನಾರದನು ಇಂತೆಂದು ಹೇಳಿದುದನ್ನು ಕೇಳಿ ರಾಮನು ಅವನನ್ನು ಕುರಿತು ಎಲೈ ಮುನಿಯೆ ! ಈ ನನ್ನ ಸೀತೆಯನ್ನು ನೀನೇ ಶುದ್ಧಳನ್ನಾಗಿ ಮಾಡಬೇಕು. ವರದಾನದಿಂದಾಗಲಿ ಪ್ರಾಯಶ್ಚಿತ್ತದಿಂದಾಗಲಿ, ಖಂಡಿತವಾಗಿಯೂ ಪುನೀತಳನ್ನಾಗಿ ಮಾಡು. ಕೈಮುಗಿದುಕೊಂಡು ತಲೆ ಬಗ್ಗಿಸಿ ನಮಸ್ಕರಿಸಿ ಕೇಳಿಕೊಳ್ಳುತ್ತೇನೆ ಎಂದನು.

ನಾರದನು ಎಲೈ ರಾಮನೆ! ಬ್ರಹ್ಮಹತ್ಯಾದಿ ಪಾಪಗಳ ನಿವೃತ್ತಿಗೋಸ್ಕರವಾಗಿ ಋಷಿಗಳು ನಾನಾ ವಿಧವಾದ ಪ್ರಾಯಶ್ಚಿತ್ತಗಳನ್ನು ಹೇಳಿರುವರು ಆದರೆ ದ್ವಾದಶಿಯ ದಿವಸ ತುಳಿಸಿಯ ಎಲೆಯನ್ನು ಕುಯ್ದ ಪಾಪವು ಹೋಗುವಂತೆ ಹೇಳಿರುವ ಪ್ರಾಯಶ್ಚಿತ್ತವನ್ನು ನಾನೆಲ್ಲಿಯೂ ನೋಡಿಯೇ ಇಲ್ಲ. ಆದರೆ ಈ

ಒಂದು ಉಪಾಯವಿರುವುದು, ಅದೇನೆಂದರೆ ಸೀತೆಯು ತನ್ನ ಪಾತಿವ್ರತ್ಯದ ಬಲದಿಂದ ನನ್ನೆದುರಿಗೆ ಆ ತುಳಸಿಯ ಎಲೆಯು ಮತ್ತೆ ತನ್ನ ಜಾಗಕ್ಕೆ ಸೇರಿಕೊಳ್ಳುವಂತೆ ಮಾಡಿದರೆ ಆಗ ಆಕೆಯು ಶುದ್ಧಳಾಗುತ್ತಾಳೆ, ಇದು ಸತ್ಯವು ಎಂದನು.

ಋಷಿಯು ಈ ಮಾತನ್ನು ಕೇಳಿ ರಾಮನು ಸೀತೆಯ ಮುಖವನ್ನು ನೋಡಿದನು, ಸೀತೆಯು ನಾರದನನ್ನು ನೋಡುತ್ತ ಎಲೈ ಋಷಿಯೇ ! ಈಗ ನನ್ನ ಪಾತಿವ್ರತ್ಯದ ಬಲವನ್ನು ನೋಡು. ಈ ತುಳಸಿಯ ಎಲೆಯು ಮತ್ತೆ ಅಲ್ಲಿಯೇ ಸೇರಿಕೊಳ್ಳುವಂತೆ ಮಾಡುತ್ತೇನೆ ಎಂದೆನುತ್ತಾ ಕೈಯ್ಯಲ್ಲಿ ಹಿಡಿದಿದ್ದ ಅನ್ನದ ಪಾತ್ರೆಗಳನ್ನು ಅಲ್ಲಿಯೇ ಇಟ್ಟು ಬೃಂದಾವನದ ಬಳಿಗೆ ಬೇಗನೆ ಹೋದಳು.

ರಾಮನೂ ನಾರದನೂ ಲಕ್ಷ್ಮಣಾದಿಗಳೂ ಕೂಡ ಒಡನೆಯೇ ಇದನ್ನು ನೋಡಲು ಅಲ್ಲಿಗೆ ಹೋದರು. ಊರ್ಮಿಲಿಯೇ ಮುಂತಾದ ವಾರಗಿತ್ತಿಯರೂ ಕೌಸಲ್ಯೆಯೇ ಮುಂತಾದ ಅತ್ತೆಯರೂ ಅಲ್ಲಿಗೆ ಬಂದರು. ಇದನ್ನು ನೋಡಲು ದೇತೆವಗಳೂ ಕೂಡ ಅಲ್ಲಿಗೆ ಬಂದುಬಿಟ್ಟರು.

ಆಗ ಸೀತೆಯು ಬೃಂದಾವನದ ಬಳಿಗೆ ಹೋಗಿ ಆ ತುಳಸಿಗೆ ನಮಸ್ಕರಿಸಿ ಎಲೈ ತುಳಸಿಯೇ ! ನಾನು ಹೇಳುವುದನ್ನು ಕೇಳು. ಪಾವನವಾದ ಪಾತಿವ್ರತ್ಯದ ಬಲವು ನನ್ನಲ್ಲಿ ಪೂರ್ಣವಾಗಿದ್ದರೆ ಬಿದ್ದಿರುವ ಈ ನಿನ್ನ ಎಲೆಯು ನಿನ್ನಲ್ಲಿ ಸೇರಿಕೊಳ್ಳಲಿ, ಎಂದಳು. ಹೀಗೆ ಹೇಳಿ ಆ ಸೀತೆಯು ಬಹಳ ಹೊತ್ತಿನವರೆಗೆ ನಿರೀಕ್ಷಿಸುತ್ತಿದ್ದರೂ ಆ ಎಲೆಯು ಸೇರಿಕೊಳ್ಳಲೇ ಇಲ್ಲ. ಇದರಿಂದ ಆ ಸೀತೆಯು ಬಹು ಆಶ್ಚರ್ಯಪಟ್ಟುಕೊಳ್ಳುತ್ತ ದುಃಖಿತಳಾದಳು. ಇದನ್ನು ನೋಡಿ ಅಲ್ಲಿಗೆ ಬಂದಿದ್ದ ದೊರೆಗಳೂ ಯಕ್ಷರೂ ನಾಗರೇ ಮುಂತಾದವರೂ ದೇವನಾರಿಯುವರೂ ಆಶ್ಚರ್ಯ ಪಡುತ್ತಿದ್ದರು.

ಸೀತೆಯು ಹೀಗೆ ದುಃಖಿತಳಾದುದನ್ನು ನಾರದನು ನೋಡಿ ಆ ಸೀತೆಯನ್ನು ಬೇರೆ ಯಾರೂ ಇಲ್ಲದಿರುವ ಸ್ಥಳಕ್ಕೆ ಕರೆದುಕೊಂಡು ಹೋಗಿ ಇಂತೆಂದು ವಿಷಯವನ್ನು ತಿಳಿಸಿದನು.

ಎಲೈ ಸೀತೆಯೆ ! ಈ ಎಲೆಯು ನಿನ್ನ ಪ್ರತಿಜ್ಞೆಯಂತೆ ಸೇರಿಕೊಳ್ಳದಿರಲು ಕಾರಣವನ್ನು ಹೇಳುತ್ತೇನೆ ಕೇಳು. ಪತಿವ್ರತೆಯರಾದ ನಾರಿಯರು ತಾವು ಅನುಭವಿಸುವ ಸುಖವನ್ನು ಗಂಡನು ಅನುಭವಿಸುತ್ತಿರುವಾಗಲೇ ಅನುಭವಿಸಬೇಕು. ಕೊನೆಗೆ ಗಂಡನು ಹೂವಿನ ವಾಸನೆಯನ್ನು ತೆಗೆದುಕೊಳ್ಳದಿರುವಾಗ ತಾನು ಆ ಹೂವಿನ ವಾಸನೆಯನ್ನೂ ತೆಗೆದುಕೊಳ್ಳಕೂಡದು.

ನೀನಾದರೆ ರಾಮನು ನಿನಗೆ ಬುಟ್ಟಿಯಲ್ಲಿ ಹೂವು ಹಣ್ಣುಗಳನ್ನು ಕಳುಹಿಸಿದಾಗ ಅವುಗಳಲ್ಲಿ ಒಂದು ಬುಟ್ಟಿಯನ್ನು ರಾಮನಿಲ್ಲದಿರುವಾಗ ಬಿಚ್ಚಿ ಅದರಲ್ಲಿದ್ದ ಹೂವನ್ನು ನೀನು ವಾಸನೆನೋಡಿದೆ ಇದನ್ನು ತಿಳಿದೇ ರಾಮಚಂದ್ರನು ಈ ಮಾಯೆಯನ್ನು ಕಲ್ಪಿಸಿರುವನು, ಅವನ ಇಚ್ಛೆಯಿಂದಲೇ ಈ ತುಳಸಿಯ ಎಲೆಯು ನಿನ್ನ ಸೆರಗಿಗೆ ಸಿಕ್ಕಿಕೊಂಡು ಕಿತ್ತುಹೋಗಿ ಕೆಳಗೆ ಬಿದ್ದಿತು. ಈ ವಿಷಯದಲ್ಲಿ ನಿನಗೆ ಶಿಕ್ಷೆಯನ್ನು ವಿಧಿಸುವುದರ ಮೂಲಕ ಜನಗಳಿಗೆ ಬುದ್ಧಿಯನ್ನು ಕಲಿಸಬೇಕೆಂದು ರಾಮನು ಹೀಗೆ ಮಾಯೆಯನ್ನು ಕಲ್ಪಿಸಿರುವನು.

ಆ ಶ್ರೀರಾಮನ ಮನಸ್ಸಿನಲ್ಲಿದ್ದುದನ್ನು ತಿಳಿದುಕೊಂಡು ನಿನ್ನ ಮೇಲೆ ನಾನು ದೋಷರೋಪಣೆಯನ್ನು ಮಾಡಿದೆನು. ಈಗ ಅದನ್ನು ಕ್ಷಮಿಸು ನನ್ನ ಮೇಲೆ ಕೋಪವನ್ನು ಮಾಡಬೇಡ. ನಾರಿಯರೆಲ್ಲರಿಗೂ ಇದು ಉಪದೇಶವಾಗಲೆಂದು ನಿನಗೆ ಈಗ ಈ ಶಿಕ್ಷೆಯನ್ನು ಕೊಟ್ಟದ್ದಾಗಿದೆ.

ಇಲ್ಲದಿದ್ದರೆ ನೀನು ಮಾಡಿದುದು ಸರಿಯೆಂದು ತಿಳಿದು ನಿನ್ನಂತೆಯೇ ಲೋಕದಲ್ಲೂ ಹೆಂಗಸರೂ ಎಲ್ಲಾ ಭೋಗಗಳನ್ನೂ ಗಂಡನಿಲ್ಲದೆ ಅನುಭವಿಸುವರು, ಇದಕ್ಕೋಸ್ಕರ ನೀನು ದುಃಖಿಸಬೇಡ. ಈಗ ನಾನು ಹೇಳುವುದನ್ನು ಕೇಳು. ಹಾಗೆ ಮಾಡಿದರೆ ರಾಮನ ಎದುರಿಗೆ ಆ ತುಳಸಿಯ ಎಲೆಯು ಗಿಡದಲ್ಲಿ ಸೇರಿಕೊಳ್ಳುತ್ತದೆ. ಅದೇನೆಂದರೆ ಬೃಂದಾವನದ ಬಳಿಗೆ ಹೋಗು, " ಹೂವಿನ ವಾಸನೆ ನೋಡಿದುದೊಂದನ್ನು ಬಿಟ್ಟು ನಾನು ಪಾತಿವ್ರತ್ಯವನ್ನು ರಕ್ಷಿಸಿಕೊಂಡಿದ್ದರೆ ಈ ತುಲಸೀದಳವು ಆ ಗಿಡದೊಡನೆ ಸೇರಿಕೊಳ್ಳಲಿ, ಇಲ್ಲದಿದ್ದರೆ ಬೇಡ ಎಂದು ಹೇಳು, ಹಾಗೆ ಹೇಳಿದರೆ ಆ ಎಲೆಯು ಸೇರಿಕೊಳ್ಳುತ್ತದೆ. "ಆದುದರಿಂದ ಬೃಂದಾವನದ ಬಳಿಗೆ ಹೋಗು. ದುಃಖಪಡಬೇಡ, ಎಂದು ಆ ನಾರದನು ಹೇಳಿ ತಾನು ತುಳಸಿಯ ಬಳಿಗೆ ಬೇಗನೆ ಹೊರಟುಹೋದನು. ಸೀತೆಯೂ ಕೂಡ ಬೇಗನೆ ಬೃಂದಾವನದ ಬಳಿಗೆ ಹೋದಳು. ಅಲ್ಲಿ ಎಲ್ಲರಿಗೂ ಕೇಳಿಸುವಂತೆ ಎಲೈ ತುಳಸಿಯೇ ! ನಾನು" ಹೂವಿನ ವಾಸನೆಯನ್ನು ಒಂದು ಸಾರಿ ವಾಸನೆ ನೋಡಿದುದೊಂದನ್ನು ಹೊರತಾಗಿ ಉಳಿದ ವಿಷಯಗಳಲ್ಲಿ ನಾನು ಪಾತಿವ್ರತ್ಯವನ್ನು ರಕ್ಷಿಸಿಕೊಂಡಿದ್ದರೆ ಈ ಎಲೆಯು ನಿನ್ನಲ್ಲಿ ಸೇರಿಕೊಳ್ಳಲಿ ಎಂದಳು.

ಹಾಗೆ ಹೇಳಿದೊಡನೆಯೇ ಆ ಎಲೆಯು ಗಿಡದಲ್ಲಿ ಸೇರಿಕೊಂಡಿತು. ಆಗ ವಾದ್ಯಗಳು ಮೊಳಗಿದುವು. ದೇವತೆಗಳು ದುಂದುಭಿಯನ್ನು ಬಾರಿಸಿದರು.

ದೇವತಾ ಸ್ತ್ರೀಯರು ವಿಮಾನದಲ್ಲಿದ್ದುಕೊಂಡು ಆ ಸೀತೆಯ ಮೇಲೆ ಹೂಮಳೆಯನ್ನು ಸುರಿಸಿದರು. ಜನರೆಲ್ಲರೂ ಜಯಜಯಕಾರಗಳನ್ನು ಮಾಡಿದರು. ಆಗ ರಾಮನು ಸಂತೋಷಗೊಂಡು ಎಲೈ ಸೀತೆಯೇ ! ನಾನು ಹೀಗೆ ಮಾಡಿದುದು ನಿನಗೆ ಬುದ್ಧಿ ಕಲಿಸುವುದಕ್ಕಲ್ಲ. ಹೆಂಗಸರಿಗೆಲ್ಲರಿಗೂ ಬುದ್ಧಿಯನ್ನು ಕಲಿಸಬೇಕೆಂದು ಹೀಗೆ ಮಾಡಿದೆನು.

ಧರ್ಮಗಳನ್ನು ಸ್ಥಾಪಿಸುವುದಕ್ಕೂ ಸಾಧುಗಳನ್ನು ಕಾಪಾಡುವುದಕ್ಕೂ ದುಷ್ಟರನ್ನು ಶಿಕ್ಷಿಸುವುದಕ್ಕೂ ನಾನು ಈ ಅವತಾರವನ್ನು ತಾಳಿರುವೆನೆಂದು ನಿನಗೆ ಇಳಿದೇ ಇದೆ. ಹೆಂಗಸರೆಲ್ಲರೂ ಮನಃಪೂರ್ವಕವಾಗಿ ಪಾತಿವ್ರತ್ಯವನ್ನು ಕಾಪಾಡಿಕೊಳ್ಳಬೇಕು. ಎಂದು ನಾನು ನಿನಗೆ ಈ ರೀತಿ ಶಿಕ್ಷಿಸಿರುವುದರಿಂದ ನೀನು ನನ್ನ ವಿಷಯದಲ್ಲಿ ಕೋಪಮಾಡಿಕೊಳ್ಳಬೇಕಾಗಿಲ್ಲ. ಹೀಗೆಂದು ರಾಮನು ಅವಳನ್ನು ಸಮಾಧಾನ ಪಡಿಸಿ ಸಂತೋಷಪಡಿಸಿದನು. ಅನಂತರ ಅಲ್ಲಿಗೆ ಬಂದಿದ್ದವರನ್ನೆಲ್ಲ ಗೌರವಿಸಿ ಕಳುಹಿಸಿದನು. ಅನಂತರ ಆ ಸೀತೆಯು ಬಡಿಸಲು ನಾರದನೇ ಮೊದಲಾದವರು ಭೋಜನ ಮಾಡಿದರು.

ಭೋಜನವಾದ ಮೇಲೆ ನಾರದನು ಆ ರಾಮನನ್ನು ಬಹುವಾಗಿ ಹೊಗಳಿ ಹೊರಟುಹೋದನು.

—o— o—

|| ಶ್ರೀರಸ್ತು ||

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ ಉತ್ತರಾರ್ಧೇ ತ್ರಯೋವಿಂಶಸ್ಸರ್ಗಃ

|| ಶ್ರೀರಾಮದಾಸ ಉವಾಚ ||

ಅಥ ರಾಮಸ್ಸ ವೈದೇಹ್ಯಾ ಬಂಧುಭಿಸ್ತನಯಾದಿಭಿಃ |
ಚಕಾರ ರಾಜ್ಯಂ ಧರ್ಮೇಣ ಲೋಕವಂದ್ಯಪದಾಂಬುಜಃ || ೧ ||

ಏತಸ್ಮಿನ್ನಂತರೇಽಯೋಧ್ಯಾಪುರ್ಯಾಂ ಶ್ರೀರಘುನಾಯಕಂ |
ಗತ್ವೈಕದಾಬ್ರವೀದ್ದೂತೋ ಹೇ ರಾಮ ಕಂಜಲೋಚನ || ೨ ||

ಕರೋಮಿ ತವ ಸೇವಾಂ ನ ತಪಶ್ಚರ್ಯಾಂ ಕರೋಮ್ಯಹಂ |
ದದಸ್ವಾಜ್ಞಾಂ ಮಮ ತ್ವಂ ಹಿ ಗಚ್ಛಾಮಿ ನಿಜಮಂದಿರಂ || ೩ ||

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ಇಪ್ಪತ್ತಮೂರನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಲೋಕವಂದಿತವಾದ ಪಾದಗಳುಳ್ಳ, ಶ್ರೀರಾಮನು ವೈದೇಹಿಯೊಡನೆಯೂ, ತಮ್ಮಂದಿರೊಡನೆಯೂ, ಮಕ್ಕಳೊಡನೆಯೂ ಇದ್ದುಕೊಂಡು ಧರ್ಮದಿಂದ ರಾಜ್ಯಭಾರವನ್ನು ಮಾಡುತ್ತಿದ್ದನು.

೨. ಹೀಗಿರುತ್ತಿರಲು ಒಂದು ಸಾರಿ ಅಯೋಧ್ಯೆಯಲ್ಲಿರುವ ಶ್ರೀರಾಮನನ್ನು ದೂತನು ನೋಡಿ ನಮಸ್ಕರಿಸಿ ಎಲೈ ರಾಮನೇ! ಕಂಜನಯನನೇ! ನಾನು ಹೇಳುವುದನ್ನು ಕೇಳು. ಎಂದೆನ್ನುತ್ತ ಇಂತೆಂದು ಹೇಳಿದನು.

೩. ಎಲೈ ರಾಮನೇ! ನಾನು ನಿನ್ನ ಸೇವೆಯನ್ನು ಇನ್ನು ಮೇಲೆ ಮಾಡುವುದಿಲ್ಲ. ತಪಸ್ಸನ್ನು ಮಾಡಲು ಹೋಗುತ್ತೇನೆ. ನನಗೆ ನೀನು ಅಪ್ಪಣೆಯನ್ನು ಕೊಡು. ನಾನು ಈಗ ನನ್ನ ಮನೆಗೆ ಹೋಗುತ್ತೇನೆ.

ತಥೇತಿ ರಾಘವೇಣೋಕ್ತಸ್ಸ ಯಯೌ ನಿಜಮಂದಿರಂ ।
ತತ್ರ ಗತ್ವಾ ಶುಚಿರ್ಭೂತ್ವಾಽಽನಂದರಾಮಾಯಣಂ ಶುಭಂ ॥ ೪ ॥
ಪಠಿತ್ವಾ ನವರಾತ್ರಂ ತು ತತಸ್ತೂರ್ಣಂ ಬಹಿರ್ಯಯೌ ।
ಏತಸ್ಮಿನ್ನಂತರೇ ಕಶ್ಚಿದ್ದೇಶೇ ಲೌರಾ ಮೃತಂ ನೃಪಂ ॥ ೫ ॥
ದೃಷ್ಟ್ವಾವ ತಸ್ಯ ಸುತಂ ಬಾಲಂ ಜ್ಞಾತ್ವಾ ಕರ್ತುಂ ಹಿ ಮಂತ್ರಿಣಂ ।
ಚಕ್ರುಸ್ತೇ ನಿಶ್ಚಯಂ ತತ್ರ ಕೇಚಿದೂಚುರಯಂ ಶುಭಃ ॥ ೬ ॥
ಕೇಚಿದೂಚುರಯಂ ನೈವ ಕಾರ್ಯೋ ಮಂತ್ರೀ ಖಲಸ್ತ್ವಯಂ ।
ಏವಂ ವಿವದಮಾನಾಸ್ತೇ ಚಕ್ರುರ್ವೈ ನಿಶ್ಚಯಂ ತದಾ ॥ ೭ ॥
ಕರಿಣೀನಿಜಶುಂಡಾಗ್ರಮಾಲಯಾ ಯಂ ವರಿಷ್ಯತಿ ।
ಸೋಽಸ್ತು ಮಂತ್ರೀ ನಿಶ್ಚಯೇನ ತತಸ್ತಾಂ ಕರಿಣೀಂ ವರೈಃ ॥ ೮ ॥

೪-೫. ರಾಮನು ಅವನ ಮಾತನ್ನು ಕೇಳಿ ಹಾಗೆಯೇ ಆಗಲೆಂದು ಹೇಳಿದನು. ಅನಂತರ ಆ ದೂತನು ತನ್ನ ಮನೆಗೆ ಹೊರಟುಹೋದನು ಆ ಮನೆಯಲ್ಲಿ ಶುಚಿಯಾಗಿದ್ದುಕೊಂಡು ದಿನವೂ ಆನಂದ ರಾಮಾಯಣವನ್ನು ಒಂಭತ್ತು ದಿನುಗಳವರೆಗೂ ಓದಿ ಅನಂತರ ತಪಸ್ಸನ್ನು ಮಾಡಲು ಬೇಗನೆ ಹೊರಟುಹೋದನ. ಇಷ್ಟರೊಳಗೆ ಒಂದು ದೇಶದಲ್ಲಿನ ರಾಜನು ಮೃತನಾಗಿದ್ದನು.

೬. ಆ ರಾಜನ ಮಗನು ಇನ್ನೂ ಬಾಲನಾಗಿದ್ದನು. ಆದ್ದರಿಂದ ಪ್ರಜೆಗಳಲ್ಲಿ ಕೆಲವರು ಕೆಲವು ಕಾಲದವರೆಗೆ ಸರಿಯಾದ ಮಂತ್ರಿಯನ್ನು ನೋಡಬೇಕೆಂದು ಹೇಳುತ್ತಿದ್ದರು. ಮತ್ತೆ ಕೆಲವರು ಅದು ಸರಿಯಾದ ಕೆಲಸವೆಂದು ಅನುಮೋದಿಸುತ್ತಿದ್ದರು. ಕೆಲವರು ಈಗ ಇರುವ ಇವನೇ ಇರಲೆಂದು ಅನ್ನುತ್ತಿದ್ದರು.

೭. ಕೆಲವರು ಈ ಮಂತ್ರಿಯು ಅಯೋಗ್ಯನು ಆದ್ದರಿಂದ ಇವನನ್ನು ರಾಜನ ಪ್ರತಿನಿಧಿಯನ್ನಾಗಿ ಇಡಕೂಡದು ಬೇರೆಯವನನ್ನು ಮಂತ್ರಿಯನ್ನಾಗಿ ಇಡಬೇಕು. ಎಂದೆನ್ನುತ್ತಿದ್ದರು. ಹೀಗೆಯೇ ಈ ಪ್ರಜೆಗಳು ವಿವಾದವನ್ನು ಮಾಡುತ್ತಾ ಕೊನೆಗೊಂದು ನಿಶ್ಚಯಕ್ಕೆ ಬಂದರು.

೮. ಒಂದು ಆನೆಯನ್ನು ತಂದು ಅದರ ಸೊಂಡಲಿನಲ್ಲಿ ಒಂದು ಹೂಮಾಲೆಯನ್ನು ಕೊಡೋಣ ಅದು ಯಾವನ ಕೊರಳಿಗೆ ಹೂಮಾಲೆಯನ್ನು ಹಾಕುವುದೋ ಅವನೇ ಮಂತ್ರಿಯಾಗಿರಲಿ, ಎಂಬುದೇ ಆ ನಿಶ್ಚಯವು. ಅಂತೆಯೇ ಮಾಡಿ ಅದರ ಮುಂದೆಯೂ ಹಿಂದೆಯೂ ಉತ್ತಮ ವಾದ್ಯಗಳನ್ನು ಬಾರಿಸುತ್ತ ಎಲ್ಲರೂ ಉತ್ಸಾಹದಿಂದಿದ್ದರು.

ವಸ್ತ್ರಾಲಂಕಾರಭೂಷಾದ್ಯೈಶ್ಶೋಭಯಾಮಾಸುರಾದರಾತ್ ।
ತಚ್ಛುಂಡಾಯಾಂ ರತ್ನಮಾಲಾಂ ದತ್ವಾ ತಾಂ ಮುಮುಚುಸ್ತದಾ ॥ ೯ ॥

ತತಸ್ತೇ ನವವಾದ್ಯಾನಿ ವಾದಯಾಮಾಸುರಾದರಾತ್ ।
ತದಾ ಸಾ ಕರಿಣೀ ಗ್ರಾಮಾದ್ಬಹಿಸ್ತೂರ್ಣಂ ಯಯೌ ಶನೈಃ ॥ ೧೦ ॥

ಅಯೋಧ್ಯಾಯಾಃ ಪಥಾಯೋಧ್ಯಾಂ ಯಯೌ ದೇಶಾನ್ ವಿಲಂಘ್ಯ ಸಾ ।
ತತ್ಪೃಷ್ಠೇ ಸಕಲಾಃ ಪೌರಾ ನಾನಾವಾಹನಸಂಸ್ಥಿತಾಃ ॥ ೧೧ ॥

ಯಯುಸ್ತೂರ್ಣಂ ಕೌತುಕೇನ ಕೋಟಿಶೋ ಮುದಿತಾನನಾಃ ।
ತತಸ್ಸಾ ಕರಿಣೀ ಗತ್ವಾಯೋಧ್ಯಾಂ ಹಟ್ಟಸ್ಥಿತಂ ತದಾ ॥ ೧೨ ॥

ತಂ ದೂತಂ ವರಯಾಮಾಸ ಯೇನ ಪಾರಾಯಣಂ ಕೃತಂ ।
ಆನಂದರಾಮಚರಿತಸ್ಯಾಹೋ ತತ್ಕೌತುಕಂ ಮಹತ್ ॥ ೧೩ ॥

೯.೧೦. ಅನಂತರ ಆ ಆನೆಗೆ ವಸ್ತ್ರಾಲಂಕಾರಗಳನ್ನೂ ಧರಿಸಿ ಅಲಂಕರಿಸಿದರು. ಅನಂತರ ಅದರ ಸೊಂಡಲಿಗೆ ಹಾರವನ್ನು ಕೊಟ್ಟುಬಿಟ್ಟರು. ಆನಂತರ ಆ ಆನೆಯು ಊರಿನಿಂದ ಹೊರಕ್ಕೆ ಹೊರಟುಹೋಯಿತು.

೧೧. ಅದು ಎಲ್ಲಾ ದೇಶಗಳನ್ನೂ ಸುತ್ತುತ್ತಾ ಅಯೋಧ್ಯೆಯ ದಾರಿಯನ್ನು ಹಿಡಿದು ಅಯೋಧ್ಯೆಗೆ ಬಂದುಬಿಟ್ಟಿತು. ಅದರ ಹಿಂದೆ ಪಟ್ಟಣಿಗರೆಲ್ಲರೂ ನಾನಾ ವಿಧವಾದ ವಾಹನಗಳ ಮೇಲೆ ಕುಳಿತು ಬರುತ್ತಿದ್ದರು.

೧೨. ಅದರ ಹಿಂದುಗಡೆಯಲ್ಲಿ ಕೋಟಿ ಸಂಖ್ಯೆಯಲ್ಲಿ ಜನರು ಆಶ್ಚರ್ಯವನ್ನು ನೋಡಬೇಕೆಂದು ಹೋಗುತ್ತಿದ್ದರು. ಆ ಆನೆಯು ನೆಟ್ಟಗೆ ಅಯೋಧ್ಯೆಗೆ ಹೋಗಿ ಅಂಗಡಿ ಬೀದಿಯಲ್ಲಿ ಹೋಗುತ್ತಿದ್ದಿತು.

೧೩. ಮನೆಯಿಂದ ಹೊರಗೆ ಹೊರಟ ಆ ರಾಮದೂತನು ಆ ಆನೆಯು ಅಂಗಡಿಬೀದಿಯಲ್ಲಿ ಹೋಗುತ್ತಿರಲು ಆ ದೂತನ ಕೊರಳಿಗೆ ಆ ಮಾಲೆಯನ್ನು ಹಾಕಿತು. ಅವನು ಈ ಆನಂದ ರಾಮಾಯಣವನ್ನು ಪಾರಾಯಣ ಮಾಡಿದುದರ ಫಲವಾಗಿ ಅದು ಪರಿಣಮಿಸಿತು. ಎಲ್ಲರಿಗೂ ಬಹು ಆಶ್ಚರ್ಯವಾಯಿತು. ಈ ಆನಂದರಾಮಾಯಣದ ಪಾರಾಯಣದ ಫಲವು. ಇಷ್ಟು ಮಹತ್ತರವಾದುದು.

ಬಭೂವ ಸಕಲಾರ್ ಲೋಕಾರ್ ತತಸ್ತಂ ಮಾಲಯಾಂಕಿತಂ ।
ಕರಿಣ್ಯಾ ಮಂತ್ರಿಣಂ ಚಕ್ರುಸ್ತೇ ಪೌರಾ ಯೇ ಸಮಾಗತಾಃ ॥ ೧೪ ॥

ತಂ ನಿನ್ಯುಃ ಕರಿಣೀಸಂಸ್ಥಂ ಪತ್ನೀಪುತ್ರಸಮನ್ವಿತಂ ।
ಸ್ವದೇಶಂ ಮಂತ್ರಿಣಂ ಚಕ್ರುಸ್ತದದ್ಭುತಮಿವಾಭವತ್ ॥ ೧೫ ॥

ತತಃ ಪರಸ್ಪರಂ ಶ್ರುತ್ವಾ ರಾಜದೂತಾಸ್ಸಹಸ್ರಶಃ ।
ನಾನಾದೇಶೇಷು ಸರ್ವತ್ರ ಸಾಕೇತೇಽಪಿ ತದಾ ಮುದಾ ॥ ೧೬ ॥

ರಾಜಸೇವಾಂ ಪರಿತ್ಯಜ್ಯ ಜಗ್ಮುಸ್ತೇ ಸ್ವಗೃಹಾಣಿ ಹಿ ।
ತತಸ್ಸರ್ವೇ ಸ್ವಗೃಹೇಷ್ವಾನಂದರಾಮಾಯಣಸ್ಯ ಚ ॥ ೧೭ ॥

ಕೇಚಿತ್ಪಾರಾಯಣಂ ಚಕ್ರುಃ ಕೇಚಿತಚ್ಛ್ರವಣಂ ಮುದಾ ।
ಕೇಚಿತ್ತತ್ಪಠನಂ ವಾಪಿ ಕೇಚಿಚ್ಚಕ್ರುಶ್ಚ ಕೀರ್ತನಂ ॥ ೧೮ ॥

---

೧೪. ಆಗ ಆ ಬಾಲಕ ರಾಜನ ಪಟ್ಟಣದವರೆಲ್ಲರೂ ಬಹು ಸಂತೋಷ ದಿಂದ ಮಂತ್ರಿಯನ್ನಾಗಿ ಹೂಡಿದರು.

೧೫. ಅವನನ್ನು ಆನೆಯ ಹೆಗಲ ಮೇಲೆ ಕೂರಿಸಿ ಅವನ ಹೆಂಡತಿ ಮಕ್ಕಳೆಲ್ಲರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿ ಅವನನ್ನು ಮಂತ್ರಿಯ ಸ್ಥಾನದಲ್ಲಿ ಕೂರಿಸಿದರು. ಇದು ಬಹು ಆಶ್ಚರ್ಯವಾಗಿ ಪರಿಣಮಿಸಿತು.

೧೬-೧೭. ಈ ಮಾತನ್ನು ರಾಮದೂತರು ಒಬ್ಬರಿಂದೊಬ್ಬರು ಕೇಳಿ ಕೊನೆಗೆ ಆ ಅಯೋಧ್ಯೆಯಲ್ಲಿರುವವರೂ ಇತರ ದೇಶಗಳಲ್ಲಿರುವವರೂ ಆ ರಾಜರ ಸೇವೆಗಳನ್ನು ಬಿಟ್ಟು ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು. ಮನೆಗೆ ಹೋಗಿ ಅವರೆಲ್ಲರೂ ಆನಂದ ರಾಮಾಯಣದ ಪಾರಾಯಣವನ್ನು ಮಾಡು ತ್ತಿದ್ದರು.

೧೮. ಕೆಲವರು ಆನಂದರಾಮಾಯಣ ಪಾರಾಯಣವನ್ನು ಮಾಡಿದರು. ಕೆಲವರು ಅದನ್ನು ಓದಿದರು. ಕೆಲವರು ಅದನ್ನು ಗಾನರೂಪದಿಂದ ಹಾಡಿದರು.

ಕೇಚಿಚ್ಚಕ್ರು ಶ್ಚವ್ಯಾಖ್ಯಾನಮೇವಂ ತನ್ನಿಷ್ಠಮಾನಸಾಃ ।
ಬಭೂವುಸ್ಸಕಲಾ ದೂತಾಃ ಕೋಟಿಶೋ ಜಗತೀತಲೇ ॥ ೧೯ ॥

ತದಾ ಕೇನ ಧನಂ ಲಬ್ಧಂ ಕೇನ ಲಬ್ಧಂ ಮಹದ್ಧನಂ ।
ಕೇನ ರಾಜ್ಯಪದಂ ಲಬ್ಧಂ ಕೇನ ಲಬ್ಧಂ ಗೃಹಂ ಪರಂ ॥ ೨೦ ॥

ಕೇನ ಗ್ರಾಮಾಧಿಕಾರಶ್ಚ ಕೇನ ಲಬ್ಧಾ ಕೃಷಿರ್ವರಾ ।
ಕೇನ ವೃತ್ತಿಶ್ಶುಭಾ ಲಬ್ಧಾ ಕೇನ ಸ್ವರ್ಗೋ ಮನೋರಮಃ ॥ ೨೧ ॥

ಕೇನ ಲಬ್ಧಂ ತು ಪಾತಾಲಂ ಕೈರ್ಲೋಕಾ ವಿವಿಧಾಶ್ಶುಭಾಃ ।
ಲಬ್ಧಂ ಕೈಶ್ಚಿತ್ಸೂರ್ಯಪದಂ ಲಬ್ಧಂ ತಚ್ಚ ಮನೋಹರಂ ॥ ೨೨ ॥

---

೧೯. ಕೆಲವರು ಅದಕ್ಕೆ ಅರ್ಥವನ್ನು ಹೇಳುತ್ತಿದ್ದರು. ಕೆಲವರು ಅದನ್ನೇ ಗಮನಿಸಿ ಕೇಳುತ್ತಿದ್ದರು. ಕೊನೆಗೆ ಭೂಮಿಯಲ್ಲಿನ ದೂತರೆಲ್ಲರೂ ಕೋಟಿಗಟ್ಟಲೆ ಯಲ್ಲಿ ಹೀಗಿರುತ್ತಿದ್ದರು.

೨೦. ಇದರಿಂದ ಕೆಲವರು ಧನವನ್ನು ಹೊಂದಿದರು. ಕೆಲವರಿಗೆ ಬಹು ವಾದ ಧನವು ಸಿಕ್ಕಿತು. ಕೆಲವರಿಗೆ ರಾಜ್ಯವು ಸಿಕ್ಕಿತು. ಕೆಲವರಿಗೆ ಒಳ್ಳೆಯ ಮನೆಗಳು ಸಿಕ್ಕಿದುವು.

೨೧. ಕೆಲವರಿಗೆ ಗ್ರಾಮಾಧಿಕಾರಿತನವು ಸಿಕ್ಕಿತು. ಕೆಲವರು ಉತ್ತಮ ವಾದ ಬೆಳೆಗಳನ್ನು ಹೊಂದಿದರು. ಕೆಲವರಿಗೆ ಒಳ್ಳೆಯ ಕೆಲಸಗಳು ಸಿಕ್ಕಿದುವು. ಕೆಲವರಿಗೆ ಒಳ್ಳೆಯ ಸ್ವರ್ಗವು ಸಿಕ್ಕಿತು.

೨೨. ಕೆಲವರು ಪಾತಾಳ ಲೋಕದಲ್ಲಿ ಉತ್ತಮವಾದ ಗತಿಯನ್ನು ಹೊಂದಿ ದರು. ಕೆಲವರು ವಿಧವಿಧವಾದ ಉತ್ತಮ ಲೋಕಗಳನ್ನು ಹೊಂದಿದರು. ಕೆಲವರು ಸೂರ್ಯ ಪದವನ್ನು ಹೊಂದಿದರು. ಅಲ್ಲಿಯೂ ಕೆಲವರು ಮನೋಹರವಾದ ಸ್ಥಾನ ವನ್ನು ಹೊಂದಿದರು.

ಕೇಚಿದಿಂದ್ರಪುರಂ ಪ್ರಾಪುಃ ಕೇಚಿದಗ್ನಿಪುರಂ ಗತಾಃ ।
ಕೇಚಿತ್ತೇ ಧರ್ಮರಾಜಸ್ಯ ಲೋಕಂ ವಾ ನಿರ್ಋತೇರಪಿ ॥ ೨೩ ॥

ವರುಣಸ್ಯಾಥ ವಾಯೋಶ್ಚ ಕುಬೇರಸ್ಯೇಶ್ವರಸ್ಯ ಚ ।
ಲೋಕಾನ್ ಜಗ್ಮುಸ್ತದಾ ದೂತಾಸ್ತದದ್ಭುತಮಿವಾಭವತ್ ॥ ೨೪ ॥

ಕೇಚಿಜ್ಜಗ್ಮುಶ್ಚಂದ್ರಲೋಕಂ ಕೇಚಿದ್ಧ್ರುವಪದಂ ಗತಾಃ ।
ಕೇಚಿತ್ತೇ ಬ್ರಹ್ಮಲೋಕಂ ಚ ವೈಕುಂಠಂ ಚಾಪಿ ಕೇಚನ ॥ ೨೫ ॥

ಏವಂ ಯಥಾ ಯಸ್ಯ ಪುಣ್ಯಂ ದೂತಸ್ಯಾನ್ಯನರಸ್ಯ ಚ ।
ಆನಂದರಾಮಚರಿತಪಾಠಶ್ರವಣಸಂಭವಂ ॥ ೨೬ ॥

ತಥಾ ತಸ್ಯ ಗತಿರ್ಜಾತಾ ಸದ್ಯ ಏವಾವನೀತಲೇ ।
ತದಾ ಕೋಽಪಿ ನ ಕಸ್ಯಾಪಿದ್ದೂತೋ ದೇಶಾಂತರೇಷ್ವಪಿ ॥ ೨೭ ॥

---

೨೩. ಕೆಲವರಿಗೆ ಇಂದ್ರಪದವು ಸಿಕ್ಕಿತು. ಕೆಲವರಿಗೆ ಅಗ್ನಿಲೋಕವು ಸಿಕ್ಕಿತು. ಕೆಲವರು ಧರ್ಮರಾಜನ ಪುರವನ್ನು ಹೊಂದಿದರು. ಕೆಲವರು ನಿರ್ಋತಿಯ ಲೋಕವನ್ನು ಹೊಂದಿದರು.

೨೪. ಕೆಲವರು ವರುಣನ ಲೋಕವನ್ನೂ ಕೆಲವರು ವಾಯುವಿನ ಲೋಕವನ್ನೂ ಕೆಲವರು ಕುಬೇರನ ಲೋಕವನ್ನೂ, ಕೆಲವರು ಈಶಾನನ ಲೋಕವನ್ನೂ ಹೊಂದಿದರು. ಅದು ಬಹು ಆಶ್ಚರ್ಯವಾಗಿದ್ದಿತು.

೨೫. ಕೆಲವರು ಚಂದ್ರಲೋಕವನ್ನೂ ಕೆಲವರು ಧ್ರುವನ ಪದವನ್ನೂ ಕೆಲವರು ಬ್ರಹ್ಮಲೋಕವನ್ನೂ, ಕೆಲವರು ವೈಕುಂಠವನ್ನೂ ಹೊಂದಿದರು.

೨೬–೨೭. ಆನಂದ ರಾಮಾಯಣವನ್ನು ಯಾವನು ಎಷ್ಟರಮಟ್ಟಿಗೆ ಕೇಳಿದನೋ ಯಾವನು ಎಷ್ಟರಮಟ್ಟಿಗೆ ಪಾರಾಯಣಮಾಡಿದನೋ ಯಾವನು ಎಷ್ಟರಮಟ್ಟಿಗೆ ಗಾನಮಾಡಿ ಪುಣ್ಯವನ್ನು ಪಡೆದಿದ್ದನೋ ಅವನವನಿಗೆ ಅದಕ್ಕೆ ಅನುರೂಪವಾದ ಗತಿಯು ಸಿಕ್ಕಿತು. ಆಗ ಲೋಕದಲ್ಲಿ ಯಾವನಿಗೂ ಕೂಡ ಒಬ್ಬನೂ ದೂತನೇ ಇಲ್ಲದಂತಾಯಿತು.

ತ್ಯಕ್ತ್ವಾ ಸೇವಾಂ ಸಪುಸ್ತಾಶ್ಚ ರಾಘವಸ್ಯಾಪಿ ತೇ ಗತಾಃ ।
ರಾಮಂ ಪೃಷ್ಟ್ವಾ ಗತಾಃ ಕೇಚಿದಪೃಷ್ಟ್ವೈವ ಗತಾಃ ಪರೇ ॥ ೨೮ ॥

ಏವಂ ಸರ್ವತ್ರ ದೇಶೇಷು ದೂತಾಭಾವೋಽಭವತ್ತದಾ ।
ಏಕದಾ ರಾಘವಂ ದ್ರಷ್ಟುಂ ಗಂತುಂ ಸರ್ವೇ ನೃಪೋತ್ತಮಾಃ ॥ ೨೯ ॥

ಸೈನ್ಯಾನ್ಯಾಕಾರಯಾಮಾಸುಃ ಸ್ವೀಯಾನಿ ತು ಪೃಥಕ್ ಪೃಥಕ್ ।
ತದಾ ಕುತ್ರಾಪಿ ಸೈನ್ಯಾನಿ ದದೃಶುರ್ನ ನೃಪೋತ್ತಮಾಃ ॥ ೩೦ ॥

ಅಃ ಕಿಮೇತದಿತಿ ಪ್ರೋಕ್ತ್ವಾ ಸ್ವಸುಹೃದ್ಭಿಸ್ಸುತಾದಿಭಿಃ ।
ಯಯುಸ್ತೇ ರಾಘವಂ ದ್ರಷ್ಟುಂ ವಿಸ್ಮಯಾವಿಷ್ಟಮಾನಸಾಃ ॥ ೩೧ ॥

ತಾನಾಗತಾನ್ ನೃಪಾನ್ ಜ್ಞಾತ್ವಾ ತಾನ್ ಪುರೋ ಗಂತುಮಾದರಾತ್ ।
ಆಕಾರಯತ್ಸ್ವಸೈನ್ಯಾನಿ ನ ತದಾ ಪ್ರಾಪ ಲಕ್ಷ್ಮಣಃ ॥ ೩೨ ॥

---

೨೮. ಎಲ್ಲರೂ ಕೂಡ ಸೇವೆಯೆಂಬುದನ್ನೇ ಬಿಟ್ಟುಬಿಟ್ಟರು. ರಾಮನಿಗೂ ಕೂಡ ದೂತರೇ ಇಲ್ಲದಂತಾಯಿತು. ಕೆಲವರು ರಾಮನನ್ನು ಕೇಳಿಕೊಂಡು ಸೇವೆಯಿಂದ ಹೊರಟುಹೋದರು. ಕೆಲವರು ಆ ರಾಮನನ್ನು ಕೇಳದೇನೇ ಹೊರಟುಹೋದರು.

೨೯-೩೦. ಹೀಗಾಗಲಾಗಿ ಲೋಕದಲ್ಲೆಲ್ಲಾ ಆಳುಗಳೇ ಇಲ್ಲದೆ ಹೋದರು ಹೀಗಾಗಲು ಒಂದು ಸಾರಿ ಶ್ರೀರಾಮನನ್ನು ನೋಡಬೇಕೆಂದು ಅವನಲ್ಲಿಗೆ ಹೋಗಲು ರಾಜರುಗಳು ತಮ್ಮ ತಮ್ಮ ಸೈನ್ಯಗಳನ್ನು ಕರೆಸಿದರು ಆಗ ಒಬ್ಬ ಸೈನಿಕನೂ ಬರಲೇ ಇಲ್ಲ. ಕಾಣಿಸಿಕೊಳ್ಳಲೂ ಇಲ್ಲ.

೩೧. ಓಹೋ ! ಇದೇನು ? ಎನ್ನುತ್ತಾ ಬಹು ಆಶ್ಚರ್ಯಪಟ್ಟುಕೊಂಡು ಅವರೆಲ್ಲರೂ ತಮ್ಮ ತಮ್ಮ ಹೆಂಡತಿ ಮಕ್ಕಳೊಡನೆಯೇ ರಾಮನನ್ನು ನೋಡಲು ಹೋದರು.

೩೨. ರಾಮನು ರಾಜರುಗಳು ಬಂದುದನ್ನು ಕೇಳಿ ಅವರನ್ನು ನೋಡಿ ಎದುರುಗೊಳ್ಳಲು ತನ್ನ ಸೈನ್ಯವನ್ನು ಕರೆಸೆನಲು ಲಕ್ಷ್ಮಣನು ಅದರಂತೆಯೇ ಕರೆಸಲು ಒಬ್ಬನೂ ಬರಲೇ ಇಲ್ಲ.

ತತೋ ನಿವೇದಯಾಮಾಸ ತದ್ವೃತ್ತಂ ರಾಘವಾಯ ಸಃ ।
ತಚ್ಛ್ರುತ್ವಾ ರಾಘವೋಪ್ಯಾಸೀದ್ವಿಸ್ಮಯಾವಿಷ್ಟಮಾನಸಃ ॥ ೩೩ ॥

ಸುಹೃಜ್ಜನೈರ್ಯುತಂ ಬಂಧುಂ ಲಕ್ಷ್ಮಣಂ ಪ್ರೇಷ್ಯ ಪಾರ್ಥಿವಾನ್ ।
ಸ್ವಪುರೀಮಾನಯಾಮಾಸ ತೇ ನೇಮೂ ರಘುನಾಯಕಂ ॥ ೩೪ ॥

ತತಸ್ತೇ ತಸ್ಥುಸ್ಸದಸಿ ಸೇನಾವೃತ್ತಂ ನ್ಯವೇದಯತ್ ।
ರಾಮೋಪಿ ಕಥಯಾಮಾಸ ಸ್ವಸೇನಾವೃತ್ತಮಾದರಾತ್ ॥ ೩೫ ॥

ತದಾ ವಿಹಸ್ಯ ಶ್ರೀರಾಮಸ್ಸಮಾಹೂಯ ನಿಜಂ ಗುರುಂ ।
ಪೃಷ್ಟವಾನ್ಮಮ ಸೈನ್ಯಾನಿ ನೃಪಾಣಾಂ ಚಾಪಿ ವೈ ಗುರೋ ॥ ೩೬ ॥

ಕಿಂ ಜಾತಾನಿ ಕ್ವ ವೈ ಸಂತಿ ತದ್ವದಸ್ವ ಸವಿಸ್ತರಂ ।
ತದ್ರಾಮವಚನಂ ಶ್ರುತ್ವಾ ಕ್ಷಣಂ ಧ್ಯಾತ್ವಾ ಸ ವೈ ಗುರುಃ ॥ ೩೭ ॥

---

೩೩. ಆಗ ಲಕ್ಷ್ಮಣನು ಈ ವಿಷಯವನ್ನು ರಾಘವನಿಗೆ ತಿಳಿಸಿದನು. ಇದನ್ನು ಕೇಳಿ ರಾಘವನೂ ಕೂಡ ಬಹು ಆಶ್ಚರ್ಯಪಟ್ಟನು.

೩೪. ಆಗ ರಾಮನು ತಮ್ಮನಾದ ಲಕ್ಷ್ಮಣನೊಡನೆ ತನ್ನ ಸ್ನೇಹಿತರನ್ನು ಕಳುಹಿಸಿ ಆ ರಾಜನನ್ನು ಎದುರುಗೊಂಡು ಪಟ್ಟಣಕ್ಕೆ ಕರೆತರಿಸಿದನು. ಆ ರಾಜರು ಬಂದು ರಾಮನಿಗೆ ನಮಸ್ಕರಿಸಿದರು.

೩೫. ಆಗ ಅವರೆಲ್ಲರೂ ರಾಮನ ಅಪ್ಪಣೆ ಮೇರೆಗೆ ಸಭೆಯಲ್ಲಿ ಕುಳಿತು ಕೊಂಡು ತಮ್ಮ ತಮ್ಮ ಸೇನೆಗಳ ವಿಷಯವನ್ನು ತಿಳಿಸಿದರು. ಆಗ ರಾಮನೂ ಕೂಡ ತನ್ನ ಸೇನೆಯು ಬರದಿರುವುದನ್ನು ಅವರಿಗೆ ತಿಳಿಸಿದನು.

೩೬–೩೭. ಆಗ ಶ್ರೀರಾಮನು ನಕ್ಕು ತನ್ನ ಗುರುವಾದ ವಸಿಷ್ಠನನ್ನು ಕರೆಸಿದನು. ಅವನು ಬರಲು ಎಲೈ ಗುರುವೇ! ನನ್ನ ಸೈನ್ಯಗಳಾಗಲೀ ಈ ರಾಜರುಗಳ ಸೈನ್ಯಗಳಾಗಲಿ ಏನಾದುವು? ಎಲ್ಲಿ ಹೋದುವು ? ಎಲ್ಲಿವೆ? ಅದನ್ನು ವಿಸ್ತಾರವಾಗಿ ಹೇಳು ಎಂದನು. ಅದಕ್ಕೆ ಗುರುವು ಒಂದು ಕ್ಷಣಕಾಲ ಧ್ಯಾನದಲ್ಲಿದ್ದು ಆಲೋಚಿಸಿ ನೋಡಿದನು.

ತದಾ ಪ್ರಾಹ ಸಭಾಮಧ್ಯೇ ವಿಹಸ್ಯ ರಘುನಂದನಂ |
ರಾಮ ರಾಮ ಮಹಾಬಾಹೋ ಸರ್ವಂ ವೇತ್ಸಿ ತ್ವಮೇವ ಹಿ || ೩೮ ||

ಯದಿ ಪೃಚ್ಛಸಿ ಮಾಂ ರಾಮ ತರ್ಹಿ ಸರ್ವಂ ವದಾಮ್ಯಹಂ |
ಶತಕೋಟಿಮಿತಂ ರಾಮಚರಿತಂ ತವ ಪಾವನ || ೩೯ ||

ವಾಲ್ಮೀಕಿನಾ ಕೃತಂ ಪೂರ್ವಂ ತನ್ಮಧ್ಯೇ ರಘುನಂದನಂ |
ಆನಂದರಾಮಚರಿತಂ ನವಕಾಂಡಸಮನ್ವಿತಂ || ೪೦ ||

ತಸ್ಯ ಶ್ರವಣಪಾಠಾದ್ಯೈಸ್ಸರ್ವಸೈನ್ಯೇಷು ಯೇ ನರಾಃ |
ತೇ ಗತಾಸ್ತ್ವತ್ಪದಂ ಕೇಚಿತ್ಕೇಚಿಲ್ಲೋಕಾಂತರಾದಿಷು || ೪೧ ||

ನ ಸಂತಿ ಭುವಿ ಸೈನ್ಯಾನಿ ಸತ್ಯಂ ರಾಮ ವಚೋ ಮಮ |
ನವಕಾಂಡಮಿತಂ ತಚ್ಚ ರಮ್ಯಮಾನಂದದಾಯಕಂ || ೪೨ ||

---

೩೮. ಆ ಗುರುವು ಧ್ಯಾನದಿಂದ ತಿಳಿದವನಾಗಿ ನಕ್ಕು ಸಭೆಯ ಮಧ್ಯದಲ್ಲಿ ಆ ರಾಮನನ್ನು ಕುರಿತು ಇಂತೆಂದನು. ಎಲೈ ಮಹಾ ಬಾಹುವಾದ ರಾಮನೇ! ನಿನಗೆ ಎಲ್ಲವೂ ತಿಳಿದೇ ಇದೆ.

೩೯–೪೦. ಆದರೂ ನನ್ನನ್ನು ಹೇಳಬೇಕೆಂದು ಕೇಳಿದರೆ ಎಲ್ಲವನ್ನೂ ಹೇಳುತ್ತೇನೆ. ಕೇಳು. ವಾಲ್ಮೀಕಿಯು ಪವಿತ್ರವಾದ ನಿನ್ನ ಚರಿತ್ರೆಯನ್ನು ಒಂಭತ್ತು ಕೋಟಿ ಗ್ರಂಥಗಳ ಪರಿಮಿತವಾಗಿ ರಚಿಸಿರುವನಷ್ಟೆ! ಅದರ ಮಧ್ಯದಲ್ಲಿ ಆನಂದ ರಾಮಾಯಣದ ರಾಮಚರಿತ್ರೆಯನ್ನು ಒಂಭತ್ತು ಕಾಂಡಗಳಷ್ಟು ಪರಿವುಳ್ಳದ್ದನ್ನಾಗಿ ಬರೆದಿರುವನು.

೪೧. ಆ ಆನಂದರಾಮಚರಿತ್ರೆಯನ್ನು ಓದುವುದರಿಂದಲೂ, ಕೇಳುವುದರಿಂದಲೂ ಹೇಳುವುದರಿಂದಲೂ, ಧ್ಯಾನಮಾಡುವುದರಿಂದಲೂ ನಿನ್ನ ಸೈನ್ಯದಲ್ಲಿರುವ ಜನರಲ್ಲಿ ಕೆಲವರು ನಿನ್ನ ಸ್ಥಾನವಾದ ವೈಕುಂಠವನ್ನು ಹೊಂದಿದರು. ಕೆಲಕೆಲವರು ಅವರವರ ಪುಣ್ಯಗಳಿಗೆ ಸಿಕ್ಕಿದ ಬೇರೆ ಬೇರೆ ಲೋಕಗಳನ್ನು ಹೊಂದಿದರು.

೪೨. ಈಗ ಭೂಮಿಯಲ್ಲಿ ಸೈನ್ಯಗಳೇ ಇರುವುದಿಲ್ಲ. ಈ ನನ್ನ ಮಾತು ಸತ್ಯವೆಂದು ತಿಳಿ. ಆನಂದ ರಾಮಾಯಣವು ಒಂಭತ್ತು ಕಾಂಡಗಳಿಂದ ಕೂಡಿ ಆನಂದವನ್ನುಂಟು ಮಾಡುತ್ತದೆ. ಆದರಿಂದ ಎಲ್ಲರೂ ಮುಕ್ತಿಯನ್ನು ಹೊಂದುವರು.

ಸೈನ್ಯೈತಚ್ಛ್ರವಣಾದ್ವಿದ್ಧಿ ಫಲಂ ರಘುಕುಲೋದ್ಭವ ।
ಯೇನ ತೇ ಹೀನಜಾತಿಸ್ಥಾ ದೂತಾಶ್ಚ ಮುಕ್ತಿಗಾಮಿನಃ ॥ ೪೩ ॥

ಸಾರಕಾಂಡಶ್ರವಾದೇವ ಸಂಸಾರಾನ್ಮುಚ್ಯತೇ ನರಃ ।
ಯಾತ್ರಾಕಾಂಡೇನ ಯಾತ್ರಾಣಾಂ ಲಭ್ಯತೇ ಮಾನವೈಃ ಫಲಂ ॥ ೪೪ ॥

ಯಾಗಕಾಂಡೇನ ಯಜ್ಞಾನಾಂ ಲಭ್ಯತೇ ಫಲಮುತ್ತಮಂ ।
ವಿಲಾಸಕಾಂಡಶ್ರವಣಾದಪ್ಸರೋಭಿರ್ವಿನೋದತೇ ॥ ೪೫ ॥

ಜನ್ಮಕಾಂಡೇನ ಚಾಪ್ನೋತಿ ನರಃ ಪುತ್ರಾದಿಸಂತತಿಂ ।
ವಿವಾಹಕಾಂಡಶ್ರವಣಾದ್ಭುವಿ ರಮ್ಯಾಂ ಸ್ತ್ರೀಯಂ ಲಭೇತ್ ॥ ೪೬ ॥

ರಾಜ್ಯಕಾಂಡೇನ ರಾಜ್ಯಂ ಹಿ ಮಾನವೈರ್ಭುವಿ ಲಭ್ಯತೇ ।
ಕಾಂಡಂ ಮನೋಹರಂ ಶ್ರುತ್ವಾ ಲಭ್ಯತೇಮನಸೇಪ್ಸಿತಂ ॥ ೪೭ ॥

---

೪೩. ಅದನ್ನು ಓದಿದುದರ ಫಲವು ಈ ಸೈನ್ಯಕ್ಕೆ ಬಂದಿರುವುದು. ಅವರೆಲ್ಲರೂ ಹೀನಜಾತಿಯವರಾಗಿದ್ದರೂ ಮುಕ್ತಿಯನ್ನು ಹೊಂದಿ ಈಗ ಭೂಮಿಯಲ್ಲೇ ಇರುತ್ತಿಲ್ಲ.

೪೪. ಆ ಆನಂದ ರಾಮಾಯಣದ ಸಾರಕಾಂಡವನ್ನು ಓದಿದರೇನೇ ನರನ್ನು ಸಂಸಾರದಿಂದ ಬಿಡುಗಡೆಯನ್ನು ಹೊಂದುವನು. ಯಾತ್ರಾಕಾಂಡವನ್ನು ಓದಿದರೆ ಅವರಿಗೆ ಯಾತ್ರೆಗಳ ಫಲವು ಸಿಕ್ಕುತ್ತದೆ.

೪೫. ಯಾಗಕಾಂಡವನ್ನು ಓದಿದರೆ ಯಾಗಗಳ ಫಲವು ಸಿಕ್ಕುತ್ತದೆ. ವಿಲಾಸಕಾಂಡವನ್ನು ಶ್ರವಣಮಾಡಿದರೆ ಅಪ್ಸರರೊಡನೆ ಸುಖಿಸುವ ಫಲವು ಬರುತ್ತದೆ.

೪೬. ಜನ್ಮಕಾಂಡವನ್ನು ಓದಿದರೆ ಮನುಷ್ಯನಿಗೆ ಪುತ್ರ ಪೌತ್ರಾದಿಗಳ ಸಂಪತ್ತು ಸಿಕ್ಕುತ್ತದೆ. ವಿವಾಹ ಕಾಂಡವನ್ನು ಓದುವುದರಿಂದ ಭೂಮಿಯಲ್ಲಿ ರಮ್ಯವಾದ ಸ್ತ್ರೀಯರನ್ನು ಹೊಂದುತ್ತಾನೆ.

೪೭. ರಾಜ್ಯಕಾಂಡವನ್ನು ಓದಿದರೆ ಉತ್ತಮವಾದ ರಾಜ್ಯವನ್ನು ಹೊಂದುತ್ತಾನೆ. ಮನೋಹರ ಕಾಂಡವನ್ನು ಓದಿದರೆ ಮನಸ್ಸಿನ ಇಷ್ಟಗಳೆಲ್ಲವೂ ಸಿಕ್ಕುತ್ತವೆ.

ಪೂರ್ಣಕಾಂಡಶ್ರವಾದೇವ ತೇ ಪೂರ್ಣಸ್ಯ ಪದಂ ಲಭೇತ್ ।
ಸರ್ವಂ ತನ್ಮಾನವೈಃ ಶ್ರುತ್ವಾ ನಂದರಾಮಾಯಣಂ ಭುವಿ ॥ ೪೮ ॥

ಸಚ್ಚಿದಾನಂದರೂಪೇ ತೇ ಲೀನೋ ಭವತಿ ಮಾನವಃ ।
ಏವಂ ರಾಮ ತ್ವಯಾ ಪೃಷ್ಟಂ ತತ್ಸರ್ವಂ ಕಥಿತಂ ಮಯಾ ॥ ೪೯ ॥

ಯದಗ್ರೇತ್ರ ಕರಿಷ್ಯಸಿ ತ್ವಂ ತತ್ಕುರುಷ್ವ ರಘೂತ್ತಮ ।
ಇತಿ ರಾಮಂ ವಸಿಷ್ಠಸ್ತು ಯಾವತ್ಪ್ರಾಹ ನೃಪಾಗ್ರತಃ ॥ ೫೦ ॥

ತಾವದ್ಭೂಮ್ಯಾಂ ಹಿ ಕಿಂ ಜಾತಂ ತಚ್ಛೃಣುಷ್ವ ಸವಿಸ್ತರಂ ।
ಗತಿಂ ಶ್ರುತ್ವಾ ತು ದೇವಾನಾಂ ನಾನಾದೇಶೇಷು ಯೇ ನರಾಃ ॥ ೫೧ ॥

ತೇಪಿ ಸರ್ವೇ ತದಾನಂದರಾಮಾಯಣಶ್ರವಾದಿಭಿಃ ।
ನಾನಾವಿಮಾನಸಂಸ್ಥಾಸ್ತೇ ಯಯುಯಸ್ವರ್ಲೋಕಮುತ್ತಮಂ ॥ ೫೨ ॥

೪೮-೪೯. ಪೂರ್ಣಕಾಂಡವನ್ನು ಓದಿದರೆ ಅವರು ಪೂರ್ಣನಾದ ಪರಮಾತ್ಮನ ಸ್ಥಾನವನ್ನೇ ಹೊಂದುತ್ತಾರೆ. ಆನಂದ ರಾಮಾಯಣವೆಲ್ಲವನ್ನೂ ಕೇಳಿದರೆ ಅವನು ಸಚ್ಚಿದಾನಂದರೂಪಿಯಾದ ಪರಮಾತ್ಮನಲ್ಲಿ ಲೀನನಾಗುವನು. ಎಲೈ ರಾಮನೇ ! ನೀನು ಕೇಳಿದುದಕ್ಕೆಲ್ಲಾ ಸರಿಯಾದ ಉತ್ತರವನ್ನು ಹೇಳಿದ್ದೇನೆ.

೫೦. ಇನ್ನು ನೀನು ಮುಂದೆ ಏನು ಮಾಡಬೇಕೋ ಅದನ್ನು ಮಾಡಬಹುದು. ಈ ರೀತಿಯಾಗಿ ವಸಿಷ್ಠನು ಆ ರಾಮನೆದುರಿಗೂ ರಾಜರ ಎದುರಿಗೂ ಹೇಳಿದನು.

೫೧-೫೨. ಇಷ್ಟರೊಳಗೆ ಈ ಭೂಮಿಯಲ್ಲಿ ಏನು ಆಯಿತೆಂಬುದನ್ನು ಕೇಳು. ಎಲ್ಲಾ ಸೈನಿಕರೂ ಈ ರೀತಿಯಾಗಿ ದೇವತೆಗಳ ಗತಿಯನ್ನು ಹೊಂದಿದರು ಎಂಬುದನ್ನು ಕೇಳಿ ಎಲ್ಲಾ ದೇಶದಲ್ಲಿಯೂ ಇದ್ದ ನರರು ಆನಂದ ರಾಮಾಯಣವನ್ನು ಕೇಳಲು ಮೊದಲು ಮಾಡಿದರು. ಆ ಪುಣ್ಯದಿಂದ ವಿಮಾನದಲ್ಲಿ ಕುಳಿತು ಉತ್ತಮವಾದ ಸ್ವರ್ಗಲೋಕವನ್ನು ಅವರೆಲ್ಲರೂ ಹೊಂದಿದರು.

ಶೂನ್ಯಂ ದೃಷ್ಟ್ವಾ ನಿಜಂ ಲೋಕಂ ಯಮೋ ವಿಧಿಸಮನ್ವಿತಃ ।
ಕೈಲಾಸೇ ಶಂಕರಂ ನತ್ವಾ ಸರ್ವಂ ವೃತ್ತಂ ನ್ಯವೇದಯತ್ ॥ ೫೩ ॥

ಶಿವಃ ಶ್ರುತ್ವಾ ವಿಹಸ್ಯಾಥ ಯಮೇನ ಕೇನ ದುರ್ಗಯಾ ।
ಯಯೌ ಸ ವೃಷಭಾರೂಢಃ ಸಾಕೇತಂ ವೇಷ್ಟಿತೋಽಮರೈಃ ॥ ೫೪ ॥

ಶಿವಮಾಗತಮಾಜ್ಞಾಯ ಪ್ರತ್ಯುದ್ಗಮ್ಯ ರಘೂದ್ವಹಃ ।
ಸಿಂಹಾಸನೇ ಶಿವಂ ದೇವ್ಯಾ ನಿವೇಶ್ಯ ಪೂಜನಂ ವ್ಯಧಾತ್ ॥ ೫೫ ॥

ಸಸೀತೋ ಬ್ರಹ್ಮಣಶ್ಚಾಪಿ ಸುರಾಣಾಂ ಚ ಯಮಸ್ಯ ಚ ।
ಏತಸ್ಮಿನ್ನಂತರೇ ಬ್ರಹ್ಮಾ ರಾಘವಂ ಪ್ರಾಹ ವೈ ತದಾ ॥ ೫೬ ॥

ರಾಮ ರಾಜೀವಪತ್ರಾಕ್ಷ ಯಮಂ ಪಶ್ಯ ನಿರುದ್ಯಮಂ ।
ಶೂನ್ಯಾ ಸಂಯಮನೀ ಜಾತಾನಂದರಾಮಾಯಣಶ್ರವಾತ್ ॥ ೫೭ ॥

---

೫೩. ಆಗ ಯಮನು ಪಾಪಿಗಳಾರೂ ತನ್ನ ಲೋಕಕ್ಕೆ ಬರದೆ ಶೂನ್ಯವಾದುದನ್ನು ನೋಡಿ ತಾನು ಬ್ರಹ್ಮನೊಡನೆ ಕೂಡಿಕೊಂಡು ಕೈಲಾಸಕ್ಕೆ ಹೋಗಿ ಶಂಕರನಿಗೆ ನಮಸ್ಕರಿಸಿ ಎಲ್ಲ ವಿಷಯವನ್ನು ಹೇಳಿದನು.

೫೪. ಶಿವನು ಇದೆಲ್ಲವನ್ನೂ ಕೇಳಿ ನಕ್ಕು ಪಾರ್ವತಿಯನ್ನು ಜೊತೆಯಲ್ಲಿ ಕರೆದುಕೊಂಡು ಬಸವನ ಮೇಲೆ ಕುಳಿತುಕೊಂಡು ಯಮನೊಡನೆ ಅಯೋಧ್ಯೆಗೆ ಬಂದನು. ಅವನ ಜೊತೆಯಲ್ಲಿ ದೇವತೆಗಳೂ ಎಲ್ಲರೂ ಬಂದರು.

೫೫. ಅಯೋಧ್ಯೆಗೆ ಶಿವನು ಬಂದುದನ್ನು ಕೇಳಿ ರಾಮನು ಅವನ್ನು ಎದುರುಗೊಂಡನು. ಮತ್ತು ಅವನನ್ನು ಕರೆದುಕೊಂಡು ಹೋಗಿ ಸಿಂಹಾಸನದಲ್ಲಿ ಕೂರಿಸಿ ಪೂಜಿಸಿದನು.

೫೬. ಸೀತೆಯೊಡನೆ ತಾನು ಆ ಪಾರ್ವತಿ ಪರಮೇಶ್ವರರನ್ನು ಪೂಜಿಸಿದುದಲ್ಲದೆ ಬ್ರಹ್ಮ ಯಮರೇ ಮುಂತಾದ ದೇವತೆಗಳಿಗೂ ಪೂಜೆಯನ್ನು ಮಾಡಿದರು. ಆಗ ಬ್ರಹ್ಮನು ರಾಮನನ್ನು ಕುರಿತು ಇಂತೆಂದನು.

೫೭. ಎಲೈ ರಾಜೀವಪತ್ರಾಕ್ಷನಾದ ರಾಮನೇ! ಈ ಯಮನನ್ನು ನೋಡು. ಕೆಲಸವಿಲ್ಲದೆ ಇರುವನು ಆನಂದರಾಮಾಯಣವನ್ನು ಕೇಳಿದುದರಿಂದ ಯಮಲೋಕಕ್ಕೆ ಹೋಗುವವರೇ ಇಲ್ಲದೆ ಆ ಯಮನ ಪಟ್ಟಣವಾದ ಸಂಯಮನಿಯು ಶೂನ್ಯವಾಗಿದೆ.

ಶೂನ್ಯೋ ಜಾತೋಽಸ್ತಿ ಭೂಲೋಕಃ ಶಿವಕಾಶೋ ನ ದೃಶ್ಯತೇ ।
ಸರ್ವೇಷಾಂ ಪ್ರಾಣಿನಾಂ ವಸ್ತುಮಗ್ರೇ ಕಿಂಚಿದ್ವಿಚಾರಯ ॥ ೫೮ ॥

ಇತಿ ತಸ್ಯ ವಚಃ ಶ್ರುತ್ವಾ ಸಮಾಹೂಯ ರಘೂತ್ತಮಃ ।
ಶತ್ರುಘ್ನಂ ಪ್ರೇಷ್ಯ ವಾಲ್ಮೀಕಿಂ ತಸ್ಮೈ ವೃತ್ತಂ ನ್ಯವೇದಯತ್ ॥ ೫೯ ॥

ಸೋಽಪಿ ಶ್ರುತ್ವಾ ವಿಹಸ್ಯಾಥ ರಾಘವಂ ವಾಕ್ಯಮಬ್ರವೀತ್ ।
ಯೇನ ಮತ್ಕವಿತಾನಾಶೋ ನ ಭವಿಷ್ಯತಿ ವೈ ಭುವಿ ॥ ೬೦ ॥

ತಥಾ ಸುಖಂ ಚ ಸರ್ವೇಷಾಂ ಯೇನ ತತ್ಕುರು ರಾಘವ ।
ತಥೇತಿ ರಾಘವಶ್ಚೋಕ್ತ್ವಾ ತದಾ ವಚನಮಬ್ರವೀತ್ ॥ ೬೧ ॥

ಸಪ್ತಜನ್ಮಾರ್ಜಿತಂ ಪುಣ್ಯಂ ಮಮಾರ್ಚನಸಮುದ್ಭವಂ ।
ಯಸ್ಯ ಸ್ಯಾತ್ತಸ್ಯ ಚಾನಂದರಾಮಾಯಣಕಥಾರುಚಿಃ ॥ ೬೨ ॥

---

೫೮. ಎಲ್ಲರೂ ಸ್ವರ್ಗಾದಿ ಲೋಕಗಳಿಗೆ ಹೋಗುತ್ತಿರುವುದರಿಂದ ಭೂಮಿಯು ಶೂನ್ಯವಾಗಿರುವುದು. ಆ ಸ್ವರ್ಗದಲ್ಲಿ ಜಾಗವೇ ಇರುತ್ತಿಲ್ಲ. ಕೊನೆಗೆ ಎಲ್ಲರೂ ಹೊರಟುಹೋದ ಮೇಲೆ ಭೂಮಿಯು ನಿರ್ಜನ ಪ್ರದೇಶವಾಗುವುದು. ಆದ್ದರಿಂದ ಸರ್ವಪ್ರಾಣಿಗಳಿಗೂ ಜಾಗವಿರುವಂತೆ ಮಾಡಲು ಯಾವುದಾದರೂ ಒಂದು ವಿಷಯವನ್ನು ಗಮನಿಸಿ ವಿಚಾರಿಸು.

೫೯. ಬ್ರಹ್ಮನು ಹೀಗೆ ಹೇಳಿದುದನ್ನು ರಾಮನು ಕೇಳಿ ಶತ್ರುಘ್ನನನ್ನು ಕರೆದು ಈ ವಿಷಯವನ್ನು ವಾಲ್ಮೀಕಿಗೆ ಹೇಳಿ ಕಳುಹಿಸಿದನು. ಆ ಶತ್ರುಘ್ನನು ವಾಲ್ಮೀಕಿಯನ್ನು ಕರೆತರಲು ಅವನಿಗೆ ಅದೆಲ್ಲವನ್ನೂ ಹೇಳಿದನು.

೬೦–೬೧. ವಾಲ್ಮೀಕಿಯು ಅದನ್ನು ಕೇಳಿ ನಕ್ಕು ಇಂತೆಂದು ಹೇಳಿದನು. ಎಲೈ ರಾಮನೇ ! ಭೂಲೋಕದಲ್ಲಿ ನನ್ನ ಕವಿತೆಯು ನಾಶವಾಗದಂತೆ ಇರಬೇಕು. ಎಲ್ಲರೂ ಸುಖವಾಗಿರಬೇಕು. ಎನ್ನಲು ರಾಮನು ಹಾಗೆಯೇ ಆಗಲೆಂದು ಹೇಳಿ ಇಂತೆಂದನು.

೬೨. ಎಲೈ ವಾಲ್ಮೀಕಿಯೆ ! ಏಳು ಜನ್ಮಗಳಲ್ಲಿಯೂ ನನ್ನನ್ನು ಪೂಜಿಸಿದ ಪುಣ್ಯವು ಯಾವನಿಗೆ ಇರುವುದೋ ಅವನಿಗೆ ಆನಂದರಾಮಾಯಣದ ಕಥೆಯಲ್ಲಿ ರುಚಿಯು ಹುಟ್ಟಲಿ.

ಭವಿಷ್ಯತಿ ನ ಸರ್ವೇಷಾಂ ಭವತ್ವತ್ರ ಕದಾಚನ ।
ಇತಿ ರಾಮವಚಶ್ಶ್ರುತ್ವಾ ಸರ್ವೇ ಸಂತುಷ್ಟಮಾನಸಾಃ ॥ ೬೩ ॥

ಯಯುಃ ಸ್ವಂ ಸ್ವಂ ಪದಂ ದೇವಾಃ ಸ್ವಂ ಸ್ವಂ ದೇಶಂ ನೃಪಾ ಯಯುಃ ।
ತದಾರಭ್ಯ ವಿಷ್ಣುದಾಸ ಶತಕೋಟಿಮಿತೇ ಶುಭೇ ॥ ೬೪ ॥

ರಾಮಾಯಣೇ ಶಿವೇನೋಕ್ತಮಾನಂದಾಖ್ಯಮಿದಂ ಶುಭಂ ।
ರಾಮಾಯಣಂ ಕ್ವಚಿತ್ಕುತ್ರ ಕಶ್ಚಿದ್ವೇತ್ಸ್ಯತಿ ಮಾನವಃ ॥ ೬೫ ॥

ನ ಭೂಮ್ಯಾಂ ಸಕಲಾ ಲೋಕಾ ವೇತ್ಸ್ಯಂತಿ ದ್ವಾಪರೇ ಕಲೌ ।
ಸಪ್ತಜನ್ಮಾರ್ಜಿತಂ ಪುಣ್ಯಂ ತೇಷಾಂ ವೇತ್ಸ್ಯಂತಿ ತೇ ನರಾಃ ॥ ೬೬ ॥

ತದ್ರಾಮವಚನಾದ್ಭೂಮ್ಯಾಂ ಬಭೂವ ಪೂರ್ವವತ್ತದಾ ।
ನಾಭೂತ್ಕಸ್ಯ ತದಾ ಮೇಧಾನಂದರಾಮಾಯಣಂ ಪ್ರತಿ ॥ ೬೭ ॥

---

೬೩. ಅಂತಹವರಿಗೆ ಅದನ್ನು ಓದುವುದರಲ್ಲಿ ಆಸೆಯು ಹುಟ್ಟಬೇಕೇ ಹೊರತು ಎಲ್ಲರಿಗೂ ಹುಟ್ಟಕೂಡದು ಎಂದನು. ರಾಮನ ಮಾತನ್ನು ಕೇಳಿ ಎಲ್ಲರಿಗೂ ಸಂತೋಷವಾಯಿತು.

೬೪-೬೫. ಅನಂತರ ದೇವತೆಗಳು ತಮ್ಮ ತಮ್ಮ ಲೋಕಗಳಿಗೆ ಹೋದರು ರಾಜರೂ ತಮ್ಮ ತಮ್ಮ ದೇಶಗಳಿಗೆ ಹೋದರು. ಎಲೈ ವಿಷ್ಣುದಾಸನೇ! ಅದು ಮೊದಲುಗೊಂಡು ಶತಕೋಟಿ ಗ್ರಂಥಗಳುಳ್ಳ ರಾಮಾಯಣದಲ್ಲಿ ಶಿವನು ಹೇಳಿದ ಆ ಆನಂದರಾಮಾಯಣವನ್ನು ಎಲ್ಲಿಯೋ ಒಂದೊಂದು ಜಾಗದಲ್ಲಿ ಒಬ್ಬೊಬ್ಬನು ತಿಳಿದಿರುವನು.

೬೬. ದ್ವಾಪರಯುಗದಲ್ಲಾಗಲಿ ಕಲಿಯುಗದಲ್ಲಾಗಲಿ ಭೂಮಿಯಲ್ಲಿ ಎಲ್ಲರಿಗೂ ಈ ಆನಂದರಾಮಾಯಣವು ತಿಳಿದಿರುವುದಿಲ್ಲ. ಏಳುಜನ್ಮಗಳ ಪುಣ್ಯವು ಯಾರಿಗಿರುವುದೋ ಅವರು ಮಾತ್ರ ಇದನ್ನು ತಿಳಿದಿರುವರು.

೬೭. ರಾಮನ ಈ ಮಾತಿನಂತೆ ಅನಂತರ ಭೂಮಿಯಲ್ಲಿ ಜನರು ಮೊದಲಿ ಸಂತೆಯೇ ನಿಂತರು. ಭೂಮಿಯಲ್ಲಿ ಒಬ್ಬನಿಗೂ ಕೂಡ ಆನಂದ ರಾಮಾಯಣ ದಲ್ಲಿ ಆಸೆಯೇ ಇಲ್ಲದೆ ಹೋಯಿತು.

ಸಹಸ್ರೇಷು ನರಃ ಕಶ್ಚಿತ್ಸಪ್ತಜನ್ಮಸು ಪುಣ್ಯವಾನ್ ।
ಆನಂದರಾಮಚರಿತಂ ವೇದ ಸ್ತೋತ್ರಂ ನ ಚಾಪರಃ ॥ ೬೮ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ರಾಜ್ಯಕಾಂಡೇ ಉತ್ತರಾರ್ಧೇ ಆನಂದರಾಮಾಯಣ
ಮಹಿಮವರ್ಣನಂ ನಾಮ ತ್ರಯೋವಿಂಶಸ್ಸರ್ಗಃ ಸಮಾಪ್ತಃ

—o—o—

---

೬೮. ಸಾವಿರ ಮನುಷ್ಯರಲ್ಲಿ ಯಾವನೋ ಒಬ್ಬನು ಏಳುಜನ್ಮಗಳಲ್ಲಿಯೂ ಪುಣ್ಯಮಾಡಿದವನಿರುವನು. ಅವನು ಮಾತ್ರ ಆನಂದರಾಮಾಯಣವನ್ನು ಬಲ್ಲನೇ ಹೊರತು ಮತ್ತೊಬ್ಬನು ತಿಳಿಯನು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ
ಶ್ರೀ ಆನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ಆನಂದ
ರಾಮಾಯಣದ ಮಹಿಮೆಯೆಂಬ ಇಪ್ಪತ್ತಮೂರನೆಯ ಸರ್ಗವು
ಮುಗಿದುದು.

—ooo—

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಇಪ್ಪತ್ತಮೂರನೆಯ ಸರ್ಗದ ಸಾರಾಂಶವು

ಶ್ರೀರಾಮನು ತಮ್ಮಂದಿರೊಡನೆಯೂ ಮಕ್ಕಳೊಡನೆಯೂ ಹೆಂಡತಿಯೊಡನೆಯೂ ಸುಖವಾಗಿದ್ದುಕೊಂಡು ರಾಜ್ಯಭಾರವನ್ನು ಮಾಡುತ್ತಿದ್ದನು. ಹೀಗಿರುತ್ತಿರಲು ಒಂದು ದಿನ ಒಬ್ಬದೂತನು ಬಂದು ಎಲೈ ಶ್ರೀರಾಮನೇ! ನಾನು ನಿನ್ನ ಸೇವೆಯನ್ನು ಮಾಡುವುದಿಲ್ಲ. ತಪಸ್ಸನ್ನು ಮಾಡಬೇಕೆಂದಿದ್ದೇನೆ, ನನಗೆ ಅಪ್ಪಣೆಯನ್ನು ಕೊಡು. ಹೋಗಬೇಕು ಎಂದನು. ರಾಮನು ಹಾಗೆಯೇ ಮಾಡು ಎಂದೆನಲು ಆ ದೂತನು ಮನೆಗೆ ಹೊರಟುಹೋದನು.

ಆ ದೂತನು ಮನೆಗೆ ಬಂದಮೇಲೆ ತಪಸ್ಸಿಗೆ ಕಾಡಿಗೆ ಹೊರಡುವ ಮೊದಲು ಶುಚಿಯಾಗಿದ್ದುಕೊಂಡು ಒಂಭತ್ತು ದಿನಗಳಕಾಲ ಆನಂದರಾಮಾಯಣವನ್ನು ಪಾರಾಯಣ ಮಾಡಿದನು. ಆ ಪಾರಾಯಣವು ಮುಗಿಯಲು ಹೊರಗೆ ಬಂದು ಅಂಗಡಿಬೀದಿಯಲ್ಲಿ ಹೋಗುತ್ತಿದ್ದನು.

ಇಷ್ಟರೊಳಗೆ ಯಾವುದೋ ಒಂದು ದೇಶದಲ್ಲಿ ರಾಜನು ಮೃತಪಟ್ಟಿದ್ದನು. ಅವನಿಗೆ ಮಗನಿದ್ದರೂ ಇನ್ನೂ ಬಾಲಕನಾಗಿ ರಾಜ್ಯಭಾರವನ್ನು ಮಾಡಲು ಅಸಮರ್ಥನಾಗಿದ್ದನು. ಆಗ ಅಲ್ಲಿದ್ದ ಜನರುಗಳಲ್ಲಿ ಕೆಲವರು ಈಗಿರುವ ಮಂತ್ರಿಯೇ ಬಾಲಕನ ಬದಲು ರಾಜ್ಯವನ್ನು ನೋಡಿಕೊಳ್ಳುತ್ತಿರಲಿ ಎನ್ನುತ್ತಿದ್ದರು. ಮತ್ತೆ ಕೆಲವರು ಅವನು ಅಯೋಗ್ಯನು ಬೇಡ. ಮತ್ತೊಬ್ಬನನ್ನು ನಿಯಮಿಸೋಣ ಎಂದೆನ್ನುತ್ತಿದ್ದರು, ಇದರಿಂದ ಜನಗಳಲ್ಲಿ ಭಿನ್ನಭಿಪ್ರಾಯವು ಹುಟ್ಟಿ ಜಗಳವುಂಟಾಯಿತು. ಕೊನೆಗೆ ಎಲ್ಲರೂ ಒಂದು ನಿಶ್ಚಯಕ್ಕೆ ಬಂದರು. ಅದೇನೆಂದರೆ “ನಮ್ಮಲ್ಲಿರುವ ಆನೆಯು ಸೊಂಡಲಿಗೆ ಒಂದು ಹೂವಮಾಲೆಯನ್ನು ಕೊಡೋಣ. ಅದು ಯಾರಕೊರಳಿಗೆ ಆ ಮಾಲೆಯನ್ನು ಹಾಕುವುದೋ ಅವನು ಮಂತ್ರಿಯಾಗಿರಲಿ, ಎಂದು. ಇದಕ್ಕೆ ಎಲ್ಲರೂ ಒಪ್ಪಿ ಒಂದು ಆನೆಗೆ ವಸ್ತ್ರಾಭರಣಗಳನ್ನು ತೊಡಿಸಿ ಶೃಂಗಾರ ಮಾಡಿ ಹೂ ಮಾಲೆಯನ್ನು ಕೊಟ್ಟರು, ಮತ್ತು ಸ್ವೇಚ್ಛೆಯಾಗಿ ಹೋಗುವಂತೆ ಅದನ್ನು ಬಿಟ್ಟುಬಿಟ್ಟರು. ಅದರ ಹಿಂದೆ ಜನರು ವಾದ್ಯವನ್ನು ಬಾರಿಸುತ್ತ

ಸಂತೋಷದಿಂದ ಅದು ಹೋದ ಕಡೆಗೆ ತಾವೂ ಹೋಗುತ್ತ ಹೊರಟರು. ಅದು ಒಬ್ಬರಿಗಾದರೂ ಆ ಹೂವಿನ ಮಾಲೆಯನ್ನು ಹಾಕದೆ ಅಯೋಧ್ಯೆಯ ಕಡೆಗೆ ಹೊರಟಿತು. ಜನರೂ ಅದರ ಹಿಂದೆ ಹಿಂದೆ ಹೋದರು. ಕೊನೆಗೆ ಆ ಆನೆಯು ಅಯೋಧ್ಯಾ ಪಟ್ಟಣಕ್ಕೆ ಹೋಗಿ ಅಂಗಡಿ ಬೀದಿಯಲ್ಲಿ ಹೋಗುತ್ತಿದ್ದ ಆ ಆನಂದ ರಾಮಾಯಣವನ್ನು ಪಾರಾಯಣ ಮಾಡಿದ್ದ ಕೆಲಸವನ್ನು ಬಿಟ್ಟು ಹೊರಟಿದ್ದ ದೂತನ ಕೊರಳಿಗೆ ಆ ಮಾಲೆಯನ್ನು ಹಾಕಿತು.

ಇದನ್ನು ನೋಡಿದ ಆ ಜನರು ಅವನಿಗೆ ತಮ್ಮ ವಿಷಯವೆಲ್ಲವನ್ನೂ ತಿಳಿಸಿ ಅವನನ್ನು ಅದೇ ಆನೆಯ ಮೇಲೆ ಕೂರಿಸಿಕೊಂಡು ಅವನ ಹೆಂಡತಿ ಮಕ್ಕಳನ್ನೂ ಜೊತೆಯಲ್ಲಿ ಕರೆದುಕೊಂಡು ಊರಿಗೆ ಹೋಗಿ ಅವನನ್ನು ಮಂತ್ರಿಯನ್ನಾಗಿ ಮಾಡಿದರು.

ಈ ವಿಷಯವನ್ನು ಒಬ್ಬರಿಂದೊಬ್ಬರು ಅವರಿಂದ ಮತ್ತೆ ಕೆಲವರು ಈ ರೀತಿಯಾಗಿ ಎಲ್ಲರೂ ಕೇಳಿದರು. ಆಗ ಎಲ್ಲಾ ದೇಶದ ಆಳುಗಳೂ ಕೊನೆಗೆ ಅಯೋಧ್ಯೆಯಲ್ಲಿನ ಆ ದೂತರೂ ಸಹ ರಾಜಸೇವೆಯನ್ನು ಬಿಟ್ಟು ತಮ್ಮ ತಮ್ಮ ಮನೆಗಳಿಗೆ ಹೋಗಿ ಕೆಲವರು ಆನಂದರಾಮಾಯಣವನ್ನು ಪಾರಾಯಣ ಮಾಡಿದರು. ಕೆಲವರು ಗಾನಮಾಡಿದರು. ಹೀಗೆ ಯಾವುದಾದರೂ ಒಂದು ವಿಧದಲ್ಲಿ ಅದನ್ನು ಸೇವಿಸಿದರು. ಇದರಿಂದ ಕೆಲವರು ಸ್ವರ್ಗವನ್ನು ಹೊಂದಿದರು, ಮತ್ತೆ ಕೆಲವರು ಸೂರ್ಯನ ಪದವನ್ನು ಹೊಂದಿದರು. ಕೆಲವರು ಚಂದ್ರನ ಸ್ಥಾನಕ್ಕೆ ಹೋದರು. ಕೆಲವರು ವೈಕುಂಠವನ್ನು ಹೊಂದಿದರು. ಕೆಲವರು ರಾಜ್ಯವನ್ನು ಹೊಂದಿದರು. ಕೆಲವರು ಉತ್ತಮವಾದ ಐಶ್ವರವನ್ನು ಹೊಂದಿದರು. ಅಂತೂ ಅವರ ಆಸ್ಥೆ. ಪುಣ್ಯ ಇವುಗಳಿಗೆ ತಕ್ಕಂತೆ ಫಲಗಳನ್ನು ಹೊಂದಿದರು.

ಅಂತೂ ಒಂದು ದೇಶದಲ್ಲಿಯೂ ಒಬ್ಬ ರಾಜನಿಗೂ ದೂತರೇ ಇಲ್ಲದಂತಾದರು. ರಾಮನ ಬಳಿಯಲ್ಲಿದ್ದ ದೂತರೂ ಕೂಡ ಕೆಲವರು ಕೇಳಿಯೂ ಕೆಲವರು ಕೇಳದೆಯೂ ಹೊರಟುಹೋದರು. ಕೊನೆಗೆ ಪ್ರಪಂಚದಲ್ಲಿಯೇ ದೂತರಿಲ್ಲದಂತಾಯಿತು.

ಹೀಗಿರುತ್ತಿರಲು ಸಾಮಂತರಾಜರು ರಾಮನ ದರ್ಶನಕ್ಕೆ ಬರಲು ಉದ್ಯುಕ್ತರಾಗಿ ತಮ್ಮ ತಮ್ಮ ಸೈನ್ಯಗಳನ್ನು ಕರೆಸಲು ಒಬ್ಬರೂ ಬರಲೇ ಇಲ್ಲ. ಆಗ ಎಲ್ಲರಿಗೂ ಆಶ್ಚರ್ಯವಾಗಿ ತಮ್ಮ ತಮ್ಮ ಬಂಧುಗಳೊಡನೆಯೇ ರಾಮನ ದರ್ಶನಕ್ಕೆ

ಹೊರಟುಹೋದರು. ಈ ರಾಜರು ಬಂದುದನ್ನು ಕೇಳಿ ಅವರನ್ನು ಎದುರುಗೊಳ್ಳಲು ರಾಮನು ಲಕ್ಷ್ಮಣನಿಗೆ ಸೈನ್ಯದೊಡನೆ ಹೋಗುವಂತೆ ಅಪ್ಪಣೆ ಮಾಡಿದನು. ಲಕ್ಷ್ಮಣನು ತುತ್ತೂರಿಯನ್ನು ಊದಿಸಿ ಸೈನ್ಯವನ್ನು ಕರೆಸಲು ಯಾರೂ ಬರಲೇ ಇಲ್ಲ. ಆಗ ಅವನು ಆಶ್ಚರ್ಯ ಪಡುತ್ತ ಇದನ್ನು ರಾಮನಿಗೆ ತಿಳಿಸಲು ಅವನೂ ಆಶ್ಚರ್ಯ ಪಟ್ಟುಕೊಂಡು ತಮ್ಮಂದಿರೂ ಮಕ್ಕಳೂ ಹೋಗಿ ಎದುರುಗೊಂಡು ಆ ರಾಜನನ್ನು ಕರೆತರುವಂತೆ ಹೇಳಿದನು. ಲಕ್ಷ್ಮಣನು ಅಂತೆಯೇ ಮಾಡಿದನು.

ಆ ರಾಜರೆಲ್ಲರೂ ಬಂದು ರಾಮನಿಗೆ ನಮಸ್ಕರಿಸಿದರು. ಅವರೆಲ್ಲರೂ ಸಭೆಯಲ್ಲಿ ಕುಳಿತುಕೊಂಡು ತಮ್ಮ ತಮ್ಮ ಸೇನೆಗಳ ವಿಷಯವನ್ನು ರಾಮನಿಗೆ ತಿಳಿಸಿದರು. ರಾಮನೂ ಕೂಡ ತನ್ನ ಸೈನ್ಯದ ವಿಚಾರವನ್ನು ಅವರಿಗೆ ತಿಳಿಸಿದನು.

ಅನಂತರ ಆ ರಾಮನು ಸಭೆಗೆ ಗುರುವಾದ ವಸಿಷ್ಠನನ್ನು ಕರೆಸಿ ಎಲೈ ಗುರುವೆ? ನಮ್ಮ ಸೈನ್ಯಗಳಾಗಲಿ ಈ ರಾಜರ ಸೈನ್ಯಗಳಾಗಲಿ ಏಕೆ ಬರಲಿಲ್ಲ? ಏನಾದುವು? ಎಲ್ಲಿವೆ? ಎಂದು ಕೇಳಿದನು. ರಾಮನ ಈ ಮಾತನ್ನು ಕೇಳಿ ವಸಿಷ್ಠನು ಕ್ಷಣಕಾಲ ಧ್ಯಾನಿಸಿ ನೋಡಿ ನಗುತ್ತಾ ಆ ಸಭೆಯ ಮಧ್ಯದಲ್ಲಿ ರಾಮನನ್ನು ಕುರಿತು ಎಲೈ ಶ್ರೀರಾಮನೇ! ನಿನಗೆ ಎಲ್ಲವೂ ತಿಳಿದೇ ಇರುತ್ತದೆ, ಕೇಳಬೇಕೆಂಬ ಅಪೇಕ್ಷೆಯಿದ್ದರೆ ಹೇಳುತ್ತೇನೆ. ನಿನ್ನ ಪಾವನವಾದ ಚರಿತ್ರೆಯನ್ನು ನೂರುಕೋಟಿ ಗ್ರಂಥಗಳುಳ್ಳದ್ದನ್ನಾಗಿ ವಾಲ್ಮೀಕಿಯು ಬರೆದಿರುವನು. ಅದರ ಮಧ್ಯದಲ್ಲಿ ಒಂಭತ್ತು ಕಾಂಡಗಳ ಪರಿಮಿತಿಯಲ್ಲಿ ಆನಂದರಾಮಾಯಣವನ್ನು ರಚಿಸಿರುವನು. ಆದರ ಪಾರಾಯಣ ಧ್ಯಾನ ಶ್ರವಣಗಳಿಂದ ಕೆಲವರು ವೈಕುಂಠವನ್ನೂ ಕೆಲವರು ಸ್ವರ್ಗವನ್ನೂ ಇದೇ ರೀತಿಯಾಗಿ ಅವರ ಭಕ್ತಶ್ರದ್ಧೆಗಳಿಗನುರೂಪವಾಗಿ ಸ್ಥಾನಗಳನ್ನು ಅವರವರು ಹೊಂದಿದರು. ಆದ್ದರಿಂದ ಲೋಕದಲ್ಲಿ ಸೈನ್ಯದಲ್ಲಿ ಜನರೇ ಇಲ್ಲ. ಸತ್ಯವಾದ ಮಾತು ಎಂದನು.

ರಾಮನು ವಸಿಷ್ಠನಿಂದ ಇಷ್ಟು ವಿಷಯವನ್ನು ತಿಳಿದುಕೊಳ್ಳುವಷ್ಟರಲ್ಲಿ ದೂತರು ಹೊಂದಿದ ಗತಿಯನ್ನು ಜನರೂ ಕೂಡ ಕೇಳಿ ಅವರೂ ಆನಂದ ರಾಮಾಯಣದ ಪಾರಾಯಣದ ಶ್ರವಣ ವ್ಯಾಖ್ಯಾನಗಳಿಗೆ ಮೊದಲು ಮಾಡಿ ಸೇವಿಸುತ್ತ ಉತ್ತಮವಾದ ಲೋಕಗಳನ್ನು ಹೊಂದುತ್ತ ಬಂದರು.

ನರಕಕ್ಕೆ ಯಾರೂ ಹೊಗಲೇ ಇಲ್ಲ. ನರಕವು ಬರಿದಾದುದನ್ನು ನೋಡಿ ಯಮನು ಬ್ರಹ್ಮನ ಬಳಿಗೆ ಹೋಗಿ ವಿಜ್ಞಾಪಿಸಿಕೊಂಡನು. ಅವರಿಬ್ಬರೂ ಶಂಕರನ ಬಳಿಗೆ ಹೋಗಿ ವಿಜ್ಞಾಪಿಸಿದರು. ಶಂಕರನು ಅವರನ್ನೂ ಕರೆದುಕೊಂಡು ರಾಮನ

ಬಳಿಗೆ ಹೋದನು. ಶಿವನು ಬಂದುದನ್ನು ರಾಮನು ತಿಳಿದು ಎದುರುಗೊಂಡು ಅವರೆಲ್ಲರಿಗೂ ಪೂಜೆಯನ್ನು ಮಾಡಿದನು.

ಆಗ ಬ್ರಹ್ಮನು ರಾಮನನ್ನು ಕುರಿತು ಎಲೈ ರಾಮನೆ! ಈ ಯಮನನ್ನು ಉದ್ಯೋಗವೇ ಇಲ್ಲದಂತೆ ಆಗಿದ್ದಾನೆ ಆನಂದರಾಮಾಯಣದ ಮಹಿಮೆಯಿಂದ ಎಲ್ಲರೂ ಉತ್ತಮ ಲೋಕವನ್ನೇ ಹೊಂದುತ್ತಿದ್ದಾರೆ. ಭೂಮಿಯಲ್ಲಿ ಜನರೇ ಇಲ್ಲದಂತಾಗಿದ್ದಾರೆ. ಇದನ್ನು ಮನಸ್ಸಿಗೆ ತಂದುಕೊಂಡು ಮುಂದೆ ಏನುಮಾಡು ಬೇಕೆಂಬುದನ್ನು ಸ್ವಲ್ಪ ಯೋಚಿಸು ಎಂದನು, ಆಗ ರಾಮನು ಶತ್ರುಘ್ನನನ್ನು ಕಳುಹಿಸಿ ವಾಲ್ಮೀಕಿಯನ್ನು ಕರೆಸಿದನು. ಅವನಿಗೆ ಈ ಆನಂದ ರಾಮಾಯಣದ ವಿಷಯವನ್ನು ಹೇಳಲು ವಾಲ್ಮೀಕಿಯು ಎಲೈ ರಾಮನೇ! ನಿನ್ನನ್ನು ಕವಿತೆಯು ನಾಶವಾಗಕೂಡದು. ಎಲ್ಲರಿಗೂ ಸುಖವಾಗಬೇಕು. ಹಾಗೆ ಯಾವ ರೀತಿಯಲ್ಲಾದರೂ ಮಾಡು ಎಂದನು. ಅದನ್ನು ಕೇಳಿ ಶ್ರೀರಾಮನು ಯಾವನು ಏಳು ಜನ್ಮಗಳಲ್ಲಿ ನನ್ನನ್ನು ಪೂಜಿಸಿ ಪುಣ್ಯವನ್ನು ಪಡೆದಿರುವನೋ ಅವನಿಗೆ ಈ ಆನಂದ ರಾಮಾಯಣದಲ್ಲಿ ಅಭಿಲಾಷೆಯು ಹುಟ್ಟಲಿ. ಎಲ್ಲರಿಗೂ ಬೇಡ ಎಂದು ಸಂಕೋಚ ಮಾಡಿದನು.

ಇದರಿಂದ ಎಲ್ಲರಿಗೂ ಸಂತೋಷವಾಯಿತು, ಎಲ್ಲರೂ ಗೌರವಿತರಾಗಿ ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು.

ಅಲ್ಲಿಂದ ಮೊದಲುಗೊಂಡು ಈ ಆನಂದರಾಮಾಯಣವನ್ನು ಭೂಮಿಯಲ್ಲಿ ಎಲ್ಲಿಯೋ ಒಬ್ಬೊಬ್ಬನು ತಿಳಿದಿರುತ್ತಾನೆ. ಎಲ್ಲರಿಗೂ ತಿಳಿದಿರುವುದಿಲ್ಲ.

—o—o—

|| ಶ್ರೀರಸ್ತು ||

ಅಥ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡೇ
ಉತ್ತರಾರ್ಧೇ ಚತುರ್ವಿಂಶಸ್ಸರ್ಗಃ

|| ಶ್ರೀರಾಮದಾಸ ಉವಾಚ ||

ಏಕದಾ ಸಂಸ್ಥಿತಂ ರಾಮಂ ಸಭಾಯಾಂ ಸೇವಕೋಬ್ರವೀತ್ |
ರಾಜರಾಜ ಮಹಾರಾಜ ರವಿವಂಶಸ್ಯ ಮಂಡನ ||೧||

ಸುಮಂತ್ರಸ್ತೇತಿವೃದ್ಧಸ್ಸ ಮಂತ್ರೀ ನಾಕಂ ಗತಃ ಪ್ರಭೋ |
ತತ್ಪತ್ನ್ಯಸ್ತೇ ನ ಗಂತುಂ ತ್ವಾಮಾಜ್ಞಾಂ ಪೃಚ್ಛಂತಿ ರಾಘವ ||೨||

ತದ್ದೂತವಚನಂ ಶ್ರುತ್ವಾ ಚಕಿತಃ ಖಿನ್ನಮಾನಸಃ |
ಶೀಘ್ರಂ ಸುಮಂತ್ರಗೇಹೇ ಸ ಯಂತ್ರಾ ಯಾನೇನ ರಾಘವಃ ||೩||

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದಲ್ಲಿ ಇಪ್ಪತ್ತನಾಲ್ಕನೆಯ ಸರ್ಗವು

೧-೨. ಶ್ರೀರಾಮದಾಸನು ಹೇಳಿದನು. ಶ್ರೀರಾಮನು ರಾಜ್ಯಭಾರ ಮಾಡುತ್ತ ಒಂದುಸಾರಿ ಸಭೆಯಲ್ಲಿ ಕುಳಿತಿದ್ದಾಗ ಸೇವಕರು ಬಂದು ರಾಜ ರಾಜನಾದ ರಾಮನೇ ! ಸೂರ್ಯವಂಶಕ್ಕೆ ತಿಲಕನೇ ! ನಿನ್ನ ಮಂತ್ರಿಯಾದ ಸುಮಂತ್ರನು ಬಹು ಮುದುಕನಾಗಿದ್ದನು. ಆದ್ದರಿಂದ ಅವನು ಮೃತಪಟ್ಟು ಸ್ವರ್ಗವನ್ನು ಹೊಂದಿದನು. ಅವನ ಹೆಂಡತಿಯರು ಅವನೊಡನೆ ಸಹಗಮನ ಮಾಡಲು ನಿನ್ನ ಅಪ್ಪಣೆಯನ್ನು ಕೇಳುತ್ತಾರೆ ಎಂದನು.

೩. ರಾಮನು ಆ ದೂತನು ಹೇಳಿದುದನ್ನು ಕೇಳಿ ಬೆಚ್ಚಿದವನಾಗಿ ದುಃಖಗೊಂಡನು. ಕೇಳಿದೊಡನೆಯೇ ರಥವನ್ನು ತರಿಸಿ ಅದರಲ್ಲಿ ಕುಳಿತು ಬೇಗನೆ ಸುಮಂತ್ರನ ಮನೆಗೆ ಹೋದನು.

ಸುಮಂತ್ರಜನ್ಮಪಟ್ಟೇ ತಸ್ಯಾಯುಸ್ಸಂಖ್ಯಾಂ ದದರ್ಶ ಸಃ ।
ಜನ್ಮಕಾಲಾತ್ಸಹಸ್ರಾಣಿ ನವನವಶತಾನಿ ಚ ॥ ೪ ॥

ನವನವತಿವರ್ಷಾಣಿ ಮಾಸಾಸ್ತ್ವೇಕಾದಶೈವ ಹಿ ।
ಏಕವಿಂಶದ್ದಿನಾಶ್ಚಾತಿ ಕ್ರಾಂತಾಶ್ಶೇಷದಿನಾ ನವ ॥ ೫ ॥

ಜ್ಞಾತ್ವೇತ್ಥಂ ರಾಮಚಂದ್ರಸ್ಸ ತದಾ ಪ್ರಾಹ ಗುರುಂ ಪ್ರತಿ ।
ಕೃತೇಯುಗೇ ತು ಲಕ್ಷ್ಮಾಯುಸ್ಸಹಸ್ರಂ ದ್ವಾಪರೇ ಸ್ಮೃತಂ ॥ ೬ ॥

ಶತವರ್ಷಂ ಕಲೌ ಪ್ರೋಕ್ತಂ ಸಹಸ್ರಾಣಿ ದಶೈವ ಚ ।
ತ್ರೇತಾಯಾಂ ಕಥಿತಂ ಚಾಯುಸ್ತನ್ಮದ್ರಾಜ್ಯೇ ಮೃಷಾ ಕೃತಂ ॥ ೭ ॥

ಯಮೇನ ಮಾಮವಜ್ಞಾಯ ಮದ್ದಂಡಂ ಲಬ್ಧುಮಿಚ್ಛತಾ ।
ದಿನಾನಿ ನವಶೇಷಾಣಿ । ಸಂತಿ ಮೇ ಮಂತ್ರಿಣಃ ಕಥಂ ॥ ೮ ॥

೪-೫. ಸುಮಂತ್ರನ ಆಯುಃ ಪಟ್ಟವಾದ ಜಾತಕದಲ್ಲಿ ಅವನ ಆಯುಸ್ಸಿನ ಸಂಖ್ಯೆಯನ್ನು ನೋಡಿದನು. ಅದರಲ್ಲಿ ಒಂಭತ್ತು ಸಾವಿರದ ಒಂಭೈನೂರ ತೊಂಬತ್ತೊಭತ್ತು ವರ್ಷಗಳೂ ಹನ್ನೊಂದು ತಿಂಗಳುಗಳೂ ಇಪ್ಪತ್ತೊಂದು ದಿನಗಳೂ ಆಗಿದ್ದುವು. ಒಂಭತ್ತು ದಿನಗಳ ಉಳಿದಿದ್ದುವು.

೬-೭. ಇದನ್ನು ನೋಡಿ ರಾಮನು ಗುರುವನ್ನು ಕುರಿತು ಎಲೈ ಗುರುವೇ ! ಮನುಷ್ಯನಿಗೆ ಕೃತಯುಗದಲ್ಲಿ ಒಂದು ಲಕ್ಷ ವರ್ಷಗಳೂ, ದ್ವಾಪರಯುಗದಲ್ಲಿ ಒಂದು ಸಾವಿರ ವರ್ಷಗಳೂ, ಕಲಿಯುಗದಲ್ಲಿ ನೂರು ವರ್ಷಗಳೂ ತ್ರೇತಾಯುಗದಲ್ಲಿ ಹತ್ತುಸಾವಿರ ವರ್ಷಗಳೂ ಆಯುಸ್ಸು ಇರುವುದೆಂದು ಶಾಸ್ತ್ರದಲ್ಲಿ ಹೇಳಿದೆ. ಅದು ನನ್ನ ರಾಜ್ಯದಲ್ಲಿ ಸುಳ್ಳಾಗಿ ಹೋಯಿತು.

೮-೯. ಎಲೈ ಗುರುವೇ ! ಯಮನು ತನ್ನ ದೊಡ್ಡತನವನ್ನು ತೋರಿಸಿಕೊಳ್ಳಲು ನನ್ನ ಮಂತ್ರಿಗೆ ಇನ್ನೂ ಒಂಭತ್ತು ದಿನಗಳು ಆಯುಸ್ಸು ಉಳಿದಿರುವಾಗಲೇ

ಯಮೇನ ನೀತಸ್ತ್ವದ್ಯೈವ ಯಮಂ ಬಧ್ವಾ ನಯಾಮ್ಯಹಂ ।
ಸುಮಂತ್ರಂ ಜೀವಯಾಮ್ಯದ್ಯ ಪಶ್ಯ ಮೇ ತ್ವಂ ಪರಾಕ್ರಮಂ ॥ ೯ ॥

ಇತ್ಯುಕ್ತ್ವಾ ಗರುಡಾ ರೂಢೋ ಕೋದಂಡಂ ಕಲಯನ್ ಕರೇ
ವೇಗೇನ ರಘುನಾಥಸ್ಸ ಯಯೌ ಸಂಯಮನೀಂ ಪುರೀಂ ॥ ೧೦ ॥

ತಾವಾನ್ಮಾರ್ಗೇ ಸುಮಂತ್ರಂ ತಂ ಪಾಶಬದ್ಧಂ ಯಮಾನುಗೈಃ ।
ಗಚ್ಛಂತಂ ರಾಘವೋ ದೃಷ್ಟ್ವಾ ತಾನ್ಸರ್ವಾನ್ ತಾಡಯನ್ಮುಹುಃ ॥ ೧೧ ॥

ಸುಮಂತ್ರಂ ಮೋಚಯಾಮಾಸ ಲಿಂಗರೂಪಧರಂ ಪ್ರಭುಃ ।
ತದಾ ತೇ ರಾಘವಂ ಪ್ರೋಚುಶ್ಚಾಪರಾದ್ಧಂ ತವಾದ್ಯ ಕಿಂ ॥ ೧೨ ॥

ಅಸ್ಮಾಭಿಶ್ಚೇದೃಶೋ ದಂಡೋ ಯತೋಽಸ್ಮಾಕಂ ಕೃತಸ್ತ್ವಯಾ ।
ತದಾ ತಾನ್ರಾಘವಃ ಪ್ರಾಹ ದಿನಾನ್ಯಾಯುರ್ನವಾಸ್ಯ ಹಿ ॥ ೧೩ ॥

ಅವನನ್ನು ತೆಗೆದುಕೊಂಡು ಹೋಗಿರುವನು. ನಾನು ಆ ಯಮನನ್ನು ಶಿಕ್ಷಿಸಲು ಈಗಲೇ ಕಟ್ಟಿತರುವೆನು. ಸುಮಂತ್ರನನ್ನು ಈಗಲೇ ಬದುಕಿಸುವೆನು. ನನ್ನ ಪರಾಕ್ರಮವನ್ನು ನೋಡು.

೧೦. ಹೀಗೆಂದು ಹೇಳಿ ಗರುಡನ ಮೇಲೆ ಕುಳಿತು ಕೈಯಲ್ಲಿ ಕೋದಂಡವನ್ನು ಹಿಡಿದು ವೇಗದಿಂದ ಆ ರಾಮನು ಯಮನ ಪಟ್ಟಣವಾದ ಸಂಯಮಿನೀ ಪುರಕ್ಕೆ ಹೋದನು.

೧೧. ಯಮ ಭಟರು ಸುಮಂತ್ರನನ್ನು ಕಟ್ಟಿ ಹೊಡೆಯುತ್ತ ದಾರಿಯಲ್ಲಿ ಎಳೆದುಕೊಂಡು ಹೋಗುತ್ತಿರುವುದನ್ನು ನೋಡಿ ಅವರನ್ನೆಲ್ಲಾ ಹೊಡೆದೋಡಿಸಿ ಈ ರಾಮನು ಸುಮಂತ್ರನನ್ನು ಬಿಡಿಸಿದನು.

೧೨. ಲಿಂಗದೇಹವನ್ನು ಹೊಂದಿದ್ದ ಆ ಸುಮಂತ್ರನು ಆ ಆಳುಗಳಿಂದ ಆಗ ಬಿಡುಗಡೆಯನ್ನು ಹೊಂದಿದನು. ಆಗ ಆ ಯಮಭಟರು ರಾಮನನ್ನು ನೋಡಿ ಅಯ್ಯಾ! ನಾವು ನಿನಗೆ ಮಾಡಿದ ಅಪರಾಧವೇನು ?

೧೩. ನಮ್ಮನ್ನು ಈ ರೀತಿಯಾಗಿ ನೀನು ಹೊಡೆದೆಯಲ್ಲಾ ! ಎಂದರು. ಆಗ ರಾಮನು ಅವರನ್ನು ಕುರಿತು ಎಲೈ ಭಟರಿರಾ ! ಈತನಿಗೆ ಒಂಭತ್ತು ದಿನಗಳು ಇನ್ನೂ ಆಯುಸ್ಸು ಉಳಿದಿದೆ.

ವರ್ತತೇ ಶೇಷಭೂತಂ ವೈ ಕಥಮದ್ಯೈವ ನೀಯತೇ ।
ಭವಿಷ್ಯಂತಿ ದಿನಾನ್ಯಗ್ರೇ ಯದಾ ನವ ಯಮಾನುಗಾಃ ॥ ೧೪ ॥

ತದಾ ನೇಯಸ್ತ್ವಷೀನಾಯಂ ನ ನಿಷೇಧಂ ಕರೋಮ್ಯಹಂ ।
ಇತಿ ರಾಮವಚಃ ಶ್ರುತ್ವಾ ತಮೂಚುಸ್ತೇ ಯಮಾನುಗಾಃ ॥ ೧೫ ॥

ಅಪೂರ್ವಮಭವಜ್ಜನ್ಮ ಸುಮಂತ್ರಸ್ಯಾಸ್ಯ ರಾಘವ ।
ಮಾತುರ್ಯೋನ್ಯಾ ಬಹಿಶ್ಚಾಸ್ಯ ಮುಖಂ ಹಸ್ತೌ ವಿನಿರ್ಗತೌ ॥ ೧೬ ॥

ಪೂರ್ವಂ ತತೋಽಸ್ಯ ದಶಮೇ ದಿವಸೇ ದೈವಯೋಗತಃ ।
ಉದರಾದೀನ್ಯಥೋಂಗಾನಿ ಪದಾಂತಾನಿ ಶನೈಶ್ಶನೈಃ ॥ ೧೭ ॥

ವಿನಿರ್ಗತಾನಿ ಶ್ರೀರಾಮ ಸುಮಂತ್ರೈ ರಕ್ಷಿತೋ ಬುಧೈಃ ।
ಯಸ್ಮಾಜ್ಜನ್ಮನ್ಯಯಂ ತಸ್ಮಾತ್ಸುಮಂತ್ರಾಖ್ಯಾಸ್ಯ ಸಾರ್ಪಿತಾ ॥ ೧೮ ॥

---

೧೪. ಇನ್ನೂ ಈ ರೀತಿಯಾಗಿ ಒಂಭತ್ತು ದಿನಗಳು ಆಯುಸ್ಸು ಉಳಿದಿರುವಾಗಲೇ ಈತನನ್ನು ನೀವು ಕರೆದುಕೊಂಡು ಹೋಗಲು ಕಾರಣವೇನು ? ಮುಂದಿನ ಒಂಭತ್ತು ದಿನಗಳು ಕಳೆದ ಮೇಲೆ ಈತನನ್ನು ಕರೆದುಕೊಂಡು ಹೋಗಬೇಕಾಗಿದ್ದಿತು. ಹಾಗೆ ಮಾಡಿರಿ.

೧೫. ಆಗ ನಾನು ನಿಮ್ಮನ್ನು ತಡೆಯುವುದಿಲ್ಲ. ನೀವು ಸುಖವಾಗಿ ಕರೆದುಕೊಂಡು ಹೋಗಬಹುದು. ಇಂತೆಂದು ರಾಮನು ಹೇಳಲು ಈ ಮಾತನ್ನು ಕೇಳಿ ಯಮನ ಆಳುಗಳು ಅವನನ್ನು ಕುರಿತು ಇಂತೆಂದರು.

೧೬. ಎಲೈ ರಾಘವನೇ ! ಈ ಸುಮಂತ್ರನ ಹುಟ್ಟುವಿಕೆಯು ಬಹು ಅಪೂರ್ವವಾದುದು. ಇವನು ಹುಟ್ಟುವಾಗ ತಾಯಿಯ ಯೋನಿಯಿಂದೀಚೆಗೆ ಮೊದಲು ಕೈಗಳೂ ಮುಖವೂ ಬಂದುವು.

೧೭–೧೮. ಅನಂತರ ಹತ್ತುದಿನಗಳಾದ ಮೇಲೆ ಹೊಟ್ಟೆ ಕಾಲು ಮುಂತಾದ ಅವಯವಗಳು ಈಚೆಗೆ ಬಂದುವು. ಅನಂತರ ಅದನ್ನು ನೋಡಿ ಪಂಡಿತರಾದವರು ಒಳ್ಳೆಯ ಮಂತ್ರಗಳಿಂದ ಇವನನ್ನು ಕಾಪಾಡಿದುದರಿಂದ ಇವನಿಗೆ ಸುಮಂತ್ರನೆಂದು ಹೆಸರಾಯಿತು.

ಅತಃ ಪೂರ್ವದಿನಾರಭ್ಯ ಸಂಖ್ಯಯಾಯುಃ ಪ್ರಪೂರಿತಂ ।
ಅಸ್ಯ ತ್ವಂ ತದ್ದಿನಾರಭ್ಯ ಸಂಖ್ಯಯಾ ದಿವಸಾ ನವ ॥ ೧೯ ॥

ಶೇಷಭೂತಾಶ್ಚ ಭೂತಾಶ್ಚ ಕೀರ್ತ್ಯಂತೇ ಯೇ ರಘೂತ್ತಮ ।
ಅತೋಽಸ್ಮಾಕಂ ನಾಪರಾಧಃ ಸಂದಿಗ್ಧಂ ಜನ್ಮ ಚಾಸ್ಯ ಹಿ ॥ ೨೦ ॥

ವೃಥಾಯಂ ನೀಯತೇ ರಾಮ ವೃಥಾ ಶಿಕ್ಷಾಪಿ ನಃ ಕೃತಾ ।
ಇತಿ ತೇಷಾಂ ವಚಃ ಶ್ರುತ್ವಾ ರಾಮಃ ಪ್ರಾಹ ಯಮಾನುಗಾನ್ ॥ ೨೧ ॥

ಅಸ್ಯ ಸೋಽಂತದಿನೋ ಜ್ಞೇಯಃ ಪ್ರಥಮೋ ಹಿ ಯಮಾನುಗಾಃ ।
ಯಸ್ಮಿನ್ ದಿನೇ ಸುಪ್ರಸೂತಿರಭವಚ್ಚಾಸ್ಯ ಮಾತೃಕಾತ್ ॥ ೨೨ ॥

ಉತ್ಸಾಹದಿವಸೋ ಜ್ಞೇಯಸ್ಸ ಏವ ಜಾತಕಂ ತಥಾ ।
ತಸ್ಮಿನ್ನೇವ ದಿನೇಽಸ್ಯಾತ್ರ ಕೃತಂ ಪಿತ್ರಾ ದ್ವಿಜೋತ್ತಮೈಃ ॥ ೨೩ ॥

೧೯-೨೦. ಪೂರ್ವದಿನಗಳಿಂದ ಲೆಕ್ಕಮಾಡಿದರೆ ಇವನ ಆಯುಸ್ಸು ಮುಗಿದು ಹೋಗಿರುವುದು. ಪೂರ್ತಿ ಹುಟ್ಟಿದ ಮೇಲೆ ಬರೆದ ಜಾತಕದಿಂದ ಎಣಿಸಿ ನೀನು ಒಂಭತ್ತು ದಿನಗಳಿರುವುದೆಂದು ಲೆಕ್ಕ ಮಾಡಿದ್ದೀಯೆ. ಆ ಒಂಭತ್ತು ದಿನಗಳು ಕಳೆದಿದ್ದರೂ ನೀನು ಉಳಿದಿದೆ ಎಂದು ಹೇಳುತ್ತಿದ್ದೀಯೆ. ಆದ್ದರಿಂದ ನಮ್ಮಗಳದ್ದು ತಪ್ಪಿಲ್ಲ. ಇವನ ಜನ್ಮವೇ ಸಂದೇಹಕ್ಕೆ ಒಳಗಾಗಿದೆ.

೨೧. ಎಲೈ ರಾಮನೇ! ಇವನನ್ನು ವ್ಯರ್ಥವಾಗಿ ಕರೆದುಕೊಂಡು ಹೋಗುತ್ತೀಯೆ. ಇವನಿಗೆ ಆಯುಸ್ಸೇ ಇಲ್ಲವಲ್ಲ! ನಮ್ಮನ್ನೂ ಕೂಡ ವ್ಯರ್ಥವಾಗಿ ಶಿಕ್ಷಿಸಿದೆ. ಎಂಬದಾಗಿ ಅವರು ಹೇಳಲು ಆ ಮಾತನ್ನು ಕೇಳಿ ಆ ಯಮನ ಆಳುಗಳನ್ನು ಕುರಿತು ರಾಮನು ಇಂತೆಂದನು

೨೨. ಎಲೈ! ಯಮನ ಸೇವಕರಿರಾ! ಇವನಿಗೆ ತಾಯಿಯ ದೆಸೆಯಿಂದ ಯಾವ ದಿನ ಸುಖವಾದ ಪ್ರಸವವಾಯಿತೋ ಅದೇ ದಿನವು ಅವನಿಗೆ ಆಯುಸ್ಸಿನಲ್ಲಿ ಮೊದಲನೆಯ ದಿನವೆಂದು ತಿಳಿಯಬೇಕು.

೨೩. ಹುಟ್ಟಿದ ದಿನವೇ ಅವನ ಕಡೆಯುವರಿಗೆಲ್ಲಾ ಉತ್ಸಹ ದಿನವು ಆ ದಿನವೇ ಜಾತಕದ ದಿನವು. ಆ ದಿನವೇ ಅವನ ತಂದೆಯು ಬ್ರಾಹ್ಮಣರಿಂದ ಜಾತಕರ್ಮವನ್ನು ಮಾಡಿಸಿದನು.

ಜ್ಯೋತಿರ್ವಿದಾ ಜನ್ಮಪತ್ರೇ ಸ ಏವ ಲಿಖಿತೋ ದಿನಃ ।
ಅತಶ್ಶೈಷದಿನಾಸ್ಸತ್ಯಂ ಜ್ಞೇಯಾಸ್ತಸ್ಯಾಯುಷೋ ನವ ॥ ೨೪ ॥

ಅತೋ ಯೂಯಂ ಷ್ಮಾಭಿರ್ಗಂತವ್ಯಂ ನೇಯೋಯಂ ದಶಮೇ ದಿನೇ ।
ಪುನರಾಗತ್ಯ ಸಾನ್ನಿಧ್ಯಾನ್ಮೇ ನಿಷೇಧಂ ಕರೋಮಿ ನ ॥ ೨೫ ॥

ಇತಿ ರಾಮವಚಃ ಶ್ರುತ್ವಾ ತೂಷ್ಣೀಮೇವ ಯಮಾನುಗಾಃ ।
ಸಾಶ್ರುನೇತ್ರಾಶ್ಚ ಭಿನ್ನಾಂಗಾ ಯಮರಾಜಂ ಶನೈರ್ಯಯುಃ ॥ ೨೬ ॥

ರಾಮೋಽಪಿ ಪರಿವರ್ತ್ಯಾಥ ಯಮೌ ಸ್ವನಗರೀಂ ಪ್ರತಿ ।
ಸ್ತ್ರೀಭಿರ್ನೀರಾಜಿತೋ ಮಾರ್ಗೇ ವಿವೇಶ ಮಂತ್ರಿಣೋ ಗೃಹಂ ॥ ೨೭ ॥

ತಾವತ್ಸರ್ವಾನ್ ಪ್ರಮುದಿತಾನ್ಸುಮಂತ್ರೇಣ ಸಮನ್ವಿತಾನ್ ।
ದದರ್ಶ ರಾಮಚಂದ್ರಸ್ಸ ತಾವದ್ದೃಷ್ಟ್ವಾ ರಘೂತ್ತಮಂ ॥ ೨೮ ॥

---

೨೪. ಜೋಯ್ಸರೂ ಕೂಡ ಅದೇ ದಿವಸವನ್ನು ಜಾತಕದಲ್ಲಿ ಬರೆದಿರುವರು. ಆದ್ದರಿಂದ ಆವನ ವಿಶೇಷಗಳಾದ ಒಂಭತ್ತು ದಿನಗಳೇ ಅವನ ಆಯುಸ್ಸಿನ ದಿನಗಳೆಂದು ತಿಳಿಯಬೇಕು.

೨೫. ಆದ್ದರಿಂದ ನೀವು ಹೊರಟುಹೋಗಿರಿ ಹತ್ತನೆಯ ದಿನದಲ್ಲಿ ಇವನನ್ನು ಕರೆದುಕೊಂಡು ಹೋಗಿರಿ. ಅದುವರೆವಿಗೂ ಇವನು ನನ್ನ ಬಳಿಯಲ್ಲಿರಲಿ. ಅನಂತರ ನೀವು ಕರೆದುಕೊಂಡು ಹೋಗಲು ನಾನು ಅಡ್ಡಿ ಪಡಿಸುವುದಿಲ್ಲ.

೨೬. ರಾಮನು ಇಂತು ಹೇಳಿದುದನ್ನು ಯಮನ ಆಳುಗಳು ಕೇಳಿ ಬಲವಾದ ಏಟುಗಳನ್ನು ತಿಂದವರಾಗಿ ಕಣ್ಣಿನಲ್ಲಿ ನೀರನ್ನು ಸುರಿಸುತ್ತಾ ಮಾತನಾಡದೆ ಯಮನ ಬಳಿಗೆ ಸುಮ್ಮನೆ ಹೊರಟುಹೋದರು.

೨೭. ರಾಮನು ಹಿಂತಿರುಗಿ ತನ್ನ ರಾಜಧಾನಿಗೆ ಹೋದನು. ಮಾರ್ಗದಲ್ಲಿ ಹೆಂಗಸರು ಆರತಿಯನ್ನು ಎತ್ತುತ್ತಿರಲು ಹಾಗೆಯೇ ಆ ಮಂತ್ರಿಯ ಮನೆಗೆ ಹೋದನು.

೨೮. ಅಲ್ಲಿ ಸುಮಂತ್ರನು ಜೀವಿಸಲು ಅವನೂ ಅವನ ಬಂಧುಗಳೂ ಸಂತೋಷದಿಂದ ಇದ್ದರು. ಅವರೆಲ್ಲರೂ ಹಾಗಿದ್ದುದನ್ನು ರಾಮನು ನೋಡಿದನು. ಆ ಸುಮಂತ್ರನು ರಾಮನನ್ನು ನೋಡಿ ನಮಸ್ಕರಿಸಿದನು.

ಪ್ರಣನಾಮ ಸುಮಂತ್ರಸ್ಸ ಪೂಜಯಾಮಾಸ ರಾಘವಂ।
ತತೋ ರಾಮೋ ಯಯೌ ಗೇಹಂ ಸರ್ವೇ ಪ್ರಮುದಿತಾನನಾಃ ॥ ೨೯ ॥
ದಿನಾನಿ ನವ ಶೇಷಾಯುರ್ಜ್ಞಾತ್ವಾ ದಾನಾದಿಕಂ ವಿಧಿಂ ।
ಚಕಾರ ಪ್ರತ್ಯಹಂ ಭಕ್ತ್ಯಾ ಸುಮಂತ್ರೋ ರಾಘವಾಜ್ಞಯಾ ॥ ೩೦ ॥
ಅಥ ತೇ ಯಮದೂತಾಶ್ಚ ಸಾಶ್ರುನೇತ್ರಾ ಯಮಾಗ್ರತಃ ।
ಉಷ್ಣೀಷಾಣಿ ಕರೈಃ ಕ್ರೋಧಾದಾಸ್ಫಾಲ್ಯ ಭುವಿ ಚಾಬ್ರುವನ್ ॥ ೩೧ ॥
ಕಥಂ ಕರೋಷ್ಯಧಿಕಾರಂ ತವಾಜ್ಞಾಕಾರಿಣಾಂ ತ್ವಿಮಾಂ ।
ದೃಷ್ಟ್ವಾವಸ್ಥಾಂ ನ ಲಜ್ಜಾ ತೇ ಜಾಯತೇ ಹೃದಯೇ ಯಮ ॥ ೩೨ ॥
ತಾಡ್ಯಾಸ್ಮಾಕಂ ರಾಘವೇಣ ಸುಮಂತ್ರೋ ಮೋಚಿತಃ ಪಥಿ ।
ದಿನಾನಿ ನವಶೇಷಾಯುಃ ಪೂರ್ತ್ಯರ್ಥಮಧುನಾ ವಯಂ ॥ ೩೩ ॥

೨೯-೩೦. ಅನಂತರ ಅವನನ್ನು ಪೂಜಿಸಿದನು. ಅನಂತರ ರಾಮನು ಮನೆಗೆಹೋದನು. ಎಲ್ಲರೂ ಸಂತೋಷದಿಂದಿದ್ದರು. ಒಂಭತ್ತು ದಿನಗಳು ಮಾತ್ರ ಆಯುಸ್ಸು ಉಳಿದಿರುವುದನ್ನು ತಿಳಿದು ಆ ಸುಮಂತ್ರನು ಅನೇಕವಾದ ದಾನಗಳನ್ನು ಭಕ್ತಿಯಿಂದ ರಾಮನು ಅಪ್ಪಣೆಮಾಡಿದ್ದಂತೆಯೇ ಮಾಡುತ್ತಿದ್ದನು.

೩೧. ಅನಂತರ ಆ ಯಮನ ದೂತರು ಯಮನ ಬಳಿಗೆ ಹೋಗಿ ಅವನೆದುರಿಗೆ ಕಣ್ಣೀರನ್ನು ಸುರಿಸುತ್ತ ತಲೆಯ ರುಮಾಲುಗಳನ್ನು ಕೈಗೆ ತೆಗೆದು ಕೊಂಡು ಅವನ್ನು ನೆಲದಮೇಲೆ ಬಡಿಯುತ್ತಾ ಯಮನನ್ನು ಕುರಿತು ಇಂತೆಂದರು.

೩೨. ಎಲೈ ಯಮನೇ! ನೀನು ಏನೆಂದು ಅಧಿಕಾರವನ್ನು ಮಾಡುತ್ತಿರುವೆ? ನಿನ್ನ ಆಜ್ಞೆಯನ್ನು ಪಾಲಿಸುತ್ತಿರುವ ನಿನ್ನ ಸೇವಕರಾದ ನಮಗೆ ಈ ರೀತಿಯಾದ ಅವಮಾನವಾಗಿರುವ ಅವಸ್ಥೆಯನ್ನು ನೋಡಿದರೂ ನಿನ್ನ ಹೃದಯದಲ್ಲಿ ಲಜ್ಜೆಯೇ ಹುಟ್ಟುವುದಿಲ್ಲವಲ್ಲ!

೩೩. ನಾವು ಸುಮಂತ್ರನನ್ನು ಕರೆದುಕೊಂಡು ಬರುತ್ತಿರಲು ರಾಮನು ದಾರಿಯಲ್ಲಿ ಬಂದು ನಮ್ಮನ್ನು ಹೊಡೆದು ಆತನನ್ನು ಬಿಡಿಸಿಬಿಟ್ಟನು. ಇನ್ನೂ ಒಂಭತ್ತುದಿವಸಗಳು ಆಯುಶ್ಶೇಷವಿತ್ತಂತೆ? ಅದೂ ಪೂರ್ತಿಯಾಗಬೇಕಾಗಿತ್ತಂತೆ?

ದೇಹತ್ಯಾಗಂ ಜಲೇ ಕುರ್ಮೋ ನ ಜೀವಿಷ್ಯಾಮ ಭೋ ಯಮ ।
ತದ್ದೂತವಚನಂ ಶ್ರುತ್ವಾ ಪ್ರಜಜ್ವಾಲ ಯಮಸ್ತದಾ ॥ ೩೪ ॥

ಪ್ರಾಹ ದೂನದ್ಯ ರಾಮಂ ಬಧ್ವಾ ದಂಡಂ ಕರೋಮ್ಯಹಂ ।
ಚೋದನೀಯಾನಿ ಸೈನ್ಯಾನಿ ಚೇಂದ್ರಂ ಯಾಚೇ ಹ್ಯಹಂ ಲಘು ॥ ೩೫ ॥

ಇತ್ಯುಕ್ತ್ವಾ ತ್ವರಿತೋ ಗತ್ವಾ ವೃತ್ತಮಿಂದ್ರಂ ನ್ಯವೇದತ್ ।
ಪುನರಿಂದ್ರಂ ಯಮಃ ಪ್ರಾಹ ಸಾಹಾಯ್ಯಂ ಕ್ರಿಯತಾಂ ಮಮ ॥ ೩೬ ॥

ತತ್ತಸ್ಯ ವಚನಂ ಶ್ರುತ್ವಾ ದೇವೇಂದ್ರೋ ಯಮಮಬ್ರವೀತ್ ।
ಕಿಂಭ್ರಾಂತೋಸಿ ಯಮಾದ್ಯ ತ್ವಂ ವಿಷ್ಣುನಾ ಯೋದ್ಧುಮಿಚ್ಛಸಿ ॥ ೩೭ ॥

ಗಚ್ಛ ತೂಷ್ಣೀಂ ಸಂಯಮಿನೀಂ ರಾಮಸ್ಯ ಕಿಂ ಕರಿಷ್ಯಸಿ ।
ತದ್ಭಿಯಾ ಹಿ ಮಯಾ ದತ್ತೌ ಮಯ್ಯೈತೌ ಸುರಪಾದಪೌ ॥ ೩೮ ॥

---

೩೪. ಎಲೈ ಯಮನೇ! ನಾವು ನೀರಿನಲ್ಲಿ ಬಿದ್ದು ಪ್ರಾಣವನ್ನು ಬಿಟ್ಟು ಬಿಡುತ್ತೇವೆ. ನಮಗೆ ಇನ್ನು ಬದುಕಿರಲು ಸಾಧ್ಯವಿಲ್ಲ. ನಮಗೆ ಅಷ್ಟು ಅವಮಾನವಾಗಿದೆ. ಎಂಬುದಾಗಿ ದೂತರು ಹೇಳಲು ಅದನ್ನು ಕೇಳಿ ಯಮನಿಗೆ ಬಹು ಕೋಪಬಂದು ಜ್ವಲಿಸಿದನು.

೩೫. ಆಗ ಅವನು ದೂತರನ್ನು ಕುರಿತು ಎಲೈ ದೂತರಿರಾ! ನಾನು ರಾಮನನ್ನು ಹಿಡಿದು ಕಟ್ಟಿತಂದು ಆವನಿಗೆ ಶಿಕ್ಷೆಯನ್ನು ವಿಧಿಸುತ್ತೇನೆ. ಸೈನ್ಯಗಳೆಲ್ಲವನ್ನೂ ಕರೆಸಿರಿ. ಆದರೆ ನನಗೆ ಬಲವು ಕೊಂಚಸಾಲದು. ಇಂದ್ರನನ್ನು ಸಹಾಯಕ್ಕೆ ಕರೆದುಕೊಂಡು ಬರುತ್ತೇನೆ. ಎಂದು ಹೇಳಿದನು.

೩೬. ಹೀಗೆಂದು ಹೇಳಿ ಯಮನು ಬೇಗನೆ ಇಂದ್ರನ ಬಳಿಗೆ ಹೋಗಿ ನಡೆದ ವಿಷಯವೆಲ್ಲವನ್ನೂ ಅನನಿಗೆ ಹೇಳಿದನು. ಅಲ್ಲದೆ ಆತನನ್ನು ಕುರಿತು ಎಲೈ ಇಂದ್ರನೇ! ನನಗೆ ಸಹಾಯವನ್ನು ಮಾಡು ಎಂದೂ ಕೇಳಿದನು.

೩೭. ದೇವೇಂದ್ರನು ಯಮನ ಈ ಮಾತನ್ನು ಕೇಳಿ ಇಂತೆಂದನು. ಎಲೈ ಯಮನೇ! ನಿನಗೇನು ಭ್ರಾಂತಿಯುಂಟಾಗಿದೆಯೇ? ವಿಷ್ಣುವಿನ ಸಂಗಡ ಯುದ್ಧಮಾಡಲು ಇಚ್ಛಿಸುತ್ತಿರುವೆಯಲ್ಲ!

೩೮. ಸುಮ್ಮನೆ ನೀನು ನಿನ್ನ ರಾಜಧಾನಿಯಾದ ಸಂಯಮನಿಗೆ ಹೋಗು. ರಾಮನನ್ನು ನೀನು ಏನುಮಾಡಬಲ್ಲೆ? ಅವನಿಗೆ ಹೆದರಿಕೊಂಡು ನಾನು ಕಲ್ಪವೃಕ್ಷವನ್ನೂ ಪಾರಿಜಾತವೃಕ್ಷವನ್ನೂ ಕೊಟ್ಟಿರುವೆನು.

ಏವಂ ತದ್ವಚನಂ ಶ್ರುತ್ವಾ ವಹ್ನಿಲೋಕಂ ಯಯೌ ಯಮಃ ।
ಅಗ್ನಿನಾ ಭಾಷಿತಸ್ತ್ವೇವಂ ನೈರುತಿಂ ವರುಣಂ ತಥಾ ॥ ೩೯ ॥

ವಾಯುಂ ಕುಬೇರಂ ವಿಶ್ವೇಶಂ ರವಿಂ ಚಂದ್ರಂ ಬುಧಂ ಗುರುಂ ।
ಶುಕ್ರಂ ಶನೈಶ್ಚರಂ ರಾಹುಂ ಕೇತುಂ ಭೂಮಿಸುತಂ ಧ್ರುವಂ ॥ ೪೦ ॥

ಪ್ರಾರ್ಥಯಾಮಾಸ ಯುದ್ಧಾಯ ಸಾಹಾಯ್ಯಂ ಕ್ರಿಯತಾಮಿತಿ ।
ಉತ್ತರಾಣೀಂದ್ರವತ್ಸರ್ವೇ ದದುರ್ಭ್ರಾಂತಂ ಯಮಂ ಹಿ ತೇ ॥೪೧ ॥

ತತೋ ಗತ್ವಾ ವಿಧಿಂ ಚಾಪಿ ಪಾತಾಲಾಂತರವಾಸಿನಃ ।
ಸಪ್ತದ್ವೀಪವಾಸಿನಶ್ಚ ಯಮಃ ಸಂಪ್ರಾರ್ಥಯನ್ನೃಪಾನ್ ॥ ೪೨ ॥

---

೩೯. ಇಂದ್ರನು ಹೀಗೆಂದುದನ್ನು ಯಮನು ಕೇಳಿ ಅವನನ್ನು ಬಿಟ್ಟು ಅಗ್ನಿಯಲೋಕಕ್ಕೆ ಹೋದನು ಆದೇ ರೀತಿಯಾಗಿ ನಡೆದ ವಿಷಯವನ್ನು ಅಗ್ನಿಗೆ ತಿಳಿಸಲು ಅವನು ತಾನು ಸಹಾಯಮಾಡಲು ಸಾಧ್ಯವಿಲ್ಲವೆಂದನು. ಅಲ್ಲಿಂದ ಮುಂದೆ ನೃಋತಿಯ ಲೋಕಕ್ಕೂ ಅಂತೆಯೇ ವರುಣನ ಲೋಕಕ್ಕೂ ಹೋದನು.

೪೦. ಅಲ್ಲಿಂದ ಮುಂದೆ ವಾಯು, ಕುಬೇರ, ಈಶಾನ, ಸೂರ್ಯ, ಚಂದ್ರ, ಬುಧ, ಗುರು, ಶುಕ್ರ, ಶನಿ, ರಾಹು, ಕೇತು, ಅಂಗಾರಕ, ಧ್ರುವ, ಇವರ ಹತ್ತಿರಕ್ಕೆಲ್ಲಾ ಹೋದನು.

೪೧. ಅವರವರೊಡನೆಯೆಲ್ಲವೂ ತಾನು ರಾಮನೊಡನೆ ಯುದ್ಧಕ್ಕೆ ಹೋಗಬೇಕೆಂದೂ ಅವರುಗಳು ತನಗೆ ಸಹಾಯಮಾಡಬೇಕೆಂದೂ ಪ್ರಾರ್ಥಿಸಿಕೊಂಡನು. ತಮ್ಮ ಬಳಿಗೆಲ್ಲಾ ಬಂದು ಬೀಳುತ್ತಿರುವ ಭ್ರಾಂತನಾದ ಯಮನಿಗೆ ಅವರೆಲ್ಲರೂ ಇಂದ್ರನು ಉತ್ತರ ಹೇಳಿದಂತೆಯೇ ಹೇಳಿಬಿಟ್ಟರು

೪೨. ಅನಂತರ ಯಮನು ಬ್ರಹ್ಮನ ಹತ್ತಿರಕ್ಕೆ ಹೋದನು. ಅವನೂ ನಿರಾಕರಿಸಲು ಅನಂತರ ಪಾತಾಳಲೋಕದವರ ಬಳಿಗೂ ಹೋದನು. ಅವರೂ ನಿರಾಕರಿಸಲು ಸಪ್ತದ್ವೀಪಗಳಲ್ಲಿ ವಾಸಿಸುತ್ತಿರುವ ಎಲ್ಲಾ ರಾಜರ ಬಳಿಗೂ ಹೋದನು. ಆ ರಾಜರೆಲ್ಲರನ್ನೂ ಕೇಳಿಕೊಂಡನು.

ತೇಪ್ಯೂಚುರ್ನ ಕರಿಷ್ಯಾಮಃ ಸ್ಸಾಹಾಯ್ಯಂ ರಾಘವಾಗ್ರತಃ ।
ತತಃ ಕ್ರೋಧಸಮಾವಿಷ್ಟಸ್ಸ್ವ ಸೈನ್ಯೇನ ಸಮನ್ವಿತಃ ॥ ೪೩ ॥
ರಾಮೇಣ ಸಂಗರಂ ಕರ್ತುಮಯೋಧ್ಯಾಂ ಸ ಯಮೋ ಯಯೌ ।
ಸ್ವಗಣೈಸ್ಸಹ ವೇಗೇನ ಮಹಾಮಹಿಷಸಂಸ್ಥಿತಃ ॥ ೪೪ ॥
ಅಯೋಧ್ಯಾಂ ವೇಷ್ಟಯಾಮಾಸ ನವದ್ವಾರವಿರಾಜಿತಾಂ ।
ನವಪ್ರಾಕಾರ ಸಹಿತಾಂ ಶತಘ್ನೀಯಂತ್ರಸಂಯುತಾಂ ॥ ೪೫ ॥
ನವಭಿಃ ಪರಿಖಾಭಿಶ್ಚ ಸಮಂತಾತ್ಪರಿವೇಷ್ಟಿತಾಂ ।
ದೃಢರತ್ನಕಪಾಟಾಢ್ಯಾಂ ರತ್ನಭಿತ್ತಿವಿರಾಜಿತಾಂ ॥ ೪೬ ॥
ಸರಯೂವೇಷ್ಟಿತಾಂ ರಮ್ಯಾಂ ರವಿಕೋಟಿಸಮಪ್ರಭಾಂ ।
ನಾನಾಪ್ರಾಸಾದವೃಕ್ಷೈಶ್ಚ ಪತಾಕಾಧ್ವಜಶೋಭಿತಾಂ ॥ ೪೭ ॥

೪೩–೪೪. ಅವರೆಲ್ಲರೂ ಕೂಡ ನಾವು ರಾಮನಮೇಲೆ ಯುದ್ಧಮಾಡಲು ಸಹಾಯವನ್ನು ಮಾಡುವುದಿಲ್ಲವೆಂದು ಹೇಳಿದರು. ಆಗ ಆತನಿಗೆ ಕೋಪಬಂದು ತನ್ನ ಸೈನ್ಯವನ್ನೇ ಕರೆದುಕೊಂಡು ರಾಮನೊಡನೆ ಯುದ್ಧಮಾಡಲು ಅಯೋಧ್ಯೆಗೆ ಬಂದನು. ತಾನೂ ಆ ದೊಡ್ಡ ಕೋಣನಮೇಲೆ ಕುಳಿತಿದ್ದನು. ಯಮಗಣ ಗಳೆಲ್ಲವೂ ಅವನನ್ನು ಸುತ್ತುವರಿದಿದ್ದುವು.

೪೫. ಒಂಭತ್ತುಬಾಗಿಲುಗಳಿಂದ ಕೂಡಿದ ಆ ಅಯೋಧ್ಯೆಯನ್ನು ಮುತ್ತಿಗೆ ಹಾಕಿನಿಂತನು. ಆ ಅಯೋಧ್ಯೆಯಾದರೋ ಒಂಭತ್ತು ಕೋಟೆಗಳಿಂದ ಕೂಡಿ ಕೊಂಡು ಅನೇಕ ಜನರನ್ನು ಒಂದೇಬಾರಿ ಕೊಲ್ಲುವಂತಹ ಫಿರಂಗಿಗಳಿಂದ ಕೂಡಿರುವುದು.

೪೬. ಸುತ್ತಲೂ ಒಂಭತ್ತು ಕಂದಕಗಳು ಇರುವುವು. ಹೆಬ್ಬಾಗಿಲುಗಳೂ ಇರುವುವು. ಗಟ್ಟಿಯಾದ ರತ್ನದ ಬಾಗಿಲುಗಳಿಂದ ಕೂಡಿದ ರತ್ನದ ಗೋಡೆಗಳು ಸುತ್ತಲೂ ಇರುವುವು.

೪೭. ಸುತ್ತಲೂ ಸರಯೂನದಿಯು ಬಳಸಿಕೊಂಡು ಹರಿಯುತ್ತಿರುವುದು. ಅದು ಸುಂದರವಾಗಿ ಕೋಟಿಸೂರ್ಯರಂತೆ ಪ್ರಕಾಶಮಾನವಾಗಿದೆ. ಮಹಡಿಯ ಮನೆಗಳು ಬಹುವಾಗಿ ಇರುವುವು. ಪತಾಕೆಗಳಿಂದಲೂ ಧ್ವಜಗಳಿಂದಲೂ ಶೋಭಿಸುತ್ತಿರುವುದು.

ಯಮೇನ ವೇಷ್ಟಿತಾಂ ದೃಷ್ಟ್ವಾ ಪುರೀಂ ರಾಮೋ ಮಹಾಮನಾಃ ।
ಲವಮಾಜ್ಞಾಪಯಾಮಾಸ ಗಚ್ಛ ಯೋದ್ಧುಂ ಯಮೇನ ಹಿ ॥ ೪೮ ॥

ಲವಸ್ತಥಾ ರಥಾರೂಢೋ ದುಂಧುಭೀನಾಂ ಮಹಾಸ್ವನೈಃ ।
ಅಯೋಧ್ಯಾಯಾ ಬಹಿರ್ಗತ್ವಾ ಚಕಾರ ಸಂಗರಂ ಮಹತ್ ॥ ೪೯ ॥

ತದಾ ಲವಶರಾಘಾತಭಿನ್ನದೇಹಾ ಯಮಾನುಗಾಃ ।
ನಿಪೇತುಃ ಕ್ಷಣಮಾತ್ರೇಣ ಕೋಟಿಶೋ ರಣಭೂಮಿಷು ॥ ೫೦ ॥

ತಾನ್ ಸರ್ವಾನ್ನಿಹತಾನ್ ದೃಷ್ಟ್ವಾ ಯಮೋ ಮಹಿಷಸಂಸ್ಥಿತಃ ।
ಚಕಾರ ತುಮುಲಂ ಯುದ್ಧಂ ಲವೇನ ಕ್ರೋಧಭಾಸುರಃ ॥ ೫೧ ॥

ಸ್ವಬಾಣೌಘೈರ್ಯಮಶ್ಶೀಘ್ರಂ ರಥಂ ಸೂತಂ ಬಲಂ ಧನುಃ ।
ಕವಚಂ ಕುಂಡಲಂ ಚಾಪಿ ಚಿಚ್ಛೇದ ಸ ಲವಸ್ಯ ಚ ॥ ೫೨ ॥

---

೪೮ ಆಗ ಮಹಾನುಭಾವನಾದ ರಾಮನು ತನ್ನ ಅಯೋಧ್ಯೆಯನ್ನು ಯಮನು ಮುತ್ತಿಗೆ ಹಾಕಿರುವುದನ್ನು ನೋಡಿದನು. ಲವನನ್ನು ಕರೆದು ನೀನು ಯಮನೊಡನೆ ಯುದ್ಧಮಾಡು. ಹೋಗು. ಎಂದು ಆಜ್ಞಾಪಿಸಿದನು.

೪೯. ಅವನ ಅಪ್ಪಣೆಯಂತೆ ಲವನು ರಥದಲ್ಲಿ ಕುಳಿತು ದುಂದುಭಿಗಳನ್ನು ಧ್ವನಿಮಾಡಿಸುತ್ತ ಅಯೋಧ್ಯೆಯಿಂದ ಹೊರಗೆ ಹೋಗಿ ದೊಡ್ಡದಾಗಿ ಯುದ್ಧವನ್ನು ಮಾಡಿದನು

೫೦–೫೧. ಆ ಲವನ ಬಾಣದ ಪೆಟ್ಟನಿಂದ ಅನೇಕ ಜನ ಯಮನ ಆಳುಗಳು ಏಟನ್ನು ತಿಂದು ಕೋಟಿ ಸಂಖ್ಯೆಯಲ್ಲಿ ನೆಲದಮೇಲೆ ಬಿದ್ದರು. ಆ ಆಳುಗಳೆಲ್ಲರೂ ಬಿದ್ದು ಸಾಯಲು ಯಮನೇ ಆ ದೊಡ್ಡಕೋಣನಮೇಲೆ ಕುಳಿತು ಕೋಪಗೊಂಡವನಾಗಿ ಹೊರಟು ಲವನೊಡನೆ ಯುದ್ಧವನ್ನು ಮಾಡಿದನು. ಆಯುದ್ಧವು ಬಹು ಘೋರವಾಗಿ ತುಮುಲಯುದ್ಧವಾಗಿ ಪರಿಣಮಿಸಿತು.

೫೨. ಆಗ ಯಮನು ಕೋಪಗೊಂಡು ಬಾಣಗಳನ್ನು ಬಿಟ್ಟು ಲವನ ರಥವನ್ನೂ ಸೂತನನ್ನೂ ಧನುಸ್ಸನ್ನೂ ಕವಚವನ್ನೂ ಕಿರೀಟವನ್ನೂ ಕ್ಷಣಕಾಲದಲ್ಲಿ ಕತ್ತರಿಸಿದನು.

ತದಾ ಲವಶ್ಚಾತಿಕ್ರುದ್ಧಃ ಸ್ಯಂದನೇನ್ಯೇ ಸ್ಥಿತಃ ಪುನಃ ।
ಚಕಾರ ಸಂಗರಂ ಘೋರಂ ಯಮೇನಾತಿಭಯಂಕರಂ ॥ ೫೩ ॥

ತದಾ ಸುರಾ ವಿಮಾನಸ್ಥಾ ದದೃಶುರ್ಯುದ್ಧಕೌತುಕಂ ।
ತತೋ ಲವಸ್ಸ್ವಬಾಣೌಘೈಃ ಮಹಿಷಂ ಮೂರ್ಛಿತಂ ಭುವಿ ॥ ೫೪ ॥

ಕೃತ್ವಾ ತಂ ತಾಡಯಾಮಾಸ ಸಿತೈರ್ಬಾಣೈರ್ಯಮಂ ಜವಾತ್ ।
ತತೋ ಯಮೋಽಪ್ಯತಿಕ್ರುದ್ಧೋ ಯಮದಂಡಂ ಮುಮೋಚ ತಂ ॥ ೫೫ ॥

ತಂ ದಂಡಂ ನೋಚಿತಂ ದೃಷ್ಟ್ವಾ ಬ್ರಹ್ಮಾಸ್ತ್ರಂ ಸಂದಧೇ ಲವಃ ।
ಬ್ರಹ್ಮಾಸ್ತ್ರಮಾಗತಂ ದೃಷ್ಟ್ವಾ ಯಮದಂಡೋ ನ್ಯವರ್ತತ ॥ ೫೬ ॥

ತದಾ ಯಮೋತಿವಿಕಲಃ ಪಲಾಯನಪರೋಽಭವತ್ ।
ಬ್ರಹ್ಮಾಸ್ತ್ರಂ ತಸ್ಯ ಪೃಷ್ಠೇ ತದ್ಯಯೌ ಕಾಲಾನಲಪ್ರಭಂ ॥ ೫೭ ॥

---

೫೩. ಆಗ ಲವನಿಗೆ ಬಹುವಾಗಿ ಕೋಪವು ಬಂದಿತು. ಒಡನೆಯೇ ಮತ್ತೊಂದು ರಥವನ್ನು ತರಿಸಿ ಅದರಲ್ಲಿ ಕುಳಿತನು. ಮತ್ತೆ ಎದುರುಗೊಂಡು ಆ ಯಮನೊಡನೆ ಬಹು ಭಯಂಕರವಾದ ಯುದ್ಧವನ್ನು ಮಾಡಿದನು.

೫೪. ಆಗ ದೇವತೆಗಳೆಲ್ಲರೂ ವಿಮಾನದಲ್ಲಿ ಕುಳಿತು ಈ ಭಯಂಕರವಾದ ಯುದ್ಧವನ್ನು ನೋಡುತ್ತಲಿದ್ದರು. ಲವನು ತನ್ನ ಬಾಣಗಳನ್ನು ಬಿಟ್ಟು ಯಮನ ವಾಹನವಾದ ಕೋಣನು ಮೂರ್ಛೆಗೊಂಡು ನೆಲದಮೇಲೆ ಬೀಳುವಂತೆ ಹೊಡೆದನು.

೫೫. ಅನಂತರ ಹರಿತವಾದ ಬಾಣಗಳನ್ನು ಬಿಟ್ಟು ಆ ಯಮನನ್ನು ಹೊಡೆದನು. ಆಗ ಯಮನಿಗೆ ಕೋಪಬರಲು ಅವನು ಆ ಲವನಮೇಲೆ ಯಮ ದಂಡವನ್ನೇ ಬಿಟ್ಟು ಬಿಟ್ಟನು.

೫೬. ಈ ಯಮನು ಯಮದಂಡವನ್ನು ಬಿಟ್ಟುದನ್ನು ಲವನು ನೋಡಿ ತಾನು ಬ್ರಹ್ಮಾಸ್ತ್ರವನ್ನು ಬಿಟ್ಟನು. ಬ್ರಹ್ಮಾಸ್ತ್ರವು ಬರುತ್ತಿರುವುದನ್ನು ನೋಡಿ ಆ ಯಮದಂಡವು ಹಿಂದಿರುಗಿ ಹೋಯಿತು.

೫೭. ಆಗ ಯಮನಿಗೆ ಬಹು ಹೆದರಿಕೆಯುಂಟಾಗಿ ಓಡಿಹೋಗಲು ಮೊದಲು ಮಾಡಿದನು. ಬಹು ಕ್ರೂರವಾದ ಬ್ರಹ್ಮಾಸ್ತ್ರವೂ ಕೂಡ ಬಿಡದೆ ಅವನ ಹಿಂದೆಯೇ ಬೆನ್ನಟ್ಟಿಕೊಂಡು ಹೋಯಿತು.

ತದಾ ದೃಷ್ಟ್ವಾ ರವಿಶ್ಶೀಘ್ರಂ ಸ್ವೀಯಾಂ ಭಿನ್ನಾಂ ಪ್ರಕಲ್ಪ್ಯ ಚ ।
ರಥೇ ಮೂರ್ತಿಂ ಯಯೌ ವೇಗಾತ್ ಪ್ರಾರ್ಥಯಾಮಾಸ ತಂ ಲವಂ ॥

ರೇ ರೇ ಬಾಲ ಯಮಂ ತ್ರಾಹಿ ಚೋಪಸಂಹಾರಯಾದ್ಯ ಹಿ ।
ತ್ವಯೋಪಸೃಷ್ಟಂ ಬ್ರಹ್ಮಾಸ್ತ್ರಂ ತ್ವಮೇವಾಸ್ತ್ರವಿದಾಂ ವರಃ ॥ ೫೯ ॥

ತ್ವಂ ಮದಂಶಸಮುದ್ಭೂತಸ್ತ್ವಯಂ ಮೇ ತನಯೋ ಯಮಃ ।
ಕಥಂ ಸ್ವಪೂರ್ವಜಂ ತ್ವದ್ಯ ತ್ವಂ ಯಮಂ ಹಂತುಮಿಚ್ಛಸಿ ॥ ೬೦ ॥

ಚೇದೇಕೋ ಮೂರ್ಖತಾಂ ಯಾತಃ ಸರ್ವೇ ಮೂರ್ಖಾ ನ ಭವಂತಿನ ।
ಶತ್ರುಂ ರಣಾತ್ಪರಿಭ್ರಷ್ಟಂ ವೀರಾಸ್ತಂ ರಕ್ಷಯಂತಿ ಹಿ ॥ ೬೧ ॥

---

೫೮. ಈ ಬ್ರಹ್ಮಾಸ್ತ್ರವು ಕಾಲಾಗ್ನಿಗೆ ಸಮವಾಗಿ ಯಮನನ್ನು ಓಡಿಸಿಕೊಂಡು ಬರುತ್ತಿರುವುದನ್ನು ನೋಡಿ ಸೂರ್ಯನು ತನ್ನ ಮೂರ್ತಿಯನ್ನು ಎರಡು ರೀತಿಯಾಗಿ ಮಾಡಿ ಒಂದನ್ನು ತನ್ನ ರಥದಲ್ಲಿ ನಿಲ್ಲಿಸಿ ಮತ್ತೊಂದು ಮೂರ್ತಿಯಿಂದ ಬೇರೆ ರಥವನ್ನು ಹತ್ತಿ ಬೇಗನೆ ಲವನ ಬಳಿಗೆ ಬಂದು ಇಂತೆಂದು ಕೇಳಿಕೊಂಡನು.

೫೯. ಎಲೈ ಬಾಲಕನಾದ ಲವನೇ! ಈ ಯಮನನ್ನು ರಕ್ಷಿಸು. ನಿನ್ನ ಬ್ರಹ್ಮಾಸ್ತ್ರವನ್ನು ಉಪಸಂಹರಿಸು. ನೀನು ಅಸ್ತ್ರವನ್ನು ಬಲ್ಲವರಲ್ಲಿ ಬಹು ಶ್ರೇಷ್ಠನಾಗಿದ್ದೀಯೆ.

೬೦. ನೀನು ನನ್ನ ವಂಶದಲ್ಲಿ ಹುಟ್ಟಿದವನು. ಈ ಯಮನು ನನಗೆ ಮಗನಾಗಬೇಕು. ಈಗ ನೀನು ಅಣ್ಣನಾದ ಯಮನನ್ನೇ ಕೊಲ್ಲಲು ಅಪೇಕ್ಷಿಸುತ್ತಿರುವೆಯಲ್ಲ!

೬೧. ಯಾವನೋ ಒಬ್ಬನು ಮೂರ್ಖನಾದರೆ ಎಲ್ಲರೂ ಮೂರ್ಖರಾಗಬೇಕಾಗಿಲ್ಲ. ಯುದ್ಧದಿಂದ ಹಿಂದಿರುಗಿ ಓಡುತ್ತಿರುವ ಶತ್ರುವನ್ನು ವೀರರು ರಕ್ಷಿಸುತ್ತಾರೆಯಲ್ಲವೆ!

ಇತ್ಯಾದಿನಾನಾವಚನೈಃ ಪ್ರಾರ್ಥಿತೋ ರವಿಣಾ ಯದಾ ।
ತದಾ ಲವೋಽಪಿ ಸಂಹಾರಂ ಚಕಾರಾಸ್ತ್ರಸ್ಯ ಬ್ರಹ್ಮಣಃ ॥ ೬೨ ॥

ತತೋ ಲವಂ ಪುರಸ್ಕೃತ್ಯ ಯಮೇನ ತಪನಃ ಪುರೀಂ ।
ವಿವೇಶ ರಘುನಾಥಸ್ಯ ದರ್ಶನಾರ್ಥಂ ಮುದಾನ್ವಿತಃ ॥ ೬೩ ॥

ತದಾ ಖೇ ದೇವವಾದ್ಯಾನಿ ನೇದುಃ ಕುಸುಮವೃಷ್ಟಿಭಿಃ ।
ಗೋಪುರಾಟ್ಟಾಲಸಂಸ್ಥಾಶ್ಚ ದದೃಶುಸ್ತಂ ಮುಹುರ್ಮುಹುಃ ॥ ೬೪ ॥

ನೇದುಶ್ಚಾನಾಸುವಾದ್ಯಾನಿ ನನೃತುರ್ವಾರಯೋಷಿತಃ ।
ತುಷ್ಟುವುರ್ಮಾಗಧಾದ್ಯಾಶ್ಚ ಜಗುರ್ಗಂಧರ್ವಕಿನ್ನರಾಃ ॥ ೬೫ ॥

ಪೌರನಾರ್ಯೋ ಲವಂ ಮಾರ್ಗೇ ವವರ್ಷುಃ ಪುಷ್ಪವೃಷ್ಟಿಭಿಃ ।
ಗೋಪುರಾಟ್ಟಾಲಸಂಸ್ಥಾಶ್ಚ ದದೃಶುಸ್ತಂ ಮುಹುರ್ಮುಹುಃ ॥ ೬೬ ॥

---

೬೨. ಇವೇ ಮೊದಲಾದ ಮಾತುಗಳಿಂದ ಸೂರ್ಯನು ಲವನನ್ನು ಪ್ರಾರ್ಥಿಸಿಕೊಳ್ಳಲು ಲವನು ಅವನ ಮಾತಿಗೆ ಗೌರವವನ್ನು ಕೊಟ್ಟು ಆ ಬ್ರಹ್ಮಾಸ್ತ್ರವನ್ನು ಉಪಸಂಹರಿಸಿದನು.

೬೩–೬೪. ಆಗ ಲವನನ್ನು ಮುಂದುಮಾಡಿಕೊಂಡು ಯಮನನ್ನೂ ಜೊತೆಯಲ್ಲಿಯೇ ಕರೆದುಕೊಂಡು ಸೂರ್ಯನು ರಾಮನ ದರ್ಶನವನ್ನು ಮಾಡಲು ಅಪೇಕ್ಷಿಸಿ ಅಯೋಧ್ಯೆಗೆ ಹೋದನು. ಆಗ ಅಂತರಿಕ್ಷದಲ್ಲಿ ದುಂದುಭಿಗಳು ಮೊಳಗಿದುವು. ದೇವತೆಗಳು ಲವನಮೇಲೆ ಹೂಮಳೆಯನ್ನು ಸುರಿಸಿದರು. ಅಪ್ಸರಸ್ತ್ರೀಯರು ಕುಣಿದರು.

೬೫. ಮನೆಯ ಮಹಡಿಯಮೇಲೆ ನಿಂತು ಹೆಂಗಸರೆಲ್ಲರೂ ಆ ಲವನ ಮೇಲೆ ದಾರಿಯುದ್ದಕ್ಕೂ ಹೂಮಳೆಯನ್ನು ಕರೆಯುತ್ತಿದ್ದರು. ಅಲ್ಲದೆ ಇನ್ನೂ ಅನೇಕರು ಮಹಡಿಯಮೇಲೆ ನಿಂತು ಆ ಲವನನ್ನು ನೋಡುತ್ತಿದ್ದರು.

೬೬. ನಾನಾ ಬಗೆಯಾದ ವಾದ್ಯಗಳು ಮೊಳಗುತ್ತಿದ್ದುವು. ವಾರಸ್ತ್ರೀಯರು ಕುಣಿಯುತ್ತಿದ್ದರು. ಹೊಗಳುಭಟರು ಹೋಗಳುತ್ತಿದ್ದರು. ಗಂಧರ್ವರೂ ಕಿನ್ನರರೂ ಹಾಡುತ್ತಿದ್ದರು.

ಏವಂ ನಾನಾಸಮುತ್ಸಾಹೈಃ ಸ್ತ್ರೀಭಿರ್ನೀರಾಜಿತಃ ಪಥಿ ।
ಯಯೌ ಸ ವಿಜಯೀ ಬಾಲಃ ಪ್ರಣನಾಮ ರಘೂತ್ತಮಂ ॥ ೬೭ ॥

ರವಿಮಾಗತಮಾಜ್ಞಾಯ ಪ್ರತ್ಯುದ್ಗಮ್ಯ ರಘೂತ್ತಮಃ ।
ನತ್ವಾ ರವಿಂ ಕರೇ ಧೃತ್ವಾ ಸಭಾಯಾಂ ಸಂವಿವೇಶ ಸಃ ॥ ೬೮ ॥

ತತಸ್ಸಿಂಹಾಸನೇ ಭಾನುಂ ನ್ಯವೇಶ್ಯ ಸ್ವೀಯಪೂರ್ವಜಂ ।
ಪೂಜಯಾಮಾಸ ಶ್ರೀರಾಮಷ್ಷೋಡಶೈರುಪಚಾರಕೈಃ ॥ ೬೯ ॥

ತದಾಬ್ರವೀದ್ರವಿಂ ರಾಮಸ್ಸಭಾಯಾಂ ಪುರತಸ್ಸ್ಥಿತಃ ।
ಪೂರ್ವಜಸ್ತ್ವಂ ಕ್ಷಮಸ್ವಾದ್ಯ ಯದ್ಯನೇನಾಪರಾಧಿತಂ ॥ ೭೦ ॥

ತದ್ರಾಮವಚನಂ ಶ್ರುತ್ವಾ ರಾಮಂ ಪ್ರಾಹ ರವಿಸ್ತದಾ ।
ತ್ವನ್ನಾಭಿಕಮಲಾದ್ಬ್ರಹ್ಮಾ ಸಮುದ್ಭೂತೋ ರಘೂತ್ತಮ ॥ ೭೧ ॥

---

೬೭ ಹೆಂಗಸರೆಲ್ಲರೂ ದಾರಿಯುದ್ಧಕ್ಕೂ ಆ ಲವನಿಗೆ ಆರತಿಯನ್ನು ಎತ್ತುತ್ತಿದ್ದರು. ಈ ರೀತಿಯಾಗಿ ವಿಜಯವನ್ನು ಹೊಂದಿದ ಲವನು ರಾಮನ ಬಳಿಗೆ ಹೋಗಿ ಅವನಿಗೆ ನಮಸ್ಕರಿಸಿದನು.

೬೮. ಸೂರ್ಯನು ಬಂದುದನ್ನು ತಿಳಿದು ರಾಮನು ಅವನನ್ನು ಎದುರುಗೊಂಡನು. ಮತ್ತು ನಮಸ್ಕರಿಸಿ ಹಸ್ತಲಾಘವವನ್ನು ಕೊಟ್ಟು ಸಭೆಗೆ ಕರೆದುಕೊಂಡು ಹೋದನು.

೬೯. ಆಗ ರಾಮನು ತನ್ನ ಕುಲಪುರುಷನಾದ ಸೂರ್ಯನನ್ನು ಸಿಂಹಾಸನದಲ್ಲಿ ಕೂರಿಸಿದನು. ಅನಂತರ ಷೋಡಶೋಪಚಾರಗಳಿಂದ ಅವನನ್ನು ಪೂಜಿಸಿದನು.

೭೦. ಅನಂತರ ರಾಮನು ಸೂರ್ಯನ ಎದುರಿಗೆ ನಿಂತುಕೊಂಡು ಎಲೈ ರವಿಯೇ! ನೀನು ನಮಗೆ ಕುಲಪುರುಷನು. ಬಾಲಕನಾದ ಲವನು ಮಾಡಿದ ಅಪರಾಧವನ್ನು ಕ್ಷಮಿಸು ಎಂದು ಕೇಳಿಕೊಂಡನು.

೭೧–೭೩. ರಾಮನು ಇಂತೆಂದುದನ್ನು ಕೇಳಿ ರವಿಯು ಇಂತೆಂದನು. ಎಲೈ ರಘೂತ್ತಮನೇ! ನಿನ್ನ ಹೊಕ್ಕುಳಿನಲ್ಲಿ ಹುಟ್ಟಿದ ಕಮಲದಿಂದ ಆ ಸೃಷ್ಟಿ ಕರ್ತನಾದ ಬ್ರಹ್ಮನು ಹುಟ್ಟಿರುವನು. ಆ ಬ್ರಹ್ಮನಿಂದ ಮರೀಚಿಯಾದನು.

ಮರೀಚ್ಯಾದ್ಯಾ ವಿಧೇಃ ಪುತ್ರಾ ಮರೀಚೇಃ ಕಶ್ಯಪಃ ಸ್ಮೃತಃ ।
ಕಶ್ಯಪಾಚ್ಚ ಮಮೋತ್ಪತ್ತಿಃ ಪೌತ್ರಪೌತ್ರಸ್ತ್ವಹಂ ತವ ॥ ೭೨ ॥

ಕ್ಷಮಸ್ವ ಮಮ ಪುತ್ರೇಣ ಯದ್ಯಮೇನಾಪರಾಧಿತಂ ।
ಏವಂ ಸಂಪ್ರಾರ್ಥ್ಯ ಶ್ರೀರಾಮಂ ಚಾಸನೇ ಸ ನ್ಯವೇಶಯತ್ ॥ ೭೩ ॥

ಯಮೇನ ಕಾರಯಾಮಾಸ ರಘುನಾಥಾಯ ವಂದನಂ ।
ತದಾ ಸಮಾಯಯುರ್ದೇವಾ ನೇಮುಸ್ಸರ್ವೇ ರಘೂತ್ತಮಂ ॥ ೭೪ ॥

ರಾಮೋಽಪಿ ಸಕಲಾನ್ ದೇವಾನ್ ಪೂಜಯಾಮಾಸ ಸಾದರಂ ।
ತತೋ ರಾಮಾಜ್ಞಯಾ ಚೇಂದ್ರಃ ಸುಧಾ ವೃಷ್ಟ್ಯಾ ರಣೇ ಮೃತಾನ್ ॥

ಶೀಘ್ರಮುತ್ಥಾಪಯಾಮಾಸ ಸರ್ವಾನ್ ವೀರಾನ್ ಸವಾಹನೈಃ ।
ತತೋ ರಾಮೋ ಯಮಂ ಪ್ರಾಹ ಯಾವದ್ರಾಜ್ಯಂ ಕರೋಮ್ಯಹಂ ॥

ಮರೀಚಿಯಿಂದ ಕಶ್ಯಪನು ಹುಟ್ಟಿದನು. ಆ ಕಶ್ಯಪನಿಂದ ನಾನು ಉತ್ಪನ್ನನಾದೆನು. ನಾನು ನಿನಗೆ ಪೌತ್ರನ ಪೌತ್ರನಾದೆನು. (ಮೊಮ್ಮಗನಿಗೆ ಮೊಮ್ಮಗನು)

೭೩-೭೪. ನನ್ನ ಮಗನಾದ ಯಮನು ಮಾಡಿದ ಅಪರಾಧವನ್ನು ಕ್ಷಮಿಸು ಎಂಬದಾಗಿ ರಾಮನನ್ನು ಪ್ರಾರ್ಥಿಸಿಕೊಂಡು ಆಸನದಲ್ಲಿ ಕೂರಿಸಿದನು. ಆಗ ಯಮನನ್ನು ಕರೆದು ಶ್ರೀರಾಮನಿಗೆ ನಮಸ್ಕರಿಸುವಂತೆ ಹೇಳಿ ಅವನಿಂದ ನಮಸ್ಕಾರವನ್ನು ಮಾಡಿಸಿದನು ಆಗ ದೇವತೆಗಳೆಲ್ಲರೂ ಅಲ್ಲಿಗೆ ಬಂದರು. ಮತ್ತು ಆ ರಾಮನಿಗೆ ನಮಸ್ಕರಿಸಿದರು.

೭೫. ರಾಮನು ದೇವತೆಗಳೆಲ್ಲರನ್ನೂ ಆದರದಿಂದ ಪೂಜಿಸಿದನು. ಆಗ ರಾಮನ ಅಪ್ಪಣೆಯ ಮೇರೆಗೆ ಇಂದ್ರನು ಅಮೃತದ ಮಳೆಯನ್ನು ಸುರಿಸಿ ಯುದ್ಧದಲ್ಲಿ ಸತ್ತಿರುವವರನ್ನು ಬೇಗನೆ ಜೀವಿಸುವಂತೆ ಮಾಡಿದನು.

೭೬-೭೭. ಆ ವೀರರೆಲ್ಲರೂ ಜೀವಿಸಿದುದಲ್ಲದೆ ಅವರ ವಾಹನಗಳೂ ಜೀವಿಸಿದುವು. ಆಗ ಶ್ರೀರಾಮನು ಯಮನನ್ನು ಕುರಿತು ಎಲೈ ಯಮನೇ ! ನಾನು ರಾಜ್ಯಭಾರಮಾಡುತ್ತಿರುವವರೆಗೂ ನನ್ನ ರಾಜ್ಯದಲ್ಲಿ ಆಯುಸ್ಸು

ತಾವತ್ತ್ವಯಾ ತು ಪೂರ್ಣಾಯುರ್ನರೋ ನೇಯೋ ನ ಚೇತರಃ ।
ತದ್ರಾಮವಚನಂ ಶ್ರುತ್ವಾ ತಥೇತ್ಯಾಹ ಯಮಸ್ತದಾ ॥ ೭೭ ॥

ತತಃ ಪ್ರಾಪ್ತೇ ಸುದಶಮೇ ದಿನೇ ಸ್ತ್ರೀಭಿಸ್ಸಿಗಾಹ್ಯ ಸಃ ।
ಸುಮಂತ್ರೋ ರಾಘವಂ ನತ್ವಾ ತದಗ್ರೇ ಜೀವಿತಂ ಜಹೌ ॥ ೭೮ ॥

ತಸ್ಯ ತಾ ದಯಿತಾಶ್ಚಾಪಿ ಜೀವಿತಾನಿ ತದಾ ಜಹುಃ ।
ತತಸ್ಸ ದಿವ್ಯದೇಹಾಭಿಃ ಸ್ವಸ್ತ್ರೀಭಿರ್ದಿವ್ಯದೇಹಧೃತ್ ॥ ೭೯ ॥

ಸುಮಂತ್ರಃ ಪೂಜಿತಸ್ಸರ್ವೈರ್ವಿಮಾನೇ ಸಂಸ್ಥಿತೋ ಬಭೌ ।
ರಾಮಾಗ್ರೇ ಮರಣಾದೇವ ಸುರೈಸ್ಸರ್ವತ್ರ ವೇಷ್ಟಿತಃ ॥ ೮೦ ॥

ತತಃ ಪೃಷ್ಟ್ವಾ ರವೀ ರಾಮಂ ಯಮೇನ ಸ್ವಸ್ಥಲಂ ಯಯೌ ।
ಯಯೌ ಸುಮಂತ್ರಃ ಸ್ವಸ್ತ್ರೀಭಿರ್ವೈಕುಂಠಂ ನಿರ್ಜರಾ ದಿವಂ ॥ ೮೧ ॥

ಪೂರ್ತಿಯಾಗಿ ತುಂಬಿದ ಮನುಷ್ಯನನ್ನು ನೀನು ಕರೆದುಕೊಂಡು ಹೋಗಬೇಕೇ ಹೊರತು ಮಿಕ್ಕವರನ್ನು ಕರೆದುಕೊಂಡು ಹೋಗಬೇಡ. ಎಂಬದಾಗಿ ಹೇಳಲು ಯಮನು ಹಾಗಯೇ ಆಗಲೆಂದು ಹೇಳಿದನು.

೭೮. ಅನಂತರ ಹತ್ತನೆಯ ದಿನವು ಪ್ರಾಪ್ತವಾಗಲು ಸುಮಂತ್ರನು ಹೆಂಡತಿಯರೊಡನೆ ಸ್ನಾನವನ್ನು ಮಾಡಿ ಶ್ರೀರಾಮನಿಗೆ ನಮಸ್ಕರಿಸಿ ಅವನ ಮುಂದೆ ಪ್ರಾಣವನ್ನು ಬಿಟ್ಟನು.

೭೯. ಆಗಲೇ ಅವನ ಹೆಂಡತಿಯರೂ ತಮ್ಮ ತಮ್ಮ ಪ್ರಾಣಗಳನ್ನು ಬಿಟ್ಟು ಬಿಟ್ಟರು. ಆ ಕೂಡಲೇ ಸುಮಂತ್ರನು ದಿವ್ಯದೇಹವನ್ನು ಧರಿಸಿದನು. ಆತನ ಹೆಂಡತಿಯರೂ ದಿವ್ಯದೇಹವನ್ನು ಧರಿಸಿದರು.

೮೦. ದೇವತಾಸ್ತ್ರೀಯರಿಂದ ಆ ಸುಮಂತ್ರನೂ ಅವನ ಹೆಂಡತಿಯರೂ ಪೂಜಿಸಲ್ಪಡುತ್ತ ವಿಮಾನದಲ್ಲಿ ಕುಳಿತು ಪ್ರಕಾಶಿಸಿದರು. ಈತನು ರಾಮನ ಎದುರಿಗೆ ಮೃತನಾದುದರಿಂದ ಎಲ್ಲಾ ದೇವತೆಗಳೂ ಅವನ ಸುತ್ತಲೂ ಬಂದು ಸೇರಿದರು.

೮೧. ಅನಂತರ ರವಿಯು ರಾಮನ ಅಪ್ಪಣೆಯನ್ನು ಪಡೆದು ಯಮನನ್ನೂ ಕರೆದುಕೊಂಡು ತನ್ನ ಸ್ಥಳಕ್ಕೆ ಹೊರಟುಹೋದನು. ಸುಮಂತ್ರನು ತನ್ನ ಹೆಂಡತಿಯರೊಡನೆ ವಿಮಾನದಲ್ಲಿ ಕುಳಿತು ವೈಕುಂಠಕ್ಕೆ ಹೋದನು. ದೇವತೆಗಳೂ ಸ್ವರ್ಗಕ್ಕೆ ಹೋದರು.

ರಾಮಸ್ಸುಮಂತ್ರಪುತ್ರೇಣ ತತ್ಕ್ರಿಯಾದಿ ಸುಮಂತುನಾ ।
ಕಾರಯಿತ್ವಾ ಯಥಾಶಾಸ್ತ್ರಂ ತತ್ಪದೇ ತಂ ನ್ಯವೇಶಯತ್ ॥ ೮೨ ॥

ತತೋ ರಾಮೋ ಲಕ್ಷ್ಮಣೇನ ಪೃಥಿವ್ಯಾಂ ಘೋಷಯನ್ಮುಹುಃ ।
ಗಜನ್ಯಸ್ತಾಂ ದುಂದುಭಿಂ ತಾಂ ಪತಾಕಾಧ್ವಜಶೋಭಿತಾಂ ॥ ೮೩ ॥

ತಥೇತಿ ಲಕ್ಷ್ಮಣಶ್ಚಾಪಿ ದೂತಾನಾಜ್ಞಾಪಯತ್ತದಾ ।
ದೂತಾಸ್ತೇಥ ಗಜಾರೂಢಾಸ್ಸಪ್ತದ್ವೀಪಾಂತರೇಷು ಹಿ ॥ ೮೪ ॥

ರಾಮಾಜ್ಞಾಂ ಶ್ರಾವಯಾಮಾಸುರ್ಜನಾನ್ ದುಂಧುಭಿನಿಸ್ವನೈಃ ।
ಅಪೂರ್ಣಾಯುರ್ಮೃತಃ ಕಶ್ಚಿನ್ನೇತವ್ಯೋ ರಾಘವಂ ಪ್ರತಿ। ॥ ೮೫ ॥

ಪೌರಾಣಿಕಾಃ ಸ್ಥಾಪನೀಯಾ ಗೇಹೇ ಗ್ರಾಮೇ ಪೃಥಕ್ ಪೃಥಕ್ ।
ನಿತ್ಯನೈಮಿತ್ತಿಕಂ ಕರ್ಮ ನ ತ್ಯಾಜ್ಯಂ ವೈ ಕದಾಚನ ॥ ೮೬ ॥

---

೮೨. ರಾಮನು ಸುಮಂತ್ರನ ಮಗನಾದ ಸುಮಂತುವಿನಿಂದ ಆ ಸುಮಂತ್ರನಿಗೆ ಉತ್ತರಕ್ರಿಯಾದಿಗಳನ್ನು ಮಾಡಿಸಿದನು. ಮತ್ತು ಆ ಸುಮಂತ್ರನಿದ್ದ ಮಂತ್ರಿಪದವಿಯಲ್ಲಿಯೇ ಆ ಸುಮಂತುವನ್ನೂ ನಿಯಮಿಸಿದನು.

೮೩ ರಾಮನು ಲಕ್ಷ್ಮಣನಿಗೆ ಅಪ್ಪಣೆಮಾಡಿ ಭೂಲೋಕದಲ್ಲೆಲ್ಲಾದರೂ ಸರಿಯೆ ಪೂರ್ಣಾಯುವಾಗದೆ ಅಲ್ಪಾಯುಸ್ಸಿನಲ್ಲಿಯೇ ಸತ್ತವನನ್ನು ರಾಮನ ಬಳಿಗೆ ತೆಗೆದುಕೊಂಡು ಬರಬೇಕೆಂದು ಆನೆಯಮೇಲೆ ನಗಾರಿಗಳನ್ನಿಟ್ಟು ಅವನ್ನು ಧ್ವನಿಮಾಡಿಸುತ್ತ ಪತಾಕೆಯನ್ನೂ ಧ್ವಜವನ್ನೂ ಹಿಡಿದು ಸಾರಬೇಕೆಂದು ಹೇಳಿದನು.

೮೪. ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ದೂತರಿಗೆ ಅಪ್ಪಣೆ ಮಾಡಿದನು. ಆ ದೂತರು ಆನೆಯಮೇಲೆ ಕುಳಿತು ರಾಮನು ಹೇಳಿದಂತೆ ಪತಾಕೆ ಧ್ವಜಗಳನ್ನು ಹಿಡಿದು ಸಪ್ತದ್ವೀಪಗಳಲ್ಲಿಯೂ ಕೂಡ ದುಂದುಭಿಯನ್ನು ಬಡಿಯುತ್ತ ಇಂತೆಂದು ಸಾರಿದರು.

೮೫–೮೬. ಆಯುಸ್ಸು ಪೂರ್ತಿಯಾಗದೆ ಸತ್ತವನನ್ನು ರಾಮನ ಬಳಿಗೆ ತರಬೇಕು. ಮನೆ ಮನೆಯಲ್ಲಿಯೂ ಗ್ರಾಮಗಳಲ್ಲಿಯೂ ಬೇರೆ ಬೇರೆಯಾಗಿ ಪೌರಾಣಿಕರನ್ನು ನಿಯಮಿಸಬೇಕು. ನಿತ್ಯವಾದ ಸಂಧ್ಯಾವಂದನೆ ಶ್ರಾದ್ಧಾಧಿ ಕರ್ಮಗಳನ್ನೂ ನೈಮಿತ್ತಿಕವಾದ ಗರ್ಭಾದಾನಾದಿಕರ್ಮಗಳನ್ನೂ ಒಬ್ಬರೂ ಬಿಡಲೇ ಕೂಡದು.

ನಾವಮಾನ್ಯಾ ಭೂಸುರಾಶ್ಚ ದ್ವೇಷಃ ಕಾರ್ಯೋ ನ ಕಸ್ಯಚಿತ್ ।
ಹವ್ಯಂ ಕವ್ಯಂ ಸದಾ ದೇಯಂ ದಂಡನೀಯಾಶ್ಚ ತಸ್ಕರಾಃ ॥ ೮೭ ॥

ಶಾಸನೀಯಾ ದುರಾಚಾರಾಸ್ತತ್ಪರಾ ಯೇ ಜನಾ ಭುವಿ ।
ವಂದನೀಯಾ ಸದಾ ಮಾತಾ ವಂದನೀಯಸ್ಸದಾ ಪಿತಾ ॥ ೮೮ ॥

ಪೂಜನೀಯಾಸ್ಸದಾ ದೇವಾಃ ಕಾರ್ಯಾ ಧರ್ಮಾ ನಿಂತರಂ ।
ಚೈತ್ರಸ್ನಾನಂ ಸದಾ ಕಾರ್ಯಮಯೋಧ್ಯಾಯಾಮಥಾಪಿ ವಾ ॥ ೮೯ ॥

ರಾಮತೀರ್ಥೇಷು ಸರ್ವತ್ರ ಕಾರ್ಯಾ ಧರ್ಮಾ ವಿಶೇಷತಃ ।
ದ್ವಾರಕಾಂ ವೈ ಸದಾ ಗತ್ವಾ ಕಾರ್ಯಂ ವೈಶಾಖಮಜ್ಜನಂ ॥ ೯೦ ॥

ಊರ್ಜೇ ಕಾಶ್ಯಾಂ ಪಂಚನದೇ ಸ್ನಾತವ್ಯಂ ವಿಧಿಪೂರ್ವಕಂ ।
ಗತ್ವಾ ಪ್ರಯಾಗಂ ಪ್ರತ್ಯಬ್ದಂ ಕರ್ತವ್ಯಂ ಮಾಘಮಜ್ಜನಂ ॥ ೯೧ ॥

---

೮೭. ಬ್ರಾಹ್ಮಣರನ್ನು ಅವಮಾನಪಡಿಸಕೂಡದು. ಒಬ್ಬನೂ ಒಬ್ಬನ ಹತ್ತಿರಲೂ ದ್ವೇಷವನ್ನು ಮಾಡಕೂಡದು. ದೇವತೆಗಳಿಗೆ ಹವ್ಯಗಳನ್ನೂ ಪಿತೃಗಳಿಗೆ ಕವ್ಯಗಳನ್ನೂ ಕೊಡುತ್ತಿರಬೇಕು. ಕಳ್ಳರನ್ನು ಶಿಕ್ಷಿಸಬೇಕು.

೮೮-೮೯. ದುರಾಚಾರವುಳ್ಳವರನ್ನು ಶಿಕ್ಷಿಸಬೇಕು. ಆಚಾರವುಳ್ಳವರನ್ನು ವಂದಿಸಬೇಕು. ತಾಯಿತಂದೆಗಳನ್ನು ಯಾವಾಗಲೂ ನಮಸ್ಕರಿಸಬೇಕು. ದೇವತೆಗಳನ್ನು ಯಾವಾಗಲೂ ಪೂಜಿಸಬೇಕು. ಧರ್ಮವನ್ನು ನಿರಂತರವೂ ಮಾಡುತ್ತಿರಬೇಕು. ವೇದಗಳನ್ನು ಗೌರವಿಸಬೇಕು. ಚೈತ್ರಸ್ನಾನವನ್ನು ಯಾವಾಗಲೂ ಮಾಡಬೇಕು.

೯೦. ಅಯೋಧ್ಯೆಯಲ್ಲಿರುವ ರಾಮತೀರ್ಥದಲ್ಲಿ ಚೈತ್ರ ಸ್ನಾನವನ್ನು ಮಾಡಿದರೆ ಬಹು ವಿಶೇಷವು. ಆ ಸ್ಥಳಗಳಲ್ಲಿ ಧರ್ಮವನ್ನು ವಿಶೇಷವಾಗಿ ಮಾಡಬೇಕು. ದ್ವಾರಕಾಪಟ್ಟಣಕ್ಕೆ ಹೋಗಿ ವೈಶಾಖಸ್ನಾನವನ್ನು ಮಾಡಬೇಕು.

೯೧. ಕಾರ್ತಿಕಮಾಸದಲ್ಲಿ ಕಾಶಿಯಲ್ಲಿಯೂ ಪಂಚನದದಲ್ಲಿಯೂ (ಐದು ನದಿಗಳಲ್ಲಿ) ವಿಧಿಪೂರ್ವಕವಾಗಿ ಸ್ನಾನಮಾಡಬೇಕು. ಪ್ರತಿವರ್ಷವೂ ಪ್ರಯಾಗಕ್ಕೆ ಹೋಗಿ ಮಾಘಸ್ನಾನವನ್ನು ಮಾಡಬೇಕು.

ಚಾತುರ್ಮಾಸ್ಯವ್ರತಾದೀನಿ ಕರ್ತವ್ಯಾನಿ ವ್ರತಾನಿ ಹಿ ।
ಪ್ರತ್ಯಂಗಣೇಷು ತುಲಸೀ ಪೂಜನೀಯಾ ಹಿ ಸರ್ವದಾ ॥ ೯೨ ॥

ನ ನಿರಾಕರಣೀಯೋತ್ರ ತ್ವತಿಥಿಶ್ಚ ಕದಾಚನ ।
ನ ವಿಪ್ರಯಾಚ್ಞಾ ಕರ್ತವ್ಯಾ ಮೃಷಾ ಕ್ವಾಪಿ ಕದಾಚನ ॥ ೯೩ ॥

ಸರ್ವಸ್ವಮಪಿ ದಾತವ್ಯಂ ಭೂಸುರಾಯ ಸ್ಪೃಹಾನ್ವಿತೇ ।
ಗೃಹೇ ಗ್ರಾಮೇ ಚ ಕಲಹೋ ನೈವ ಕಾರ್ಯಃ ಕದಾಚನ ॥ ೯೪ ॥

ಸದಾ ಗುರುರ್ವಂದನೀಯಃ ಕರ್ತವ್ಯಂ ಶ್ರವಣಂ ಸದಾ ।
ಪ್ರಾತಃ ಸ್ನಾನಂ ಸದಾ ಕಾರ್ಯಂ ಹೋತವ್ಯಾ ವಿಧಿನಾಗ್ನಯಃ ॥ ೯೫ ॥

ಕಾರ್ಯೋ ಜಪಶ್ಶಂಕರಸ್ಯ ಧ್ಯೇಯೋ ನಿತ್ಯಂ ಮಹೇಶ್ವರಃ ।
ಏಕಾಂತೇ ಹಿ ತಪಃ ಕಾರ್ಯಂ ದ್ವಾಭ್ಯಾಮಧ್ಯಯನಂ ತಥಾ ॥ ೯೬ ॥

೯೨—೯೩. ಚಾತುರ್ಮಾಸ್ಯ ವ್ರತವೇ ಮುಂತಾದ ವ್ರತಗಳನ್ನು ಎಲ್ಲರೂ ಮಾಡಬೇಕು. ಎಲ್ಲರೂ ತಮ್ಮ ತಮ್ಮ ಅಂಗಳದಲ್ಲಿ ತುಳಸಿಯನ್ನು ಹಾಕಿ ಬೆಳೆಸಿ ಕೊಂಡು ಯಾವಾಗಲೂ ಪೂಜಿಸಬೇಕು. ಅತಿಥಿಗಳನ್ನು ಯಾವಾಗಲೂ ತಿರಸ್ಕರಿಸಿ ಕಳುಹಿಸಲೇ ಕೂಡದು. ಬ್ರಾಹ್ಮಣರು ಯಾಚಿಸಿದುದನ್ನು ಕೊಡಲೇ ಬೇಕು. ಕೊಡದೆ ಸುಳ್ಳುಹೇಳಿ ಕಳುಹಿಸಬಾರದು.

೯೪-೯೫. ಬ್ರಾಹ್ಮಣರು ಆಸೆಪಟ್ಟು ಕೇಳಿದರೆ ತನ್ನ ಸರ್ವಸ್ವವನ್ನೂ ಕೊಟ್ಟುಬಿಡಬೇಕು. ಮನೆಯಲ್ಲಾಗಲಿ ಊರಿನಲ್ಲಾಗಲೀ ಯಾರೂ ಜಗಳವಾಡ ಕೂಡದು. ಗುರುವನ್ನು ನಮಸ್ಕರಿಸುತ್ತಿರಬೇಕು. ಪುರಾಣಶ್ರವಣವನ್ನು ಮಾಡುತ್ತಿರಬೇಕು. ಪ್ರಾತಸ್ನಾನವನ್ನು ದಿನವೂ ಮಾಡುತ್ತಿರಬೇಕು. ವಿಧಿವತ್ತಾಗಿ ಅಗ್ನಿಹೋತ್ರವನ್ನು ಮಾಡುತ್ತಿರಬೇಕು.

೯೬. ಶಂಕರನ ಮಂತ್ರಜಪವನ್ನು ಪಂಚಾಕ್ಷರಿಯನ್ನು ಯಾವಾಗಲೂ ಮಾಡುತ್ತಿರಬೇಕು. ಯಾವಾಗಲೂ ಮಹೇಶ್ವರನನ್ನು ಧ್ಯಾನಿಸುತ್ತಿರಬೇಕು. ಒಬ್ಬಂಟಿಗನಾಗಿ ಯಾರೂ ಇಲ್ಲದಿರುವ ಜಾಗದಲ್ಲಿ ತಪಸ್ಸನ್ನು ಮಾಡಬೇಕು. ಇಬ್ಬಿಬ್ಬರು ಸೇರಿಕೊಂಡು ಅಧ್ಯಯನವನ್ನು ಮಾಡುತ್ತಿರಬೇಕು.

ತ್ರಿಭಿರ್ಗೀತಾನಿ ಕಾರ್ಯಾಣಿ ಚತುರ್ಭಿರ್ವಿಚರೇತ್ಪಥಿ ।
ಪರದಾರರತಿಸ್ತ್ಯಾಜ್ಯಾ ನಾವಲೋಕ್ಯಾನ್ಯಕಾಮಿನೀ ॥ ೯೭ ॥

ಪರಲಕ್ಷ್ಮ್ಯಾಃ ಸ್ಪೃಹಾ ಕಾರ್ಯಾ ನ ನರೈಶ್ಚ ಕದಾಚನ ।
ತೀರ್ಥಂ ವಿನಾ ಪುಣ್ಯಕಾಲೇ ನ ಸ್ನಾತವ್ಯಂ ಗೃಹೇಷ್ವಪಿ ॥ ೯೮ ॥

ನ ದ್ವೇಷ್ಯಾ ಗಣಕಾ ವೈದ್ಯಾಸ್ತೇ ಪೋಷ್ಯಾಶ್ಚ ಪುರೇ ಪುರೇ ।
ನ ವೇಶ್ಯಾಗಮನಂ ಕಾರ್ಯಂ ನ ದಾಸೀಂ ಸ್ಪೃಹಯೇತ್ ಹೃದಿ ॥ ೯೯ ॥

ನಿತ್ಯಕರ್ಮ ಯಥಾಕಾಲೇ ಕರ್ತವ್ಯಂ ಸರ್ವದಾ ನರೈಃ ।
ನಾವಮಾನ್ಯಾ ಹಿ ಗುರವಃ ಪರನಿಂದಾಂ ನ ಕಾರಯೇತ್ ॥ ೧೦೦ ॥

ಜಲಾಶಯಾ ವನೇ ಕಾರ್ಯಾ ರೋಪಿಣೀಯಾ ನಗಾಃ ಪಥಿ ।
ಧರ್ಮಶಾಲಾ ಪೃಥಕ್ಕಾರ್ಯಾ ನ ನಗ್ನಾಂ ವಿಕ್ಷಯೇದ್ವಧೂಂ ॥ ೧೦೧ ॥

---

೯೭. ಮೂರುಜನರು ಸೇರಿಕೊಂಡು ಗಾನವನ್ನು ಮಾಡಬೇಕು. ನಾಲ್ಕು ನಾಲ್ಕು ಜನರು ಸೇರಿಕೊಂಡು ದಾರಿಯಲ್ಲಿ ಸಂಚರಿಸಬೇಕು. ಪರರ ಹೆಂಡಿರಲ್ಲಿ ರಮಿಸುವುದನ್ನು ಬಿಡಬೇಕು. ಪರಸ್ತ್ರೀಯರನ್ನು ಕಾಮದೃಷ್ಟಿಯಿಂದ ನೋಡಲೇ ಕೂಡದು.

೯೮. ಪರರ ಸ್ವತ್ತಿಗೆ ಯಾವಾಗಲೂ ಆಸೆಪಡಬಾರದು. ಪುಣ್ಯಕಾಲಗಳಲ್ಲಿ ತೀರ್ಥಗಳಲ್ಲಿ ಸ್ನಾನಮಾಡಬೇಕೇ ಹೊರತು ಮನೆಗಳಲ್ಲಿ ಸ್ನಾನಮಾಡಕೂಡದು.

೯೯ ಜ್ಯೋತಿಷ್ಕರನ್ನೂ ವೈದ್ಯರನ್ನೂ ಊರು ಊರುಗಳಲ್ಲಿಯೂ ಪೋಷಿಸಬೇಕು. ಅವರೊಡನೆ ದ್ವೇಷವನ್ನು ಕಟ್ಟಿಕೊಳ್ಳಕೂಡದು. ವೇಶ್ಯೆಯರಲ್ಲಿ ರಮಿಸಕೂಡದು. ದಾಸಿಯನ್ನು ಮನಸ್ಸಿನಲ್ಲಿಯೂ ಕಾಮಬುದ್ಧಿಯಿಂದ ಆಶಿಸಬಾರದು.

೧೦೦. ಜನರು ಯಾವಾಗಲೂ ನಿತ್ಯಕರ್ಮವನ್ನು ಆಯಾಯಾ ಕಾಲದಲ್ಲಿಯೇ ಮಾಡಬೇಕು. ಗುರುಗಳನ್ನು ಅವಮಾನಪಡಿಸಕೂಡದು. ಪರರನ್ನು ನಿಂದಿಸಬಾರದು.

೧೦೧. ಕಾಡಿನಲ್ಲಿ ನೀರಿಗೆ ಅನುಕೂಲವಾಗಿರುವಂತೆ ಬಾವಿ ಮುಂತಾದುವುಗಳನ್ನು ಕೋಡಿಸಬೇಕು. ಕೆರೆ ಮುಂತಾದುವನ್ನು ಕಟ್ಟಿಸಬೇಕು. ದಾರಿಯಲ್ಲಿ ಉದ್ದಕ್ಕೂ ಪ್ರಯಾಣಿಕರಿಗೆ ನೆರಳು ಆಗುವಂತೆ ಮರಗಳನ್ನು ನೆಡಬೇಕು. ಬೇರೆ ಬೇರೆಯಾಗಿ ಆಯಾ ಜಾತಿಗೆ ತಕ್ಕಂತೆ ಧರ್ಮಶಾಲೆಗಳನ್ನು ಕಟ್ಟಿಸಬೇಕು. ಬೆತ್ತಲೆಯಿರುವಂತಹ ಹೆಂಗಸರನ್ನು ನೋಡಕೂಡದು.

ಅನ್ನಸತ್ರಾಣಿ ಕಾರ್ಯಾಣಿ ಪುರೇ ಗ್ರಾಮೇ ವನೇ ತಥಾ ।
ಪ್ರಕುರ್ವಂತು ವನೇ ರಕ್ಷಾಂ ಮಾರ್ಗಸ್ಥಾನಾಂ ವನೇಚರಾಃ ॥ ೧೦೨ ॥

ಭಯಂ ಮಾಸ್ತು ವನೇ ಕ್ವಾಪಿ ನಿಶಾಯಾಂ ಮಾರ್ಗಗಾಮಿನಾಂ ।
ವೈಶ್ಯೇಭ್ಯಸ್ತು ಕರೋ ಗ್ರಾಹ್ಯೋ ನೇತರೇಷಾಂ ಕದಾಚನ ॥ ೧೦೩ ॥

ಪಾದಯೋಃ ಪಾದುಕೇ ಧೃತ್ವಾ ತೀರ್ಥಂ ದೇವಂ ಗುರುಂ ಪ್ರತಿ ।
ಗೋಷ್ಠಂ ವೃಂದಾವನಂ ಹೋಮಶಾಲಾಂ ಗಚ್ಛೇನ್ನ ಸರ್ವದಾ ॥ ೧೦೪ ॥

ಪಾರಾಯಣಾನಿ ಗ್ರಂಥಾನಾಂ ವೇದಾನಾಂ ಚ ಸದಾ ನರೈಃ ।
ಕರ್ತವ್ಯಾನಿ ತು ನಿಷ್ಕಾಮಂ ಮಾ ಸಕಾಮಾನಿ ಕಾರಯೇತ್ ॥ ೧೦೫ ॥

ಯತಯೋ ವಂದನೀಯಾಶ್ಚ ಭೋಜನೀಯಾ ಗೃಹೇ ಗೃಹೇ ।
ಯತಯೇ ಕಮಂಡಲವಃ ಕೌಪೀನಂ ಪಾದುಕಾಸ್ತಥಾ ॥ ೧೦೬ ॥

---

೧೦೨. ಪಟ್ಟಣಗಳಲ್ಲಿಯೂ ಗ್ರಾಮಗಳಲ್ಲಿಯೂ ವನಗಳಲ್ಲಿಯೂ ಕೂಡ ಅನ್ನಸತ್ರಗಳನ್ನು ಇಡಿಸಬೇಕು. ಕಾಡಿನಲ್ಲಿ ವಾಸಮಾಡುವವರು ಕಾಡಿನಲ್ಲಿ ಸಂಚರಿಸುವ ಪ್ರಯಾಣಿಕರಿಗೆ ರಕ್ಷಣಾಕಾರ್ಯವನ್ನು ಮಾಡಬೇಕು.

೧೦೩. ರಾತ್ರಿಯಲ್ಲಿ ಪ್ರಯಾಣಮಾಡುತ್ತಿದ್ದರೂ ಮಾರ್ಗಸ್ಥರಿಗೆ ಭಯವಿರ ಕೂಡದು. ಆ ರೀತಿಯಾಗಿ ರಕ್ಷಣಾಕಾರ್ಯವನ್ನು ಮಾಡಬೇಕು. ವೈಶ್ಯರಿಂದಲೇ ಕಪ್ಪವನ್ನು ತೆಗೆದುಕೊಳ್ಳಬೇಕು. ಇತರರಿಂದ ತೆಗೆದುಕೊಳ್ಳಕೂಡದು.

೧೦೪. ಕಾಲಿಗೆ ಜೋಡುಗಳನ್ನು ಹಾಕಿಕೊಂಡು ತೀರ್ಥಗಳಿಗೆ ಹೋಗ ಕೂಡದು ದೇವರು ಇರುವ ಸ್ಥಳಕ್ಕೆ ಹೋಗಕೂಡದು. - ಗುರುಗಳ ಬಳಿಗೆ ಹೋಗ ಕೂಡದು. ದನಗಳ ಕೊಟ್ಟಿಗೆಗೆ ಹೋಗಕೂಡದು. ಬೃಂದಾವನದ ಬಳಿಗೆ ಹೋಗ ಕೂಡದು. ಹೋಮ ಶಾಲೆಗೆ ಹೋಗಕೂಡದು.

೧೦೫–೧೦೬. ವೇದಪಾರಾಯಣವನ್ನು ಯಾವಾಗಲೂ ನರರು ಮಾಡು ತ್ತಿರಬೇಕು. ಅವೆಲ್ಲವನ್ನೂ ನಿಷ್ಕಾಮವಾಗಿ ಮಾಡಬೇಕೇ ಹೊರತು ಸಕಾಮ ವಾಗಿ ಮಾಡಕೂಡದು. ಯತಿಗಳಿಗೆ ವಂದಿಸಬೇಕು. ಅವರಿಗೆ ಮನೆ ಮನೆಯಲ್ಲೂ ಭೋಜನವನ್ನು ಮಾಡಿಸಬೇಕು. ಆ ಯತಿಗಳಿಗೆ ಕಮಂಡಲುವನ್ನೂ ಕೌಪೀನವನ್ನೂ ಪಾದುಕೆಗಳನ್ನೂ ಬಿದಿರು ದೊಣ್ಣೆಗಳನ್ನೂ ಯಾವಾಗಲೂ ಕೊಡುತ್ತಿರಬೇಕು.

ವಂಶದಂಡಾಸ್ಸದಾ ದೇಯಾಃ ಸದಾ ತೋಷ್ಯಾಸ್ಸುಭಾಷಣೈಃ ।
ನ ಖೇದಯೇದ್ವಧೂಂ ಸ್ವೀಯಾಂ ದಿನೇ ನಿದ್ರಾಂ ನ ಕಾರಯೇತ್ ॥೧೦೭॥

ಹರಿದಿನ್ಯಾಂ ನ ಭೋಕ್ತವ್ಯ ಮುಪೋಷ್ಯಾ ಚ ಚತುರ್ದಶೀ ।
ಕೃಷ್ಣಪಕ್ಷಭವಾ ತಸ್ಯಾಂ ರಾತ್ರೌ ಕಾರ್ಯಂ ಶಿವಾರ್ಚನಂ ॥ ೧೦೮ ॥

ನಾನಾಮಹೋತ್ಸವಾದ್ಯೈಶ್ಚ ಯಥಾವಿಧಿ ಪುರಸ್ಸರಂ ।
ಅಷ್ಟಮೀ ಕೃಷ್ಣಪಕ್ಷಸ್ಯ ಸದೋಪೋಷ್ಯಾ ಶುಭಾ ತಿಥಿಃ ॥ ೧೦೯ ॥

ದೇವಾಲಯೇಷು ಕರ್ತವ್ಯಾ ಬಲಯೋ ಭಕ್ತಿಪೂರ್ವಕಾಃ ।
ನಾನಾಪಕ್ವಾನ್ನನೈವೇದ್ಯಾನ್ದೇವೇಭ್ಯಶ್ಚ ಸಮರ್ಪಯೇತ್ ॥ ೧೧೦ ॥

ಧೇನುದಾನಂ ವಾಜಿದಾನಂ ಗಜದಾನಂ ಪ್ರಕಾರಯೇತ್ ।
ಭೂಸುರೇಭ್ಯಃ ಪ್ರದೇಯಾನಿ ಗೃಹದಾನಾನಿ ಸಾದರಂ ॥ ೧೧೧ ॥

---

೧೦೭. ಅವರಿಗೆ ಯಾವಾಗಲೂ ಒಳ್ಳೆಯ ಮಾತನ್ನಾಡುತ್ತ ಸಂತೋಷ ಪಡಿಸುತ್ತ ಇರಬೇಕು. ಯಾವನೂ ತನ್ನ ಹೆಂಡತಿಯನ್ನು ದುಃಖಪಡಿಸ ಕೂಡದು. ಹಗಲಿನಲ್ಲಿ ನಿದ್ದೆಮಾಡಬಾರದು.

೧೦೮. ಹರಿದಿನಗಳಲ್ಲಿ ಊಟಮಾಡಕೂಡದು. ಏಕಾದಶೀದಿನಗಳಲ್ಲಿ ಊಟಮಾಡಕೂಡದು. ಕೃಷ್ಣಚತುರ್ದಶಿಯು ದಿವಸ ಉಪವಾಸವಿದ್ದು ರಾತ್ರಿಯಲ್ಲಿ ಶಿವಪೂಜೆಯನ್ನು ವಿಧಿವತ್ತಾಗಿ ವೈಭವದಿಂದ ಮಾಡಬೇಕು.

೧೦೯. ಕೃಷ್ಣಪಕ್ಷದ ಅಷ್ಟಮಿಯ ದಿವಸ ಉಪವಾಸ ಮಾಡಬೇಕು. ಅದು ಶುಭವಾದ ತಿಥಿಯು. ಆದಿನ ಬಗೆಬಗೆಯಾದ ಉತ್ಸವಗಳನ್ನು ಮಾಡಬೇಕು.

೧೧೦. ಆ ದಿವಸದಲ್ಲಿ ದೇವಾಲಯಗಳಲ್ಲೆಲ್ಲಾ ಭಕ್ತಿಯಿಂದ ಬಲಿದಾನ ಮುಂತಾದುವುಗಳನ್ನು ಮಾಡಬೇಕು ಬಗೆಬಗೆಯಾದ ಪಕ್ವಾನ್ನದ ನೈವೇದ್ಯಗಳನ್ನು ದೇವರಿಗೆ ಅರ್ಪಿಸಬೇಕು.

೧೧೧. ಗೋದಾನ, ಗಜದಾನ, ಕುದುರೆದಾನಗಳನ್ನು ಮಾಡಬೇಕು. ಬ್ರಾಹ್ಮಣರಿಗೆ ಅನೇಕವಾಗಿ ಗೃಹದಾನಗಳನ್ನು ಮಾಡಬೇಕು.

ಗೇಹೇ ಗೇಹೇ ಸದಾ ಕಾರ್ಯಂ ಧೇನುವಿಪ್ರಪ್ರಪೂಜನಂ ।
ವಸಂತೇ ಚಂದನಂ ದೇಯಂ ಛತ್ರಾಣಿ ವ್ಯಜನಾನಿ ಚ ॥ ೧೧೨ ॥

ಪಾನಕಂ ಜಲಕುಂಭಾಂಶ್ಚ ಕಾರ್ಯಂ ಪಾದಾವನೇಜನಂ ।
ದಧಿ ತಕ್ರಂ ಹಿ ಜಂಬೀರಂ ದೇಯೋ ವಿಪ್ರೇಭ್ಯ ಆದರಾತ್ ॥ ೧೧೩ ॥

ಕಾರ್ತಿಕೇ ದೀಪದಾನಾನಿ ರಾತ್ರೌ ಜಾಗರಣಾನಿ ಚ ।
ತುಲಸೀಸೇವನಂ ಧಾತ್ರೀಛಾಯಾಮಾಶ್ರಿತ್ಯ ಭೋಜನಂ ॥ ೧೧೪ ॥

ಗೀತನೃತ್ಯಾದಿಕರಣಂ ವಿಷ್ಣೋರಗ್ರೇ ನಿರಂತರಂ ।
ತ್ರಿಪುರಾರೇಸ್ಸಮೀಪೇ ಹಿ ಪೌರ್ಣಿಮಾಯಾಂ ಹಿ ಕಾರ್ತಿಕೇ ॥ ೧೧೫ ॥

ಕರಣೀಯೋ ಮಹಾದಾಹೋ ಘೃತಾಕ್ತವರ್ತಿಕಾದಿಭಿಃ ।
ಮಾಘೇ ದೇಯಾನಿ ಕಾಷ್ಠಾನಿ ಕಂಬಲಾಶ್ಚಿತ್ರಿತಾಸ್ತಥಾ ॥ ೧೧೬ ॥

---

೧೧೨. ಮನೆಮನೆಯಲ್ಲಿಯೂ ಗೋಪೂಜೆ, ಬ್ರಾಹ್ಮಣ ಪೂಜೆಗಳನ್ನು ಮಾಡಬೇಕು. ವಸಂತ ಋತುವಿನಲ್ಲಿ ಚಂದನದಾನವನ್ನೂ, ಛತ್ರಿ, ಬೀಸಣಿಗೆ, ದಾನಗಳನ್ನೂ ಮಾಡಬೇಕು.

೧೧೩. ಪಾನಕವನ್ನೂ, ಜಲಕುಂಭಗಳನ್ನೂ ದಾನಮಾಡಬೇಕು. ಬ್ರಾಹ್ಮಣರ ಕಾಲುಗಳನ್ನು ತೊಳೆಯಬೇಕು. ಮೊಸರು, ಮಜ್ಜಿಗೆ, ನಿಂಬೆಯಹಣ್ಣು ಮುಂತಾದ ಶೀತವಾದ ಪದಾರ್ಥಗಳನ್ನು ದಾನಮಾಡಬೇಕು.

೧೧೪. ಕಾರ್ತಿಕ ಮಾಸದಲ್ಲಿ ದೀಪದಾನವನ್ನು ಮಾಡಬೇಕು. ದೀಪಗಳನ್ನು ಹಚ್ಚಬೇಕು. ರಾತ್ರಿಯಲ್ಲಿ ಜಾಗರಣೆಯನ್ನು ಮಾಡಬೇಕು. ತುಲಸೀ ಸೇವೆಯನ್ನು ಮಾಡಬೇಕು ನೆಲ್ಲಿಯ ಮರದ ನೆರಳಿನಲ್ಲಿ ಭೋಜನವನ್ನು ಮಾಡಬೇಕು.

೧೧೫–೧೧೬. ವಿಷ್ಣುವಿನ ಎದುರಿಗೆ ಗೀತಗಳನ್ನು ಮಾಡಬೇಕು. ಕಾರ್ತಿಕದ ಹುಣ್ಣಿಮೆಯ ದಿನ ತ್ರಿಪುರಾರಿಯಾದ ಶಿವನ ಹತ್ತಿರದಲ್ಲಿ ತುಪ್ಪದಲ್ಲಿ, ಬತ್ತಿಯನ್ನೋ ಅಥವಾ ಬಟ್ಟೆಯನ್ನೋ ನೆನಿಸಿ ದೊಡ್ಡದಾಗಿ ಹತ್ತಿಸಬೇಕು. ಮಾಘಮಾಸದಲ್ಲಿ ಸೌದೆಗಳನ್ನು ಕೊಡಬೇಕು. ಅಲ್ಲದೆ ಚಿತ್ರವಿಚಿತ್ರವಾದ ಕಂಬಳಿಗಳನ್ನು ದಾನಮಾಡಬೇಕು.

ಚೈತ್ರೇ ತಾಂಬೂಲದಾನಂ ಚ ತಥಾ ರಂಭಾಫಲಾನಿ ಚ ।
ಉರ್ವಾರುಕಾನಿ ದೇಯಾನಿ ಚಂದನಂ ದಧಿ ತಕ್ರಕಂ ॥ ೧೧೭ ॥

ಆದರ್ಶದಾನಂ ಕಸ್ತೂರೀದಾನಂ ಜಾತಿಫಲಸ್ಯ ಚ ।
ಏಲಾಕರ್ಪೂರದಾನಾನಿ ಮಧುಮಾಸಿ ಪ್ರಕಾರಯೇತ್ ॥ ೧೧೮ ॥

ಪದಾಗ್ರಜಂ ನ ಸ್ಪೃಶೇಚ್ಚ ನ ಪಾದಂ ಘರ್ಷಯೇತ್ಪದಾ ।
ದ್ವಾಭ್ಯಾಂ ಕರಾಭ್ಯಾಂ ಕಂಡೂತಿಃ ಮಸ್ತಕಸ್ಯ ನ ಕಾರಯೇತ್ ॥ ೧೧೯ ॥

ದಾತವ್ಯಃ ಕರಭಾರೋ ಹಿ ವಿನಾ ವಿಪ್ರೈಃ ನೃಪಾಯ ಹಿ ।
ನೋಪೇಕ್ಷಣೀಯೋ ರಾಜ್ಯಶ್ಚ ಜನೈರ್ದಂಡಃ ಕದಾಚನ ॥ ೧೨೦ ॥

ಮಾನನೀಯಾಶ್ಚ ಶ್ವಶುರಾಃ ಪೋಷ್ಯಾಃ ಪಾಲ್ಯಾಸ್ಸದೈವ ಹಿ ।
ಸುಹೃದಸ್ತೋಷಣೀಯಾಶ್ಚ ಮಿತ್ರೇ ಕೋಪಂ ನ ಕಾರಯೇತ್ ॥ ೧೨೧ ॥

---

೧೧೭. ಚೈತ್ರಮಾಸದಲ್ಲಿ ತಾಂಬೂಲದಾನವನ್ನು ಮಾಡಬೇಕು. ಅಂತೆಯೇ ಬಾಳೆಹಣ್ಣುಗಳನ್ನು ಕೊಡಬೇಕು. ಸೌತೆಯಕಾಯನ್ನು ಕೊಡಬೇಕು. ಚಂದನ ಮೊಸರು, ಮಜ್ಜಿಗೆಗಳನ್ನೂ ದಾನಮಾಡಬೇಕು.

೧೧೮. ಕನ್ನಡಿಯನ್ನು ದಾನಮಾಡಬೇಕು. ಜಾಯಿಕಾಯಿಗಳನ್ನು ದಾನ ಮಾಡಬೇಕು. ಏಲಕ್ಕಿ, ಕರ್ಪೂರಗಳನ್ನು ವೈಶಾಖಮಾಸದಲ್ಲಿ ಕೊಡಬೇಕು.

೧೧೯. ದೊಡ್ಡವರವನ್ನು ಕಾಲಿನಿಂದ ಒದೆಯಕೂಡದು. ಕಾಲನ್ನು ತಗಲಿಸಲೇ ಕೂಡದು. ಕಾಲಿನಿಂದ ಕಾಲನ್ನು ತಿಕ್ಕಕೂಡದು. ಒಂದೇಬಾರಿ ಎರಡು ಕೈಗಳಿಂದಲೂ ತಲೆಯನ್ನು ಕೆರೆಯಕೂಡದು.

೧೨೦. ಬ್ರಾಹ್ಮಣರುಗಳು ಹೊರತಾಗಿ ಉಳಿದವರು ಕಂದಾಯವನ್ನು ರಾಜನಿಗೆ ಕೊಡಬೇಕು. ಜನರು ರಾಜ್ಯವನ್ನು ತಿರಸ್ಕರಿಸದೆ ಅದರಲ್ಲಿ ಅಭಿಮಾನಿಗಳಾಗಿರಬೇಕು. ಜನಗಳು ದಂಡವನ್ನು ಆತನಿಗೆ ವಿಧಿಸಬಾರದು.

೧೨೧. ಅತ್ತೆಮಾವಂದಿರನ್ನು ಗೌರವಿಸಬೇಕು. ಅವರನ್ನು ಪೋಷಿಸುತ್ತ ಪಾಲಿಸುತ್ತಿರಬೇಕು. ಸ್ನೇಹಿತರನ್ನು ಸಂತೋಷಪಡಿಸಬೇಕು. ಮಿತ್ರರಲ್ಲಿ ಕೋಪವನ್ನು ಮಾಡಬಾರದು.

ನ ಕರ್ತವ್ಯೋ ರಿಪೂಣಾಂ ಚ ವಿಶ್ವಾಸಶ್ಚ ಕದಾಚನ ।
ಕಾರ್ಪಣ್ಯತಾ ನೈವ ಕಾರ್ಯಾ ದಾನಕರ್ಮಸು ಸರ್ವದಾ ॥ ೧೨೨ ॥

ನ ದ್ಯೂತೇನ ಸದಾ ಕಾರ್ಯಾ ಕ್ರೀಡಾ ದಾರಿದ್ರ್ಯ ಸೂಚಿನೀ ।
ನ ಶ್ರೋತವ್ಯಾ ಕದಾ ವಾರ್ತಾ ಮದ್ಯಾನಾಂ ಹಿ ನರೋತ್ತಮೈಃ । ॥ ೧೨೩ ॥

ತೀರ್ಥಯಾತ್ರಾ ಸದಾ ಕಾರ್ಯಾ ಕೃಚ್ಛ್ರಕಾದಿ ಸಮಾಚರೇತ್ ।
ಕಾರ್ಯಂ ಲಿಂಗಾರ್ಚನಂ ನಿತ್ಯಂ ಕೋಟಿಲಿಂಗಾನಿ ಶ್ರಾವಣೇ ॥ ೧೨೪ ॥

ಕರ್ತವ್ಯಾನಿ ನರೈರ್ಭಕ್ತ್ಯಾ ಸದೈವಾಪಿ ಚ ಕಾರಯೇತ್ ।
ಲಘುರುದ್ರಾನ್ಮಹಾರುದ್ರಾನತಿರುದ್ರಾನ್ಸಮಾಚರೇತ್ ॥ ೧೨೫ ॥

ದಾನಾನಿ ಪುಸ್ತಕಾನಾಂ ಚ ಕರ್ತವ್ಯಾನಿ ನಿರಂತರಂ ।
ಕೀರ್ತನಾನಿ ಚ ಕಾರ್ಯಾಣಿ ದೇವಾಗಾರೇಷು ವಾ ಗೃಹೇ ॥ ೧೨೬ ॥

೧೨೨-೧೨೩. ಶತ್ರುಗಳಲ್ಲಿ ಯಾವಾಗಲೂ ವಿಶ್ವಾಸವನ್ನಿಡಬಾರದು. ಜಿಪುಣತನವನ್ನು ದಾನಕಾರ್ಯದಲ್ಲಿ ಮಾಡಲೇಬಾರದು. ಯಾವಾಗಲೂ ಜೂಜನ್ನಾಡುತ್ತಿರಬಾರದು. ಜೂಜೆಂಬುದು ದಾರಿದ್ರ್ಯವು ಬರುವುದಕ್ಕೆ ಸೂಚಕವಾದುದು. ಜನರು ಹೆಂಡಕುಡುಕರ ಮಾತನ್ನು ಕೇಳಲೇ ಕೂಡದು.

೧೨೪. ಯಾವಾಗಲೂ ತೀರ್ಥಯಾತ್ರೆಗಳನ್ನು ಮಾಡುತ್ತಿರಬೇಕು. ಕೃಚ್ಛ್ರಾದಿ ಪ್ರಾಯಶ್ಚಿತ್ತಗಳನ್ನು ಆಚರಿಸುತ್ತಿರಬೇಕು. ದಿನವೂ ಲಿಂಗಾರ್ಚನೆಯನ್ನು ಮಾಡಬೇಕು. ಶ್ರಾವಣಮಾಸದಲ್ಲಿ ಕೋಟಿಲಿಂಗಗಳ ಅರ್ಚನೆಯನ್ನು ಮಾಡಬೇಕು.

೧೨೫. ಅಲ್ಲದೆ ಈ ಕೋಟಿ ಲಿಂಗಾರ್ಚನೆಯನ್ನು ಮನುಜರು ಭಕ್ತಿಯಿಂದ ಯಾವಾಗಲೂ ಮಾಡಬಹುದು. ಲಘುರುದ್ರ, ಮಹಾರುದ್ರ, ಅತಿರುದ್ರಗಳಿಂದ ಶಿವನನ್ನು ಅಭಿಷೇಕಮಾಡಿ ಪೂಜಿಸುತ್ತಾ ಇರಬೇಕು.

೧೨೬-೧೨೭. ಪುಸ್ತಕಗಳನ್ನು ಯಾವಾಗಲೂ ದಾನಮಾಡಬೇಕು. ದೇವಸ್ಥಾನಗಳಲ್ಲಾಗಲೀ, ಮನೆಗಳಲ್ಲಾಗಲೀ ಕೀರ್ತನೆಯನ್ನು ಮಾಡಬೇಕು.

ಸಾಧೂನಾಂ ಪೂಜನಂ ಕಾರ್ಯಂ ನಮಸ್ಕಾರ್ಯಸ್ಸದಾ ರವಿಃ ।
ಗ್ರಾಮೇ ಗ್ರಾಮೇ ವಾಯುಪುತ್ರಪ್ರತಿಮಾಸ್ಸರ್ವದಾ ಪೃಥಕ್ ॥ ೧೨೭ ॥

ಸಿಂಧೂರಾಕ್ತಾಶ್ಚ ತೈಲಾಕ್ತಾಃ ಪೂಜನೀಯಾ ನಿರಂತರಂ ।
ಚತುರ್ಥ್ಯಾಂ ಗಣರಾಜಸ್ಯ ಪೂಜನಾನಿ ಪ್ರಕಾರಯೇತ್ ॥ ೧೨೮ ॥

ಸದಾತ್ಮಚರ್ಚಾ ಕರ್ತವ್ಯಾ ಸ್ತೋತ್ರಪಾಠಾನ್ಪ್ರಕಾರಯೇತ್ ।
ಗೀತಾಯಾಃ ಪಠನಂ ಕಾರ್ಯಂ ವೇದಾನಧ್ಯಾಪಯೇತ್ಸದಾ ॥ ೧೨೯ ॥

ಅರ್ಪಯೇದ್ಗಣರಾಜಾಯ ಮೋದಕಾಸ್ಪೂರ್ಣಪೂರಿತಾನ್ ।
ಪಂಚಖಾದ್ಯಾನಿ ಸಿಂಧೂರದೂರ್ವಾದೀನ್ಯರ್ಪಯೇತ್ಸದಾ ॥ ೧೩೦ ॥

ಸದೈವ ಶಾಂತಿಸೂಕ್ತಾನಿ ಪುಣ್ಯಸೂಕ್ತಾನ್ಯನೇಕಶಃ ।
ಪುಣ್ಯಂ ಪುರುಷಸೂಕ್ತಂ ಚ ಶ್ರೀಸೂಕ್ತಾದೀನಿ ವೈ ಪಠೇತ್ ॥ ೧೩೧ ॥

ಯಾವಾಗಲೂ ಸಾಧುಸತ್ಪುರುಷರನ್ನು ಸೇವಿಸಬೇಕು. ಸೂರ್ಯನನ್ನು ಯಾವಾಗಲೂ ನಮಸ್ಕರಿಸಬೇಕು ಎಲ್ಲಾ ಗ್ರಾಮಗಳಲ್ಲಿಯೂ ಆಂಜನೇಯನ ಪ್ರತಿಮೆಯನ್ನು ಎಣ್ಣೆ ಮಜ್ಜನದಿಂದಲೂ, ಚಂದ್ರದಿಂದಲೂ ಪೂಸಿ ಪೂಜೆಮಾಡಬೇಕು. ಚತುರ್ಥಿಯ ದಿವಸ ಗಣನಾಥನನ್ನು ಪೂಜಿಸಬೇಕು.

೧೨೯. ಹೂರ್ಣವನ್ನು ತುಂಬಿರುವ ಕಡಬುಗಳನ್ನು ಗಣಪತಿಗೆ ನಿವೇದಿಸಬೇಕು. ಪಂಚಖಾದ್ಯಗಳನ್ನೂ ಚಂದ್ರವನ್ನೂ, ದೂರ್ವೆ [ಗರಿಕೆ] ಯನ್ನೂ ಅವನಿಗೆ ಅರ್ಪಿಸಬೇಕು.

೧೩೦. ಯಾವಾಗಲೂ ಆತ್ಮವಿಚಾರವನ್ನು ಚರ್ಚಿಸುತ್ತಿರಬೇಕು. ಸ್ತೋತ್ರ ಪಾಠಗಳನ್ನು ಹೇಳಬೇಕು. ಗೀತೆಯನ್ನು ಓದುತ್ತಿರಬೇಕು. ವೇದಾಧ್ಯಯಿನವನ್ನು ಮಾಡುತ್ತಿರಬೇಕು. ವೇದವನ್ನು ಹೇಳಿಕೊಡುತ್ತಿರಬೇಕು.

೧೩೧. ಶಾಂತಿಸೂಕ್ತಗಳನ್ನೂ, ಪುಣ್ಯಸೂಕ್ತಗಳನ್ನೂ, ಯಾವಾಗಲೂ ಹೇಳುತ್ತಿರಬೇಕು. ಪುರುಷಸೂಕ್ತ ಶ್ರೀ ಸೂಕ್ತಗಳನ್ನೂ ಯಾವಾಗಲೂ ಪಠಿಸುತ್ತಿರಬೇಕು.

ಸದಾ ಧರ್ಮೇ ಮತಿಃ ಕಾರ್ಯಾ ಕಾರ್ಯೋ ಧರ್ಮಸ್ಯ ಸಂಗ್ರಹಃ ।
ದುಷ್ಟಬುದ್ಧಿಸ್ಸದಾ ತ್ಯಾಜ್ಯಾ ಪಾತಕಂ ಪರಿಮಾರ್ಜಯೇತ್ ॥ ೧೩೨ ॥

ಜ್ಞಾತವ್ಯಂ ಚಪಲಂ ಚಾಯುಃ ಕ್ರೂರೋ ಜ್ಞೇಯೋ ಯಮೋ ಮಹಾನ್
ದಾರುಣಾ ನಾರಕೀ ಪೀಡಾ ಸ್ಮರ್ತವ್ಯಾ ಹೃದಿ ಸರ್ವದಾ ॥ ೧೩೩ ॥

ಗತಂ ಯಥಾತ್ರ ಬಾಲತ್ವಂ ತಾರುಣ್ಯಂ ಚ ಗತಂ ತಥಾ ।
ತಥಾ ಗಚ್ಛತಿ ವಾರ್ಧಕ್ಯಂ ಸ್ಮರಧ್ವಂ ಯಮಶಾಸನಂ ॥ ೧೩೪ ॥

ಗತಸ್ತಾತೋ ಮೃತಾ ಮಾತಾ ಗತಶ್ಚ ಪ್ರಪಿತಾಮಹಃ ।
ಪಿತಾಮಹೋ ಗತಶ್ಚೇತಿ ಗಮನಂ ಸ್ವಂ ನಿರೀಕ್ಷಯೇತ್ ॥ ೧೩೫ ॥

ಗತಾ ದಂತಾ ಗತೇ ನೇತ್ರೇ ಶ್ಲಥಾ ಜಾತಾ ತ್ವಗತ್ರ ಹಿ ।
ಕೃಷ್ಣಕೇಶಾಸ್ಸಿತಾ ಜಾತಾ ಮೃತ್ಯುಃ ಜ್ಞೇಯಃ ಪುರಃಸ್ಥಿತಃ ॥ ೧೩೬ ॥

---

೧೩೨. ಯಾವಾಗಲೂ ಧರ್ಮದಲ್ಲಿಯೇ ಬುದ್ಧಿಯನ್ನಿಟ್ಟಿರಬೇಕು. ಯಾವಾಗಲೂ ಧರ್ಮಸಂಗ್ರಹವನ್ನೇ ಮಾಡುತ್ತಿರಬೇಕು. ದುಷ್ಟಬುದ್ಧಿಯನ್ನು ಬಿಟ್ಟುಬಿಡಬೇಕು. ಪಾಪಗಳನ್ನು ನಾಶಮಾಡಿಕೊಳ್ಳಬೇಕು.

೧೩೩ ಆಯುಸ್ಸು ಚಂಚಲವೆಂದೂ, ಯಮನು ಮಹಾಕ್ರೂರನೆಂದೂ ನರಕಪೀಡೆಯು ದಾರುಣವಾದುದೆಂದೂ ಮನಸ್ಸಿನಲ್ಲಿ ಯಾವಾಗಲೂ ಸ್ಮರಿಸುತ್ತಿರಬೇಕು.

೧೩೪. ಬಾಲ್ಯ ಕಳೆದಂತೆಯೇ ಯೌವನವೂ ಕಳೆದುಹೋಗುವುದು. ಅದೇ ರೀತಿಯಾಗಿ ಮುಪ್ಪೂ ಕಳೆದುಹೋಗುವುದು. ಇದನ್ನು ಯೋಚಿಸಿ ಆ ಯಮನ ಶಿಕ್ಷೆಯನ್ನು ಸ್ಮರಿಸಿಕೊಳ್ಳಿರಿ.

೧೩೫ ತಂದೆಯು ಮೃತನಾದನು. ಅಂತೆಯೇ ತಾಯಿಯೂ ಸತ್ತಳು. ತಾತ ಮುತ್ತಾತಂದಿರೂ ಸತ್ತುಹೋದರು. ಅವರಂತೆಯೇ ನಾವೂ ಹೋಗುತ್ತೇವೆ ಎಂಬುದಾಗಿ ಸಾವನ್ನು ನಿರೀಕ್ಷಿಸುತ್ತಿರಬೇಕು.

೧೩೬. ಹಲ್ಲುಗಳು ಬಿದ್ದುಹೋದುವು. ಕಣ್ಣುಗಳು ಕಾಣಿಸದಂತಾದುವು. ಚರ್ಮವು ಸಡಿಲವಾಗಿ ಸುಕ್ಕುಹಿಡಿಯಿತು. ಕಪ್ಪುಕೂದಲುಗಳು ನೆರೆಬಂದು ಬೆಳ್ಳಗಾದುವು. ಮೃತ್ಯುವು ಎದುರಿಗೆ ಒಂದು ನಿಂತಿರುವುದು. ಎಂದು ತಿಳಿಯಬೇಕು.

ದಾನೇ ವಿಲಂಬೋ ನೋ ಕಾರ್ಯಃ ಕಾರ್ಯಂ ಚಿತ್ತಂ ಸುನಿರ್ಮಲಂ ।
ತುಷವಚ್ಚ ಧನಂ ದೇಯಂ ಮಾ ಕಾರ್ಪಣ್ಯಾತ್ಪ್ರರಕ್ಷಯೇತ್ ॥ ೧೩೭ ॥

ಏವಂ ಶ್ರೀರಾಮದೂತಾಸ್ತೇ ಸಪ್ತದ್ವೀಪಾಂತರಸ್ಥಿತಾನ್ ।
ಶ್ರಾವಯಿತ್ವಾ ರಾಘವಾಜ್ಞಾಂ ಮಹಾದುಂದುಭಿನಿಸ್ವನೈಃ ॥ ೧೩೮ ॥

ಅಯೋಧ್ಯಾಂ ಸ್ವಾಂ ಯಯುಸ್ಸರ್ವೇ ರಾಮಂ ವೃತ್ತಂ ನ್ಯವೇದಯನ್ ।
ಸಂಶ್ರಾವಿತಾ ತವಾಸ್ಮಾಭಿಶ್ಚಾಜ್ಞಾ ಸರ್ವಾನ್ ಜನಾನ್ ಮುಹುಃ ॥ ೧೩೯ ॥

ಸಪ್ತದ್ವೀಪೇಷು ಸರ್ವತ್ರ ದುಂದುಭೀನಾಂ ಮಹಾಸ್ವನೈಃ ।
ತತ್ತೇಷಾಂ ವಚನಂ ಶ್ರುತ್ವಾ ರಾಮಸ್ತುಷ್ಟೋಽಭವತ್ತದಾ ॥ ೧೪೦ ॥

ಏವಂ ರಾಮೇಣ ಭೂಮ್ಯಾಂ ಹಿ ಚರಿತ್ರಾಣಿ ಮಹಾಂತಿ ಚ ।
ಆಚರಿತಾನ್ಯನೇಕಾನಿ ಕಸ್ತಾನ್ಯತ್ರ ವದಿಷ್ಯತಿ ॥ ೧೪೧ ॥

---

೧೩೭. ದಾನಮಾಡುವುದರಲ್ಲಿ ಸಾವಕಾಶವನ್ನು ಮಾಡಬೇಡಿರಿ. ಮನಸ್ಸನ್ನು ನಿರ್ಮಲವಾದುದನ್ನಾಗಿ ಮಾಡಿಕೊಳ್ಳಿರಿ. ಹಣವನ್ನು ಜಳ್ಳಿನಂತೆ ತಿಳಿದು ದಾನಮಾಡಿರಿ. ಆ ಧನವನ್ನು ಜಿಪುಣತನದಿಂದ ಕಾಪಾಡಬಾರದು.

೧೩೮-೧೪೦. ಈ ರೀತಿಯಾಗಿ ಶ್ರೀರಾಮನ ದೂತರು ದುಂದುಭಿಯನ್ನು ಬಡಿಯುತ್ತ ಆ ರಾಮನ ಆಜ್ಞೆಯನ್ನು ಸಪ್ತದ್ವೀಪಗಳಲ್ಲಿರುವವರಿಗೆಲ್ಲರಿಗೂ ಸಾರಿಹೇಳಿ ಅನಂತರ ತಮ್ಮ ಅಯೋಧ್ಯೆಗೆ ಬಂದು ತಾವು ನಡೆಸಿದ ಕೆಲಸವನ್ನು ರಾಮನಿಗೆ ಹೇಳಿದರು. ಎಲೈ ರಾಮನೇ! ನಿನ್ನ ಅಪ್ಪಣೆಯನ್ನು ಎಲ್ಲರಿಗೂ ತಿಳಿಸಿದೆವು. ಒಂದಲ್ಲ, ಎರಡಲ್ಲ, ಅನೇಕ ಬಾರಿ. ಅದರಲ್ಲಿಯೂ ದುಂದುಭಿಯನ್ನು ಧ್ವನಿಮಾಡುತ್ತ ಏಳುದ್ವೀಪಗಳಲ್ಲಿಯೂ ಸಾರಿದ್ದೇವೆ ಎಂದರು. ಅವರು ಹೀಗೆ ಹೇಳಿದುದನ್ನು ಕೇಳಿ ರಾಮನು ಬಹು ಸಂತೋಷವನ್ನು ಹೊಂದಿದನು.

೧೪೧. ಈ ರೀತಿಯಾಗಿ ರಾಮನು ಈ ಭೂಮಿಯಲ್ಲಿ ನಾನಾ ಬಗೆಯಾದ ಚರಿತ್ರೆಗಳನ್ನು ಆಚರಿಸಿದನು. ಅವೆಲ್ಲವನ್ನೂ ಇಲ್ಲಿ ಯಾವನಿಂದ ಹೇಳಲು ಸಾಧ್ಯವಾದೀತು!

ಏವಂ ಶಿಷ್ಯ ಮಯಾ ಪ್ರೋಕ್ತಂ ರಾಜ್ಯಕಾಂಡಂ ಮನೋರಮಂ |
ಚತುರ್ವಿಂಶತ್ಸುಸರ್ಗೈಶ್ಚ ಮಹಾಮಂಗಳಕಾರಕಂ　　|| ೧೪೨ ||

ರಾಜ್ಯಕಾಂಡಂ ನೃಪಾ ಯತ್ರ ಪಠಂತಿ ಭಕ್ತಿತತ್ಪರಾಃ ।
ನ ತೇ ರಾಜ್ಯಾತ್ಪರಿಭ್ರಷ್ಟಾಃ ಭವಂತಿ ಹಿ ಕದಾಚನ　　|| ೧೪೩ ||

ರಾಜ್ಯಕಾಂಡಂ ಮಹಾಪುಣ್ಯಂ ಮಹಾಮಾಂಗಲ್ಯದಾಯಕಂ |
ಯೇ ಶೃಣ್ವಂತಿ ನರಾ ಭೂಮ್ಯಾಂ ತೇ ಮಾಂಗಲ್ಯಂ ಭಜಂತಿ ಹಿ || ೧೪೪ ||

ಏಕೈಕವರ್ಧಿತೈಸ್ಸರ್ಗೈರ್‍ಯೈಕೈಕೇನ ಕ್ಷಯೇನ ಚ |
ಸಪ್ತಚತ್ವಾರಿಂಶದ್ದಿನೈರನುಷ್ಠಾನಂ ಸುಸಿದ್ಧಿದಂ　　|| ೧೪೫ ||

---

೧೪೨. ಎಲೈ ಶಿಷ್ಯನೇ ! ಈ ರೀತಿಯಾಗಿ ಸುಂದರವಾದ ರಾಜ್ಯಕಾಂಡ ವನ್ನು ನಿನಗೆ ಹೇಳಿದ್ದೇನೆ. ಇದು ಇಪ್ಪತ್ತನಾಲ್ಕು ಸರ್ಗಗಳಿಂದ ಕೂಡಿದೆ. ಮಹಾಮಂಗಳವನ್ನುಂಟುಮಾಡುತ್ತದೆ.

೧೪೩-೧೪೪. ರಾಜರಾದವರು ಈ ಕಾಂಡವನ್ನು ಓದುತ್ತಿದ್ದರೆ ಅವರಿಗೆ ರಾಜ್ಯವು ಯಾವಾಗಲೂ ನಷ್ಟವಾಗುವುದೇ ಇಲ್ಲ. ಈ ರಾಜ್ಯಕಾಂಡವು ಮಹಾ ಪುಣ್ಯವನ್ನುಂಟುಮಾಡುತ್ತದೆ. ಬಹು ಮಂಗಳಕರವಾದುದು. ಇದನ್ನು ಭೂಮಿ ಯಲ್ಲಿ ಯಾರು ಕೇಳುವರೋ ಅವರು ಮಂಗಳವನ್ನು ಹೊಂದುತ್ತಾರೆ.

೧೪೫. ಮೊದಲನೆಯದಿನ ಒಂದು ಸರ್ಗ, ಎರಡನೆಯದಿನ ಒಂದು ಮತ್ತು ಎರಡು. ಮೂರನೆಯದಿನ ಒಂದು ಎರಡು, ಮೂರು, ಈ ರೀತಿಯಾಗಿ ಒಂದೊಂ ದನ್ನು ಹೆಚ್ಚಿಸಿಕೊಂಡು ಓದುವುದು. ಇಪ್ಪತ್ತನಾಲ್ಕು ದಿನಕ್ಕೆ ಇಪ್ಪತ್ತನಾಲ್ಕು ಸರ್ಗಗಳು. ಇಪ್ಪತ್ತೈದನೆಯ ದಿವಸ ಇಪ್ಪತ್ತಮೂರು ಸರ್ಗ, ಇಪ್ಪತ್ತಾರನೆಯ ದಿನ ಇಪ್ಪತ್ತೆರಡುಸರ್ಗ ಈ ರೀತಿಯಾಗಿ ಹೆಚ್ಚುಕಡಿಮೆಮಾಡಿಕೊಂಡು ಪಾರಾ ಯಣವನ್ನು ಮಾಡಬೇಕು. ಈ ರೀತಿಯಾಗಿ ಪಾರಾಯಣ ಮಾಡಿದರೆ ನಾಲ್ವತ್ತೇಳು ದಿನಗಳು ಬೇಕಾಗುವುದು. ಈ ರೀತಿಯಾಗಿ ಅನುಷ್ಠಾನಮಾಡಿದರೆ ಒಳ್ಳೆಯ ಸಿದ್ಧಿಯನ್ನು ಕೊಡುತ್ತದೆ.

ಅಧಿಪತ್ಯಂ ನರಾಃ ಕೃತ್ವಾ ರಾಜ್ಯಕಾಂಡಂ ಪಠಂತಿ ಯೇ ।
ಅಧಿಪತ್ಯಾತ್ಪರಿಭ್ರಷ್ಟಾ ನ ಭವಂತಿ ಕದಾಚನ ॥ ೧೪೬ ॥

ರಾಜ್ಯಕಾಂಡಂ ಪಠಿತ್ವಾ ತು ರಣೇ ವಾದೇ ಜಯೋ ಭವೇತ್ ।
ಶರಣಂ ಶತ್ರವಶ್ಶೀಘ್ರಂ ಯಾಸ್ಯಂತ್ಯೇತಚ್ಛ್ರವಾದಿನಾ ॥ ೧೪೭ ॥

ಆನಂದರಾಮಾಯಣಮಧ್ಯಸಂಸ್ಥಂ
ಯೇ ರಾಜ್ಯಕಾಂಡಂ ಮನುಜಾಃ ಪಠಂತಿ ।
ರಾಜ್ಯಾಚ್ಚ್ಯುತಾ ರಾಜ್ಯಪದಂ ಲಭಂತೇ
ಭವಂತಿ ಭ್ರಷ್ಟಾ ನ ತು ತೇ ಪದಸ್ಥಾಃ ॥ ೧೪೮ ॥

ಆನಂದರಾಮಾಯಣಮೇತದುತ್ತಮಂ
ತತ್ರಾಪಿ ಕಾಂಡೇಷು ವಿಚಿತ್ರಮುತ್ತಮಂ ।
ಶ್ರೀರಾಜ್ಯಕಾಂಡಂ ಪರಮಂ ಸುಸೌಖ್ಯದಂ
ಸದಾತಿಭಕ್ತ್ಯಾ ಶ್ರವಣೀಯಮಾದರಾತ್ ॥ ೧೪೯ ॥

ರಾಜ್ಯಸ್ಥಿತೈರ್ವಾ ವ್ಯವಸಾಯತತ್ಪರೈಃ
ಸದೈವಮೇತಚ್ಛ್ರವಣೀಯಮಾದರಾತ್ ।
ಉತ್ಸಾಹಕಾಲೇ ವ್ರತಬಂಧಮಂಗಲೇ
ವಿವಾಹಕಾಲೇ ಪಠನೀಯಮುತ್ತಮಂ ॥ ೧೫೦ ॥

೧೪೬--೧೪೭. ಅಧಿಪತ್ಯದಲ್ಲಿರುವ ಎಂದರೆ ಅಧಿಕಾರದಲ್ಲಿರುವ ಜನರು ಈ ರಾಜ್ಯಕಾಂಡವನ್ನು ಪಠಿಸಿದರೆ ಅವರು ಆ ಅಧಿಪತ್ಯದಿಂದ ಚ್ಯುತರಾಗುವುದೇ ಇಲ್ಲ. ಈ ರಾಜ್ಯಕಾಂಡವನ್ನು ಪಠಿಸುತ್ತಿದ್ದರೆ ರಣದಲ್ಲಿಯಾಗಲಿ ವಾದದಲ್ಲಿಯಾಗಲಿ ಜಯವಾಗುವುದು. ಈ ರಾಜ್ಯಕಾಂಡವನ್ನು ಓದುತ್ತಿದ್ದರೆ ಅಥವಾ ಕೇಳುತ್ತಿದ್ದರೆ ಶತ್ರುಗಳು ಬೇಗನೆ ಶರಣಾಗತರಾಗುವರು.

೧೪೮. ಆನಂದರಾಮಾಯಣದ ಮಧ್ಯದಲ್ಲಿರುವ ಈ ರಾಜ್ಯಕಾಂಡವನ್ನು ಯಾರು ಓದುತ್ತಾರೆಯೋ ಅವರು ರಾಜ್ಯವನ್ನು ಕಳೆದುಕೊಂಡಿದ್ದರೆ ರಾಜ್ಯವನ್ನು ಹೊಂದುತ್ತಾರೆ. ರಾಜ್ಯಪದವಿಯಲ್ಲಿದ್ದರೆ ಅವರು ಅಲ್ಲಿಯೇ ಶಾಶ್ವತವಾಗಿರುವರು.

೧೪೯. ಈ ಆನಂದರಾಮಾಯಣವು ಬಹು ಉತ್ತಮವಾದುದು. ಅದರಲ್ಲಿಯೂ ಅದರ ಮಧ್ಯದಲ್ಲಿರುವ ಕಾಂಡಗಳಲ್ಲಿ ಶ್ರೀ ರಾಜ್ಯಕಾಂಡವು ವಿಚಿತ್ರವೂ ಉತ್ತಮವೂ ಬಹು ಸೌಖ್ಯವನ್ನು ಕೊಡತಕ್ಕದೂ ಆಗಿರುವುದು. ಆದ್ದರಿಂದ ಇದನ್ನು ಭಕ್ತಿಯಿಂದ ಯಾವಾಗಲೂ ಕೇಳುತ್ತಾ ಇರಬೇಕು.

೧೫೦. ರಾಜ್ಯದಲ್ಲಿರುವವರೂ ರಾಜ್ಯವನ್ನು ಹೊಂದಬೇಕೆನ್ನುವವರೂ ಇದನ್ನು ಭಕ್ತಿಯಿಂದ ಓದಿಸುತ್ತಿರಬೇಕು. ಇಲ್ಲವೇ ಕೇಳುತ್ತಿರಬೇಕು. ಉತ್ಸವಕಾಲ, ಮುಂಜಿಯಕಾಲ ಮದುವೆಯಕಾಲ ಈ ಸಮಯಗಳಲ್ಲಿ ಇದನ್ನು ಓದಬೇಕು.

ಶ್ರೀರಾಜ್ಯಕಾಂಡಂ ಶ್ರುತಿಸೌಖ್ಯದಾಯಕಂ
ಪುಣ್ಯೇಷು ಕಾಲೇಷು ಪಠಂತಿ ಯೇ ನರಾಃ ।
ಲಭಂತಿ ಸೌಖ್ಯಾನ್ಯತಿಮಂಗಳಾನಿ ತೇ
ಗಚ್ಛಂತಿ ವಿಷ್ಣೋಃ ವರಯಾನಗಾಃ ಪದಂ ॥ ೧೫೧ ॥

ಪುಣ್ಯಂ ಪವಿತ್ರಂ ಪರಮಂ ವಿಚಿತ್ರಂ
ಶ್ರೀರಾಮಚಂದ್ರಸ್ಯ ಕಥಾನಕಂ ಸದಾ ।
ಭಕ್ತ್ಯಾ ಮುನೀನಾಮಪಿ ಮಂಗಳಪ್ರದಂ
ಶ್ರೋತವ್ಯಮೇತತ್ಪಠನೀಯಮಾದರಾತ್ ॥ ೧೫೨ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಆನಂದರಾಮಾಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಉತ್ತರಾರ್ಧೇ ರಾಮದಾಸ ವಿಷ್ಣುದಾಸ ಸಂವಾದೇ ಯಮಶಿಕ್ಷಾಕರಣಂ ಸುಮಂತ್ರಕೃತ ಕುಂಠಾರೋಹಣಂ ಪ್ರಜೋಪದೇಶಕರಣಂ ನಾಮ ಚತುರ್ವಿಂಶಸ್ಸರ್ಗಃ ಸಮಾಪ್ತಃ

ಇತಿ ಶ್ರೀಮದಾನಂದರಾಮಾಯಣೇ ರಾಜ್ಯಕಾಂಡಸ್ಸಪ್ತಮಃ

ಶ್ರೀರಾಮಚಂದ್ರ ಚರಣಾರವಿಂದಾರ್ಪಣಮಸ್ತು

---

೧೫೧. ಈ ರಾಜ್ಯಕಾಂಡವು ಕಿವಿಗೆ ಇಂಪಾಗಿರುವುದು. ಇದನ್ನು ಪುಣ್ಯಕಾಲಗಳಲ್ಲಿ ಓದಿದರೆ ಅವರು ಬಹುವಾದ ಮಂಗಳವನ್ನೂ ಸೌಖ್ಯವನ್ನೂ ಹೊಂದಿ ಕಡೆಯಲ್ಲಿ ವಿಮಾನದಲ್ಲಿ ಕುಳಿತು ವೈಕುಂಠಕ್ಕೆ ಹೋಗುತ್ತಾರೆ.

೧೫೨. ಆನಂದರಾಮಾಯಣ ರೂಪವಾದ ಈ ರಾಮಚರಿತ್ರೆಯು ಪುಣ್ಯವಾದುದು. ಪವಿತ್ರವಾದುದು. ವಿಚಿತ್ರವಾದುದು. ಮುನಿಗಳಿಗೂ ಕೂಡ ಮಂಗಳವನ್ನು ಕೊಡುತ್ತದೆ. ಆದ್ದರಿಂದ ಭಕ್ತಿಯಿಂದ ಕೇಳಬೇಕು. ಭಕ್ತಿಯಿಂದ ಓದಬೇಕು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಚರಿತಾಂತರ್ಗತವಾದ ಆನಂದರಾಮಾಯಣದ ರಾಜ್ಯಕಾಂಡದ ಉತ್ತರಾರ್ಧದ ರಾಮದಾಸ ವಿಷ್ಣುದಾಸರ ಸಂವಾದದಲ್ಲಿ ಯಮಶಿಕ್ಷಾಕರಣ ಸುಮಂತ್ರ ವೈಕುಂಠಾರೋಹಣ ಪ್ರಜೋಪದೇಶಕರಣವೆಂಬ ಇಪ್ಪತ್ತನಾಲ್ಕನೆಯ ಸರ್ಗವು ಮುಗಿದುದು.

ಇಂತು ಶ್ರೀಮದಾನಂದರಾಮಾಯಣದಲ್ಲಿ ಏಳನೆಯದಾದ ರಾಜ್ಯಕಾಂಡವು ಮುಗಿದುದು.

ಶ್ರೀರಾಮಚಂದ್ರ ಚರಣಾರವಿಂದಾರ್ಪಣಮಸ್ತು


N&CO.





॥ ಶ್ರೀರಸ್ತು ॥

—೦—

ಶ್ರೀಮದಾನಂದರಾಮಾಯಣದ ರಾಜ್ಯಕಾಂಡದಲ್ಲಿ ಇಪ್ಪತ್ತನಾಲ್ಕನೆಯ ಸರ್ಗದ ಸಾರಾಂಶವು

ಒಂದು ಸಾರಿ ರಾಮನು ಸಭೆಯಲ್ಲಿ ಕುಳಿತಿರಲು ಒಬ್ಬ ಸೇವಕನು ಅವನ ಬಳಿಗೆ ಬಂದು ಎಲೈ ಮಹಾರಾಜನೆ! ಬಹು ಮುದುಕನಾಗಿದ್ದ ಸುಮಂತ್ರನು ಸ್ವರ್ಗಸ್ಥನಾದನು. ಅವನ ಹೆಂಡಿರು ನಿನ್ನ ಬಳಿಗೆ ದುಃಖದಿಂದ ಬರಲಾದವರಾಗಿ ಆ ಸುಮಂತ್ರನ ಶವದೊಡನೆ ಸಹಗಮನ ಮಾಡಲು ನಿನ್ನ ಅಪ್ಪಣೆಯನ್ನು ಕೇಳುತ್ತಿದ್ದಾರೆ ಎಂದನು.

ಈ ಮಾತನ್ನು ಕೇಳಿ ರಾಮನು ಚಕಿತನಾಗಿ ದುಃಖಗೊಂಡು ಬೇಗನೆ ರಥವನ್ನು ತರಿಸಿ ಕುಳಿತುಕೊಂಡು ಸುಮಂತ್ರನ ಮನೆಗೆ ಹೋದನು. ಅಲ್ಲಿ ಅವನ ಜಾತಕವನ್ನು ತರಿಸಿ ನೋಡಲು ಒಂಭತ್ತು ಸಾವಿರದ ಒಂಭೈನೂರ ತೊಂಭತ್ತೊಂಭತ್ತು (೯೯೯೯) ವರ್ಷ ಹನ್ನೊಂದು (೧೧) ತಿಂಗಳು ಇಪ್ಪತ್ತೊಂದು (೨೧) ದಿನಗಳಾಗಿದ್ದುವು. ಪೂರ್ಣವಾದ ಆಯುಸ್ಸು ತುಂಬಲು ಇನ್ನೂ ಒಂಭತ್ತು (೯) ದಿನಗಳು ಉಳಿಕೆಯಾಗಿದ್ದುವು. ಆಗ ಗುರುವಾದ ವಸಿಷ್ಠನನ್ನು ಕರೆದು ಎಲೈ ಗುರುವೆ! ಮನುಷ್ಯನಿಗೆ ಕೃತಯುಗದಲ್ಲಿ ಒಂದು ಲಕ್ಷ ವರ್ಷಗಳೂ ತ್ರೇತಾಯುಗದಲ್ಲಿ ಒಂದು ಸಾವಿರದ ವರ್ಷಗಳೂ ಕಲಿಯುಗದಲ್ಲಿ ಒಂದು ನೂರು ವರ್ಷಗಳೂ ದ್ವಾಪರಯುಗದಲ್ಲಿ ಹತ್ತು ಸಾವಿರ ವರ್ಷಗಳೂ ಪೂರ್ಣವಾದ ಆಯುಸ್ಸು ಇರುವುದೆಂದು ಶಾಸ್ತ್ರವಿರುವುದು.

ಈಗ ಆ ಆಯುಸ್ಸು ನನ್ನರಾಜ್ಯದಲ್ಲಿ ಸುಳ್ಳಾಯಿತಲ್ಲ! ಈ ಸುಮಂತ್ರನಿಗೆ ಇನ್ನೂ ಒಂಭತ್ತು ದಿನಗಳ ಆಯುಸ್ಸು ಶೇಷವಾಗಿರುವಾಗ ಯಮನು ಹೇಗೆ ಈತನನ್ನು ಕೊಂಡುಹೋದನು? ಆ ಯಮನನ್ನು ಶಿಕ್ಷಿಸಿ ಈ ಸುಮಂತ್ರನನ್ನು ಬದುಕಿಸುತ್ತೇನೆ. ನನ್ನ ಶಕ್ತಿಯನ್ನು ಈಗ ನೋಡು ಎಂದು ಹೇಳಿ ಗರುಡನ ಮೇಲೆ ಕುಳಿತು ಧನುಸ್ಸನ್ನು ಠೇಂಕರಿಸುತ್ತ ಯಮನ ಪಟ್ಟಣವಾದ ಸಂಯಮನಿಗೆ ಹೊರಟನು.

ಯಮನ ಆಳುಗಳು ಆ ಸುಮಂತ್ರನನ್ನು ಇನ್ನೂ ದಾರಿಯಲ್ಲಿಯೇ ಕರೆದು ಕೊಂಡು ಹೋಗುತ್ತಿದ್ದರು. ರಾಮನು ಆ ಆಳುಗಳೆಲ್ಲರನ್ನೂ ಹೊಡೆದು ಲಿಂಗ ಶರೀರವನ್ನು ಹೊಂದಿರುವ ಆ ಸುಮಂತ್ರನನ್ನು ಬಿಡಿಸಿದನು.

ಆ ಯಮನ ದೂತರು ರಾಮನನ್ನು ಕುರಿತು ಅಯ್ಯಾ! ನಮ್ಮನ್ನೇಕೆ ಹೊಡೆಯುತ್ತೀಯೆ? ಎನ್ನಲು ಅವನು ಈ ಸುಮಂತ್ರನಿಗೆ ಇನ್ನೂ ಒಂಭತ್ತು ದಿನಗಳು ಆಯುಸ್ಸು ಉಳಿದಿದೆ. ಈಗಲೇ ಕರೆದೊಯ್ಯಲು ಕಾರಣವೇನು? ಆ ಒಂಭತ್ತು ದಿನಗಳು ಕಳೆದ ಮೇಲೆ ಕರೆದುಕೊಂಡು ಹೋಗಿರಿ. ನಾನು ತಡೆಯು ವುದಿಲ್ಲ ಎಂದನು.

ಇದನ್ನು ಕೇಳಿ ಯಮಭಟರು ಎಲೈ ರಾಮನೆ! ಈ ಸುಮಂತ್ರನ ಜನನವು ಆಶ್ಚರ್ಯಕರವಾದುದು. ಇವನು ಹುಟ್ಟುವಾಗ ಮೊದಲು ತಲೆ ಕೈಗಳು ಈಚೆಗೆ ಬಂದುವು. ಹೊಟ್ಟೆಯು ಒಳಗೆ ಇದ್ದಿತು. ಹತ್ತನೆಯ ದಿವಸ ಮಿಕ್ಕ ಭಾಗಗಳು ಮೆಲ್ಲಮೆಲ್ಲಗೆ ಬಂದುವು. ಅನಂತರ ಒಳ್ಳೆಯ ಮಂತ್ರಗಳಿಂದ ಇವನನ್ನು ರಕ್ಷಿಸಿ ದುದರಿಂದ ಇವನಿಗೆ ಸುಮಂತ್ರನೆಂದು ಹೆಸರಾಯಿತು. ಅವಯವಗಳೆಲ್ಲಕ್ಕೂ ತಲೆಯೇ ಪ್ರಧಾನವಾದುದರಿಂದ ಇವನಿಗೆ ಆಯುಸ್ಸು ಪೂರ್ಣವಾಗಿ ಹೋಗಿದೆ. ಇದರಲ್ಲಿ ನಮ್ಮ ಅಪರಾಧವೇ ಇರುವುದಿಲ್ಲ. ನಮ್ಮನ್ನು ವೃಥಾ ಶಿಕ್ಷಿಸಿದುದ ಲ್ಲದೆ ಇವನನ್ನು ಕರೆದುಕೊಂಡು ಹೋಗುವುದು ವ್ಯರ್ಥವಾಗುವುದು ಎಂದರು.

ಇದನ್ನು ಕೇಳಿ ರಾಮನು ಎಲೈ ಯಮಭಟರಿರಾ! ಪ್ರಸವವೆಂದರೆ ಪೂರ್ತಿ ಯಾಗಿ ಈಚೆಗೆ ಬರುವುದೆಂದರ್ಥ. ಈಚೆಗೆ ಬಂದ ದಿನದಿಂದಲೇ ಈತನ ಆಯು ಸ್ಸನ್ನು ಲೆಕ್ಕ ಹಾಕಬೇಕು. ಆ ದಿನವೇ ಉತ್ಸವ ದಿವಸವು ಅಂದೇ ಜಾತಕವನ್ನು ಬರೆಯುವುದು. ಆದ್ದರಿಂದಲೇ ಒಂಭತ್ತು ದಿನಗಳು ಉಳಿದಿವೆ. ಇದು ಸತ್ಯವಾ ದುದು. ಒಂಭತ್ತು ದಿನಗಳು ಕಳೆದ ಮೇಲೆ ಹತ್ತನೆಯ ದಿನದಲ್ಲಿ ಕರೆದುಕೊಂಡು ಹೋಗಿರಿ. ನಾನು ತಡೆಯುವುದಿಲ್ಲ ಎಂದನು. ಸುಮಂತ್ರನನ್ನು ಬಿಟ್ಟು ಯಮ ಭಟರು ಹೊರಟುಹೋದರು. ರಾಮನೂ ಹಿಂದಿರುಗಿ ಸುಮಂತ್ರನ ಮನೆಗೆ ಬಂದನು. ಅಷ್ಟರಲ್ಲಿ ಸುಮಂತ್ರನು ಜೀವಿಸಿದ್ದುದರಿಂದ ಎಲ್ಲರೂ ಸಂತೋಷ ದಿಂದಿದ್ದರು. ಮನೆಗೆ ಬಂದ ರಾಮನನ್ನು ನೋಡಿ ಸುಮಂತ್ರನು ಪೂಜಿಸಿದನು. ಅನಂತರ ರಾಮನು ತನ್ನ ಮನೆಗೆ ಹೊರಟುಹೋದನು

ಸುಮಂತ್ರನು ತನ್ನ ಆಯುಸ್ಸು ಒಂಭತ್ತು ದಿನಗಳಿರುವುದನ್ನು ತಿಳಿದು ರಾಮನ ಅಪ್ಪಣೆಯಂತೆ ಬಹುವಾದ ಧರ್ಮಗಳನ್ನು ಮಾಡುತ್ತ ಕಾಲವನ್ನು ನಿರೀಕ್ಷಿಸುತ್ತಿದ್ದನು.

ಇತ್ತ ಯಮದೂತರು ಏಟನ್ನು ತಿಂದು ದುಃಖಪಡುತ್ತ ಯಮನ ಬಳಿಗೆ ಹೋಗಿ ತಲೆಯ ರುಮಾಲುಗಳನ್ನು ಕೈಗೆ ತೆಗೆದುಕೊಂಡು ಕೋಪದಿಂದ ಅದನ್ನು ನೆಲಕ್ಕೆ ಬಡಿಯುತ್ತ ಎಲೈ ಯಮನೇ ! ನೀನು ಏನೆಂದು ಅಧಿಕಾರವನ್ನು ಮಾಡುತ್ತಿದ್ದೀಯೆ ? ನಿನ್ನ ಆಜ್ಞೆಯನ್ನು ನೆರವೇರಿಸಲು ಹೋದ ನಮಗೆ ಈರೀತಿಯಾದ ಅವಸ್ಥೆಯುಂಟಾಗಿರುವುದನ್ನು ನೋಡಿ ನಿನಗೆ ನಾಚಿಕೆಯಾಗುವುದಿಲ್ಲವೆ ? ರಾಮನು ತನ್ನ ಮಂತ್ರಿಯಾದ ಸುಮಂತ್ರನಿಗೆ ಇನ್ನೂ ಒಂಭತ್ತು ದಿನಗಳು ಆಯುಸ್ಸಿರುವುದೆಂದು ಹೇಳಿ ನಮ್ಮೆಲ್ಲರನ್ನೂ ಹೊಡೆದೋಡಿಸಿ ಅವನನ್ನು ಬಿಡಿಸಿಕೊಂಡು ಹೋದನಲ್ಲ! ನಾವು ನೀರಿನಲ್ಲಾಗಲಿ ಬೆಂಕಿಯಲ್ಲಾಗಲಿ ಬಿದ್ದು ದೇಹತ್ಯಾಗವನ್ನು ಮಾಡುತ್ತೇವೆ. ಬದುಕಿರಲು ಖಂಡಿತವಾಗಿಯೂ ನಮಗೆ ಇಷ್ಟವಿಲ್ಲ ಎಂದರು.

ದೂತರಿಗಾದ ಅವಮಾನವನ್ನು ನೋಡಿ ಅವರ ಮಾತುಗಳನ್ನೂ ಕೇಳಿ ಯಮನಿಗೆ ಬಹುವಾದ ಕೋಪವು ಬಂದು ಜ್ವಲಿಸಿದನು. ಒಡನೆಯೇ ದೂತರನ್ನು ಕುರಿತು ಎಲೈ ದೂತರಿರಾ ! ರಾಮನನ್ನು ಹಿಂಗಟ್ಟು ಮುಂಗಟ್ಟು ಕಟ್ಟಿ ಈಗಲೇ ಎಳೆತರುತ್ತೇನೆ. ಸೈನ್ಯವೆಲ್ಲವನ್ನೂ ಸಿದ್ಧಪಡಿಸಿರಿ. ಇಂದ್ರನಿಗೂ ಸಹಾಯಕ್ಕೆ ಬರುವಂತೆ ಹೇಳಿಬರುತ್ತೇನೆ ಎಂದು ಹೇಳಿ ಹೊರಟು ಇಂದ್ರನ ಬಳಿಗೆ ಹೋಗಿ ಅವನಿಗೆ ನಡೆದ ವಿಷಯಗಳೆಲ್ಲವನ್ನೂ ತಿಳಿಸಿದನು. ಮತ್ತು ಸಹಾಯಕ್ಕೆ ಬರುವಂತೆಯೂ ಕೇಳಿಕೊಂಡನು.

ಇದನ್ನು ಕೇಳಿ ದೇವೇಂದ್ರನು ಯಮನನ್ನು ಕುರಿತು ಎಲೈ ಯಮನೇ ! ನಿನಗೆ ಬುದ್ಧಿ ಭ್ರಮಣೆಯಾಗಿರುವುದೇನು ? ಇದೇನು ? ವಿಷ್ಣುವಿನೊಡನೆ ಯುದ್ಧ ಮಾಡಲು ಇಚ್ಛಿಸುತ್ತಿರುವೆಯಲ್ಲಾ ! ಸುಮ್ಮನೆ ಸಂಯಮನಿಗೆ ಹೋಗು. ರಾಮನಿಗೆ ನೀನೇನನ್ನು ಮಾಡಬಲ್ಲೆ ! ಅವನಿಗೆ ಹೆದರಿಕೊಂಡೇ ನಾನು ಹಿಂದೆ ಕಾಮಧೇನು ಕಲ್ಪವೃಕ್ಷಗಳನ್ನು ಕೊಟ್ಟುಬಿಟ್ಟೆನು. ಎಂದನು. ಇದನ್ನು ಕೇಳಿದ ಯಮನು ಈ ಇಂದ್ರನನ್ನು ಬಿಟ್ಟು ವಹ್ನಿಲೋಕಕ್ಕೆ ಹೋಗಿ ಅವನನ್ನು ಸಹಾಯಮಾಡುವಂತೆ ಕೇಳಲು ಅವನೂ ತಿರಸ್ಕರಿಸಿದನು ಅಲ್ಲಿಂದ ಮುಂದೆ ನಿರಋತಿ, ವರುಣ, ವಾಯು, ಕುಬೇರ, ಈಶಾನ, ಸೂರ್ಯ, ಚಂದ್ರ, ಬುಧ, ಗುರು, ಶುಕ್ರ, ಶನಿ, ರಾಹು. ಕೇತು. ಅಂಗಾರಕ ಇವರೆಲ್ಲರ ಬಳಿಗೂ ಕ್ರಮವಾಗಿ ಹೋಗಿ ತನ್ನ ವಿಷಯವನ್ನು ಹೇಳಿ ಸಹಾಯವನ್ನು ಕೇಳಿದನು. ಇವರೆಲ್ಲರೂ ಇಂದ್ರನಂತೆಯೇ ಹೇಳುತ್ತ ತಿರಸ್ಕರಿಸಿದರು.

ಅನಂತರ ಬ್ರಹ್ಮನ ಬಳಿಗೂ ಹೋದನು· ಅವನೂ ತಿರಸ್ಕರಿಸಿದನು. ಪಾತಾಳಕ್ಕೆ ಹೋಗಲು ಅಲ್ಲಿನವರೂ ತಿರಸ್ಕರಿಸಿದರು. ಭೂಲೋಕದಲ್ಲಿಯೂ ಸಪ್ತದ್ವೀಪಗಳಲ್ಲಿರುವ ರಾಜರನ್ನೂ ಕೇಳಿದನು. ಅವರೂ ಸಾಧ್ಯವಿಲ್ಲವೆಂದರು.

ಹೀಗೆ ತಿರಸ್ಕೃತನಾದ ಯಮನು ತಾನೇ ಶ್ರೀರಾಮನನ್ನು ನಿಗ್ರಹಿಸುತ್ತೇನೆಂದು ಹೊರಟು ಅಯೋಧ್ಯೆಗೆ ಸೈನ್ಯದೊಡನೆ ಬಂದು ಮುತ್ತಿಗೆಯನ್ನು ಹಾಕಿದನು.

ರಾಮನು ಇದನ್ನು ತಿಳಿದು ಯಮನನ್ನು ಹೊಡೆದೋಡಿಸುವಂತೆ ಲವನಿಗೆ ಅಪ್ಪಣೆ ಮಾಡಲು ಲವನು ಪಟ್ಟಣದ ಹೊರಗೆ ಬಂದು ಯಮನೊಡನೆ ಘೋರವಾದ ಯುದ್ಧವನ್ನು ಮಾಡಿದನು ಯಮನ ವಾಹನವಾದ ಕೋಣವು ಬಿದ್ದುಬಿಟ್ಟಿತು. ಯಮನಿಗೆ ಬಹುವಾದ ಏಟೂ ಬಿದ್ದಿತು. ಆಗ ಯಮನು ಲವನ ಮೇಲೆ ಯಮದಂಡವನ್ನು ಬಿಟ್ಟನು. ಇದನ್ನು ನೋಡಿ ಲವನು ಆದಕ್ಕೆ ಪ್ರತಿಯಾಗಿ ಬ್ರಹ್ಮಾಸ್ತ್ರವನ್ನು ಬಿಟ್ಟನು. ಈ ಬ್ರಹ್ಮಾಸ್ತ್ರವನ್ನು ನೋಡಿ ಯಮದಂಡವು ಶಾಂತಿಗೆಟ್ಟು ಹಿಂದಿರುಗಿತು. ಆಗ ಯಮನು. ಹೆದರಿ ಓಡಿದನು. ಬ್ರಹ್ಮಾಸ್ತ್ರವು ಅಟ್ಟಿಸಿಕೊಂಡು ಅವನ ಹಿಂದಿಯೇ ಹೋಯಿತು.

ಇದನ್ನು ನೋಡಿ ಯಮನ ತಂದೆಯಾದ ಸೂರ್ಯನು ತನ್ನ ದೇಹವನ್ನು ಎರಡಾಗಿ ನಿರ್ಮಿಸಿಕೊಂಡು ಒಂದು ಮೂರ್ತಿಯನ್ನು ರಥದಲ್ಲಿಟ್ಟು ಮತ್ತೊಂದು ಮೂರ್ತಿಯಿಂದ ಲವನ ಬಳಿಗೆ ಓಡಿಬಂದು ಎಲೈ ಲವನೇ! ನೀನು ಬಿಟ್ಟಿರುವ ಬ್ರಹ್ಮಾಸ್ತ್ರವನ್ನು ನೀನೇ ಸಂಹರಿಸು. ನೀನು ನನ್ನ ವಂಶದಲ್ಲಿ ಹುಟ್ಟಿದವನು. ಈ ಯಮನು ನನ್ನ ಮಗನು. ನೀನು ನಿನ್ನ ಪೂರ್ವಿಕನನ್ನೇ ಕೊಂದಂತಾಗುತ್ತದೆ. ಹಾಗೆ ಮಾಡಬೇಡ, ಒಂದು ವಂಶದಲ್ಲಿ ಒಬ್ಬನು ಮೂರ್ಖನಾದರೆ ಎಲ್ಲರೂ ಮೂರ್ಖರಾಗಬೇಕೆಂಬ ನಿಯಮವಿಲ್ಲ. ಅಲ್ಲದೆ ರಣರಂಗದಿಂದ ಶತ್ರುವು ಓಡಲು ಮೊದಲು ಮಾಡಿದರೆ ವೀರರು ಅವನನ್ನು ಕಾಪಾಡುತ್ತಾರೆಯೇ ಹೊರತು ಕೊಲ್ಲುವುದಿಲ್ಲ. ಇವೇ ಮೊದಲಾದ ಮಾತುಗಳಿಂದ ಸಮಾಧಾನವನ್ನು ಹೇಳುತ್ತಾ ಪ್ರಾರ್ಥಿಸಿದನು. ಆಗ ಲವನು ರವಿಯ ಮಾತಿಗೆ ಗೌರವವನ್ನು ಕೊಟ್ಟು ಬ್ರಹ್ಮಾಸ್ತ್ರವನ್ನು ಹಿಂದಕ್ಕೆ ತೆಗೆದುಕೊಂಡನು. ಅನಂತರ ರವಿಯು ಯಮನನ್ನು ಕರೆದುಕೊಂಡು ಲವನ ಜೊತೆಯಲ್ಲಿ ಹೊರಟು ಅಯೋಧ್ಯೆಗೆ ಹೋಗಿ ಶ್ರೀರಾಮನ ದರ್ಶನವನ್ನು ಮಾಡಿದನು. ಲವನು ಹೋಗಿ ರಾಮನಿಗೆ ನಮಸ್ಕರಿಸಿ ನಡೆದ ವಿಷಯವನ್ನು ಅರಿಕೆ ಮಾಡಿದನು. ರಾಮನು ರವಿಯು ಬಂದಿರುವುದನ್ನು ತಿಳಿದು ಎದುರುಗೊಂಡು ನಮಸ್ಕರಿಸಿ ಕರೆತಂದು ಸಿಂಹಾಸನದಲ್ಲಿ ಕೂರಿಸಿ ಪೂಜಿಸಿ ಎಲೈ

ರವಿಯೇ! ನೀನು ನಮ್ಮ ವಂಶದ ಮೂಲಪುರುಷನು. ಲವನು ಮಾಡಿದ ಅಪರಾಧವನ್ನು ಕ್ಷಮಿಸು ಎಂದನು. ಆಗ ರವಿಯು ಎಲೈ ರಾಮನೆ! ನಿನ್ನ ನಾಭಿಕಮಲದಲ್ಲಿ ಬ್ರಹ್ಮನು ಹುಟ್ಟಿದನು. ಬ್ರಹ್ಮನಿಗೆ ಮರೀಚಿಯು ಮಗನು. ಆ ಮರೀಚಿಗೆ ಕಶ್ಯಪನು ಮಗನು. ಆ ಕಶ್ಯಪನಿಗೆ ನಾನು ಮಗನು. ಆದ್ದರಿಂದ ನಿನಗೆ ನಾನು ಮೊಮ್ಮಗನಿಗೆ ಮೊಮ್ಮಗನಾದಂತಾಯಿತು ನನ್ನ ಮಗನಾದ ಯಮನು ಮಾಡಿದ ಅಪರಾಧವನ್ನು ಕ್ಷಮಿಸು ಎಂದು ಹೇಳಿ ರಾಮನನ್ನು ಪ್ರಾರ್ಥಿಸಿಕೊಂಡು ಪೀಠದಲ್ಲಿ ಕೂರಿಸಿದನು. ಮತ್ತು ಯಮನ ಕೈಯಿಂದ ವಂದನೆಗಳನ್ನು ಮಾಡಿಸಿದನು. ಆಗ ದೇವವಾದ್ಯಗಳು ಮೊಳಗಿದುವು. ರಾಮನು ಅಲ್ಲಿಗೆ ಬಂದಿದ್ದ ದೇವತೆಗಳನ್ನು ಪೂಜಿಸಿದನು. ಅಲ್ಲಿಗೆ ಬಂದಿದ್ದ ದೇವೇಂದ್ರನು ರಾಮನ ಅಪ್ಪಣೆಯಂತೆ ಸುಧಾದೃಷ್ಟಿಯಿಂದ ಸತ್ತವರನ್ನೆಲ್ಲಾ ಬದುಕಿಸಿದನು. ಆಗ ರಾಮನು ಯಮನನ್ನು ಕುರಿತು ಎಲೈ ಯಮನೇ! ನಾನು ರಾಜ್ಯಭಾರವನ್ನು ಮಾಡುವವರಿಗೆ ನನ್ನ ರಾಜ್ಯದಲ್ಲಿ ಪೂರ್ಣಾಯುಸ್ಸಾದವನನ್ನು ನೀನು ತೆಗೆದುಕೊಂಡು ಹೋಗಬೇಕು. ಮತ್ತೊಬ್ಬರನ್ನೂ ಮುಟ್ಟಕೂಡದು. ಎನ್ನಲು ಯಮನು ಹಾಗೇ ಆಗಲೆಂದು ಒಪ್ಪಿಕೊಂಡನು. ಎಲ್ಲರೂ ಹೊರಟುಹೋದರು.

ಅನಂತರ ಹತ್ತನೆಯ ದಿನವು ಬರಲು ಸುಮಂತ್ರನು ಹೆಂಡತಿಯೊಡನೆ ಸ್ನಾನಮಾಡಿ ಶುಚಿಯಾಗಿ ರಾಮನ ಎದುರಿನಲ್ಲಿ ಮೃತಪಟ್ಟನು. ರಾಮನ ಅಪ್ಪಣೆಯಂತೆ ಆ ಸುಮಂತ್ರನ ಹೆಂಡತಿಯರು ಸುಮಂತ್ರನೊಡನೆ ಸಹಗಮನವನ್ನು ಮಾಡಿದರು. ಎಲ್ಲರೂ ದಿವ್ಯದೇಹವನ್ನು ಹೊಂದಿ ಉತ್ತಮವಾದ ಸ್ವರ್ಗಗಳನ್ನು ಹೊಂದಿದರು. ರಾಮನು ಸುಮಂತ್ರನ ಮಗನಿಂದ ಸುಮಂತ್ರನಿಗೆ ಉತ್ತರ ಕ್ರಿಯೆಗಳನ್ನು ಮಾಡಿಸಿದನು. ಮತ್ತು ಆ ಸುಮಂತ್ರನ ಸ್ಥಾನದಲ್ಲಿ ಅವನನ್ನು ನೇಮಿಸಿಕೊಂಡನು.

ರಾಮನು ಲಕ್ಷ್ಮಣನಿಗೆ ಹೇಳಿ ಎಲ್ಲಾ ದೇಶಗಳಲ್ಲಿಯೂ ಇಂತೆಂದು ಹೇಳಿಸಿ ಡಂಗೂರವನ್ನು ಹೊಡೆಸಿದನು. "ದೇಶದಲ್ಲಿ ಆಯುಸ್ಸು ಪೂರ್ಣವಾಗದೆ ಯಾವನಾದರೂ ಸತ್ತರೆ ಅವನನ್ನು ರಾಮನ ಬಳಿಗೆ ತರಬೇಕು. ಊರೂರಿನಲ್ಲಿಯೂ ಮನೆ ಮನೆಯಲ್ಲಿಯೂ ಪುರಾಣವನ್ನು ಹೇಳಲು ಪುರಾಣಿಕರನ್ನು ನಿಯಮಿಸಿಕೊಳ್ಳಬೇಕು. ನಿತ್ಯನೈಮಿತ್ತಿಕ ಕರ್ಮಗಳನ್ನು ಒಬ್ಬರೂ ಬಿಡಕೂಡದು. ಬ್ರಾಹ್ಮಣರನ್ನು ಅವಮಾನಮಾಡಕೂಡದು. ಜನರು ಒಬ್ಬರಿಗೊಬ್ಬರು ದ್ವೇಷಮಾಡಕೂಡದು. ಎಲ್ಲರ ಮನೆಯಲ್ಲಿಯೂ ತುಲಸಿಯನ್ನು ಬೆಳಸಿ ಸೇವಿಸುತ್ತಿರಬೇಕು. ಶಿವಪಂಚಾಕ್ಷರಿಯನ್ನು ಎಲ್ಲರೂ ಜಪಿಸಬೇಕು. ಪರರಹೆಂಡಿರನ್ನು

ಸಹೋದರಿಯಂತೆ ತಿಳಿಯಬೇಕು. ಗುರುವನ್ನು ಅವಮಾನಪಡಿಸಕೂಡದು. ಪರನಿಂದೆಯನ್ನು ಬಿಡಬೇಕು. ಅನ್ನಸತ್ರಗಳನ್ನು ಏರ್ಪಡಿಸಬೇಕು. ದಾರಿಯಲ್ಲಿರುವ ಕಳ್ಳಕಾಕರನ್ನು ನಿಗ್ರಹಿಸಿ ಪ್ರಯಾಣಿಕರನ್ನು ರಕ್ಷಿಸಬೇಕು. ಕಾಲಿನಲ್ಲಿ ಕೆರವನ್ನು ಹಾಕಿಕೊಂಡು ತೀರ್ಥ, ದೇವಸ್ಥಾನ, ಗುರು ದನಗಳ ಕೊಟ್ಟಿಗೆ ಬೃಂದಾವನ ಇವುಗಳ ಬಳಿಗೆ ಹೋಗಕೂಡದು. ಯತಿಗಳನ್ನು ವಂದಿಸಬೇಕು. ದೇವರ ಪೂಜೆಯನ್ನು ಮಾಡಬೇಕು. ಹೆಂಡತಿಯನ್ನು ಗಂಡನು ಯಾವ ವಿಧದಲ್ಲಿಯೂ ನೋಯಿಸಕೂಡದು. ಕಾಲಿನಿಂದ ಕಾಲನ್ನು ತಿಕ್ಕಕೂಡದು. ಎರಡು ಕೈಗಳಿಂದಲೂ ಒಟ್ಟಿಗೆ ತಲೆಯನ್ನು ಕೆರೆಯಕೂಡದು. ತೀರ್ಥಯಾತ್ರೆಗಳನ್ನು ಮಾಡುತ್ತಿರಬೇಕು. ಊರೂರಿನಲ್ಲಿಯೂ ಆಂಜನೇಯನ ಪ್ರತಿಮೆಯನ್ನಿಟ್ಟು ಪೂಜಿಸುತ್ತಿರಬೇಕು. ದುಷ್ಟಬುದ್ಧಿಯನ್ನು ಸರ್ವಪ್ರಕಾರದಿಂದಲೂ ಬಿಟ್ಟುಬಿಡಬೇಕು. ಕಾರ್ಪಣ್ಯವನ್ನು ಬಿಡಬೇಕು." ದೂತರೂ ಕೂಡ ಉದಾಸೀನ ಮಾಡದೆ ಎಲ್ಲಾ ಕಡೆಯಲ್ಲಿಯೂ ಇಂತೆಂದು ಡಂಗೂರವನ್ನು ಹೊಡೆದರು. ಶ್ರೀರಾಮನು ಭೂಮಿಯಲ್ಲಿ ಇವೇ ಮುಂತಾದ ಆಶ್ಚರ್ಯಕರವಾದ ಕೆಲಸಗಳನ್ನು ಮಾಡಿದನು. ಅದನ್ನು ಹೇಳಲು ಯಾರಿಗೆ ತಾನೆ ಸಾಧ್ಯವಾದೀತು ?

—o—o—







ಮೈಸೂರು ಶಿವರಾಂಪೇಟೆಯಲ್ಲಿರುವ ಶ್ರೀ ಹನುಮಾನ್ ಪವರ್ ಪ್ರೆಸ್ಸಿನಲ್ಲಿ ಪ್ರೊಪ್ರೈಟರ್
ಎನ್. ನಾರಾಯಣರಾಜುರವರಿಂದ ಮುದ್ರಿಸಲ್ಪಟ್ಟಿತು. ತಾ॥ 6-10-49.